
ಕರ್ನಾಟಕ ಸರ್ಕಾರ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಕನ್ನಡ ಭಾಷಾಭಿವೃದ್ಧಿ ಯೋಜನೆ

ಬಸವ ಪರಿವಾರ

ಸಂಪಾದಕರು

ಡಾ. ಜಯಶ್ರೀ ದಂಡೆ ಡಾ. ವೀರಣ್ಣ ದಂಡೆ



ಕನ್ನಡ ಅಧ್ಯಯನ ಸಂಸ್ಥೆ
ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.೫೮೫೧೦೬

ಬಸವ ಪರಿವಾರ

(ಹನ್ನೆರಡನೇ ಶತಮಾನದ ಶರಣರಿಗೆ ಸಂಬಂಧಿಸಿದ

ಜನಪದ ಹಾಡುಗಳ ಸಂಗ್ರಹ)

2

3

ಕರ್ನಾಟಕ ಸರ್ಕಾರ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭಾಷಾಭಿವೃದ್ಧಿ ಯೋಜನೆ

ಶರಣ ಸ್ಮಾರಕಗಳ ಕ್ಷೇತ್ರಕಾರ್ಯ ಯೋಜನೆ

(ಬಸವಾದಿ ಶರಣರ, ಶರಣ ಸ್ಥಳಗಳ ಬಗೆಗಿನ ಮೌಖಿಕ ಸಾಹಿತ್ಯ / ಮಾಹಿತಿಗಳ ಸಂಗ್ರಹ ಮತ್ತು ದಾಖಲೀಕರಣ ಯೋಜನೆ)

ಬಸವ ಪರಿವಾರ

(ಹನ್ನೆರಡನೇ ಶತಮಾನದ ಶರಣರಿಗೆ ಸಂಬಂಧಿಸಿದ ಜನಪದ ಹಾಡುಗಳ ಸಂಗ್ರಹ)

ಪ್ರಧಾನ ಸಂಶೋಧಕರು ಹಾಗೂ ಸಂಪಾದಕರು

ಡಾ। ಜಯಶ್ರೀ ದಂಡೆ, ಡಾ। ವೀರಣ್ಣ ದಂಡೆ

ಕನ್ನಡ ಅಧ್ಯಯನ ಸಂಸ್ಥೆ

ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರ್ಗಿ-೫೮೫ ೧೦೬

4

Basava Pariwar : (Folk songs about Sharanas),
Chief Investigators & Ed. : **Dr. Jayashree Dande, Dr. Veeranna Dande,**
Institute of Kannada Studies, Gulbarga University, Gulbarga-585 106.
Funded by : **Goverment of Karnataka.**

First Impression : 2012
Pages : XXVIII + 645
Paper used : 80 GSM Maplitho
Price : Rs. 500=00
Cover Design by : **Dr. Satish Vallepure,** Artist, Gulbarga.
Cover Painting : **Dr. J. S. Khanderao,** Artist, Gulbarga.

ಬಸವ ಪರಿವಾರ : ಪ್ರಧಾನ ಸಂಶೋಧಕರು ಮತ್ತು ಸಂಪಾದಕರು :
ಡಾ। ಜಯಶ್ರೀ ದಂಡೆ, ಡಾ। ವೀರಣ್ಣ ದಂಡೆ,
ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಸಂಸ್ಥೆ,
ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರ್ಗಿ-೫೮೫ ೧೦೬

ಪ್ರಕಾಶಕರು : **ಕನ್ನಡ ಅಧ್ಯಯನ ಸಂಸ್ಥೆ,** ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರ್ಗಿ

ಪುಟಗಳು : XXVIII + ೬೪೫
ಪ್ರಥಮ ಮುದ್ರಣ : ೨೦೧೨
ಬಳಸಿದ ಕಾಗದ : ೮೦ ಜಿಎಸ್‌ಎಂ ಮ್ಯಾಪ್ಲಿಥೊ ಕಾಗದ
ಬೆಲೆ : ರೂ. ೫೦೦=೦೦
ಮುಖಪುಟ ವಿನ್ಯಾಸ : **ಡಾ। ಸತೀಶ ವಲ್ಯಾಪುರೆ,** ಕಲಾವಿದರು, ಕಲಬುರ್ಗಿ
ಮುಖಪುಟ ಕಲಾಕೃತಿ : **ಡಾ। ಜೆ. ಎಸ್. ಖಂಡೇರಾವ,** ಕಲಾವಿದರು, ಕಲಬುರ್ಗಿ
ಕೃತಿ ದೊರೆಯು ಸ್ಥಳ : **ಕನ್ನಡ ಅಧ್ಯಯನ ಸಂಸ್ಥೆ,** ಗುಲಬರ್ಗಾ ವಿಶ್ವವಿದ್ಯಾಲಯ
ಮುದ್ರಕರು :
ಪ್ರಿಂಟ್ ಪಾರ್ಕ್
೧೪೯೬/೪, ೩ ಕ್ರಾಸ್, ಮರಿಯಪ್ಪನಪಾಳ್ಯ
ಶ್ರೀರಾಮಪುರಂ ಪೋಸ್ಟ್, ಬೆಂಗಳೂರು-೨೧
ದೂ.ವಾ.೦೮೦-೨೩೪೨೨೮೩೮

5

ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರ್ಗಿ

ಕನ್ನಡ ಭಾಷಾಭಿವೃದ್ಧಿ ಯೋಜನೆ ಸಮಿತಿ

ಅಧ್ಯಕ್ಷರು
ಪ್ರೊ. ಈ.ಟಿ. ಪುಟ್ಟಯ್ಯ
ಕುಲಪತಿಗಳು

ಉಪಾಧ್ಯಕ್ಷರು
ಪ್ರೊ. ಎಸ್.ಎಲ್. ಹಿರೇಮಠ
ಕುಲಸಚಿವರು

ಸಂಚಾಲಕರು
ಪ್ರೊ. ನಾಗಾಬಾಯಿ ಬಿ. ಬುಳ್ಳಾ
ಅಧ್ಯಕ್ಷರು, ಕನ್ನಡ ಅಧ್ಯಯನ ಸಂಸ್ಥೆ

ಸದಸ್ಯರು

ಡಾ. ಪಿ. ಕೆ. ಖಂಡೋಬಾ
ಡಾ. ಡಿ. ಬಿ. ನಾಯಕ
ಡಾ. ವ್ಹಿ. ಜಿ. ಪೂಜಾರ
ಡಾ. ಬಸವರಾಜ ಸಬರದ
ಡಾ. ವೀರಣ್ಣ ದಂಡೆ
ಡಾ. ಬಿ.ಎಸ್.ಪೋಲಿಸ ಪಾಟೀಲ
ಡಾ. ಎಚ್. ಟಿ. ಪೋತೆ
ಡಾ. ಎಸ್. ಎಂ. ಹಿರೇಮಠ
ಡಾ. ಜಯಶ್ರೀ ದಂಡೆ

6

ಡಿ.ವಿ.ಸದಾನಂದಗೌಡ
ಮುಖ್ಯಮಂತ್ರಿ

ವಿಧಾನಸೌದ
ಬೆಂಗಳೂರು-೫೬೦ ೦೦೧
೦೨-೧೧-೨೦೧೧

ಶುಭ ಹಾರೈಕೆ

ನಮ್ಮ ಸರ್ಕಾರದ ಪ್ರಯತ್ನದ ಫಲವಾಗಿ ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನ ದೊರೆತಿದ್ದು, ಈ ಹಿನ್ನಲೆಯಲ್ಲಿ ಕನ್ನಡ ಭಾಷಾಭಿವೃದ್ಧಿ ಯೋಜನೆ ಕಾರ್ಯಕ್ರಮಗಳಿಗೆ ನಮ್ಮ ಸರ್ಕಾರ ವಿಶೇಷ ಅನುದಾನವಾಗಿ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಿಗೆ ತಲಾ ಎರಡು ಕೋಟಿ ರೂಪಾಯಿ ಅನುದಾನವನ್ನು ಮೀಸಲಿಟ್ಟು ಈಗಾಗಲೇ ಒಂದು ಕೋಟಿ ರೂಪಾಯಿ ಬಿಡುಗಡೆ ಮಾಡಲಾಗಿದೆ. ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯೂ ಸೇರಿದಂತೆ ನಾಡಿನ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳು ಈ ಕಾರ್ಯಯೋಜನೆಯನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಕಾರ್ಯತತ್ಪರರಾಗಿರುವುದು ಮೆಚ್ಚತಕ್ಕ ಸಂಗತಿ.

ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ, ವಚನ ಸಾಹಿತ್ಯ, ದಾಸ ಸಾಹಿತ್ಯ ತತ್ವಪದ ಸಾಹಿತ್ಯ, ದಲಿತ-ಬಂಡಾಯ ಸಾಹಿತ್ಯ, ಜಾನಪದ, ಶಾಸನ, ಇತಿಹಾಸ, ಹಸ್ತಪ್ರತಿ, ಸಾಹಿತ್ಯ ಚರಿತ್ರೆ, ರಂಗಭೂಮಿ, ತಂತ್ರಜ್ಞಾನ, ಕನ್ನಡೇತರರಿಗೆ ಕನ್ನಡ ಪರಿಚಯ ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ ರೂಪಿಸಲಾದ ವಿವಿಧ ಕ್ರಿಯಾಯೋಜನೆಗಳು ಹೆಚ್ಚು ಉಪಯುಕ್ತಕಾರಿಯಾಗಿವೆ. ಕನ್ನಡ ಅಧ್ಯಯನ ಮತ್ತು ಸಂಶೋಧನಾ ವ್ಯಾಪ್ತಿಯನ್ನು ವಿಸ್ತರಿಸುವುದರ ಮೂಲಕ ಕನ್ನಡಕ್ಕೆ ಹೊಸ ಆಯಾಮಗಳನ್ನು ಜೋಡಿಸಿದೆ. ಈ ಕಾರ್ಯದಲ್ಲಿ ನಾಡಿನ ಅನೇಕ ಸಂಶೋಧನಾಸಕ್ತರು ಪಾಲುಗೊಂಡಿದ್ದು, ಅವರ ಎಲ್ಲ ಸಂಶೋಧನೆ, ಅಧ್ಯಯನಗಳು ಪುಸ್ತಕ ರೂಪದಲ್ಲಿ ಪ್ರಕಟಗೊಳ್ಳುತ್ತಿರುವುದು ಶ್ಲಾಘನೀಯ.

ಕನ್ನಡ ಭಾಷೆಗೆ ಎರಡು ಸಾವಿರ ವರ್ಷಗಳ ಸುದೀರ್ಘ ಇತಿಹಾಸವಿದೆ. ಸಮೃದ್ಧವೂ ಪ್ರಭುದ್ಧವೂ ಆದ ಕನ್ನಡ ಭಾಷಾ ಸಾಹಿತ್ಯ ತನ್ನ ಭಾಷಿಕ, ಸಾಂಸ್ಕೃತಿಕ, ಸಾಹಿತ್ಯಿಕ ಅನನ್ಯತೆಯಿಂದ ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಂಡಿದೆ. ಈ ಬೆಳವಣಿಗೆಗೆ ಕನ್ನಡದ ಅಸಂಖ್ಯಾತ ಕವಿಗಳೂ ಲೇಖಕರೂ ಕಲಾವಿದರೂ ಕಾರಣರಾಗಿದ್ದಾರೆ. ಕನ್ನಡ ಭಾಷೆ ಸೃಜನಶೀಲವಾಗಿ ಮತ್ತು ಶಾಸ್ತ್ರೀಯವಾಗಿ ಶ್ರೇಷ್ಠ ಮಟ್ಟದ ಬೆಳವಣಿಗೆಯನ್ನು ಹೊಂದಿದೆ. ವೈವಿಧ್ಯಪೂರ್ಣವಾದ ಒಂದು ದೊಡ್ಡ ಪರಂಪರೆ ನಮ್ಮ ಹಿಂದಿದೆ. ಈ

ಮಹಾಪರಂಪರೆಯ ಮುಂಚೂಣಿಯಲ್ಲಿ ನಾವಿದ್ದೇವೆ. ಕನ್ನಡವನ್ನು ಇನ್ನೂ ಎತ್ತರಕ್ಕೆ ತೆಗೆದುಕೊಂಡು ಹೋಗುವ ಬಹುಮುಖ್ಯ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಕನ್ನಡ ಕಟ್ಟುವ ಈ ಮಹತ್ವದ ಕೈಂಕರ್ಯಕ್ಕೆ ಎಲ್ಲರೂ ಕೈಜೋಡಿಸಬೇಕಾಗಿದೆ.

ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಹಲವು ಯೋಜನೆಗಳಲ್ಲಿ **"ಶರಣ ಸ್ಮಾರಕಗಳ ಕ್ಷೇತ್ರಕಾರ್ಯ ಯೋಜನೆ" (ಬಸವಾದಿ ಶರಣರ, ಶರಣ ಸ್ಥಳಗಳ ಬಗೆಗಿನ ಮೌಖಿಕ ಸಾಹಿತ್ಯ / ಮಾಹಿತಿಗಳ ಸಂಗ್ರಹ ಮತ್ತು ದಾಖಲೀಕರಣ)** ಈ ಯೋಜನೆಯಡಿ ವ್ಯಾಪಕವಾದ ಕ್ಷೇತ್ರ ಕಾರ್ಯದ ಮೂಲಕ ಸಂಗ್ರಹಿಸಿದ ೧೨ನೇ ಶತಮಾನದ ಶರಣರಿಗೆ ಸಂಬಂಧಿಸಿದ ಹಾಡುಗಳೊಂದಿಗೆ, ಕನ್ನಡದಲ್ಲಿ ಇಂದಿನವರೆಗೆ ಬಿಡಿಬಿಡಿಯಾಗಿ ಅಲ್ಲಲ್ಲಿ ಪ್ರಕಟವಾದ ಶರಣರ ಹಾಡುಗಳನ್ನು ಈ ಸಂಪುಟದಲ್ಲಿ ಸೇರಿಸಿದ್ದಾರೆ. ಇದರಿಂದ ಶರಣರ ಬಗೆಗಿನ ಲಿಖಿತ ಮತ್ತು ಮೌಖಿಕ ಸಾಹಿತ್ಯ ಪರಂಪರೆಗಳೆರಡನ್ನೂ ಎದುರಿಗೆ ಇಟ್ಟುಕೊಂಡು ಅಧ್ಯಯನ ಮಾಡಲು ಅನುಕೂಲವಾಗುತ್ತದೆ. ಇಂತಹ ಮಹತ್ವದ ಯೋಜನೆಯನ್ನು ಕೈಕೊಂಡು ಈ ಸಂಪುಟವನ್ನು ಹೊರತರುತ್ತಿರುವ ಸಂಶೋಧಕರಿಗೆ, ಸಂಪಾದಕರಿಗೆ ಅಭಿನಂದಿಸಿ, ಈ ಕೃತಿಗಳು ನಾಡಿನ ಸಹೃದಯರ ಮನ ಗೆಲ್ಲಲಿ ಎಂದು ಹಾರೈಸಿ ಶುಭ ಕೋರುತ್ತೇನೆ.

***

ಡಿ.ವಿ. ಸದಾನಂದಗೌಡ
ಮುಖ್ಯಮಂತ್ರಿಗಳು

ಗೋವಿಂದ ಎಂ. ಕಾರಜೋಳ
ಸಣ್ಣ ನೀರಾವರಿ,
ಕನ್ನಡ ಮತ್ತು ಸಂಸ್ಕೃತಿ ಸಚಿವರು

ನಂ. ೩೩೦, ೩ನೇ ಮಹಡಿ
ವಿಧಾನಸೌಧ
ಬೆಂಗಳೂರು- ೫೬೦ ೦೦೧
ದಿ: ೧೬. ೧೧. ೨೦೧೧

ಶುಭಹಾರೈಕೆ

ಕನ್ನಡ ನಾಡು-ನುಡಿಗೆ ಸುದೀರ್ಘವಾದ ಇತಿಹಾಸವಿದೆ. ಭವ್ಯ ಪರಂಪರೆಯನ್ನು ಈ ನಾಡು ಹೊಂದಿದೆ. ಭಾರತೀಯ ಭಾಷೆಗಳಲ್ಲಿಯೇ ಅತೀ ಹೆಚ್ಚು ಜ್ಞಾನಪೀಠ ಪ್ರಶಸ್ತಿಗಳನ್ನು ಪಡೆದಿರುವ ಹೆಗ್ಗಳಿಕೆಗೆ ನಮ್ಮ ಭಾಷೆ ಪಾತ್ರವಾಗಿದೆ. ಈ ನಾಡಿನ ಕವಿಗಳು ಸಾಹಿತಿಗಳು, ಕಲಾವಿದರು, ಸಂಶೋಧಕರು, ಶಿಕ್ಷಣತಜ್ಞರು, ವಿಜ್ಞಾನಿಗಳು ವಿಶ್ವದಾದ್ಯಂತ ಹೆಸರು ಮಾಡಿದ್ದಾರೆ.

ಕನ್ನಡ ನಾಡು-ನುಡಿಗೆ ಸಂಬಂಧಪಟ್ಟ ಮಾತುಗಳು ರಾಮಾಯಣ ಮಹಾಭಾರತಗಳಲ್ಲಿ ಕಂಡುಬರುತ್ತವೆ. ಕ್ರಿಸ್ತಪೂರ್ವದಿಂದಲೇ ಕನ್ನಡ ಭಾಷೆಯ ಅಸ್ತಿತ್ವವನ್ನು ಸಂಶೋಧಕರು ಗುರುತಿಸಿದ್ದಾರೆ. ಕ್ರಿಸ್ತಶಕ ೪೫೦ರ ಹಲ್ಮಿಡಿಶಾಸನ ಕನ್ನಡದ ಉಪಲಬ್ಧವಿರುವ ಮೊದಲ ಲಿಖಿತರೂಪದ ಶಾಸನ. ಕನ್ನಡದ ಆದಿ ಮಹಾಕವಿ ಪಂಪನಿಗಿಂತ ಹಿಂದೆಯೇ ಒಂದು ಸಮೃದ್ಧವಾದ ಸಾಹಿತ್ಯ ಪರಂಪರೆಯನ್ನು ಕನ್ನಡ ಕಂಡಿದೆ ಎಂಬುದಕ್ಕೆ ಸಂಶೋಧಕರು ಸಾಕಷ್ಟು ಪುರಾವೆಗಳನ್ನು ನೀಡಿದ್ದಾರೆ. ಶಾತವಾಹನರು, ಕದಂಬರು, ಚಾಲುಕ್ಯರು, ಗಂಗರು, ರಾಷ್ಟ್ರಕೂಟರು, ಹೊಯ್ಸಳರು, ವಿಜಯನಗರದ ಅರಸರು, ಮೈಸೂರು ಅರಸರು ಈ ನಾಡಿನ ಕಲೆ, ಸಾಹಿತ್ಯ, ವಾಸ್ತುಶಿಲ್ಪ, ಸಂಗೀತ ಮೊದಲಾದ ಕ್ಷೇತ್ರಗಳಲ್ಲಿ ಅಪೂರ್ವ ಕೊಡುಗೆ ನೀಡಿದ್ದಾರೆ.

ಇಂಥ ಅಪೂರ್ವ ಪರಂಪರೆ ಹೊಂದಿರುವ ಕನ್ನಡ ಭಾಷೆಯನ್ನು ಕೇಂದ್ರ ಸರ್ಕಾರ ಶಾಸ್ತ್ರೀಯ ಭಾಷೆ ಎಂದು ಘೋಷಿಸಿದೆ. ಕನ್ನಡದ ಕೆಲಸಕ್ಕೆ ಕೈ ಜೋಡಿಸಿರುವ ಕರ್ನಾಟಕದ ರಾಜ್ಯಸರ್ಕಾರ 'ಕನ್ನಡ ಭಾಷಾಭಿವೃದ್ಧಿ ಯೋಜನೆ'ಗೆ ವಿಶೇಷ ಅನುದಾನ ಬಿಡುಗಡೆ ಮಾಡಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕದ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಕನ್ನಡ ಕಟ್ಟುವ ಕೆಲಸ ಭರದಿಂದ ನಡೆದಿದೆ. ಕನ್ನಡದ ಇತಿಹಾಸ, ಭಾಷೆ, ಸಾಹಿತ್ಯ, ಪರಂಪರೆ, ಜಾನಪದ, ವಿಜ್ಞಾನ, ಮಾನವಿಕ ಇನ್ನಿತರ ಅಂಶಗಳನ್ನು ಕುರಿತ ಹೊತ್ತಿಗೆಗಳು ಸಿದ್ಧವಾಗುತ್ತಿವೆ. ಈ ಯೋಜನೆಯ ಹಲವು ಯೋಜನೆಯ ಅಡಿಯಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ "ಶರಣ ಸ್ಮಾರಕಗಳ ಕ್ಷೇತ್ರಕಾರ್ಯ ಯೋಜನೆ" (ಬಸವಾದಿ ಶರಣರ, ಶರಣ ಸ್ಥಳಗಳ ಬಗೆಗಿನ ಮೌಖಿಕ ಸಾಹಿತ್ಯ

ಮಾಹಿತಿಗಳ ಸಂಗ್ರಹ ಮತ್ತು ದಾಖಲೀಕರಣ). ಈ ಯೋಜನೆಯಡಿ ವ್ಯಾಪಕವಾದ ಕ್ಷೇತ್ರಕಾರ್ಯ ಕೈಗೊಂಡು, ಶರಣರಿಗೆ ಸಂಬಂಧಿಸಿದ ಹಾಡುಗಳನ್ನು ಒಂದೆಡೆ ಪ್ರಕಟಿಸುತ್ತಿರುವ ಸಂಶೋಧಕರೂ ಸಂಪಾದಕರೂ ಅಭಿನಂದನಾರ್ಹರಾಗಿದ್ದಾರೆ.

ಕನ್ನಡ ತೇರು ಎಳೆಯುವ ಮಹತ್ಕಾರ್ಯದಲ್ಲಿ ಎಲ್ಲಾ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಪ್ರೇರೇಪಿಸಿ, ಉತ್ತೇಜಿಸಿ ಆ ಎಲ್ಲ ವಿಶೇಷ ಯೋಜನೆಗಳನ್ನು ಕಾರ್ಯಗತಗೊಳಿಸುವಂತೆ ನಿರ್ದೇಶನ ನೀಡಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಯುಕ್ತರಾದ ಶ್ರೀ ಮನು ಬಳಿಗಾರ್ ಅವರನ್ನು ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ. ಈ ಮಾಲೆಯಲ್ಲಿ ಈ ಬಗೆಯ ಇನ್ನೂ ಅನೇಕ ಕೃತಿಗಳು ಕನ್ನಡಿಗರಿಗೆ ದೊರೆಯಲಿವೆ ಎಂಬ ವಿಚಾರ ತಿಳಿದಾಗಲಂತೂ ನನಗೆ ಇನ್ನಷ್ಟು ಮಹದಾನಂದವಾಗಿದೆ. ಇದರ ಪೂರ್ಣ ಪ್ರಯೋಜನವನ್ನು ನಾಡಿನ ಜನತೆ ಪಡೆಯುವಂತಾಗಲಿ.

ರಾಜ್ಯ ಸರ್ಕಾರದ ಈ ಯೋಜನೆ ಕನ್ನಡ ನಾಡು-ನುಡಿ ಸಂಸ್ಕೃತಿಯ ಪುನರುತ್ಥಾನಕ್ಕೆ ಕಾರಣವಾಗಿದೆ. ಈ ಮೂಲಕ ವಿವಿಧ ಜ್ಞಾನ ಶಿಸ್ತುಗಳಲ್ಲಿ ಕನ್ನಡಿಗರ ಅಧ್ಯಯನ ಆಸಕ್ತಿ ಬೆಳೆಯಲು ವಿವಿಧ ಕ್ರಿಯಾ ಯೋಜನೆಗಳು ಸಹಕಾರಿಯಾಗಿವೆ. ಇದರಿಂದ ಹೊಸ ಚೈತನ್ಯವನ್ನು ಹುಟ್ಟುಹಾಕುವ ಹೊಸ ಸಂಚಲನವನ್ನು ಉಂಟುಮಾಡುವ ಅನನ್ಯ ಪರಂಪರೆಯೊಂದಕ್ಕೆ ಚಾಲನೆ ಸಿಕ್ಕಂತಾಗಿದೆ.

ಈ ಪರ್ವಕಾಲದಲ್ಲಿ ನಾವಿದ್ದೇವೆ ಎನ್ನುವದು ಸಂತಸದ ಸಂಗತಿ. ಕನ್ನಡದ ಅಪೂರ್ವ ಪರಂಪರೆಯನ್ನು ಉಳಿಸಿ ಬೆಳೆಸುವ ಮಹತ್ಕಾರ್ಯದಲ್ಲಿ ಎಲ್ಲರೂ ಕೈ ಜೋಡಿಸಿದ್ದಾರೆ. ನಾಡು-ನುಡಿಯ ಅಭಿವೃದ್ಧಿ ವಿಚಾರದಲ್ಲಿ ಸರ್ಕಾರ ಸದಾ ಸಹಕಾರ ನೀಡುವುದು. ಕನ್ನಡಿಗರಿಗೆ ಒಳಿತಾಗಲಿ, ಸರ್ವರೂ ಸುಖ ಶಾಂತಿಯಿಂದ ಬದುಕಿ ಬಾಳಲೆಂದು ಹೃದಯತುಂಬಿ ಹಾರೈಸುವೆ.

ಗೋವಿಂದ. ಎಂ. ಕಾರಜೋಳ
ಕನ್ನಡ ಮತ್ತು ಸಂಸ್ಕೃತಿ ಸಚಿವರು

***

ಬಿ. ಬಸವರಾಜು ಭಾ.ಆ.ಸೇ
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಹಾಗೂ
ವಾರ್ತಾ ಇಲಾಖೆ

#೨, ನೆಲಮಹಡಿ, ವಿಕಾಸ ಸೌಧ,
ಬೆಂಗಳೂರು- ೫೬೦ ೦೦೧
ದಿ. ೨೪. ೧೦. ೨೦೧೧

ಶುಭಹಾರೈಕೆ

ದ್ರಾವಿಡ ಭಾಷಾ ಪರಂಪರೆಯ ನಡುವೆ ಕನ್ನಡ ಭಾಷೆಯ ಶ್ರೀಮಂತಿಕೆ ಮತ್ತು ಅದರ ಸಾಂಸ್ಕೃತಿಕ ವೈವಿಧ್ಯತೆ ಎದ್ದುಕಾಣುವಂತಿದೆ. ತಮಿಳು ಭಾಷೆಯ ಪರಂಪರೆಗೆ ಸರಿಸಮಾನವಾಗಿಯೇ ಬೆಳೆದು ಬಂದಿರುವ ಕನ್ನಡಕ್ಕೆ ನಿಖರವಾಗಿಯೇ ಒಂದೂವರೆ ಸಾವಿರ ವರ್ಷಗಳಿಗೂ ಮೀರಿದ ಇತಿಹಾಸವಿದೆ. ಕ್ರಿ.ಶ.೪೫೦ರ ಹಲ್ಮಿಡಿ ಶಾಸನದ ಕಾಲಕ್ಕೆ ಕನ್ನಡವು ಕರ್ನಾಟಕದಲ್ಲಿ ಬಳಕೆಯಲ್ಲಿತ್ತು. ವ್ಯಾಸಕೃತ ಮಹಾಭಾರತದಲ್ಲಿಯೇ ಕರ್ನಾಟಕದ ಪ್ರಸ್ತಾಪವಿದೆ. ಶಾತವಾಹನರು ಕದಂಬರು ಇಲ್ಲಿನ ಪ್ರಾಚೀನ ಅರಸು ಮನೆತನದವರೆಂದು ಇತಿಹಾಸಕಾರರು ಗುರುತಿಸಿರುತ್ತಾರೆ. ಗ್ರೀಕ್ ಭೂಗೋಳಶಾಸ್ತ್ರದ ಟಾಲೆಮಿಯ ಪ್ರವಾಸಿ ಬರವಣಿಗೆಯಲ್ಲಿಯೇ ಕನ್ನಡ ನಾಡಿನ ಅನೇಕ ಪ್ರದೇಶಗಳ ಪ್ರಸ್ತಾಪ ಇರುವುದನ್ನು ಸಂಶೋಧಕ ಗೋವಿಂದ ಪೈ ಅವರು ಬೆಳಕಿಗೆ ತಂದರು. ಅಶೋಕನು ದಕ್ಷಿಣ ಭಾರತದಲ್ಲಿ ಹಾಕಿಸಿದ ಶಾಸನಗಳು ಮೊದಲು ದೊರಕಿರುವುದು ಕರ್ನಾಟಕದಲ್ಲಿಯೇ! ಚಿತ್ರದುರ್ಗದ ಸಿದ್ದಾಪುರ, ರಾಯಚೂರಿನ ಮಸ್ಕಿ ಭಾಗದಲ್ಲಿ ದೊರಕಿರುವ ಶಾಸನದಿಂದಲೇ ಅಶೋಕನಿಗೆ 'ದೇವನಾಂಪ್ರಿಯ' ಎಂಬ ಬಿರುದು ಇದ್ದಿತೆಂದು ತಿಳಿದುಬರುತ್ತದೆ. ಅಶೋಕನು ದಕ್ಷಿಣ ಭಾರತದ ಕರ್ನಾಟಕದಲ್ಲಿ ತನ್ನ ಶಾಸನಗಳನ್ನು ಹಾಕಿಸಿದನೆಂದರೆ ಕರ್ನಾಟದಲ್ಲಿಯ ಭಾಷಾಪ್ರದೇಶಗಳು ಚೆನ್ನಾಗಿಯೇ ನೆಲೆಯೂರಿದ್ದವೆಂದು ತಿಳಿಯಬಹುದಾಗಿರುತ್ತದೆ. ಇಷ್ಟೇ ಅಲ್ಲದೆ ಕಾಳಿದಾಸನ ಕಾಲ ನಿಗದಿ ಮಾಡುವುದರಲ್ಲಿಯೂ ಮೊದಲು ಸಹಾಯಕ್ಕೆ ಬಂದದ್ದು ಕರ್ನಾಟಕದ ಐಹೊಳೆಯ ಮೇಗುತಿ ದೇವಾಲಯದ ರವಿಕೀರ್ತಿಯ ೫ನೇ ಶತಮಾನದ ಶಾಸನ. 'ಅಯ್ಯಾಹೊಳೆಯ' ಐನೂರು ಜನ ವ್ಯಾಪರಸ್ಥರು ದಕ್ಷಿಣ ಭಾರತದ ವ್ಯಾಪಾರವನ್ನೆಲ್ಲ ನಿಯಂತ್ರಿಸುತ್ತಿದ್ದರಂತೆ. ಅಂದರೆ ಭಾರತದ ಇತಿಹಾಸಕ್ಕೆ ತನ್ನದೇ ಆದ ಕಾಣಿಕೆ ನೀಡಿದ ಕರ್ನಾಟಕದ ಸಾಂಸ್ಕೃತಿಕ ಪರಂಪರೆಯ ಈ ಹೆಗ್ಗುರುತುಗಳನ್ನು ಇಲ್ಲಿ ಪ್ರಸ್ತಾಪಿಸುತ್ತಿರುವುದರ ಕಾರಣವೆಂದರೆ, ಭಾರತ ಸರಕಾರ ಕನ್ನಡಕ್ಕೆ ಶಾಸ್ತ್ರೀಯ ಭಾಷೆ ಸ್ಥಾನಮಾನವನ್ನು ನೀಡಿರುವುದು ಎಲ್ಲಾ ರೀತಿಯಿಂದಲೂ ಸಮಂಜಸ ಹಾಗೂ ಸೂಕ್ತ ಎಂಬುವುದಕ್ಕಾಗಿ. ೨೦೦೮ರಲ್ಲಿ ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ದೊರೆತ ಸಂದರ್ಭದಲ್ಲಿ ಕರ್ನಾಟಕದ ಅಂದಿನ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪನವರು ಕರ್ನಾಟಕದ ಎಲ್ಲಾ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳಿಗೂ ಎರಡೆರಡು ಕೋಟಿ ಅನುದಾನವನ್ನು

ಬಿಡುಗಡೆ ಮಾಡಿ ಅದರ ಅಡಿಯಲ್ಲಿ ಕನ್ನಡ ಸಾಹಿತ್ಯ ಸಂಸ್ಕೃತಿಯ ಸಂವರ್ಧನೆಯ ಯೋಜನೆಗಳು ನೆರವೇರುವಂತಾಗಲಿ ಎಂದು ತಿಳಿಸಿದ್ದರು. ಅದರಂತೆ ಕರ್ನಾಟಕದ ವಿವಿಧ ಭಾಗದ ವಿಶ್ವವಿದ್ಯಾಲಯದ ಕನ್ನಡ ವಿಭಾಗಗಳು ಕನ್ನಡ ಸಾಹಿತ್ಯ ಪರಂಪರೆ ಕುರಿತಾಗಿ ಅನೇಕ ಸಂಶೋಧನ ಯೋಜನೆಗಳನ್ನು ಕೈಗೆತ್ತಿಕೊಂಡಿರುತ್ತವೆ.

ಈ ಹಿನ್ನೆಲೆಯಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯು ವಿಭಿನ್ನ ಸಂಪುಟಗಳ ಪ್ರಕಟಣಾ ಯೋಜನೆಯನ್ನು ಹಮ್ಮಿಕೊಂಡು ಅದರಡಿಯಲ್ಲಿ **"ಶರಣ ಸ್ಮಾರಕಗಳ ಕ್ಷೇತ್ರಕಾರ್ಯ ಯೋಜನೆ" (ಬಸವಾದಿ ಶರಣರ, ಶರಣ ಸ್ಥಳಗಳ ಬಗೆಗಿನ ಮೌಖಿಕ ಸಾಹಿತ್ಯ / ಮಾಹಿತಿಗಳ ಸಂಗ್ರಹ ಮತ್ತು ದಾಖಲೀಕರಣ)** ಈ ಯೋಜನೆಯಡಿ ವ್ಯಾಪಕವಾದ ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿದ ೧೨ನೇ ಶತಮಾನದ ಶರಣರಿಗೆ ಸಂಬಂಧಿಸಿದ ಹಾಡುಗಳೊಂದಿಗೆ, ಕನ್ನಡದಲ್ಲಿ ಬಿಡಿಬಿಡಿಯಾಗಿ ಅಲ್ಲಲ್ಲಿ ಪ್ರಕಟವಾದ ಶರಣರ ಹಾಡುಗಳನ್ನು ಈ ಸಂಪುಟದಲ್ಲಿ ಸೇರಿಸಿದ್ದಾರೆ. ಇದರಿಂದ ಶರಣರ ಬಗೆಗೆ ಲಿಖಿತ ಮತ್ತು ಮೌಖಿಕ ಸಾಹಿತ್ಯ ಪರಂಪರೆಗಳೆರಡನ್ನೂ ಎದುರಿಗೆ ಇಟ್ಟುಕೊಂಡು ಅಧ್ಯಯನ ಮಾಡಲು ಅನುಕೂಲವಾಗುತ್ತದೆ. ಇಂತಹ ಮಹತ್ವದ ಯೋಜನೆಯನ್ನು ಕೈಕೊಂಡು ಈ ಸಂಪುಟವನ್ನು ಹೊರತರುತ್ತಿರುವ ಸಂಶೋಧಕರಿಗೆ, ಸಂಪಾದಕರಿಗೆ ಅಭಿನಂದಿಸುವೆ. ಕನ್ನಡ ಆಸಕ್ತರು ನಮ್ಮ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ, ಪರಂಪರೆ ಕುರಿತಂತೆ ಸಮಗ್ರ ಅರಿವನ್ನು ಪಡೆಯುವಂತೆ ಈ ಸಂಪುಟಗಳು ರಚಿತವಾಗಿರುತ್ತವೆ. ಇಂಥದೊಂದು ಯೋಜನೆಯನ್ನು ಕೈಗೆತ್ತಿಕೊಂಡು ಅದರ ಮೊದಲ ಹಂತದ ಕಾರ್ಯ ಮುಗಿಸಿ, ಮುಂದಿನ ಹಂತದಲ್ಲಿಯೂ ಈ ಬಗೆಯ ಇನ್ನಷ್ಟು ಗ್ರಂಥಗಳ ಪ್ರಕಟಣೆಯ ಯೋಜನೆಯನ್ನು ಕೈಗೆತ್ತಿಕೊಂಡು ಉತ್ಸಾಹದಿಂದ ಮುಂದುವರೆಸುತ್ತಿರುವ ಗುಲಬರ್ಗಾ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಈ.ಟಿ. ಪುಟ್ಟಯ್ಯ ಅವರನ್ನು ಮತ್ತು ಕುಲಸಚಿವ ಪ್ರೊ. ಎಸ್.ಎಲ್.ಹಿರೇಮಠ ಅವರನ್ನು ಯೋಜನೆಯ ಪ್ರಧಾನ ಸಂಶೋಧಕರೂ ಈ ಸಂಪುಟದ ಸಂಪಾದಕರೂ ಆದ ಡಾ। ಜಯಶ್ರೀ ದಂಡೆ ಹಾಗೂ ಡಾ। ವೀರಣ್ಣ ದಂಡೆ ಅವರನ್ನು ನಾನು ಕರ್ನಾಟಕ ಸರ್ಕಾರದ ಪರವಾಗಿ ಅಭಿನಂದಿಸುತ್ತೇನೆ.

ಬಿ. ಬಸವರಾಜು
ಕಾರ್ಯದರ್ಶಿ

***

ಮನು ಬಳಿಗಾರ್ ಕ.ಆ.ಸೇ
ಆಯುಕ್ತರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭವನ, ಜೆ.ಸಿ. ರಸ್ತೆ,
ಬೆಂಗಳೂರು– ೫೬೦ ೦೦೧
ದಿ: ೧೫. ೧೦. ೨೦೧೧

ನಲ್ನುಡಿ

ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಪರಂಪರೆಯೇ ಕುತೂಹಲಕರ ಮತ್ತು ವೈವಿಧ್ಯಮಯವಾದುದು. ಹತ್ತನೆಯ ಶತಮಾನ ಮತ್ತು ಅದರ ಪೂರ್ವಯುಗವನ್ನು 'ವೀರಯುಗ' ಎಂದು ವಿದ್ವಾಂಸರು ಕರೆದಿರುವುದಲ್ಲದೆ, ಈ ಕಾಲಕ್ಕೆ ಬಂದ ಕೃತಿಗಳೆಲ್ಲವೂ ಕ್ಷಾತ್ರಧರ್ಮ ಮತ್ತು ಅದರ ಮೌಲ್ಯಗಳನ್ನೇ ಹೇಳುವಂಥವಾಗಿರುತ್ತವೆ. ಪಂಪ ಬರೆದದ್ದು ವಿಕ್ರಮಾರ್ಜುನ ವಿಜಯವಾದರೆ ರನ್ನ ಬರೆದದ್ದು ಸಾಹಸಭೀಮ ವಿಜಯ. ಇದೆಲ್ಲಕ್ಕಿಂತ ಪೂರ್ವದಲ್ಲಿ ಕವಿರಾಜ ಮಾರ್ಗಕಾರನು ಕನ್ನಡ ನಾಡಿನ ಜನಗಳನ್ನು ಕಲಿಗಳೆಂದೂ, ಕವಿಗಳೆಂದೂ ಮುಕ್ತಕಂಠದಿಂದ ಪ್ರಶಂಸಿಸುತ್ತಾನೆ. ಕನ್ನಡ ನಾಡಿನ ಸಾಂಸ್ಕೃತಿಕ ಇತಿಹಾಸವನ್ನು ಕುರಿತು ಆರಂಭ ಕಾಲಕ್ಕೆ ಎಲ್ಲ ಕವಿಗಳು ಹೇಳುವ ಮಾತಿನಲ್ಲಿ ಆಶ್ಚರ್ಯಕರ, ಕುತೂಹಲಕರ ಹೊಂದಾಣಿಕೆ ಇದೆ. ಕವಿರಾಜ ಮಾರ್ಗಕಾರನು ಕನ್ನಡ ಜನರು ಕವಿಗಳೂ, ಕಲಿಗಳೂ ಆಗಿದ್ದರೆಂದರೆ, ಪಂಪ ತಾನೇ ಸತ್ಕವಿ, ಕಲಿ ಎಂದು ಹೇಳಿಕೊಳ್ಳುತ್ತಾನೆ. ಪಂಪ, ರನ್ನರ ಕೃತಿಗಳಲ್ಲಿ ಬರುವ ಸ್ತ್ರೀಪಾತ್ರಗಳು ಕೂಡ ಪುರುಷ ಪರಾಕ್ರಮವನ್ನು ಪುರಸ್ಕರಿಸಿ ಮಾತನಾಡುತ್ತವೆ. ಇದು ಕನ್ನಡ ನಾಡಿನ ಹತ್ತನೆಯ ಶತಮಾನ ಮತ್ತು ಅದರ ಪೂರ್ವ ವಿವರವಾದರೆ ಹನ್ನೆರಡನೆಯ ಶತಮಾನದ ಸಂಗತಿಯೇ ಬೇರೆ. ಅರಮನೆಯಲ್ಲಿ ಬೆಳೆದ ಸಾಹಿತ್ಯ ಸಾಮಾನ್ಯರ ನಡುವೆ ಬಂದು ಚಳುವಳಿಯ ರೂಪ ಪಡೆದುಕೊಂಡಿತು. ಪಾಂಡಿತ್ಯಪೂರ್ಣ ಸಾಹಿತ್ಯ ಸೃಷ್ಟಿಗಿಂತ ಜನಸಾಮಾನ್ಯರಿಗೆ ಅರ್ಥವಾಗುವ ಸಂಗತಿ ಮುಖ್ಯವೆಂಬ ಧೋರಣೆಯ ವಚನಕಾರರು ಪ್ರಭುತ್ವವನ್ನೇ ಪ್ರತಿಭಟಿಸಿ ಹೊರಬಂದದ್ದು ಆಶ್ಚರ್ಯಕರ ಬೆಳವಣಿಗೆ. ಬಸವಣ್ಣ, ಅಕ್ಕಮಹಾದೇವಿ, ಹರಿಹರ, ರಾಘವಾಂಕ ಇವರೆಲ್ಲ ಅರಸನ ವೈಭವದ ಆಸ್ಥಾನವನ್ನು ಬಿಟ್ಟು ಬಂದವರೆ. ತಮ್ಮ ಸಾಹಿತ್ಯ ಕೃತಿಗಳಲ್ಲಿ ಮಾನವೀಯತೆ, ಸರ್ವಸಮಾನತೆ, ಭಕ್ತಿ ಮತ್ತು ಆಧ್ಯಾತ್ಮವನ್ನು ಸಂಸ್ಥಾಪಿಸಿದವರು; ಅದಕ್ಕನುಗುಣವಾದ ಕಥೆ ಹಾಗೂ ಪಾತ್ರಗಳನ್ನೇ ಸೃಷ್ಟಿಸಿದರು.

ವಚನಕಾರರ ಕಾಲಕ್ಕೆ ಸಾಮಾನ್ಯ ಜನರ ನಡುವೆ ಬಂದ ಸಾಹಿತ್ಯವು ದಾಸವರೇಣ್ಯರ ಕಾಲಕ್ಕೆ ಜನಸಮೂಹದ ಅಂತರಂಗವನ್ನು ರಾಗ, ತಾಳಗಳ ಮುಖೇನ ಕಾಂತಾಸಮ್ಮಿತ ಭಾವದ ಮೂಲಕವೇ ಮುಟ್ಟತೊಡಗಿತು. 'ವೀರನಾರಾಯಣನೇ ಕವಿ, ಲಿಪಿಕಾರ ಕುಮಾರವ್ಯಾಸ, ಕೇಳುವ ಸೂರಿಗಳೆ ಜಂಗಮ ಜನಾರ್ಧನರು' ಎನ್ನುತ್ತಾರೆ

ಕುಮಾರವ್ಯಾಸ. ಹೀಗೆ ಅರಮನೆಯಿಂದ ಜನಸಾಮಾನ್ಯರ ಕಡೆಗೆ ಪ್ರವಹಿಸಿದ ಕನ್ನಡ ಸಾಹಿತ್ಯ ಪರಂಪರೆಯೇ ವೈವಿಧ್ಯಮಯವಾದುದು. ಆಧುನಿಕ ಕನ್ನಡ ಸಂದರ್ಭದ ಕವಿ, ಕಥೆಗಾರ, ಕಾದಂಬರಿಕಾರರ ಪ್ರತಿಭಾನ್ವಿತ ಬರವಣಿಗೆಯಂತೂ ಸಮಸ್ತ ಕನ್ನಡಿಗರ ಅರಿವಿಗೆ ಬಂದಿರುವಂಥದ್ದೆ. ಹೀಗೆ ಒಂದೂವರೆ ಸಾವಿರ ವರ್ಷಗಳ ಸ್ಪಷ್ಟ ಮತ್ತು ಸಮಗ್ರ ಇತಿಹಾಸವಿರುವ ಕನ್ನಡ ಭಾಷಾ ಶ್ರೀಮಂತಿಕೆಗೆ ೨೦೦೮ರಲ್ಲಿ ಭಾರತ ಸರ್ಕಾರ ಶಾಸ್ತ್ರೀಯ ಸ್ಥಾನಮಾನ ನೀಡಿತು. ಈ ಸಂದರ್ಭದಲ್ಲಿ ಕರ್ನಾಟಕ ಸರ್ಕಾರವೂ ಕೂಡ ಕನ್ನಡನಾಡಿನ ಎಲ್ಲ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳಿಗೆ ತಲಾ ಎರಡು ಕೋಟಿ ರೂಪಾಯಿಗಳ ಅನುದಾನವನ್ನು ಬಿಡುಗಡೆ ಮಾಡಿತು. ಈಗ ಎಲ್ಲ ವಿಶ್ವವಿದ್ಯಾಲಯಗಳು ಕನ್ನಡ ಸಾಹಿತ್ಯ ಸಂಸ್ಕೃತಿ ತತ್ಸಂಬಂಧದ ಸಂಶೋಧನೆಯ ಯೋಜನೆಗಳಲ್ಲಿ ತೊಡಗಿಸಿಕೊಂಡಿವೆ. ಈ ನಿಟ್ಟಿನಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯು ಹಲವು ಸಂಪುಟಗಳ ಪ್ರಕಟಣಾ ಯೋಜನೆಯನ್ನು ಕೈಗೆತ್ತಿಕೊಂಡು ಅದರ ಅಡಿಯಲ್ಲಿ **"ಶರಣ ಸ್ಮಾರಕಗಳ ಕ್ಷೇತ್ರಕಾರ್ಯ ಯೋಜನೆ" (ಬಸವಾದಿ ಶರಣರ, ಶರಣ ಸ್ಥಳಗಳ ಬಗೆಗಿನ ಮೌಖಿಕ ಸಾಹಿತ್ಯ / ಮಾಹಿತಿಗಳ ಸಂಗ್ರಹ ಮತ್ತು ದಾಖಲೀಕರಣ)**. ಈ ಯೋಜನೆಯಡಿ ವ್ಯಾಪಕವಾದ ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿದ ೧೨ನೇ ಶತಮಾನದ ಶರಣರಿಗೆ ಸಂಬಂಧಿಸಿದ ಹಾಡುಗಳೊಂದಿಗೆ, ಕನ್ನಡದಲ್ಲಿ ಇಂದಿನವರೆಗೆ ಪ್ರಕಟವಾದ ಶರಣರ ಹಾಡುಗಳನ್ನು ಈ ಸಂಪುಟದಲ್ಲಿ ಸೇರಿಸಿದ್ದಾರೆ. ಇದರಿಂದ ಶರಣರ ಬಗೆಗೆ ಲಿಖಿತ ಮತ್ತು ಮೌಖಿಕ ಎರಡೂ ಪರಂಪರೆಗಳನ್ನು ಎದುರಿಗೆ ಇಟ್ಟುಕೊಂಡು ಅಧ್ಯಯನಕಾರರಿಗೆ ಅನುಕೂಲವಾಗುತ್ತದೆ. ಇಂತಹ ಮಹತ್ವದ ಯೋಜನೆಯನ್ನು ಕೈಕೊಂಡು ಈ ಸಂಪುಟವನ್ನು ಹೊರತರುತ್ತಿರುವ ಸಂಶೋಧಕರಿಗೆ, ಸಂಪಾದಕರಿಗೆ ಅಭಿನಂದಿಸಿ, ಈ ಯೋಜನೆಯ ಯಶಸ್ಸಿಗೆ ಕಾರಣರಾದ ಗುಲಬರ್ಗಾ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಈ.ಟಿ. ಪುಟ್ಟಯ್ಯ ಅವರಿಗೆ, ಕುಲಸಚಿವರಾದ ಪ್ರೊ. ಎಸ್.ಎಲ್. ಹಿರೇಮಠ ಅವರಿಗೆ, ಯೋಜನೆಯ ಪ್ರಧಾನ ಸಂಶೋಧಕರೂ ಈ ಸಂಪುಟದ ಸಂಪಾದಕರೂ ಆಗಿರುವ ಡಾ। ಜಯಶ್ರೀ ದಂಡೆ ಹಾಗೂ ಡಾ। ವೀರಣ್ಣ ದಂಡೆ ಅವರಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪರವಾಗಿ ನಾನು ಹೃತ್ಪೂರ್ವಕವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಮನು ಬಳಿಗಾರ್
ಆಯುಕ್ತರು

***

15

ಪ್ರೊ. ಈ.ಟಿ.ಪುಟ್ಟಯ್ಯ
ಕುಲಪತಿಗಳು

ಕಾರ್ಯಸೌಧ
ಗುಲಬರ್ಗಾ ವಿಶ್ವವಿದ್ಯಾಲಯ,
ಗುಲಬರ್ಗಾ
ದಿ: ೨೫.೧೦.೨೦೧೧

ಕುಲಪತಿಗಳ ನುಡಿ

ಗುಲಬರ್ಗಾ ವಿಶ್ವವಿದ್ಯಾಲಯವು ಹೈದ್ರಾಬಾದ ಕರ್ನಾಟಕ ಪ್ರದೇಶದ ಹೆಮ್ಮೆಯ ವಿದ್ಯಾಸಂಸ್ಥೆಯಾಗಿದೆ. ೧೯೭೦-೭೧ರಲ್ಲಿ ಇದು ಕರ್ನಾಟಕ ವಿಶ್ವವಿದ್ಯಾಲಯದ ಒಂದು ಸ್ನಾತಕೋತ್ತರ ಕೇಂದ್ರವಾಗಿ, ಮುಂದೆ ೧೯೮೦ರಲ್ಲಿ ಸ್ವತಂತ್ರ ವಿಶ್ವವಿದ್ಯಾಲಯವಾಗಿ ಮಾರ್ಪಟ್ಟಿತು. ಕಳೆದ ಮೂವತ್ತು ವರ್ಷಗಳಿಂದ ಈ ವಿಶ್ವವಿದ್ಯಾಲಯವು ಬೋಧನೆ, ಸಂಶೋಧನೆ ಹಾಗೂ ಪ್ರಕಟನೆಗಳ ಮೂಲಕ ಜನಮನ್ನಣೆಯನ್ನು ಗಳಿಸಿದೆ. ಈ ವಿಶ್ವವಿದ್ಯಾಲಯದ ಬೌದ್ಧಿಕ ಆಸ್ತಿ ಬೋಧನೆ ಮತ್ತು ಸಂಶೋಧನೆ. ಇವು ಸಾಕಾರಗೊಳ್ಳುವುದು ಪ್ರಕಟನೆಗಳ ಮೂಲಕವೇ. ಗುಲಬರ್ಗಾ ವಿಶ್ವವಿದ್ಯಾಲಯದ ಪ್ರಸಾರಾಂಗವು ಅನೇಕ ಮೌಲಿಕವಾದ ಕೃತಿಗಳನ್ನು ಪ್ರಕಟಿಸಿದೆ. ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕರುಗಳು ಇದುವರೆಗೆ ನಾಲ್ಕು ನೂರಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದುದು ತುಂಬ ಹೆಮ್ಮೆಯ ಸಂಗತಿಯಾಗಿದೆ. ಕನ್ನಡ ಅಧ್ಯಯನ ಸಂಸ್ಥೆಯ ಸಂಶೋಧನ ವಿದ್ಯಾರ್ಥಿಗಳು ಬರೆದ ಸಂಶೋಧನ ಲೇಖನಗಳ ಸಂಕಲನ 'ಜ್ಞಾನ ಗಂಗಾ' ಸಂಚಿಕೆಗಳಂತೂ ತುಂಬ ಜನಪ್ರಿಯವಾಗಿವೆ. ಒಟ್ಟಿನಲ್ಲಿ ಕನ್ನಡ ಅಧ್ಯಯನ ಸಂಸ್ಥೆಯು ತನ್ನ ಅಪೂರ್ವ ಪ್ರಕಟನೆಗಳ ಮೂಲಕ ಜನಮೆಚ್ಚುಗೆಯನ್ನು ಪಡೆದಿದೆ.

ಕರ್ನಾಟಕ ಸರ್ಕಾರವು ಸುವರ್ಣ ಮಹೋತ್ಸವದ ಸಂದರ್ಭದಲ್ಲಿ ಕನ್ನಡ ಭಾಷೆ, ಸಂಸ್ಕೃತಿ ಮತ್ತು ಸಾಹಿತ್ಯಕ್ಕೆ ಸಂಬಂಧಿಸಿದಂತೆ ಉನ್ನತ ಸಂಶೋಧನೆ ನಡೆಸಲೆಂಬ ಧ್ಯೇಯವನ್ನಿರಿಸಿಕೊಂಡು ನಮ್ಮ ವಿಶ್ವವಿದ್ಯಾಲಯಕ್ಕೆ ವಿಶೇಷ ಅನುದಾನವನ್ನು ನೀಡಿದೆ. ಕನ್ನಡ ಭಾಷಾಭಿವೃದ್ಧಿ ಯೋಜನೆಯಡಿ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯವು ನೀಡಿದ ಅನುದಾನ ಪಡೆದು ನಮ್ಮ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕರು ಬಸವಾದಿ ಶರಣರ ಸ್ಮಾರಕಗಳು, ತತ್ವಪದಕಾರರ ಸ್ಮಾರಕಗಳು, ಕೀರ್ತನಕಾರರ ಸ್ಮಾರಕಗಳು, ಹೈದ್ರಾಬಾದ ಕರ್ನಟಕ ಸಾಂಸ್ಕೃತಿಕ ವಿಷಯಕೋಶ. ಹೈದ್ರಾಬಾದ ಕರ್ನಾಟಕದ ಸಾಹಿತ್ಯ ಚರಿತ್ರೆ, ಆಧುನಿಕ ನಾಟಕಗಳು. ಹಸ್ತಪ್ರತಿಗಳ ಸಂರಕ್ಷಣೆ ಹಾಗೂ ಪ್ರಕಟನೆ, ಶರಣಸಾಹಿತ್ಯ ವಿಮರ್ಶಾ ಸಂಪುಟಗಳ ಪ್ರಕಟನೆ ಈ ಮುಂತಾದ ಮಹತ್ವದ ಸಂಶೋಧನಾ ಯೋಜನೆಗಳನ್ನು ಕೈಗೆತ್ತಿಕೊಂಡು ಅಧ್ಯಯನ ನಡೆಸುತ್ತಿರುವರು. ಇವುಗಳಲ್ಲಿ **"ಶರಣ ಸ್ಮಾರಕಗಳ ಕ್ಷೇತ್ರಕಾರ್ಯ ಯೋಜನೆ"**

(**ಬಸವಾದಿ ಶರಣರ, ಶರಣ ಸ್ಥಳಗಳ ಬಗೆಗಿನ ಮೌಖಿಕ ಸಾಹಿತ್ಯ / ಮಾಹಿತಿಗಳ ಸಂಗ್ರಹ ಮತ್ತು ದಾಖಲೀಕರಣ**) ಈ ಯೋಜನೆಯಡಿ ವ್ಯಾಪಕವಾದ ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿದ ೧೨ನೇ ಶತಮಾನದ ಶರಣರಿಗೆ ಸಂಬಂಧಿಸಿದ ಹಾಡುಗಳೊಂದಿಗೆ, ಕನ್ನಡದಲ್ಲಿ ಇಂದಿನವರೆಗೆ ಬಿಡಿಬಿಡಿಯಾಗಿ ಅಲ್ಲಲ್ಲಿ ಪ್ರಕಟವಾದ ಶರಣರ ಹಾಡುಗಳನ್ನು ಈ ಸಂಪುಟದಲ್ಲಿ ಸೇರಿಸಿದ್ದಾರೆ. ಇದರಿಂದ ಶರಣರ ಬಗೆಗೆ ಲಿಖಿತ ಮತ್ತು ಮೌಖಿಕ ಸಾಹಿತ್ಯ ಪರಂಪರೆಗಳೆರಡನ್ನು ಎದುರಿಗೆ ಇಟ್ಟುಕೊಂಡು ಅಧ್ಯಯನ ಮಾಡಲು ಅನುಕೂಲವಾಗುತ್ತದೆ.

ಇಂತಹ ಮಹತ್ವದ ಯೋಜನೆಯನ್ನು ಕೈಕೊಂಡು ಈ ಸಂಪುಟವನ್ನು ಹೊರತರುತ್ತಿರುವ ಸಂಶೋಧಕರೂ ಸಂಪಾದಕರೂ ಆದ ಡಾ। ಜಯಶ್ರೀ ದಂಡೆ ಹಾಗೂ ಡಾ। ವೀರಣ್ಣ ದಂಡೆ ಅವರನ್ನು ಅಭಿನಂದಿಸಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀ. ಬಿ.ಬಸವರಾಜು ಅವರಿಗೂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಯುಕ್ತರಾದ ಶ್ರೀ ಮನು ಬಳಿಗಾರ ಅವರಿಗೂ ಅಲ್ಲದೆ ಇತರ ಅಧಿಕಾರಿ ವರ್ಗದವರಿಗೂ ವಿಶೇಷ ಕೃತಜ್ಞತೆಗಳು ಸಲ್ಲುತ್ತವೆ.

ಪ್ರೊ. ಈ.ಟಿ.ಪುಟ್ಟಯ್ಯ
ಕುಲಪತಿಗಳು

***

ಪ್ರಧಾನ ಸಂಶೋಧಕರ ನುಡಿ

ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ದೊರೆತ ಹಿನ್ನೆಲೆಯಲ್ಲಿ ನಾಡಿನ ತುಂಬ ಕನ್ನಡದ ಕೆಲಸಗಳು ಮೈತುಂಬಿ ನಡೆಯಬೇಕೆಂಬ ಕರ್ನಾಟಕ ಸರ್ಕಾರದ ಅತ್ಯಂತ ಉತ್ಸಾಹದಾಯಕ ಮತ್ತು ಸಮಯೋಚಿತ ಅಪರೂಪದ ನಿರ್ಧಾರ ಒಂದು ಐತಿಹಾಸಿಕ ದಾಖಲೆಯಾಗಿ ಉಳಿಯುವಂತಹದು. ಕನ್ನಡಕ್ಕೆ ಇದೊಂದು ಅಪರೂಪದ ಅವಕಾಶವೆಂದೇ ಹೇಳಬೇಕು. ಇದರಿಂದ ಕನ್ನಡದ ಸುವರ್ಣ ಯುಗವೊಂದು ಪ್ರಾರಂಭವಾದಂತಾಗಿದೆ. ಇಂತಹ ಒಂದು ಶುಭಾರಂಭವನ್ನು ಪ್ರಾರಂಭಿಸಲು ಕಾರಣರಾದವರು ಕರ್ನಾಟಕದ ಹಿಂದಿನ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಬಿ.ಎಸ್. ಯಡಿಯೂರಪ್ಪ ಅವರು.

ಕೇಂದ್ರ ಸರ್ಕಾರವು ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನ ಘೋಷಿಸಿದ ಸಂದರ್ಭವನ್ನು ಬಳಸಿಕೊಂಡು ಕೇಂದ್ರ ಸರ್ಕಾರದಿಂದ ಧನಸಹಾಯ ದೊರೆಯುವ ಮುಂಚೆಯೇ ಕರ್ನಾಟಕ ಸರ್ಕಾರದ ಪ್ರಥಮ ಆದ್ಯಕರ್ತವ್ಯವೆಂದು ಭಾವಿಸಿ, ಮಾನ್ಯ ಶ್ರೀ ಯಡಿಯೂರಪ್ಪ ಅವರು ಕರ್ನಾಟಕದ ೧೧ ವಿಶ್ವವಿದ್ಯಾಲಯಗಳಿಗೆ, ಕನ್ನಡದ ಚಟುವಟಿಕೆಗಳ ಅಭಿವೃದ್ಧಿಗಾಗಿ ತಲಾ ೨ ಕೋಟಿ ರೂಪಾಯಿಗಳನ್ನು ಧನಸಹಾಯವಾಗಿ ಕೊಡುವುದಾಗಿ ಘೋಷಿಸಿದರು. ಮತ್ತು ಕೂಡಲೇ ಒಂದೊಂದು ಕೋಟಿ ರೂಪಾಯಿಗಳನ್ನು ಬಿಡುಗಡೆಮಾಡಿದರು. ಆ ಫಲವಾಗಿ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯು ಸ್ಥಳೀಯವಾಗಿ ಮಹತ್ವಪಡೆದ ಅನೇಕ ಸಂಗತಿಗಳ ಬಗ್ಗೆ ಸಂಶೋಧನೆಗಳು ನಡೆಯಬೇಕೆಂಬ ಉದ್ದೇಶದಿಂದ ಹಲವಾರು ಯೋಜನೆಗಳನ್ನು ಕೈಗೆತ್ತಿಕೊಂಡಿತು.

ಅಂತಹದರಲ್ಲಿ ೧೨ನೇ ಶತಮಾನದ ಶರಣರಿಗೆ ಸಂಬಂಧಿಸಿದ ಮೌಖಿಕ ಮಾಹಿತಿ ಮತ್ತು ಸಾಹಿತ್ಯ ಇವುಗಳ ಸಂಗ್ರಹ ಮತ್ತು ದಾಖಲೀಕರಣ ಅತ್ಯಂತ ಮಹತ್ವದ ಯೋಜನೆಯಾಗಿದೆ. ಹೈದ್ರಾಬಾದ ಕರ್ನಾಟಕದಲ್ಲಿ ಅಷ್ಟೇ ಅಲ್ಲ ಇಡೀ ಕರ್ನಾಟಕದ ತುಂಬ, ಮತ್ತು ನೆರೆಯ ಆಂದ್ರಪ್ರದೇಶ ಮತ್ತು ಮಹಾರಾಷ್ಟ್ರಗಳಲ್ಲೂ ಶರಣರ ಸ್ಮಾರಕಗಳಿವೆ. ಶರಣರ ಸ್ಮಾರಕಗಳು ಎಲ್ಲೆಲ್ಲಿ ಇವೆಯೋ ಅಲ್ಲಲ್ಲಿ ಮೌಖಿಕ ಮಾಹಿತಿ ಮತ್ತು ಸಾಹಿತ್ಯಗಳು ಸಾಕಷ್ಟು ಪ್ರಮಾಣದಲ್ಲಿ ಪ್ರಚಾರದಲ್ಲಿವೆ. ಅವುಗಳನ್ನು ಸಂಗ್ರಹಿಸಿ ಸಂಪಾದಿಸಿ ಕೊಡುವ ಮಹತ್ವದ ಯೋಜನೆ ನಮ್ಮದು.

'ಬಸವ ಪರಿವಾರ', 'ಶರಣ ಪರಿವಾರ' ಎಂಬ ಈ ಎರಡು ಸಂಪುಟಗಳು ಶರಣರ ಬಗೆಗೆ ಪ್ರಚಲಿತದಲ್ಲಿರುವ ಹಾಡುಗಳ ಸಂಗ್ರಹಗಳಾಗಿವೆ. ಸಧ್ಯಕ್ಕೆ ಬೀದರ,

ಕಲಬುರ್ಗಿ ಜಿಲ್ಲೆಗಳಲ್ಲಿ ವ್ಯಾಪಕವಾಗಿ, ರಾಯಚೂರ ಹಾಗೂ ಬಿಜಾಪುರ ಈ ಜಿಲ್ಲೆಗಳಲ್ಲಿ ತಕ್ಕಮಟ್ಟಿಗೆ ಕ್ಷೇತ್ರಕಾರ್ಯಕೈಕೊಂಡು ಹಾಡುಗಳನ್ನು ಸಂಗ್ರಹಿಸಲಾಗಿದೆ. ಜೊತೆಗೆ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ, ಡಾ। ಬಿ.ಬಿ. ಹೆಂಡಿ ಅವರ ನೇತೃತ್ವದಲ್ಲಿ ೧೯೭೫-೭೮ರ ಅವಧಿಯಲ್ಲಿ ಕೈಗೊಂಡ ಜನಪದ ಹಾಡು ಮತ್ತು ಕಥೆಗಳ ಸಂಗ್ರಹ ಯೋಜನೆಯಡಿ ಸಂಗ್ರಹಿತ ಕೆಲ ಹಾಡುಗಳನ್ನೂ ಬಳಸಿಕೊಳ್ಳಲಾಗಿದೆ. ಅಲ್ಲದೆ ಕರ್ನಾಟಕದಾದ್ಯಂತ ಬಿಡಿಬಿಡಿಯಾಗಿ ಸಂಗ್ರಹಗೊಂಡು, ಅಲ್ಲಲ್ಲಿ ಪ್ರಕಟವಾಗುತ್ತ ಬಂದಿರುವ ಶರಣರ ಹಾಡುಗಳನ್ನೂ ಇಲ್ಲಿ ಬಳಸಿಕೊಳ್ಳಲಾಗಿದೆ. ಇದರಿಂದ ಮೌಖಿಕ ಸಾಹಿತ್ಯದಲ್ಲಿ ಶರಣರು ಹೇಗೆ ಉಳಿದುಕೊಂಡು ಬಂದಿದ್ದಾರೆ ಎಂಬುದರ ಒಂದು ಚಿತ್ರ ನಮಗೆ ಎದ್ದುಕಾಣುತ್ತದೆ. ಪುರಾಣಕಾರರು ಸೃಷ್ಟಿಸಿದ ಶರಣ ಜಗತ್ತು ಒಂದಾದರೆ, ಹೀಗೆ ಮೌಖಿಕ ಪರಂಪರೆಯಲ್ಲಿ ಉಳಿದುಕೊಂಡು ಬೆಳೆದುಕೊಂಡು ಬಂದಿರುವ ಶರಣರ ಚಿತ್ರ ಇನ್ನೊಂದು ಕಡೆ ಕಾಣುತ್ತದೆ. ಈ ಎರಡೂ ಪರಂಪರೆಗಳನ್ನು ಎದುರಿಗೆ ಇಟ್ಟುಕೊಂಡು ಅಧ್ಯಯನ ಮಾಡಿದರೆ ಶರಣರ ಬಗೆಗೆ ಒಂದು ಸಂಪೂರ್ಣ ಚಿತ್ರ ಕಂಡುಕೊಳ್ಳಲು ಸಹಾಯವಾಗುತ್ತದೆಂದು ಭಾವಿಸಲಾಗಿದೆ. ಇನ್ನು ಮುಂದಿನ ಸಂಪುಟಗಳ ವೈವಿಧ್ಯತೆಗಳು ಇವುಗಳಿಗೆ ಮತ್ತೆ ಪೂರಕವಾಗಿ ಬರಲಿವೆ. ಅಲ್ಲಿ ಮೌಖಿಕ ಮಾಹಿತಿಗಳೇ ಪ್ರಮುಖವಾಗಿ ದಾಖಲಾಗಲಿವೆ.

ಕನ್ನಡದ ಬಗ್ಗೆ ವಿಶಾಲವಾದ ಹೃದವಂತಿಕೆಯನ್ನು ಮೆರೆದ ಕರ್ನಾಟಕ ಸರ್ಕಾರಕ್ಕೆ ನಮ್ಮ ನಮನಗಳು ಸಲ್ಲುತ್ತವೆ. ಕರ್ನಾಟಕದ ಹಿಂದಿನ ಮುಖ್ಯಮಂತ್ರಿಗಳಾದ ಮಾನ್ಯ ಶ್ರೀ ಯಡಿಯೂರಪ್ಪ ಅವರು, ಈಗಿನ ಮುಖ್ಯಮಂತ್ರಿಗಳಾದ ಮಾನ್ಯಶ್ರೀ ಡಿ. ವ್ಹಿ. ಸದಾನಂದಗೌಡರೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರು, ಕಾರ್ಯದರ್ಶಿಗಳು, ಆಯುಕ್ತರಾದ ಡಾ। ಮನು ಬಳಿಗಾರ ಅವರೂ ಅಭಿನಂದನೆಗೆ ಅರ್ಹರಾಗಿದ್ದಾರೆ.

ನಮ್ಮ ಕುಲಪತಿಗಳಾದ ಮಾನ್ಯ ಪ್ರೊ. ಈ. ಟಿ. ಪುಟ್ಟಯ್ಯನವರು ತುಂಬಾ ಆಸಕ್ತಿ ವಹಿಸಿ ಕನ್ನಡ ಅಧ್ಯಯನ ಸಂಸ್ಥೆಯ ಯೋಜನೆಯ ಕೆಲಸಗಳು ಚುರುಕಿನಿಂದ ನಡೆಯಲು ಕಾರಣರಾಗಿದ್ದಾರೆ. ಮಾನ್ಯ ಕುಲಸಚಿವರಾದ ಡಾ। ಎಸ್.ಎಲ್. ಹಿರೇಮಠ ಅವರೂ ಇದರಲ್ಲಿ ಭಾಗಿಯಾಗಿದ್ದಾರೆ. ಅದಕ್ಕಾಗಿ ನಾವು ಈ ಮಹನೀಯರುಗಳಿಗೆ ಆಭಾರಿಯಾಗಿದ್ದೇವೆ. ಕನ್ನಡ ಅಧ್ಯಯನ ಸಂಸ್ಥೆಯ ಎಲ್ಲ ಸಹೋದ್ಯೋಗಿಗಳನ್ನೂ ಅಧ್ಯಕ್ಷರಾದ ಡಾ। ನಾಗಾಬಾಯಿ ಬುಳ್ಳಾ ಅವರನ್ನೂ ಈ ಸಂದರ್ಭದಲ್ಲಿ ನೆನೆಸುತ್ತೇವೆ.

ಸಂಪುಟದ ಕೆಲಸ ಇಷ್ಟೊಂದು ಸಮೃದ್ಧವಾಗಿ ಆಗಲು ಕಾರಣರಾದವರು ಶ್ರೀ ಆನಂದ ಸಿದ್ಧಾಮಣಿ, ಅನಿಲ ತೆಗ್ಗಿನಮನಿ, ಸಾಹೇಬಗೌಡ ಸಿಂದಗಿ, ಡಾ। ವೀರಯ್ಯಸ್ವಾಮಿ, ಕು. ಸವಿತಾ ಶಿವಲಿಂಗಪ್ಪ. ಇಲ್ಲಿಯ ಹಾಡುಗಳನ್ನು ಹಾಡಿದವರು ಶ್ರೀಮತಿಯರಾದ ಶಶಿಕಲಾ ಗಿರಿ, ಸರ್ವಮಂಗಳಾ ಜೋಗೂರ, ಪಾರ್ವತಿ ಜೆಮಶೆಟ್ಟಿ, ಅನ್ನಪೂರ್ಣ ದೇವಣಿ, ಗೌರಮ್ಮ ಕಾಡಾದಿ, ರೇಖಾ ಕಾಡಾದಿ, ಸುಮಿತ್ರಾದೇವಿ ಅಂಗಡಿ, ಶೀಲಾ ಕೋಣೀನ, ಮಹಾದೇವಿ ಕುಂಬಾರ ಹಾಗೂ ನಮಗೆ ಹಾಡು ಹೇಳಿ ಸಹಕರಿಸಿದ ಉಳಿದೆಲ್ಲ ವಕ್ತಾರರಿಗೆ ನಾವು ಕೃತಜ್ಞರಾಗಿದ್ದೇವೆ. ಅವರ ಸಹಕಾರದಿಂದ ಈ ಸಂಪುಟಗಳು ಹೊರಬರಲು ಸಾಧ್ಯವಾಗಿದೆ. ಜೊತೆಗೆ ಶರಣರ ಹಾಡುಗಳನ್ನು ಸಂಗ್ರಹಿಸಿ, ಆಗಾಗ ಪ್ರಕಟಿಸುತ್ತ ಬಂದ ಮಹನೀಯರಿಗೆ ಇಲ್ಲಿ ನಾವು ಸ್ಮರಿಸುತ್ತೇವೆ. ಶರಣರ ಕುರಿತು

ಅಲ್ಲಲ್ಲಿ ಪ್ರಕಟವಾಗುತ್ತ ಬಂದಿರುವ ಶರಣರ ಹಾಡುಗಳನ್ನೂ ಇಲ್ಲಿ ಬಳಸಿಕೊಳ್ಳಲಾಗಿದೆ. ಇದರಿಂದ ಮೌಖಿಕ ಸಾಹಿತ್ಯದಲ್ಲಿ ಶರಣರು ಹೇಗೆ ಉಳಿದುಕೊಂಡು ಬಂದಿದ್ದಾರೆ ಎಂಬುದರ ಒಂದು ಚಿತ್ರ ನಮಗೆ ಎದ್ದುಕಾಣುತ್ತದೆ. ಪುರಾಣಕಾರರು ಸೃಷ್ಟಿಸಿದ ಶರಣ ಜಗತ್ತು ಒಂದಾದರೆ, ಹೀಗೆ ಮೌಖಿಕ ಪರಂಪರೆಯಲ್ಲಿ ಉಳಿದುಕೊಂಡು ಬೆಳೆದುಕೊಂಡು ಬಂದಿರುವ ಶರಣರ ಚಿತ್ರ ಇನ್ನೊಂದು ಕಡೆ ಕಾಣುತ್ತದೆ. ಈ ಎರಡೂ ಪರಂಪರೆಗಳನ್ನು ಎದುರಿಗೆ ಇಟ್ಟುಕೊಂಡು ಅಧ್ಯಯನ ಮಾಡಿದರೆ ಶರಣರ ಬಗೆಗೆ ಒಂದು ಸಂಪೂರ್ಣ ಚಿತ್ರ ಕಂಡುಕೊಳ್ಳಲು ಸಹಾಯವಾಗುತ್ತದೆಂದು ಭಾವಿಸಲಾಗಿದೆ. ಇನ್ನು ಮುಂದಿನ ಸಂಪುಟಗಳ ವೈವಿಧ್ಯತೆಗಳು ಇವುಗಳಿಗೆ ಮತ್ತೆ ಪೂರಕವಾಗಿ ಬರಲಿವೆ. ಅಲ್ಲಿ ಮೌಖಿಕ ಮಾಹಿತಿಗಳೇ ಪ್ರಮುಖವಾಗಿ ದಾಖಲಾಗಲಿವೆ.

ಕನ್ನಡದ ಬಗ್ಗೆ ವಿಶಾಲವಾದ ಹೃದವಂತಿಕೆಯನ್ನು ಮೆರೆದ ಕರ್ನಾಟಕ ಸರ್ಕಾರಕ್ಕೆ ನಮ್ಮ ನಮನಗಳು ಸಲ್ಲುತ್ತವೆ. ಕರ್ನಾಟಕದ ಹಿಂದಿನ ಮುಖ್ಯಮಂತ್ರಿಗಳಾದ ಮಾನ್ಯ ಶ್ರೀ ಯಡಿಯೂರಪ್ಪ ಅವರು, ಈಗಿನ ಮುಖ್ಯಮಂತ್ರಿಗಳಾದ ಮಾನ್ಯಶ್ರೀ ಡಿ. ವ್ಹಿ. ಸದಾನಂದಗೌಡರೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರಾದ ಶ್ರೀ ಗೋವಿಂದ ಎಂ. ಕಾರಜೋಳ ಅವರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀ ಬಸವರಾಜ ಅವರು, ಆಯುಕ್ತರಾದ ಡಾ। ಮನು ಬಳಿಗಾರ ಅವರೂ ಅಭಿನಂದನೆಗೆ ಅರ್ಹರಾಗಿದ್ದಾರೆ.

ನಮ್ಮ ಕುಲಪತಿಗಳಾದ ಮಾನ್ಯ ಪ್ರೊ. ಈ. ಟಿ. ಪುಟ್ಟಯ್ಯನವರು ತುಂಬಾ ಆಸಕ್ತಿ ವಹಿಸಿ ಕನ್ನಡ ಅಧ್ಯಯನ ಸಂಸ್ಥೆಯ ಯೋಜನೆಯ ಕೆಲಸಗಳು ಚುರುಕಿನಿಂದ ನಡೆಯಲು ಕಾರಣರಾಗಿದ್ದಾರೆ. ಮಾನ್ಯ ಕುಲಸಚಿವರಾದ ಡಾ। ಎಸ್.ಎಲ್. ಹಿರೇಮಠ ಅವರೂ ಇದರಲ್ಲಿ ಭಾಗಿಯಾಗಿದ್ದಾರೆ. ಅದಕ್ಕಾಗಿ ನಾವು ಈ ಮಹನೀಯರುಗಳಿಗೆ ಆಭಾರಿಯಾಗಿದ್ದೇವೆ. ಕನ್ನಡ ಅಧ್ಯಯನ ಸಂಸ್ಥೆಯ ಎಲ್ಲ ಸಹೋದ್ಯೋಗಿಗಳನ್ನೂ ಅಧ್ಯಕ್ಷರಾದ ಡಾ। ನಾಗಾಬಾಯಿ ಬುಳ್ಳಾ ಅವರನ್ನೂ ಈ ಸಂದರ್ಭದಲ್ಲಿ ನೆನೆಸುತ್ತೇವೆ.

ಸಂಪುಟದ ಕೆಲಸ ಇಷ್ಟೊಂದು ಸಮೃದ್ಧವಾಗಿ ಆಗಲು ಕಾರಣರಾದವರು ಶ್ರೀ ಆನಂದ ಸಿದ್ದಾಮಣಿ, ಅನಿಲ ತೆಗ್ಗಿನಮನಿ, ಸಾಹೇಬಗೌಡ ಸಿಂದಗಿ, ಡಾ। ವೀರಯ್ಯಸ್ವಾಮಿ, ಕು. ಸವಿತಾ ಶಿವಲಿಂಗಪ್ಪ. ಇಲ್ಲಿಯ ಹಾಡುಗಳನ್ನು ಹಾಡಿದವರು ಶ್ರೀಮತಿಯರಾದ ಶಶಿಕಲಾ ಗಿರಿ, ಸರ್ವಮಂಗಳಾ ಜೋಗೂರ, ಪಾರ್ವತಿ ಜೆಮಶೆಟ್ಟಿ, ಅನ್ನಪೂರ್ಣ ದೇವಣಿ, ಗೌರಮ್ಮ ಕಾಡಾದಿ, ರೇಖಾ ಕಾಡಾದಿ, ಸುಮಿತ್ರಾದೇವಿ ಅಂಗಡಿ, ಶೀಲಾ ಕೋಣೀನ, ಮಹಾದೇವಿ ಕುಂಬಾರ ಹಾಗೂ ನಮಗೆ ಹಾಡು ಹೇಳಿ ಸಹಕರಿಸಿದ ಉಳಿದೆಲ್ಲ ವಕ್ತಾರರಿಗೆ ನಾವು ಕೃತಜ್ಞರಾಗಿದ್ದೇವೆ. ಅವರ ಸಹಕಾರದಿಂದ ಈ ಸಂಪುಟಗಳು ಹೊರಬರಲು ಸಾಧ್ಯವಾಗಿದೆ. ಜೊತೆಗೆ ಶರಣರ ಹಾಡುಗಳನ್ನು ಸಂಗ್ರಹಿಸಿ, ಆಗಾಗ ಪ್ರಕಟಿಸುತ್ತ ಬಂದ ಮಹನೀಯರಿಗೆ ಇಲ್ಲಿ ನಾವು ಸ್ಮರಿಸುತ್ತೇವೆ. ಶರಣರ ಕುರಿತು ಅಧ್ಯಯನ ಮಾಡುವವರಿಗೆ ಈ ಸಂಪುಟಗಳು ಸಹಾಯವಾದರೆ ನಮಗೆ ಅದೇ ಅತ್ಯಂತ ಸಂತೋಷದ ಸಂಗತಿಯಾಗುತ್ತದೆ.

ಈ ಸಂಪುಟವನ್ನು ಸುಂದರವಾಗಿ ಮುದ್ರಿಸಿದ ಪ್ರಿಂಟ್‌ಪಾರ್ಕ್ ಮುದ್ರಣಾಲಯದ ಒಡೆಯರಾದ ಶ್ರೀ ಜಿ.ಬಿ.ಪಾಟೀಲ ಹಾಗೂ ಅವರ ಸಿಬ್ಬಂದಿ ವರ್ಗಕ್ಕೆ ಕೃತಜ್ಞತೆಗಳು ಸಲ್ಲುತ್ತವೆ.

ಡಾ। ಜಯಶ್ರೀ ದಂಡೆ
ಡಾ। ವೀರಣ್ಣ ದಂಡೆ

೨೧

ಪ್ರಸ್ತಾವನೆ

೧೨ನೇ ಶತಮಾನದ ಶರಣರು ಗೈದ ಸಾಮಾಜಿಕ ಕ್ರಾಂತಿ, ಅವರು ರಚಿಸಿದ ವಚನ ಸಾಹಿತ್ಯ ಇವತ್ತು ಕರ್ನಾಟಕದಲ್ಲಿ ಎಲ್ಲರ ಗಮನ ಸೆಳೆಯುತ್ತಲಿವೆ. ಜೊತೆಗೆ ಶರಣರ ಚಿಂತನೆಗಳತ್ತ ಇಡೀ ಭಾರತದ ಗಮನಸೆಳೆಯುವ ಪ್ರಯತ್ನಗಳೂ ನಡೆಯುತ್ತಿವೆ. ಇಂತಹ ಸಮಯದಲ್ಲಿ ಸಮಾಜದ ಎಲ್ಲ ವರ್ಗದ ಜನರು ಶರಣರ ಬಗೆಗೆ ವಿವಿಧಬಗೆಯ ಅಧ್ಯಯನಗಳಲ್ಲಿ ತೊಡಗುತ್ತಿದ್ದಾರೆ. ಶರಣರು ಆಗಿ ಹೋದದ್ದು ಈ ಭಾಗದ ಬೀದರ ಜಿಲ್ಲೆಯ ಬಸವಕಲ್ಯಾಣದಲ್ಲಿ. ಅವರು ಆಗಿಹೋಗಿ ಈಗ ಎಂಟುನೂರು ವರ್ಷಗಳು ಕಳೆದರೂ ಶರಣರ ಬಗೆಗೆ ಇಲ್ಲಿಯವರೆಗೆ ಸಣ್ಣ ಸಣ್ಣ ಸ್ಮಾರಕಗಳು ಉಳಿದುಕೊಂಡು ಬಂದಿರುವುದು, ಅವರ ಬಗೆಗೆ ಸ್ಥಳೀಯರು ಅನೇಕ ಮಾಹಿತಿಗಳನ್ನು ಮೌಖಿಕ ಪರಂಪರೆಯಲ್ಲಿ ಹೇಳಿಕೊಂಡು ಬಂದಿರುವುದು, ಜೊತೆಗೆ ಮೌಖಿಕ ಪರಂಪರೆಯಲ್ಲಿ ಶರಣರ ಬಗೆಗೆ ಹಾಡುಗಳು ರಚನೆಯಾಗುತ್ತ ಬಂದಿರುವುದು ಒಂದು ಮಹತ್ವದ ಸಂಗತಿಯಾಗಿದೆ. ಇದು ಶರಣರ ಬಗೆಗೆ ಜನಸಾಮಾನ್ಯರು ಉಳಿಸಿಕೊಂಡು ಬಂದಿರುವ ಭಾವನೆಯನ್ನು ವ್ಯಕ್ತಪಡಿಸುತ್ತದೆ.

ಶರಣರ ಬಗೆಗೆ ಇಂತಹ ಭಾವನೆ ಉಳಿದುಕೊಂಡು ಬಂದಿರುವುದರಿಂದಲೇ ಶರಣರ ಬದುಕನ್ನು ಅನುಕರಣೆ ಮಾಡುವ, ಅವರ ತತ್ತ್ವಗಳನ್ನು ಪಾಲಿಸುತ್ತ ಬಂದಿರುವ ಜನಸಮುದಾಯ ಇವತ್ತಿಗೂ ಕಾಣುತ್ತದೆ. ಒಂದು ಕಡೆ ಮಠಮಾನ್ಯಗಳು ಶರಣರ ತತ್ತ್ವಗಳನ್ನು ಉಳಿಸುವ ಕೆಲಸ ಮಾಡುತ್ತ ಬಂದಿವೆ. ಇನ್ನೊಂದು ಕಡೆ ಪ್ರತಿಭಾವಂತ ಕವಿಗಳು ಶರಣರ ಬಗೆಗೆ ಸಾಹಿತ್ಯವನ್ನು ರಚಿಸುತ್ತ ಬಂದಿದ್ದಾರೆ. ಮತ್ತೊಂದು ಕಡೆ ೧೨ನೇ ಶತಮಾನ ಒಳಗೊಂಡು ಆಗಾಗ ನಿರ್ಮಾಣವಾಗುತ್ತ ಬಂದಿರುವ ಶರಣರ ಸ್ಮಾರಕಗಳು, ಅವುಗಳ ಸುತ್ತಮುತ್ತ ನಾನಾ ಬಗೆಯ ನಂಬುಗೆಗಳು, ಸಂಪ್ರದಾಯಗಳು, ಉತ್ಸವಗಳು ಬೆಳೆದುಕೊಂಡು ಬಂದಿವೆ. ಇವೆಲ್ಲ ಶರಣರ ಬಗೆಗೆ ಜನಸಾಮಾನ್ಯರು ಇಟ್ಟುಕೊಂಡು ಬಂದಿರುವ ಭಾವನೆಗಳನ್ನು ಹೇಳುತ್ತವೆ. ಇವೆಲ್ಲಕ್ಕಿಂತ ಮಿಗಿಲಾಗಿ ಜನಸಾಮಾನ್ಯರು ಶರಣರ ಸ್ಮರಣೆಯನ್ನು ಬದುಕಿನಲ್ಲಿ ಅಳವಡಿಸಿಕೊಂಡು ಬಂದಿದ್ದಾರೆ. ಕುಂತರೆ ನಿಂತರೆ 'ಬಸವ ಬಸವ' ಎನ್ನುತ್ತಾರೆ. ಈ ಬಸವನ ಹೆಸರಿನ ಹಿಂದೆ ಎಲ್ಲ ಶರಣ ಸಮುದಾಯವೇ ಕೂಡಿರುತ್ತದೆ ಎಂಬ ಭಾವ ಅವರಲ್ಲಿ ಗಟ್ಟಿಯಾಗಿ ಅಡಗಿದೆ.

ಮೌಖಿಕ ಪರಂಪರೆಯಲ್ಲಿ ಎಷ್ಟು ಸಂದರ್ಭಗಳ ಹಾಡುಗಳು ದೊರೆಯುತ್ತವೆಯೋ

ಅಷ್ಟು ನಮೂನೆಯ ಹಾಡುಗಳಲ್ಲಿ ಶರಣರ ಸ್ಮರಣೆಗಳು ಸೇರಿಕೊಂಡಿವೆ. ಮದುವೆ, ಸೋಬಾನ, ಜೋಗುಳ, ಕುಪ್ಪಸ, ಮೈನೆರೆದ ಇಂತಹ ಶುಭಸಂದರ್ಭಗಳಲ್ಲಿ ಬಳಕೆಯಾಗುವ ಹಾಡುಗಳಲ್ಲಿ, ಕುಟ್ಟುವ, ಬೀಸುವ, ಹಂತಿ ಹೊಡೆಯುವ ಇಂತಹ ಶ್ರಮಪ್ರಧಾನ ಸಂದರ್ಭಗಳಲ್ಲಿ; ಕೋಲಾಟ, ಗೀಗೀ, ಭಜನೆ , ಬುಲಾಯಿ, ಡೊಳ್ಳಿನ ಹಾಡುಗಳು; ಪ್ರಮುಖವಾದ ಉತ್ಸವಗಳಲ್ಲಿ ಜನ ಕುಳಿತು ಹಾಡು ಕೇಳುವ ಸಂದರ್ಭಗಳಲ್ಲಿ ಶರಣರ ಚರಿತ್ರೆಗಳನ್ನು ಹಾಡಿಕೊಳ್ಳಲಾಗುತ್ತದೆ ಮತ್ತು ಅವರ ಮಹಿಮೆಗಳನ್ನು ಬಿತ್ತರಿಸುವ ಹಾಡುಗಳು ಸಾಕಷ್ಟು ಹುಟ್ಟಿಕೊಂಡಿವೆ.

ಪ್ರತಿಭಾವಂತ ಕವಿಗಳು ಪುರಾಣ ಕಾವ್ಯಗಳಲ್ಲಿ ಉಳಿಸಿಕೊಂಡು ಬಂದಿರುವ ಸಂಗತಿಗಳು, ಬೆಳೆಸಿಕೊಂಡು ಬಂದಿರುವ ಭಾವನೆಗಳು ಒಂದು ಕಡೆಯಾದರೆ, ಅಲಿಖಿತ ಮೂಲದಲ್ಲಿ ಮೌಖಿಕ ಪರಂಪರೆಯಲ್ಲಿ ಶರಣರಿಗೆ ಸಂಬಂಧಿಸಿದ ಮಾಹಿತಿಗಳು ಹಾಡುಗಳು ನಡಾವಳಿಕೆಗಳು ನಂಬುಗೆಗಳು ಸಾಂಪ್ರದಾಯಗಳು ಇನ್ನೊಂದು ಬಗೆಯಲ್ಲಿ ಜನಸಾಮಾನ್ಯರ ನಡುವೆ ಉಳಿದುಕೊಂಡು ಬಂದಿವೆ. ಈ ಜನಸಾಮಾನ್ಯರು ಉಳಿಸಿಕೊಂಡು ಬಂದಿರುವ ಸಂಗತಿಗಳನ್ನು ಒಂದೆಡೆ ಸಂಗ್ರಹಿಸುವ ದಾಖಲಿಸುವ ಸಂಪಾದಿಸುವ ಪ್ರಕಟಿಸುವ ಕೆಲಸ ವ್ಯಾಪಕವಾಗಿ ನಡೆಯಬೇಕಾದುದು ಅವಶ್ಯವಾಗಿದೆ. ಹೀಗೆ ಮಾಡಿದರೆ ನಾವು ಶರಣರ ಬಗೆಗೆ ಬಹುಮಹತ್ವದ ಮಾಹಿತಿಗಳನ್ನು ಉಳಿಸಿಕೊಟ್ಟಂತಾಗುತ್ತದೆ. ಮುಂದಿನ ಅಧ್ಯನಕಾರರಿಗೆ ಇದರಿಂದ ಬಹಳಷ್ಟು ಪ್ರಯೋಜನವಾಗುತ್ತದೆ.

ಕನ್ನಡದಲ್ಲಿ ಇಲ್ಲಿಯವರೆಗೆ ಶರಣರ ಬಗೆಗೆ ನಡೆದಿರುವ ಅಭ್ಯಾಸಗಳನ್ನು ಗಮನಿಸಿದರೆ, ಅವೆಲ್ಲ ಹೆಚ್ಚಾಗಿ ಲಿಖಿತಮೂಲದಲ್ಲಿ ಉಳಿದುಕೊಂಡು ಬಂದಿರುವ ಸಾಹಿತ್ಯವನ್ನೇ ಅವಲಂಬಿಸಿವೆ. ಇದು ಒಂದು ದಾರಿ. ನಾವು ಈಗ ಜನಸಾಮಾನ್ಯರು ಉಳಿಸಿಕೊಂಡು ಬಂದಿರುವ ಮೌಖಿಕ ಮಾಹಿತಿ ಹಾಗೂ ಹಾಡುಗಳನ್ನು ಒಂದೆಡೆ ಸಂಗ್ರಹಿಸಿ ಕೊಟ್ಟರೆ, ಶರಣರ ಬಗೆಗಿನ ಈ ಮಾಹಿತಿಗಳು ಶರಣರ ಚಿತ್ರಗಳನ್ನು ಸೃಷ್ಟಿಸಿಕೊಳ್ಳಲು ಸಹಾಯವಾಗುತ್ತವೆ. ಮೌಖಿಕ ಮಾಹಿತಿ ಇಲ್ಲದ ಶರಣರ ಅಧ್ಯಯನಗಳು ನಮಗೀಗ ಅಪೂರ್ಣ ಎಂಬಂತೆ ಕಂಡುಬರುತ್ತಿವೆ. ಅವರ ಪೂರ್ಣ ಚಿತ್ರವೊಂದು ಮೂಡಿ ಬರಲು ಈ ಮೌಖಿಕ ಮಾಹಿತಿ ಮತ್ತು ಸಾಹಿತ್ಯಗಳ ಸಹಾಯ ನಮಗೆ ಅವಶ್ಯವಾಗಿ ಬೇಕು ಎಂಬುದನ್ನು ನಾವು ಮನಗಾಣಬೇಕಾಗಿದೆ.

'ಬಸವ ಪರಿವಾರ' ಎಂಬ ಸಂಪುಟದಲ್ಲಿ ಮುಖ್ಯವಾಗಿ ಬಸವಣ್ಣನವರ ಬಗ್ಗೆ ಇರುವ ಹಾಡುಗಳಿವೆ. ಅವುಗಳ ಜೊತೆಗೆ ಚನ್ನಬಸವಣ್ಣ, ಅಕ್ಕನಾಗಮ್ಮ, ನೀಲಾಂಬಿಕೆ ಹಾಗೂ ಒಂದಿಷ್ಟು ತಾತ್ವಿಕ ಹಾಡುಗಳನ್ನು ಕೊಡಲಾಗಿದೆ. 'ಬಸವ ಪರಿವಾರ' ಎಂದರೆ ಇಡೀ ಶರಣ ಸಮುದಾಯವೇ ಎಂದು ಅರ್ಥವಾಗುತ್ತದೆ. ಆದರೆ ಇಲ್ಲಿ ಸಂಪುಟಗಳ ಹೆಸರುಗಳು ಭಿನ್ನವಾಗಿ ತೋರಲಿ ಎಂದು ಮಾತ್ರ ಹೀಗೆ ಒಂದು ಸಂಪುಟಕ್ಕೆ **'ಬಸವ ಪರಿವಾರ'** ಎಂದು, ಇನ್ನೊಂದು ಸಂಪುಟಕ್ಕೆ **'ಶರಣ ಪರಿವಾರ'** ಎಂದು ಹೆಸರಿಸಲಾಗಿದೆ.

ಹೀಗೆ ಒಂದು ಅನುಕೂಲಕ್ಕಾಗಿ ಮಾತ್ರ ಹೆಸರುಗಳನ್ನು ಇಡಲಾಗಿದೆ, ಹಾಡುಗಳನ್ನು ಜೋಡಿಸಲಾಗಿದೆ. **'ಬಸವ ಪರಿವಾರ'** ಎಂದರೆ ಕೇವಲ ಬಸವಣ್ಣನವರ ನೇರ ಸಂಬಂಧಿಕರಿಗೆ ಮಾತ್ರ ಸೀಮಿತಗೊಳಿಸಲಾಗಿದೆ ಎಂಬ ಅಪಾರ್ಥ ಕಲ್ಪಿಸಬಾರದೆಂಬ ಉದ್ದೇಶದಿಂದ ಈ ಮಾತುಗಳನ್ನು ಹೇಳಬೇಕಾಯಿತು. **'ಶರಣ ಪರಿವಾರ'** ಎಂಬ ಸಂಪುಟದಲ್ಲಿ ೨೩ ಶರಣರ, ೫ ಜನ ಶಿವಶರಣೆಯರ ಹಾಡುಗಳನ್ನು ಸಂಪಾದಿಸಿ ಕೊಡಲಾಗಿದೆ.

ಶರಣರ ಬಗೆಗಿನ ಈ ಎಲ್ಲ ಹಾಡುಗಳು ವ್ಯಕ್ತಪಡಿಸುವ ಭಾವನೆಗಳನ್ನು ನಾವು ಮುಖ್ಯವಾಗಿ ಗಮನಿಸಬೇಕು. ಕಲಬುರ್ಗಿ ಮತ್ತು ಬೀದರ ಜಿಲ್ಲೆಗಳಲ್ಲಿಯಂತೂ ಶರಣರನ್ನು ನೆನೆಯದ ಸಂದರ್ಭಗಳೇ ಇಲ್ಲವೆಂದು ಹೇಳಬೇಕು. ಮದುವೆಯ ಪ್ರತಿಕಾರ್ಯಕ್ರಮದ ಹಾಡುಗಳಲ್ಲಿ, ಸೆಂಡಿಗೆ ಕಡಿಯುವ ಕಾರ್ಯಕ್ರಮದಿಂದ ಮೊದಲ್ಗೊಂಡು ಎಣ್ಣೆ ಹಚ್ಚುವ, ಐರಾಣಿ ತರುವ, ಜೀಗರನ್ನು ಕರೆಯು ಹೀಗೆ ಪ್ರತಿ ಸಂದರ್ಭದಲ್ಲೂ ಶರಣರನ್ನು ನೆನೆಯಲಾಗುತ್ತದೆ. ಯಾವುದೇ ಹಬ್ಬ ಹುಣ್ಣಿವೆ, ಉತ್ಸವ, ಜಾತ್ರೆ ಅಥವಾ ಶ್ರಮದ ಸಂದರ್ಭಗಳಿದ್ದಾಗಲೂ ಬಳಕೆಯಾಗುವ ಹಾಡುಗಳಲ್ಲಿ ಶರಣರ ಸ್ಮರಣೆ ಮೂಡಿ ಬರುತ್ತದೆ. ಈ ಭಾಗದ ಜನರ ಬದುಕಿನಲ್ಲಿ ಇಷ್ಟೊಂದು ಹಾಸುಹೊಕ್ಕಾಗಿ ಸೇರಿಕೊಂಡಿದೆ ಶರಣಸಂಸ್ಕೃತಿ. ಹೀಗಾಗಿ ಶರಣರನ್ನು ಈ ಭಾಗದ ಜನತೆಯ ಬದುಕಿನಿಂದ ಕಿತ್ತಿ ತೆಗೆಯಲು ಸಾಧ್ಯವಿಲ್ಲ. ಅದಕ್ಕಾಗಿ ಇಲ್ಲಿಯವರೆಗೆ ನಾವು ಓದಿದ್ದು ಕೃತಿಗಳಲ್ಲಿ ಮೂಡಿಬಂದ ಶರಣರ ಸ್ಮರಣೆಯನ್ನು. ಇನ್ನು ಮುಂದೆ ಬದುಕಿನಲ್ಲಿ ಬೆರೆತುಕೊಂಡ ಶರಣರ ಸಂಗತಿಗಳನ್ನು ಗಮನಿಸುವುದು ಅವಶ್ಯವಾಗಿದೆ. ಅದನ್ನು ಈ ಸಂಪುಟಗಳು ಒದಗಿಸಿ ಕೊಡುತ್ತವೆ.

ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬೇಕು; ೧೨ನೇ ಶತಮಾನದಿಂದಲೂ ಚನ್ನಬಸವಣ್ಣನವರ ಹುಟ್ಟಿನ ಬಗೆಗೆ ಜನಮಾನಸದಲ್ಲಿ ಒಂದು ಬಗೆಯ ಕಳವಳದ ಭಾವನೆ ಉಳಿದುಕೊಂಡು ಬಂದಿರುವುದು ಸಹಜವಾಗಿ ಎದ್ದುಕಾಣುತ್ತದೆ. ಇದು ಚೆನ್ನಬಸವಣ್ಣನವರಿಗಿಂತ ಅವರ ತಾಯಿ ಅಕ್ಕನಾಗಮ್ಮನವರು ಅನುಭವಿಸಿದ ಯಾತನೆಯ ಬಗ್ಗೆ ಜನ ತೋರುವ ಅನುಕಂಪ ಮತ್ತು ಆದರದ ದ್ಯೋತಕವೇನೋ ಎನಿಸುವಂತಿದೆ.

ಅಕ್ಕನಾಗಮ್ಮನ ಬಸುರಿನ ಸಂಗತಿ ಇಷ್ಟುವರ್ಷಗಳವರೆಗೆ ಉಳಿದುಕೊಂಡು ಬಂದಿರಲು ಅವಳ ಪ್ರಾಥಸ್ಮರಣೀಯ ಪವಿತ್ರವ್ಯಕ್ತಿತ್ವವೇ ಕಾರಣವೆಂದು ಹೇಳಬೇಕು. ಅವಳ ಈ ಬಗೆಗಿನ ವೃತ್ತಾಂತದಲ್ಲಿ ಎರಡು ಧಾರೆಗಳಿವೆ. ಒಂದು ಕಲ್ಯಾಣದಲ್ಲಿ ಅಕ್ಕನಾಗಮ್ಮನ ಬಸುರಿನ ಪ್ರಸಂಗ ನಡೆಯಿತು ಎಂಬುದು, ಇನ್ನೊಂದು ಬಸವಣ್ಣ ಮತ್ತು ಅಕ್ಕನಾಗಮ್ಮ ಕಲ್ಯಾಣಕ್ಕೆ ಬರುವ ಪೂರ್ವದಲ್ಲಿಯೇ ಈ ಘಟನೆ ನಡೆದಿದೆ ಎಂಬಂತೆ ಒರೆಯುವ ಸಂಗತಿ. ಬಸವಣ್ಣನವರು ಕಲ್ಯಾಣಕ್ಕೆ ಬಂದ ನಂತರ ಚನ್ನಬಸಣ್ಣನವರ ಜನನವಾಯಿತೆಂಬುದು ನಂಬಲು ಅಸಾಧ್ಯವಾಗಿದೆ. ಏಕೆಂದರೆ ಅನುಭವ ಮಂಟಪದಲ್ಲಿ ಚನ್ನಬಸವಣ್ಣನವರು ವಹಿಸಿದ ಕಾರ್ಯ, ಅವರು ಬರೆದ

ಧಾರ್ಮಿಕ-ತಾತ್ವಿಕ ವಚನಗಳನ್ನು ಗಮನಿಸಿದರೆ, ಚನ್ನಬಸವಣ್ಣನವರ ಜನನ ಬಸವಣ್ಣನವರು ಕಲ್ಯಾಣಕ್ಕೆ ಬರುವ ಪೂರ್ವದಲ್ಲಿಯೇ ಆಗಿದೆ ಎಂಬುದು ಖಂಡಿತವೆನಿಸುತ್ತದೆ.

ಕಲ್ಯಾಣದಲ್ಲಿ ಬಸವಣ್ಣನವರಿಗೆ ಒಂದು ಶಕ್ತಿಯಾಗಿ ಕೆಲಸ ಮಾಡಿದವರು ಚನ್ನಬಸವಣ್ಣನವರು. ಹೀಗಾಗಿ ಕಲ್ಯಾಣಕ್ಕೆ ಬರುವಾಗಲೇ ಚನ್ನಬಸವಣ್ಣನವರಿಗೆ ಕನಿಷ್ಠ ಬಾಲ್ಯಾವಸ್ಥೆ ಇರಬೇಕು. ಬಸವಣ್ಣನವರು ಇನ್ನೂ ಕೂಡಲಸಂಗಮದಲ್ಲಿ ಇರುವಾಗಲೇ ಚನ್ನಬಸವಣ್ಣನವರ ಜನನವಾಗಿರಬೇಕೆಂದು ತೋರುತ್ತದೆ. ಅಕ್ಕನಾಗಮ್ಮನ ಬಾಲ್ಯವಿವಾಹ, ಆಕೆ ತನ್ನ ಪತಿಯೊಂದಿಗೆ ಬಾಳಿದ ಸಂಗತಿಯನ್ನು ಒರೆಯುವ ಒಂದು ಅಪರೂಪದ ಹಾಡು ಕಲಬುರ್ಗಿ ಜಿಲ್ಲೆಯಲ್ಲಿ ಪ್ರಚಾರದಲ್ಲಿದೆ. ಕಲ್ಯಾಣದಲ್ಲಿ ಚನ್ನಬಸವಣ್ಣನವರ ಜನನವಾಯಿತೆಂದು ಹೇಳುವ ಪ್ರಸಂಗ ಬಹುಶಃ ಪುರಾಣಕಾರರ ಸೃಷ್ಟಿಯಾಗಿದೆ. ನಂತರದಲ್ಲಿ ಈ ಘಟನೆಯೊಂದಿಗೆ ಕಲ್ಯಾಣದ ತಳುಕು ಹಾಕಿ, ಶರಣರಿಗೆ ಕೊಂಡೆ ಮಂಚಣ್ಣನಂಥವರು ಕಾಡುವ ಪರಿ, ಬಿಜ್ಜಳ ಇಂತಹ ಜನರ ಮಾತಿಗೆ ಕಿವಿಗೊಡುವ ವ್ಯಕ್ತಿತ್ವದ ಅರಸನಾಗಿದ್ದನೆಂಬ ಭಾವನೆ ಹುಟ್ಟಿಸಿ, ಆ ಮೂಲಕ ಜನರಲ್ಲಿ ಶರಣರ ಬಗೆಗೆ ಒಂದು ಬಗೆಯ ಗೌರವದ ಭಾವನೆ ಮೂಡಿಸುವ ಮನಸ್ಸು ಇಲ್ಲಿ ಕಾಣುತ್ತದೆ. ಹೀಗಾಗಿ ಪುರಾಣಕಾರರ ಕಲ್ಯಾಣದ ಸೇರ್ಪಡೆಯ ಸಂಗತಿಯ ಹಿಂದೆ ಇರುವ ಭಾವನೆಯನ್ನು ಗ್ರಹಿಸಿದರೆ, ಅದೊಂದು ಶರಣರ ಬಗೆಗೆ ಇಟ್ಟುಕೊಂಡು ಬಂದಿರುವ ಗೌರವದ ಭಾವನೆಯ ಕಾವ್ಯವಾಗಿ ಗ್ರಹಿಸಬೇಕೆ ಹೊರತು ಸತ್ಯಸಂಗತಿಯನ್ನಾಗಿ ಅಲ್ಲ.

ಬಸವಣ್ಣನವರನ್ನು ಪರೀಕ್ಷಿಸುವ ಅಲ್ಲಮನ ಪ್ರಸಂಗವೊಂದು ಮಂಟೇಸ್ವಾಮಿ ಕಾವ್ಯದಲ್ಲಿ ಸೇರಿಕೊಂಡಿದೆ. 'ಕಲ್ಯಾಣದ ಪ್ರಸಂಗ' ವೆಂದೇ ಪ್ರಸಿದ್ಧಿಯಾಗಿರುವ ಅದು, ಬಹುಶಃ ಕಲ್ಯಾಣದ ಬಸವಣ್ಣನವರನ್ನು ಸ್ಮರಿಸಿ, ಕಾವ್ಯ ಒರೆಯುವ ರೀತಿಯಲ್ಲಿರಬೇಕೆಂದು ತೋರುತ್ತದೆ. ಅದು ಖಂಡಿತ ಕೊಡೆಕಲ್ಲ ಬಸವಣ್ಣನವರಿಗೆ ಸಂಬಂಧಿಸಿದ ಸಂಗತಿಯಲ್ಲ. ಇದನ್ನು ಹೇಳುವ ಉದ್ದೇಶದಿಂದಲೇ 'ಬಸವ ಪರಿವಾರ' ಸಂಪುಟದಲ್ಲಿ ಮಂಟೇಸ್ವಾಮಿ ಕಾವ್ಯದಿಂದ ಈ ಅಧ್ಯಾಯವನ್ನು ಆರಿಸಿಕೊಂಡು ಹಾಕಲಾಗಿದೆ. ಈ ಪ್ರಸಂಗವನ್ನು ಬಿತ್ತರಿಸುವ ಹಾಡುಗಳು ಜನಪದದಲ್ಲಿ ಬೇಕಾದಷ್ಟು ದೊರೆಯುತ್ತವೆ. ಇದನ್ನು ಗಮನಿಸಬೇಕು.

ಉಳಿದಂತೆ ಇಲ್ಲಿಯ ಹಾಡುಗಳನ್ನೇ ಪ್ರಮುಖವಾಗಿ ಗಮನಿಸಿದರೆ ಬಸವಣ್ಣನವರಾದಿಯಾಗಿ ಶರಣರ ಬಗೆಗೆ ಜನರ ಭಾವನೆ ಏನು ಎಂಬುದು ನಮಗೆ ಗೊತ್ತಾಗುತ್ತದೆ. ಮತ್ತು ಅನೇಕ ಹೊಸ ಹೊಸ ಸಂಗತಿಗಳು ಇಲ್ಲಿ ದೊರೆಯುತ್ತವೆ.

ಎಲ್ಲ ಸಮುದಾಯಗಳ ನಡುವೆ ನಮಗೆ ಹೆಚ್ಚು ಹಾಡುಗಳು ಇರುವುದು ಕಂಡುಬಂದುದೆಂದರೆ ಬಸವಣ್ಣ ಹಾಗೂ ಅಕ್ಕಮಹಾದೇವಿ ಅವರವು. ಇವರನ್ನು ನೆನೆಯುವಾಗ, ಇವರ ಚರಿತ್ರೆಯನ್ನು ಒರೆಯುವಾಗ ಈ ಹೆಸರುಗಳ ಹಿಂದೆ ಇಡೀ ಶರಣ ಸಮುದಾಯವೇ ಕಾಣುವ ಭಾವನೆ ಸಾಮಾನ್ಯವಾಗಿ ಎಲ್ಲ ಕಡೆ ಕಂಡುಬರುತ್ತದೆ. ಉಳಿದ ಶರಣರ ಹಾಡುಗಳು ವಿರಳವಾಗಿ ದೊರೆಯುತ್ತವೆ. ವಿಶೇಷವಾಗಿ ಆಯಾ

ಶರಣರ ಸ್ಮಾರಕಗಳಿರುವ ಕಡೆ ಅವರವರನ್ನು ನೆನೆಸಿಕೊಂಡು ಹಾಡುವ ಹಾಡುಗಳು ಪ್ರಚಾರದಲ್ಲಿವೆ. ಕೆಲವೊಬ್ಬ ಉತ್ತಮ ಹಾಡುಗಾರರು ಆಸ್ಥೆವಹಿಸಿ ಹೆಚ್ಚು ಜನ ಶರಣರ ಬಗೆಗೆ ಹಾಡುಗಳನ್ನು ಕಲಿತುಕೊಂಡಿರುತ್ತಾರೆ. ಆದರೆ ನಾವು ಆಯಾ ಶರಣರ ಸ್ಮಾರಕಗಳಿರುವ ಕಡೆ ಕ್ಷೇತ್ರಕಾರ್ಯ ಮಾಡಿದಾಗಲೇ ಅವರವರ ಹಾಡುಗಳು ದೊರಕಿರುವುದು ನಮ್ಮ ಅನುಭವದಿಂದ ಬಲ್ಲ ಸಂಗತಿಯಾಗಿದೆ.

ಆಯಾ ಹಾಡು ಮುಗಿದ ಕೂಡಲೇ ಕೆಳಗೆ ಬಲತುದಿಯಲ್ಲಿ ಹಾಡಿನ ಮೂಲವನ್ನು ನಮೂದಿಸಲಾಗಿದೆ. ಅಂದರೆ ಹಾಡು ಹೇಳಿದ ವಕ್ತಾರರ ಹೆಸರುಳನ್ನು, ಇಲ್ಲವೆ ಕೃತಿಯ ಹೆಸರನ್ನು ಕೊಡಲಾಗಿದೆ. ಒಂದು ಹಾಡು ಬೇರೆ ಬೇರೆ ಕಡೆ ಸಂಗ್ರಹವಾಗಿದ್ದರೆ ಆ ಹಾಡಿನ ಉತ್ತಮ ಪಾಠವನ್ನು ಆಯ್ದು ಕೊಡಲಾಗಿದೆ. ಭಿನ್ನಭಿನ್ನ ಪಾಠಗಳನ್ನು ಒಂದರೊಡನೊಂದು ಎಲ್ಲಿಯೂ ಬೆರಸಲು ಹೋಗಿಲ್ಲ. ಆದರೆ ಒಂದೇ ಹಾಡನ್ನು ಒಬ್ಬರಿಗಿಂತ ಹೆಚ್ಚು ಜನ ಹಾಡಿದ್ದರೆ, ಪ್ರತಿಯೊಬ್ಬರ ಹೆಸರಿನ ಹಿಂದೆ ವಿವರಣಾತ್ಮಕ ಚಿನ್ಹೆ (ಅಡ್ಡಗೆರೆ '–') ಕೊಡಲಾಗಿದೆ. ಉದಾಹರಣೆಗೆ:

– ಶ್ರೀಮತಿ ಶಶಿಕಲಾ ಗಿರಿ,
–ಶ್ರೀಮತಿ ಸುಮಿತ್ರಾದೇವಿ ಅಂಗಡಿ,
– ಶ್ರೀಮತಿ ಸರ್ವಮಂಗಳಾ ಜೋಗೂರ

ಆದರೆ ಜೊತೆಹಾಡುಗಾರರ ಹೆಸರನ್ನು ಕೊಡುವಾಗ ಮುಖ್ಯ ಹಾಡುಗಾರರ ನಂತರ 'ಹಾಗೂ' ಸೇರಿಸಿ ಜೊತೆಹಾಡುಗಾರರ ಹೆಸರನ್ನು ಕೊಡಲಾಗಿದೆ. ಉದಾಹರಣೆಗೆ:

–ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೆನ, ಮಹಾದೇವಿ ಕುಂಬಾರ.

–ಶ್ರೀಮತಿ ಸರ್ವಮಂಗಳಾ ಜೋಗೂರ ಹಾಗೂ
ಪಾರ್ವತಿ ಜೆಮಶೆಟ್ಟಿ.

– ಶ್ರೀಮತಿ ಪಾರ್ವತಿ ಜೆಮಶೆಟ್ಟಿ ಹಾಗೂ ಅನ್ನಪೂರ್ಣ ದೇವಣಿ,
ಸರ್ವಮಂಗಳಾ ಜೋಗೂರ.

ಕೃತಿಯ ಹೆಸರು ಕೊಡುವಾಗ ಹಿಂದೆ 'ಕೃತಿ' ಎಂದು ಬರೆದು ನಂತರ ಕೃತಿಯ ಹೆಸರನ್ನು ಕೊಡಲಾಗಿದೆ. ವಕ್ತಾರರ ವಿವರಗಳು ದೊರೆಯದಿದ್ದಲ್ಲಿ, ಅಥವಾ ನೇರವಾಗಿ ಕವಿಯಿಂದ ಸಂಗ್ರಹಗೊಂಡದ್ದು ಇದ್ದರೆ ಅಂಥಲ್ಲಿ ಕವಿಯ ಹೆಸರಿನ ಹಿಂದೆ 'ಕವಿ' ಎಂದು ಬಳಸಿ ಅವರ ಹೆಸರನ್ನು ಕೊಡಲಾಗಿದೆ. ಉದಾಹರಣೆಗೆ :

'ಕವಿ : ಸಾವಳಗಿ ಮಹಮ್ಮದಸಾಬ'.

ವಕ್ತಾರರ ಮತ್ತು ಕೃತಿಗಳ ವಿವರಣಾತ್ಮಕ ಪಟ್ಟಿ ಅನುಬಂಧ ರೂಪದಲ್ಲಿವೆ. ಅಲ್ಲಿ ೧೬೭ ವಕ್ತಾರರ ಮಾಹಿತಿ, ೪೨ ಕೃತಿಗಳ ವಿವರಗಳಿವೆ.

ಕೆಲ ಕೃತಿಗಳಲ್ಲಿ ಪ್ರಕಟಗೊಂಡ ಹಾಡುಗಳು ನೇರವಾಗಿ ವಕ್ತಾರರಿಂದ ಸಂಗ್ರಹಗೊಂಡಿವೆ. ಆದರೆ ಕೆಲವು ಗ್ರಾಮಾಂತರ ಪ್ರದೇಶದ ಕವಿಗಳಿಂದ ರಚಿತವಾಗಿದ್ದರೂ ಭಾಷೆ ಸ್ವಲ್ಪ ಗ್ರಾಂಥಿಕವೆನಿಸುವಂತಿವೆ. ಉದಾಹರಣೆಗೆ ದುಂದುಮೆ ಹಾಡುಗಳು. ಆದರೆ ಇವನ್ನು ಹಿಂದಿನ ವಿದ್ವಾಂಸರು ಜನಪದ ಸಾಹಿತ್ಯದ ಭಾಗವಾಗಿಯೇ ಗ್ರಹಿಸಿ ಮುದ್ರಿಸಿದ್ದಾರೆ. ನಾವು ಸಧ್ಯಕ್ಕೆ ಅವನ್ನು ಪ್ರಶ್ನೆ ಮಾಡಲು ಹೋಗಿಲ್ಲ. ಎಲ್ಲವನ್ನೂ ಒಂದೆಡೆ ನೋಡಿದಾಗ ಇಂದಿನ ವಿದ್ವಾಂಸರು ಇವನ್ನು ಹೇಗೆ ಗ್ರಹಿಸುತ್ತಾರೆಂದು ನೋಡುವ ವಿಚಾರ ನಮ್ಮದು. ಆ ಹಾಡುಗಳು ಏನಿದ್ದರೂ ಜನಪದ ಹಾಡುಗಳಿಗೆ ಸಮೀಪವಾಗಿವೆ ಎಂಬುದು ಮಾತ್ರ ಸತ್ಯ ಸಂಗತಿ. ಸಂಪಾದನೆಗೆ ಸಂಬಂಧಪಟ್ಟಂತೆ ಇಷ್ಟು ಮಾತುಗಳು ಸಾಕೆನಿಸುತ್ತವೆ. ಶರಣರನ್ನು ನೋಡುವ ದೃಷ್ಟಿಗೆ ಒಂದು ಹೊಸ ದಾರಿಯನ್ನು ಈ ಸಂಪುಟಗಳು ತೋರಿಸುತ್ತವೆ ಎಂಬ ಭರವಸೆಯ ಭಾವನೆ ಈ ಎಲ್ಲ ಪ್ರಯತ್ನದ ಹಿಂದೆ ಇದೆ.

–ಸಂಪಾದಕರು

೨೭

ಪರಿವಿಡಿ

೧. ಹೆಣ್ಣುಮಕ್ಕಳ ಹಾಡುಗಳು

*

ಕಲ್ಯಾಣ ಪುರದೊಳು ಬಸವರಾಜೇಂದ್ರನು

ಕಲ್ಯಾಣ ಪುರದೊಳು ಬಸವರಾಜೇಂದ್ರನು
ನಿಲ್ಲದೆ ಪವಾಡ ಗೆಲದಿಹನು
ಅಲ್ಲಿ ಹೊಲ್ಲದ ಜೈನರು ಇರುತಿಹರು
ಅಲ್ಲಿ ಕೊಂಡಣ್ಣ ಮಂಚಣ್ಣ ಬಲ್ಲಿದರು
ಬಸವ ವಲ್ಲಭನೆಂದು ರಾಜಗ್ಹೇಳುವರು
ಇಲ್ಲದ ಭೋದವ ಭೋದಿಸಿ ಅವರಿಗೆ
ಎಲ್ಲರು ಗರ್ವದಿಂದಲಿ ಮುರಿಯುತಲಿರ್ದರು
ಶಂಭುವೆ ಶಂಭುಲಿಂಗವೇ ॥ ೧ ॥

ಕಲ್ಯಾಣ ಪುರದೊಳು ಬಸವರಾಜೇಂದ್ರನ
ಸತ್ಯ ಬಹಳ ಪ್ರಖ್ಯಾತನೆಂಬುತಲಿ
ನಿತ್ಯ ಪುಷ್ಪದ ಮಳೆಗಳು ಗರೆಯತಲಿ
ಅಲ್ಲಿ ಮರಣವೆಂಬುದು ಅಂಜಿ ಓಡುತಲಿ
ದಿಕ್ಕು ದೇಶದ ಶರಣರು ಬರುವುತಲಿ
ಲಕ್ಷದ ಮೇಲೆ ತೊಂಭತ್ತಾರು ಸಾವಿರ
ಪ್ರಮಥ ಗಣಂಗಳು ಇರುವುತಲಿ
ಶಂಭುವೇ ಶಂಭುಲಿಂಗವೇ ॥ ೨ ।

ಶಿವಲೀಲೆ ಸಂಪತ್ತು ಕೇಳಲಾರದೆ ಭವಿ
ಕಿವಿ ಮುಚ್ಚಿಕೊಳ್ಳುತ್ತಾ ಕಿಡಿ ಕಾರುವರು
ತಮ್ಮ ಮನದನ್ನ ಸಂತಾಪ ಸೈರಿಸರು
ಇದಕೆ ಶಾಂತಿ ಯಾವುದೆಂದು ಕೇಳುವರು
ನಮ್ಮ ಜೈನ ಮತಕ್ಕೆ ನ್ಯೂನ್ಯ ಬಂತೆಂಬುವರು
ಕುಲಹೀನರೆಲ್ಲರು ಕೂಡಿಕೊಂಡು ಮಾತಾಡಿ
ಇಲ್ಲದ ಮಸಲಾತ ಮಾಡುತಲಿಹರು
ಶಂಭುವೇ ಶಂಭುಲಿಂಗವೇ ॥ ೩ ॥

ಕಂಡರಿ ಜನರೆಲ್ಲ ಬಸವನ ಮನೆಯೊಳು
ಗಂಡನಿಲ್ಲದ ಗರ್ಭಿಣಿ ಹ್ಯಾಂಗೆಂದರು
ನಮ್ಮ ಪುರದೊಳು ಇವ ಪುಂಡುಗಾರಾದಾರೊ
ಇವಗ್ಹೇಳುವ ಪಂಡಿತರಿಲ್ಲಾದರು
ಹೋಗಿ ಅರಸು ಬಿಜ್ಜಳರಾಯಗ ಹೇಳಿದರು
ಮಂದಮತಿ – ಅರಸು ಮುಂದಿನ ಕಾಲ್ಗತಿ ತಿಳಿಯದೆ
ಬಸವನ ಸಭೆಗೆ ಕರೆಸೆಂದರು
ಶಂಭುವೇ ಶಂಭುಲಿಂಗವೇ ॥ ೪ ॥

ಅರಸು ಬಿಜ್ಜಳರಾಯ ಶಿರವ ಕುತ್ತಿಗೆ ಬಿಗದು
ಹಣಿಯ ಗಂಟಿಕ್ಕಿ ಮಾತನಾಡಿದನು
ನಿಮ್ಮ ನೀತಿ ದಾವದೆಂದು ಕೇಳಿದನು
ಗಂಡನಿಲ್ಲದೆ ಗರ್ಭಿಣಿ ಹ್ಯಾಂಗೆಂದನು
ಅರಸು ಬಿಜ್ಜಳರಾಯ ಅರಿಯನು ಈ ಮಾತು
ಅಕ್ಕನಾಗಮ್ಮನ ಸಭೆಗೆ ಕರೆಸೆಂದನು
ಶಂಭುವೇ ಶಂಭುಲಿಂಗವೇ ॥ ೫ ॥

ದಾಸಿಯರ ಕೊಟ್ಟು ಕರೆಯಲಿಕ್ಕೆ ಕಳಿಸ್ಯಾನು
ಭಾಷೆ ಪಾಲಿಪ ಅಕ್ಕನಾಗಮ್ಮನ । ಅರಮನೆಯೊಳು
ಪೊಕ್ಕು ಕೇಳಿದಳು । ಅಕ್ಕ ನೀಲಮ್ಮನ
ಸಭೆಗೆ ನೆನೆಸುತ್ತ ಬಂದಾಳು ಶಂಕರನ
ಅಲ್ಲಿ ಬಂದು ಕಂಡಾಳು ಬಸವರಾಜೇಂದ್ರನ
ಕುಂತಿರುವ ಜನರೆಲ್ಲ ಚಿತ್ತಿಟ್ಟು ಕೇಳಿರಿ
ಹೊಟ್ಟೆಯೊಳಗಿನ ಶಿಸುವಿನ ನುಡಿಸುವೆನೆಂದ
ಶಂಭುವೇ ಶಂಭುಲಿಂಗವೇ ॥ ೬ ॥

ಬಸವನ ಮಾತಿಗೆ ಹಾಸ್ಯ ಮಾಡುತಲಿಹರು
ಕುಂತಿರುವ ಜನರೆಲ್ಲರ ಸಭೆಯೊಳಗೆ । ಬಸವ
ಹುಸಿಯ ಬೀಳುವನೆಂದು ಪಣದೊಳಗೆ ।
ನಮ್ಮ ಪಂಥ ಗೆದಿಯುವುದು ಈ ಸಭೆಯೊಳಗೆ
ಮುಂದಿನ ಕಾಲ್ಗತಿ ತಿಳಿಯದೆ ಮೂರ್ಖರು
ತಮ್ಮೊಳು ತಾವು ಕೈ ಹೊಡೆದು ನಕ್ಕಾರೊ
ಶಂಭುವೇ ಶಂಭುಲಿಂಗವೇ ॥ ೭ ॥

ಖಿಡ ಖಿಡ ಖಿಡಲೆಂದು ಗುಡುಗುಡಿಸಿಗದ್ದರಿಸಿ
ತಡವನಿಲ್ಲದೇ ಮಾತನಾಡಿದನು । ಹುಡುಗ
ಮೂರ್ಖ ಜನರೇ ನೀವು ಕೇಳೆಂದನು
ನಿಮಗೆ ಕೆಡಗಾಲ ಬಂತೆಂದು ಮಾತನಾಡಿದನು
ನಿಮಗೆ ಕಾಡುಕೋಣನ ಸೊಕ್ಕು ಯಾಕೆಂದನು
ಜೈನ ಮತದ ಕೋಡು ಮುರಿಯಲಿಕ್ಕೆ ಬಂದೀನಿ । ಬರುವೆ
ಚನ್ನಬಸವನೆಂದು ಸಾರಿಹೇಳಿದನು
ಶಂಭುವೇ ಶಂಭುಲಿಂಗವೇ ॥ ೮ ॥

ಆರ್ಭಟ ಗರ್ಜನೆ ಕೇಳಲಾರದ ಭವಿ । ಮೂರ್ಛಾಗಿ
ಸಭೆಯೊಳು ಬೀಳುವರು
ಎದ್ದು ಒಬ್ಬರಿಗೊಬ್ಬರು ತೆಕ್ಕೆಗೊಂಬುವರು
ನಮ್ಮ ಮರಣ ಒದಗಿ ಬಂತೆಂದು ಎನ್ನುವರು
ಬಸವ ನೀನೆ ಕಾಯೆಂದು ಸಾಷ್ಟಂಗ ಹಾಕುವರು
ಇಂದಿನ ಮರಣವು ಹಿಂದೆ ಮಾಡೊ
ನಮ್ಮ ತಂದಿ ಬಸವ ಕಾಯೆಂದು ಹೇಳಿದರು
ಶಂಭುವೇ ಶಂಭುಲಿಂಗವೇ ॥ ೯ ॥

ಅರಸು ಬಿಜ್ಜಳರಾಯ ಸದರಿಗೆ ಕುಂತಾನು
ಬುದ್ಧಿತೋಚಿ ಸುಜ್ಞಾನವಂತನಾದನು
ಅಕ್ಕನಾಗಮ್ಮನ ಶರಣ ಸಂತತಿಗಳನು
ಅಗ್ನಿ ಕೆಣಕಿದವರ ಬುದ್ಧಿ ಕಡಿಮೆ ಎಂದನು
ಮಾತೆ ರಕ್ಷಿಸು ನಾನಿಮ್ಮ ಶಿಸುವೆಂದನು
ಅಕ್ಕನಾಗಮ್ಮನ ಸಂತಾನಕ್ಕೆ ಶರಣಂದಾನೊ
ಕರ ಮುಗಿದು ಜನರೆಲ್ಲ ಮರಗುತ್ತ ಜೈನರು
ಅಕ್ಕನಾಗಮ್ಮನ ಕೊಂಡಾಡುತಿಹರು
ಶಂಭುವೇ ಶಂಭುಲಿಂಗವೇ ॥ ೧೦ ॥

ಸಡಗರದಲ್ಲಿ ವಸ್ತ್ರ ಉಡುಗೊರಿ ತರಿಸ್ಯಾರೊ
ಹೆಚ್ಚಿನ ಜವಳಿಯ ತರಿಸ್ಯಾರು
ಬಿಚ್ಚಿ ಶೆಲ್ಲೆ ಕುಪ್ಪಸ ಮುಯ್ಯ ಮಾಡುವರು
ಛತ್ರಿ ಚಾಮರಗಳನೆಲ್ಲ ಹಿಡಿಸುವರು
ಭೇರಿ ತಮ್ಮಟೆ ಕಹಳೆ ಕರಣಿ ನುಡಿಸುತ ನಡಿಶ್ಯಾರೋ
ಅಕ್ಕನಾಗಮ್ಮನ ಕಳಿಸ್ಯಾರೊ ಅರಮನಿಗೆ
ಶಂಭುವೇ ಶಂಭುಲಿಂಗವೇ ॥ ೧೧ ॥

ಇತ್ತ ಪುರದೊಳು ಸತ್ಯವ ಮರೆಯುತ್ತ ಪ್ರಮಥರು
ಕುಲಕೊಬ್ಬ ಶರಣರು ಇರುತಿಹರು
ಹಡಪದ ಹಂಪಯ್ಯ ಕುಂಬಾರ ಗುಂಡಯ್ಯ
ಸುರಗೀಯ ಚೌಡಯ್ಯ ಮಡಿವಾಳ ಮಾಚಯ್ಯ
ಬೇಡರ ಕಣ್ಣಯ್ಯ ಕಿನ್ನೂರಿ ಬೊಮ್ಮಯ್ಯ
ಹುಲ್ಲು ಕೊಯ್ದು ಚರಿಹೊಸ್ತು ಮಾರುವಂಥ
ಬಲ್ಲಿದ ಪ್ರಮಥ ನುಲಿಯ ಚಂದಯ್ಯನು
ಶಂಭುವೇ ಶಂಭುಲಿಂಗವೇ ॥ ೧೨ ॥

ಅರಮನೆಯೊಳು ಶಿವಶರಣರು ಶಿವಪೂಜೆ
ಕರ್ಪೂರ ಕಡ್ಡಿ ಬತ್ತಿ ಮತ್ತು ಪುಷ್ಪಗಳು
ದೇವಗಂಟೆಯ ದಿಮಿದಿಮಿ ವಾದ್ಯಗಳು
ಅಲ್ಲಿ ಕುಂತಿರುವ ಜನರೆಲ್ಲ ಸಭೆಯೊಳು
ತುಂಬಿ ಹಿಡಿಸದೇ ನಡೆದಾರು ಸ್ವರ್ಗದೊಳು
ಬಸವನ ಮಹಿಮೆಗೆ ಧನ್ಯಧನ್ಯ ಎನ್ನುತಲಿ
ಪಾರ್ವತಿ ಶಂಕರ ತಲೆದೂಗಿದರು
ಶಂಭುವೇ ಶಂಭುಲಿಂಗವೇ ॥ ೧೩ ॥

ಬಸವನ ಭಕ್ತಿಯ ನೋಡಬೇಕೆನುತಲಿ
ಶಂಕರನು ಮರ್ತ್ಯಕ್ಕೆ ಬರಹುತಲಿ
ಕೆಟ್ಟ ಗಡಿಗೆಯ ಹಸ್ತದೊಳ್ ಹಿಡಿಯುತಲಿ
ಚರ್ಮದ ಚೀಲ ಬೆನ್ನಿಗೆ ಹಾಕುತಲಿ
ಭಂಗಿಯ ಗುಡಿ ಗುಡಿಯ ಕೈಯಲಿ ಹಿಡಿಯುತಲಿ
ಕಪಟದಿ ತನ್ನ ರೂಪವ ತೋರಿದ
ಕಲ್ಯಾಣ ಪುರದೊಳು ಬಂದು ಗಂಗಾಧರನು
ಶಂಭುವೇ ಶಂಭುಲಿಂಗವೇ ॥ ೧೪ ॥

ಪುರದೊಳು ಪೊಕ್ಕು ಜೈನರ ಕೇರಿಯೊಳು ನಿಂತು
ಬಸವನ ಮನೆದಾವದೆಂದು ಕೇಳಿದನು
ನಮ್ಮ ಬಸವನೆಂದು ಹೇಳುವನು
ನಕ್ಕು ಕೆಟ್ಟ ಜನರು ನಿಂದೆಯನಾಡುವರು
ಅವನ ಹಿಂಬಾಲ ಕರಕೊಂಡು ಹೋಗುವರು
ದೂರ ಹಿಂದಕ್ಕೆ ನಿಂತು ಬಟ್ಟು ಸನ್ನೆಯ ಮಾಡಿ
ಒಳಯಕ್ಕೆ ಅವರಿಗೆ ಹೋಗಂತಾ ಹೇಳಿದರು
ಶಂಭುವೇ ಶಂಭುಲಿಂಗವೇ ॥ ೧೫ ॥

ಬಾಗಿಲ ಕಾಯುವಂಥ ಪರಿಚಾರಕರೆಲ್ಲ
ಲಿಂಗವಿಲ್ಲದ ಭವಿ ಎಂಬುವರು
ಒಳಗಿನ ಅಪ್ಪಣೆ ನಿಮಗಿಲ್ಲ ಸಾಗೆಂದರು
ನಿಂತು ಅವರ ಕೂಡ ದಿಟ್ಟ ಮಾತನಾಡಿದರು
ಎದ್ದು ಅವನಿಗೆ ಎರಡು ಧಕ್ಕೆ ಹೊಡದಿದ್ದರು
ನನಗೆ ಹೊಡೆದ ಧಕ್ಕೆ ಬಸವನಿಗೆ ಹತ್ತಲೆಂದು
ಓಣಿಗುಂಟ ತಿರುಗಿದ ಜಂಗಮನು
ಶಂಭುವೇ ಶಂಭುಲಿಂಗವೇ ॥ ೧೬ ॥

ಸಾಲ ಶರಣರ ಪಂಕ್ತಿಯೊಳಗಿದ್ದ ಬಸವನು
ಸಾಂಬನ ಗುಪ್ತವ ತಿಳಹುತಲಿ
ಎದ್ದು ಹೊರಗಿನ ಅಗಸಿಗೆ ಬರಹುತಲಿ
ಬಂಟರೆದ್ದು ಸಾಸ್ಟಾಂಗ ಹಾಕುತಲಿ
ಸ್ವಾಮಿ ಏನು ಕಾರಣ ಹೊಂಟಿರಿ ಎಂದು ಎನ್ನುತಲಿ
ಇಲ್ಲಿಗೆ ಬಂದವರಾರೆಂದು ಕೇಳುತಲೀ
ಲಿಂಗವಿಲ್ಲದ ಭವಿ ಬಂದಿದ್ದರು ಮಹಾರಾಜ
ಹಿಂದಕ್ಕೆ ಬಡಿದಟ್ಟಿದೆವು ದೇವ ಎಂದು ಹೇಳಿದರು
ಶಂಭುವೇ ಶಂಭುಲಿಂಗವೇ ॥ ೧೭ ॥

ಬಳಿಕ ಬಸವ ದಂಡನಾಯಕ ನಡೆದಾನು
ಊರು ಕೇರಿಗಳೆಲ್ಲ ಹುಡುಕುತಲಿ
ಅಲ್ಲಿ ಜೈನರು ಬಂದು ಸಾಸ್ಟಾಂಗ ಹಾಕುತಲಿ
ಸ್ವಾಮಿ ಏನು ಕಾರಣ ಹೊರಟಿರಿ ಎಂಬುತಲಿ
ಸಾಂಬ ಕಪಟ ಕರ್ತರೆಂಬುತಲೀ
ಪುರದೊಳು ಶಂಕರ ಬಂದಿದ್ದ
ಎನ್ನ ಮೇಲೆ ಕೋಪದಿ ತಿರುಗಿಹೋದ ಕಂಡೀರೇನೆಂದ
ಶಂಭುವೇ ಶಂಭುಲಿಂಗವೇ ॥ ೧೮ ॥

ವಿಪರೀತ ಜನರೆಲ್ಲ ಕೇಳುತ ಜೈನರು
ದಂಗಾಗಿ ನಿಂತರು ಬೀದಿಯೊಳಗೆ
ಅಂತೂ ವಿಚಾರಿಸಿ ತಮ್ಮ ಕೇರಿಯೊಳು
ಹರನ ಕಂಡವರಿಲ್ಲ ನಗರದೊಳು
ಭಕ್ತಿಯಲಿ ಬಹಳ ಶ್ರೇಷ್ಠ ನಮ್ಮ ಬಸವನೆಂದು ಕೊಂಡಾಡುತಿಹರು
ಶಂಭುವೇ ಶಂಭುಲಿಂಗವೇ ॥ ೧೯ ॥

ಮರಳಿ ಬಸವ ದಂಡನಾಯಕ ನಡೆದಾನು
ಸಂದಿಗೊಂದಿಯನೆಲ್ಲ ಹುಡುಕುತಲಿ
ಸಾಲ ಪಗಡಿಯ ಬಜಾರವೆಲ್ಲ ಹುಡುಕುತಲಿ
ಅಲ್ಲಿ ಶರಣರು ಬಂದು ಸಾಸ್ಟಾಂಗ ಹಾಕುತಲೀ
ನಗರನೆಲ್ಲವ ಶೋಧ ಮಾಡುತಲಿ
ಪುರದ ಅಗಸಿಯ ಬಿಟ್ಟು ಹೊರೆಯಕ್ಕೆ ನಡೆದಾನು
ಮಾದಿಗರ ಕೇರಿಯೊಳು ಬಂದು ಗಂಗಾಧರನೂ
ಶಂಭುವೆ ಶಂಭುಲಿಂಗವೇ ॥ ೨೦ ॥

ಹರಳಯ್ಯ ಚೆನ್ನಯ್ಯ ಸದ್ಭಾವಿಗಳೆಲ್ಲ ಸಾಸ್ಟಾಂಗ ಹಾಕುತಲಿ
ಸ್ವಾಮಿ ಏನು ಕಾರಣ ಹೊಂಟೀರೆನ್ನುತಲಿ
ನಿಮ್ಮ ಕೇರಿಯೊಳು ಗುಪ್ತನೆಂಬುತಲಿ
ಸಾಂಬ ಕಪಟ ಕರ್ತನೆಂಬುತಲೀ
ಹರನ ಕಂಡೇವು ಸೈ ಸೈ ಎಂಬುತಲೀ
ಹರಳಯ್ಯ ಚನ್ನಯ್ಯ ಬಸವರಾಜೇಂದ್ರರು
ತ್ರಿಮೂರ್ತಿಗಳೆಲ್ಲ ಶೋಧ ಮಾಡುತಲೀ
ಶಂಭುವೇ ಶಂಭುಲಿಂಗವೇ ॥ ೨೧ ॥

ಮಾದಿಗರ ಕೇರಿಯೊಳು ಸಾಕ್ಷಾತ ಶಿವ ತಾನು
ರಾಜಬೀದಿಯಲಿ ಬರಹುತಲಿ
ಅಲ್ಲಿ ದೊಡ್ಡ ಚರ್ಮದ ಬಣಿಮೆಯೊಂದಿರುವುತಲಿ
ಬಸವರಾಜೇಂದ್ರನು ಬಣಮಿಯ ನೋಡುತಲಿ
ಅಲ್ಲಿ ದಿಕ್ಕು ದೇಶದ ಶರಣರು ಬರವುತಲಿ
ಬಸವನ ದೃಷ್ಟಿಗೆ ಬೀಳುತಲಿ
ಓಹೋ ಸಾಂಬ ಸದಾಶಿವನ ಚರಣಾರವಿಂದ
ಶಂಭುವೇ ಶಂಭುಲಿಂಗವೇ ॥ ೨೨ ॥

ಹರನೆನಗೊಲಿದನು ಹರುಷವಾಯಿತು
ಧೀರ ಭರದಿಂದ ಹೋಗಿ ಹಿಡಿದ ಚರಣವನು
ಅಷ್ಟಾಂಗ ಬಿನ್ನವಾಗಿ ಬಂದಾವೊ ಪಾದವನು
ಹರಹರ ಎನ್ನ ಮೇಲೆ ಕೋಪ ತಾಳಿದನು
ಹೊತ್ತಿರುವ ಶಲ್ಲೆವ ಧರಣಿಗೆ ಹಾಸಿದನು
ಸಿಂಧು ಶರೀರನೆಲ್ಲವ ತೆಗೆದು ಮೊಟ್ಟೆಯ ಕಟ್ಟಿ
ತಿರುಗಿ ಹೊಂಟಾರು ಬಸವರಾಜೇಂದ್ರರ ಮನೆಗೆ
ಶಂಭುವೇ ಶಂಭುಲಿಂಗವೇ ॥ ೨೩ ॥

ಮೊಟ್ಟೆಯ ಹೊತ್ತುಕೊಂಡು ಪುರದೊಳು ಬರುವಾಗ
ಕೆಟ್ಟ ಜೈನರು ನಿಂದೆಯನಾಡುವರು
ಮೊಟ್ಟೆಯ ಅರಸು ಸನಿಹದೊಳು ಇರುತಿಹರು
ಸದರ ಮೇಲಿಟ್ಟು ಸಾಸ್ಟಾಂಗ ಹಾಕುವರು
ಹರ ಹರ ಉಘೆ ಎಂದು ಚರಣಾರವಿಂದಕ್ಕೆ
ಶಂಭುವೇ ಶಂಭುಲಿಂಗವೇ ॥ ೨೪ ॥

ದಯನಾಗೋ ಶಂಕರ ಶಶಿಧರ ಸುಂದರ
ಕಂದನ ಕರೆದುಕೊಂಡಿರುವನೆ ಮೋಕ್ಷದಾಯಕ ಮುದ್ದು ರಾಜೇಂದ್ರನೆ
ಕೋಳೂರಕೊಡಗೂಸಿಗೊಲಿದಂಥ ಗಂಭೀರನೆ
ಸಿಂಧು ಬಲ್ಲಾಳಗೊಲಿದಂತ ಅತಿ ಸುಂದರನೆ
ನಿಮ್ಮ ಕಪಟ ಭಾರವು ಜನರಿಗೆ ತಿಳಿಯದು
ಅರಿಯದೆ ಮಾಡಿದ ಅಪರಾಧ ಕ್ಷಮಿಸಿ
ಎನ್ನಪ್ಪ ರಕ್ಷಿಸು ತ್ರಿಪುರ ಸಂಹರನೇ
ಶಂಭುವೇ ಶಂಭುಲಿಂಗವೇ ॥ ೨೫ ॥

ಬಸವನ ಭಕ್ತಿಗೆ ನಂಬಿದ ಸಾಂಬಶಿವನು
ಚಂದಾಗಿ ನಿಜರೂಪ ತೋರಿದನು
ನಿಜನಂದಿ ಗಂಗಾ ಪಾರ್ವತಿ ಸಹಿತವನು
ಕೊರಳೊಳು ರುಂಡಮಾಲೆ ನೇತ್ರಾರ್ಭಟವನು
ಬಸವಾ ಭಾಪುರೆ ಬೇಡೆಂದನು
ಶಿವಭಕ್ತ ಶರಣರೊಳು ನೀನೇ ಶಿರೋಮಣಿ
ಎನುತ ಬೇಡಿದ ವರಗಳ ಕೊಟ್ಟ ಶಂಕರನು
ಶಂಭುವೇ ಶಂಭುಲಿಂಗವೇ ॥ ೨೬ ॥

ಶಿವನು ಬಸವರಾಜರು ಕೂಡಿರುವ ವೇಳ್ಯಕ್ಕೆ
ಅತೀ ಉಲ್ಲಾಸ ಹಿಡಿಸುತಲೀ
ಸುರರು ಸಂಭ್ರಮ ಕಹಳೆಯ ನುಡಿಸುತಲಿ
ಕರಿಯ ಕಬ್ಬಿಗೆ ಜೇನು ಇಡಹುತಲಿ
ಬಿಳಿಯ ಕರ್ಪೂರ ಕಡ್ಡಿಬತ್ತಿಯ ಬೆಳಗುತಲಿ
ತ್ರಿಲೋಕದ ಕರ್ತರು ಕೊಂಡಾಡುವ ಕಾಲಕ್ಕೆ
ಸ್ವರ್ಗದವರೆಲ್ಲ ಪುಷ್ಪಗರಿದಿದ್ದಾರು
ಶಂಭುವೇ ಶಂಭುಲಿಂಗವೇ ॥ ೨೭ ॥

ಒಪ್ಪುಳ್ಳ ಧರೆಗೆ ಕಪ್ಪಡಿ ಸಂಗಮೇಶ್ವರ
ಅವತಾರ ದರಿಸಿದಂಥ ಹೀನ ಕುಲದಿ ಪರಶಿವಾಚಾರಕ್ಕೆ ನೀನೆಂದನು
ಜೈನ ಮತದ ಕೋಡನು ಮುರಿದಂತವನು
ಶಿವಭಕ್ತ ಶರಣರೊಳು ನೀನೆ ಸೈ ಸೈ
ಬೇಡಿದ ವರಗಳ ಕೊಟ್ಟ ಶಂಕರನು
ಶಂಭುವೇ ಶಂಭುಲಿಂಗವೇ ॥ ೨೮ ॥

ಕುರಗೋಡ ಸ್ಥಳದಲ್ಲಿ ಮಾಡಿದ ಕವಿತಾವು
ಅಕ್ಷರವಳಿಲ್ಲದಂತವನು ಸತ್ಯ ಶರಣರು
ಮಾಡಿದಂತಾ ನುಡಿಗಳನು ವೀರಗಂಟಿ ಮಡಿವಾಳಸ್ವಾಮಿ
ತಿಗಣಿಸಿದ ಮಲ್ಲಪ್ಪನವರ ಶಿಶುಮಗನು
ಏನು ಅರಿಯದೆ ಮಾಡಿದ್ದು ಇಲ್ಲೆನಿಸಬೇಡಿರಿ
ರುಚಿಯ ಪಂಡಿತರು
ಶಂಭುವೇ ಶಂಭುಲಿಂಗವೇ ॥ ೨೯ ॥

ಹರ ಹರ ಇಲ್ಲಿಗೆ ಶಿವ ಶಿವ ಇಲ್ಲಿಗೆ
ಜಯ ಜಯ ಮಂಗಳಾರುತಿ ಇಲ್ಲಿಗೆ
ಹರನ ಭಜಿಸುವೆ ಏಕಚಿತ್ತದಲಿ
ಜನರು ಆಡಿರುವ ಮಹಾತತ್ತ್ವ ಸಮಾಪ್ತ ಇಲ್ಲಿಗೆ
ಪುರದೊಳು ಶಂಕರ ಗವಿಸಿದ್ಧೇಶ್ವರ ತಾನು
ತೊದಲ್ನುಡಿ ಹೇಳಿದ್ದು ಆಯಿತು ಇಲ್ಲಿಗೆ
ಶಂಭುವೇ ಶಂಭುಲಿಂಗವೇ ॥ ೩೦ ॥

– ಶ್ರೀಮತಿ ಸುಮಿತ್ರಾದೇವಿ ಅಂಗಡಿ

***

ಬಾರು ಬಾರಿಗೆ ಬರ್ತಾನವ್ವ ಕಲ್ಯಾಣದವಾ

ಬಾರು ಬಾರಿಗೆ ಬರ್ತಾನವ್ವ ಕಲ್ಯಾಣದವಾ
ಅಣ್ಣ ಬಸವಣ್ಣನಂತ ಹೆಸರ ಆದಾವಾ ॥ ಪ ॥

ಶಿವವಾಹನ ನಂದಿರೂಪ ತಾಳಿ ಬಂದಾವಾ
ಲೋಕಕ್ಕಾಗಿ ದೇವರಂಗ ಇಳಿದು ಬಂದಾವಾ
ಆಸೆ ಪಾಸೆ ಎಲ್ಲಾ ತೊರೆದು ಕಾರ್ಯ ಮಾಡಿದಾವಾ
ದೀನ ಹೀನ ಜನರಿಗಾಗಿ ಚಿಂತಿ ಮಾಡಿದಾವಾ ॥ ೧ ॥

ಆನಂದರೂಪ ನಂದಿಕೇಶ್ವರನಾಗಿ ಬಂದಾವಾ
ಮಾದಲಾಂಬೆಯ ಉದರದಾಗ ಪುಟ್ಟಿ ಬಂದಾವಾ
ದಯವೆ ಧರ್ಮದ ಮೂಲವೆಂದು ಸಾರಿದಾವಾ
ಶಿವಕರುಣೆಯ ಕೂಸಾಗಿ ಇಹಕೆ ಬಂದಾವಾ ॥ ೨ ॥

ಲೋಕ ಹಿತಕೆ ಅನುಭವ ಮಂಟಪ ಕಟ್ಟಿದಾವಾ
ಸ್ವಾರ್ಥದಾಸೆ ತೊರೆದುತಾನು ಸೇವೆಗೈದಾವಾ
ಕಾಯಕ ದಾಸೋಹಕ ಎಲ್ಲರನು ಮೀರಿ ನಿಂತಾವಾ
ಲೋಕ ಸೇವೆಯೆ ತನ್ನ ಪ್ರಾಣ ಎಂದುಕೊಂಡಾವಾ ॥ ೩ ॥

ಲಿಂಗವಂತ ತತ್ತ್ವವನ್ನು ಹರಡಿದಾವಾ
ಅರ್ಪಣೆಗಾಗಿ ಮಹಾಮನೆ ರಚಿಸಿದಾವಾ
ಕಾಯಕವೆ ಕೈಲಾಸವೆಂದು ಸಾರಿದಾವಾ
ಮಮಕಾರ ಮೋಹವನ್ನು ಕಿತ್ತಿ ಹಾಕಿದಾವಾ ॥ ೪ ॥

ಜನರ ಪ್ರೀತಿ ಶ್ರದ್ಧೆಗಳನ್ನು ಪಡೆದು ಬಂದಾವಾ
ದಯೆಯ ಧರ್ಮಕ್ಕಾಗಿ ಪ್ರಾಣ ಹಿಡಿದಾವ
ಕವಿ ರವಿಯಾಗಿ ಕಲ್ಯಾಣ ಬೆಳಗಿದಾವ
ಬಸವ ರೂಪವ ತಾಳಿ ಭೂಮಿಗೆ ಬಂದಾವಾ ॥ ೫ ॥

ಮರ್ತ್ಯದಲ್ಲಿ ವೈಚಾರಿಕತೆಯ ಹುಟ್ಟಿಸಿದಾವಾ
ಕೂಡಲ ಸಂಗಯ್ಯನಲ್ಲಿ ಐಕ್ಯ ಆದಾವಾ
ಸತ್ಯ ಶರಣನನೆನೆಯುತ್ತ ಮುಕ್ತಿ ಪಡೆಯುವ
ಜಗಜ್ಯೋತಿ ಬಸವೇಶ್ವರಗ ಕೈ ಮುಗಿಯುವಾ ॥ ೬ ॥

– ಶ್ರೀಮತಿ ಸುಮಿತ್ರಾದೇವಿ ಅಂಗಡಿ

***

ಬಸವ ನಿನ್ನಯ ಮಹಿಮೆ ಉಸುರಲೆನ್ನಳವಲ್ಲ

ಬಸವ ನಿನ್ನಯ ಮಹಿಮೆ । ಉಸುರಲೆನ್ನಳವಲ್ಲ ।
ಪಶುಪತಿಯೆ ತಾನೆಬಲ್ಲ । ಗುರುವೆ ಸಿದ್ಧಲಿಂಗ ॥ ಪ ॥

ಬಸವ ಭಾಗ್ಯದ ನಿಧಿಯೆ । ಬಸವ ಪರುಷದ ಖಣಿಯೆ
ಬಸವ ಚಿಂತಾಮಣಿಯೆ । ಎನ್ನ ಧಣಿಯೆ ॥ ಅ.ಪ ॥

ಬಸವಯ್ಯ ನಿಮ್ಮಿಂದ ಬದುಕಿದೆನು ಬಾಳಿದೆನು
ಪಶುಪತಿಯ ಪಾದವನು ಕಂಡೆ ದೇವಾ
ನೀ ಮಾಡಿದ ಉಪಕಾರ ನಾನೆಷ್ಟು ಪೇಳಲಿ
ತಾನೆ ಬಲ್ಲ ಗುರುವೆ ಸಿದ್ಧಲಿಂಗ ॥ ೧ ॥

ನಿಮ್ಮ ಪಾದವ ಸೋಂಕಿ ಬ್ರಹ್ಮಲಿಖಿ ಅಳಕಿತ್ತು
ಹಮ್ಮು ಬಿಟ್ಟೋಡಿತು ನಿಮ್ಮ ಕಂಡು
ಗುರುಲಿಂಗ ಜಂಗಮದ ವರಭಕ್ತಿ ತಿಳಿಸಿದಿರಿ
ಪದವಿತ್ತು ನೀವೆನ್ನ ಪ್ರಾಣವಾಗಿ ॥ ೨ ॥

ಪರಿಪರಿಯ ವಚನದಲಿ ಪರಮಾಮೃತವ ತುಂಬಿ
ಪರಿಣಾಮವ ತಿಳಿಸಿದಿರಿ ಮನಸ್ಸಿನಲ್ಲಿ
ಎನ್ನವನು ಇವನೆಂದು ಮನ್ನಿಸಿ ಕರೆದವಗೆ
ಚೆನ್ನಾಗಿ ಪೇಳಿದಿರಿ ಗುರುಸ್ವಾಮಿ ॥ ೩ ॥

ಎತ್ತ ಹೋದರೂ ಬೆನ್ನು ಹತ್ತಿ ಬರುವೆನು ಗುರುವೇ
ನಿತ್ಯ ನಿತ್ಯ ಶಿಕ್ಷಾ ಮಾಡುಕಂಡ್ಯಾ
ಚಿತ್ತವಲ್ಲಭ ಗುರುವೆ ಸತ್ಯ ಶಿವಶರಣೆಗೆ
ಒತ್ತೊತ್ತಿ ಕರೆದೆನ್ನ ಒಪ್ಪಿಸಯ್ಯಾ ॥ ೪ ॥

ಸಿದ್ಧನಾ ಕರುಣದಲಿ ಬುದ್ಧಿಯನು ಕಲಿಸಿದಿರಿ
ಶುದ್ಧ ಶಿವಾಚಾರದ ಮಾರ್ಗಮಿಡಿದು
ಗುದ್ದ್ಯಾಟವ್ಯಾತಕ್ಕೆ ಗುರುಪಾದ ದೊರಕುವದಕ್ಕೆ
ಮಧ್ಯಾಹ್ನ ಬಿಸಿಲಂತೆ ಭೋಗವೆಲ್ಲ ॥ ೫ ॥

ಸಿದ್ಧನ ನಾಮವ ಜಪಿಸಿ ಗೆದ್ದೆನು ಭವದುಃಖ
ಬುದ್ಧಿವಂತರು ನೀವು ಕೇಳಿರಣ್ಣ
ಸಿದ್ಧ ಬಸವನ ಪ್ರಾಣ ಇದ್ದದ್ದು ಕಲ್ಯಾಣ
ಮುಗ್ಧ ಬಸವನ ಚರಣ ಎನ್ನ ಹರಣ ॥ ೬ ॥

ಆರು ಎನಗೊಂಡು ಕೇಳಿದರೆ
ಮಾರ ಹರ ಶಿವಶರಣರ ಮನೆಯ ಮಗನಾದೆ ನಾನು
ನಮ್ಮಪ್ಪ ಬಸವಣ್ಣ ನಮ್ಮವ್ವ ನೀಲಮ್ಮ
ನಮ್ಮ ಬಂಧುಬಳಗ ಶಿವಶರಣರು ॥ ೭ ॥

ನಮ್ಮಪ್ಪ ಬಸವಣ್ಣ ನಮ್ಮವ್ವ ನೀಲಮ್ಮ
ನಮ್ಮಯ್ಯ ಪ್ರಭುರಾಯ ಚನ್ನಬಸವರಾಯ
ಇನ್ನುಳಿದ ಶಿವಶರಣರ ಪಾದಕ್ಕೆ ನಮೋ ಎಂದು
ಧನ್ಯನಾದೆನು ಗುರುವೆ ಯೋಗಿನಾಥ ॥ ೮ ॥

ನಮ್ಮವರು ಕಳುಹಿದರು ನಾ ಬಂದೆ ಮರ್ತ್ಯಕ್ಕೆ
ಹಿಂದೆ ಮಾಡಿದ ಸಾಲ ಕೊಡುವುದಕ್ಕೆ
ತಿಂದ ರೊಕ್ಕದ ಸಾಲ ತಿದ್ದಿ ಋಣಗಳಿದೆ ನಾ
ನಾ ಬಂದೆ ನೋಡಪ್ಪ ಗುರುವಿನ ಬಳಿಗೆ ॥ ೯ ॥

ಸಾಕು ಲೋಕದ ಭೋಗ ಸಾಕು ದುಷ್ಟರ ಸಂಗ
ಸಾಕು ಹುಟ್ಟುವುದು ಭಲೆ ಉಂಡೆ ದೇವಾ
ಲೋಕ ರಕ್ಷಿಪನಾದ ಗುರುಶಂಭುಲಿಂಗನ
ದಯವಿರಲಿ ನಮಗೇಕೆ ಹಲವು ಚಿಂತೆಗಳು ಮನಕೆ ॥ ೧೦ ॥

– ಶ್ರೀಮತಿ ಸುಮಿತ್ರಾದೇವಿ ಅಂಗಡಿ

***

ಏನೇನು ಮಾಡಿಬಂದಿ ಬಸವರಾಜಾ ನೀನು

ಏನೇನು ಮಾಡಿಬಂದಿ ಬಸವರಾಜಾ ನೀನು
ಜ್ಞಾನ ಉಳ್ಳಂಥ ನಂದಿ । ಏನೇನು ಮಾಡಿ ಬಂದಿ ॥ ಪ ॥

ಆನೆಯ ಹೊಟ್ಟೆಯ ಸೀಳಿ ಹರನನ್ನು ಬಿಡಿಸಿ ತಂದಿ
ಏನೇನು ಮಾಡಿ ಬಂದಿ ಬಸವರಾಜಾ ನೀನು ॥ ೧ ॥

ಅನಿಮಿಷ ದೇವರಿಗೆ ಘನಲಿಂಗವನು ಕೊಟ್ಟಿ
ಅನುಮೇಲೆ ತನುಜಯನಾಗಿ ಬಂದೆ ನೀನು
ಏನೇನು ಮಾಡಿ ಬಂದಿ ॥ ೨ ॥

ಗಾಯತ್ರಿ ಪ್ರಣವ ಪಡದಿ ಮುದದಿಂದ ತಾಯಿತಂದಿ
ಮುತ್ತೈದೇರಿಗಿ ಉಣಿಸಿದಂಥ ಕಂದ ನೀನು
ಏನೇನು ಮಾಡಿ ಬಂದೆ ॥ ೩ ॥

ಸೂರ್ಯನಿಗೆ ಆಣೆಯನಿಟ್ಟಿ ಹರಲಿಖಿತವನೋದಿ ಬಿಟ್ಟಿ
ದೊರೆಯ ಬಿಜ್ಜಳರಾಯನಿಗೆ ವರಹನ್ನು ತಗೆದುಕೊಟ್ಟಿ ನೀ
ಏನೇನು ಮಾಡಿ ಬಂದಿ ॥ ೪ ॥

ಹಸ್ತದೊಳ್ ಬರೆದೆ ಗುರುವೆ ಶ್ರೀ ಭಕ್ತಿ ಬಸವ ನೀನು
ಏನೇನು ಮಾಡಿ ಬಂದಿ ಬಸವರಾಜ ನೀನು
ಏನೇನು ಮಾಡಿ ಬಂದಿ ॥ ೫ ॥

– ಶ್ರೀಮತಿ ಸುಮಿತ್ರಾದೇವಿ ಅಂಗಡಿ

***

ಬಸವಾ ಮುಕ್ತಿದಾತಾ ಮಾದರಸ ಸುತ

ಬಸವಾ ಮುಕ್ತಿದಾತಾ ಮಾದರಸ ಸುತ ॥ ಪ ॥

ಸತ್ಯ ಧರ್ಮದಿ ಕೀರ್ತಿ ಹೊಂದಿದ ಮಾದಲಾಂಬೆಯ ಕುವರನೆ
ನಿತ್ಯ ನಿಯಮದಿ ನಮಿಪೆವು ನೀಲಲೋಚನೆ ಒಡೆಯನೆ
ಸತ್ಯ ಸಂಧ ನುತ ಮಾದರಸ ಸುತ ॥ ೧ ॥

ಸತ್ಯ (ದಯಾ) ಧರ್ಮದ ತಿರುಳನೆಲ್ಲವ ತಿಳಿಯ ಕನ್ನಡ ನುಡಿಯೊಳು
ಮೋದದಿಂದಲಿ ತಿಳಿಸಿ ಜನರೊಳು ಬಸವ ಪಡೆದಿಹ ಜಗದೊಳು
ಜಗದೋದ್ಧಾರಕನೆ ಮಾದರಸ ಸುತ ॥ ೨ ॥

ಲಿಂಗಪೂಜೆಯ ಮಹಿಮೆಯೆಲ್ಲವ ಭಕ್ತಜನರಿಗೆ ತಿಳುಹಿಸಿ
ಗುರುಜಂಗಮದಲಿ ಭಕ್ತಿ ನಿಷ್ಠೆಯ ನಿಡಲು ಅರುಹಿಸಿ
ಕರುಣಾ ಸಾಗರನೆ ಮಾದರಸ ಸುತ ॥ ೩ ॥

ಮಂಗಲಾತ್ಮಕನೆಂದು ಜಗದಲಿ ಕೀರ್ತಿ ಪಡೆದಿಹ ಬಸವನೆ
ಸಂಗಮೇಶ್ವರನಲ್ಲಿ ಹರುಷದಿ ಒಂದುಗೂಡಿದ ಶರಣನೆ
ನಿತ್ಯ ನಿರ್ಮಲನೆ ಮಾದರಸ ಸುತ ॥ ೪ ॥

ನಾಲ್ದೆಸೆಗೆ ಭಕ್ತಿ ಬೀಜವ ಬಿತ್ತಿದ ಶರಣ ಬಸವನೆ
ಜಡ ಭೂಮಿಗೆ ಶರಣ ಸಂಸ್ಕಾರವ ನೀಡಿದ ಭಾಗ್ಯನೆ
ದ್ವಿತಿಯ ಶಂಭುವೆ ನೀ ಮಾದರಸ ಸುತ ॥ ೫ ॥

ಸತ್ಯ ದಯೆಗಳ ಬ್ರಹ್ಮಚರ್ಯವ ಸಕಲ ಶರಣರಲಿ ತುಂಬಿದವನೆ
ನಿತ್ಯ ಮುಕ್ತಿಯ ಮಾರ್ಗವ ತೋರಿದ ಮಹಾಮಾನವನೆ
ನೀತಿ ಕೋವಿದನೆ ಮಾದರಸ ಸುತ ॥ ೬ ॥

ಜಾತಿಭೇದವನೆಲ್ಲ ತೊಡೆದು ನೀತಿ ಪಥವನು ಪಿಡಿದು
ಧರೆಯ ಮೇಲೆ ಲಿಂಗವಂತ ಧರ್ಮವ ಪರಿಪಾಲಿಸಿ
ಲಿಂಗಾಯತ ಧರ್ಮೋದ್ಧಾರಕನೆ ಮಾದರಸ ಸುತ ॥ ೭ ॥

ವರ್ಣ ಸಂಕರವ ಮಾಡಿ ಲಿಂಗದೀಕ್ಷೆಯಿಂ ಲಿಂಗವಂತರ ಮಾಡಿ
ಶರಣ ಸಂಕುಲವ ಸಲುಹಿ ಏಕದೇವ ನಿಷ್ಠೆಯ ಬೆಳೆಸಿ
ಶರಣರೆಲ್ಲರ ರಕ್ಷಿಸಿದವನೆ ಮಾದರಸ ಸುತ ॥ ೮ ॥

ಶರಣು ಬಂದೆವು ನಿನ್ನ ಚರಣಕೆ ಜಗದ ಗುರು ಬಸವೇಶ
ಕರುಣೆಯಿಂ ಪೊರೆಯೊ ಎಮ್ಮನು ಶರಣ ಪ್ರೇಮಿ ಬಸವೇಶ
ಭಕ್ತಿಯೋಗಿಯೆ ನೀ ಮಾದರಸ ಸಸುತ ॥ ೯ ॥

– ಶ್ರೀಮತಿ ಸುಮಿತ್ರಾದೇವಿ ಅಂಗಡಿ

***

ಮನಶಾಂತಿ ಭವದುಃಖ ಮುಕ್ತಿ

ಮನಶಾಂತಿ ಭವದುಃಖ ಮುಕ್ತಿ
ನಿತ್ಯಾನಂದಮತಿ ವಚನ ಪೇಳ್ಕೆ ಬಸವೇಶ ॥ ಪ ॥

ಧರ್ಮದ ಮೂಲ ದಯವೆ ಶೀಲ
ಸಮತಾ ಸಕಲ ಬೋಧಿಸಿ
ಕರ್ಮ ಖಂಡನ ಆತ್ಮಜ್ಞಾನ
ಅಷ್ಟಾವರಣ ಬೋಧಿಸಿ
ಪ್ರಭು ಅಷ್ಟಾವರಣ ಬೋಧಿಸಿ
ಜನಪ್ರೀತಿ ಜೀವನ ನೀತಿ
ನಿತ್ಯಾನಂದಮತಿ
ವಚನ ಪೇಳ್ಕೆ ಬಸವೇಶ ॥ ೧ ॥

ಜಾತಿವರ್ಣ ದೂಡಿ ಕಲ್ಪನ
ಮಾನವತಾ ಮಹಾ ಮಂತ್ರ
ಕ್ರಾಂತಿ ಕಲ್ಯಾಣ ಶರಣರ ಸ್ಥಾನ
ಅನುಭವ ಮಂಟಪ ಕ್ಷೇತ್ರ

ಪ್ರಭು ಅನುಭವ ಮಂಟಪ ಕ್ಷೇತ್ರ
ಘನ ಕೀರ್ತಿ ಜೀವನೀತಿ
ನಿತ್ಯಾನಂದ ಮತಿ
ವಚನ ಪೇಳ್ಬೆ ಬಸವೇಶ ॥ ೨ ॥

ಕಾಯಕ ತಪವು ಭಕ್ತಿ ಜಪವು
ಕೈಲಾಸ ನಿಜಭಾವ
ಕಾಯದ ಮಾಯ ಅಳಿಸೊ ಅಯ್ಯಾ
ತಿಳಿಸಿ ತತ್ತ್ವವು ದೇವಾ
ಪ್ರಭು ತಿಳಿಸಿ ತತ್ತ್ವವು ದೇವಾ
ಎನ್ನ ಶಕ್ತಿ ಮಂಗಲ ಮುಕ್ತಿ
ಚೆನ್ನ ಕವಿ ಸುಮತಿ
ನಿನ್ನ ಬೇಡುವೆ ಬಸವೇಶ
ಚರಣ ಬೇಡುವೆ ಬಸವೇಶ ॥ ೩ ॥

– ಶ್ರೀಮತಿ ಸುಮಿತ್ರಾದೇವಿ ಅಂಗಡಿ

***

ಕನ್ನಡ ನಾಡಿನ ಹೆಮ್ಮೆಯ ಪುರುಷ

ಕನ್ನಡ ನಾಡಿನ ಹೆಮ್ಮೆಯ ಪುರುಷ
ಜಗದ ಜ್ಯೋತಿ ಶ್ರೀ ಬಸವೇಶಾ
ಮಹಿಮಾ ಪುರುಷಾ ನಿನ ನಾಮ ಹರುಷಾ
ಜಗಜ್ಯೋತಿ ಶ್ರೀ ಬಸವೇಶಾ ॥ ಪ ॥

ಬ್ರಾಹ್ಮಣ ಕುಲದಲಿ ಜನಿಸಿದಿ ನೀ
ಉದ್ಧರಿಸಿದೆ ಲಿಂಗಾಯತ ಧರ್ಮವನು
ತಂದೆ ತಾಯಿಗಳ ಆಶೀರ್ವಾದದಿ
ಸಂಗಮ ಕೂಡಿದೆ ನೀನು
ಬಾಲ್ಯತನದಲ್ಲಿ ಭಕ್ತಿಯ ಮಾರ್ಗದಿ
ಜಯವನು ಪಡೆದಿ ನೀನು
ಪಂಡಿತರಾ ಪ್ರಿಯಾ ಆಶ್ರಯದೊಳಗೆ
ಘನತೆಯ ಪಡೆದು ಘನವಂತನಾದೆ
ಹಗಲಿರುಳೆನ್ನದೆ ಜನಕಾಗಿ ದುಡಿದೆ
ಬೋಧನೆ ಬೀರಲು ವಚನವ ಬರೆದೆ
ದಯವೆ ಧರ್ಮದ ಮೂಲವೆಂದು
ದಾರಿಯ ತೋರಿದೆ ನೀನು ॥ ೧ ॥

ನಿನ್ನಯ ಕೀರ್ತಿಯ ಆಲಿಸಿ
ಬಿಜ್ಜಳ ದೊರೆ ಬಂದನು ನಿನ್ನೆಡೆಗೆ
ತನ್ನ ರಾಜ್ಯ ಕಲ್ಯಾಣದಿ ಮಂತ್ರಿಯ
ಸ್ಥಾನವ ಕೊಡಿಸಿ ನಿನಗೆ
ಜನಕೆ ಜಾಗ್ರತೆಯ ಬೀರಿ
ಭಕ್ತಿ ಭಂಡಾರಿ ಪದವಿಯ ಪಡೆದೆ
ಶಿವನಾಮ ಜಪಿಸಿ ಭಕ್ತಿಯ ತೋರಿದೆ
ಜಾತಿಯ ಭೇದವ ಬಹುದೂರ ಹೊಡೆದೆ
ಶರಣರ ಸಂಘಕೆ ಶಾಂತಿಯ ನೀಡಿದೆ
ಕಾಯಕವೆ ಕೈಲಾಸವೆಂದು
ದಾರಿಯ ತೋರಿದೆ ನೀನು ॥ ೨ ॥

– ಶ್ರೀಮತಿ ಸುಮಿತ್ರಾದೇವಿ ಅಂಗಡಿ

***

ಬಸವನ ನಾಮ ವಸುಧಿಗೆ ಪ್ರೇಮ

ಬಸವನ ನಾಮ ವಸುಧಿಗೆ ಪ್ರೇಮ
ಹಸುನಗೆ ಧರಿಸುವ ಭಸಿತ ಹರ ನಾಮ ॥ ಪ ॥

ಜಂಗಮ ಬಂದರೆ ಬೇಡಿದ್ದು ನೀಡಿ
ಅಲ್ಲಿ ಮಂಗಲನೆಂದು ಜಯಜಯ ಪಾಡಿ
ಕಂಗಳ ಮಧ್ಯದಿ ಲಿಂಗವ ನೋಡಿ
ಅಲ್ಲಿ ಮಂಗಲವೆಂದು ಜಯ ಜಯ ಪಾಡಿ ॥ ೧ ॥

ಕಲ್ಯಾಣ ಕರ್ಮವ ಸುಟ್ಟು
ಅಲ್ಲಿ ಕಲ್ಲು ಕಣಕವ ಮಾಡಿ ಕೊಟ್ಟು
ಬಲ್ಲವರಿಗೆ ಲಿಂಗವ ಕಟ್ಟಿ
ಅಲ್ಲಮಪ್ರಭುವಿನ ಪಾದವ ಮುಟ್ಟಿ ॥ ೨ ॥

ಧರೆಯೊಳು ಮೆರೆಯುತಿಹುದು ಭೃಂಗಿಯ ನಾಮ
ಸರ್ವಗಣಂಗಳು ಅಲ್ಲಿ ಸಂಭ್ರಮದಾಗ
ಅಲ್ಲಿ ಮೆರೆಯುತ ಹೊಂಟಿತು
ನಂದಿಯ ವಾಹನ ಬಸವನ ನಾಮ ॥ ೩ ॥

– ಶ್ರೀಮತಿ ಸುಮಿತ್ರಾದೇವಿ ಅಂಗಡಿ

***

ಶರಣ ಶ್ರೀ ಬಸವೇಶ ನಿಮ್ಮಡಿಗೆ ಬಂದೆ

ಶರಣ ಶ್ರೀ ಬಸವೇಶ ನಿಮ್ಮಡಿಗೆ ಬಂದೆ
ಕರುಣಿಸಿ ಕರೆಯಯ್ಯ ನೀ ಎನ್ನ ತಂದೆ ॥ ಪ ॥

ನರ ಜನ್ಮದೊಳು ನಾ ತಿರು ತಿರುಗಿ ನೊಂದೆ
ಅರಿಯದೆ ನಿಮ್ಮನಗಲಿ ತೊಳಲಿ ಬಳಲಿ ಬೆಂದೆ
ಶರಣ ಶ್ರೀ ಬಸವೇಶ ॥ ೧ ॥

ಆವ ಬಲವು ಎನಗೊಂದಿಲ್ಲವೆಂದು
ದೇವನೆ ನಿನ ಪಾದ ಗತಿಯೆಂದು ಬಂದೆ
ಶರಣ ಶ್ರೀ ಬಸವೇಶ ॥ ೨ ॥

ಮರೆಯುತಿದೆ ಮಹ ಕಲಬುರ್ಗಿ ಪುರವೆಂದೆ
ಬೆಳಗುತಿದೆ ಜಗಜ್ಯೋತಿ ನಿಮ್ಮಿಂದ ತಂದೆ
ಶರಣಶ್ರೀ ಬಸವೇಶ ॥ ೩ ॥

– ಶ್ರೀಮತಿ ಸುಮಿತ್ರಾದೇವಿ ಅಂಗಡಿ

***

ಬಸವಾ ಬಾಬಾ ವಸುಧೆಗೆ ನಿನ್ನಯ

ಬಸವಾ ಬಾಬಾ ವಸುಧೆಗೆ ನಿನ್ನಯ
ಜಸವನು ಬೇಗನೆ ತೋರಲು ಬಾ ॥ ಪ ॥
ರಸಿಕರ ಮನಸಿಗೆ ಕುಶಲವ ಬೀರುತೆ
ಹೊಸ ರಾಜ್ಯವ ನೀನಾಳಲು ಬಾ ॥ ಅ.ಪ ॥

ಮಂತ್ರಿಯ ಕೆಲಸವ ತಂತ್ರದಿ ನಡೆಸುತ
ಜಂತ್ರವ ನೀಗಲೇ ತಿರುಗಿಸು ಬಾ
ತಂತುವ ತಗೆಯುವ ಸ್ವಂತದಿ ನೇದಿಹ
ಮಂತ್ರದ ಬಟ್ಟೆಯ ಧರಿಸಲು ಬಾ ॥ ೧ ॥

ಕನ್ನಡ ನುಡಿಯದು ಸಣ್ಣಾಗುತ್ತಿದೆ
ಚೆನ್ನಿಗ ಬಸವನೆ ಪೊರೆಯಲು ಬಾ
ಉನ್ನತ ಜನರಿಗೆ ಕನ್ನಡ ಮಂತ್ರವ
ನಿನ್ನಯ ವಚನದಿ ಪೇಳಲು ಬಾ ॥ ೨ ॥

– ಶ್ರೀಮತಿ ಸುಮಿತ್ರಾದೇವಿ ಅಂಗಡಿ

***

ಸಮತಾ ಭಾವದ ಶ್ರೀ ಬಸವೇಶನ

ಸಮತಾ ಭಾವದ ಶ್ರೀ ಬಸವೇಶನ
ಪ್ರೇಮಾದರದಿಂ ಪಾಡುತೆ ನಮಿಸುವ ॥ ಪ ॥

ಭಕ್ತಿಯ ಬೆಳಕನು ಲೋಕಕೆ ಬೀರಿ ಮುಕ್ತಿಯ ಮಾರ್ಗವ
ಮೋದದಿ ತೋರಿ ಜನಕಲ್ಯಾಣಕೆ ಪ್ರಾಣವ ನೀಡಿದ ॥ ೧ ॥

ಶಿವಾನುಭಾವದ ಸವಿಯನು ತಿಳಿಸಿ ಮೃದು ವಚನಾಮೃತ
ಪದುಳದಿ ಸುರಿಸಿ ಕೃತಿಯಿಂ ಜನತಾ ಹಿತವನು ಗೈದಿಹ ॥ ೨ ॥

ಕಾಯಕ ರೂಪದಿ ವರ ಕೈಲಾಸದ ನ್ಯಾಯಾಸನವನು ಪ್ರೇಮದಿ
ರಚಿಸಿದ ಸುಂದರ ಶರಣನ ಆನಂದದಿ ನಮಿಸುವ ॥ ೩ ॥

– ಶ್ರೀಮತಿ ಸುಮಿತ್ರಾದೇವಿ ಅಂಗಡಿ

***

ಕಲ್ಯಾಣದ ಶಿವ ಅನುಭವ ಮಂಟಪ ಸ್ಥಾಪಿಸಿ

ಕಲ್ಯಾಣದ ಶಿವ ಅನುಭವ ಮಂಟಪ ಸ್ಥಾಪಿಸಿ
ಶರಣರ ಕರೆದೆ ಅಲ್ಲಮ ಪ್ರಭು ॥ ಪ ॥

ಅಕ್ಕ ಮಾಹಾದೇವಿ ಸಿದ್ಧರಾಮ ಬಂದರು ನಿನ್ನೆಡೆಗೆ
ಲಿಂಗಾಯತ ಧರ್ಮದ ನಿಜ ತಿರುಳನು
ತಿಳಿಸಿದೆ ನೀನು ಎಲ್ಲರಿಗೂ ॥ ೧ ॥

ಸಂಸಾರ ಮೋಹವ ಬಹುದೂರ ಹೊಡದೆ
ಸಾಕಾಗಿ ಜೀವನ ಸಂಗಮ ಕೂಡಿದೆ
ಶಿವನಾಮ ನೆನೆದು ಲಿಂಗೈಕ್ಯನಾದೆ ॥ ೨ ॥

ಶರಣರ ಕಂಗಳ ಕಂಬನಿ ಕಾರಿದೆ
ಜೀವನ ಮುಳ್ಳಿನ ಹಾಸಿಗೆಯೆಂದು
ಇತಿಹಾಸದಿ ಹೆಸರಾದೆ ನೀನು ॥ ೩ ॥

– ಶ್ರೀಮತಿ ಸುಮಿತ್ರಾದೇವಿ ಅಂಗಡಿ

***

ಹೇ ನಾಡ ಪುತ್ರರೆ ಹೇ ನಾಡ ಪುತ್ರರೆ

ಹೇ ನಾಡ ಪುತ್ರರೆ ಹೇ ನಾಡ ಪುತ್ರರೆ
ಏಳಿರೀಗ ಮೊಳಗುತಿಹೆ ಬಸವ ಭಾನು ಉದಿಸುತಿದೆ
ಏಳಿರೇಳಿರೇಳಿರೇಳಿ ಹೇಡಿತನವ ತೊರೆದೀಗ ॥ ಪ ॥

ಜಾತಿಯಲೆಯ ತಿಮಿರ ತೊಡೆದು
ಸಾರ್ಥಕತೆಯ ತತ್ತ್ವ ಪಿಡಿದು
ಸಮತ ಪತಾಕೆಯ ಬಸವ ತತ್ತ್ವದೊಡನೆ ಮರೆಸುತಾ
ಕಮನೀಯ ಕಲ್ಯಾಣದಲಿ ಕನ್ನಡಾಂಬೆ ಮಡಿಲಿನಲಿ ॥ ೧ ॥

ಘಮ ಘಮಿಸಿ ಸೂಸುತಿದೆ
ಬಸವ ತತ್ತ್ವ ಪರಿಮಳವು
ನಾಮವಿದುವೆ ಪ್ರಣವವಾಗಿ ಮಾಮಿತಾರ್ಥ ಸುರತರು
ಕಾಮಮೋಹವೆಲ್ಲ ಭೂಮಿ ವಹ್ನಿಯಲಿ ಸುಟ್ಟು ॥ ೨ ॥

ನೇತ್ರವೀಗ ಶಿವಲಿಂಗವಾಗೆ
ಮನವಿದು ಮಹಾಲಿಂಗವಾಗೆ
ಭಾತೃತ್ವದ ಬೆಳೆಸ ತೆರೆದ ಹೃದಯದಲಿ ಸುರಿಸುತಾ
ಬಸವ ತತ್ತ್ವವನುಂಡು ಬಸವ ತತ್ತ್ವವ ಕೊಂಡು ॥ ೩ ॥

ಯಶದ ಜ್ಯೋತಿ ಪಸರಿಸುತ
ಕಲಶವಿಕ್ಕೆ ನಾಡಗುಡಿಗೆ
ಕಾಯಕ ತತ್ತ್ವವ ಪಿಡಿದು ಸಮೃದ್ಧಿ ಸವಿಯುತ
ಅನುಭಾವದ ಅಮರ ವಾರಿಧಿಯಲಿ ಮಿಂದು ॥ ೪ ॥

ವಿಶ್ವವೆಲ್ಲ ಒಂದೆ ಎಂದು ಅಸಮತೆಯ ಅರಿಯ ತೊಡೆದು
ವಿಶ್ವಬಂಧು ಶಿವಾಚಾರಿ ಮುನ್ನವೆ ನೀನಾಗಿ
ಸದಾಚಾರ ಸುಳಿವಿಡಿದು ತನ್ನ ಕಾಲಮೇಲೆ ನಿಂದು ॥ ೫ ॥

ಸಮೃದ್ಧಿಯ ಹರಿಸಿ ರಾಷ್ಟ್ರಮಾತೆ ನಗಿಸುತಾ
ಅಷ್ಟಾವರಣ ಅಂಗವಾಗೆ ಪಂಚಾಚಾರ ಪ್ರಾಣವಾಗೆ
ಷಟ್‌ಸ್ಥಲಾತ್ಮದ ಧ್ವಜವ ಹಾರಿಸಿ ಶರಣಧರ್ಮ ಕಹಳೆ ಧ್ವನಿಸಿ ॥ ೬ ॥

ತಮವಿಪ್ಪಲ್ಲಿ ಬರಲಿ ಬೆಳಕು ಮರವಿಪ್ಪಲ್ಲಿ ಬರಲಿ ಅರಿವು
ತನ್ನ ತಾನು ತಿಳಿದು ಭಿನ್ನವೆಲ್ಲ ಬಯಲಾಗಿ
ತನ್ನ ತಾನರಿತು ನಿಂತು ಸಚ್ಚಿದಾನಂದ ನೆಲೆಯಾಗಿ ॥ ೭ ॥

– ಶ್ರೀಮತಿ ಸುಮಿತ್ರಾದೇವಿ ಅಂಗಡಿ

***

ಬಸವ ನಿಮ್ಮ ನಾಮವು (ಸೋಬಾನೆ ಪದ)

ಬಸವ ನಿಮ್ಮ ನಾಮವು ವಸುಧಿಗೆ ಪ್ರೇಮ
ಹರ್ಷಲಿಂದೇ ನೋಡಿದರು ಮನುಜರೆಲ್ಲ ॥ ೧ ॥

ಬಸವ ನಿಮ್ಮ ಕಲ್ಯಾಣದೊಳು ಅನುಭವ ಮಂಟಪ
ಪ್ರೀತಿಲಿಂದೆ ವಚನ ನಿಮ್ಮ ಭಾವ ಶ್ರೇಷ್ಠ ॥ ೨ ॥

ಜಾತಿ ಸೂತಕ ಭೇದವೆಲ್ಲ ದೂರ ಮಾಡಿದ
ಹರುಶಲಿಂದೇ ನೋಡಿದಾರೋ ಮನುಜರೆಲ್ಲ ॥ ೩ ॥

ಊರದೊಳು ಮೂರು ಲಿಂಗನ ಗುಡಿಮುಂದ
ಏಳನೂರ ಎಪ್ಪತ ಮಂದಿ ಶರಣರೆಲ್ಲ ॥ ೪ ॥

ಪರುಷದಿಂದೇ ನಿತ್ಯ ಕಾಯಕ ನಡಸ್ಯಾರ
ಹರುಷಲಿಂದೇ ನೋಡಿದಾರೋ ಮನುಜರೆಲ್ಲ ॥ ೫ ॥

ಲಕ್ಷದ ಮ್ಯಾಗ ತೊಂಬತ್ತಾರು ಸಾವಿರ ಜಂಗಮ
ನಿತ್ಯ ನೇಮದಿಂದೆ ಭೋಜನ ತೃಪ್ತಿ ಮಾಡಿದ ॥ ೬ ॥

ಶ್ರೀಶೈಲ ಪರ್ವತ ಗಿರಿ ಮಲ್ಲಿಗಿನಾಥ
ನೋಡ್ಯಾನೆಂಬ ಆಸೆಲಿಂದೆ ಬಂದೇ ನಿತ್ಯ ॥ ೭ ॥

ಆತಮಕೋರ ಭೀಮನ ಕೊರಳ ಕೈಲಾಸ ಭಾರ
ನಿಂತ ನೋಡಿದರೆ ಕಾಣೋದಿಲ್ಲೋ ಶಿಖರ ॥ ೮ ॥

ಸಿಕರೇಶ್ವರನ ಮುಂದ ನೋಡೋ ಶಿಖರ
ಆದನವ ಮನದೊಳು ಅತೀ ಸಂತೋಷ ॥ ೯ ॥

ನಡೆದು ಹೋಗಿ ಕುಳತೇನವ್ವ ಗುಡಿದೊಳಗ
ಧೈರ್ಯಲಿಂದೇ ಧ್ಯಾನವು ಮಾಡಿ ಒಲೆದು ಲಿಂಗಕ ॥ ೧೦ ॥

ಹೇಮರಡ್ಡಿ ಸೊಸಿಯೇ ನನ್ನ ಹೆಸರು ಮಲ್ಲಮ್ಮ
ಸಿದ್ದಪುರ ನನ್ನ ಅತ್ತಿ ಮಾವನೂರಮ್ಮ ॥ ೧೧ ॥

ಭರಮರೆಡ್ಡಿ ಪತಿ ನಮ್ಮ ಆತರೆಸುರ
ಮುಕ್ತನಾಯಿತವ್ವ ಪತಿದಿಂದೇ ಶರೀರ ॥ ೧೨ ॥

ಪಾಪವೆಲ್ಲ ದೂರ ಮಾಡೋ ಪರಮೇಶ
ಕಾಯಲಿಂದೇ ಕೈಲಾಸಕ್ಕೋಯ್ಯೊ ಜಗದೀಶ ॥ ೧೩ ॥

– ಶ್ರೀಮತಿ ಸುಮಿತ್ರಾದೇವಿ ಅಂಗಡಿ

***

ಸೋಬನ ಶಿವ ಕಲ್ಯಾಣ

ಸೋಬನ ಶಿವ ಕಲ್ಯಾಣ ಯಾರ ಮಾಡ್ಯಾರೇ ಶಿವನು
ದೇವರ ಮಾಡ್ಯಾರೆ ಬಸವಣ್ಣ ಸೋಬಾನವೇ ॥ ಪ ॥

ಅಕ್ಕಿಯ ಹಸಿಗೋಳು ಎತ್ತ ಹೊಯ್ಯಲಿ ಶಿವನೆ
ಇಪ್ಪತ ಕಂಕಣದ ಪಡಸಾಲಿ ಸೋಬಾನವೇ
ಇಪ್ಪತ ಕಂಕಣದ ಪಡಸಾಲಿ ಬಾದಮಸಾಲಿ
ಜಾಗ ನೋಡಸಿ ಹೋಯ್ಯರೆಂದ ಸೋಬಾನವೇ ॥ ೧ ॥

ಗೋಧಿಯ ಹಸಿಗೋಳು ಎತ್ತ ಹೊಯ್ಯಾಲಿ ತಾಯಿ
ನಲವತ್ತ ಕಂಕಣದ ಪಡಸಾಲಿ ಸೋಬಾನವೇ
ನಲವತ್ತ ಕಂಕಣದ ಪಡಸಾಲಿ ಬಾದಮಸಾಲಿ
ಜಾಗ ನೋಡಸಿ ಹೋಯ್ಯರೆಂದ ಸೋಬಾನವೇ ॥ ೨ ॥

ಖಾರೀಕ ಹಸಿಗೋಳು ಎತ್ತ ಹೊಯ್ಯಲಿ ತಾಯಿ
ಇಪ್ಪತ ಕಂಕಣದ ಪಡಸಾಲಿ ಸೋಬಾನವೆ
ಇಪ್ಪತ ಕಂಕಣದ ಪಡಸಾಲಿ ಬಾದಮಸಾಲಿ
ತಾವ ನೋಡಸಿ ಹ್ಯೋಯ್ಯರೆಂದ ಸೋಬಾನವೇ ॥ ೩ ॥

ಬಾದಮ ಹಸಿಗೋಳು ಎತ್ತ ಹೊಯ್ಯಲಿ ಶಿವನೆ
ಇಪ್ಪತ ಕಂಕಣದ ಪಡಸಾಲಿ ಸೋಬಾನವೇ
ಇಪ್ಪತ ಕಂಕಣದ ಪಡಸಾಲಿ ಬಾದಮಸಾಲಿ
ತಾವ ನೋಡಸಿ ಹೋಯ್ಯರೆಂದ ಸೋಬಾನವೇ ॥ ೪ ॥

ಅಡಕಿ ಹಸಿಗೋಳು ಎತ್ತ ಹೊಯ್ಯಲಿ ಶಿವನು
ಇಪ್ಪತ ಕಂಕಣದ ಪಡಸಾಲಿ ಸೋಬಾನವೇ
ಇಪ್ಪತ ಕಂಕಣದ ಪಡಸಾಲಿ ಬಾದಮಸಾಲಿ
ಜಾಗ ನೋಡಸಿಯೇ ಯೋಯ್ಯರೆಂದ ಸೋಬಾನವೆ ॥ ೫ ॥

– ಶ್ರೀಮತಿ ನೀಲಮ್ಮ ಲಾಧಾ

***

ಹಸಿಯಾಯ್ತ ನನ್ನ ಬಸವಗ ಶರಣಂದ

ಹಸಿಯಾಯ್ತು ನನ್ನ ಬಸವಗ ಶರಣಂದ
ಬಸವ ಮೂರುತಿ ನನ್ನ ಗುರು ಸ್ವಾಮಿ
ಈ ಸೋಬಾನ ತರ ಎಳಸ ಗರದಾ ಬಾನಾದಲ್ಲಿ ॥ ೧ ॥

ಬಸವ ಮೂರುತಿ ನನ್ನ ಗುರು ಸ್ವಾಮಿಗಿ ಶರಣೆಂದು
ಹಸಿಗಿ ಬಾ ಗಂಗಿ ಗರಡಾಂದ
ಈ ಸೋಬಾನ ತರ ಎಳಸ ಗರದಾ ಬಾನಾದಲ್ಲಿ ॥ ೨ ॥

ದಂಡಿಯ ಸುತ್ತ ದುಂಡಡಕಿ ಗಜಲಿಂಬೆ
ಗಂಡನ್ನಡದಲ್ಲಿ ಅತೀ ರಂಬೆ
ಈ ಸೋಬಾನಾ ತರ ಎಳಸ ಗರದಾ ಬಾನಾದಲ್ಲಿ ॥ ೩ ॥

ಗಂಡನ್ನಡದಲ್ಲಿ ಅತೀ ರಂಬೆ ಲಕ್ಷ್ಮಿ
ದುಂಡು ಮುತ್ತೆಲ್ಲಿ ದೊರದೀದೆ
ಈ ಸೋಬಾನ ತರ ಎಳಸ ಗರದಾ ಬಾನಾದಲ್ಲಿ ॥ ೪ ॥

ಅಕ್ಕಿ ಹಸಿ ಸುತ್ತ ಹಸಿ ಅಡಕಿ ಗಜಲಿಂಬೆ
ಅರಸ ನುಡದಲ್ಲಿ ಅತೀ ರಂಬೆ
ಈ ಸೋಬಾನ ತರ ಎಳಸ ಗರದಾ ಬಾನಾದಲ್ಲಿ ॥ ೫ ॥

ಅರಸನುಡದಲ್ಲಿ ಅತೀ ರಂಬೆ ಲಕ್ಷ್ಮೀ
ಸರಸ ಮುತ್ತಲ್ಲಿ ದೂರದೀದೆ
ಈ ಸೋಬಾನ ತರ ಎಳಸ ಗರದಾ ಬಾನಾದಲ್ಲಿ ॥ ೬ ॥

ಬ್ಯಾಗಿಲಮ್ಯಾಲ ಬಂದೆರಡು ಗಿಳಿಕುಂತ
ಕಂಕಣಲೆಡಸಿ ನಗತಾವೇ ಅವು ಮಾತಾಡ್ಯಾವೇ
ಅಕ್ಕ ಭಾವಗ ವರ ಛಂದಾವೇ ॥ ೭ ॥

ಬಾಗಿಲ ಮ್ಯಾಲ ಬಂದೆರಡು ಗಿಳಿ ಕುಂತ
ಕಂಕಣಲಡಸಿ ನಗುತಾವೆ। ಅವು ಮಾತಾಡ್ಯಾವೆ
ನಾಳ ಸೋಬಾನ ಹೌದೇನೇ । ॥ ೮ ॥

ಈಸು ಹಾಡೆಲ್ಲ ಹೂಜೆಯ ತುಂಬಿದ
ವಜ್ಜರದ ಕೀಲ ಜಡಸೀದ। ಇವ ನಾಳ ನಮ್ಮ
ಯಾಳಾ ಬಂದಲ್ಲಿ ತೆಗೆದೀವ ॥ ೯ ॥

– ಶ್ರೀಮತಿ ಸಂಗಮ್ಮಾ ರಾಚಯ್ಯ (ಸೋಬಾನೆ ಪದ)

***

ಬಸವ ಪ್ಯಾಟಿ ಬಸವನ ಹರಕಿ

ಬಸವ ಪ್ಯಾಟಿ ಬಸವನ ಹರಕಿ
ಮುಟ್ಟಸಿದೋ ಕಂದ ನಾನೀಗ ಬಂದ ॥ ೧ ॥

ಒಂದ ಚೀಲವ ಗೋದಿ ಹರಕೀಯ ಮಾಡಿದ
ಐವತ್ತಾವಿರ ಐಯ್ಯಾಗೋಳಿಗ ಕರಸಿದೋ । ಕಂದ ನಾನೀಗ ಬಂದ ॥ ೨ ॥

ಎರಡು ಚೀಲವ ಅಕ್ಕಿ ಹರಕೀಯ ಮಾಡಿದ
ಐವತ್ತಾವಿರ ಐಯ್ಯಾಗೋಳಿಗ ಕರಸಿದೋ । ಕಂದ ನಾನೀಗ ಬಂದ ॥ ೩ ॥

ಐದಾ ತಿಂಗಳ ಶಿಸವೀಗಿ ಹರಕೀಯ ಮಾಡಿದ
ಬಸವ ಪ್ಯಾಟಿ ಬಸವನ ಹರಕಿ ಇಳಸಿದೋ । ಕಂದ ನಾನೀಗ ಬಂದ ॥ ४ ॥

– ಶ್ರೀಮತಿ ಲಕ್ಷ್ಮೀಬಾಯಿ ಶಂಕರೆಪ್ಪಾ ಲಾಧಾ

***

ಬಸವನ ಮದವಿಯ ಮಾಡಿದರೆ

ಬಸವನ ಮದವಿಯ ಮಾಡಿದರೆ
ಈ ಬಸವನ ಮದವಿಯ ಮಾಡಿದರೆ ॥ ಪ ॥

ಹಾದೀಗಿ ಹಂದರ್ಹಾಕಿ ಬೀದೀಗಿ ಚಳಿಯವ ಕೊಟ್ಟಿ
ಮದವಿಯ ಮಾಡಿದರೆ ಈ ಬಸವನ ಮದವಿಯ ಮಾಡಿದರೆ ॥ ೧ ॥

ಗಂಗಮ್ಮ ಗೌರಮ್ಮ ಬಂದು ಸುರಗಿಯ ಸುತ್ತಿದರೆ
ಮದವಿಯ ಮಾಡಿದರೆ ಈ ಬಸವನ ಮದವಿಯ ಮಾಡಿದರೆ ॥ ೨ ॥

ಪಾರ್ವತಿ ಸರಸ್ವತಿ ಬಂದು ಭೂಮದ ಬುಟ್ಟಿವ ತುಂಬಿ
ಮದವಿಯ ಮಾಡಿದರೆ ಈ ಬಸವನ ಮದವಿಯ ಮಾಡಿದರೆ ॥ ೩ ॥

ಪಾರ್ವತಿ ಪರಮೇಶ್ವರ ಧಾರಿಯ ಎರಿದರೋ
ಮದವಿಯ ಮಾಡಿದರೆ ಈ ಬಸವನ ಮದವಿಯ ಮಾಡಿದರೆ ॥ ೪ ॥

– ಶ್ರೀಮತಿ ಲಲಿತಾಬಾಯಿ ಮಾಗಾಂವ ಲಾಥಾ
(ಮೈನೆರೆದ ಹಾಡು.)

***

ಭಾದ್ದೂರ ಭಂಡಿಯ ಹೂಡಿ

ಭಾದ್ದೂರ ಭಂಡಿಯ ಹೂಡಿ ನವಲ ಬಣ್ಣದ ಹೋರಿ
ನೀಲುವಮ್ಮ ತಾಯಿ ಮದಿಮಗಳಾದರ
ಮದವಿಯ ಮಾಡಿದರೇ ಈ ಬಸವನ ಮದವಿಯ ಮಾಡಿದರೇ ॥ ೧ ॥

ಮದವಿಯ ಮಾಡಿದರೇ ಕಲ್ಯಾಣಪುರದಲ್ಲಿ
ಚನ್ನಬಸವೇಸೂರ ಮದಿಮಗನಾದರ
ಮದವಿಯ ಮಾಡಿದರೇ ಈ ಬಸವನ ಮದವಿಯ ಮಾಡಿದರೇ ॥ ೨ ॥

ಭಕ್ತಿಯ ಬಾಗಿಲ ಮುಂದೆ ಈಶ್ವರನ ಹಂದರ್ಹಾಕಿ
ಮುತ್ತಿನ ತೋರಣ ಕಟ್ಟಿ ರತ್ನಗೋಳಸಿಗೋಯ್ದೇ
ಮದವಿಯ ಮಾಡಿದರೇ ಈ ಬಸವನ ಮದವಿಯ ಮಾಡಿದರೇ ॥ ೩ ॥

ಗಂಗಮ್ಮ ಗೌರಮ್ಮ ಕೂಡಿ ಐಯದಿನಸಿಂದಾಣ್ಯಾವ ಮಾಡಿ
ಸಕ್ಕರಿ ಮುತ್ತಿನ ಬುಟ್ಟಿ ಮಿತ್ರರೇ ತುಂಬಿದಾರೇ
ಮದವಿಯ ಮಾಡಿದರೇ ಈ ಬಸವನ ಮದವಿಯ ಮಾಡಿದರೇ ॥ ೪ ॥

ಪಾರ್ವತಿ ಸರಸ್ವತಿ ಕೂಡಿ ಭೂಮದ ಪದಗೋಳು ಹಾಡಿ
ಸಕ್ಕರಿ ಮುತ್ತಿನ ಬುಟ್ಟಿ ಮಿತ್ರರೆ ಎತ್ತಿದಾರೇ
ಮದವಿಯ ಮಾಡಿದರೇ ಈ ಬಸವನ ಮದವಿಯ ಮಾಡಿದರೇ ॥ ೫ ॥

ಕೈಯಲ್ಲಿ ಕಂಕಣ್ಣ ಕಟ್ಟಿ ಎಡಕ ಭಾಸಿಂಗ ಸೀಳಿ
ಉರುಮ್ದಲ್ಲಿ ಗುರುಗೋಳು ಬಂದು ಕರಿಮಣಿ ಕಟ್ಯ್ಯಾರೇ
ಮದವಿಯ ಮಾಡಿದರೇ ಈ ಬಸವನ ಮದವಿಯ ಮಾಡಿದರೇ ॥ ೬ ॥

ಪಾಂಡವರು ರಥವ ಹೂಡಿ ಕೃಷ್ಣ ಚಕ್ಕರ ತಿರುಗಿ
ಪುರಂದರ ಇತಲ ಬಂದು ಮರಗುಣಿ ತೆಗದಾರೇ
ಮದವಿಯ ಮಾಡಿದರೇ ಈ ಬಸವನ ಮದವಿಯ ಮಾಡಿದರೇ ॥ ೭ ॥

ಮದವಿಯ ಮಾಡಿದರೇ ಕಲ್ಯಾಣಪುರದಲ್ಲಿ
ಚನ್ನಬಸವೇಸೂರ ಮದಿಮಗನಾದುರ
ಮದವಿಯ ಮಾಡಿದರೇ ಈ ಬಸವನ ಮದವಿಯ ಮಾಡಿದರೇ ॥ ೮ ॥

– ಶ್ರೀಮತಿ ಗಂಗಮ್ಮಾ ಬಾಬುರಾವ ಗೋರಂಪಳ್ಳಿ
(ಮ್ಯೆನೆರದ ಹಾಡು)

***

ಮೇಲು ಕೀಲುಗಳೆಂಬ ಮೂಲ (ಬೀಸುವ ಪದ)

ಮೇಲು ಕೀಲುಗಳೆಂಬ ಮೂಲ ಜಾಲವನರಿದು
ಶೀಲ ಸಮತೆಯ ಬೀಜವನು ಬಿತ್ಯಾರ
ದೇವಗುರು ಬಸವಣ್ಣ ॥ ಪ ॥

ಬಾಗೆವಾಡಿಯೊಳುದಿಸಿ ಜನ್ಮದಾತರ ತ್ಯಜಿಸಿ
ಯೋಗಿ ಸಂಗಮನೋಳು ಕೂಡಿಹರು ನನ ತಂದೆ
ದೇವಗುರು ಬಸವಣ್ಣ ॥ ೧ ॥

ಶರಣರೆಲ್ಲರು ಕೂಡಿ ಕರುಣಸಾಗರದೊಳಾಡಿ
ವೀರ ಕಲ್ಯಾಣಕೆ ಬಂದಿಹರು ನನ ತಂದೆ
ದೇವಗುರು ಬಸವಣ್ಣ ॥ ೨ ॥

ಕೀಳು ಜಾತಿಯನಳಿದು ಹಾಳು ಕರ್ಮವ ಕಳೆದು
ಕಲ್ಯಾಣ ಕ್ರಾಂತಿಯ ಹೂಡಿಹರು ನನ ತಂದೆ
ದೇವಗುರು ಬಸವಣ್ಣ ॥ ೩ ॥

ನೀಚ ಮಾನವರೆಲ್ಲ ನಿಂದೆಗೈಯುತಲಿಹರು
ನಾಚಿಗೇಡಿಗಳೆಲ್ಲರು ಎಲ್ಲರನು ತಳ್ಳುವರು
ದೇವಗುರು ಬಸವಣ್ಣ ॥ ೪ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

ಬಸವಣ್ಣನವರ ಹಾಡು

ಬಸವ ನಿಮ್ಮ ಪಾದವು ನೆನೆದರೆ ಪಾಪ ಹೊಯಿತ್ರಿ ದೂರ ।
ಬಸವ ನಿಮ್ಮ ಪಾದವು ನೆನೆದರೆ ಪಾಪ ಹೊಯಿತ್ರಿ ದೂರ ॥
ಶಿಸುವಿನಂತೆ ಸಲವುತ ಬಂದ ಬಸವರಾಜ ಧೀರ ।
ಶಿಸುವಿನಂತೆ ಸಲವುತ ಬಂದ ಬಸವರಾಜ ಧೀರ ॥ ॥ ೧ ॥

ಕೊಂಬಣಸ ಕೊರಳಲೆ ಗೆಜ್ಜೆ ಮಡಗವು ಧರಿಸಿದ್ದ ।
ಕೊಂಬಣಸ ಕೊರಳಲೆ ಗೆಜ್ಜೆ ಮಗಡವು ಧರಿಸಿದ್ದ ॥
ಕಿಡಿಯಗಣ್ಣಿನ ಸಂಗಮನಾಥ ಎದುರಿಗೆ ಕುಂತಿದ್ದ ।
ಕಿಡಿಯಗಣ್ಣಿನ ಸಂಗಮನಾಥ ಎದುರಿಗೆ ಕುಂತಿದ್ದ ॥ ॥ ೨ ॥

ಬಾವಿಯಲಿ ಬಿದ್ದ ಸತ್ತ ಕೂಸಿನ ಕರದು ಪ್ರಾಣ ಪಡೆದ ।
ಬಾವಿಯಲಿ ಬಿದ್ದ ಸತ್ತ ಕೂಸಿನ ಕರದು ಪ್ರಾಣ ಪಡೆದ ॥
ಮಾದಲಾಂಬಿಕೆಗೆ ಮಗನಾಗಿ ಬಲ್ಲಿದನೆನಿಸಿಗೊಂಡ ।
ಮಾದಲಾಂಬಿಕೆಗೆ ಮಗನಾಗಿ ಬಲ್ಲಿದನೆನೆಸಿಗೊಂಡ ॥ ॥ ೩ ॥

ಬಸವ ನಿಮ್ಮ ಪಾದವು ನೆನೆದರೆ ಪಾಪ ಹೊಯಿತ್ರಿ ದೂರ ।
ಬಸವ ನಿಮ್ಮ ಪಾದವು ನೆನೆದರೆ ಪಾಪ ಹೊಯಿತ್ರಿ ದೂರ ॥
ಶಿಸುವಿನಂತೆ ಸಲವುತ ಬಂದ ಬಸವರಾಜ ಧೀರ ।
ಶಿಸುವಿನಂತೆ ಸಲವುತ ಬಂದ ಬಸವರಾಜ ಧೀರ ॥ ॥ ೪ ॥

ಅಚ್ಚ ಮಲ್ಲಿಗಿ ಹೂವಿನ ಹಾರೊಂದ ಹರುಷದಿಂದಲಿ ಮುಡಿದ ।
ಅಚ್ಚ ಮಲ್ಲಿಗಿ ಹೂವಿನ ಹಾರೊಂದ ಹರುಷದಿಂದಲಿ ಮುಡಿದ ॥
ಬಾಗೇವಾಡಿ ಭಾವಕ ಮೆಚ್ಚಿ ಅಲ್ಲಿ ವಾಸನಾದ ।
ಇಬ್ರಾಹಿಂಪೂರ ಭಾವಕ ಮೆಚ್ಚಿ ಇಲ್ಲಿ ವಾಸನಾದ ॥ ೫ ॥

ಬಸವ ನಿಮ್ಮ ಪಾದವು ನೆನೆದರೆ ಪಾಪ ಹೊಯಿತ್ರಿ ದೂರ ।
ಬಸವ ನಿಮ್ಮ ಪಾದವು ನೆನೆದರೆ ಪಾಪ ಹೊಯಿತ್ರಿ ದೂರ ॥
ಶಿಸುವಿನಂತೆ ಸಲವುತ ಬಂದ ಬಸವರಾಜ ಧೀರ ।
ಶಿಸುವಿನಂತೆ ಸಲವುತ ಬಂದ ಬಸವರಾಜ ಧೀರ ॥ ॥ ೬ ॥

– ಶ್ರೀಮತಿ ಕಲಾವತಿ ಚನ್ನಯ್ಯ ವಸ್ತ್ರದ, ಸಿಂದಗಿ
(ಬೀಸುವ ಹಾಡು)

***

ಬಸವಣ್ಣ ಹುಟ್ಟಿ ಬಾಗೇವಾಡಿಯಲ್ಲಿ

ಬಸವಣ್ಣ ಹುಟ್ಟಿ ಬಾಗೇವಾಡಿಯಲ್ಲಿ ಜ್ವಾಳದ ಹೊಡಿಯಲ್ಲೇ ಶಿವ ।
ಬಸವಣ್ಣ ಹುಟ್ಟಿ ಬಾಗೇವಾಡಿಯಲ್ಲಿ ಜ್ವಾಳದ ಹೊಡಿಯಲ್ಲೇ ಶಿವ ॥
ಬಸವಣ್ಣ ಹುಟ್ಟಿ ಬಾಗೇವಾಡಿಯಲ್ಲಿ ಜ್ವಾಳದ ಹೊಡಿಯಲ್ಲೇ ಶಿವ ।
ಜ್ವಾಳದ ಹೊಡಿಯಲ್ಲೇ ॥ ॥ ೧ ॥

ಮಾಧುವರಸ – ಮಾದಲಾಂಬಿಕೆ ಬ್ರಹ್ಮನಾದನಲ್ಲ ಶಿವ ।
ಮಾಧುವರಸ – ಮಾದಲಾಂಬಿಕೆ ಬ್ರಹ್ಮನಾದನಲ್ಲ ಶಿವ ॥
ಮಾಧುವರಸ – ಮಾದಲಾಂಬಿಕೆ ಬ್ರಹ್ಮನಾದನಲ್ಲ ಶಿವ ।
ಬ್ರಹ್ಮನಾದನಲ್ಲ ಶಿವ ॥ ॥ ೨ ॥

ಅಪ್ಪ ಬಸವರಾಜ ಹೆಪ್ಪ ಕೊಟ್ಟರ ಗಪ್ಪನಾಯಿತ್ರಿ ನೀರ ಶಿವ ।
ಅಪ್ಪ ಬಸವರಾಜ ಹೆಪ್ಪ ಕೊಟ್ಟರ ಗಪ್ಪನಾಯಿತ್ರಿ ನೀರ ಶಿವ ॥
ಅಪ್ಪ ಬಸವರಾಜ ಹೆಪ್ಪ ಕೊಟ್ಟರ ಗಪ್ಪನಾಯಿತ್ರಿ ನೀರ ಶಿವ ।
ಗಪ್ಪನಾಯಿತ್ರಿ ನೀರ ಶಿವ ॥ ॥ ೩ ॥

ನೀರನ ಹುಳಿಗೊಳ ತಪ್ಪಿ ಬಿಟ್ಟರ ಹತ್ತದಿಲ್ರಿ ಲೆಕ್ಕ ಶಿವ ।
ನೀರನ ಹುಳಿಗೊಳ ತಪ್ಪಿ ಬಿಟ್ಟರ ಹತ್ತದಿಲ್ರಿ ಲೆಕ್ಕ ಶಿವ ॥
ನೀರನ ಹುಳಿಗೊಳ ತಪ್ಪಿ ಬಿಟ್ಟರ ಹತ್ತದಿಲ್ರಿ ಲೆಕ್ಕ ಶಿವ ।
ಹತ್ತದಿಲ್ರಿ ಲೆಕ್ಕ ಶಿವ ॥ ॥ ೪ ॥

ಮರಗವ ದುರಗವ ಪೀಡ ಪಿಸಾಳಿಗೆ ಅನ್ನ ಹಾಕತೀನಂತ ವಚನ ಕೊಟ್ಟ ಶೀವ ।
ಮರಗವ ದುರಗವ ಪೀಡ ಪಿಸಾಳಿಗೆ ಅನ್ನ ಹಾಕತೀನಂತ ವಚನ ಕೊಟ್ಟ ಶೀವ ॥
ಮರಗವ ದುರಗವ ಪೀಡ ಪಿಸಾಳಿಗೆ ಅನ್ನ ಹಾಕತೀನಂತ ವಚನ ಕೊಟ್ಟ ಶೀವ ।
ಅನ್ನ ಹಾಕತೀನಂತ ವಚನ ಕೊಟ್ಟ ಶಿವ ॥ ॥ ೫ ॥

ಭೂಕಂಪವಾಗಿ ಭೂಮಿನಾದರೂ ಹೊಲ ಕಾವಲ ನ್ಬಿಡದ ಶಿವ ।
ಭೂಕಂಪವಾಗಿ ಭೂಮಿನಾದರೂ ಹೊಲ ಕಾವಲ ನ್ಬಿಡದ ಶಿವ ॥
ಭೂಕಂಪವಾಗಿ ಭೂಮಿನಾದರೂ ಹೊಲ ಕಾವಲ ನ್ಬಿಡದ ಶಿವ ।
ಹೊಲ ಕಾವಲ ನ್ಬಿಡದ ಶಿವ ॥ ॥ ೬ ॥

ನಾಕು ಮೋಳಿ ಹೊಲ ಹಸನ ಮಾಡಿ ಮೌಳಿ ಮಡಕಿ ಹೊಡದ ಶಿವ ।
ನಾಕು ಮೋಳಿ ಹೊಲ ಹಸನ ಮಾಡಿ ಮೌಳಿ ಮಡಕಿ ಹೊಡದ ಶಿವ ॥
ನಾಕು ಮೋಳಿ ಹೊಲ ಹಸನ ಮಾಡಿ ಮೌಳಿ ಮಡಕಿ ಹೊಡದ ಶಿವ ।
ಮೌಳಿ ಮಡಕಿ ಹೊಡದ ಶಿವ ॥ ॥ ೭ ॥

ಗಂಗಿ ಗೌರಿ ಅಂಥ ಎರಡ ಎತ್ತವು ಎರಚಾರಿ ಹೆಗಲ ಶಿವ ।
ಗಂಗಿ ಗೌರಿ ಅಂಥ ಎರಡ ಎತ್ತವು ಎರಚಾರಿ ಹೆಗಲ ಶಿವ ॥
ಗಂಗಿ ಗೌರಿ ಅಂಥ ಎರಡ ಎತ್ತವು ಎರಚಾರಿ ಹೆಗಲ ಶಿವ ।
ಎರಚಾರಿ ಹೆಗಲ ಶಿವ ॥ ॥ ೮ ॥

ಹಾದಿ ಮ್ಯಾಲಿನ ಶರ್ಪ ತಗೊಂಡು ಮಾಡ್ಯಾರ ಬರಕೋಲ ಶಿವ ।
ಹಾದಿ ಮ್ಯಾಲಿನ ಶರ್ಪ ತಗೊಂಡು ಮಾಡ್ಯಾರ ಬರಕೋಲ ಶಿವ ॥
ಹಾದಿ ಮ್ಯಾಲಿನ ಶರ್ಪ ತಗೊಂಡು ಮಾಡ್ಯಾರ ಬರಕೋಲ ಶಿವ ।
ಮಾಡ್ಯಾರ ಬರಕೋಲ ಶಿವ ॥ ॥ ೯ ॥

ಮೂರು ಲೋಕಕೆ ಮಳಿಯಾದರೆ ಹಸಿಯನಾಯಿತ್ರಿ ಪೂರ ಶಿವ ।
ಮೂರು ಲೋಕಕೆ ಮಳಿಯಾದರೆ ಹಸಿಯನಾಯಿತ್ರಿ ಪೂರ ಶಿವ ॥
ಮೂರು ಲೋಕಕೆ ಮಳಿಯಾದರೆ ಹಸಿಯನಾಯಿತ್ರಿ ಪೂರ ಶಿವ ।
ಹಸಿಯನಾಯತ್ರಿ ಪೂರ ಶಿವ ॥ ೧೦ ॥

ಆಕಾಶಕ್ಹೋಗಿ ಅಳತಿ ತೊಗೊಂಡು ಹೊಲಸ್ಯಾರ ಉಡಚೀಲ ಶಿವ ।
ಆಕಾಶಕ್ಹೋಗಿ ಅಳತಿ ತೊಗೊಂಡು ಹೊಲಸ್ಯಾರ ಉಡಚೀಲ ಶಿವ ॥
ಆಕಾಶಕ್ಹೋಗಿ ಅಳತಿ ತೊಗೊಂಡು ಹೊಲಸ್ಯಾರ ಉಡಚೀಲ ಶಿವ ।
ಹೊಲಸ್ಯಾರ ಉಡಚೀಲ ಶಿವ ॥ ॥ ೧೧ ॥

ಬಸವರಾಜನ ಮ್ಯಾಲ ಹಸರ ನಿಶಾನ ತಿಪರ್ಥರಿ ಬಿಟ್ಟರ ನೆರಳ ಶಿವ ।
ಬಸವರಾಜನ ಮ್ಯಾಲ ಹಸರ ನಿಶಾನ ತಿಪರ್ಥರಿ ಬಿಟ್ಟರ ನೆರಳ ಶಿವ ॥
ಬಸವರಾಜನ ಮ್ಯಾಲ ಹಸರ ನಿಶಾನ ತಿಪರ್ಥರಿ ಬಿಟ್ಟರ ನೆರಳ ಶಿವ ।
ತಿಪರ್ಥರಿಬಿಟ್ಟರ ನೆರಳ ಶಿವ ॥ ॥ ೧೨ ॥

– ಶ್ರೀಮತಿ ಕಲಾವತಿ ಚನ್ನಯ್ಯ ವಸ್ತ್ರದ, ಸಿಂದಗಿ

***

ಮಾದಲಾಂಬಿ ಕಂದನೆ ಮಾದರಸ ಪುತ್ರನೆ

ಮಾದಲಾಂಬಿ ಕಂದನೆ ಮಾದರಸ ಪುತ್ರನೆ ।
ಮುದ್ದು ಬಾಲ ಬಸವ ಪ್ರಭುವೇ ॥ ಪ ॥

ಅನುಮೋಷ ತೋರಿಸಿ ಶಿವಧರ್ಮ ಪೋಷಿಸಿ ।
ಬಾಗೇವಾಡಿ ಈಶನೇ ಯೋಗಿ ಜನರ ಜೀವನೇ ।
ಜಗದೀಶ ಜಂಗಮ ಪ್ರಿಯನೆ ॥ ೧ ॥

ದುರಳ ಬಿಜ್ಜಳ ಸರ್ವ ಖಂಡಿಸಿ ದೇವಾ ಚರಿಸಿ ।
ಕಲ್ಯಾಣಕೆ ಗುರುನಾಮ ಬಸವಾ ಬಾಗೇವಾಡಿ ಈಶನೇ ।
ಯೋಗಿ ಜನರ ಜೀವನೇ ಜಗದೀಶ ಜಂಗಮ ಪ್ರಿಯನೆ ॥ ೨ ॥

– ಶ್ರೀಮತಿ ಸರ್ವಮಂಗಳ ಜೋಗೂರ ಹಾಗೂ
ಪಾರ್ವತಿ ಜೆಮಶೆಟ್ಟಿ,

***

ಕಲ್ಯಾಣಪುರದಲ್ಲಿ ಚನ್ನಿಂಗ ಬಸವಣ್ಣ

ಕಲ್ಯಾಣಪುರದಲಿ ಚನ್ನಿಂಗ ಬಸವಣ್ಣ
ಬಲ್ಲಿದ ಬಸವಣ್ಣ ಚದುರೇನೆ । ದೇವರು ದೇವಯ್ಯ ।
ಬಲ್ಲಿದು ಬಸವಣ್ಣ ಚದುರೇನು ಕಲ್ಯಾಣ ಬಸವ
ಐದು ಬೆರಳೆತ್ತಿ ಶರಣೆಂದ । ದೇವರು ದೇವಯ್ಯ । ॥ ೧ ॥

ಐದನೇ ಬೆರಳೆತ್ತಿ ಶರಣೆಂದ ಕಲ್ಯಾಣ ಬಸವ
ಹತ್ತು ಬೆರಳೆತ್ತಿ ಶರಣೆಂದ । ದೇವರು ದೇವಯ್ಯ ।
ಹತ್ತನೇ ಬೆರಳೆತ್ತಿ ಶರಣೆಂದ ಕಲ್ಯಾಣ ಬಸವ
ಮುತ್ತ ತುಂಬ್ಯಾರೇ ಕಳುಸಾಕ । ದೇವರು ದೇವಯ್ಯ । ॥ ೨ ॥

ಎತ್ತನೇ ನೋಡಿದರ ಥೆಳ್ಳೋನು ಕಲ್ಲಿನ
ಝುಳ್ಳನೇ ಹರಿಯೋಳು ಜಲದಿಲ್ಲ । ದೇವರು ದೇವಯ್ಯ ।
ಥಳ್ಳುವನೇ ಹರಿಯೋಳ ಜಲದಿಲ್ಲ ಕಲ್ಯಾಣ ಬಸವ
ಸೆಲ್ಯಾ ನಾಯೆಲ್ಲಿ ಸೆಳೆಯಲಿ । ದೇವರು ದೇವಯ್ಯ । ॥ ೩ ॥

ಎತ್ತನೇ ನೋಡಿದರ ಗುಂಡನ ಕಲ್ಲಿಲ್ಲ
ಜಮ್ಮನೇ ಹರಿಯೋ ಜಲದಿಲ್ಲ । ದೇವರು ದೇವಯ್ಯ ।
ಜಮ್ಮನೇ ಹರಿಯೋ ಜಲದಿಲ್ಲ ಕಲ್ಯಾಣ ಬಸವ
ವಸ್ತರ ನಾಯೆಲ್ಲಿ ಒಗಿಯಾಲಿ । ದೇವರು ದೇವಯ್ಯ । ॥ ೪ ॥

ಮನಿಯ ಗೌಡರಿಗಿ ಕೊಟ್ಟಾರೊಂದೆರಡೆಳಿಯ
ಝುಳ್ಳ ಥೆಳ್ಳಗ ಕಲ್ಲ ಬರಲೆಂದ । ದೇವರು ದೇವಾ ।
ಥೆಳ್ಳುವನ ಕಲ್ಲ ಬರಲೆಂದ ಕಲ್ಯಾಣ ಬಸವಣ್ಣ
ಅಣ್ಣ ನಿನ್ನ ಗುಡಿಯ ಮುಗಿಲೆಂದ । ದೇವರು ದೇವಾ । ॥ ೫ ॥

ಕೋಲೇಶಿ ಗೌಡರಗಿ ಕೊಟ್ಟಾರೊಂದೆರಡೆಳಿಯ
ಪಿಂಡಾನ ಕಲ್ಲ ಬರುಲೆಂದ । ದೇವರು ದೇವಯ್ಯ ।
ಪಿಂಡಾನ ಕಲ್ಲ ಬರಲೆಂದ ಕಲ್ಯಾಣ ಬಸವ
ತಂದಿ ನಿನ್ನ ಗುಡಿಯ ಮುಗಿಲೆಂದ । ದೇವರು ದೇವಯ್ಯ । ॥ ೬ ॥

ಅಣ್ಣಾನ ಪೋಳ್ಯಾಗ ಹನ್ನೆರಡು ಒಲಿ ಹೂಡಿ
ಎನ್ನೊಳಿಗಾಗ್ಯಾವ ಬೆಳಗನ । ದೇವರು ದೇವಾ ।
ಎನ್ನೊಳಿಗಾಗ್ಯಾವೇ ಬೆಳಗಾನ ಕಲ್ಯಾಣ ಬಸವ
ಅಣ್ಣಾದೇರುಣುವ ಎಡಿಗೋಳೇ । ದೇವರು ದೇವಾ । ॥ ೭ ॥

ಅಪ್ಪನ ಪೋಳ್ಯಾಗ ಇಪ್ಪತ್ತೊಂದು ಒಲಿ ಹೂಡಿ
ಹಪ್ಪಾಳಾಗ್ಯಾವ ಬೆಳಗಾನ । ದೇವರು ದೇವಾ ।
ಹಪ್ಪಾಳಾಗ್ಯಾವ ಬೆಳಗಾನ ಕಲ್ಯಾಣ ಬಸವ
ಅಪ್ಪ ಸಿದ್ಧನ ನೆನಿಬೇಕೆ । ದೇವರು ದೇವಾ । ॥ ೮ ॥

ಅಪ್ಪನ ಗುಡಿ ಮ್ಯಾಲ ಎಷ್ಟೊಂದು ಜಂಗಮರು
ಎಷ್ಟೊಂದು ಮಂತ್ರ ಜಪವಗೈದಿದರೇ । ದೇವರು ದೇವಾ ।
ಎಷ್ಟು ಒಂದು ಮಂತ್ರ ನೆರವ್ಯಾರ ಕಲ್ಯಾಣ ಬಸವ
ರೇಶ್ಮಿಮುಟ್ಟ ಎಳಸಿದರು । ದೇವರು ದೇವಾ । ॥ ೯ ॥

ಕೇರ‍್ಯಾಗಿನ ಅವ್ವದೇರೇ ಕೇರ‍್ಯಾಗಿನ ಅಕ್ಕದೇರೇ
ಎನ್ನವರಳಿಯಲ್ಲಿ ಹುಟ್ಟಿದರು ಸರಿ । ದೇವರು ದೇವಾ ।
ಅಣ್ಣನ ಎದಿ ಮ್ಯಾಲ ಹನ್ನೆರಡು ತೊಲಿ ಚೌಕ
ಕಡ್ಡಿಲಿ ಬಂಗಾರ ಬರದಾರೇ । ದೇವರು ದೇವಾ । ॥ ೧೦ ॥

ಕಡ್ಡಿಲಿ ಬಂಗಾರ ಬರದಾರೇ ಕಲಬುರಗೇಯವರೇ
ಅಗ್ಗಿ ಶರಣಯ್ಯನ ಎದಿ ಮ್ಯಾಲೇ । ದೇವರು ದೇವಾ ।
ಅಪ್ಪನ ಎದಿ ಮ್ಯಾಲ ಇಪ್ಪತ ತೊಲಿ ಚೌಕ
ಬೆರಳಲಿ ಭಂಗಾರ ಬರದಾರೆ । ದೇವರ ದೇವಾ । ॥ ೧೧ ॥

ಬೆರಳಲಿ ಭಂಗಾರ ಬರದಾರ ಕಲಬುರಗಿಯವರೇ
ಅಪ್ಪ ಶರಣಯ್ಯನ ಎದಿ ಮ್ಯಾಲೆ । ದೇವರು ದೇವಾ ।
ಜಾಜಿಯ ಗಿಡದ ಬುಡಕಾ ಝಾಡಿಸಿ ಗದ್ದಗಿ ಹಾಸಿ
ಜಾಣ ಶರಣನ ಶಿವ ಪೂಜಿ । ದೇವರ ದೇವಾ । ॥ ೧೨ ॥

ಜಾಣನೇ ಶರಣಯ್ಯನ ಶಿವ ಪೂಜಿ ಮಾಡಾಗ
ಜಾಲಿಯ ಹೂವ ಝಳ ಝಳ । ದೇವರು ದೇವಾ ।
ಇಲ್ಲೀಗಿ ಹರಹರ ಇಲ್ಲಿಗಿ ಶಿವ ಶಿವ
ಇಲ್ಲೀಗಿ ಶರಣರ ಪದ ಮುಗದೇ । ದೇವರು ದೇವಾ । ॥ ೧೩ ॥

– ಶ್ರೀಮತಿ ಗೌರಮ್ಮ ಬಿರಾದಾರ
(ಹಾಲಗುಗ್ಗಳ ತೆಗೆಯುವಾಗ)

***

ಜಾನಪದ ಹಾಡು

ಲಿಂಗಕೈಯದ್ದೂವ ಬೇಡಿದರ ನಾ ನೀಡಿದೆನಯ್ಯ ॥ ಪ ॥

ಎಲ್ಲ ಬಲ್ಲಿದನಯ್ಯ ಕಲ್ಯಾಣ ಬಸವಯ್ಯ ।
ಚಲ್ಲಿದನು ತಂದು ಶಿವ ಬೆಳಕ ।
ಶಿವನಾಡೊಳಗೆ ಸೊಲ್ಲೆತ್ತಿ ಜನವು ಹಾಡುವದು ॥ ೧ ॥

ಹಡದವ್ವ ಮಾದವ್ವ ಹಡೆದಪ್ಪ ಮಾದರಸ ।
ಪಡೆದವ್ವ ಅಕ್ಕ ನಾಗವ್ವ ।
ಬಸವನ ಬಿಡದೆ ಸಲುಹಿದನು ವರಸಂಗ ॥ ೨ ॥

ಹುಟ್ಟಿ ಬಂದನು ಬಸವ ಕಟ್ಟುದಕೆ ಕಲ್ಯಾಣ ।
ಬಿಟ್ಟು ಬಾಗೋಡಿ ನಾಗವ್ವನೊಡಗೂಡೀ ।
ಮೆಟ್ಟು ಮಾಡಿದನು ಸಂಗಮಗೆ ॥ ೩ ॥

ಓದಿದನು ಬಸವಯ್ಯ ವೇದದೊಳಗಿನ ಹುಸಿಯ ।
ಬೇಧ ಬೇಧವನೆ ಬಿಚ್ಚಿಟ್ಟ ।
ಜನಪದಕ ತೇದುಂಡ ಜೇವಿ ಬಸವಣ್ಣ ॥ ೪ ॥

ಮೆಚ್ಚಿದನು ಬಲದೇವ ಇಚ್ಚೆಯಲಿ ಮಗಳಿತ್ತ
ಕೆಚ್ಚೆದೆಯ ವೀರ ಬಸವಗೆ
ಕಲ್ಯಾಣ ನೆಚ್ಚಿ ಸಲಹೆಂದು ಕೈ ಮುಗಿದು ॥ ೫ ॥

ಅರಸ ಬಿಜ್ಜಳರಾಯ ಮರೆತಂದು ಕುಲಮತವ ।
ಕರೆಸಿ ಬಸವನಿಗೆ ಒಪ್ಪಿಸಿದ ।
ಮಂತ್ರಿ ಪದ ಹರುಷದಲಿ ರಾಜ ಮುದ್ರಿಕೆಯ ॥ ೬ ॥

ಸಾಗಿ ಬಸವನು ಬಂದು ತೂಗಿದನು ಕಲ್ಯಾಣ ।
ನಾಡಿನಲಿ ಕಟ್ಟಿ ಅನುಭವ ಮಂಟಪವ ।
ಕೂಗು ಕೇಳುತಲಿ ಜನವೆದ್ದು ॥ ೭ ॥

ಕೂಡಿದರು ಹುರುಪಿನಲಿ ನಾಡ ಬಲ್ಲಿದರೆಲ್ಲ ।
ಸೂಡ ಕಟ್ಟಿದರು ಶಿವ ನುಡಿಯ ಕಾಯಕದ ।
ಗೂಡಾತು ಲೋಕ ಜನ ಹಿಗ್ಗಿ ॥ ೮ ॥

ಉಂಡು ತೇಗಿತು ಲೋಕ ಕೊಂಡಾಡಿ ಕಾಯಕವ ।
ಕಂಡ ಕಂಡಲ್ಲಿ ದಾಸೋಹ ಕಾಯಕವ ।
ಕಂಡ ಜೀವನದ ಶಿವಮಾತು ॥ ೯ ॥

ಅರ್ಪಣೆಯ ಅನುಭಾವ ಹೆಪ್ಪುಗೆಟ್ಟಿತು ಲೋಕ ।
ಬೇಡಾತು ನಾಕ ಕಾಯಕದ ಹಾಲ್ಹೊಳೆಯು ।
ತೆಪ್ಪ ದಾಸೋಹ ತೇಲುತಲಿ ॥ ೧೦ ॥

ಅಲ್ಲಮ ಸಿದ್ದರಾಮ ಬಲ್ಲಿದರೆಲ್ಲರು ಬರಲು ।
ಕಲ್ಯಾಣ ಮನೆಗೆ ಕಳೆ ಬಂತು ।
ಬಸವಯ್ಯ ಎಲ್ಲಿ ಹೋದಲ್ಲಿ ಬೆಲ್ಲಾದ ॥ ೧೧ ॥

ಕಿತ್ತೊಗೆದ ಭಲರೆ ಬಸವಯ್ಯ ಬಸವರಸ ।
ನಿನ್ನೆಸರು ನೆಲೆ ಮಾತು ನಿತ್ಯ ಜನಪದಕೆ ॥ ೧೨ ॥

ಹರ ಹರನೆ ವರಸಂಗ ಗುರುವಂಗೆ ವರಸಂಗ ।
ಕರುಣ ನಿಧಿ ಹರನೆ ಸಂಗಮನೆ ಎಂದೆನುತ ।
ಮುಗಿದ ಬಸವ ಬಯಲಾದ ॥ ೧೩ ॥

ಬಸವಣ್ಣ ನಿನ್ನೆಸರು ದೆಸೆ ದೆಸೆಗೆ ಶಿವಮಂತ್ರ ।
ಹೊಸ ಮತಕ್ಕೆ ಮಂತ್ರ ನಿತ್ಯದಲಿ ಒಕ್ಕಲಿಗ ।
ಹೊಸ ಮಂತ್ರ ಬಸವಾ ಜಪಿಸುವನು ॥ ೧೪ ॥

ಉತ್ತಿ ಬಿತ್ತುವ ಮಂತ್ರ ಬಿತ್ತಿ ಬೆಳೆಯುವಮಂತ್ರ ।
ಸತ್ಯ ಶಿವ ಮಂತ್ರ ನಿನ್ನೆಸರು ಬಸವಯ್ಯ ।
ಮರ್ತ್ಯದೊಳು ಮಂತ್ರ ಜೀವನಕೆ ॥ ೧೫ ॥

ಶರಣರ ನೆನೆದರ ಸರಗಿಯ ಇಟ್ಟಂಗ ।
ಅರಳ ಮಲ್ಲಿಗೆ ಮುಡಿದ್ಹಾಂಗ ।
ಕಲ್ಯಾಣ ಶರಣರ ನೆನೆ ಎಲೆ ಮನವೇ ॥ ೧೬ ॥

ಮಲ್ಲಿಗಿ ಇದ್ದಾಗ ಮುಳ್ಳೇಕೆ ಮುಡಿಯುತಿ ।
ಕಲ್ಯಾಣದ ಬಸವಯ್ಯ ಇದ್ದಾಗ ನೀನು ।
ಕಲ್ಗೇಕೆ ಕೈಯ ಮುಗಿಯುವೇ ॥ ೧೭ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

ಭಕ್ತರಾಗ ಭಕ್ತ ನಮ್ಮ ಕಲ್ಯಾಣದ ಬಸವಾ

ಭಕ್ತರಾಗ ಭಕ್ತ ನಮ್ಮ ಕಲ್ಯಾಣದ ಬಸವಾ ।
ಜಂಗಮ ಪ್ರಿಯನಪ್ಪ ನಿಮ್ಮ ಹಿರಿಮೆ ದೊಡ್ಡದಪ್ಪ ॥ ಪ ॥

ಬಾಗೇವಾಡಿಯಲ್ಲಿ ನೀವು ಜನಿಸಿರೋ ಬಸವಾ ।
ಮಾನವರ ಕುಲಕೆ ನೀವು ಮುಕ್ತಿ ಕೊಟ್ಟಿರೊ ಬಸವಾ ॥ ೧ ॥

ಎಂಟು ವರ್ಷದ ಹುಡುಗ ಮುಂಜಿಗಿ ದಿಕ್ಕಾರ ಮಾಡಿದೆಪ್ಪ ।
ತಾಯಿ ತಂದೆಗೆ ಮೀರಿ ನೀವು ಸಂಗಮಕ್ಹೋಗಿರೆಪ್ಪ ॥ ೨ ॥

ಸಂಗಮ ಗುಡಿಯಲ್ಲಿ ಗುರುವಿನ ಪಾದ ಹಿಡಿದೆಪ್ಪ ।
ಪಾದ ಹಿಡಿದೆಪ್ಪ ಸಾಕ್ಷಾತ್ಕಾರ ಪಡೆದಪ್ಪ ॥ ೩ ॥

ಹಾರಕ್ಕಿ ಹಾರಿದಂತೆ ನೀವು ಹಾರುವ ಸಮಯಕ್ಕೆ
ಮಾವನ ಮಗಳ ನಿನ್ನ ಕೊರಳಿಗಿ ಹಾಕ್ಯಾರೆಪ್ಪ ॥ ೪ ॥

ಸಂಗಮ ದೇವರಿಗಿ ನೀವು ಪರಿಪರಿ ಕೇಳಿದೆಪ್ಪ ।
ಯಾವ ತಪ್ಪಿಗಾಗಿ ನೀವು ಶಿಕ್ಷೆ ಕೊಟ್ಟಿರಿ ಗುರುವೆ ॥ ೫ ॥

ಗುರುವಾಣಿ ಆಯಿತಪ್ಪ ನೀನು ಹೆದರ ಬೇಡ ಬಸವಾ ।
ಬಸವ ಕಲ್ಯಾಣಕ್ಹೋಗಪ್ಪ ರಾಜನ ಮಂತ್ರಿ ಆಗಪ್ಪ ॥ ೬ ॥

ರಾಜನಪ್ಪಣೆ ಪಡೆದು ಸಿಂಹಾಸನ ಏರ್‍ಯಾನ
ಭೂಮಿಯ ಅಗಳ್ಯಾನ ರಾಜನ ಲಿಪಿಯ ಓದ್ಯಾನ ॥ ೭ ॥

ಗುರುಲಿಂಗ ಜಂಗಮರ ದಾಸೋಗ ನಡೆಸಿದಲಾ ಬಸವಾ ।
ಸಂಗಮನಾಥನ ಸಾಕ್ಷಾತ್ಕಾರ ಪಡೆದೆಪ್ಪ ॥ ೮ ॥

ಚಾಡಿ ಮಾತ ಕೇಳಿ ಬಿಜ್ಜಳ ಬಸವಣ್ಣಗ ಬಯ್ದ ।
ಅರಸ ಮುನಿದ ಮ್ಯಾಲ ಅಳಾಳಿ ಇರುವದು ಬೇಡಪ್ಪ ॥ ೯ ॥

ಕಲ್ಯಾಣ ಬಿಟ್ಟು ಬಸವ ಕೂಡಲ ಸಂಗಮಕ ನಡದಾನ ।
ಸಂಗಮ ದೇವರಲಿ ತಾವ ಒಂದಾಗಿ ಉಳದಾರ ॥ ೧೦ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೇನ, ಮಹಾದೇವಿ ಕುಂಬಾರ

***

ಅಂಗಲಿಂಗ ಕೂಡಲು ಕೂಡಲಸಂಗಮ

ಅಂಗವು ಲಿಂಗವು ಒಂದಾದ ಬಸವನು
ಸಂಸಮನಾಥನ ಶಿಶು ಅವನು ಸೋಬಾನವೆ ॥ ೧ ॥

ಹುಟ್ಟಿದು ಬಾಗೇವಾಡಿ ಬ್ರಾಹ್ಮಣರ ಮತದೊಳು
ಕಟ್ಟಿದ್ದು ಲಿಂಗದ ಧರಮವು ಸೋಬಾನವೆ ॥ ೨ ॥

ಜನಿವಾರ ಕಿತ್ತ್ಯಾರ ಕಟ್ಟಿಮ್ಯಾಲಿಟ್ಟಾರ
ಸಂಗಮನಾಥನ ಕಡಿಗಿ ಹೊಂಟಾರೆ ಸೋಬಾನವೆ ॥ ೩ ॥

ಸಂಗಮದ ಕಟ್ಟಿಮ್ಯಾಲ ಎಂಟ್ವರ್ಷದ ಬಾಲಕ
ಅಂಗವಾ ಗಟ್ಟಿ ಮಾಡ್ಯಾನೆ ಸೋಬಾನವೆ ॥ ೪ ॥

ಅಂಗವಾ ಗಟ್ಟಿ ಮಾಡಿ ಲಿಂಗವ ಅದರಲ್ಲಿ ಇಟ್ಟಿ
ಸಂಗಮನಾಥೆಂದು ಕರಿತಾರೆ ಸೋಬಾನವೆ ॥ ೫ ॥

ಅಂಗವು ಕೂಡಲ ಲಿಂಗವು ಸಂಗಮ
ಅಂಗಲಿಂಗ ಕೂಡಲು ಕೂಡಲ ಸಂಗಮ ಸೋಬಾನವೇ ॥ ೬ ॥

ಬಸವರ ಕೈಯಾಗ ನ್ಯಾಯದ ತಕ್ಕಡಿ
ತೂಗಿಯೇ ನೋಡ್ಯಾರ ಜಗನ್ಯಾಯ ಸೋಬಾನವೆ ॥ ೭ ॥

ತೂಗಿನೆ ನೋಡ್ಯಾರೆ ಜಗನ್ಯಾಯ ಬಸವಣ್ಣ
ತಕ್ಕಡಿ ತೂಗ್ಯಾರ ಮ್ಯಾಲಕೆಳಗ ಸೋಬಾನವೆ ॥ ೮ ॥

ಹೆಚ್ಚು ಕಡಿಮೆ ತೂಗುವ ತಕ್ಕಡಿ ಒಳಗವರು
ಲಿಂಗವು ಇಟ್ಟು ತೂಗ್ಯಾರೆ ಸೋಬಾನವೆ ॥ ೯ ॥

ಲಿಂಗವು ಇಟ್ಟು ತೂಗ್ಯಾರ ಬಸವಣ್ಣ
ತಕ್ಕಡಿ ತೂಗ್ಯಾದ ಸರಿಜೋಡ ಸೋಬಾನವೆ ॥ ೧೦ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

ಭಕ್ತರಾಗ ಭಕ್ತ ಕಲ್ಯಾಣದ ಬಸವಾ

ಭಕ್ತರಾಗ ಭಕ್ತ ನಮ್ಮ ಕಲ್ಯಾಣದ ಬಸವಾ
ಜಂಗಮ ಪ್ರಿಯನಪ್ಪ ನಿಮ್ಮ ಹಿರಿಮೆ ದೊಡ್ಡದಪ್ಪ ॥ ಪ ॥

ಬಾಗೇವಾಡಿಯಲ್ಲಿ ನೀವು ಜನಸಿರೊ ಬಸವಾ
ಮಾನವ ಕುಲವ ಉದ್ಧಾರ ಮಾಡಿರೊ ಬಸವಾ ॥ ೧ ॥

ಎಂಟ್ವರ್ಷದ ಬಾಲಕ ನೀನು ಮುಂಜಿ ಧಿಕ್ಕಾರ ಮಾಡಿದೆಪ್ಪಾ
ತಾಯಿ ತಂದೆ ಮೀರಿ ಸಂಗಮಕ ಹೋದಿರೆಪ್ಪಾ ॥ ೨ ॥

ಸಂಗಮದ ಅಡಿಯಲ್ಲಿ ಗುರುವಿನ ಪಾದ ಹಿಡಿದೆಪ್ಪಾ
ಪಾದ ಹಿಡಿದು ಸಾಕ್ಷಾತ್ಕಾರ ಪಡದಿಯಪ್ಪಾ ॥ ೩ ॥

ಹಾರಕ್ಕಿ ಹಾರುವಂತೆ ನೀವು ಹಾರುವ ಸಮಯಕ್ಕೆ
ಮಾನವ ಮಗಳಿಗೆ ಕೊರಳಿಗಿ ಹಾಕ್ಯಾರೆಪ್ಪ ॥ ೪ ॥

ಸಂಗಮನಾಥನ ವಾಣಿಯಂತೆ ಕಲ್ಯಾಣಕ್ಕೆ ಬಂದಿರೆಪ್ಪಾ
ಭವಿಬಿಜ್ಜಳನ ಮಂತ್ರಿ ಆಗಿರೆಪ್ಪ ॥ ೫ ॥

ಕಲ್ಯಾಣ ಊರಾಗ ರಾಜನ ಲಿಪಿಯ ಓದಿರೆಪ್ಪಾ
ಸಿಂಹಾಸನ ಅಗಳಿಸಿ ಭಂಡಾರ ತೆಗಿಸಿರಿಯಪ್ಪಾ ॥ ೬ ॥

ಗುರುಲಿಂಗ ಜಂಗಮ ದಾಸೋಹ ನಿತ್ಯ ನಡೆಸಿದಿಯಪ್ಪಾ
ಜಾತಿಯ ಮರೆತು ಎಲ್ಲರನ್ನು ಅಪ್ಪಿಕೊಂಡಿಯಪ್ಪಾ ॥ ೭ ॥

ಚಾಡಿಕೋರರ ಮಾತಕೇಳಿ ಬಿಜ್ಜಳ ಬೈದಾನ ಯಪ್ಪಾ
ಬೈದವರಿಗಿ ಸರಿಯಾಗಿ ಬುದ್ಧಿ ಹೇಳಿದಿ ಯಪ್ಪಾ ॥ ೮ ॥

ಕಲ್ಯಾಣ ಬಿಟ್ಟು ಬಿಜ್ಜಳ ನಿನಗ ಹೋಗಂದಾನಪ್ಪಾ
ಅರಸನ ಮಾತಿಗೆ ಎರಡ್ಯಾಕೆಂದು ಸಂಗಮಕ ಹೋದಿಯಪ್ಪಾ ॥ ೯ ॥

ಕಲ್ಯಾಣ ಬಿಟ್ಟರಿ ಸಂಗಮಕ್ಕೆ ಹೋಗಿರಿಯಪ್ಪಾ
ಸಂಗಮ ದೇವರಲ್ಲಿ ನೀವು ಒಂದಾದಿರಿಯಪ್ಪಾ ॥ ೧೦ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

ಗುಡ್ಡಾ ಹೋದ ಮೇಲ ಬಿತ್ತ ಕೊಡ್ಡ

ದೊಡ್ಡ ಮನುಷ್ಯಾನ ಬಲ್ಲಿ ಒಬ್ಬ ಧಡ್ಡ
ಧಡ್ಡನ ಮಾತು ಕೇಳಿದವ ಎಡ್ಡ
ಎಡ್ಡನ ಮಾತು ಕೇಳಿ ಕಳಕೊಂಡ ಗುಡ್ಡ
ಗುಡ್ಡಾ ಹೋದ ಮೇಲ ಬಿತ್ತ ಕೊಡ್ಡ ॥ ಪ ॥

ಕೊಂಡಣ್ಣ ಮಂಚಣ್ಣ ಇಬ್ಬರೂ ಕೂಡಿ
ಬಿಜ್ಜಳಗ ಹೇಳ್ಯಾರೋ ಇಲ್ಲದೊಂದು ಚಾಡಿ
ಬಸವಣ್ಣಗ ಕೊಟ್ಟಿದ್ದಿ ಕೆಲಸ
ಕೆಲಸಮಾಡಿ ಬಿಟ್ಟಾನವ ಹೊಲಸ
ಹೊಲಸ ಆದಲ್ಲಿ ಉಳಿಯಲ್ಲ ದಿನಸ
ದಿನಸ ಕಳಕೋಬ್ಯಾಡ ರಾಜಾ ನೀನ ॥ ೧ ॥

ಸರ್ವ ಜಾತಿಗಿ ಹಿಡಿದು ಕಟ್ಟ್ಯಾನೊ ಲಿಂಗ
ಸರ್ವ ಚಾಮರಾಜ ತಾನೇ ಇದ್ಹಾಂಗ
ಒಂದು ಲಕ್ಷ ತೊಂಬತ್ತಾರು ಸಾವಿರ
ಅವನ ಪಂಕ್ತಿಗೆ ಬೇಕು ಜಂಗಮರು
ಲೆಕ್ಕವಿಲ್ಲದೆ ಖರ್ಚು ಮಾಡುತಾನ
ರೊಕ್ಕ ತೆಕ್ಕೊಂಡು ಹೋಗುತಾನ ಮನಿಗಾ ॥ ೨ ॥

ಬಿಜ್ಜಳಂಕ ಕರೆದು ಬಸವಗ ಹೇಳ್ಯಾರ
ಬಿಟ್ಟು ಹೋಗೋ ನೀ ನಮ್ಮ ಸರದ
ಖಾತಾ ತೆಗೆದು ನೋಡ್ತಾನ ಆಮ್ಯಾಲ
ಬಸವಣ್ಣ ಮಾಡಿಲ್ಲೇನು ಚುಕುತಾ
ಮನಸ್ಸಿಗಿ ಆಗ್ಯಾದ ಬಹಳ ದುಃಖ
ಅಷ್ಟರಾಗ ಮುಗದಾದ ಎಲ್ಲಾ ಬಹಳ ॥ ೩ ॥

ದುಷ್ಟರ ಮಾತು ಕೇಳಿ ಬಸವಣ್ಣಗ ಬಯ್ದರ
ಕಳಕೊಂಡು ಕುಂತ ಎಲ್ಲಾ ಐಶ್ವರ್ಯ
ಬಿಟ್ಟು ಹೊಂಟಾರೋ ಕಲ್ಯಾಣ ಪುರವಾ
ಸುಟ್ಟ ಹೋಗ್ಯಾರೋ ಬಿಜ್ಜಳ ಕೊಂಡಿ ಮಂಚಣ್ಣ
ಕಹಿ ಗುಣ ಒಳ್ಳೆದಲ್ಲೊ ಮಾನವ
ಕಹಿ ಗುಣ ಬಿಟ್ಟವರೆ ಆಗ್ಯಾರ ಶರಣ ॥ ೪ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೇನ, ಮಹಾದೇವಿ ಕುಂಬಾರ

***

ಬಸವಣ್ಣನ ಧನಿಚಂದ ಬಸವಣ್ಣನ ನುಡಿಚಂದ

ಬಸವಣ್ಣನ ಧನಿಚಂದ ಬಸವಣ್ಣನ ನುಡಿಚಂದ ।
ಬಸವಣ್ಣನ ಹಾಡ ಭವ ಛಂದ ಬಸವಣ್ಣ ॥ ಪ ॥
ನಮ್ಮವ್ವ ನೀಲವ್ವ ನಮ್ಮಪ್ಪ ಬಸವಣ್ಣ ।
ಬಂಧು ಬಳಗೆಲ್ಲ ಶಿವಶರಣರೆ ಬಸವಣ್ಣ ॥ ಅ.ಪ ॥

ಎಂತಹದೆ ಕಲಬುರ್ಗಿ ನಿಂತಾದ ನೀರಿನ ।
ತಾರಿಗಿ ತಂತಿ ಬಿಗಸ್ಯಾರ ಬಸವಣ್ಣ
ತಾರಿಗಿ ತಂತಿ ಬಿಗಸ್ಯಾರ ಬಸವಣ್ಣ
ಸಂಪತ್ತಿನವರು ಶಿವಶರಣರೆ ಬಸವಣ್ಣ ॥ ೧ ॥

ಕಂಚಿನ ಕೈತಾಳ ಮಿಂಚಿನ ನಂದಿಕೋಲ ।
ಸಂತೃಪ್ತಿಯವರ ಶಿವಶರಣರೆ ಬಸವಣ್ಣ
ಸಂತೃಪ್ತಿಯವರು ಶರಣರ ಗುಡಿಯ ।
ತಂಪೊತ್ತಿಲೇ ತೇರ ಎಳದಾರ ಬಸವಣ್ಣ ॥ ೨ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ
ಶೀಲಾ ಕೋಣೇನ, ಮಹಾದೇವಿ ಕುಂಬಾರ

***

ತಂದೆ ಬಂದೆಯಾ ಶಿವನೆ ಇಂದು ಬಂದೆಯಾ

ತಂದೆ ಬಂದೆಯಾ ಶಿವನೆ ಇಂದು ಬಂದೆಯಾ
ಧರೆಗೆ ಕುಂದಿಹೋದ ಜ್ಯೋತಿಗಳನ್ನು
ಬೆಳಗಲು ಬಂದೆಯಾ ॥ ಪ ॥

ದೇವರನ್ನು ನಂಬಿ ನಾವು ಹಿಂದುಗಳೂ
ಎಂದುಕೊಂಡು ಭಾವದಿಂದ ಮೂರ್ತಿಗಳನು
ಪೂಜಿಸುವುದನ್ನು ಕಂಡು ॥ ೧ ॥

ಮೋಹಪಾಶದಲ್ಲಿ ಬಿದ್ದು ಹೇಯವಾದ
ಕೃತಿಗಳ ಮಾಡಿ ಮೇಲೆ ಮೇಲೆ ಮೋಕ್ಷವೆಂದು
ಕೂಗುತಿಹುದ ಕಂಡು ನೀನು ॥ ೨ ॥

ಮಣ್ಣಿನಲ್ಲಿ ಆಡುವಂಥ ಸಣ್ಣ ಮಕ್ಕಳನ್ನು
ಕಂಡು ಮೋಹದಿಂದ ತಾಯಿ ಬಂದು
ಅಪ್ಪಿಕೊಳ್ಳುವಂತೆ ನೀನು ॥ ೩ ॥

ಪ್ರೇಮ ಸಾಗರನು ನೀನು ಜ್ಞಾನ ಸಾಗರನು
ನೀನು ಕರುಣಾಸಾಗರನು ನೀನು ಎಂದು
ಎಮಗೆ ತಿಳಿಸಲು ನೀನು ॥ ೪ ॥

ಅಂಧಕಾರದಲ್ಲಿ ಬಿದ್ದ ನೊಂದ ಮಕ್ಕಳನ್ನು
ಕಂಡು ಕಂದರಿವರು ಎಂದು ಪ್ರೇಮದಿ
ಕರೆದುಕೊಂಡು ಹೋಗಲು ನೀನು ॥ ೫ ॥

ಇದೆ ನಮಗೆ ಸ್ವರ್ಗವೆಂದು ಇದೆ ಬಹು
ಜನ್ಮ ಪುಣ್ಯವೆಂದು ಹೇಳುತಿರುವ
ಜನರು ಕಂಡು ॥ ೬ ॥

ಪುರುಷೋತ್ತಮರಾಗಲು ನಾವು ರಾಜಯೋಗ
ಕಲಿಸಲು ನೀನು ಅಳಿದು ಹೋದ ನಾಡಸಿರಿಯ
ಮರಳಿ ನೀನು ನಿರ್ಮಿಸಲು ॥ ೭ ॥

ಏಣಿಯನ್ನು ಇಳಿದು ನಾವು ಗುಣಗಳನ್ನು ಕಲಿತು
ಕೊಂಡು ಅಳುವುದೇಕೆ ಹಗಲು ಇರುಳು
ನನ್ನ ನೀಗ ನೆನೆಯರೆಂದು ॥ ೮ ॥

– ಶ್ರೀಮತಿ ಪಾರ್ವತಿ ಜೇಮಶೆಟ್ಟಿ ಹಾಗೂ
ಅನ್ನಪೂರ್ಣ ದೇವಣಿ, ಸರ್ವಮಂಗಳಾ ಜೋಗೂರ

***

ಬಸವನ ನೆನದೇನ ದಶಪಂಚಮುಕದವನ

ಬಸವನ ನೆನದೇನ ದಶಪಂಚಮುಕದವನ
ಎಸಳ ಕ್ಯಾದಿಗೆಳ ಕೋಡ್ಯಾಳಗುಂಟ
ಅಣಿಸುದ್ದ ಅಣಿಬಾವ ಅಣಿಯ ಬಾವನಸುದ್ದ
ನಾಕು ಪಾದದ ನಡುವೆ ಇಳಿಬುಟ್ಟಾನ ಬಾಲವು
ಬಸವ ಬಂದಾನ ಬನ್ನಿರೆ

ರಾಜ್ಯಕ ದೊಡ್ಡ ರುಶಿಯ ಬಂದಾನ ಬನ್ನಿರೆ
ಬಸವ ಬಂದಾನ ಬನ್ನಿರೆ
ರಾಜ್ಯಕ ದೊಡ್ಡ ರುಶಿಯ ಬಂದಾನ ಬನ್ನಿರೆ ॥ ೧ ॥

ಕರಿಯನ್ನ ಗೊಂಗಾಡಿ ಮುರದ ಗದ್ದಿಗಿ ಮಾಡಿ
ಕರಕಿಯ ಪತ್ತುರಿ ತಳತನಕ ಏರಿಸಿ
ಬಿಲ್ಲಾನಪತ್ತುರಿ ಬೇಗನ ಏರಿಸಿ
ಅವಳದ ಆರತಿ ಅಣ್ಣನಿಗೆ ಬೆಳಗೇವ
ಬೆಲ್ಲದ ಆರತಿ ಬೇಗನೆ ಬೇಳಗೇವ
ಕರಪೂರದಾರತಿ ಅಪ್ಪ ನಿನಗ ಬೆಳಗೇವ
ಮುತ್ತಿನ ಆರತಿ ಮುಕ್ಕಣ್ಣನಿಗೆ ಬೆಳಗೇವ
ಬಸವ ಬಂದಾನ ಬನ್ನಿರೆ
ರಾಜ್ಯಕ ದೊಡ್ಡ ರುಶಿಯ ಬಂದಾನ ಬನ್ನಿರೆ
ಬಸವ ಬಂದಾನ ಬನ್ನಿರೆ
ರಾಜ್ಯಕ ದೊಡ್ಡ ರುಶಿಯ ಬಂದಾನ ಬನ್ನಿರೆ ॥ ೨ ॥

ಎಲ್ಲ ದೇವರಿಗಿನ್ನ ನಾನು ಬಲ್ಲಿದನಂದ
ಕಲ್ಲು ಶಿಲೆದಾಗ ತಾ ಒಡದ ಮೂಡ್ಯಾನ
ಶಿಶುವಿಗೆ ನೀರೆಂದ ಅಸಿವಿಗೆ ಆಲೆಂದ
ಉಟ್ಟಿದ ಮಕ್ಕಳಿಗೆ ಅರಬಟ್ಟಲಾಲೆಂದ
ಮುಪ್ಪಾನ ಮುದುಕರಿಗೆ ಮೂರೊತ್ತಿನನ್ನಂದ
ಬಸವ ಬಂದಾನ ಬನ್ನಿರೆ
ರಾಜ್ಯಕ ದೊಡ್ಡ ರುಶಿಯ ಬಂದಾನ ಬನ್ನಿರೆ
ಬಸವ ಬಂದಾನ ಬನ್ನಿರೆ
ರಾಜ್ಯಕ ದೊಡ್ಡ ರುಶಿಯ ಬಂದಾನ ಬನ್ನಿರೆ ॥ ೩ ॥

ಜ್ಯೋತಿಯ ಕಲ್ಲೊಳಗ ಆತೊಡದ ಮೂಡ್ಯಾನ
ಆಕಾಶ ಮೂರುತಿ ಗಂಟಿಗಾಲಂಬುತ
ಕಂಕು ಗೋರ್‍ಯಾಡುತ ಎಂಟೇಳ ಕೈಲಾಸ ಗಡ ಗಡ ನಡುಗುತ
ಬಸವ ಬಂದಾನ ಬನ್ನಿರೆ
ರಾಜ್ಯಕ ದೊಡ್ಡ ರುಶಿಯ ಬಂದಾನ ಬನ್ನಿರೆ
ಬಸವ ಬಂದಾನ ಬನ್ನಿರೆ
ರಾಜ್ಯಕ ದೊಡ್ಡ ರಾಶಿಯ ಬಂದಾನ ಬನ್ನಿರೆ ॥ ೪ ॥

ಆಚೆಕಾಲಿಗಾರ ಇಚೆಕಾಲಿಗೆ ಜಂಗ
ಕಾಸುಂಡ ಕಾರಾಳ ಕೈಯಲ್ಲಿ ಗೋಪಾಳ
ಮುರಿಗಿ ಬತ್ತವನಿಡದ
ಅಕ್ಕನಾಗಮ್ಮ ನಿನ್ನ ವತ್ತುಸಲುವೇನೆಂದ
ಬಸವ ಬಂದಾನ ಬನ್ನಿರೆ
ರಾಜ್ಯಕ ದೊಡ್ಡ ರುಶಿಯ ಬಂದಾನ ಬನ್ನಿರೆ
ಬಸವ ಬಂದಾನ ಬನ್ನಿರೆ
ರಾಜ್ಯಕ ದೊಡ್ಡ ರುಶಿಯ ಬಂದಾನ ಬನ್ನಿರೆ ॥ ೫ ॥

ಕೃತಿ: ನಮ್ಮ ಕನ್ನಾಡ ಪ್ರೇಮದ ಜೋತಿ

***

ಅಣ್ಣ ಕಾಯಕ ಮಾಡಣ್ಣ

ಅಣ್ಣಾ ಕಾಯಕ ಮಾಡಣ್ಣ ಅಣ್ಣ ಕಾಯಕ ಮಾಡಣ್ಣ
ಕಾಯಕ ಮಾಡಿದರೆ ಕೈಲಾಸ ದೊರತದೋ ಹೇಳ್ಯಾರೋ ಬಸವಣ್ಣ
ಕಾಯಕ ಮಾಡಣ್ಣ ಅಣ್ಣಾ ಕಾಯಕ ಮಾಡಣ್ಣ ॥ ೧ ॥

ಅಣ್ಣಾ ಭಕ್ತಿಲಿ ಬಾರಣ್ಣಾ ಅಣ್ಣಾ ಭಕ್ತಿಲಿ ಬಾರಣ್ಣ
ಭಕ್ತಿಲಿ ಬಂದರೆ ಶಕ್ತಿಯ ಕುಡುತಾರ ಹೇಳ್ಯಾರೋ ಬಸವಣ್ಣ
ಕಾಯಕ ಮಾಡಣ್ಣಾ ಅಣ್ಣಾ ಕಾಯಕ ಮಾಡಣ್ಣ ॥ ೨ ॥

ಅಣ್ಣಾ ವ್ಯಕ್ತಿಲಿ ಬಾರಣ್ಣ ಅಣ್ಣಾ ವ್ಯಕ್ತಿಲಿ ಬಾರಣ್ಣ
ವ್ಯಕ್ತಿಲಿ ಬಂದರ ಮುಕ್ತಿಯ ದೊರತದೋ ಹೇಳ್ಯಾರೋ ಬಸವಣ್ಣ
ಕಾಯಕ ಮಾಡಣ್ಣ ಅಣ್ಣಾ ಕಾಯಕ ಮಾಡಣ್ಣ ॥ ೩ ॥

ನಮ್ಮ ಬಸವಣ್ಣ ನಮ್ಮಪ್ಪ ಅವ್ವ ನೀಲವ್ವ ನಮ್ಮವ್ವ
ಎಲ್ಲೋರ ಮ್ಯಾಲೆ ಅಕ್ಕ ನಾಗಮ್ಮ ಹೇಳ್ಯಾರೋ ಬಸವಣ್ಣ
ಕಾಯಕ ಮಾಡಣ್ಣ ಅಣ್ಣಾ ಕಾಯಕ ಮಾಡಣ್ಣ ॥ ೪ ॥

ಕಾಯಕ ಮಾಡಿದರೆ ಕೈಲಾಸ ದೊರಿತಾದ
ಹೇಳ್ಯಾರೋ ಬಸವಣ್ಣ
ಕಾಯಕ ಮಾಡಣ್ಣ ಅಣ್ಣಾ ಕಾಯಕ ಮಾಡಣ್ಣ ॥ ೫ ॥

– ಶ್ರೀಮತಿ ಭಾಗಮ್ಮ ಹಾಗೂ ಗೌರಮ್ಮ ಗೋರ್ಟಾ(ಬಿ)

***

ಜಯ ಬಸವೇಶಾ

ಜಯ ಬಸವೇಶಾ ಭಕ್ತಿಯ ಕೋಶಾ । ಹೇ ಜಗದೀಶಾ
ನಮೋ ನಮೋ ಭಾರತ ಜ್ಯೋತಿ ।
ಕಾರಣ ಪುರಷನೇ ಹೇ ಜಗದೀಶಾ ॥ ಪ ॥

ಕಾಯಕವೇ ಕೈಲಾಸವೆಂದು ಕಾಯಕ ತತ್ವ ಬೀರಿ ।
ಬಾಳೀಗೆ ಬೆಳಕನು ಕೊಡುವುದು ಎಂದು ಮೇಲು ಕೀಳುಗಳಿಲ್ಲವು ಎಂದು ।
ಸಮತಾವಾದೀ ನೀ ಸಮತಾವಾದಿ ನೀನೇ ಜಗದೀ ದೇವ ॥ ೧ ॥

ದಯವೇ ಧರ್ಮದ ಮೂಲವೆಂದು । ಜನತಾ ಸೇವೆಯಗೈದು
ಕಿಂಕರನಾದವ ಶಂಕರನೆಂದು । ಸಾರಿ ಸಾರಿ ಪೇಳಿದೆ ತಂದೆ ।
ಕರುಣಾನಿಧಿಯೇ ಕರುಣಾನಿಧಿಯೇ ವಚನದ ಖಣಿಯೇ ॥ ೨ ॥

ಹಾಲಿನ ತೊರೆಯೆ ಬೆಲ್ಲದ ಕೆಸರೆ ಸಕ್ಕರೆ ಮಳಲು ನೀ
ನಿನ್ನಯ ಮರೆತು ಕೆಟ್ಟೆವಲ್ಲಾ । ಕನ್ನಡವೆಂದರೆ ನೀನೇಯಲ್ಲ ।
ಕನ್ನಡ ಕವಿಯೆ ಕನ್ನಡ ಕವಿಯೆ ಭಾಗ್ಯದ ರವಿಯೆ ॥ ೩ ॥

ಕನ್ನಡ ನುಡಿಯಲ್ಲಿ ಉಸಿರನೆ ತುಂಬಿ । ಕ್ರಾಂತಿಯ ಕಹಳೆಯನೂದಿ
ಕನ್ನಡಿಗರಿಗೆ ದಾರಿಯ ತೋರಿ । ಕನ್ನಡ ದೇವಿಯ ಸೇವೆಯ ಗೈದ ।
ಕನ್ನಡ ಕವಿಯೆ ಕನ್ನಡ ಕವಿಯೆ ಭಾಗ್ಯದ ರವಿಯೇ ॥ ೪ ॥

ಹೊಲೆ ಹೊಲೆಯರ ಮನೆಯಲ್ಲಿ । ಕೈ ಕೂಲಿಯನು ಮಾಡಿ
ಸ್ವಾರ್ಥ ಬಿಟ್ಟು ಜನತೆಯ ನೋಡಿ । ಮರಮರುಗಿದ ಮಂತ್ರಿಯು ನೀನೇ ।
ಕನ್ನಡ ರನ್ನ ಕನ್ನಡ ರನ್ನ ನೀ ಬಸವಣ್ಣಾ ॥ ೫ ॥

– ಶ್ರೀಮತಿ ಪಾರ್ವತಿ ಜೆಮಶೆಟ್ಟಿ ಹಾಗೂ
ಅನ್ನಪೂರ್ಣ ದೇವಣಿ, ಸರ್ವಮಂಗಳಾ ಜೋಗೂರ

***

ಬಸವ ಪವಾಡ

ಆದಿ ಪರಮ ಶಿವನ ಧರ್ಮ ರೂಪನಾಗಿ ಮರೆಯುವರು
ಶಿಲಾದಮನಿಗೆ ಕೋಮರನಾಗಿ ನಂದಿನಾಮ ಶೋಬಿಸೆ
ಹಿಂಗ ಆದಿ ಬಹು ಭಕ್ತಿ ಮಾಡುತಿರಲು ಕೇಳಿ ಗಣವರು
ಜಂಗಮ ಆದಿ ಸೈತ್ಯ ಬರುವ ತೃಪ್ತಿ ಬಡಸುತಿರುವ

ಹುಟ್ಟಿದಾಗ ಸಂಗಮೇಶ ದೀಕ್ಷೆ ಹಸಿಗೆ ಲಿಂಗಂ
ಕಟ್ಟಬೇಕೆನಲು ಬಸವ ಬಿಟ್ಟು ಬಾಗೇವಾಡಿಯಂ
ಬರುವ ದಾರಿಯಲ್ಲಿ ನಾಗ ಬಿದ್ದಿರಲು ಬಸವನು
ಅರಿತು ಅಕ್ಕನಾಗ ಬಾರೆಂದು ಕರೆದರು ವೈದರು
ಪರಮ ಸಂಗಮೇಶನಲ್ಲಿ ಇರಲು ಮಂತ್ರಿ ದೇವನು
ತರುಳಲೀಲ ಲೋಚನಿಗೆ ತಂದು ಶರಣ ಮಾಡಿ
ಲಿಂಗ ಧರಿಸಿ ಹಿತವನಾಗಿ ಕಲ್ಯಾಣಕ್ಕೆ ಬಂದಿರು
ತುಂಗಲಿಪಿಯ ಓದಿ ರಾಜ ಕೊಟ್ಟ ಮಂತ್ರಿತನವನು
ಕೆಟ್ಟ ಬಿಜ್ಜಳಾಗೆ ಕುಟ್ಟಿರೆಂದು ಹೇಳಿ ಬ್ರಹ್ಮನು
ಮುಂಚೆ ಬರಲು ತಪಸಿದವರಿಗೆ ಸ್ವರ ಸಾಕ್ಷ ಕೊಡುವಂ
ಕೋರಿ ಜೈನಮತವನೆಂದು ತನ್ನ ಲೀಲೆ ತೋರಿದ
ಮುಟ್ಟಿ ನಿಮಿಷ ಬರುವುದೆಲ್ಲಿ ಸಂಗಮೇಶನಲ್ಲಿಗೆ
ಒಟ್ಟು ಗಣರು ಕೂಡಿ ತಾವು ಹೋದರಾಗ ಉಳುವಿಗೆ
ಗುರುವು ಕರಿಯೇ ಪದವಿ ಗುರುವು ಕರಿಯೇ ಬಸವ ಪದವಿ
ಚಿಂತಿ ರಹಿತ ನೆನೆಸಿದವರಿಗೆ ಮೋಕ್ಷ ಪದವಿ ದೊರೆಯುದು.

– ಶ್ರೀಮತಿ ಪಾರ್ವತಿ ಜೆಮಶೆಟ್ಟಿ ಹಾಗೂ
ಅನ್ನಪೂರ್ಣ ಬೇವಣಿ, ಸರ್ವಮಂಗಳಾ ಜೋಗೂರ

***

ಬಸವಣ್ಣನ ಜಡಿಯ ಮ್ಯಾಲ ಜಂಗಮನುಟ್ಟಿದನೇ (ಸೋಬಾನ ಪದ)

ಬಸವಣ್ಣನ ಜಡಿಯ ಮ್ಯಾಲ ಜಂಗಮ್ಹುಟ್ಟಿದನೇ
ಬಸವಣ್ಣನ ಹಣಿಯೋ ಮ್ಯಾಲ ಹರಿರಾಮ ಹುಟ್ಟಿದನೇ ॥ ಪ ॥

ಪಾಪಿಯ ಜಲುಮಕೆ ಬಂದು ಪಾವನಾಯಿತೋ
ಬಸವಣ್ಣ ಬಂದರ ಬಾಳ ಬಂಗಾರಾಯಿತೋ ॥ ೧ ॥

ಬಸವಣ್ಣನ ಎದಿಯ ಮ್ಯಾಲ ಈಶ್ವರ ಹುಟ್ಟಿದನೇ
ಬಸವಣ್ಣನ ಮೊಳಕಾಲ ಮ್ಯಾಲ ಮಲ್ಲಯ್ಯ ಹುಟ್ಟಿದನೇ । ಪಾಪಿಯ ಜಲುಮಕೆ

ಬಸವಣ್ಣನ ಪಾದದ ಮ್ಯಾಲ ಪರಮಯ್ಯ ಹುಟ್ಟಿದನೋ
ಬಸವಣ್ಣ ಬೆನ್ನ ಮ್ಯಾಲ ಪದ್ಮಯ ಹುಟ್ಟಿದನೋ । ಪಾಪಿಯ ಜಲುಮಕೆ ॥ ೨ ॥

– ಶ್ರೀಮತಿ ಮಹಾನಂದ ಗಂ.ವೀರಪ್ಪ ಸಂಬಾಜಿ

***

ನಮ್ಮಪ್ಪ ಬಸವಣ್ಣ

ನಮ್ಮಪ್ಪ ಬಸವಣ್ಣ ನಮ್ಮವ್ವ ನೀಲಮ್ಮ
ನಮ್ಮ ಬಳಗೆಲ್ಲ ಶಿವಶರಣರ । ಬಸವಣ್ಣನಯ್ಯ ॥ ಪ ॥

ರಾಟಿ ನೂಲಬೇಕು ಬಟ್ಟೆ ನೆಯ್ಯಲಿಬೇಕು
ಕೋಟಿ ಜನರಿಗೆ ಸಲುಯೆಂದ ನಮ್ಮ । ಬಸವಣ್ಣನಯ್ಯ ॥ ೧ ॥

ಲಿಂಗಪೂಜೆಯ ಮಾಡಿ ಸಂಗಮನೋಳು ಕೂಡಿ
ಸಂಗ ಸತ್ಪುರುಷರ ಸಂಗಬೇಕೆಂದ ನಮ್ಮ । ಬಸವಣ್ಣನಯ್ಯ ॥ ೨ ॥

ಬಸವಣ್ಣನ ನಡೆಚೆಂದ ಬಸವಣ್ಣನ ನುಡಿಚೆಂದ
ಬಸವಣ್ಣನ ನಾಮ ಬಲುಚಂದ । ಬಸವಣ್ಣನಯ್ಯ ॥ ೩ ॥

ಪರಪಂಚ ಮಾಡೆಂದು ಪರವಸ್ತು ಬೇಡೆಂದು
ಸ್ವತಂತ್ರ ನುಡಿಗಳು ಬೇಕೆಂದ । ಬಸವಣ್ಣನಯ್ಯ ॥ ೪ ॥

–ಶ್ರೀಮತಿ ಗೌರವ್ವ ಕಾಡಾದಿ

***

ಕುಟ್ಟುವ ಪದ

ಜಾತಿ ಸೂತಕವಿಲ್ಲ ಮುಟ್ಟು ಮೈಲಿಗೆಯಿಲ್ಲ ।
ಮುಡಚಟ್ಟು ಮೊದಲೇ ಇಲ್ಲೆಂದ ಬಸವಣ್ಣನವ್ವ ॥ ಪ ॥

ಲಿಂಗಪೂಜೆಯ ಮಾಡಿ ಸಂಗಮನೊಳು ಕೂಡಿ ।
ಸಂಗ ಸತ್ಪುರುಷರ ಮಾಡೆಂದ ಬಸವಣ್ಣನವ್ವ ॥ ೧ ॥

ವರ್ಣಾಶ್ರಮಗಳನು ಹೊರದೂಡಿರೆನ್ನುತ ।
ಶರಣರ ಮಾರ್ಗ ಪಿಡಿರೆಂದ ಬಸವಣ್ಣನವ್ವ ॥ ೨ ॥

ಮಿಂಡ ಜಂಗಮರನ್ನು ದಂಡಾಳು ಮಾಡ್ಯಾನ ।
ತಂಡ ತಂಡಾಗಿ ಕಳಿಸ್ಯಾನ ಬಸವಣ್ಣನವ್ವ ॥ ೩ ॥

ರಾಟಿ ನೂಲಲುಬೇಕು ಬಟ್ಟೆ ನೇಯಲು ಬೇಕು ।
ಕೋಟಿ ಜನಗಳಿಗೆ ಸಲಹೆಂದ ಬಸವಣ್ಣನವ್ವ ॥ ೪ ॥

ಪರದಾಸ್ಯ ಬೇಡೆಂದ ಪರವಸ್ತು ನೀಗೆಂದ ।
ಸ್ವಾತಂತ್ರ ಜೀವನ ಬೇಕೆಂದ ಬಸವಣ್ಣನವ್ವ ॥ ೫ ॥

ಬಸವನ ನಡೆಚಂದ ಬಸವನ ನುಡಿಚಂದ ।
ಬಸವನ ನಾಡು ಬಲು ಚಂದ ಬಸವಣ್ಣನವ್ವ ॥ ೬ ॥

ನಮ್ಮಪ್ಪ ಬಸವಣ್ಣ ನಮ್ಮವ್ವ ನೀಲಮ್ಮ ।
ನಮ್ಮ ಬಳಗೆಲ್ಲ ಶಿವಶರಣ ಬಸವಣ್ಣನವ ॥ ೭ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

ಸಂಪ್ರದಾಯದ ಹಾಡು ನೀಲಮ್ಮ

ಏನ ಮುತ್ತ ಗುದ್ದಿ ತೊಗೊಂಡು
ತಿದ್ದುತ ಹಸಿಯ ಹೊಯದಾರೆ ।
ತಿದ್ದುತ ಹಸಿಯ ಹೊಯದಾರೆ
ನಾಕಮೂಲಿ ಬರದಾರೆ ಚೆನ್ನಬಸವಣ್ಣ
ಬಸವಣ್ಣ ಬರದಾರೆ ಚೆನ್ನಬಸವಣ್ಣ ॥ ೧ ॥

ಸೀರಿ ಉಡಸಲಿ ಯಾರನ್ನು ಕರಸ್ಯಾರೆ
ಬಸವಣ್ಣನ ಮಡದಿ ಶಿವಶರಣಿ
ನೀಲಮ್ಮಗ ಸೀರಿ ಉಡಸಲ್ಲಿ ಕರಸ್ಯಾರೆ
ಕರಸ್ಯಾರೆ ಸೀರಿ ಉಡಸಲ್ಲಿ ಕರಸ್ಯಾರೆ ॥ ೨ ॥

ಕುಪ್ಪಸ ತೊಡಸಲ್ಲಿ ಯಾರನ್ನ ಕರಸ್ಯಾಗೆ
ಬಸವಣ್ಣನ ಮಡದಿ ಶಿವಶರಣಿ । ಶಿವಶರಣಿ
ಬಸವಣ್ಣನ ಮಡದಿ ಶಿವಶರಣಿ
ನೀಲಮ್ಮಗ ಕುಪ್ಪಸ ತೊಡಸಲ್ಲಿ ಕರಸ್ಯಾರೆ ॥ ೩ ॥

ಅಡಕೆಟು ಭಂಗಾರ ಅರವತ್ತ ವಾಲಿ ಬುಗಡಿ
ಚಂದ್ರಮುಖಿನಂಬ ಅಗಸಾಲ
ಚಂದ್ರಮುಖಿನಂಬ ಅಗಸಾಲ ಮಾಡ್ಯಾರೆ
ಕೂಸೆ ಕ್ವಾರಮನ ಹೊಸ ನತ್ತೆ ॥ ೪ ॥

ಕಾಲೆಸಳ ಎಲ್ಲಿ ಕಾಲೆಸಳ ಪಿಲ್ಲಾ ಎಲ್ಲಿ
ಹ್ವಾದಳದ ಭವಳಿ ಸರ ಎಲ್ಲಿ
ಹ್ವಾದಳದ ಭವಳಿ ಸರವೆಲ್ಲೆ
ಮುತ್ತುಚ್ಚಿದ ವಾಲೆಲ್ಲವ ನಮ್ಮ ಮಗಳಿಗೆ ॥ ೫ ॥

– ಶ್ರೀಮತಿ ತೇಜಮ್ಮ ಗುಂಡಪ್ಪ ಕೊಟಗಾ, ಚಿಟಗುಪ್ಪ

***

ಶ್ರೀ ಮದವೀಯ ಮಾಡಿದರು

ಶ್ರೀ ಮದವೀಯ ಮಾಡಿದರು
ಶ್ರೀ ಬಸ್ವೇಶಗ ಮದವೀಯ ಮಾಡಿದರು ॥ ಪ ॥

ಮದವೀಯ ಮಾಡಿದರು ಭುವನ ಕೈಲಾಸದಲ್ಲಿ
ಲಿಂಗಯ್ಯ ಮದಿಮಗ ಶಿವಶರಣರು ಮುತ್ತೈದೇರು ॥ ೧ ॥

ಕರಕಿ ಕಂಕಣ ಕಟ್ಟಿ ಕನಕ ಭಾಷಿಂಗ ಮಾಡಿ
ಪರಮಾತ್ಮ ಪಾರ್ಬತಿ ಅಕ್ಷತನ್ಹಾಕಿದರು ॥ ೨ ॥

ಮುರುಕ ಬಂಡಿನ ಕಟ್ಟಿ ತಿರುಕ ದಾಸೀಗಿ ಮಾಡಿ
ಲಿಂಗಯ್ಯ ಮದಿಮಗ ಶಿವಶರಣರು ಮುತ್ತೈದೇರು ॥ ೩ ॥

ಮೇಲ ಕುಳೆದವರೆ ಆಟ ನಿಬ್ಬಣದವರೆ
ನಾವೆಲ್ಲ ಶಿವಶರಣಿ ಮುತ್ತೈದೇರೆ ॥ ೪ ॥

– ಶ್ರೀಮತಿ ಸುಜಾತಾ ಬೋಳಗಂಡಿ

***

ಬಸವಣ್ಣ

ಸಮುದ್ರ ದಂಡಿಯಲ್ಲಿ ಕೊರಕೊಂಚಿ ಮರನ್ನುಟ್ಟಿ
ಸಾಲ ಮುತ್ತೈದೇರು ಸೆರಗೊಡ್ಡಿ ಬೇಡ್ಯಾರ
ನಮ್ಮ ರಾಯರ ಹೆಸರು ನಾವೇನ ಬಲ್ಲೇವು ॥ ೧ ॥

ಅತ್ತೆ ನೀಲಮ್ಮ ಚಿಕ್ಕ ಚೆನ್ನಬಸುವಾ
ಹಡದಾ ತಾಯಿ ತಂದಿ ಹಿಡದ್ಹಿಡದು ಕೊಡುವಾಗ
ಮಡಿಉಟ್ಟು ಮಡಿಧರಿಸಿ ಮಾಂಗಲ್ಯ ಕಡ್ಡಿ ಬ್ರಹ್ಮಗಂಟನ್ಹಾಕಿ
ಉಡಿಯ ನಿನ್ನ ಕಂಡು ಧನ್ಯನಾದೆನು ॥ ೨ ॥

– ಶ್ರೀಮತಿ ಲಿಂಗಮ್ಮ ಗಾಂಜಿಗುಡಿ

***

ಬಸವಣ್ಣನ ಪವಾಡ ಮಹಿಮೆ ಹಾಡು

ಬಸವೇಶನ ನಾಮಕಾದೆ ಮರುಳಾ
ಉಲ್ಲಾಸ ಮನದೊಳು ಹಗಲಿರುಳಾ ॥ ಪ ॥

ಅಲ್ಲಮ ಪ್ರಭು ಒಂದಿನ ಬಂದ
ಹಾಲವು ಬೇಡಿದ್ರು ಪ್ಯಾಲೆವ ಒಂದ
ಹಾಲಸಿಗಲಿಲ್ಲೇನುತೆ ಬಂದು ಮರುಳ
ಬಸ್ವಣಪ್ಪ ಕೇಳಿದರು ಆ ಆಳಿನ ಗೋಳ ॥ ೧ ॥

ಬಸ್ವಣಪ್ಪ ಬಂದಿದರು ಊರ ಹೊರಗ
ಸತ್ತ ಆಕಳ ಸ್ವತ ಕಾಣಿ ಎದುರ
ಬೆನ್ನ ಬಡ್ದು ಬಸವ ಎಬ್ಬಿಸಿ ಆಕಳ
ಜೀವ ಪಡಸಿ ಹಾಲ ವಯ್ದಾರ ಹೆಂಥಾ ತರುಳಾ ॥ ೨ ॥

ಮಹಾತ್ಮವ ತೋರಿದರು ಜಗದೊಳಗ
ಜೀತವ ನುಡಿದರ ಸ್ವರ್ಗದೊಳಗ
ನಿಮ್ಮ ನಾಮ ಕಿರಣ ಮಾರ್ಗಸರಳ
ನಮ್ಮ ಸಿದ್ಧ ಭಜನಿ ಕಲ್ಪವೃಕ್ಷ ನೆರಳ ॥ ೩ ॥

– ಶ್ರೀಮತಿ ಕರುಣಾ ವೈಜಿನಾಥ ವಿಶ್ವಕರ್ಮ

***

ಎಂಥದು ಕಲ್ಯಾಣ

ಎಂಥದು ಕಲ್ಯಾಣ ನಿಂತದ ನೀರ ಮ್ಯಾಲ
ತಂತೀಲಿ ತಾರ ಬಿಗುಸ್ಯಾರೆ । ಬಸವಣ್ಣನಯ್ಯ ॥ ಪ ॥

ನೀಲಮ್ಮ ನಮ್ಮ ತಾಯಿ ಬಸವಣ್ಣ ನಮ ತಂದಿ
ಬಂಧು ಜನರೆಲ್ಲ ನಮ್ಮ ಬಳಗ । ಬಸವಣ್ಣನಯ್ಯ ॥ ೧ ॥

ಅಪ್ಪನ ಗುಡಿ ಮ್ಯಾಲ ಹಚ್ಚಂದು ಗುಬ್ಬಿ ಕುಂತು
ಬಿಸಿಲಿಗಿ ಬಾಯಿ ಬಿಡತ್ತಿತ್ತೇ । ಬಸವಣ್ಣನಯ್ಯ ॥ ೨ ॥

ಬಿಸಿಲಿಗಿ ಬಾಯಿ ಬಿಡತ್ತಿತ್ತೋ ಶರಣರ
ಹಸನ್ನಿಲ್ಲದ ಭಾಯಿ ಹೋಡಸ್ಯಾರೇ । ಬಸವಣ್ಣನಯ್ಯ ॥ ೩ ॥

ಬಂಗಾರದ ತಟ್ಟಿ ಮುಚ್ಚಿ ರನ್ನಾದೆ ಗುಳಿ ಎಳಿದು
ಒಳಗೆ ಬಸಪಯ್ಯನ ಶಿವಪೂಜೆ । ಬಸವಣ್ಣನಯ್ಯ ॥ ೪ ॥

ಒಳಗೆನೇ ಬಸಪಯ್ಯನ ಶಿವಪೂಜೆ ಸಾಗಟಿಗೆ
ಆಕಾಶದ ಘಂಟಿ ಘಣಲಂದೆ । ಬಸವಣ್ಣನಯ್ಯ ॥ ೫ ॥

– ಶ್ರೀಮತಿ ಬಸಮ್ಮ ಎಲಗುಂಡಿ

***

ಬಸವಣ್ಣನ ಹಾಡು

ಜಾತಿ ಸೂತಕವಿಲ್ಲ ಮುಟ್ಟು ಮೈಲಿಗೆಯಿಲ್ಲ
ಮುಡಿಚಟ್ಟು ಮೊದಲಿಗೆ ಇಲ್ಲೆಂದನವ್ವಾ । ಬಸವಣ್ಣನವಾ ॥ ಪ ॥

ಲಿಂಗಪೂಜೆಯ ಮಾಡಿ ಸಂಗಮನೊಳು ಕೂಡಿ
ಸಂಗಸತ್ಪುರುಷರ ಮಾಡೆಂದನವ್ವಾ । ಬಸವಣ್ಣನವ್ವಾ ॥ ೧ ॥

ಬಸವನ ನೆನೆಯುತ ಭಸಿತವ ಧರಿಸಲು
ಕುಸುಮ ಶರ ಹರನು ಒಲಿಯುನವ್ವಾ । ಬಸವಣ್ಣನವ್ವಾ ॥ ೨ ॥

ಬೀಳುವ ಗೊಲ್ಲತಿಯ ಹಾಲಿನ ಕೊಡವನು
ಮೇಲಕೆ ದೂರ ಹಿಡಿದಾನವ್ವಾ । ಬಸವಣ್ಣನವ್ವಾ ॥ ೩ ॥

ಅಕ್ಕನಾಗಮ್ಮನ ಚೊಕ್ಕ ಚಿನ್ನಯ್ಯನ
ತಕ್ಕ ಮಹಿಮೆಯನು ತೋರಿದನವ್ವಾ । ಬಸವಣ್ಣನವ್ವಾ ॥ ೪ ॥

ಯಾರಿಗೂ ತಿಳಿಯದ ಮಾರವ್ವೈರಿಯ ಲಿಪಿಯ
ಬಿಜ್ಜಳನ ಸಭೆಯೊಳಗೋದಿದನವ್ವಾ । ಬಸವಣ್ಣನವ್ವಾ ॥ ೫ ॥

ಬರಡು ಆಕಳ ಹಾಲ ಕರೆದು ಜಂಗಮರಿಗುಣಿಸಿ
ಮೆರೆದಾನು ಕಲ್ಯಾಣ ಬಸವೇಶನವ್ವಾ । ಬಸವಣ್ಣನವ್ವಾ ॥ ೬ ॥

ಬಸವನ ನಡೆ ಚಂದ ಬಸವನ ನುಡಿ ಚಂದ
ಬಸವನ ನಾಡು ಬಲು ಚಂದನವ್ವಾ । ಬಸವಣ್ಣನವ್ವಾ ॥ ೭ ॥

ಬಸವ ನಾಮವೆ ಮಂತ್ರ ಬಸವ ನಾಮವೆ ತಂತ್ರ
ಬಸವನೇ ಸೂತ್ರ ಧಾರಕನವ್ವಾ । ಬಸವಣ್ಣನವ್ವಾ ॥ ೮ ॥

ಅಲ್ಲಮನ ಗುರುತವನೆಲ್ಲರಿಗೆ ಮಾಡಿಸಿ
ನಿಲ್ಲದೆ ಜಗವ ಸಲುಹಿದನವ್ವಾ । ಬಸವಣ್ಣನವ್ವಾ ॥ ೯ ॥

ದಿಟ್ಟ ಜಂಗಮಕೆಲ್ಲ ಪೆಟ್ಟಿಗೆ ಹಣವನು
ಕೊಟ್ಟು ಮತ್ತದರಷ್ಟು ತೋರಿಸಿದನವ್ವಾ ಬಸವಣ್ಣನವ್ವಾ ॥ ೧೦ ॥

ರಾಟಿ ನೂಲಲು ಬೇಕು ಬಟ್ಟೆ ನೇಯಲು ಬೇಕು
ಕೋಟಿ ಜನರನು ಸಲುಹೆಂದನವ್ವಾ ಬಸವಣ್ಣನವ್ವಾ ॥ ೧೧ ॥

ನಮ್ಮಪ್ಪ ಬಸವಣ್ಣ ನಮ್ಮವ್ವ ನೀಲಮ್ಮ
ಶರಣರ ಬಳಗವು ನಮ್ಮದವ್ವಾ ಬಸವಣ್ಣನವ್ವಾ ॥ ೧೨ ॥

ಕಾಶಿಯ ಧರಿಸ್ಯಾರ ಕುದುರೆಯನೇರ್ಯಾರ
ಶರಣರು ಹೊರಟಾರ ಉಳವಿಗಿಯವ್ವಾ ಬಸವಣ್ಣನವ್ವಾ ॥ ೧೩ ॥

ಆ ಪದ ಹಾಡುವ ಆ ಪುಣ್ಯವಂತರನು
ಕಾಪಾಡುವವನು ಬಸವಣ್ಣನವ್ವಾ ಬಸವೇಶನವ್ವಾ ॥ ೧೪ ॥

– ಶ್ರೀಮತಿ ಸುಮಿತ್ರಾದೇವಿ ಅಂಗಡಿ

***

ಬಸವ ಭೂಮಿಯ ಮೇಲೆ

ಬಸವ ಭೂಮಿಯ ಮೇಲೆ । ಬಸವಾದಿ ಪ್ರಮಥರಿಂ ।
ವೈಭವದಿ ಮೆರಿಯ ಬೇಕು ।
ಬಿಸಿರಕ್ತ ತರುಣಿಯರು । ಹುರಿದುಂಬಿಸಲ್ಕಿಂದ ।
ರಣಭೇರಿ ಮೊಳಗಬೇಕು ॥ ॥ ಪ ॥

ವಚನಗಳ ಸಿಡಿಲಾಟ । ಕವನಗಳ ಗದ್ದೆರಿಕೆ ।
ಕರ್ನಾಟಕಾಂಬೆಯನ್ನು ಮುದಗೊಳಿಸಬೇಕು ।
ಉಚ ನೀಚಗಳೆಲ್ಲ । ದುರ್ಭಾವ ಬಯಲಾಗಿ ।
ಶಾಂತಿ ಮಳಿ ಗರಿಯಬೇಕು ॥ ॥ ೧ ॥

ದಿಕ್ಕು ದೇಶಗಳಲ್ಲಿ । ವೀರಶೈವರ ಧರ್ಮ ।
ವೈಭವದಿ ಮೆರಿಯ ಬೇಕು ।
ಸೊಕ್ಕಿರುವ ಕ್ಷತ್ರಿಗಳ । ದಿಕ್ಕುಗಾಣದೆ ।
ಬೇಗ ಹೆದರಿ ಗುಹೆ ಸೇರಬೇಕು ॥ ॥ ೨ ॥

ಗುರು ವಿರಕ್ತರ ಕಲಹದಲ್ಲಿ । ಕಾಣದಂತೆ ।
ಕಾನೂನನ್ನು ಸೇರಬೇಕು ।
ಗುರು ವಿರಕ್ತರ ಧರ್ಮ ಕಾಳಗದಲ್ಲಿ ।
ತನುವನೀಡಾಡಬೇಕು ॥ ॥ ೩ ॥

ಕಲ್ಯಾಣ ನಾಡಿನೊಳು । ವೀರ ನಂದೇಶ್ವರರ ।
ಧ್ವಜವು ನಿರ್ಭಯದಿ ಹಾರಾಡಬೇಕು ।
ಎಲ್ಲ ರಾಷ್ಟ್ರಗಳಿಂದೇ ಶಿವ ಶರಣರು ಶರಣಿಯರು ।
ಬಂದಿಲ್ಲಿ ಕೂಡಬೇಕು ॥ ॥ ೪ ॥

ತರುಣ ತರುಣಿಯರೆಲ್ಲ । ಧರ್ಮ ಜಾಗೃತಿಗಾಗಿ ।
ತಂಡ ತಂಡಾಗಿ ಹೊರಡಬೇಕು ।
ಹರನಾಮ ಜೈ ಧ್ವನಿಯು । ಭೂಗಗನ ಮಧ್ಯದಲ್ಲಿ ।
ಝೇಂಕಾರ ಗೈಯಬೇಕು ॥ ೫ ॥

ಎಳೆಯ ಬಾಲಕರೆಲ್ಲ । ಬಸವ ಸಂದೇಶವನ್ನು ।
ಸ್ವರವೆತ್ತಿ ಹೇಳುತಿರಲೇ ಬೇಕು ।
ಇಳಿಯ ಜನರಿಗೆ । ಸನ್ಮಾರ್ಗ ಬೋಧಿಸಲು ।
ಸಿದ್ಧರಾಮರು ಬರಲೇಬೇಕು ॥ ॥ ೬ ॥

ಅಕ್ಕ ಮಹಾದೇವಿಯರ । ವಚನ ಸಾರವನ್ನು ।
ಸೌಖ್ಯದಿ ಸುರಿಯಬೇಕು ।
ಅಕ್ಕ ತಂಗಿಯರೆಲ್ಲ । ಶರಣ ಸಾಹಿತ್ಯವನ್ನು । ಬೇಗದಿಂ
ಕಲಿಯಬೇಕು ॥ ॥ ೭ ॥

ಇನಿತ ಸಿರಿ । ಶರಣರ ನೋಡಿ । ಆನಂದದ
ಹನಿ ಸುರಿಯಬೇಕು ।
ಮನದ ಹಾರೈಕೆ । ಪೂರೈಸಿದೊಡನೆ ।
ಬಯಲಿನೊಳು ಬರೆಯಬೇಕು ॥ ॥ ೮ ॥

ಬಸವ ಭೂಮಿಯ ಮೇಲೆ । ಬಸವಾದಿ ಪ್ರಮಥರಿಂ।
ವೈಭವದಿ ಮೆರಿಯ ಬೇಕು ।
ಬಿಸಿರಕ್ತ ತರುಣಿಯರು । ಹುರದುಂಬಿಸಲ್ಕಿಂದ ।
ರಣಭೇರಿ ಮೊಳಗಬೇಕು ॥ ॥ ೯ ॥

– ಶ್ರೀಮತಿ ಅನ್ನಪೂರ್ಣ ಬ.ಮಠಪತಿ.

***

ಬಾರಯ್ಯ ಬಸವಯ್ಯ

ಬಾರಯ್ಯ ಬಸವಯ್ಯ ಮುಖವ ತೋರಯ್ಯ
ಹಗಲು ಇರುಳು ನಿಮ್ಮ ಧ್ಯಾನ ಮಾಡುವೇನಯ್ಯ ॥ ಪ ॥

ನಾ ನಿನಗಾಗಿ ಕಲ್ಯಾಣಕ್ಹೋಗಿ ।
ಕಲ್ಯಾಣ ಕಡಿಮಠ ಸಿಗಲಿಲ್ಲವಯ್ಯ ಬಾರಯ್ಯ ॥ ೧ ॥

ನಾ ನಿನಗಾಗಿ ಶ್ರೀಶೈಲಕ್ಹೋಗಿ ।
ಶಿವರಾತ್ರಿ ಶಿವಯೋಗಿ ಬೇಡಿಕೊಂಡೆನಯ್ಯ ಬಾರಯ್ಯ ॥ ೨ ॥

ನಾ ನಿನಗಾಗಿ ಇಂಗಳೇಶ್ವರಕ್ಹೋಗಿ ।
ವಚನ ಮಂಟಪ ಕಂಡೇನಯ್ಯ ಬಾರಯ್ಯ ॥ ೩ ॥

ನಾ ನಿನಗಾಗಿ ಬಾಗೇವಾಡಿಗ್ಹೋಗಿ ।
ಬಾಗೇವಾಡಿ ಬಸವನ ನೋಡಿದನಯ್ಯ ಬಾರಯ್ಯ ॥ ೪ ॥

ನಾ ನಿನಗಾಗಿ ಸಂಗಮಕ್ಹೋಗಿ ।
ಸಂಗಮ ನದಿಯಲಿ ಮಿಂದು ಬಂದೆನಯ್ಯ ಬಾರಯ್ಯ ॥ ೫ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

ಶರಣರ ಸುಳಿಗಾಳಿ

ಶರಣರ ಸುಳಿಗಾಳಿ ನೆರಳ ನಮ್ಮನಿ ಮ್ಯಾಲ ॥ ಪ ॥

ಏಳುತ ಬಸವಣ್ಣ ಕೂಡುತಾ ಬಸವಣ್ಣ
ಮತ್ತೊಂದು ಧ್ಯಾನ ನಮಗಿಲ್ಲ ಗುರುವೇ । ಶರಣರ ಸುಳಿಗಾಳಿ
ಮತ್ತೋಂದು ಧ್ಯಾನ ನಮಗಿಲ್ಲ ಬಸವಣ್ಣ
ನಿಮ್ಮ ಪಾದದಲ್ಲಿ ನಮಧ್ಯಾನ ಗುರುವೇ । ಶರಣರ ಸುಳಿಗಾಳಿ ॥ ೧ ॥

ಶರಣ ಬಸವನ ಸ್ಮರಣ್ಯಾಗ ನಾನಿದ್ದೆ
ಸರಹೊತ್ತಿಗೆ ಅರುವಾಗಿ ಗುರುವೇ । ಶರಣರ ಸುಳಿಗಾಳಿ
ಸರಹೊತ್ತಿಗಿ ಅರುವಾಗಿ ಬಸವಣ್ಣನ
ಸ್ಮರಣ್ಯಾಗ ನಮಗ ಬೆಳಕಾಗಿ ಗುರುವೇ । ಶರಣರ ಸುಳಿಗಾಳಿ ॥ ೨ ॥

ಕಲ್ಯಾಣದ ಬಸವಗ ಕಾಲಿಗಿ ನೀರಕೊಡ
ಕುಂಡ್ರಲಾಕ ಹಾಕ ಮಣಿಚೌಕಿ ಗುರುವೇ । ಶರಣರ ಸುಳಿಗಾಳಿ
ಕುಂಡ್ರಲಾಕ ಹಾಕ ಮಣಿಚೌಕಿ ಬಸವಣ್ಣಗ
ಶರಣೆ ನಮ್ಮನಿಗಿ ಶಿವಬಂದ ಗುರುವೇ । ಶರಣರ ಸುಳಿಗಾಳಿ ॥ ೩ ॥

ನಮ್ಮ ಹಂಬಲ ನಿಮಗಾಗಿ ನಿಮ್ಮ ಹಂಬಲ ನಮಗಾಗಿ
ಕಣ್ಣಿಗಿ ನಿದ್ದಿ ಬರವಲ್ದು ಗುರುವೆ । ಶರಣರ ಸುಳಿಗಾಳಿ
ಕಣ್ಣಿಗಿ ನಿದ್ದಿ ಬರವಲ್ದು ಬಸವಣ್ಣ
ಕಣ್ಣ ಮುಂದಿದ್ದಿ ಬೆಳಗಾನ । ಶರಣರ ಸುಳಿಗಾಳಿ ॥ ೪ ॥

ವಜ್ಜರದ ಬಂಗಾರಕ ಒರಿಹಚ್ಚಿ ನೋಡ್ಯಾರ
ಮುದ್ದಿ ಬಂಗಾರದ ಶರಣರು । ಶರಣರ ಸುಳಿಗಾಳಿ
ಮುದ್ದಿನೇ ಬಂಗಾರದ ಶರಣರ ತೂಕವ
ವಜ್ಜರಕ್ಕಿಂತ ವಜನಾಗಿ । ಶರಣರ ಸುಳಿಗಾಳಿ ॥ ೫ ॥

ತ್ರಿಪುರಾಂತ ಕೆರಿಮ್ಯಾಲ ವಿಪರೀತ ಕಂಡೇವು
ಲಿಪಿಯ ಓದ್ಯಾರೆ ಬಸವಣ್ಣ । ಶರಣರ ಸುಳಿಗಾಳಿ
ಲಿಪಿಯ ಓದ್ಯಾರೆ ಬಸವಣ್ಣ ಕಲ್ಯಾಣದ
ಅರ್ಥ ಹೇಳ್ಯಾರೆ ಬಿಜ್ಜಳಗ । ಶರಣರ ಸುಳಿಗಾಳಿ ॥ ೬ ॥

ಹಡದವ್ವ ಪಾರವತಿ ಒಳಗೇನು ಮಾಡುತಿ
ನೋಡುಬಾ ನಮ್ಮ ಬಸವನ ಬಳಗ
ಶರಣರ ಸುಳಿಗಾಳಿ ॥ ೭ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

ಕಲ್ಯಾಣ ನೀ ಮೆಟ್ಟಿ

ಕಲ್ಯಾಣ ನೀ ಮೆಟ್ಟಿ ಮಂಟಪ ನೀ ಕಟ್ಟಿ
ಇಲ್ಲಂತ ಧರಮ ನೀಕೊಟ್ಟಿ । ಬಸವಣ್ಣ
ಕಲ್ಲಿನಾ ದೇವಂತ ಕಿತ್ತಿಟ್ಟಿ ॥ ಪ ॥

ಕಲ್ಲಿನಾ ದೇವರ ಕಿತ್ತಿಟ್ಟ ಬಸವಯ್ಯ
ಬಲ್ಲಂತ ಲಿಂಗ ನೀ ಕೊಟ್ಟಿ । ಅದರಾಗ
ಕೈಲಾಸದ ಹಾದಿ ತಿಳಸಿಟ್ಟಿ ॥ ೧ ॥

ಕಲ್ಲಿನ ದೇವರು ನಮಗೇನು ಕೊಟ್ಟಾತು
ಕಲ್ಲಿಗಿ ಪೂಜಿಸಿ ಕಲ್ಲಾದೆ । ಬಸವಣ್ಣ
ಅಳಿಲಿಲ್ಲ ನಮ್ಮ ಒಳದುಃಖ ॥ ೨ ॥

ಬಲ್ಲಂತ ನುಡಿಕೇಳಿ ಗುಲ್ಲ ಎದ್ದಿತ ನಾಡ
ಸೊಲ್ಲ ತಾ ಎತ್ತಿ ಹಾಡಿತ್ತ । ಬಸವಣ್ಣ
ಝುಲ್ಲಂತ ಡಾರವರ ಒಳ ಹಾದಿ ॥ ೩ ॥

ಕುದ್ದಾ ಕುದಿ ಕುದಿದೆದ್ದು ಬಿದ್ದಾ ಜಂಗುಳಿಯೆದ್ದು
ಗುದ್ಯಾಡಿ ಲೋಕ ಹದಬಂತು । ಹಾರವರ
ಗದ್ದಲದ ಬಾಯಿಗಿ ಮುಳ್ಳಿಟ್ಟು ॥ ೪ ॥

– ಶ್ರೀಮತಿ ಗೌರವ್ವ ಕಾಡಾದಿ

***

ಬಸವೇಶ ನೀನೇ ಬಸರಾಜವ ಧನ್ಯ

ಬಸವೇಶ ನೀನೇ ಬಸರಾಜವ ಧನ್ಯ ॥ ಪ ॥

ನಾಕು ಲೋಕ ತಿರುಗಿ ನಾಗೇಂದ್ರನೆ ಬಂದ
ನಾಗೇಂದ್ರನೆ ಬಂದ ತುರಬಿಗ್ಹೂವ ತಂದ ।
ಬಸವೇಶ ನೀನೇ ಬಸರಾಜವ ಧನ್ಯ ॥ ॥ ೧ ॥

ಮೂರು ಲೋಕ ತಿರುಗಿ ಅರವಿಂದನೇ ಬಂದ ।
ಅರವಿಂದನೇ ಬಂದ ತುರಬಿಗ್ಹೂವ ತಂದ ।
ಬಸವೇಶ ನೀನೇ ಬಸವರಾಜವ ಧನ್ಯ ॥ ೨ ॥

ಇಬ್ಬರ್ಹೆಂಡರ ಕೂಡ ಇರುವದೇನಾನಂದ ।
ಇರುವದೇನಾನಂದ ಶಿವತಾನು ಮೆಚ್ಚಿ ಬಂದ ।
ಬಸವೇಶ ನೀನೇ ಬಸವರಾಜವ ಧನ್ಯ ॥ ೩ ॥

ಪಟ್ಟದ ಮಂಚದ ಮ್ಯಾಲ ಕುಸುಮದ್ಹೂವನೆ ಚೆಲ್ಲಿ ।
ಕುಸುಮದ್ಹೂವನೆ ಚೆಲ್ಲಿ ಪರಮಾತ್ಮ ಅಲ್ಲಿ ।
ಬಸವೇಶ ನೀನೇ ಬಸರಾಜವ ಧನ್ಯ ॥ ೪ ॥

***

ಸೋಸಿ ನಡಿವುದೆ ನಮ್ಮ ಧರ್ಮ

ಅಣ್ಣ ಸಾಧು ಬಸವಣ್ಣನ ನೇಮ ಮುರಿಬ್ಯಾಡರಿ
ಅಣ್ಣ ಮುರಿಬ್ಯಾಡರಿ ನೀವು ನೇಮ ॥ ಪ ॥

ಪುಣ್ಯ ಪುರುಷ ಮಾಡಿಕ್ಯಾನ ಖೂನ
ಸಣ್ಣ ದೊಡ್ಡವರು ನಡೆಯಿರಿ ಜತನ
ಪುಣ್ಯ ಮೂಲವಿದು ಗುರುವಿನ ನುಡಿಯ
ವೀಣಾ ಹಿಡಿದು ನೀವು ಆಡಿರಿ ಖೂನ ॥ ೧ ॥

ಉದಯಕ್ಕೆದ್ದು ಸದಾ ಮಾಡಿರಿ ಸ್ನಾನ
ಮುದದಿ ಮಾಡಿರಿ ಲಿಂಗ ಪೂಜಾ
ತದನಂತರ ಆಗಬೇಕು ಪ್ರಸನ್ನ
ಇದರ ಹಿಂದೆ ನಮ್ಮ ಜನುಮ ಪಾವನ ॥ ೨ ॥

ಹೂವು ಪತ್ರಿ ತರಬೇಕ ದಿನದಿನ
ಮತ್ತೆ ಪೂಜೆ ಮಾಡಬೇಕು ಮಧ್ಯಾಹ್ನ
ಹತ್ತು ಮಂದಿ ಕುಂತು ಮಾಡಿರಿ ಅನುಭವ
ಇದರ ಹಿಂದೆ ನಮ್ಮ ಸ್ವರ್ಗ ಸೋಪಾನ ॥ ೩ ॥

ನಿತ್ಯ ನಿತ್ಯ ಮೂರುಹೊತ್ತು ಪೂಜೆಯು
ಸಂಜೆಗೆ ಮಾಡಬೇಕು ಮತ್ತೆ ಪೂಜೆಯು
ಬಂದವರಿಗೆ ಮಾಡಬೇಕು ದಾನಧರ್ಮವ
ಅದರ ಹಿಂದೆ ನಮ್ಮ ಕಲ್ಯಾಣವು ॥ ೪ ॥

ದೇಶಕ ಹೆಸರಾದ ಹೆಬ್ಬಾಳ ಗ್ರಾಮ ವಾಸ
ನಿರಂತರ ಅದು ಶರಣರ ಧಾಮ
ದಾಸ ತಿಳಿಸಿದನು ಶರಣರಾ ಮರ್ಮ
ಸೋಸಿ ನಡಿವುದೆ ಇದು ನಮ್ಮ ಧರ್ಮ ॥ ೫ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

ಲೋಕ ಕಲ್ಯಾಣ

ಕಲ್ಯಾಣವೆಂಬ ಊರು ನಾಡಿನಾಗ ಇಲ್ಲ
ಅನುಭವ ಮಂಟಪ ಜಗದಾಗ ಇಲ್ಲ
ಬಸವಣ್ಣನಂತವ ಮೂರು ಲೋಕದಾಗ ಇಲ್ಲಾ । ಹೀಂಗಾ
ಮೂವರು ಮಾಡ್ಯಾರ ಲೋಕ ಕಲ್ಯಾಣ ಜೋಜೋ ॥ ೧ ॥

ಬಿಜ್ಜಳಗ ಪ್ರಧಾನಿ ಆಗಿ ತಾ ಬಂದು
ಗಂಗಮ್ಮ ನೀಲಮ್ಮ ಕೈ ತಾ ಹಿಡಿದು
ಅನ್ಯಾಯ ಅತ್ಯಾಚಾರ ಕಣ್ಣಾರೆ ಕಂಡು । ಹೀಂಗಾ
ಬಸವಣ್ಣ ನಡದಾರ ಧರಮದ ಹಾದಿಹಿಡಿದು ಜೋಜೋ ॥ ೨ ॥

ಬಂದವರಿಗಿ ಕರೆದು ಬಲಕ ಕೂಡಿಸಿ
ಬಂದವರಿಗಿ ಕರೆದು ಎಡಕ ಕೂಡಿಸಿ
ಬಂದವರಿಗಿ ಕರೆದು ನಡಬರಕ ಕೂಡಿಸಿ । ಹೀಂಗಾ
ಬಂದವರಿಗಿ ಮುಂದಿನ ಹಾದಿ ತೋರಿಸಿ ಜೋಜೋ ॥ ೩ ॥

ಆ ಜಾತಿ ಈ ಜಾತಿ ಅಂದಿಲ್ಲ ಬಸವಣ್ಣ
ಆ ಮಾತ ಈ ಮಾತ ಆಡಿಲ್ಲ ಬಸವಣ್ಣ
ಹೆಣ್ಣಗಂಡ ಭೇದ ಮಾಡಿಲ್ಲ ಬಸವಣ್ಣ । ಹೀಂಗಾ
ಸತ್ಯವ ನುಡಿದು ಸತ್ಯವಂತನಾದಣ್ಣ ಜೋಜೋ ॥ ೪ ॥

ಅಷ್ಟಾವರಣ ಎಂಬುದು ದ್ಯಾಹ ಅವರಿಗಿ
ಷಟ್ಸ್ಥಲ ಎಂಬುದು ಕಾಲ ಅವರಿಗಿ
ಪಂಚಾಚಾರ ಎಂಬುದು ಕೈಬೆರಳ ಅವರಿಗಿ । ಹೀಂಗಾ
ಆರಕಟ್ಟಿ ಮೂರುಮೆಟ್ಟಿ ಮಹಾದೇವನಾಗಿ ಜೋಜೋ ॥ ೫ ॥

– ಶ್ರೀಮತಿ ಗೌರವ್ವ ಕಾಡಾದಿ

***

ಕಲ್ಯಾಣ ಬಸವಣ್ಣ

ಕಲ್ಯಾಣ ಬಸವಣ್ಣ ಇಲ್ಲಿಗಿ ಬಂದಾರೋ
ಶರಣರ ಸಂಗದಲ್ಲಿ ಇರಬೇಕೇ ನಾರಿ । ಕೋಲೆಣ್ಣ ಕೋಲೆ ॥ ೧ ॥

ಜಾತಿ ಸೂತಕನಿಲ್ಲ ಮುಟ್ಟು ಮೈಲಿಗನಿಲ್ಲ
ಮುಡಚಟ್ಟ ನಮಗ ಮೊದಲಿಲ್ಲೇ ನಾರಿ । ಕೋಲೆಣ್ಣ ಕೋಲೆ ॥ ೨ ॥

ನಾಗರ ಪಂಚಮಿ ಸನಿಹಕ ಬಂದಿತು
ನಾರೇರಲ್ಲ ಕೂಡಿ ಹೋಗಬೇಕೇ ನಾರಿ । ಕೋಲೆಣ್ಣ ಕೋಲೆ ॥ ೩ ॥

ಕಲ್ಲ ನಾಗರ ಕಂಡು ಹಾಲ ನೀ ಎರಿಬೇಡ
ಹಸದವರಿಗೆ ಊಟ ನೀಡಬೇಕೆ ನಾರಿ । ಕೋಲೆಣ್ಣ ಕೋಲೆ ॥ ೪ ॥

ಕಲ್ಯಾಣ ಹುಟ್ಟಾಗ ಎಲ್ಲಿದ್ಯೋ ಬಸವಣ್ಣ
ಹಳ್ಳಿ ಮಂಠೋಳ ತಿಪರಾಂತ ನಾರಿ । ಕೋಲೆಣ್ಣ ಕೋಲೆ ॥ ೫ ॥

ಹಳ್ಳಿನೇ ಮಂಠೋಳ ತಿಪರಾಂತ ಕೆರಿಮ್ಯಾಲ
ಚನ್ನಮಾಡ್ಯಾರೇ ಬಸವಣ್ಣ ನಾರಿ । ಕೋಲೆಣ್ಣ ಕೋಲೆ ॥ ೬ ॥

ಕಲ್ಯಾಣ ಕಟ್ಟಿಮ್ಯಾಲ ಮಲ್ಲಿಗಿ ಗಿಡ ಹುಟ್ಟಿ
ಬಲಕೀಗಿ ಬೇರ ಹರದಾವೇ ನಾರಿ । ಕೋಲೆಣ್ಣ ಕೋಲೆ ॥ ೭ ॥

ಬಲಕೀಗಿ ಎಲ್ಲ ಬೇರಾ ಹರದಾವ ಗೋರಟಿ
ಗೋರಕನಾಥಗ ಸರಾ ನಡದಾವೇ ನಾರಿ । ಕೋಲೆಣ್ಣ ಕೋಲೆ ॥ ೮ ॥

ಗಿಡದಾಗ ಗಿಡ ಹುಟ್ಟಿ ಗಿಡಕ ತೊಟ್ಟಿಲ ಕಟ್ಟಿ
ಚನ್ನಬಸವಣ್ಣ ಹುಟ್ಟಿ ಗುಡಿಕಟ್ಟಿ ನಾರಿ । ಕೋಲೆಣ್ಣ ಕೋಲೆ ॥ ೯ ॥

– ಶ್ರೀಮತಿ ಸರಸ್ವತಿ ಅಕ್ಕಸಾಲಿಗ
– ಶ್ರೀಮತಿ ಈರಮ್ಮ ಅಕ್ಕಸಾಲಿಗ(ಭುಲಾಯಿ ಪದ)

***

ಕಲ್ಯಾಣ ಬಸವಣ್ಣ

ಎಲ್ಲರವ ನಮ್ಮಣ್ಣ ಕಲ್ಯಾಣ ಬಸವಣ್ಣ
ಎಲ್ಲರೆದೆಯೊಳು ತುಂಬಿ ತುಳುಕಿಸಿದ ಹಿರಿಯಣ್ಣ ॥ ೧ ॥

ಬಾಗೇವಾಡಿಯೊಳು ಜನಿಸಿ ಕಲ್ಯಾಣದೊಳು ನೆಲೆಸಿ
ತ್ಯಾಗ ಜೀವನಕಾಗಿ ನೀಲಾಂಬಿಕೆಯನರಸಿ ॥ ೨ ॥

ಅನುಭವ ಮಂಟಪದ ಜಾತಿ ಮತ ಪಂಥಗಳು
ಎಣಿಸದೊಂದೆ ಜಾತಿ ಮಾನವರು ನಾವಾಗಿ ॥ ೩ ॥

ಲೋಕಹಿತಕಾಗಿ ಬಿಜ್ಜಳನಿಗಾಳಾಗಿ
ಭಕ್ತಿಭಂಡಾರವನ ಒಡೆದರದನೆಲ್ಲವನು ॥ ೪ ॥

ಕೈನಿಕೆಯ ಬೋಧಿಸಿದ ನಿಸ್ವಾರ್ಥ ಭಾವದಲಿ
ಮನುಜದೇವನು ನಮ್ಮ ಭಾಗ್ಯದ ಬಸವಣ್ಣ ॥ ೫ ॥

ಲಕ್ಷದಾ ಮೇಲೆ ತೊಂಬತ್ತಾರು ಸಾವಿರದ
ಮೋಕ್ಷ ಜಂಗಮರಿಗೆ ಭಿಕ್ಷವನು ನೀಡುತಲಿ ॥ ೬ ॥

ಕೂಡಲ ಸಂಗಯ್ಯ ರಾಮೇಶರೊಳು ಸೇರಿ
ಪೊಡವಿಯೊಳು ಬೆಳಗಿದರು ವರಭಕ್ತಿ ಜ್ಯೋತಿಯನು ॥ ೭ ॥

– ಕೃತಿ: ಮುತ್ತುಮುತ್ತಿನ ತ್ವಾಟ

***

ಇನ್ನೊಮ್ಮೆ ಹುಟ್ಟಿ ಬಾ ಬಸವಣ್ಣ

ಜನಮನದಲ್ಲಿ ಸದ್ಗುಣ ಬಿತ್ತಲು
ಜನಮನದಲ್ಲಿ ಸದ್ಗುಣ ಬಿತ್ತಲು ಇನ್ನೊಮ್ಮೆ ಹುಟ್ಟಿ ಬಾ ಬಸವಣ್ಣ । ॥ ಪಲ್ಲ॥

ನಡೆದರೆ ಧರ್ಮ ಇವರದೇ ನೇಮ ಕರ್ಮವೆ ಹೆಚ್ಚಿದೆ
ಧರ್ಮದ ದೀಪವ ಆರಿದೆ ಮರುಳರಿಗೆ ನಿಜದಾರಿ ತೋರಲು
ಜನಮನದಲ್ಲಿ ಸದ್ಗುಣ ಬಿತ್ತಲು ಇನ್ನೊಮ್ಮೆ ಹುಟ್ಟಿ ಬಾ ಬಸವಣ್ಣ ॥ ೧ ॥

ಕರ್ಮದ ಕೃತಿಯೆ ಆಗಿದೆ ಹೆಚ್ಚು
ಎಲ್ಲಿ ನೋಡಿದಲ್ಲಿ ಹಣ ಹೊನ್ನಿನ ಹುಚ್ಚು
ಜನಮನದಲ್ಲಿ ಸದ್ಗುಣ ಬಿತ್ತಲು ಇನ್ನೊಮ್ಮೆ ಹುಟ್ಟಿ ಬಾ ಬಸವಣ್ಣ ॥ ೨ ॥

ತುಂಬಿಹೋಗಿದೆ ಪಾಪದ ಕಿಚ್ಚು
ಈ ಕಿಚ್ಚಿನ ಮ್ಯಾಲೆ ಮಳಿಯ ಸುರಿಸು
ಜನಮನದಲ್ಲಿ ಸದ್ಗುಣ ಬಿತ್ತಲು ಇನ್ನೊಮ್ಮೆ ಹುಟ್ಟಿ ಬಾ ಬಸವಣ್ಣ ॥ ೩ ॥

ಮಾಯಾಕೊಂಡದೊಳು ಜನ ಜಾರಿಬಿದ್ದಿದೆ
ಕಾಯಾಜಾಲದೊಳು ನಾಯನಿಂತಿದೆ
ಜನಮನದಲ್ಲಿ ಸದ್ಗುಣ ಬಿತ್ತಲು ಇನ್ನೊಮ್ಮೆ ಹುಟ್ಟಿ ಬಾ ಬಸವಣ್ಣ ॥ ೪ ॥

ಅಕ್ಕ ತಂತಿಯನ್ನನೆ ಹಿರಿಯರು
ಸೊಕ್ಕಿಲಿಂದೆ ನೀ ಮಾನ ಕಾಯಲು
ಜನಮನದಲ್ಲಿ ಸದ್ಗುಣ ಬಿತ್ತಲು ಇನ್ನೊಮ್ಮೆ ಹುಟ್ಟಿ ಬಾ ಬಸವಣ್ಣ ॥ ೫ ॥

ಹೆಂಗಳೆ ಪತಿಗೃಹದೊಳು
ನೀ ಹೀನ ಜಗದೊಳು ಮಾನ ಕಾಯಲು
ಜನಮನದಲ್ಲಿ ಸದ್ಗುಣ ಬಿತ್ತಲು ಇನ್ನೊಮ್ಮೆ ಹುಟ್ಟಿ ಬಾ ಬಸವಣ್ಣ ॥ ೬ ॥

ಶ್ರೀಮಂತಿಕೆ ಭಗವಂತನು ನೆಲಿಸಿದನು
ಮೂಢ ಜನರಿಗೆ ಅಂಧಕಾರ ಕವಿಯಲು
ಜನಮನದೊಳು ...... ಹುಟ್ಟಿ ಬಾ ಬಸವಣ್ಣ ॥ ೭ ॥

– ಕೃತಿ : ಜಾನಪದ ಪರಿಮಳ

***

ಬಸವಯ್ಯ ಹುಟ್ಟಲಿ ಹೊಸ ಕೆರೆ ಕಟ್ಟಲಿ

ಬಸವಯ್ಯ ಹೆಂಡತಿ ಹಸುಳೆಯೋಳೆ ನೀಲಮ್ಮ
ಹಸುವಿನ ಹಾಲ ಶಿಶುವಿಗೆ – ದಾನವ ಮಾಡಿ
ಬಸವಯ್ಯ ನಿನ್ನುಂಡು ಬೆಳಿಯಾಲೊ ॥ ೧ ॥

ಎತ್ತಬಾರದ ಶಂಕು ಸಾವಿರ ಗಂಟೆ
ಸಿಂಗಾರಿಪುರದಿಂದ ಬರುವ್ಹೋನೆ ಬಸವಯ್ಯನು
ಬಂಗಾರನೇರಿ ಬರುತಾನೆ ॥ ೨ ॥

ಅಂಗಾಲು ಅಡಿಯಾದೊ ಮುಂಗಾಲು ಮೇಲಾದೊ
ಸಂಗದ ಬಸವಯ್ಯ ಮನಿಗ್ಯವನೆ – ಈ ಮನೆ
ಕಂದನ ಹೆತ್ತಮ್ಮ ಶರಣೆನ್ನೆ ॥ ೩ ॥

ಆ ಕಾಲು ಅಡಿಯಾದೊ ಈ ಕಾಲು ಮೇಲಾದೊ
ಲೋಕದ ಬಸವಯ್ಯ ಮನಿಗ್ಯವನೆ – ಈ ಮನೆ
ಬಾಲನ ಹೆತ್ತಮ್ಮ ಶರಣೆನ್ನೆ ॥ ೪ ॥

ನೋಡಿರೀ ಬಸವಯ್ನ ಕೇಡಾಳ ಬುದ್ದಿಯ
ಗೋಡೆಯ ದಾಟಿ ಬರುತಾರೆ – ಬಸವಯ್ಯನ
ಕೋಡಿನ ಮೇಲದೆ ಕೈಲಾಸ ॥ ೫ ॥

ನೋಡಿರಿ ಬಸವಯ್ನ ಕೇಡಾಳ ಬುದ್ದಿಯ
ಗೋರ್ಯಾಡುತಾನೆ ಬಣಬೆಯ –ಬೇಡರ ಹುಡುಗ
ಜೋಡುಗುಂಡಲ್ಲಿ ಇಡುತಾನೆ ॥ ೬ ॥

ಕಟ್ಟಾಣಿ ಬಸವಯ್ನ ಇಟ್ಟಾರಲ್ಲೆ ಬ್ಯಾಡರು
ತಟ್ಟಾಡಿ ಬಿದ್ದ ನಡುಗೆರೆಗೆ– ಚುಂಚನಗಿರಿಯ
ಮಠದ ಬಾಗಲಲ್ಲಿ ನೆಲಗೊಂಡ ॥ ೭ ॥

ಬಸವಯ್ಯ ಪುಟ್ಟಲಿ ಹೊಸಕೆರೆ ಕಟ್ಟಲಿ
ರಸಬಾಳೆ ಕಬ್ಬು ಬೆಳಿಯಾಲಿ – ಮಲ್ಲನ ಮೂಲೆ
ಬಸವಯ್ನ ತೇರು ಹರಿಯಾಲಿ ॥ ೮ ॥

– ಕೃತಿ : ಪದವವೇ ನಮ್ಮ ಎದೆಯಲ್ಲಿ

***

ಮಂಗಳಾರುತಿ ಹಾಡು

ಜಯ ಜಯ ಬಸವೇಶ ಭವ ಭಯನಾಶಾ
ಜಯ ಜಯ ಜಯ ಶ್ರೀ ಕಲ್ಯಾಣವಾಸ
ಬೆಳಗುವೆ ಮಂಗಳಾದಾರುತಿಯಾ ॥ ಪ ॥

ದಯವೇ ಧರ್ಮದ ಮೂಲವೆಂದು ಮಾನವಧರ್ಮವ ಸಾರಿ
ಕಾಯದ ಮೋಹದ ಕಳೆಯುತಲಿಹರ ಸಾಧನವನು ತೋರಿ
ಶಿವಭಕ್ತಿಯ ಭಂಡಾರಿ ಜಯ ಬಸವೇಶ ॥ ೧ ॥

ಕನ್ನಡ ಮಾತೆ ಕಳಿಚೇತರಿಸಲು ಸಮತಾಪದವನೀ
ಕನ್ನಡ ನುಡಿ ಉನ್ನತ ಗೊಳಿಸಲು ವಚಾನಾಮೃತ ಸುರಿಸಿದೆ ನೀ
ಕರ್ನಾಟಕ ಭೂ ರಕ್ಷಕ ನೀ ಜಯ ಬಸವೇಶ ॥ ೨ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೇನ, ಮಹಾದೇವಿ ಕುಂಬಾರ

***

ಎಲ್ಲಹನ

ಎಲ್ಲಹನ ಎಲ್ಲಹನ ಭಕ್ತಿ ಮಾಡಿದಾ ಬಸವಣ್ಣ
ಎಲ್ಲಹನ ಎಲ್ಲಹನ ॥ ಪ ॥

ಎಲ್ಲಹನ ಬಸವಕಲ್ಯಾಣದಾಗ ಹಾನ
ಲಿಪಿಯ ಕಲ್ಲ ಓದುವಲ್ಲಿ ಹಾನ
ಅರಸನ ಮುಂದಿನ ದರಬಾರದಾಗ ಹಾನ
ಕಲ್ಯಾಣ ಕೋಟೆಯೊಳಗ ಎಲ್ಲೆಲ್ಲೂ ಹಾನ ॥ ೧ ॥

ಅರಸು ಆನಿ ಕೊಡುವಲ್ಲಿ ಹಾನ
ಬಡವರ ತುತ್ತು ನೀಡುವಲ್ಲಿ ಹಾನ
ಅರಸನ ಆನಿ ಸರಿಬರಲಿಲ್ಲ
ಬಡವರ ತುತ್ತಿಗಿ ಬಾಯಿ ತೆರದಾನ ॥ ೨ ॥

ಹತ್ತು ಎಂಟು ಕೊಡುವಲ್ಲಿ ಹಾನ
ನೂರಾ ಒಂದು ನೀಡಲ್ಲಿ ಹಾನ
ಸಾವಿರ ಮಂದ್ಯಾಗ ಸಾಕ್ಷಾತ್ ಹಾನ
ತಿರುತಿ ನೋಡೋ ನಿನ್ನ ಬಲದಲ್ಲಿ ಹಾನ ॥ ೩ ॥

– ಶ್ರೀಮತಿ ಕಾಡಾದಿ ಗೌರವ್ವ

***

ಬಸವಣ್ಣನ ಹಾಡು

ಮತಿವಂತ ಜನರ ಕೇಳಿ ಸ್ತುತಿಗೊಳ್ಳದಿರಲು ಬೇಡಿ ।
ಗತಿ ಬಸವ ನಮಗೆ ನೋಡಿ ಸ್ತುತಿ ಮಾಡುವಾತನ ಪಾಡಿ ॥ ಪ ॥

ಕಾಯಕವೇ ನಮ್ಮ ಮಂತ್ರ ಜೀವನಕೆ ಸರ್ವ ತಂತ್ರ ।
ನಾಯಕರ ದಾರಿಯಂತ್ರ ಪಾವನ ವಿದೇ ಸ್ವತಂತ್ರ ॥ ೧ ॥

ಕುಲಭೇದ ನಮಗೆ ಇಲ್ಲ ಛಲಶೀಲ ನಮಗೆ ಬೆಲ್ಲ
ಫಲ ಪದವಿ ನಮಗೆ ಸಲ್ಲ ಕಳ ಜನರ ಸಂಗ ಒಲ್ಲ ॥ ೨ ॥

ತನು ಸೇವೆ ಗುರುವಿಗಾಗಿ ಮನ ಸೇವೆ ಲಿಂಗಕ್ಕಾಗಿ ।
ಧನ ಸೇವೆ ಜನತೆಗಾಗಿ ಘನ ಪದವಿ ಪರರ ಸುಖಕ್ಕಾಗಿ ॥ ೩ ॥

ವನಿತೆಯರ ಕುಲಕೆ ಮಾನ ಜನತಾ ಕುಲಕ್ಕೆ ಪ್ರಾಣ ।
ಕಲ್ಯಾಣ ಬಸವ ನಾಮ ಜಗಕ್ಕೆಲ್ಲ ಪ್ರೇಮ ಗಾನ ॥ ೪ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

೨. ಕೋಲು ಪದಗಳು

ಬಸವನ ಜನನ

ಕೋಲು ಎನ್ನ ಕೋಲ ಎಳ್ಳೆ ಕೋಲು ಎನ್ನ ಕೋಲ
ಕೋಲು ಕಲ್ಯಾಣದ ಬಸವನ । ಕೋಲು ಎನ್ನ ಕೋಲ ॥ ಪ ॥

ಗುರುವಿನ ನೆನೆವುತ ಗುಣವಂತನಾಗುತ
ಪ್ರಣವಸ್ವರೂಪನ ಕೊಂಡಾಡುತ । ಕೋಲು ಎನ್ನ ಕೋಲ ॥ ೧ ॥

ಬಸವಣ್ಣನೆಂಬಾತ ವಸುಧೆಗೆ ದೊಡ್ಡಾತ
ಕುಶಲ ಕೋವಿದಗೆ ಪ್ರಖ್ಯಾತ । ಕೋಲು ಎನ್ನ ಕೋಲ ॥ ೨ ॥

ಮನದೊಳು ನೆನೆವುತ ಘನತರ ಪ್ರಭುವು
ಚಿನುಮಯ ಬಸವಣ್ಣೆಂದು ನಿಂತ । ಕೋಲು ಎನ್ನ ಕೋಲ ॥ ೩ ॥

ಆದಿ ಇಲ್ಲದಂದು ಅನಾದಿ ಇಲ್ಲದಂದು
ಮೂದೇವರೊಡೆಯ ತಾ ನಿಂದ । ಕೋಲು ಎನ್ನ ಕೋಲ ॥ ೪ ॥

ಅಂಬರ ರವಿಶಶಿ ಎಂಬತ್ತುನಾಲ್ಕುಗಳು
ಕುಂಭಿನಿ ಜೀವ ನಿರ್ಮಿಸಿದ । ಕೋಲು ಎನ್ನ ಕೋಲ ॥ ೫ ॥

ಬಿತ್ತಿ ಬೆಳೆ ಮಾಡಿದ ಭತ್ತ ಹದಿನೆಂಟನು
ಎತ್ತಾಗಿ ಸಲಹಿದ ಭುವನವನು । ಕೋಲು ಎನ್ನ ಕೋಲ ॥ ೬ ॥

ಮೂರು ಲೋಕದೊಳು ಮಂಡಗಿ ಪುರದೊಳು
ಮಾದರಸ ಮಾದಲಾಂಬಿಕೆಯ । ಕೋಲು ಎನ್ನ ಕೋಲ ॥ ೭ ॥

ಸತಿಪತಿ ಇಬ್ಬರು ಸುತನಿಲ್ಲದೆ ಮರಗುತ
ಸಿತಕಂಠನವಗೆ ತಪಮಾಡಿ । ಕೋಲು ಎನ್ನ ಕೋಲ ॥ ೮ ॥

ಮೆಚ್ಚಿ ತಪಕೆ ಬಂದು ನಿಮ್ಮಿಚ್ಛೆ ಬೇಡೆಂದು
ಸಚ್ಚಿದಾನಂದ ಕೊಡುವೆನೆಂದ । ಕೋಲು ಎನ್ನ ಕೋಲ ॥ ೯ ॥

ಕಾಣುತಲಿ ಶಿವನಿಗೆ ಮಾಣದೆ ಶರಣೆಂದು
ಜಾಣ ಬಸವಣ್ಣ ಪಾರ್ವತಿಯ । ಕೋಲು ಎನ್ನ ಕೋಲ ॥ ೧೦ ॥

ಸುತ ಸುತೆಯಾಗುವಂತೆ ಅತಿ ಚಮತ್ಕಾರದಿ
ಸಲೆ ಮುಕ್ತಿಕೊಡು ಎಮಗೆ ದೇವ । ಕೋಲು ಎನ್ನ ಕೋಲ ॥ ೧೧ ॥

ಕೇಳುತ ಭಾಳಾಕ್ಷ ಹರುಷದಿ ಏಳೆಂದು
ನಾಗಭೂಷಣ ವರವ ಕೊಟ್ಟ । ಕೋಲು ಎನ್ನ ಕೋಲ ॥ ೧೨ ॥

ಬಂದು ಕೈಲಾಸದೊಳು ಆನಂದದಲಿ ಕುಳಿತು
ನಂದಿ ಬಸವಣ್ಣ ಬಾರೆಂದು । ಕೋಲು ಎನ್ನ ಕೋಲ ॥ ೧೩ ॥

ಮಾದಲಾಂಬಿಕೆಗೆ ಮಗನಾಗಿ ಮರ್ತ್ಯದೊಳು
ವಾದವ ಗೆಲಿದು ವಾದಿಗಳ । ಕೋಲು ಎನ್ನ ಕೋಲ ॥ ೧೪ ॥

ಮರ್ತ್ಯಲೋಕದಿ ಹೋಗಿ ಮಾದರಸಗೆ ಮಗನಾಗಿ
ಮರ್ತ್ಯ ಮಾನವರಿಗೆ ಶಿಕ್ಷಿಸೆಂದ । ಕೋಲು ಎನ್ನ ಕೋಲ ॥ ೧೫ ॥

ಕೇಳುತಾಕ್ಷಣ ಬಸವ ಭಾಳಲೋಚನ ಶಿವಗೆ
ಸುಳ್ಳು ಮಾನವರುಂಟೊಲ್ಲೆನೆಂದ । ಕೋಲು ಎನ್ನ ಕೋಲ ॥ ೧೬ ॥

ಒಲ್ಲೆಂಬ ನುಡಿಯಾಕೆ ನಿನ್ನಲ್ಲಿ ನಾನಿರಲು
ಖುಲ್ಲ ಮಾನವರ ಗೊಡವಿಯಿನ್ಯಾಕೆ । ಕೋಲು ಎನ್ನ ಕೋಲ ॥ ೧೭ ॥

ಏಳ್ನೂರು ಪ್ರಮಥರ ಮ್ಯಾಗಳ ಸಹಿತ ಹೋಗಿ
ಜಗಳ ಮಾಡಿಸು ಜೈನರ ಸಮಯದಿ । ಕೋಲು ಎನ್ನ ಕೋಲ ॥ ೧೮ ॥

ಎಷ್ಟು ಹೇಳಿದರೇನು ಸೃಷ್ಟಿಗೀಶ್ವರ ನೀನು
ಮೆಟ್ಟಲಾರನು ಭುವನವನು । ಕೋಲು ಎನ್ನ ಕೋಲ ॥ ೧೯ ॥

ಶಿವ ತಾನು ಗ್ಯಾನಿಸಿದ ಭುವನಕ್ಹೋಗುವನು
ಬಸವನಿವನೆಂದು ಯೋಚಿಸಿದ । ಕೋಲು ಎನ್ನ ಕೋಲ ॥ ೨೦ ॥

ಹುಸಿವರೆ ಬಸವ ಹುಸಿಯ ನುಡಿಯಲ್ಲಿ
ತಾನು ಆಸಮಾಕ್ಷ ಲಿಂಗ ಮಾಯಮಾಡಿ । ಕೋಲು ಎನ್ನ ಕೋಲ ॥ ೨೧ ॥

ಲಿಂಗ ಹೋಗಲು ಮುನಿ ಎನಲು ಅಂಗ ಬಿಡುವೆನೆಂದ
ಕಂಗಳಲ್ಲಿ ನೀರ ಕರೆವುತ ತನ್ನ । ಕೋಲು ಎನ್ನ ಕೋಲ ॥ ೨೨ ॥

ಆಶ್ರಯದೊಳು ಬಂದು ಬಸವ ಕೇಳಲು ಮುನಿಗೆ
ಸೋಸದ್ಯಾತಕೆ ಸುಮ್ಮನೆ ಅಳುವಿ । ಕೋಲು ಎನ್ನ ಕೋಲ ॥ ೨೩ ॥

ಲಿಂಗ್ಗ ಗೋಮುಖ ಕೊಟ್ಟಹನು ಅಂಗದೊಳು ಐದರೆ
ಓಂಗದೇಕೋ ಬಂದು ಕೊಡುವೆ ಲಿಂಗ । ಕೋಲು ಎನ್ನ ಕೋಲ ॥ ೨೪ ॥

ಕೊಟ್ಟವರುಂಟು ಆದರೆ ನಿನ್ನ ಇಷ್ಟಲಿಂಗವ ಕೊಡು
ಬೇಗ ಬಸವೇಶ ದೋಷನಾಶ । ಕೋಲು ಎನ್ನ ಕೋಲ ॥ ೨೫ ॥

ನಿಷ್ಠೆ ನೇಮದ ಮುನಿಗೆ ತಾನಿಷ್ಟಲಿಂಗವ ಕೊಡಲು
ಅಷ್ಟು ಲಿಂಗವೆಲ್ಲವೂ ಆಕಡೆ ಹೋಗಿ । ಕೋಲು ಎನ್ನ ಕೋಲ ॥ ೨೬ ॥

ಧೀರ ಬಸವೇಶ ತಾನು ಸಾರಿ ಕೈಲಾಸ ಹೊಗಲು
ದ್ವಾರಪಾಲಿಪರು ನಿಲ್ಲುನಿಲ್ಲು ಎನಲು । ಕೋಲು ಎನ್ನ ಕೋಲ ॥ ೨೭ ॥

ನಿಲ್ಲು ಎಂಬೊ ಬಗೆಯೇನು ನಿನ್ನಲ್ಲಿ ನಾ ಬೇರೆ
ಮರ್ತ್ಯನೆ ಮಲ್ಲಿಕಾರ್ಜುನನ ಪೂಜಿಪನು । ಕೋಲು ಎನ್ನ ಕೋಲ ॥ ೨೮ ॥

ಶಿವ ತಾನು ಉಸುರದಿದನು ಇವ ಭವಿಯಾದ ಬಸವನು
ಅವನ ಬಿಡಬ್ಯಾಡವೆಂದು ಪೇಳಿದನು । ಕೋಲು ಎನ್ನ ಕೋಲ ॥ ೨೯ ॥

ಭಯ ಎಂಬೋದು ಹೇಳಲು ಇಲ್ಲ ಅವನಲ್ಲಿ
ಲಿಂಗ ಇಲ್ಲ ಭುವನಕ ಇಳಿದು ನಿಂತನಲ್ಲ । ಕೋಲು ಎನ್ನ ಕೋಲ ॥ ೩೦ ॥

ಚಿಂತಿಮಾಡು ಎಂದು ಇವನ ಭ್ರಾಂತಿಬಿಡಿಸು ಎಂದು
ಕಾಮಹರನು ಕರದೊಯ್ದು ಪೇಳಿದ । ಕೋಲು ಎನ್ನ ಕೋಲ ॥ ೩೧ ॥

ಹೇಳಿದ ಮಾತಿಗೆ ನೀ ಸಾಧಿಸಿದ ಕಾರಣದಿ
ಬಹಳ ದುಗುಡವು ತಗಲುವದೆನಲು । ಕೋಲು ಎನ್ನ ಕೋಲ ॥ ೩೨ ॥

ಹಿಂದ ಹೇಳಿದುದು ಹ್ಯಾಂಗ ಅನ್ನುದರೊಳಗ ಹೋಗಿ
ಛಂದ ಪ್ರಮಥರು ಸಹಿತಾಗಿ । ಕೋಲು ಎನ್ನ ಕೋಲ ॥ ೩೩ ॥

ಬೇಗದಿಂದ ಹೋಗು ಎನುತನುರಾಗದಿ ಪೇಳುವೆನು
ತಾ ಹೋಗಿ ಗಂಗೆಯ ಗರ್ಭದಿ । ಕೋಲು ಎನ್ನ ಕೋಲ ॥ ೩೪ ॥

ಬಾಲಿಗೆ ಬಯಕಿ ಹೊಲಿಯಿಂದ ಹೋಗಿ ತಾ
ಮ್ಯಾಲ ತುಂಬಿದ್ದವು ನವಮಾಸ । ಕೋಲು ಎನ್ನ ಕೋಲ ॥ ೩೫ ॥

ಇರುಳು ಏರಿಬರಲು ಸರಳ ಮಂಚದ ಮ್ಯಾಲ
ತರಳೆ ಮಲಗಿರಲು ನಿದ್ರಿಗ್ಯೆದು । ಕೋಲು ಎನ್ನ ಕೋಲ ॥ ೩೬ ॥

ಸಪನ ಬಿದ್ದಂತಾಗಿ ಈ ಪರಿಯ ಬ್ಯಾನಿಯೊಳಗೆ
ಅಪರಿಮಿತದ ಪಿಂಡ ಉದಯಿಸಿ । ಕೋಲು ಎನ್ನ ಕೋಲ ॥ ೩೭ ॥

ದೇವಗಂಗಿ ಬಂದು ಜೀವದಿಂದ ನೀರನೆರೆದು
ಕೇವಲ ಉಮಾಲಕ್ಷ್ಮಿ ಸರಸ್ವತಿಯರು । ಕೋಲು ಎನ್ನ ಕೋಲ ॥ ೩೮ ॥

ದೇವತೆಗಳ ಸತಿಯರು ಬಂದು ಶಿವಾನುಭಾವದಿ ನಿಂದು
ಹೃದಯ ತೊಟ್ಟಿಲದೊಳಗಿರಿಸಿ ನಲಿನಲಿದು । ಕೋಲು ಎನ್ನ ಕೋಲ ॥ ೩೯ ॥

ಬಸವಣ್ಣ ಜೋ ಎನುತ ಬಸವೇಶ ಜೋ ಎನುತ
ಅಸಮಾಕ್ಷನವತಾರ ಜೋ ಎನುತ । ಕೋಲು ಎನ್ನ ಕೋಲ ॥ ೪೦ ॥

ಹಾಡಿ ಹರುಷಬಟ್ಟು ನೋಡಿ ಸಂತೋಷ ಬಟ್ಟು
ಗಾಡ ಮಗ್ಗುಲದಿ ಮಲಗಿಸಿ ಮಾಯವಾಗಿ । ಕೋಲು ಎನ್ನ ಕೋಲ ॥ ೪೧ ॥

ನಿದ್ರೆ ತಿಳಿದು ಎದ್ದು ಭದ್ರಮಂಚದ ಮೇಲೆ
ರುದ್ರನವತಾರ ಶಿಶುವ ಕಂಡು । ಕೋಲು ಎನ್ನ ಕೋಲ ॥ ೪೨ ॥

ಕರೆದು ಪೇಳಲು ರಾಯ ವಾರಣನ ಭಾರದಿ
ಹಂಚಿದ ಬಂಡಿ ಸಕ್ಕರಿಯ । ಕೋಲು ಎನ್ನ ಕೋಲ ॥ ೪೩ ॥

ಗೋದಾನ ಭೂದಾನ ಮಾದಾನ ಬುಧಕಿತ್ತು
ನಾದ ಹೊಯ್ಸಿದ ಭೇರಿ ತಮ್ಮಟವ । ಕೋಲು ಎನ್ನ ಕೋಲ ॥ ೪೪ ॥

ತುಸು ನೋಡಲು ಬೇಗ ಉಸುರಿಲ್ಲ ಬಾಯಿ
ತೆರೆದರೂ ಆರಿಗೂ ಅಳವಲ್ಲ । ಕೋಲು ಎನ್ನ ಕೋಲ ॥ ೪೫ ॥

ಅರಸ ಚಿಂತಿಯ ತಾಳಿ ಕರಸಿ ಪಂಚಾಂಗ ಕೇಳಿ
ಭರದಿ ಆಗ ಸುದ್ದಿ ಅನುವಾಗಿ । ಕೋಲು ಎನ್ನ ಕೋಲ ॥ ೪೬ ॥

ಆ ಸಮಯದಲಿ ಬಂದ ಸಂಗಮದ ಶಿವನತ್ತ
ಧರಿಸಿ ಜಂಗಮರೂಪ ಹೊತ್ತು । ಕೋಲು ಎನ್ನ ಕೋಲ ॥ ೫೭ ॥

ಬಸವಬಾಲನಿಗೆ ಲಿಂಗವಿತ್ತನು ಕರುಣದಲಿ
ಅಸಮಾಕ್ಷನ ದಯದಿ ಬಸವಣ್ಣ । ಕೋಲು ಎನ್ನ ಕೋಲ ॥ ೪೮ ॥

ಹೂವರಳುವಂತೆ ಆಡಿದ ಕಾರಣಿಕನಾಗಿ
ಜಗಕೆಲ್ಲ ಆನಂದ ಸೂಸುತಲಿ । ಕೋಲು ಎನ್ನ ಕೋಲ ॥ ೪೯ ॥

ಬಸವ ಬಸವ ಎನುತಲಿ ತಂದೆತಾಯಿ ಸುಖದಲಿ
ಲೋಲಾಡಿದರು ಶಿವನ ಕರುಣದಲಿ । ಕೋಲು ಎನ್ನ ಕೋಲ ॥ ೫೦ ॥

– ಕೃತಿ: ಜೀವನ ಜೋಕಾಲಿ: ಕೋಲುಪದ

***

ಬಸವಣ್ಣ – ನೀಲಮ್ಮ

ಬಿತ್ತಿದ ಹೊಲದಾಗ ಮುತ್ತು ಸಾಲಿಟ್ಟಂತೆ । ಕೋಲು ಕೋಲೆನ್ನ ಕೋಲ
ನಿಸ್ತ್ರೀ ಪಾರವ್ವ ಬಸರಂತ ರನ್ನದ । ಕೋಲು ಕೋಲೆನ್ನ ಕೋಲ ॥ ೧ ॥

ನಿಸ್ತೀ ಪಾರವ್ವ ಬಸರಂತ ಹಡದಾಳ । ಕೋಲು ಕೋಲೆನ್ನ ಕೋಲ
ಕುರುಗೋಡಾಗೊಬ್ಬ ಶರಣಿಯ ರನ್ನದ । ಕೋಲು ಕೋಲೆನ್ನ ಕೋಲ ॥ ೨ ॥

ಹತ್ತ ತಿಂಗಳ ಕೂಸು ಹೊಸ್ತಲ ಮ್ಯಾಗಾಡುವಾಗ । ಕೋಲ ಕೋಲೆನ್ನ ಕೋಲ
ಮುತ್ತ ತಂದಿಟ್ಟ ನೊಸಲಿಗೆ ಬಸವಣ್ಣ ರನ್ನದ । ಕೋಲು ಕೋಲೆನ್ನ ಕೋಲ ॥ ೩॥

ಬೆಳ್ಳಿ ಬಟ್ಟಲದಾಗ ಒಳ್ಳೆಣ್ಣಿ ತಕ್ಕೊಂಡು । ಕೋಲು ಕೋಲೆನ್ನ ಕೋಲ
ನಿಸ್ತ್ರೀ ನೀಲವ್ವ ತಲಿಗ್ಹಚ್ಚ ರನ್ನದ । ಕೋಲು ಕೋಲೆನ್ನ ಕೋಲ ॥ ೪ ॥

ನಿಸ್ತ್ರೀ ನೀಲವ್ವ ತೆಲಿಗ್ಹಚ್ಚಿ ಎರಿವಾಗ । ಕೋಲು ಕೋಲೆನ್ನ ಕೋಲ
ತಾಯಿ ತಣ್ಣೀರ ತರಹೋದಳ ರನ್ನದ । ಕೋಲು ಕೋಲೆನ್ನ ಕೋಲ ॥ ೫ ॥

ತಾಯಿ ತಣ್ಣೀರ ತರುವ ಹೊತ್ತಿನೊಳಗ । ಕೋಲು ಕೋಲೆನ್ನ ಕೋಲ
ನಿಸ್ತ್ರೀ ನೀಲವ್ನ ಕದ್ದೊಯ್ದರು ರನ್ನದ । ಕೋಲು ಕೋಲೆನ್ನ ಕೋಲ ॥ ೬ ॥

ನಿಸ್ತ್ರೀ ನೀಲವ್ನ ಕದ್ದೊಯ್ದರು ಬಸವಣ್ಣ । ಕೋಲು ಕೋಲೆನ್ನ ಕೋಲ
ತಾಯಿ ಪಾರವ್ವ ಬಂದಾಳ ರನ್ನದ । ಕೋಲು ಕೋಲೆನ್ನ ಕೋಲ ॥ ೭ ॥

ತಾಯಿ ಪಾರವ್ವ ಬಂದು ಹುಡುಕತಾಳ । ಕೋಲು ಕೋಲೆನ್ನ ಕೋಲ
ನಿಸ್ತ್ರೀ ನೀಲವ್ವ ಸಿಗಲಿಲ್ಲ ರನ್ನದ । ಕೋಲು ಕೋಲೆನ್ನ ಕೋಲ ॥ ೮ ॥

ಅಂಗ್ಯೆ ಪಣತಿಯ ಮಾಡಿ ಮುಂಗ್ಯೆ ಬತ್ತಿಯ ಮಾಡಿ । ಕೋಲು ಕೋಲೆನ್ನಕೋಲ
ರಾತ್ರಿ ಬೆಳದಿಂಗಳ್ಹಗಲ್ಮಾಡಿ ಕೋದ ರನ್ನದ । ಕೋಲು ಕೋಲೆನ್ನ ಕೋಲ ॥ ೯ ॥

ರಾತ್ರಿ ಬೆಳದಿಂಗಳ್ಹ ಗಲ್ಮಾಡಿ ಹುಡುಕಿದಳ । ಕೋಲು ಕೋಲೆನ್ನ ಕೋಲ
ನಾರಿ ನೀಲವ್ವ ಸಿಗಲಿಲ್ಲ ರನ್ನದ । ಕೋಲು ಕೋಲೆನ್ನ ಕೋಲ ॥ ೧೦ ॥

ಪೆಟ್ಟೀಗಿ ಒಳಗಿರುವ ಪಟ್ಟೇದಂಚಿನ ಸೀರಿ । ಕೋಲು ಕೋಲೆನ್ನ ಕೋಲ
ನಿಸ್ತ್ರೀ ನೀಲವ್ವ ಉಡಲಿಲ್ಲ ರನ್ನದ । ಕೋಲು ಕೋಲೆನ್ನ ಕೋಲ ॥ ೧೧ ॥

ಹಗ್ಗದ ಮ್ಯಾಲಿರುವ ಮಗ್ಗಿ ಬಣ್ಣದ ಕುಬಸ । ಕೋಲು ಕೋಲೆನ್ನ ಕೋಲ
ನಿಸ್ತ್ರೀ ನೀಲವ್ವ ತೊಡಲಿಲ್ಲ ರನ್ನದ । ಕೋಲು ಕೋಲೆನ್ನ ಕೋಲ ॥ ೧೨ ॥

ಸಂದಕದಾಗಿರುವ ಸರಗಿ ಬಂಗಾರ ಬಳಿಯ । ಕೋಲು ಕೋಲಿನ್ನ ಕೋಲ
ನಿಸ್ತ್ರೀ ನೀಲವ್ವ ಇಡಲಿಲ್ಲ ರನ್ನದ । ಕೋಲು ಕೋಲೆನ್ನ ಕೋಲ ॥ ೧೩ ॥

ಅತ್ತಿಯ ಮರದಡಿಗೆ ಜತ್ತಿಲಿಬ್ಬರು ನಿಂತು । ಕೋಲು ಕೋಲೆನ್ನ ಕೋಲ
ನಿಸ್ತ್ರೀ ನಾ ನಿನಗ ವರನೇನು ರನ್ನದ । ಕೋಲು ಕೋಲೆನ್ನ ಕೋಲ ॥ ೧೪ ॥

ವರನು ಆದರು ಆತು ಸರಿಯು ಆದರು ಆತು । ಕೋಲು ಕೋಲೆನ್ನ ಕೋಲೆನ್ನ
ಹತ್ತ ನಡಿರಯ್ಯ ಶಿವಗಿರಿಯ ರನ್ನದ । ಕೋಲು ಕೋಲೆನ್ನ ಕೋಲ ॥ ೧೫ ॥

ಆಲದ ಮರದಡಿಗೆ ಜೋಡಿಲಿಬ್ಬರು ನಿಂತು । ಕೋಲು ಕೋಲೆನ್ನ ಕೋಲ
ನಾರಿ ನಾ ನಿನಗ ವರನೇನು ರನ್ನದ । ಕೋಲು ಕೋಲೆನ್ನ ಕೋಲ ॥ ೧೬ ॥

ವರನು ಆದರು ಆತು ಸರಿಯು ಆದರ ಆತು । ಕೋಲು ಕೋಲೆನ್ನ ಕೋಲ
ಹತ್ತ ನಡಿರಯ್ಯ ಕೈಲಾಸ ರನ್ನದ । ಕೋಲು ಕೋಲೆನ್ನ ಕೋಲ ॥ ೧೭ ॥

ಪಟ್ಟಿದಂಚಿನ ಸೀರಿ ಗಟ್ಟ್ಯಾಗಿ ಉಡು ಅಂದ । ಕೋಲು ಕೋಲೆನ್ನ ಕೋಲ
ಹತ್ತ ಕೈಲಾಸದ ಪಾವಟಣಿಗಿ ರನ್ನದ । ಕೋಲು ಕೋಲೆನ್ನ ಕೋಲ ॥ ೧೮ ॥

ಸಾದಿನ ಸೀರಿಯ ಸಾಧಿಸಿ ಉಡು ಅಂದ । ಕೋಲು ಕೋಲೆನ್ನ ಕೋಲ
ಹತ್ತ ಶಿವಗಿರಿಯ ಪಾವಟಣಿಗಿ ರನ್ನದ । ಕೋಲ ಕೋಲೆನ್ನ ಕೋಲ ॥ ೧೯ ॥

ಮುಂದ್ಮುಂದ ಬಸವಣ್ಣ ಹಿಂದ್ಹಿಂದ ನೀಲಮ್ಮ । ಕೋಲು ಕೋಲೆನ್ನ ಕೋಲ
ಅಕ್ಕ ನಾಗಮ್ಮ ನೋಡ್ಯಾಳ ಕಡೆಗಣ್ಣ ರನ್ನದ । ಕೋಲು ಕೋಲೆನ್ನ ಕೋಲ॥೨೦ ॥

ಕಕ್ಕಸ್ಹಾಕಿಕೊಂಡು ಬಿಕ್ಕಸಕ್ಹೋಗಿದ್ದೆ । ಕೋಲು ಕೋಲೆನ್ನ ಕೋಲು
ನಿಸ್ತ್ರೀ ಬಂದಾಳ ಬೆನ್ಹಿಂದ ರನ್ನದ । ಕೋಲು ಕೋಲೆನ್ನ ಕೋಲ ॥ ೨೧ ॥

ನಿಸ್ತ್ರೀ ಬಂದಾಳ ಬೆನ್ಹಿಂದ ಅಕ್ಕನಾಗಮ್ಮ । ಕೋಲು ಕೋಲೆನ್ನ ಕೋಲ
ಹಿಂದಕಟ್ಟುವದು ಧರಮೇನು ರನ್ನದ । ಕೋಲು ಕೋಲೆನ್ನ ಕೋಲ ॥ ೨೨ ॥

ಜೋಳಿಗ್ಹಾಕಿಕೊಂಡು ಜೋಳಕ್ಕ ಹೋಗಿದ್ದೆ । ಕೋಲು ಕೋಲೆನ್ನ ಕೋಲ
ನಾರಿ ಬಂದಾಳ ಬೆನ್ಹಿಂದ ರನ್ನದ । ಕೋಲು ಕೋಲೆನ್ನ ಕೋಲ ॥ ೨೩ ॥

ನಾರಿ ಬಂದಾಳ ಬೆನ್ಹಿಂದ ಅಕ್ಕನಾಗಮ್ಮ । ಕೋಲು ಕೋಲೆನ್ನ ಕೋಲ
ಬ್ಯಾಡ ಅನ್ನುವದು ಧರುಮೇನ ರನ್ನದ । ಕೋಲು ಕೋಲೆನ್ನ ಕೋಲ ॥ ೨೪ ॥

ಹೊಸದನ್ನ ಬುಟ್ಟ್ಯಾಗ ಬಸದ ಬಾನಾಗ್ಯೆದು । ಕೋಲು ಕೋಲೆನ್ನ ಕೋಲ
ಹಸಿವಾದರೆ ಬಸವ ಇವ ಸಲಸ ರನ್ನದ । ಕೋಲು ಕೋಲೆನ್ನ ಕೋಲ॥ ೨೫ ॥

ಹಸಿವು ಆದರೆ ಬಸವ ಇವ ಸಲಸ ಹೆಚ್ಚಳದುದ್ದ । ಕೋಲು ಕೋಲೆನ್ನ ಕೋಲ
ಹಸುಮಕ್ಕಳಿಗೆಲ್ಲ ಪರುಷದ ರನ್ನದ । ಕೋಲು ಕೋಲೆನ್ನ ಕೋಲ ॥ ೨೬ ॥

– ಕೃತಿ: ಜೀವನ ಜೋಕಾಲಿ: ಕೋಲುಪದ

***

ಬಸವಣ್ಣನ ಹಾಡು

ನಾವಿಬ್ಬರು ಅಕ್ಕಂತೆಯರು ನೆರಮನಿ ಗೆಳದೇರು
ನಮಗ್ಹಡದ ತಾಯಿದೇರು ಕೋಲೆಣ್ಣಾ ಕೋಲ ॥ ಪ ॥

ನನ್ನ ಆಕಾಳ ಹೆಂಡಿ ಸಾರುಸಿ ಮನಿಗ್ವಾಡಿ ದರಸ್ಯಾರೆ
ವೀಭೂತಿ ಮಾಡಿ ಕೋಲೆಣ್ಣಾ ಕೋಲ ॥ ೧ ॥

ನಾವು ಉಂಬಲಿ ಹಿಂಡಿಯ ಹಾಲ ಮಾಡಿ ಉಂಬಲ್ಲಿ
ಗಿನ್ನಾ ನನ್ನ ಮಗಾ ಬಸವಣ್ಣ ಕೋಲೆಣ್ಣಾ ಕೋಲ ॥ ೨ ॥

ನನ ಮಗಾ ಬಸವಣ್ಣಾ ನಿಮಗಾಗಿ ದುಡೀತಾರ
ನಿಮಗಾಗಿ ದುಡಿತಾರ ಕೋಲೆಣ್ಣಾ ಕೋಲ ॥ ೩ ॥

ಹೊಸದು ನಾರಿನ ಧಾರ ಹಿಡಿದು ಡಬ್ಬಣ ಖೂರ
ಮೂಗಿನಲ್ಲಿ ಪೋಣಿಸ್ಯಾರ ಕೋಲೆಣ್ಣಾ ಕೋಲ ॥ ೪ ॥

ಮೂಗಿನಲ್ಲಿ ಪೋಣಿಸ್ಯಾರ ಹಗ್ಹಚ್ಚಿ ಎಳೆದಾರ
ವ್ಯಾಪಾರಕ ನಡದಾರ ಕೋಲೆಣ್ಣಾ ಕೋಲ ॥ ೫ ॥

ವ್ಯಾಪಾರಕ ನಡದಾರ ಬಸವಣ್ಣನ ಗುಡಿಮುಂದ
ವ್ಯಾಪಾರಕ ನಿಂದ್ರಿಸ್ಯಾರ ಕೋಲೆಣ್ಣಾ ಕೋಲ ॥ ೬ ॥

ಖಟಕರು ಬಂದಾರ ವ್ಯಾಪಾರ ಮಾಡ್ಯಾರ
ಹಗ್ಹಚ್ಚಿ ಎಳೆದಾರ ಕೋಲೆಣ್ಣಾ ಕೋಲ ॥ ೭ ॥

ಹಗ್ಹಚ್ಚಿ ಎಳೆದಾರ ನಾಲ್ಕು ಕಾಲ ಬಿಗದಾರ
ಭೂಮಿಗಿ ಖೆಡವ್ಯಾರ ಕೋಲೆಣ್ಣಾ ಕೋಲ ॥ ೮ ॥

ಒಳ್ಳೆನಂದರ ಬಾಯಿನಿಲ್ಲ ಎದ್ದನೆಂದರ ಶಕ್ತಿಯಿಲ್ಲ
ಬಿಚ್ಚಿ ತೆಗದಾರೆ ತೊಗಲ ಕೋಲೆಣ್ಣಾ ಕೋಲ ॥ ೯ ॥

ಹಾಲು – ಬಾನ ಉಂಡೀದು ಉಪಕಾರ ಉಳಿಯಣಿಲ್ಲ
ಬಿಚ್ಚಿ ತೆಗೆದಾರ ಕೋಲೆಣ್ಣಾ ಕೋಲ ॥ ೧೦ ॥

ಕಾವಿಯ ಉಟ್ಟಿದವರು ಕಾವಿಯ ತೊಟ್ಟಿದವರು
ತಮ್ಮ ಧರ್ಮ ಬಿಟ್ಟಿದಾರು ಕೋಲೆಣ್ಣಾ ಕೋಲ ॥ ೧೧ ॥

ಕಲ್ಯಾಣ ಅಗಸ್ಯಾಗ ಘೋಟು ತೆಗೆಸ್ಯಾರ ಹತ್ತು
ಅದಕ್ಕ ಬಿಗಸ್ಯಾರ ಮುತ್ತು ಕೋಲೆಣ್ಣಾ ಕೋಲ ॥ ೧೨ ॥

ಕ್ವಾಟಿಯ ಅಗಸ್ಯಾಗ ಘೋಟು ತೆಗಸ್ಯಾರೆ ಹತ್ತು
ಅದಕ ಬಿಗುಸ್ಯಾರೆ ಮುತ್ತು ಕೋಲೆಣ್ಣಾ ಕೋಲೆ ॥ ೧೩ ॥

– ಕೃತಿ: ಬೀದರ ಜಿಲ್ಲೆಯ ಬುಲಾಯಿ ಹಾಡುಗಳು

***

ಕಲ್ಯಾಣೆಂಬುದು ಖಟಗೇರಿ ಆಗಲಿ

ಮುತ್ತೈದೆರು ಕೂಡಿರಿ ಕೋಲೆನ್ನ ಕೋಲೆ
ನೀವು ಕುಂತ ಕೇಳಿರಿ ಆಲೋಚನೆ ಮಾಡಿರಿ ॥ ೧ ॥

ಹಿಂಡಿ ಉಂಡಿರಿ ಹಾಲ ಮಾಡಿ ಉಂಡಿರಿ ಗಿಣ್ಣ
ನನ ಮಗ ಬಸವಣ್ಣ । ಕೋಲೆನ್ನ ಕೋಲೆ ॥ ೨ ॥

ನನ್ನ ಆಕಳ ಹೆಂಡಿ ಸಾರಿಸಿರಿ ಮನಿಗ್ವಾಡಿ
ಧರಸಿರಿ ಒಲೆ ಮಾಡಿ । ಕೋಲೆನ್ನ ಕೋಲೆ ॥ ೩ ॥

ನನ ಮಗ ಬಸವಣ್ಣ ನಿಮಗಾಗಿ ದುಡಿತಾನ
ಎಷ್ಟು ತಿಳಿವಲ್ಲು ಜನಕ । ಕೋಲೆನ್ನ ಕೋಲೆ ॥ ೪ ॥

ಕಂಟಿ ಕರಣಿಲ್ಲದವರು ಹೊಡಿತಾರ ಬಿಸಲೋಳು
ನಮ್ಮುಪಕಾರ ನಿಮ್ಮ ಮ್ಯಾಲ । ಕೋಲೆನ್ನ ಕೋಲೆ ॥ ೫ ॥

ಹೊಸದು ಶಣಮಿನ ದಾರ ಪೋಣಿಸಿದ ಡಬ್ಬಣ ಖೂರಾ
ಶಿವದಾರೋ ಮೂಗಿನಲ್ಲಿ । ಕೋಲೆನ್ನ ಕೋಲೆ ॥ ೬ ॥

ಸಣ್ಣವರು ದೊಡ್ಡವರು ನಿಂತಾರ ಯಾಪರಕ
ತೋಂಡಾರ ಖಟಕರು । ಕೋಲೆನ್ನಕೋಲೆ ॥ ೭ ॥

ಸೋಲ್ಹಗ್ಗ ತಂದಾರ ನಾಕು ಕಾಲ ಕಟ್ಟ್ಯಾರ
ಕೆಡವ್ಯಾರೋ ಭೂಮಿ ಮ್ಯಾಲ । ಕೋಲೆನ್ನ ಕೋಲೆ ॥ ೮ ॥

ಕತ್ತ್ಯಾರ ತಂದಾರ ಕಚಕಚ ಕಡದಾರ
ಬುಟ್ಟ್ಯಾಗರ ಥುಂಬ್ಯಾರ । ಕೋಲೆನ್ನ ಕೋಲೆ ॥ ೯ ॥

ಬುಟ್ಟ್ಯಾಗರ ಥುಂಬ್ಯಾರ ಹೆಗಲಮ್ಯಾಗ ಹೊರವ್ಯಾರ
ನಡದಾರ ಹಳ್ಳಿ ಪಳ್ಳಿ । ಕೋಲೆನ್ನ ಕೋಲೆ ॥ ೧೦ ॥

ನಡದಾರ ಹಳ್ಳಿಪಳ್ಳಿ ಹೋಗ್ಯಾರ ಕಲ್ಯಾಣಕ
ದೇವರಂಗಳ ಮುಣಗಿ । ಕೋಲೆನ್ನ ಕೋಲೆ ॥ ೧೧ ॥

ಖಂಡ ಮಾರಿ ಖಟಕರು ಕುಂತಾರ ಕಟ್ಟಿಮ್ಯಾಗ
ಕಲ್ಯಾಣನೆಂಬುದು ಖಟಗೇರಿ ನಾಗಲಿ
ಕರಿಯ ಮಲ್ಲಿಗಿ ಚಿಗಿಯಲಿ । ಕೋಲೆನ್ನ ಕೋಲೆ ॥ ೧೨ ॥

– ಶ್ರೀಮತಿ ವಿಮಲಾಬಾಯಿ ಸಿದ್ದೇಶ್ವರ
–ಶ್ರೀಮತಿ ಮಹಾದೇವಿ ಹಿರೇಮಠ ಹಳ್ಳಿಖೇಡ (ಕೆ).

***

೩. ತ್ರಿಪದಿಗಳು

ಕಲ್ಯಾಣ ಬಸವಯ್ಯ

ಸೂಚಕ ಪದ್ಯ : ಎಲ್ಲಿ ಬಲ್ಲಿದನಯ್ಯ ಕಲ್ಯಾಣ ಬಸವಯ್ಯ
ಚೆಲ್ಲಿದನು ತಂದು ಶಿವ ಬೆಳಕ । ನಾಡೊಳಗೆ
ಸೊಲ್ಲೆತ್ತಿ ಜನವು ಹಾಡುವುದು ॥ ೧ ॥

ಬಸವಣ್ಣ ನಿನ್ಹೆಸರು ದೆಶೆ ದೆಶೆಗೆ ಶಿವಮಂತ್ರ
ಹೊಸ ಮತಕೆ ಮಂತ್ರ ನಿತ್ಯದಲಿ । ಒಕ್ಕಲಿಗ
ಹೊಸ ಮಂತ್ರ ಬಸವ ಜಪಿಸುವನು ॥ ೨ ॥

ಉತ್ತಿ ಬಿತ್ತುವ ಮಂತ್ರ ಬಿತ್ತಿ ಬೆಳೆಯುವ ಮಂತ್ರ
ಸತ್ಯ ಶಿವ ಮಂತ್ರ ನಿನ್ಹೆಸರು । ಬಸವಯ್ಯ
ಮರ್ತ್ಯದೊಳು ಮಂತ್ರ ಜೀವನಕೆ ॥ ೩ ॥

ಬಸವ ಹೂಡಿದ ಬಂಡಿ ಸಿಸುವು ಏರಿತು ನಂದಿ
ದೆಸೆಗೆಟ್ಟು ಲೋಕ ಕೈಲಾಸ । ಕಾಯಕದ
ಉಸಿರಾತು ನಾಡ ಸಿರಿಯಾತು ॥ ೪ ॥

ಕಾಯಕವ ಕಲಿಸುದಕ ನಾಯಕನು ಬಸವಯ್ಯ
ಜೀಯ ಹೊಸ ಮತಕೆ ಶಿವಭಕ್ತಿ । ಸಾರುದಕೆ
ರಾಯ ಜೀವನದ ಹೊಸ ನುಡಿಗೆ ॥ ೫ ॥

ಹಡೆದವ್ವ ಮಾದವ್ವ ಹಡೆದಪ್ಪ ಮಾದರಸು
ಪಡೆದವ್ವ ಅಕ್ಕನಾಗಾಯಿ । ಬಸವನಿಗೆ
ಬಿಡದೆ ಸಲುಹಿದನು ವರಸಂಗ ॥ ೬ ॥

ಬಸವ ನಿನಗೊಬ್ಬಣ್ಣ ಬಸವಗೊಬ್ಬಳೆ ಅಕ್ಕ
ಬಸವ ನಿನ್ಹೆಸರು ಅಮರಾತು । ಜಗಕೆಲ್ಲ
ಬಸವ ಕಲ್ಯಾಣ ಹೆಸರಾತು ॥ ೭ ॥

ವೇದ ವೇದದವಾದ ಭೇದ ಹುಟ್ಟಿಸಿ ಜಗಕೆ
ದಾದು ಯಾರಿಲ್ಲ ಹೇಳುವುದಕ್ಕೆ । ಬಸವಣ್ಣ
ಭೇದ ಅಳುಕಿಸಿದ ಕುಲ ಕುಲಕೆ ॥ ೮ ॥

ದಾಸೋಹಿ ಬಸವಣ್ಣ ದಾಸೋಹ ಕಲಿಸಿದನು
ದೇಶ ದೇಶೆಲ್ಲ ಕೇಳುತಲಿ । ಹೊಸಮಾತ
ಮಾಸಿದವು ವೇದ ಹುಸಿಯೆಂದು ॥ ೯ ॥

ಹೊಲೆಯ ಮಾದಿಗರೆಂಬ ಬಲೆಯಾತ ಕಿತ್ತೊಗೆದ
ಭಲರೆ ಬಸವಯ್ಯ ಬಸವರಸ । ನಿನ್ನುಸುರು
ನೆಲೆಯಾತು ನಿತ್ಯ ಜನಪದಕೆ ॥ ೧೦ ॥

ಓದಿದನು ಬಸವಯ್ಯ ವೇದದೊಳಗಿನ ಹುಸಿಯ
ಭೇದ ಬೇದವನೆ ಬಿಚ್ಚಿಟ್ಟ । ಜನಪದಕೆ
ತೇದುಂಡ ಜೀವಿ ಬಸವಣ್ಣ ॥ ೧೧ ॥

ಸಾಧು ಸಾಧಲೆ ಬಸವ ಓದು ಕಲಿಯಿತು ಜನವು
ಹೋದ ಹೋದಲ್ಲಿ ಹೊಸ ಮಾತು ಕೇಳಿದವು
ಮೇದಿನಿಗೆ ಬಂತು ಹೊಸ ಬೆಳಕು· ॥ ೧೨ ॥

ಹುಟ್ಟಿ ಬಂದನು ಬಸವ ಕಟ್ಟುದಕೆ ಕಲ್ಯಾಣ
ಬಿಟ್ಟು ಬಾಗೋಡಿ ನಾಗಾಯಿ । ಯೊಡಗೂಡಿ
ಮೆಟ್ಟು ಮಾಡಿದನು ಸಂಗಮಕೆ ॥ ೧೩ ॥

ಬಸವ ಸಾಲಿಯ ಕಲಿತ ಎಸೆವ ಸಂಗಮದೊಳಗೆ
ಹೆಸರು ಪಡಕೊಂಡ ಜಗದೊಳಗೆ । ವರಸಂಗ
ಹಸುಮಗನ ಹರಸಿ ಸಲಹಿದನು ॥ ೧೪ ॥

ಹುಸಿ ವೇದ ಹಾರವರು ಹಸಗೆಟ್ಟ ಲೋಕದಲಿ
ಗುಸುಮುಸಿಯು ನಡೆಯೆ ಬಸವನಿಗೆ । ವರಸಂಗ
ಹೊಸತು ಊದಿದನು ಕಿವಿ ಮಾತ ॥ ೧೫ ॥

ವಾದ ವಾದವೆ ನಡೆದು ವೇದ ವೇದವೆ ಸೋತು
ಭೇದ ಬೇಡೆಂದು ಬಸವಣ್ಣ । ಸಾರುದಕೆ
ಹೋದ ಹೋದಲ್ಲಿ ಹೊಸ ಮಾತು ॥ ೧೬ ॥

ಕುದ್ದ ಕುದಿ ಕುದಿಯೆದ್ದು ಬಿದ್ದ ಜಂಗುಳಿಯೆದ್ದು
ಗುದ್ಯಾಡಿ ಲೋಕ ಹದ ಬಂತು । ಹಾರೂರ
ಗದ್ದಲದ ಬಾಯ್ಗೆ ಮುಳ್ಳಿಟ್ಟು ॥ ೧೭ ॥

ಕುದ್ದಲವು ಕಡೆಗೆಟ್ಟು ಗದ್ದ ಗದ್ದಲ ಮುಣಗಿ
ಸದ್ದು ಸದ್ದಾತು ಶಿವನಾಮ । ಲೋಕೆಲ್ಲ
ಹೊದ್ದು ಬೆಳಗಾತು ಹಗುರಾತು ॥ ೧೮ ॥

ಬಿಜ್ಜಳನು ಕೇಳಿದನು ದರ್ಜೆ ಬಸವನ ಹೆಸರ
ಅಜ್ಜಮ್ಮನೂರು ಸಂಗಮಕೆ । ಕರೆ ತರಲು
ಮರ್ಜಿಯಲಿ ಬಂದ ಬಲದೇವ ॥ ೧೯ ॥

ಮೆಚ್ಚಿದನು ಬಲದೇವ ಇಚ್ಛೆಯಲಿ ಮಗಳಿತ್ತ
ಕೆಚ್ಚೆದೆಯ ವೀರ ಬಸವನಿಗೆ । ಕಲ್ಯಾಣ
ನೆಚ್ಚಿ ಸಲುಹೆಂದು ಕೈ ಮುಗಿದು ॥ ೨೦ ॥

ಅರಸ ಬಿಜ್ಜಳರಾಯ ಮರೆತಂದು ಕುಲ ಮತವ
ಕರೆಸಿ ಬಸವನಿಗೆ ಒಪ್ಪಿಸಿದ । ಮಂತ್ರಿ ಪದ
ಹರುಷದಲಿ ರಾಜ ಮುದ್ರಿಕೆಯ ॥ ೨೧ ॥

ಸಾಗಿ ಬಸವನು ಬಂದು ತೂಗಿದನು ಕಲ್ಯಾಣ
ಹಾಗಿನಲಿ ಕಟ್ಟಿ ಅನುಭಾವ । ಮಂಟಪ
ಕೂಗು ಕೇಳುತಲಿ ಜನವೆದ್ದು ॥ ೨೨ ॥

ಕೂಡಿದರು ಹುರುಪಿನಲಿ ನಾಡ ಬಲ್ಲಿದರೆಲ್ಲ
ಸೂಡ ಕಟ್ಟಿದರು ಶಿವ ನುಡಿಯ । ಕಾಯಕದ
ಗೂಡಾತು ಲೋಕ ಜನ ಹಿಗ್ಗಿ ॥ ೨೩ ॥

ಅರ್ಪಣೆಯು ಅನುಭಾವ ಹೆಪ್ಪುಗಟ್ಟಿತು ಲೋಕ
ಬೆಪ್ಪಾತು ನಾಕ ಕಾಯಕದ । ಹಾಲ್ಹೊಳೆಯ
ತೆಪ್ಪ ದಾಸೋಹ ತೇಲುತಲಿ ॥ ೨೪ ॥

ಉಂಡು ತೇಗಿತು ಲೋಕ ಕೊಂಡಾಡಿ ಕಾಯಕವ
ಕಂಡ ಕಂಡಲ್ಲಿ ದಾಸೋಹ । ಕಾಯಕದ
ಕಂಡ ಜೀವನದ ಶಿವ ಮಾತು ॥ ೨೫ ॥

ಹಾರೂರ ಹರಿದಾಟ ಮಾರಿ ಮಾರಿಗೆ ಮಸಿಯು
ಊರೂರು ಕಾರಿ ಕಿಡಿಮಾತ । ನಾಡೆಲ್ಲ
ಹಾರುವಗೆ ಹೊರತು ಹದನಾತು ॥ ೨೬ ॥

ಎರಕ ಹೊಯ್ಯಿತು ಲೋಕ ಸರಸ ಕಾಯಕ ನುಡಿಯ
ಹರಕ ಹಾರವಗೆ ಕಿರಿ ಮನಸು । ಉಣ್ಣುದಕೆ
ಹರಳುಪ್ಪ ಒಗೆದ ಹಾಲ್ಗೊಳೆಗೆ ॥ ೨೭ ॥

ಬನವಾಸಿ ಕುಂತಳಕೆ ಮನೆಮಾತು ಅಲ್ಲಮನು
ಮನವೊಪ್ಪಿ ಲೋಕ ಕೈ ಮುಗಿದು । ಕೇಳುತಲಿ
ಜನಕೆ ಊದಿದನು ಶಿವ ಮಂತ್ರ ॥ ೨೮ ॥

ಲಕ್ಕುಂಡಿ ಹೊಲ ಬೆಳೆದು ಮುಕ್ತಾಯಿ ಅಜಗಣ್ಣ
ಮಿಕ್ಕ ಶರಣರಿಗೆ ಶಿವ ಮಾತು । ಪ್ರಭುದೇವ
ಹೊಕ್ಕ ಹೊಕ್ಕಲ್ಲಿ ಹೊನ್ನುಗ್ಗಿ ॥ ೨೯ ॥

ಹಾದಿ ಹಾದಿಗೆ ಗುಡಿಯ ಬೀದಿ ಬೀದಿಗೆ ಕೆರೆಯ
ಸಾಧಿಸಿದ ಕಟ್ಟಿ ಸಿದ್ಧರಾಮ । ಸೊನ್ನಲಿಗೆ
ಸಾಧು ಸಿದ್ಧನಿಗೆ ಮನೆಮಾತು ॥ ೩೦ ॥

ಸಿದ್ಧ ಪುರುಷನು ಎಂದು ಸಿದ್ಧರಾಮಗೆ ಬಿಮ್ಮು
ಉದ್ದಂಡನಾಗಿ ಆಳಿದನು । ಪ್ರಭುದೇವ
ಹೆದ್ದಾರಿ ಬಂದ ಶಿವ ಬೆಳಕು ॥ ೩೧ ॥

ಸಿದ್ಧರಾಮನ ಬಿಮ್ಮು ಬಿದ್ದು ಹೋಯಿತು ಕರಗಿ
ಬುದ್ಧ ಪ್ರಭುದೇವ ತಿಳಿ ಹೇಳಿ । ಸೊನ್ನಲಗಿ
ಸಿದ್ಧ ಶರಣಾದ ಶಿವ ಮತಕೆ ॥ ೩೨ ॥

ಅಲ್ಲಮನು ಸಿದ್ಧರಾಮ ಬಲ್ಲಿದೆಲ್ಲರು ಬರಲು
ಕಲ್ಯಾಣ ಮನೆಗೆ ಕಳೆ ಬಂತು । ಬಸವಯ್ಯ
ಎಲ್ಲಿ ಹೋದಲ್ಲಿ ಬೆಲ್ಲಾದ ॥ ೩೩ ॥

ಹಿಪ್ಪರಗಿ ಮಾಚಯ್ಯ ಉಪ್ಪಗಿರಿ ಸಂಗಯ್ಯ
ಅಪ್ಪ ಹರಳಯ್ಯ ಮಂಟಪಕೆ । ಲೋಕೆಲ್ಲ
ಬೆಪ್ಪಾಗಿ ಕೂತು ಕಿವಿಗೊಟ್ಟು ॥ ೩೪ ॥

ಕಿನ್ನರಿಯ ಬೊಮ್ಮಯ್ಯ ಕಿನ್ನರಿಯ ಬಾರಿಸಲು
ಕುನ್ನಿ ಹಸು ಮರೆತು ಕಿವಿಗೊಟ್ಟು । ಕಲ್ಯಾಣ
ಚೆನ್ನಾತು ಲೋಕ ಚೆಲುವಾತು ॥ ೩೫ ॥

ಅಲ್ಲಮನೆ ಗುರುವಾದ ಕಲ್ಯಾಣ ಮಂಟಪಕೆ
ಕಲ್ಲೆದೆಯ ಬಂಟ ಮಡಿವಾಳ । ಕರುವಾಳು
ಸಲ್ಲಿಸಲು ಸೇವೆ ಮಂಟಪಕೆ ॥ ೩೬ ॥

ಹಾರುವರ ಮಧುವರಸ ಊರ ಮಾತನು ಮೀರಿ
ಧಾರೆ ಎರೆದಿತ್ತು ಮಗಳನ್ನು । ಬೀಗಾದ
ಮಾರಹರ ಭಕ್ತ ಹರಳನಿಗೆ ॥ ೩೭ ॥

ಹಾರುವರ ಕುಲಹೊಲೆಯ ಬೇರನ್ನೆ ಕಿತ್ತೊಗೆದ
ಸಾರಿದನು ಬಸವ ಬೆಂಗುಡಿಗ । ಶರಣರಿಗೆ
ಧೀರ ಕಾಯಕವೆ ಕುಲವಾತು ॥ ೩೮ ॥

ಕೊಂಡಿಗಳು ಹಾರುವರು ಮಂಡಿಗೆಯ ಉಣ್ಣುದಕೆ
ಕಂಡ ಕಂಡಲ್ಲಿ ಕುದಿಮಾತ । ನಾಡಿದರು
ಹೆಂಡ ಕುಡಿದಂತೆ ಜೈನರಿಗೆ ॥ ೩೯ ॥

ಜೊಂಡ ಜೈನರ ಮಾತ ಹುಂಡ ಬಿಜ್ಜಳ ಕೇಳಿ
ಕೊಂಡನರಮನೆಗೆ ಶಿವನುರಿಯ । ಬೇಡೆಂದು
ದಂಡೇಶ ಬಸವ ತಿಳಿ ಹೇಳಿ ॥ ೪೦ ॥

ಶಿವನಕಿಂತಲು ಹೆಚ್ಚು ಶಿವಶರಣರೀಜಗಕೆ
ಶಿವಲೋಕ ಮೆಚ್ಚಿ ಹಾಡುವದು । ಬಿಜ್ಜಳನೆ
ದವಸ ಕಾಯಕದ ಬೆಳೆ ಬಂದು ॥ ೪೧ ॥

ಗದ್ದಲಕೆ ಕಲ್ಯಾಣ ಸದ್ದೆದ್ದು ಜಲ್ಲೆಂದು
ಎದ್ದು ಓಡಾಡಿ ಜನಬಿದ್ದು । ಹೌಹಾರಿ
ದದ್ದರಿಸಿ ಲೋಕ ಗಜಬಿಜಿಗೆ ॥ ೪೨ ॥

ಅರಸ ಬಿಜ್ಜಳರಾಯ ಮರೆತು ಬಸವನ ಮಾತ
ಕರಸಿ ಶರಣರಿಗೆ ವಿಷ ಬಿಟ್ಟ । ಬಸವಯ್ಯ
ಹೊರಹೊಂಟ ಹೇಸಿ ಮನನೊಂದು ॥ ೪೩ ॥

ಶಿವಯೋಗಿ ಮಗ ಬಾರೊ ಶಿವ ಪುತ್ರ ಚೆನ್ನಬಸವ
ಶಿವನಾಣಿ ಚೆನ್ನಬಸವಣ್ಣ । ಕಲ್ಯಾಣ
ಶಿವಗಳಸ ಬಾರೊ ಮಂಟಪಕೆ ॥ ೪೪ ॥

ಕರೆದು ಆಶೀರ್ವದಿಸಿ ಹರಸಿ ಒಪ್ಪಿಸಿ ಬಸವ
ವರ ಚೆನ್ನಬಸವ ಶರಣರಿಗೆ । ಕಂಟಕದ
ಹುರಿಯಾಳು ಕಾಯೊ ಹೊಸ ಮತವ ॥ ೪೫ ॥

ಹೇಳಿ ಹೊರಟನು ಬಸವ ಕೇಳಲಾರದೆ ಮಾತ
ಗೋಳಿಟ್ಟು ಜನವು ಸರಮಾಲೆ । ಸಂಗಮಕೆ
ಆಳು ಬಸವಯ್ಯ ದಯವಿಟ್ಟು ॥ ೪೬ ॥

ಹರ ಹರನೆ ವರಸಂಗ ಗುರು ಎನಗೆ ವರಸಂಗ
ಕರುಣ ನಿಧಿ ಹರನೆ ಸಂಗಮನೆ । ಎಂದೆನುತ
ಕರ ಮುಗಿದ ಬಸವ ಬಯಲಾದ ॥ ೪೭ ॥

ಎಲ್ಲ ಬಲ್ಲಿದನಯ್ಯ ಕಲ್ಯಾಣ ಬಸವಯ್ಯ
ಚೆಲ್ಲಿದನು ತಂದು ಶಿವ ಬೆಳಕ । ನಾಡೊಳಗೆ
ಸೊಲ್ಲೆತ್ತಿ ಜನವು ಹಾಡುವದು ॥ ೪೮ ॥

ಅರಿಯುದಕೆ ಕುರುಹೆಂದು ಕರಲಿಂಗ ನೀಕೊಟ್ಟೆ
ಶರಣೆಂಬು ನುಡಿಯ ಚಲುಮಾಡಿ । ಶಿವಮತಕೆ
ಗುರುಬಸವಲಿಂಗ ನಿಜ ಮಂತ್ರೊ ॥ ೪೯ ॥

ಬಸವ ಭಕ್ತಿಯ ಬೀಜ ಬಸವ ಮುಕ್ತಿಯ ತೇಜ
ಬಸವ ಕಾಯಕದ ಗುರು ಬೀಜ । ಶಿವ ಮತಕೆ
ಬಸವ ಓಂಕಾರ ಶಿವನಾಮೊ ॥ ೫೦ ॥

ಸುಗ್ಗಿಯಲಿ ಒಕ್ಕಲಿಗ ಉಗ್ಗಡಿಸಿ ಹಾಡುವನು
ಕಗ್ಗಾಯಿ ತುಂಬಿ ಹಣ್ಣಾಗಿ । ಕಣತುಂಬಿ
ಹಿಗ್ಗುವದು ಲೋಕ ರಸ ಕುಡಿದು ॥ ೫೧ ॥

ಬಸವ ಹಲೆ ಹಲೆ ಹಂತಿ ಬಸವ ಹಲೆ ಹಲೆ ರಾಸಿ
ಬಸವ ಹುಲು ಹುಲುಸು ಕಣ ಕಣಕೆ । ಒಕ್ಕಲಿಗ
ಬಸವ ಹೊಸಗೆಲಸ ಕಡೆತನಕ ॥ ೫೨ ॥

ಈಸರನ ನೆನಸಿದರೆ ವಿಸವೆಲ್ಲ ಅಮರೂತ
ಬಿಸಿಲೆಂಬ ದಾರಿ ನೆರಳಾಗಿ । ಎಲೆಮನವೆ
ಬಸವಯ್ಯ ನೆನಿಸು ಕೈಲಾಸ ॥ ೫೩ ॥

ಹಂತಿಯದು ಹಾಡೆಂದು ಪಂತ ಕಟ್ಟಲು ಬೇಡ
ಕಂತಿ ಕರಗುವದು ನಿಂತಲ್ಲಿ । ಬಸವಯ್ಯ
ಕುಂತು ಎದೆಯೊಳಗೆ ಹಾಡಿಸಿದ ॥ ೫೪ ॥

ಶರಣು ಶರಣೆಂಬುವೆವು ಹರಣ ಹಾರುವತನಕ
ಕರುಣಿಸರಿ ಶರಣ ಬಸವಯ್ಯ । ನಮಗಿನ್ನು
ಹರಸಿರಿ ಹುಲಿಸು ಹುಲ್ಲುಲ್ಲಿಗೂ ॥ ೫೫ ॥

– ಕೃತಿ: ೧. ಕನ್ನಡ ಜಾನಪದ ಗೀತಗಳು
೨. ಹಂತಿ ಹಾಡುಗಳು,

***

ಕಲ್ಯಾಣ ಛತ್ತುರಿ ತಾ ಹಿಡಿದ

ಚಾಲುಕ್ಯರ ಕಲ್ಯಾಣ ಬಿಜ್ಜಳ ಹಿಡಿವಾಗ
ಕಲ್ಯಾಣಕ ಛತುರಿ ತಾ ಹಿಡಿದ । ಬಸವಣ್ಣ
ಎಲ್ಲೆಲ್ಲೂ ನೆರಳ ಹಬ್ಬೀತ ॥ ೧ ॥

ಎಲ್ಲೆಲ್ಲೂ ನೆರಳತಾ ಹಬ್ಬ್ಯಾದ ಪುರದಾಗ
ಬಲ್ಲಂತ ಜನರು ನೆರದಾರ । ಛತ್ತರಕಿ
ನೆರಳಲ್ಲಿ ತಂಪ ಪಡದಾರ ॥ ೨ ॥

ತ್ರಿಪುರಾಂತ ಕೆರಿಮ್ಯಾಲ ಬಸವನ ಮಾಮನಿ
ವಿಪರೀತ ಪೂಜೆ ನಡದಾದ । ಶರಣರ
ತಾರೀಪ ನೋಡಲು ಶಿವಬಂದ ॥ ೩ ॥

ಶರಣರ ಪೂಜಾಕ ತ್ರಿಪುರಾಂತ ಕೆರಿನೀರ
ಗುಡ್ಡದಾ ಒಳಗಿನ ಪತ್ತರಿ । ಶರಣರ
ಲಿಂಗದ ಪೂಜೆ ಭರದಿಂದ ॥ ೪ ॥

ಲಿಂಗಕ್ಕ ನೆನದೀನ ಜಂಗಮಕ್ಕ ನೆನದೀನ
ಲಿಂಗಜಂಗಮಕ ನೆನದೀನ । ಕಲ್ಯಾಣದ
ಸಂಗನ ಬಸವಗ ಮೊದಲು ನೆನದೀನ ॥ ೫ ॥

ಗುರುವಿಗಿ ನೆನದಿನಿ ಹಿರಿಯರಿಗಿ ನೆನದಿನಿ
ಗುರುಹಿರಿಯರಿಗಿ ಮೊದಲು ನೆನದಿನಿ । ಜನುಮಕ
ಅರುಕೊಟ್ಟ ಗುರುಬಸವಗ ನೆನದಿನಿ ॥ ೬ ॥

ಬಿಳಿ ಧೋತರುಟ್ಟಾರ ಬಿಳಿಅಂಗಿ ತೊಟ್ಟಾರ
ಬಿಳಿ ಕುದುರಿ ಹತ್ತಿ ಹೊಂಟಾರ । ಹಣಿಮ್ಯಾಲ
ಬಿಳಿಯಾ ಬಿಭೂತಿ ಹೊಳದಾದ ॥ ೭ ॥

ಬಿಳಿಯಾ ವಿಭೂತಿ ಹಣಿಮ್ಯಾಲ ಹೊಳದಾದ
ಕಳೆಯುಳ್ಳ ಲಿಂಗ ಎದಿಮ್ಯಾಲ । ಬಸವನ
ಖಳಿನೋಡಿ ಬೆಳ್ಳಕ್ಕಿ ಹೆದರ್‍ಯಾವ ॥ ೮ ॥

ಕುದುರೆಯು ಹತ್ತ್ಯಾರ ದರಬಾರಕ ಹೊಂಟಾರ
ಹಾದಿ ಬೀದಿಗೆಲ್ಲಾ ಜಂಗಮರು । ನೆರೆದಾರ
ನಿಂತಲ್ಲಿ ಕೈಯ ಮುಗದಾರ ॥ ೯ ॥

ಬಸವನ ಕುದುರೆಯು ಅದು ಎಂಥ ಚತುರವು
ಶರಣರ ಗುರುತ ಹಿಡದಾದ । ಆ ಕುದುರಿ
ಗಕ್ಕಂತ ನಿಂತಾದ ಶರಣರ ಬಳಿಹೋಗಿ ॥ ೧೦ ॥

ಗಕ್ಕಂತ ನಿಂತಾದ ಶರಣರ ಬಳಿಹೋಗಿ
ಪಕ್ಕಂತ ಬಸವಾ ಇಳಿತಾರ । ಶರಣರ
ನಿಲುವಿಗಿ ಕೈಯ ಮುಗಿತಾರ ॥ ೧೧ ॥

– ಶ್ರೀಮತಿ ಗೌರವ್ವ ಕಾಡಾದಿ

***

ಬಸವಣ್ಣನ ಹಾಡು

ಕಲ್ಯಾಣ ಹುಟ್ಟಮುಂದ ಎಲ್ಲಿದ್ದೋ ಬಸವಣ್ಣ
ಹಳ್ಳಿಮುಂಟೋಳ ತಿಪರಾಂತೋ
ಹಳ್ಳಿನೇ ಮಂಟೋಳ ತಿಪರಾಂತ ಕೆರಿಮ್ಯಾಲ
ಚೆನ್ನ ಮೂಡ್ಯಾರೋ ಬಸವಣ್ಣೋ । ॥ ೧ ॥

ಹಾಲಂಥ ಕಲ್ಯಾಣ ಆಳೋರು ಯಾರಿಲ್ಲ
ಹೇಳಲದ್ಹೋಗ್ಯಾರೋ ಶರಣರು
ಹೇಳಲದ್ಹೋಗ್ಯಾರೋ ಶರಣರಿಗಿ ಹುಡಕುತ
ದೇವರ್ಹೋಗ್ಯಾರೋ ಬಸವಣ್ಣೋ । ॥ ೨ ॥

ಕಲ್ಯಾಣನಂಬುದು ಬಲ್ಲೆನೇ ಹಡದಮ್ಮ
ಗಲ್ಲಿ ಗಲ್ಲೆಲ್ಲಾ ಶರಣರು
ಗಲ್ಲಿನೇ ಗಲ್ಲೆಲ್ಲಾ ಶರಣರ ಮನಿಮುಂದ
ಮಲ್ಲಿಗಿ ಬಿತ್ತಿ ಬೆಳದಾರೋ । ॥ ೩ ॥

ಕಲ್ಯಾಣ ಕಡಿಮಠ ಖಾಂಡಾಮಾಡ್ಯಾರ ನೇಟ
ಸಾವಿರಕ್ಕಿ ಚೀಲಾ ಸವಿಲಿಲ್ಲೋ
ಸಾವಿರ ಅಕ್ಕಿ ಚೀಲಾ ಸವಿಲಿಲ್ಲೋ ಬಸವಣ್ಣ
ಧರಿಮ್ಯಾಲಿನ ಬೆಲ್ಲಾ ಉಳಿಲಿಲ್ಲೋ । ॥ ೪ ॥

ಬಸವಣ್ಣ ಬೇಕಂತ ಭಾಸಿಂಗ ತರಸಿನ
ರೇಶಿಮೆ ಝೂಲಾ ಹೊಲಿಸಿದೋ
ರೇಶಿಮೆ ಝೂಲಾ ಹೊಲಸಿದಾ ಬಸವಣ್ಣ
ವರಸಿಗಿ ಒಮ್ಮೆ ಮೆರಸಿದೋ । ॥ ೫ ॥

ಹೊನ್ನುಗ್ಗಿ ಹೊಸದಿನ ಬಸವಣ್ಣನರಷಿಣಾ
ಕಾರ್ಹುಣ್ಣಿ ದಿನ ಮದಿಮಾಗೋ
ಕಾರ್ಹುಣ್ಣಿ ದೀನಾ ಮದಿಮಗಾ ಬಸವಣ್ಣ
ಕರಿಕಡದು ಮನಿಗಿ ಬರತಾರೋ । ॥ ೬ ॥

ಮೊದಲ ರಾಗೋಲಪೂಜೆ ರಾಗೋಲ ದಿಂಡಿನ ಪೂಜೆ
ಮೇಟಿಯ ಪೂಜಾ ತೆನಿಪೂಜಾ
ಮೇಟಿಯನೇ ಪೂಜಾ ತೆನಿಪೂಜಾ ಬಸವಣ್ಣನ
ಪಾದದ ಪೂಜಾ ಹಣಿ ಪೂಜೋ । ॥ ೭ ॥

– ಶ್ರೀಮತಿ ಮಹಾದೇವಿ ಹೀರೇಮಠ ಹಾಗೂ
ಶ್ರೀಮತಿ ಜಗದೇವಿ ತೋಳೆ, ಹಳ್ಳಿಖೇಡ (ಕೆ)

***

ಕುದರಿಯ ಹತ್ತ್ಯಾರ

ಕುದುರಿಯ ಹತ್ತ್ಯಾರ ದರಬಾರಕ ನಡದಾರ
ನದರಾಗ್ಯಾದ ನೋಡ ಧರಿ ಮಗ । ಬಸವಗ
ಮಾದೇವನ್ಹಂಗ ಕಂಡಾರ । ॥ ೧ ॥

ಬಿಳಿಯ ಧೋತರುಟ್ಟು ನಿಲುವಂಗಿ ತಾತೊಟ್ಟು
ಹಣೆ ತುಂಬಾ ವಿಭೂತಿ ಎದಿಮ್ಯಾಲ । ಲಿಂಗವು
ಶಿವನ್ಹಂಗ ಬಸವಣ್ಣ ಹೊಳಿತಾರ । ॥ ೨ ॥

ಹಾದ್ಯಾಗ ನಿಂತವರು ಕೈಮುಗಿತಾರ ಅವರಿಗಿ
ಬಾಗಿತಾ ನಮಿಸುತಾ ದರಬಾರಕ । ಹೊಂಟಾರ
ಭೂಮಿತಾಯಿ ಎದ್ದು ಅವರಿಗಿ ಸಮಿಸ್ಯಾಳ ॥ ೩ ॥

ಕಿಲ್ಲಾ ಮುಂದ ಇಳದಾರ ನೆಟ್ಟಕ ಒಳಗ್ಹೋಗ್ಯಾರ
ಲೆಕ್ಕ ಪತ್ರ ನೋಡ್ಯಾರ ಜರ ತಪ್ಪ । ಮಾಡಿಲ್ಲ
ಕೈ ಹಚ್ಚಿ ರೊಕ್ಕ ತಗೊಂಡಿಲ್ಲ ॥ ೪ ॥

ನಾಡಿನಾ ಉದ್ಧಾರಕ ಚಿಂತೆಯು ಮಾಡ್ತಾರ
ರಾಜಾಗ ಬಿಡಿಸಿ ಬಿಡಿಸಿ ಹೇಳ್ತಾರ । ಅವರ್ಹಂಗ
ನಡಿದರ ಕಲ್ಯಾಣ ಉದ್ಧಾರ ಆಗ್ಯಾದ ॥ ೫ ॥

ಸತ್ಯುಳ್ಳ ಬಸವಣ್ಣ ಶಾಂತಿಪ್ರಿಯ ಬಸವಣ್ಣ
ನ್ಯಾಯದ ಬಸವಣ್ಣ ಮಾಯಾದ । ಬಸವಣ್ಣ
ಕಾಮಕ್ರೋಧ ಗೆಲಿದ ಮಹಿಮಾ ಪುರುಷ ಬಸವಣ್ಣ ॥ ೬ ॥

ಬೈದವರಿಗೆ ಬಂಧುಯೆಂದು ಜರಿದವರಿಗಿ ಗುರುಯೆಂದು
ಅಪಮಾನ ಮಾಡಿದವರಿಗೆ ನಮ್ಮಪ್ಪ । ಅವರೆಂದು
ಕೈಯೆತ್ತಿ ತಾ ನಮಿಸಿ ಬಾಗಿ ತಾ ನಡೆದಾರ ॥ ೭ ॥

– ಶ್ರೀಮತಿ ಗೌರವ್ವ ಕಾಡಾದಿ

***

ಕಲ್ಯಾಣ ಹುಟ್ಟಿದಾಗ

ಕಲ್ಯಾಣ ಹುಟ್ಟಿದಾಗ ಎಲ್ಲಿದ್ದೋ ಬಸವಣ್ಣ
ಹಳ್ಳಿ ಮಂತೋಳ ತಿಪರಾಂತ । ಕೆರಿಮ್ಯಾಲ
ಹಳ್ಳಿ ಮಂತೋಳ ತಿಪರಾಂತ ಕೆರಿಮ್ಯಾಲ
ಚನ್ನ ಮೂಡಿದಾರೆ ಬಸವಣ್ಣ । ಸೂವಯ್ಯ । ॥ ೧ ॥

ಹಾಲಂತ ಒಕ್ಕಲಿಗ ಹಾದಿಗಿ ಹೊಲ ಮಾಡೋ
ಹಾದಿಗಿ ಹಾಕೋ ಸೋಯಾ ಬೆಳ್ಳಿ । ಸೂವಯ್ಯ ।
ಹಾದಿಗಿ ಎಲಿ ಹಾಕೋ ಸೋಯ ಬೆಳ್ಳಿ ಬಸವಣ್ಣ
ಹಾದ್ಯಾವರ ಹರಕಿ ಕೊಡುತಾರೋ । ಸೂವಯ್ಯ । ॥ ೨ ॥

ಹಾದ್ಯಾವರ ಎಲಿ ಹರಕಿ ಏನಂತ ಕೊಡತಾರ
ಹಾಲುಂಡ ಬೆಳ್ಳಿ ಹರದೆಲಿ । ಸೂವಯ್ಯ ।
ಹಾಲುಂಡ ಎಲಿ ಬೆಳ್ಳಿ ಹರಿಯಲಿ ಬಸವಣ್ಣ
ನೀರುಂಡ ನಿಂಬಿ ಚಿಗಿಯಲಿ । ಸೂವಯ್ಯ । ॥ ೩ ॥

ನೀರುಂಡ ಎಲಿ ನಿಂಬಿ ಚಿದಾವ ಬಸವಣ್ಣ
ಎಲಿಗೊಂದೆ ಮಾಗಿ ಜಡದಾವೋ । ಸೂವಯ್ಯ । ॥ ೪ ॥

ಕಲ್ಯಾಣ ಕಡಿಮತ ಖಾಂಡ ಮಾಡ್ಯಾರೋ ನೇಟ
ಸಾವಿರಕ್ಕಿ ಚೀಲ ಸರಿಣೆಲ್ಲ । ಸೂವಯ್ಯ ।
ಸಾವಿರ ಅಕ್ಕಿ ಚೀಲ ಸರಿಣಿಲ್ಲೋ ಬಸವಣ್ಣ
ಧರಿ ಮ್ಯಾಲಿನ ಬೆಲ್ಲ ಉಳಿಲಿಲ್ಲೋ । ಸೂವಯ್ಯ । ॥ ೫ ॥

– ಶ್ರೀಮತಿ ಲಲಿತಾಬಾಯಿ ಲಾಧಾ

***

ಬಸವಣ್ಣನವರ ಹಾಡು

ಕಲ್ಯಾಣ ಅಂಬುಧು । ಎಲ್ಯಾದ ನೋಡಿರೇನು ।
ಅಲ್ಲಿ ಶರಣರು ಜಮಗೂಡಿ । ಮಾಡ್ಯಾರೊ ।
ಶಂಭೋ ಶಂಕರನ ಶಿವಭಜನೆ ॥ ॥ ೧ ॥

ಬಾಗೇವಾಡಿ ಬಸವಣ್ಣ । ಬಾಳ ದೊಡ್ಡಾವನಂತ ।
ಮಾಡಿಸಬೇಕು ಚಿಣಿ ಮಗಡವು । ಬಸವಣ್ಣಗ ।
ಜೋಡಿಸಬೇಕು ಸರಜಂಗ ॥ ॥ ೧ ॥

ಶಕ್ತಿಯ ನೀಲಮ್ಮ । ಯುಕ್ತಿಯ ನಾಗಮ್ಮ ।
ತೊಂಬತ್ತಾರು ಸಾವಿರ ಜಂಗಮರು । ಊಟಕ ।
ಬೇಡಿದ್ದು ನೀಡ್ಯಾನ ಬಸವಣ್ಣ ॥ ೨ ॥

ಶಿವನು ಶಕ್ತಿಯ ಕೂಡಿ । ಬಸವಣ್ಣ ಮಾತ್ನಾಡಿ ।
ಏನಂದರಾಗ ಒಡಗೂಡಿ । ಮುಂದಿನ ।
ಉತ್ಪತ್ತಿ ಬೇಡಿ ಮಾತಾಡಿ ॥ ॥ ೩ ॥

ಬಾಗೇವಾಡಿ ಎಂಬುದು । ಬಾಲ್ಯಾರ ಪಟ್ಟಣ ।
ಮ್ಯಾಲ ಚನ್ನಮ್ಮನವರಮನಿ । ಬಾಗಿಲದಾಗ ।
ಬಾಗಿ ನಿಂತಾನ ಬಸವಣ್ಣ ॥ ॥ ೪ ॥

ಬಸವಣ್ಣನ ಹೆಂಡತಿ । ಹಸಿ ಮಗಳು ನೀಲಮ್ಮ ।
ಬಸರಿದ್ದರ್ಹ್ಯಾಂಗ ನಡಿದಾಳೊ । ನೀಲಮ್ಮ ।
ಸೊಸಿಯಾಗಿ ನವುಲ ಕುಣದಂಗ ॥ ॥ ೫ ॥

ಬಾಗೇವಾಡಿ ಬಸವಣ್ಣ । ಮುನಿದರ ಒಳ್ಳೆವನಂತ ।
ಕೊಟ್ಟ ಬರ್ರಿ ಅವನ ಹರಕಿಯೋ । ಗುಗ್ಗಳದೀಪಾ ।
ಸುಟ್ಟ ಬರ್ರಿ ಅವನ ಪವಳ್ಯಾಗೋ ॥ ॥ ೬ ॥

ಹೊಟ್ಟೀಯ ಕಿಚ್ಚಿಗಿ । ಹುಟ್ಯಾನ ಬಸವಣ್ಣ ।
ಜೋಡಿ ಬಾರಹಚ್ಚಿ ಹೊಡಿಯಾಗ । ಬಸವಣ್ಣ ।
ಸಾವ ಬೇಡ್ಯಾನ ಶಿವನಲ್ಲಿ ॥ ॥ ೭ ॥

ಪಲ್ಲಕ್ಕಿ ಹೊತ್ತಣ್ಣ । ಮೆಲ್ಲಕ ನಡಿರೆಣ್ಣ ।
ಕಲ್ಲಾಗಿನ ಕಾಲ ಅದರ್ಯಾವೋ । ಬಸವಣ್ಣನ ।
ಪಲ್ಲಕ್ಯಾನ ಮುತ್ತ ಉದರ್ಯಾವ ॥ ॥ ೮ ॥

ಶಿವಪುರ ದಾರೀಲೆ । ಸಿದ್ಧರ ಕಾವಲಿ ।
ಬಲ್ಲಿದ ಶರಣರು ಹೋಗಬರುವ । ದಾರಿ ।
ಪುಣ್ಯದ । ಫಲದಿಂದ ಸಿಗುವುದು ॥ ॥ ೧೦ ॥

ಹಾಲ ಬಾವಿಯ ಮ್ಯಾಲ । ಹಾಯ್ದು ಹ್ವಾದವನ್ಯಾರೊ ।
ಪಾದ ಮೂಡ್ಯಾವೊ ಪರಿಪರಿ । ಬಸವಣ್ಣ ।
ಹಾದ ಹೋಗ್ಯಾನೊ ಜಳಕಕ ॥ ॥ ೧೧ ॥

ಬಸವ ಬಲ್ಲಿದನಂತ । ಹೆಸರಿಟ್ಟಾಳ ಅವರವ್ವ ।
ಬಸರೀ ಎಲಿಯಾಗ ಪಡಿಬಾನೋ । ಮಾಡಿಕೊಂಡು ।
ಬಸವ ನಿನ್ನ ದೃಷ್ಟಿ ತಗದಾಳೋ ॥ ॥ ೧೨ ॥

ಗೋಕಾಕ ಹೋಗವರು । ಈ ಕಾಯಿ ಒಯಿರಣ್ಣ ।
ಗೋಕಾಕ ತೆಳಗ ಉಳವಿಯೋ । ಬಸವಯ್ಯಗ ।
ಈ ಕಾಯಿ ಒಯಿದು ಒಡಿರಣ್ಣ ॥ ॥ ೧೩ ॥

– ಶ್ರೀ ಶರಣಪ್ಪ ಭೀಮಪ್ಪ ಕಡಗೋಲ

***

೪. ಜೋಗುಳ ಹಾಡುಗಳು

*

ಜೋ ಜೋ ಕಂದ ಬಸವೇಶ

ಜೋ ಜೋ ಕಂದಾ ಬಸವೇಶಾ ।
ಜೋಗುಳ ಹಾಡುವೆ ಬಸವೇಶಾ ।
ಲಾಲಿ ಹಾಡುವೆ ಜಗದೀಶಾ । ಜೋ ಜೋ ಬಸವೇಶಾ ।
ಕರುಣೆಯ ತೋರೋ ಬಸವೇಶಾ । ಲಾಲಿ ಬಸವೇಶಾ । ॥ ಪ ॥

ಹತ್ತು ಜನುಮಗಳ ಪುಣ್ಯದ ಫಲವೋ ।
ಅವತರಿಸಿ ಬಂದೇ ।
ಹೆತ್ತ ತಾಯಿ ತಂದೆಗೆ ಇಂದು
ಆನಂದ ತಂದೇ ಆನಂದ ತಂದೇ । ॥ ೧ ॥

ಮಾದಲಾಂಬಿಕೆ ಪೂಜೆಗೆ ಮೆಚ್ಚಿ ।
ನಂದಿಯೇ ಭುವಿಗಿಳಿದೆ ।
ಇಂಗಳೇಶ್ವರ ಭಾಗೇವಾಡಿಯ ।
ಮಂಗಲಗೊಳಿಸಿದೆ ಸಂತೋಷ ತಂದೆ । ಸಂತೋಷ ತಂದೆ । ॥ ೨ ॥

ಚನ್ನ ಚಲುವೆ ಮುತ್ತೈದೆಯರು ।
ರನ್ನದ ತೊಟ್ಟಿಲಕೆ । ಚಿನ್ನದ ಶಿಸುವ ಹಾಕಿ ।
ಜೋಗುಳಾ ಪಾಡಿ ನಲಿದಾಡಿ । ಬಸವ ಎಂದ್ಹಾಡಿ । ॥ ೩ ॥

ಕೂಡಲ ಸಂಗನ ಮಮತೆಯ ಕಂದಾ ।
ಎಂದು ಕೊಂಡಾಡಿ ।
ಬಸವಾ ಬಸವಾ ಎಂದು ಹೆಸರು ।
ಕರೆದರು ನಲಿದಾಡಿ । ಕರೆದರು ಹಾಡ್ಹಾಡಿ । ॥ ೪ ॥

ಬಸವ ಬಸವ ಎನ್ನಿರಿ ।
ಮರಣ ಬಾಧೆ ಕಳೆಯುವನು ।
ಮೋಕ್ಷವ ಕೊಡುತಿಹನು ।
ಕರುಣೆಯ ತೋರೋ ಬಸವೇಶಾ । ಲಾಲಿ ಬಸವೇಶಾ । ॥ ೫ ॥

– ಶ್ರೀಮತಿ ಸುಮಂಗಲಾ ಮಲ್ಲಿಕಾರ್ಜುನ, ದೇವೂರ

***

ಬಸವೇಶ್ವರನ ಜೋಗುಳ ಪದ

ಜೋ ಜೋ ಜೋ ಜೋ ಬಸವಣ್ಣ ।
ವಿಜಯಾಪುರ ಜಿಲ್ಲೆಯಲ್ಲಿ ಉದಯ ವಾದವನಾ
ಜೋ ಜೋ ಬಸವಣ್ಣ ॥ ಪಲ್ಲ ॥

ಬಾಗೇವಾಡಿಯ ಭಾಗ್ಯದ ಬಸವಣ್ಣ ।
ಸಂಗಮನಾಥನಿಂದ ಲಿಂಗ ಧಾರಣ ।
ಜಂಗಮರ ಸೇವೆಗಾಗಿ ಸೇರಿದ ಕಲ್ಯಾಣಾ ॥ ೧ ॥

ಅನುಭವ ಮಂಟಪ ಮಾಡಿದ ರಚನಾ ।
ಕನ್ನಡ ನುಡಿಯಲಿ ಬರೆಸಿದ ವಚನಾ ।
ಹೆಣ್ಣುಮಕ್ಕಳಿಗೆ ಕೊಟ್ಟ ಉನ್ನತ ಸ್ಥಾನ ॥ ೨ ॥

ಜನತೆಗೆ ಕಲಿಸಿದ ನೈತಿಕ ಶಿಕ್ಷಣಾ ।
ಘನವಾದ ಕಾಯಕವೇ ಕೈಲಾಸವನ್ನಾ ।
ಜ್ಞಾನ ವೈರಾಗ್ಯದ ಮೂರ್ತಿಯು ನೀನಾ ॥ ೩ ॥

ಭಕ್ತಿ ಭಾಂಡಾರಿ ಸತ್ಯ ಶಿವಶರಣ ।
ಯುಕ್ತಿಲೆ ತೋರಿಸಿದಿ ಮುಕ್ತಿ ಸೋಪಾನ ।
ಮೃತ್ಯುಂಜಯನಿಗೆ ಆದಿ ನೀ ವಾಹನಾ ॥ ೪ ॥

ಜಾತ್ಯಾತೀತನಾದ ಪ್ರೀತಿ ಬಸವಣ್ಣಾ ।
ನೀತಿವಂತ ಪ್ರಖ್ಯಾತನು ನೀನಾ ।
ಸಾತ್ವಿಕ ಗುಣದ ಮಾತಿನ ಜಾಣ ॥ ೫ ॥

ಕಲಿಯುಗದಿ ಬಲವಾದ ರಾಜಕಾರಣ ।
ಮೂಲ ಷಟಸ್ಥಲ ಕ್ರಾಂತಿ ಪುರುಷನಾ ।
ಹುಲಕುಂದ ಭೀಮ ಕವಿ ಸ್ಮರಿಸಂದ ನಿನ್ನಾ ॥ ೬ ॥

– ಶ್ರೀ ಕಲ್ಲಪ್ಪ ಪುಂಜಿ

***

ಜೋ ಎಂದು ತೂಗುವೆ ಆದಿ ಬಸವಣ್ಣ

ಜೋ ಎಂದು ತೂಗುವೆ ಆದಿ ಬಸವಣ್ಣ
ಜೋ ಎಂದು ತೂಗುವೆ ನೀನೆ ಮುಕ್ಕಣ್ಣ
ಜೋ ಎಂದು ತೂಗುವೆ ಜ್ಞಾನದ ಕಣ್ಣ
ಹೀಂಗ ಜೋ ಎಂದು ತೂಗುವೆ ಜಗದೊಳಗೆ ಅಣ್ಣ ಜೋ ಜೋ ॥ ೧ ॥

ಧರ್ಮಕ್ಕೆ ಕತ್ತಲೆಯು ಬರುವ ಸಮಯದಿ
ಕರ್ಮಭೂಮಿಯಲ್ಲಿ ನೀನವತರಿಸಿದಿ
ಧರ್ಮ–ಕರ್ಮಳೆರಡು ಸರಿಪಡಿಸಿದಿ
ಹೀಂಗ ಧರ್ಮಕ್ಕೆ ದಯವು ಕಾರಣವೆನಿಸಿದಿ ಜೋ ಜೋ ॥ ೨ ॥

ಮಾದರಸ ಮಾದಲಾಂಬಿಕೆಯರು
ಮೋದದಿ ನಂದಿಯ ವ್ರತವ ಮಾಡಿದರು
ಆದರದಿ ಪುತ್ರ ವರವ ಬೇಡಿದರು
ಆಗ ಹದಿನಾರು ಸೋಮವಾರ ವ್ರತವ ಮಾಡಿದರು ಜೋ ಜೋ ॥ ೩ ॥

ಮಕ್ಕಳಿಲ್ಲದ ಕಾರಣ ಬಹಳ ಬಳಲಿದರು
ಮಕ್ಕಳಿಲ್ಲದ ಬಾಳುವೆ ವ್ಯರ್ಥವೆಂದರು
ಮುಕ್ಕಣ್ಣ ಶಿವನಿಗೆ ಮೊರೆಯ ಹೊಕ್ಕರು
ಹೀಂಗ ಭಕ್ತಿ ಹಂಬಲದಿಂದ ಆದರಿಸಿದರು ಜೋ ಜೋ ॥ ೪ ॥

ಮಾದಲಾಂಬಿಕೆಯ ಗರ್ಭದೊಳಗಿಂದ
ಆದಿಬಸವನು ಶಿಶುವಾಗಿ ಬಂದ
ಹದಿನಾರ ಕಳೆಗಳ ಕೂಸು ಬಲುಚಂದ
ಆಗ ಮಾದರಸ ಹೆಸರಿಟ್ಟ ಬಸವ ಶರಣೆಂದ ಜೋ ಜೋ ॥ ೫ ॥

ಹಲವು ಪವಾಡಗಳ ಮಾಡಿ ತೋರಿಸಿದನು
ಚಲುವ ಸಂಗಮ ಕ್ಷೇತ್ರಕೆ ಆಗ ಸಾಗಿದನು
ಅಲ್ಲಿ ಸಂಗಮನಾಥನ ಸೇವಾ ಮಾಡಿದನು
ಆಗ ಕಲ್ಯಾಣಕ್ಕೆ ಹೋಗುವ ಅಪ್ಪಣೆ ಪಡೆದನು ಜೋ ಜೋ ॥ ೬ ॥

ಸಂಗಮೇಶ್ವರನ ದರ್ಶನದಿಂದ
ಅಂಗ ಲಿಂಗದ ಜ್ಞಾನ ಅರಿದು ಆನಂದ
ಸಂಗ ಸಮರಸನಾಗಿ ಅರುವಿನ ಮುಂದ
ಆಗ ಲಿಂಗ ಜಂಗಮ ತಿಳಿದ ಆರುಸ್ಥಲದಿಂದ ಜೋ ಜೋ ॥ ೭ ॥

ಕಲ್ಯಾಣದಲ್ಲಿರುವ ಲಿಪಿಯನ್ನು ಓದಿ
ಬಲದೇವನ ಮಗಳನ್ನು ಮದುವೆ ಆದಿ
ಅಲ್ಲಿ ಬಿಜ್ಜಳನಿಂದ ಅಧಿಕಾರ ಪಡೆದಿ
ಆಗ ಬಲ್ಲಿದ ಶರಣರ ಸಮೂಹ ಕೂಡಿಸಿದಿ ಜೋ ಜೋ ॥ ೮ ॥

ಮಾದರ ಹರಳಯ್ಯ ಮೋಳಗಿ ಮಾರಯ್ಯ
ಮದುವರಸ ಸಡಗರದ ಬುಡ್ಡರ ಖ್ಯಾತಯ್ಯ
ಮದಹರನ ಒಲಿಸಿದ ಬುಡ್ಡರ ಖ್ಯಾತಯ್ಯ
ಆಗ ಸಿದ್ಧರಾಮಯ್ಯ ಮತ್ತು ಹಡಪದಪ್ಪಯ್ಯ ಜೋ ಜೋ ॥ ೯ ॥

ಸತ್ಯಕ್ಕ ಚೋಳಕ್ಕ ಸುಗ್ಗಲಾದೇವಿ
ನಿತ್ಯ ಸೇವೆಯ ಮಾಳ್ದ ಶಿವಮಹಾದೇವಿ
ಸತ್ಯ ಸದ್ಗುಣಿಯು ಅಕ್ಕಮಹಾದೇವಿ
ಹೀಂಗ ಪ್ರೀತಿಯಿಂದಲಿ ಬಂದಳು ದಾನಮ್ಮದೇವಿ ಜೋ ಜೋ ॥ ೧೦ ॥

ಶರಣ ಶರಣೆಯರು ಕೂಡಿದರಲ್ಲಿ
ಪಾರಮಾರ್ಥ್ಯ ತತ್ವ ಅನುಭವದಲ್ಲಿ
ಸಾಧನ ಮಾರ್ಗ ಶಿವಕಥೆಯಲ್ಲಿ
ಆಗ ಶೋಧಿಸಿದರನುಭವ ಮಂಟಪದಲ್ಲಿ ಜೋ ಜೋ ॥ ೧೧ ॥

ಕುಲಜಾತಿಗಳನ್ನೆಲ್ಲ ಕಿತ್ತಿ ಹಾಕಿದನು
ಶೀಲವತಂರಿಗೆ ಲಿಂಗ ಧರಿಸಿದನು
ಮೇಲು ಕೀಳೆನ್ನದೆ ಕ್ರಾಂತಿ ನಡೆಸಿದನು
ಆಗ ಅಲ್ಲಮನಿಗೆಲ್ಲ ಅರ್ಪಣ ಮಾಡಿದನು ಜೋ ಜೋ ॥ ೧೨ ॥

ಇಬ್ಬರು ದೇವರು ಇಲ್ಲವೆಂದನು
ಒಬ್ಬನೆ ಸ್ವಯಂ ಶಂಭುವೆಂದನು
ಮಬ್ಬತನ ಅಳಿದರೆ ತಿಳಿಯುವದೆಂದನು
ಆಗ ಗರ್ಭದಲ್ಲಿ ಹೇಳಿದ ಚನ್ನಬಸವನು ಜೋ ಜೋ ॥ ೧೩ ॥

ಬಸವಣ್ಣ ಚನ್ನಬಸವಣ್ಣನವರು
ಎಸೆಯುವ ಲಿಂಗ ಮೂಲ ತಿಳಿಸಿ ಹೇಳಿದರು
ದಶದಿಕ್ಕಿನ ಶರಣರ ಆಗ ಕರಸಿದರು
ಹೀಂಗ ಅಸಮ ವೀರಶೈವ ಧ್ವಜವ ಹಾರಿಸಿದನು ಜೋ ಜೋ ॥ ೧೪ ॥

ಲಕ್ಷದ ಮೇಲೆ ತೊಂಬತ್ತಾರು ಸಾವಿರ
ಮೋಕ್ಷಕೆ ಅಧಿಕಾರ ಎಲ್ಲ ಜಂಗಮರ
ಈಕ್ಷಿಸಿ ಮಾಡಿದ ಸೇವೆಯ ವೀರ
ಹೀಂಗ ಸೂಕ್ಷ್ಮದಿ ನಡೆಸಿದರು ಎಲ್ಲ ಶರಣರ ಜೋ ಜೋ ॥ ೧೫ ॥

ಮುಂದೆ ಕಲ್ಯಾಣ ಬಿಟ್ಟು ಸಂಗಮಕ್ಕೆ ಹೋದಿ
ಅಲ್ಲಿ ಶಿವಲಿಂಗದೊಳಗೆ ಸಮರಸವಾದಿ
ಎಲ್ಲ ಶಿವಶರಣರ ಉಳುವಿಗೆ ಕಳುಹಿದಿ
ಆಗ ಇಳೆಯೊಳು ಅಮರ ಬಸವ ನೀನಾದಿ ಜೋ ಜೋ ॥ ೧೬ ॥

– ಕೃತಿ: ಬಸವಣ್ಣ ನಿನ್ನ ಹಸರು ದೆಸೆ ದೆಸೆಗೆ ಶಿವ ಮಂತ್ರ

***

ಜೋ ಜೋ ಎನ್ನ ಜಯತು ಬಸವೇಶ

ಜೋ ಜೋ ಎನ್ನ ಜಯತು ಬಸವೇಶ
ಜೋ ಜೋ ಎನ್ನ ಹರನ ಭಕ್ತೇಶ
ಜೋ ಜೋ ಎನ್ನ ಕಲ್ಯಾಣವಾಸ
ಹೀಂಗ ಜೈನ ಮತವು ತುರ್ತ ಮಾಡಿದಿ ನಾಶ ಜೋ ಜೋ ॥ ೧ ॥

ಹುಟ್ಟೀದಿ ಬಾಗೇವಾಡಿ ಅಂಬುವ ಸ್ಥಳದಲ್ಲಿ
ಮಾದರಸ ಮಾದಲಾಂಬಿಕೆ ಹೊಟ್ಟೆಯಲಿ
ಹರಮತ ಬೆಳಸುದಕ ಹುಟ್ಟಿದಿ ಅಲ್ಲಿ
ಹೀಂಗ ಘನ ಅರವು ತೋರಿಸಿ ಮಾಡಿದಿ ಲೀಲಿ ಜೋ ಜೋ ॥ ೨ ॥

ಹಸನುಳ್ಳ ಬಾಲ್ಯಾರು ಬಂದು ನೆರೆದಾರು
ಅಸಲದ ತೊಟ್ಟಿಲ ತಂದು ಕಟ್ಟಿದರು
ಕುಶಲದ ಮೂರುತಿ ತೊಟ್ಟಿಲಕ ಹಾಕಿದರು
ಹೀಂಗ ಬಸವ ಬಸವ ಎಂದು ಹೆಸರು ಇಟ್ಟಿಹರು ಜೋ ಜೋ ॥ ೩ ॥

ದಿನ ದಿನಕ ಬಾಳಿಯ ಬನದಂತೆ ಬೆಳದಿ
ಬಾಗೇವಾಡಿಯ ಬಿಟ್ಟು ಕಲ್ಯಾಣಕ ನಡದಿ
ಬಲ್ಲಿದ ಬಜ್ಜಳನ ಮಂತ್ರಿ ನೀ ಆದಿ
ಹೀಂಗ ಖುಲ್ಲ ಜನರ ವಂಶ ನಿಲ್ಲದೆ ನೀ ಅಳದಿ ಜೋ ಜೋ ॥ ೪ ॥

ಜೈನರ ಕುಲದ ಕರ್ತಾ ಬಿಜ್ಜಳಂಕ ಅರಸ
ಬಹಳ ಪುಂಡಾಟಿಕೆ ಮಾಡಿದನು ಅರಸ
ವೀರಶೈವರೊಡನೆ ಮಾಡಿದನು ಬಲು ವಿರಸ
ಹೀಂಗ ಹರನ ಆಜ್ಞದಿ ಬಂದು ಅಳಿದೆ ಅವನ ವಂಶ ಜೋ ಜೋ ॥ ೫ ॥

ಕೆಟ್ಟ ಜೈನರ ಜುಟ್ಟ ಜನಿವಾರ ಹರಸಿ
ಅಷ್ಟು ಜೈನರ ವಂಶ ಮುಂದಕೆ ಕರಿಸಿ
ಸೃಷ್ಟಿಕರ್ತನ ಭಸ್ಮ ಫಣಿಯಲ್ಲಿ ಧರಿಸಿ
ಹೀಂಗ ನಿಷ್ಠಿಯಿಂದಲಿ ಬಂದು ಹರಮತ ಬೆಳಿಸಿ ಜೋ ಜೋ ॥ ೬ ॥

ಬಸವನಂತವರು ಭಕ್ತರ್ಯಾರಿಲ್ಲ
ಬಂಗಾರದ ಸರಿ ವಡವೆಗಳಿಲ್ಲ
ಸಂಗಮನ ಭಕ್ತಿ ಹೌದು ಕೇವಲ
ಹೀಂಗ ಬಸವ ಅಂದವರಿಗೆ ಕುಡಿಸುವನು ಹಾಲ ಜೋ ಜೋ ॥ ೭ ॥

ಕೆಟ್ಟ ಕಲಿಯುಗ ಬಂದು ಸೃಷ್ಟಿಗೆ ನಿಂತು
ಕಲ್ಯಾಣ ಪಟ್ಟಣವ ಕಡೆ ಆಟವಾಯಿತು
ಬಲ್ಲಿದ ಬಸವಣ್ಣನ ಆಳಿಕೆ ಮುಗಿಯಿತು
ಹೀಂಗ ಖುಲ್ಲ ಜೈನರ ವಂಶ ನಿಲ್ಲದೆ ಅಳಿತು ಜೋ ಜೋ ॥ ೮ ॥

ಕಲ್ಯಾಣಪುರ ಬಿಟ್ಟು ತ್ವರಿತದಿ ನಡದಿ
ಪಟ್ಟಣ ಹಾಳಾಗಲೆಂದು ಶ್ರಾಪಿಸಿದಿ
ಕಪ್ಪಡಿ ಸಂಗಮನಲ್ಲೆ ನೀ ಬಂದಿ
ಹೀಂಗ ಸಂಗನಂಗದೊಳಗೆ ಲಿಂಗದೊಳಾದಿ ಜೋ ಜೋ ॥ ೯ ॥

– ಕೃತಿ: ಬಸವಣ್ಣ ನಿನ್ನ ಹೆಸರ ದೆಸೆ ದೆಸೆಗೆ ಶಿವ ಮಂತ್ರ

***

ಬಸವನೆಂಬ ಜ್ಯೋತಿ

ಜೋ ಜೋ ನಮ್ಮ ಭುವನದ ಜ್ಯೋತಿ
ಜೋ ಜೋ ನಮ್ಮ ಭಾಗ್ಯದ ಜ್ಯೋತಿ
ಜೋ ಜೋ ಕಲ್ಯಾಣಪುರದಾ ಜ್ಯೋತಿ
ಹೀಂಗಾ ಜೋಯೆಂದು ತೂಗಿ ಬಸವನೆಂಬ ಜ್ಯೋತಿ ಜೋ ಜೋ॥ ೧ ॥

ಧರೆಯೊಳು ಧರಮ ಹಾಳಾಗ್ಯಾದೆಂದು
ಹರನಿಗೆ ತಿಳಸ್ಯಾನ ನಾರದ ಬಂದು
ಹರತಾನು ಕೊರಗ್ಯಾನ ಮಾಡಲೇನೆಂದು
ಹೀಂಗಾ ಮನದಾಗ ಮಾಡ್ಯಾನ ವಿಚಾರ ಒಂದು ಜೋ ಜೋ ॥ ೨ ॥

ಸೃಷ್ಟಿಯ ನಿರ್ಮಾಣ ಮಾಡಿದ ಶಿವನು
ತಟ್ಟನೆ ಮಾಡ್ಯಾನ ವಿಚಾರೊಂದು
ಸೃಷ್ಟಿಗೆ ಶ್ರೇಷ್ಠನು ಶ್ರೀ ಬಸವನೆಂದು
ಹೀಂಗಾ ಬಸವಗ ಖಳುವ್ಯಾನ ಸೃಷ್ಟಿಗೆ ಅಂದು ಜೋ ಜೋ ॥ ೩ ॥

ಮದನಾರಿ ಆಜ್ಞೆ ಶಿರದೊಳು ಧರಿಸಿ
ಮಾದಲಾಂಬೆಯ ಉದರದಲ್ಲಿ ಉದಿಸಿ
ಬಾಗೇವಾಡಿಯಲ್ಲಿ ಆ ಕೂಸು ಜನಿಸಿ
ಹೀಂಗಾ ಬ್ರಾಹ್ಮರ ಮತದಲ್ಲಿ ಹುಟ್ಟ್ಯಾನ ಬಸವಾ ಜೋ ಜೋ ॥ ೪ ॥

ವೈಶಾಖ ಶುದ್ಧ ತೃತಿಯಾದ ದಿವಸ
ಲೇಸಾದ ರೋಹಿಣಿ ನಕ್ಷತ್ರವಿರಲು
ವಾರೆಂಬುದು ಸ್ವಾಮಾರ ಹುಟ್ಟಿತ್ತು ಅಂದು
ಹೀಂಗಾ ಹುಟ್ಟ್ಯಾರ ಬಸವಣ್ಣ ಶುಭದಿನದಂದು ಜೋ ಜೋ ॥ ೫ ॥

ಕಪ್ಪಡಿ ಸಂಗಮನಾಥನೇ ಬಂದು
ಕಾವಿ ಅಂಗಿ ಕಾವಿ ರುಮಾಲದೊಳು ನಿಂದು
ಕೂಸಿಗಿ ಕಟ್ಟ್ಯಾರ ಶಿವಲಿಂಗ ಅಂದು
ಹೀಂಗಾ ಬಸವಾನೆಂಬ ಹೆಸರು ಇಟ್ಟಾರ ಅವರು ಜೋ ಜೋ ॥ ೬ ॥

ಬೆಳದಾನ ಬಾಲ ಸೂರ್ಯನ ಹಾಂಗ
ಬಾಲ ಲೀಲೆಗಳು ತೋರುತ ಆಗ
ಇಲ್ಲದ ಕೆಲಸ ಮಾಡಿ ಬಲುಬೇಗ
ಹೀಂಗಾ ಬಾಲಕಗ ಎಂಟ್ವರ್ಷ ಆಗ ಜೋ ಜೋ ॥ ೭ ॥

ಜನಿವಾರ ಕಟ್ಟಲು ಬಂದಾರ ದ್ವಿಜರು
ಅಕ್ಕನಿಗೆ ಕಟ್ಟೆಂದು ಹೇಳ್ಯಾರ ಕುವರ
ಸೊಕ್ಕಿನ ಮಾತ ಬ್ಯಾಡ ಅಂದಾರ
ಹೀಂಗಾ ಜನಿವಾರ ಕಿತ್ತಿ ಹೊಂಟಾನ ಶಿವಪುತ್ರ ಜೋ ಜೋ ॥ ೮ ॥

ಕಪ್ಪಡಿ ಸಂಗಮಕ ಬಂದಾರ ಅವರು
ಅಕ್ಕನಾಗಮ್ಮ ಬೆನ್ನ ಹಿಂದೆ ಇದ್ದರು
ಅಲ್ಲಿಯ ಗುರುಗಳು ಹಿಗ್ಗಿಲಿ ಹರಸಿದರು
ಹೀಂಗಾ ತಾಯಿ ತಂದಿ ಎಲ್ಲಾ ಅವರೆ ಆಗ್ಯಾರೋ ಜೋ ಜೋ ॥ ೯ ॥

ಬಿಜ್ಜಳ ರಾಜಾಗ ಮಂತ್ರಿ ಆಗ್ಯಾರ
ಹೆಜ್ಜೆ ಹೆಜ್ಜೆಗೆ ಅನ್ಯಾಯ ಕಂಡಾರ
ಬಿಜ್ಜಳನ ಲಿಪಿಯು ಓದ್ಯಾರ ಆಗ
ಹೀಂಗಾ ಧರ್ಮವ ಕಟ್ಟಲು ಸಜ್ಜಾದ ಬಸವಾ ಜೋ ಜೋ ॥ ೧೦ ॥

ನೀಲಮ್ಮ ಗಂಗಮ್ಮಾ ಮಂತ್ರಿಗಳ ಮಕ್ಕಳು
ಬಸವನ ಕೈಯರ ಹಿಡದಾರ ಅವರು
ಬಾಲ ಸಂಗಯ್ಯನೆಂಬ ಪುತ್ರನ ಪಡೆದು
ಹೀಂಗಾ ಸಂಸಾರದಲ್ಲಿದ್ದು ಪರಮಾತ್ಮನಾಗಿ ಜೋ ಜೋ ॥ ೧೧ ॥

ತ್ರಿಪುರಾಂತ ಕೆರಿಮ್ಯಾಲ ಮಂಟಪ ಕಟ್ಟಿ
ಅದರೊಳಗೆ ವಚನ ತಿಳದ್ಹಾಂಗ ಬರದಿಟ್ಟಿ
ಹೆಣ್ಣುಗಂಡೆಂಬ ಭೇದ ದೂರಿಟ್ಟಿ
ಹೀಂಗಾ ಜಾತಿಯ ಮೂಲ ಕಿತ್ತಿಟ್ಟಿ ಜೋ ಜೋ ॥ ೧೨ ॥

ಮುನ್ನೂರ ಅರವತ್ತು ಪವಾಡ ಮಾಡಿ
ಏಳು ನೂರು ಎಪ್ಪತ್ತು ಗಣಂಗಳ ಕೂಡಿ
ಲಕ್ಷದ ತೊಂಭತ್ತಾರು ಸಾವಿರ ನೋಡಿ
ಹೀಂಗಾ ಕಲ್ಯಾಣ ಮಾಡ್ಯಾರ ಶಿವನ ನಗರಿ ಜೋ ಜೋ ॥ ೧೩ ॥

ಹೊಲೆಯ ಮಾದಿಗ ಜಾತಿಯಿಲ್ಲದೆ
ಎಲ್ಲರು ಶರಣರು ಒಂದೇ ಎಂದಾಡಿ
ಎಲ್ಲರೂ ಕಟ್ಟ್ಯಾರ ಭಕ್ತಿಲಿ ಲಿಂಗವಾ
ಹೀಂಗಾ ಕಲ್ಯಾಣ ಊರಾಗ ಸಾಲ್ಹತ್ತಿ ಶರಣರು ಜೋ ಜೋ ॥ ೧೪ ॥

ಶರಣರ ಶರಣರ ಲಗ್ನವಾಗಲು
ಕೊಂಡಿಯ ಮಂಚಣ್ಣ ಕಿವಿಯ ಊದಲು
ಬಿಜ್ಜಳ ನುಡಿತಾನ ಬಾಯಾಗ ಮಾತು
ಆಗ ಬಸವಣ್ಣ ಬಿಡತಾರ ಕಲ್ಯಾಣ ಊರು ಜೋ ಜೋ ॥ ೧೫ ॥

ಕಪ್ಪಡಿ ಸಂಗಮಕ ಮೆಟ್ಟ ಮ್ಯಾಡ್ಯಾರ
ಸಾಕಿನ್ನು ಲೋಕದಾಟ ಎಂದಾರ
ಕೈಮುಗಿದು ಸಂಗಮಗ ಭಕ್ತಿಯಿಟ್ಟು ಬೇಡ್ಯಾರ
ಹೀಂಗಾ ಬಸವಣ್ಣ ಆಗ್ಯಾರ ಲಿಂಗದೊಳಗಲ್ಲಿ ಜೋ ಜೋ ॥ ೧೬ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

ಜೋ ಜೋ ಎನ್ನ ಜ್ಯೋತಿಯ ಕಂದಾ

ಜೋ ಜೋ ಎನ್ನ ಜ್ಯೋತಿಯ ಕಂದಾ ಜೋ ॥ ಪ ॥

ಜೋ ಜೋ ಭೃತ್ಯ ಭಕ್ತರ ಶಿಶುವೆ ।
ಜೋ ಜೋ ಸತ್ಯ ಶರಣರ ಅಸುವೆ ।
ಜೋ ಜೋ ನಿತ್ಯ ಪ್ರಮಥರ ವಶವೆ ।
ನಿನ್ನ ಚಿತ್ತದಿಂ ಪಾಡುವೆ ಅರ್ತಿಗೋಸುಗವೇ ಜೋ ॥ ೧ ॥

ಹರಭಕ್ತ ಭಕ್ತೆಯರ ವರಗರ್ಭದಿಂದ ।
ಧರೆಯನುದ್ಧರಿಸುವ ಕಾರಣದಿಂದ ।
ನರಜನ್ಮ ತಾಳಿ ನೀ ಧರೆಗಿಳಿದು ಬಂದೆ ।
ಮುಂದೆ ಹರನಾಗಿ ಜಗವನ್ನು ಬೆಳಗಿದ ತಂದೆ ಬಸವ ಜೋ ॥ ೨ ॥

ಅಂಬೆಗಾಲಿಟ್ಟ ಚಿದಂಬರ ದೊರೆಯೇ ।
ತುಂಬಿ ಪರಿಪೂರ್ಣ ಬಹ್ಮಾಂಡದಿ ಮೆರೆವೆ ।
ನಂಬಿದ ಭಕ್ತರ ಹೃದಯದೊಳಿರುವೆ ।
ನಿನ್ನ ಶಂಭೋ ಶಂಕರನೆಂದು ರಂಬಿಸಿ ಕರೆವೇ ಜೋ ॥ ೩ ॥

ಹಣ್ಣು ಸಕ್ಕರೆ ಹಾಲು ಬೆಣ್ಣೆಗಳನೊಲ್ಲ ।
ಬಣ್ಣದಂಗಿ ಚಂಡು ಬುಗುರೆಯನೊಲ್ಲ ।
ರನ್ನ ಚಿನ್ನದ ಮುತ್ತಿನ ಹಾರವನೊಲ್ಲ ।
ಒಳ್ಳೆ ಬಣ್ಣಿಸಿ ಒಮ್ಮನದಿ ಪಾಡಿದರೆ ನಲಿವ ಜೋ ॥ ೪ ॥

ತೂಗುವೆ ತೂಗಿ ಮಲಗಿಸುವೆ ನಿನ್ನ ।
ಬೇಗ ಶಿವಯೋಗ ನಿದ್ರೆಯೆಳಿರು ಮುನ್ನ ।
ಭೋಗ ಭಾಗ್ಯವನೆಲ್ಲ ಅಳಿದ ಬಸವಣ್ಣ ।
ಭರದೀ ರಾಗ ದ್ವೇಷಗಳೆಲ್ಲ ಅಳಿದಂಥ ಬಸವ ಜೋ ॥ ೫ ॥

ಆರಾರರಿಯದ ನಿನ್ನ ಇರುವನ್ನು ತಂದು ।
ಮಾರಾರಿ ಶರಣರು ತೋರಿದರು ಬಂದು ।
ಸಾರ ಅಷ್ಟಾವರಣ ಹೊದಿಕೆಯೊಳಂದು ।
ನಿನ್ನಧೀರ ನಾಮವೇ ಇಷ್ಟಲಿಂಗಯ್ಯನೆಂದು ಜೋ ॥ ೬ ॥

ಪರಮ ಪಾವನ ಮೂರ್ತಿ ದೊರೆಯ ನಿನ್ನ ।
ಕೊರಗಿ ನಾ ಬೆಂದು ಬಾಡಿದೆ ಶಿವಯೋಗಿ ।
ಹರಗುರು ಕರುಣದಿಂ ಬಂದೇ ನಿನಗಾಗಿ ।
ಶ್ರೇಷ್ಠ ಗುರು ಬಸವ ಪ್ರಭು ಎಂದು ಹೆಸರಿಟ್ಟು ತೂಗಿ ಜೋ ಜೋ ॥ ೭ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

ಬನ್ನೀ ಶಿವಶರಣರು

ಬನ್ನೀರಿ ಶಿವಶರಣರು ಬೇಗ ಬನ್ನೀರಿ
ಬಸವ ಶಿವನ ಮೇಲೆ ಪದ್ಯ ಹಾಡೀರಿ
ಹಣೆಯ ಮೇಲೆ ಹಣೆಯ ಕುಂಕುಮ ಧರಿಸೀರಿ
ಹೀಗೆ ಭಾರತ ಬಾಲ್ಯಾರು ತೊಟ್ಟಿಲು ತೂಗೀರಿ ಜೋ ಜೋ ॥ ೧ ॥

ತೊಟ್ಟಿಲು ಬಟ್ಟಲು ಬೆಳ್ಳಿ ಬಂಗಾರ
ಅರಳೆಲಿ ಬೆಂಡೋಲಿ ಮುತ್ತಿನ ಹಾರ
ವಾಣಿಯ ಮಂಟಪದೊಳು ರತ್ನ ಸಿಂಗಾರ
ಹೀಗೆ ಕಂದನ ಬೆರಳುಳ್ಳ ಹಳ್ಳದುಂಗಾರ ಜೋ ಜೋ ॥ ೨ ॥

ತಂದೆ ತಾಯಿಯವರು ಶಿವನ ಭಕ್ತರು
ಭಕ್ತಿಗಾಗಿ ಬಂದ ಸ್ವಾಮಿ ಶಂಕರನು
ಫಲಕೊಟ್ಟು ಹೋಗಿದ್ದ ಆ ಪರಮೇಶ್ವರನು
ಹೀಗೆ ಕೂಸಿನ ಹೆಸರಿಡರಿ ಬಸವೇಶ್ವರ ಜೋ ಜೋ ॥ ೩ ॥

ಅಣ್ಣ ಅಣ್ಣ ನೀವು ನಮ್ಮ ಬಸವಣ್ಣ
ಮುಖ್ಯಮಂತ್ರಿಯಾಗಿ ನೀವು ಕಲ್ಯಾಣ
ಲೋಕಕಲ್ಯಾಣಕ್ಕಾಗಿ ಧೀರ ಕಂಕಣ
ಹಿಂಗೆ ದೇವರರೊಳು ಸೃಷ್ಟಿ ಶಿವದಾರ ಜೋ ಜೋ ॥ ೪ ॥

ಹೆಣ್ಣು ಹೊನ್ನು ಮಣ್ಣು ಮೂರು ಸಮಾನ
ಲೋಕ ಪಾಪವು ಮಾಡಿದ ಪಾವನ
ಏಕ ನಿಷ್ಠೆದೋಳು ನುಡಿಯ ಜೀವನ
ಹಿಂಗೆ ಗೋರಟದಾ ಬಾಲೇರು ಹಾಡ್ಯಾರ ಕವನ ಜೋ ಜೋ ॥ ೫ ॥

– ಶ್ರೀಮತಿ ಬಾಗಮ್ಮ ರಾಜಸೂರೆ ಗೋರ್ಟಾ(ಬಿ)

***

ಅಣ್ಣಾ ಅಣ್ಣಾ ನೀನು ನಂಬಿಸೋ

ಅಣ್ಣಾ ಅಣ್ಣಾ ನೀನು ನಮ್ಮ ಬಸವಣ್ಣ
ಮಂತ್ರಿಯಾಗಿ ನೀನು ಸೇರಿ ಕಲ್ಯಾಣ
ಮೂಢ ಜನರಿಗಿ ಮಾಡೀರಿ ಉದ್ದರಣ । ಹೀಂಗ
ಕೆಲವು ದಿನಗಳಲ್ಲಿ ಲೋಕ ಕಲ್ಯಾಣ । ಜೋ ಜೋ ॥ ೧ ॥

ಹನ್ನೊಂದು ನೂರಾ ಆರರಲ್ಲಿ
ತಾಯಿ ಮಾದಲಾಂಬಿಕೆ ಗರ್ಭದಲ್ಲಿ
ತಂದಿ ಮಾಧವರಸರ ಉದರಲ್ಲಿ । ಹೀಂಗ
ಬಸವಣ್ಣ ಹುಟ್ಯಾರ ಬಾಗೇವಾಡಿಯಲ್ಲಿ ಜೋ ಜೋ ॥ ೨ ॥

ಬಾಗೇವಾಡಿಯಲ್ಲಿ ಬಸವಣ್ಣ ಹುಟ್ಟಿ
ಕಪ್ಪಡಿ ಸಂಗಮನ ಪಾದವ ಮುಟ್ಟಿ
ಸೂರ್ಯ ಚಂದ್ರರಂಗ ವಚನವ ಕೊಟ್ಟು । ಹೀಂಗ
ಬಸವ ಕಲ್ಯಾಣದೊಳು ವಚನವ ಬರೆದಿಟ್ಟು । ಜೋ ಜೋ ॥ ೩ ॥

ಬ್ರಾಹ್ಮರ ಧರ್ಮದಲಿ ಹುಟ್ಯಾರ ಬಸವಣ್ಣ
ಶ್ರೇಷ್ಠ ಶರಣ ಆಗಿರಿ ಶರಣ
ಜೈನ ಮತಕೆಲ್ಲ ತಂದಿದಿ ಮರಣ । ಹೀಂಗ
ಬಸವಣ್ಣಗ ಯಾರು ಮಾಡಿಲ್ಲ ಲಿಂಗಧಾರಣ । ಜೋ ಜೋ ॥ ೪ ॥

ಪತಿವ್ರತಿ ಬಾಲೆರಿಗೆ ಗಂಡ ಒಬ್ಬನೆ
ಲಿಂಗುಳ್ಳ ಭಕ್ತರ ದೇವರು ಒಬ್ಬನೆ
ಹೆಜ್ಜೆ ಹೆಜ್ಜೆಗೆಲ್ಲ ಶಿವನು ಇದ್ದಾನ । ಹೀಂಗ
ಗುರು ಮುಟ್ಟಿ ಗುರುತ ತೋರಿಸಿದ ಅವನು । ಜೋ ಜೋ ॥ ೫ ॥

ತಾರೆವ್ವ ಬಾಲೇರು ಬೆಳ್ಳಿಬಟ್ಟಲು
ಅದರೊಳಗ ಹಾಕಿರೆ ಹಾಲು ಸಕ್ಕರಿ
ಕುಡಿದು ನೋಡಿರಿ ಬಸವನ ಲೀಲೆ । ಹೀಂಗ
ಬಾಲಾನ ಹಾಕಿರಿ ತೊಟ್ಟಿಲದೊಳಗ । ಜೋ ಜೋ ॥ ೬ ॥

– ಶ್ರೀಮತಿ ಪಾರ್ವತಿ ಜೇಮಶೆಟ್ಟಿ, ಹಾಗೂ
ಅನ್ನಪೂರ್ಣ ದೇವಣಿ, ಸರ್ವಮಂಗಳಾ ಜೋಗೂರ
– ಶ್ರೀಮತಿ ಗೌರಮ್ಮ ಕಂಟೆಪ್ಪ ಪತಂಗೆ, ಗೋರ್ಟಾ
– ಶ್ರೀಮತಿ ಗೌರವ್ವ ಕಾಡಾದಿ

***

ಬಸವನೆಂಬ ನಾಮ ಜಗದಾಗ ಧರಿಸಿ

ಬಸವನೆಂಬ ನಾಮ ಜಗದಾಗ ಧರಿಸಿ
ಅನುಭವ ಮಂಟಪ ಕಲ್ಯಾಣದಾಗ ಮೆರೆಸಿ
ಆರು ಕಾಲಿನ ಆಸನ ಅದರಾಗ ಇರಿಸಿ
ಹೀಂಗ ಮೂರು ವರ್ಷ ಕಾಯ್ದಾರ ಕಣ್ಣಾಗ ಕಣ್ಣಿರಿಸಿ ಜೋ ಜೋ ॥ ೧ ॥

ಯಾರಿಗೂ ತಿಳಿವಲ್ದು ಬಸವನ ಮಾಟ
ಶರಣರಿಗಿ ಅಗ್ಯಾದ ಇದು ವಿಚಿತ್ರ ಆಟ
ಕೇಳ್ಯಾರ ಬಸವಗ ಇದರ ಗುಟ್ಟ
ಹೀಂಗ ಅದರಿಂದ ನಡಿಬೇಕು ಜಗದಾಟ ಜೋ ಜೋ ॥ ೨ ॥

ಸಿದ್ಧರಾಮಗ ಕರಕೊಂಡು ಪ್ರಭುರಾಯ ಬಂದ
ಬಸವಗ ಆಗ್ಯಾದ ಹೆಚ್ಚಿಗಿ ಆನಂದ
ಶೂನ್ಯಸಿಂಹಾಸನದ ರಾಜನು ಬಂದು
ಹೀಂಗ ಬಸವಣ್ಣ ಮಾಡ್ಯಾರ ಪ್ರಭುದೇವರಿಗಿ ಚಂದ ಜೋ ಜೋ ॥ ೩ ॥

ಉಗಾದಿ ಹಬ್ಬ ಜಗಕ್ಕೆ ದೊಡ್ಡದು
ಶರಣರಿಗಿ ಆಗ್ಯಾದ ಎಲ್ಲಕ್ಕ ಹೆಚ್ಚಿಂದು
ಪ್ರಭುವಿಗಿ ಕೂಡಸ್ಯಾರ ಸಿಂಹಾಸನ ಮ್ಯಾಲ ಅಂದು
ಹೀಂಗ ಮಾಡ್ಯಾರ ಅದರಾಗ ಧರಮದ ಜೋಕಾಲಿ ಜೋ ಜೋ ॥ ೪ ॥

– ಶ್ರೀಮತಿ ಗೌರವ್ವ ಕಾಡಾದಿ

***

ಭಾಗ್ಯದ ಬಸವ ಜೋ

ಜೋ ಜೋ ನಮ್ಮ ಭಾಗ್ಯದ ಬಸವ ಜೋ ಜೋ ॥ ಪ ॥

ಧರೆಯೊಳ್ ಹಲವೀರಶೈವರು ತಮ್ಮವರ ಶಿವಾಚಾರವ
ಬಿಡುತಿಹರೆಂದು ಶಿವನಡಿಗೈತಂದು ನಾರದನುಸುರೆ ಕೇಳಿ
ಹರ ತಾನು ಕೊರಗೀದ ಮಾಡಲೇನೆಂದು ಜೋ ಜೋ ॥ ೧ ॥

ದಿಟ್ಟರಾವಣನ ಶಿರ ಮೆಟ್ಟಿದ ಶಿವನು
ತಟ್ಟನೆ ಮಾಡಿದ ಆಲೋಚನೆಯನ್ನು
ಸೃಷ್ಟಿಗೆ ಶ್ರೇಷ್ಠನ ಶ್ರೀನಂದಿಯ ಕಳುಹಿ
ತಟ್ಟನೆ ಶಿವಮತವ ಪೊರೆಯ ಬೇಕೆಂದ ಜೋ ಜೋ ॥ ೨ ॥

ವಸುಧೆಗೆ ಅವತರಿಸಿ ಪೋಗು ನೀ ಎಂದು
ಬಸವೇಶ ನಾಮದಿಂ ಶೋಭಿಸು ಎಂದು
ಪಶುಪತಿ ಮತವನ್ನುದ್ಧರಿಸು ನೀ ಎಂದು
ನಂದೀಗಸಮಾಕ್ಷನುಸುರೀದನು ನಸುನಗೆಯಿಂದ ಜೋ ಜೋ॥ ೩ ॥

ಶಿವನಾಜ್ಞೆ ಕೇಳೂತ ನಂದೀಯ ಮುಖವು
ಬೆವರೀತು ಬಾಡಿತು ನಿಟ್ಟುಸಿರಿಟ್ಟು
ಶಿವ ನಿನ್ನ ಸನ್ನಿಧಿಯ ನಾ ಬಿಟ್ಟು ಘೋರ
ಭವದಲ್ಲಿ ಜೀವಿಸಲೆಂತೆಂದ ಜೋ ಜೋ ॥ ೪ ॥

ಶಿವಲಿಂಗ ಜಂಗಮರೂಪಾಗಿ ಬಂದು
ಭವದೊಳು ದರ್ಶನವೀಯುವೆಯೆಂದು
ಭವ ಭೀತಿಯನು ಬಿಟ್ಟು ಅವನಿಯನ್ನು ಪೋಗೆ
ಜಪದಿಂ ಶಿವಮತವ ಪೊರೆಯಬೇಕೆಂದಾ ಶಿವನು ಜೋ ಜೋ ॥ ೫ ॥

ಮದನಾರಿ ಆಜ್ಞೆ ಶಿರದೊಳು ವಹಿಸಿ
ಮುದದಿಂದ ಮಾದಲಾಂಬಿಕೆಯೊಳು ಜನಿಸಿ
ಅದನೇನು ಪೇಳ್ವೆನು ನಿಜನೆನಿಸಿ
ಉದಯಿಸಿದನ್ಯೆಯ್ಯ ನಂದಿ ಬಾಗೇವಾಡಿಯಲಿ ಜೋ ಜೋ ॥ ೬ ॥

ವೈಶಾಕ ಶುದ್ಧದೊಳ್ ತೃತಿಯಾದ ದಿವಸ
ಲೇಸಾದ ರೋಹಿಣಿ ನಕ್ಷತ್ರವಿರಲು
ಘಾಸಿಗೊಳ್ಳುವ ಭಕ್ತರ ಪೋಷಿಸಲಿಕೆ ಚೆಲ್ವ
ಕೂಸಾಗಿ ಜನಿಸಿದ ನಂದಿಯು ಅಂದು ಜೋ ಜೋ ॥ ೭ ॥

ಕಪ್ಪಾಡಿ ಸಂಗಮನಾಥನು ಬಂದು
ಕಪ್ಪು ಕಂದರ ಮಂತ್ರ ಬೋಧಿಸಿ ಮತ್ತೆ
ಮುಪ್ಪುರ ಹರಲಿಂಗವಿತ್ತು ತ ಶಿಶುವೀಗೆ
ಒಪ್ಪುವ ಬಸವಾ ಎಂಬ ಹೆಸರಿಟ್ಟ ಜೋ ಜೋ ॥ ೮ ॥

ಬಾಲ ಲೀಲೆಗಳನು ತೋರುತ್ತ ಬಸವಾ
ಕಾಲ ಕರ್ಮಗಳನು ತೋರುತ್ತ ಬಸವಾ
ಪಾಲನೇತ್ರನ ಮಂತ್ರ ಪಠಿಸುತ್ತ ಬಸವಾ
ಜವದಿಂ ಭೂಲೋಕ ಪಾವನ ಗೈದ ಶ್ರೀ ಬಸವಾ ಜೋ ಜೋ ॥ ೯ ॥

ತರಳನಾಗಲು ದ್ವಿಜ ಕರ್ಮವ ತೊರೆದು
ವರ ವೀರಶೈವ ತತ್ವವ ಮೆರೆದು ನಿರತರ
ಪ್ರಮಥರ ಆಚರಣೆವಿಡಿದು ಸದಾ
ಪರತರ ಭಕ್ತಿಯ ತೋರಿದ ಬಸವಾ ಜೋ ಜೋ ॥ ೧೦ ॥

ಅನ್ಯರಿಗೆ ಓದಲ್ಕೆ ಬರದಿರ್ದ ಲಿಪಿಯ
ಚೆನ್ನಾಗಿ ಬಸವೇಶ ನಿಲ್ಲದೆ ಓದಿ
ಉನ್ನತ ಧನವನು ಬಿಜ್ಜಳಗೆ ತೋರೆ ಭೂಪಾಲ
ಮನ್ನಣೆ ಮಾಡಿದವರಾ ಮಂತ್ರಿಯೆನುತ ಜೋ ಜೋ ॥ ೧೧ ॥

ಹೆಜ್ಜೆ ಹೆಜ್ಜೆಗೆ ಮಂತ್ರಮಯವಾಗಿ ಬಸವಾ
ಬಿಜ್ಜಳನ ವರ ಮಂತ್ರಿಯೆನಿಸಿ ಬಸವಾ
ಸಜ್ಜನರ ಹೃದಯದಿ ವಾಸಿಸಿ ಸದಾ ಬಸವಾ
ಸಜ್ಜನರ ಪೊರೆಯಲ್ಕೆ ಸಜ್ಜಾದ ಬಸವಾ ಜೋ ಜೋ ॥ ೧೨ ॥

ನೀಲಕಂದರ ನಿಚ್ಚೆಗನುಸರಿಸಿ ಬಸವಾ
ನೀಲಮ್ಮ ಗಂಗಾಂಬಿಕೆಯರ ವರಿಸಿ
ಬಾಲ ಸಂಗಯ್ಯನೆಂಬ ಪುತ್ರನ ಪಡೆದು ನಾನಾ
ಲೀಲೆಯ ತೋರಿದ ನಮ್ಮ ಶ್ರೀ ಬಸವಾ ಜೋ ಜೋ ॥ ೧೩ ॥

ಬೀಳುವ ಗೊಲ್ಲತಿಯ ಪಾಲ್ಗೊಂಡವನ್ನು
ಓಲಗದೊಳು ಕುಳಿತು ಕರವೆತ್ತಿ ಪಿಡಿದು
ಜೋಳದ ರಾಶಿಯ ನೋಡುತ್ತ ಮುದದಿ
ಲೀಲೆಯಿಂದ ಮುತ್ತನು ಮಾಡಿದ ಮಹಿಮಾ ಜೋ ಜೋ ॥ ೧೪ ॥

ಮೋಸದಿ ಬದನಿಯ ಫಲವನ್ನು ಧರಿಸಿ
ಶ್ರೀ ಶಿವಲಿಂಗವೆಂದುಸಿರಿದ ನುಡಿಯ
ಭಾಸುರ ಜ್ಞಾನ ದೃಷ್ಟಿಯಿಂದರಿತು ನಿಜಶ್ರೀ
ಶಿವಲಿಂಗವ ಗೈದನಾ ಫಲವ ಜೋ ಜೋ ॥ ೧೫ ॥

ತುಂಗ ಶ್ರೀ ಬಸವಾ ನಿದ್ರೆಯೊಳಿರಲು
ಜಂಗಮಗೆ ಚಾರನು ಪೇಳೆ ಇಲ್ಲೆಂದು
ಮಂಗಲ ಬಸವಾ ಹರಣವನುಳಿದು ನಿಜ
ಜಂಗಮ ಪ್ರಾಣಿಯೆನಿಸಿದ ಬಸವಾ ಜೋ ಜೋ ॥ ೧೬ ॥

ಹುಲ್ಲಿನ ಮೂರ್ತಿಯ ಮಾಡುತ ಖಳರು
ನಿಲ್ಲದೆ ಜಂಗಮ ಬಂದಿಹನೆನಲು
ಬಲ್ಲಿದ ಬಸವ ಭಕ್ತಿಯಿಂ ನಮಿಸಿ ಆ
ಹುಲ್ಲಿನ ಮೂರ್ತಿಗೆ ಪ್ರಾಣವನಿತ್ತಾ ಬಸವಾ ಜೋ ಜೋ ॥ ೧೭ ॥

ಮುನ್ನೂರು ಅರವತ್ತು ಪವಾಡ ತೋರಿ
ಇನ್ನು ಲೋಕದಾಟ ಸಾಕೆಂದು
ತನ್ನಿಷ್ಟ ಲಿಂಗದಿಂದ ಶಿವನಿಗೆ ತಿಳಿಸಿ ಸಾಗಿ
ನನ್ನಿಯಂ ಬಸವೇಶಾ ಸಂಗಮನ ಬೆರೆದ ಜೋ ಜೋ ॥ ೧೮ ॥

– ಕೃತಿ: ಮುತ್ತು ಮುತ್ತಿನ ತ್ವಾಟ

***

ಬಸವಣ್ಣನ ಹಾಡು

ಅಣ್ಣಾ ಅಣ್ಣಾ ನೀನು ನಂಬಿಸೋ ಅಣ್ಣಾ
ಮಂತ್ರಿಯಾಗಿ ನೀನು ಸೇರಿ ಕಲ್ಯಾಣ
ಮೂಢಜನರಿಗಿ ಮಾಡಿ ಉದ್ಧರಣ
ಹಿಂಗೇ ಕೆಲವು ದಿನಗಳಲಿ ಲೋಕಕಲ್ಯಾಣ ಜೋ ಜೋ । ಜೋ ಜೋ ॥

ಹನ್ನೊಂದು ನೂರ ಆರರಲ್ಲಿ
ತಾಯಿ ಮಾದಲಾಂಬಿಕೆ ಗರ್ಭದಲ್ಲಿ
ತಂದಿ ಮಧುವರಸ ಹಿಗ್ಗಿ ಮನದಲ್ಲಿ
ಹಿಂಗೇ ಬಸವಣ್ಣ ಹುಟ್ಟ್ಯಾರ ಭಾಗ್ಯವಾಡಿಯಲ್ಲಿ ಜೋ ಜೋ । ಜೋ ಜೋ ॥

ಬಸವಣ್ಣ ಹುಟ್ಟ್ಯಾರ ಭಾಗ್ಯವಾಡಿಯಲ್ಲಿ
ಕಪ್ಪಡಿ ಸಂಗಮ್ನ ಪಾದವ ಮುಟ್ಟಿ
ಸೂರ್ಯ ಚಂದ್ರಮನಂಗ ವಚನವ ಕೊಟ್ಟೀ
ಹಿಂಗೇ ಬಸವಕಲ್ಯಾಣದೋಳು ವಚನವ ಬರೆದಿಟ್ಟಿ ಜೋ ಜೋ । ಜೋ ಜೋ ॥

ಬ್ರಹ್ಮರ ಮಠದಲ್ಲಿ ಹುಟ್ಟಿದಿ ಬಸವಾ
ಶ್ರೇಷ್ಠರೊಳಗ ನೀನು ಶ್ರೇಷ್ಠ ಆಗಿದಿ
ಜೈನಮತಕ್ಕೆಲ್ಲಾ ತಂದಿದಿ ಮರಣ
ಬಸವಣ್ಣಾಗ ಯಾರು ಮಾಡಿದರು ಲಿಂಗಧಾರಣ ಜೋ ಜೋ । ಜೋ ಜೋ ॥

ಪತಿವರತ ಬಾಲೆಯರ್‍ಗಿ ಗಂಡ ಒಬ್ಬವನು
ಲಿಂಗುಳ್ಳ ಭಕ್ತರಿಗಿ ದೇವ ಒಬ್ಬನೇ
ಹೆಜ್ಜೆ ಹೆಜ್ಜೆಗೆಲ್ಲಾ ಶಿವನು ಇದ್ದಾನೆ
ಹಿಂಗೇ ಗುರುಮುಟ್ಟಿ ಗುರುತಾ ತೋರಿದಿ ಬಸವ ಜೋ ಜೋ । ಜೋ ಜೋ ॥

ತರ್ರೆವ್ವಾ ಬಾಲೇರು ಬೆಳ್ಳಿ ಬಟ್ಟಲು
ಅದರೊಳಗೆ ಹಾಕರಿ ಹಾಲಸಕ್ಕರೆ
ಕುಡಿದು ತೊಟ್ಟಿಲೊಳಗೆ ಬೀಸಿ ಕೈಕಾಲ
ಹಿಂಗೇ ಕಂದಮ್ಮನ ಬಂದು ಹೆಸರ ಇಡುವೀರಿ ಜೋ ಜೋ । ಜೋ ಜೋ ॥

– ಶ್ರೀಮತಿ ರೇಖಾ ರಾಮಶೆಟ್ಟಿ ಕಾಡಾದಿ

***

೫. ಸ್ತುತಿ ಮತ್ತು ನಾಮಾವಳಿ

ಬಸವ ನಾಮಾವಳಿ

ಶ್ರೀಮದನಂತಂ ಬಸವನಾಮಂ
ಸೋಮಸಮಾಕೃತಿ ಬಸವನಾಮಂ
ಮದ್ಗುರು ರೂಪಂ ಬಸವನಾಮಂ
ಸದ್ಗುಣಸಾಂದ್ರಂ ಬಸವನಾಮಂ
ಚಿನ್ಮಯ ಮಹಿತಂ ಬಸವನಾಮಂ
ಸನ್ಮನಿ ವಿನುತಂ ಬಸವನಾಮಂ
ಆದಿ ಅನಾದಿಯು ಬಸವನಾಮಂ
ವೇದಕತೀತಂ ಬಸವನಾಮಂ
ಭೇದಿಸಲಸದಳ ಬಸವನಾಮಂ
ಸಾಧಿಸಲಸದಳ ಬಸವನಾಮಂ
ಜನನ ಜರಾಪಹ ಬಸವನಾಮಂ
ಮನು ಪಾರಾಯಣ ಬಸವನಾಮಂ
ಭಕ್ತಿಲಾಂಕುರ ಬಸವನಾಮಂ
ಮುಕ್ತಿಗೆ ಮೂಲಂ ಬಸವನಾಮಂ
ಸನ್ನುತ ಸಾಧಕ ಬಸವನಾಮಂ
ಸನ್ನುತನಿಗನುಪದು ಬಸವನಾಮಂ
ಶರಣ ಸಹಾಯ ಬಸವನಾಮಂ
ಕರುಣಾ ಸಾಗರ ಬಸವನಾಮಂ
ನಿರ್ಗುಣ ನಿರುಪಮ ಬಸವನಾಮಂ
ಭರ್ಗಾ ಮೋದಂ ಬಸವನಾಮಂ
ಸ್ಮರಣ ವರಪ್ರದ ಬಸವನಾಮಂ
ಮರಣ ವಿನಾಶನ ಬಸವನಾಮಂ
ಧರ್ಮ ಸುಧಾರಣ ಬಸವನಾಮಂ
ಕರ್ಮ ನಿವಾರಣ ಬಸವನಾಮಂ
ಭವ ತಿಮಿರಾರ್ಕಂ ಬಸವನಾಮಂ
ಶಿವ ಸಮಯಾಕರ ಬಸವನಾಮಂ
ಕಾಮಿತಮೀವುದು ಬಸವನಾಮಂ

ಕಾಮಧೇನುವಿದು ಬಸವನಾಮಂ
ಸಾರದ ಶೋಭಿತ ಬಸವನಾಮಂ
ಕಾಮವಿಧ ಧಾರಣೆ ಬಸವನಾಮಂ
ನೇಮ ವಿವರ್ಜಿತ ಬಸವನಾಮಂ
ಕ್ರೋಧ ವಿನಾಶನ ಬಸವನಾಮಂ
ಸಾಧು ನಿಧಾನಂ ಬಸವನಾಮಂ
ಲೋಭರಹಿತ ಬಸವನಾಮಂ
ಸಾಭಿಸಲಾಸಹರಿ ಬಸವನಾಮಂ
ಮೋಹ ವಿಧೂತಂ ಬಸವನಾಮಂ
ಮದ ವಿಧ್ವಂಶಕ ಬಸವನಾಮಂ
ಪದುಳ ವರಪ್ರದ ಬಸವನಾಮಂ
ಮತ್ಸರ ವಿರಹಿತ ಬಸವನಾಮಂ
ಕಾರಣವಿಗ್ರಹ ಬಸವನಾಮಂ
ನಿರ್ಗುಣ ನಿರುಪಮ ಬಸವನಾಮಂ
ಸುಗುಣ ನಿರ್ಗುಣ ಬಸವನಾಮಂ
ಪಾವನಾತ್ಮಕ ಬಸವನಾಮಂ
ಕೋವಿದ ಬಸವನಾಮಂ
ದುಷ್ಟ ಜನಾಂತಕ ಬಸವನಾಮಂ
ಶಿಷ್ಟೋದ್ಧಾರಕ ಬಸವನಾಮಂ
ಭಯ ಪರಿಹಾರಕ ಬಸವನಾಮಂ
ಜಯದಯ ಶೋಭಿತ ಬಸವನಾಮಂ
ಕಾರಣ ವಿಗ್ರಹ ಬಸವನಾಮಂ
ಸಾರ ಸರಣಿಯುತ ಬಸವನಾಮಂ
ಭುವನಾಧಾರಕ ಬಸವನಾಮಂ
ಭವಿದುರ್ಭವಹರ ಬಸವನಾಮಂ
ಶ್ರೀ ಗುರುರೂಪಂ ಬಸವನಾಮಂ
ಯೋಗಾನಂದಿತ ಬಸವನಾಮಂ
ಘನಲಿಂಗಾಕೃತಿ ಬಸವನಾಮಂ
ಮುನಿ ಸಂಭಾವಿತ ಬಸವನಾಮಂ
ಜಂಗಮ ನೆನಮದು ಬಸವನಾಮಂ
ಸಂಗತ ಸಂಗನ ಬಸವನಾಮಂ
ಕಲ್ಪಿತಮೀವುದು ಬಸವನಾಮಂ
ಕಲ್ಪವೃಕ್ಷವಿದು ಬಸವನಾಮಂ
ಚಿಂತಿತಮೀವುದು ಬಸವನಾಮಂ
ಚಿಂತಾರತ್ನಂ ಬಸವನಾಮಂ

ಗುಣಮಣಿ ಮಂಡಿತ ಬಸವನಾಮಂ
ಗುಣ ಮನ ಘನ ಬಸವನಾಮಂ
ಶಿನಾಕಾರಂ ಬಸವನಾಮಂ
ನವ ಮಹಿಮೋದಯ ಬಸವನಾಮಂ
ಸತ್ಯ ಸುಲಕ್ಷಣ ಬಸವನಾಮಂ
ನಿತ್ಯ ನಿರಂಜನ ಬಸವನಾಮಂ
ಪಾರಮಾರ್ಥಪದ ಬಸವನಾಮಂ
ಸಾರಾಚಾರಂ ಬಸವನಾಮಂ
ಕುಮತಿ ವಿಭಂಜನ ಬಸವನಾಮಂ
ಸುಮತ ಸ್ಥಾಪನ ಬಸವನಾಮಂ
ತ್ರಿಜಗತ್ಪಾವನ ಬಸವನಾಮಂ
ನಿಜಸುಖದಾಯಕ ಬಸವನಾಮಂ
ಉಪಮಾತೀತಂ ಬಸವನಾಮಂ
ಉಪದೇಶಕ ನಿಧಿ ಬಸವನಾಮಂ
ಸಂಸ್ಕೃತಿ ವಿವೃತಂ ಬಸವನಾಮಂ
ಸನ್ನುತಿಗನುಪಮ ಬಸವನಾಮಂ
ದುರಿತ ಘರಟ್ಟಂ ಬಸವನಾಮಂ
ದುರುಳ ಜನಾಂತಕ ಬಸವನಾಮಂ
ಹರಗಿರಿ ವಜ್ರಂ ಬಸವನಾಮಂ
ಕುಲುಪಾಂಭುಜಕರಿ ಬಸವನಾಮಂ
ಹರಿಸಂಸ್ಕೃತ ಹಿತ ಬಸವನಾಮಂ
ಸಲೆ ಸದ್ಗುಣ ನಿಧಿ ಬಸವನಾಮಂ
ನಾದಬಿಂದು ಕಳೆ ಬಸವನಾಮಂ
ಪಾಪಂಭುಜ ವಿಧ ಬಸವನಾಮಂ
ತಾಪತ್ರಯ ಹರ ಬಸವನಾಮಂ
ನತಮಂದಾರಂ ಬಸವನಾಮಂ
ಶ್ರಿತಜನರಕ್ಷಕ ಬಸವನಾಮಂ
ಸಂತತ ಮತವಂ ಬಸವನಾಮಂ
ಸಂತಾಭರಣಂ ಬಸವನಾಮಂ
ವಿಶ್ವವ್ಯಾಪಕ ಬಸವನಾಮಂ
ಶಾಶ್ವತ ವಿಭವಂ ಬಸವನಾಮಂ
ನಂಬಿಕೆ ಜಗದೊಳು ಬಸವನಾಮಂ
ಇಂಬಾಗಿರ್ಪುದು ಬಸವನಾಮಂ
ಉತ್ತಮೋತ್ತಮ ಬಸವನಾಮಂ
ಚಿತ್ತಜ ಹರಣಂ ಬಸವನಾಮಂ

ಶ್ರೀಪತಿ ಸನ್ನುತ ಬಸವನಾಮಂ
ಗೋಪತಿ ಪಾಲಿಪ ಬಸವನಾಮಂ
ಸಾಮಗಾನಮಯ ಬಸವನಾಮಂ
ಶ್ರೀಮಸಮಾಹಿತ ಬಸವನಾಮಂ
ಪ್ರಣಮುಚ್ಚಾರಣೆ ಬಸವನಾಮಂ
ಪ್ರಣುತೋದ್ಧಾರಕ ಬಸವನಾಮಂ
ಭ್ರಾಂತಿ ವಿಭೇದಕ ಬಸವನಾಮಂ
ಶಾಂತಿ ಸಮನ್ವಿತ ಬಸವನಾಮಂ
ಮೂರು ಮೂರ್ತಿಘನ ಬಸವನಾಮಂ
ನೀಲಕಂಠ ಗುರು ಬಸವನಾಮಂ

– ಶ್ರೀಮತಿ ಸುಮಿತ್ರಾ ಅಂಗಡಿ

***

ಬಸವಲಿಂಗ ನಾಮಾವಳಿ

ಗುರುಬಸವೇಶ್ವರನನುಪಮನು
ವರ ನೂರಾಯೆಂಟು ನಾಮನೇಮದಿ ಸತತ
ಹರುಷದಿ ಪಠಿಸಲ್ ಭರದಿಂ
ಸುರಚಿರಮಿಷ್ಟ ಸೌಖ್ಯ ಸಕಲ ಸಂಪದಮಕ್ಕುಂ

ಶ್ರೀಮಹಾವೃಷಾಧಿಪ ಪ್ರಸಿದ್ಧನಾಮ ಬಸವಲಿಂಗ
ಧಾಮನಿಧಿ ಶಿಖೇಂದು ಕೋಟಿಧಾಮಸೀಮ ಬಸವಲಿಂಗ
ತತ್ತ್ವಮಸಿ ಪದೈಕ ವಚನ ಧರ್ಮಯುಕ್ತ ಬಸವಲಿಂಗ
ಸತ್ವರಜ ತಮೋಗುಣ ಪ್ರಚಾರ ದೂರ ಬಸವಲಿಂಗ
ಘೋರಪಾಪದೋಷಪುಂಜ ಕುಜ ಕುಠಾರ ಬಸವಲಿಂಗ
ಸಾರವೀರಶೈವ ಸಮಯ ಚಕ್ರವರ್ತಿ ಬಸವಲಿಂಗ
ವೇದಗಳಿಗೆ ನಿಲುಕದಾತನಾದಿ ನೀನು ಬಸವಲಿಂಗ
ನಾದಮೂರ್ತಿ ಎನ್ನಮನದ ಕ್ರೋಧವಳಿಯೊ ಬಸವಲಿಂಗ
ಹಲವು ಜನ್ಮ ಜರೆಗಳಲ್ಲಿ ತೊಳಲಿಬಂದೆ ಬಸವಲಿಂಗ
ಹಲವು ಮಾತದೇತಕೆನ್ನ ಬಿಡದೆ ಸಲಹೊ ಬಸವಲಿಂಗ ॥ ೧೦ ॥
ಯೋನಿ ಮುಖದಿ ಪುಟ್ಟಿ ಪುಟ್ಟಿ ಮಾನಗೆಟ್ಟೆ ಬಸವಲಿಂಗ
ಮಾನವಿಟ್ಟು ಎನಗೆ ಭಕ್ತಿಮಾರ್ಗ ತೋರೋ ಬಸವಲಿಂಗ
ಉದರ ಭೂಮಿಯಲ್ಲಿ ಇನ್ನು ಹುಟ್ಟಲಾರೆ ಬಸವಲಿಂಗ
ಮುದದೊಳೆನಗೆ ನಿಮ್ಮ ಪಾದಪದ್ಮ ತೋರೋ ಬಸವಲಿಂಗ
ಎನ್ನ ಜನನ ಮರಣ ಭಯಗಳನ್ನು ಬಿಡಿಸೊ ಬಸವಲಿಂಗ
ಸನ್ನುತ ಪ್ರಸನ್ನ ನಿನಗೆ ಶರಣುಮಾಳ್ಪೆ ಬಸವಲಿಂಗ

ಮಾಯೆಯೆಂಬ ಬಲೆಗೆ ಸಿಲುಕಿ ಮರುಳನಾದೆ ಬಸವಲಿಂಗ
ಕಾಯೊ ಎನ್ನ ಕರ್ಮಗಳನು ಕಡೆಗೆ ಮೆಟ್ಟಿ ಬಸವಲಿಂಗ
ಹೊನ್ನು ಹೆಣ್ಣು ಮಣ್ಣು ನಂಬಿ ನಿನ್ನ ಮರುತೆ ಬಸವಲಿಂಗ
ಮನ್ನಿಸಯ್ಯ ಜೀಯ ನಿನ್ನ ಮೊರೆಯ ಹೊಕ್ಕೆ ಬಸವಲಿಂಗ ॥ ೨೦ ॥
ಬರಿ ದುರಾಶೆಯಲ್ಲಿ ಬಿದ್ದು ಭ್ರಮಿತನಾದೆ ಬಸವಲಿಂಗ
ದುರುಳತನವ ಬಿಡಿಸಿ ಎನ್ನ ಕರುಣಿಸಯ್ಯ ಬಸವಲಿಂಗ
ಕಾಡುತಿರ್ಪುದೆನ್ನ ಪೂರ್ವ ಕಲುಷವಳಿಯೊ ಬಸವಲಿಂಗ
ನೋಡಿ ಮಾಣ್ಬುದೆನ್ನ ಬೇನೆ ನೋವುಗಳನು ಬಸವಲಿಂಗ
ಕಳೆಯೊ ಎನ್ನ ದುರ್ಮನೋವಿಕಾರಗಳನು ಬಸವಲಿಂಗ
ಬೆಳೆದ ಚಿತ್ತ ಸಂಚಲವನು ಕೆಡಿಸೊ ನೀನು ಬಸವಲಿಂಗ
ತಪ್ಪು ಎನ್ನೊಳುಂಟು ಬಹಳ ಒಪ್ಪಿಕೊಳ್ವೆ ಬಸವಲಿಂಗ
ಅಪ್ಪಿಕೊಂಡೆ ನಿನ್ನ ಪಾದಗಳನು ಸಲಹೊ ಬಸವಲಿಂಗ
ಎನ್ನೊಳಿರ್ದ ಭಿನ್ನ ಗುಣಗಳೆಣಿಸಲುಂಟೆ ಬಸವಲಿಂಗ
ನಿನ್ನ ಧರ್ಮವನ್ನು ಬಿಡದೆಯೆನ್ನ ಕಾಯೊ ಬಸವಲಿಂಗ ॥ ೩೦ ॥
ಕುಣಿಯುತಿರ್ಪೆ ನಾನು ನೀನು ಕುಣಿಸಿದಂತೆ ಬಸವಲಿಂಗ
ಕಣ್ಣುಮನಕೆ ತೆರವುಗೊಟ್ಟು ಎನ್ನ ಕಾಯೊ ಬಸವಲಿಂಗ
ಕರೆದು ಬಿಡದೆ ರಕ್ಷಿಸೆನ್ನ ಕರವ ಪಿಡಿದು ಬಸವಲಿಂಗ
ಹೀನದೆಸೆಯ ಬಿಡಿಸಿ ಎನಗೆ ಇಷ್ಟನಾಗೊ ಬಸವಲಿಂಗ
ಊನವಿಲ್ಲದಮಲ ಸುಖವ ದಾನವೀಯೊ ಬಸವಲಿಂಗ
ಅಭವ ನಿನ್ನ ಹೊರತು ಕಾಯ್ವರಾರ ಕಾಣೆ ಬಸವಲಿಂಗ
ಅಭಯವಿತ್ತು ಎನ್ನ ಮೊರೆಯನಾಲಿಸಯ್ಯ ಬಸವಲಿಂಗ
ದಿಕ್ಕು ದೆಸೆಯು ನೀನೆ ಎನಗೆ ದಿಕ್ಕು ತೋರೋ ಬಸವಲಿಂಗ
ಅಕ್ಕರದಿ ಕಳೆಯೊ ಎನ್ನ ಅವಧಿಗಳನು ಬಸವಲಿಂಗ ॥ ೪೦ ॥
ಬೇಡ ಪರರ ಒಲುಮೆ ನಿನ್ನ ಬೇಡಿಕೊಂಬೆ ಬಸವಲಿಂಗ
ಕಾಡದೆನಗೆ ಕುಶಲವಿತ್ತು ಕಾಯೊ ಎನ್ನ ಬಸವಲಿಂಗ
ಬಿಡಿಸೊ ಎನ್ನ ಮನದ ಮಲಿನವುಡುಗೆ ಎನ್ನ ಬಸವಲಿಂಗ
ತೊಡಿಸೊ ಭಕ್ತಿ ಕವಚವೆಂಬ ತೊಡಿಗೆಯನ್ನು ಬಸವಲಿಂಗ
ಮೃಡನು ನೀನು ಮೂಢ ನಾನು ಬಿಡದೆ ಸಲಹೊ ಬಸವಲಿಂಗ
ಒಡೆಯ ನೀನು ಹುಡುಗ ನಾನು ಕೊಡಿಸು ಮುಕ್ತಿ ಬಸವಲಿಂಗ
ಶರಣ ನೀನು ನರನು ನಾನು ಬೆರಸಿ ಸಲಹೊ ಬಸವಲಿಂಗ
ಪರಮ ನೀನು ಜೀವ ನಾನು ಧರಿಸೊ ಭಸಿತ ಬಸವಲಿಂಗ
ಪತಿಯು ನೀನು ಸತಿಯು ನಾನು ಹಿತವ ತೋರೊ ಬಸವಲಿಂಗ
ಗತಿಯು ಮತಿಯು ನೀನೆ ಎನಗೆ ಸತತ ಸಲಹೊ ಬಸವಲಿಂಗ ॥ ೫೦ ॥
ತಂದೆ ನೀನೆ ಎನ್ನ ಹೆತ್ತ ತಾಯಿ ನೀನೆ ಕರ್ತ ಸಲಹೊ ಬಸವಲಿಂಗ
ಕಂದ ಬಾರೊ ಎನುತ ಕರೆದು ಕರವ ಪಿಡಿಯೊ ಬಸವಲಿಂಗ

ಮರಹು ಬಿಡಿಸಿ ನಿನ್ನ ಪಾದ ಕುರುಹು ತೋರೋ ಬಸವಲಿಂಗ
ಹರಿವಿರಂಚಿಗಳಿಗಭೇದ್ಯನಯ್ಯ ನೀನು ಬಸವಲಿಂಗ
ಪರಮ ಭಕ್ತಜನಕೆ ಪ್ರಾಣಪದವು ನೀನೆ ಬಸವಲಿಂಗ
ಶರಣಜನಕೆ ಬೇಡಿದಿಷ್ಟಪದವು ನೀನೆ ಬಸವಲಿಂಗ
ನಂಬಿ ಭಜಿಸುತಿರ್ಪವರಿಗೆ ಇಂಬು ನೀನೆ ಬಸವಲಿಂಗ
ನಂಬಿಗಿಲ್ಲದವರ ಎದೆಯೊಳಂಬು ನೀನೆ ಬಸವಲಿಂಗ
ಮೂರುಲೋಕಗಳನು ಪೊರೆವ ಕರ್ತ ನೀನೆ ಬಸವಲಿಂಗ
ಧಾರುಣಿಯೊಳು ನಿನ್ನ ಪೋಲ್ವರುಂಟೆ ಬಸವಲಿಂಗ ॥ ೬೦ ॥
ಪಂಚಪರುಷ ವೇದ್ಯವುಳ್ಳ ಪ್ರಮುಖ ನೀನು ಬಸವಲಿಂಗ
ವಂಚನಿಲ್ಲದ ಚಲಭಕ್ತಿ ವರವ ಪಡೆದೆ ಬಸವಲಿಂಗ
ಎಂದಿಗಹುದು ನಿನ್ನ ಕೃಪೆಯು ನೀನೆ ಪೇಳು ಬಸವಲಿಂಗ
ಮಂದಮತಿಯು ನಾನು ಮುಂದೇನರಿಯೆ ಬಸವಲಿಂಗ
ಎನ್ನ ಕಣ್ಣೆ ನಿನ್ನ ಕಳೆಯನಿತ್ತು ಸಲಹೊ ಬಸವಲಿಂಗ
ಎನ್ನ ಜಿಹ್ವೆ ನಿನ್ನ ಪೊಗಳುವಂತೆ ಮಾಡೊ ಬಸವಲಿಂಗ
ನಿನ್ನ ಭೇದವಳಿದು ಎನ್ನೊಳಿನ್ನು ನಿಲ್ಲೊ ಬಸವಲಿಂಗ
ಅನವರತವು ನಿನ್ನ ನೆನಹಿನಲ್ಲಿ ನಿಲಿಸೊ ಬಸವಲಿಂಗ
ಮುನಿಸದೇಕೆ ಎನಗೆ ಒಮದು ಮುದ್ದು ತೋರೊ ಬಸವಲಿಂಗ ॥ ೭೦ ॥
ನಗುತಲೊಮ್ಮೆ ಮುಖವನೆತ್ತಿ ಎನ್ನ ನೋಡೊ ಬಸವಲಿಂಗ
ಅಗಲದೆನ್ನ ಮನಸಿನಲ್ಲಿ ಹರುಷವೀಯೊ ಬಸವಲಿಂಗ
ಬಿಜ್ಜಳಗೆ ಪ್ರಧಾನಿಯಾಗಿ ಮೆರೆದೆ ನೀನು ಬಸವಲಿಂಗ
ಮೂಜಗಂಗಳೊಳಗೆ ಕೀರ್ತಿ ಮುದದಿ ಪಡೆದೆ ಬಸವಲಿಂಗ
ಮುತ್ತು ಮಾಡಿದೆಯ್ಯ ಜೋಳ ಮುದದಿ ನೋಡಿ ಬಸವಲಿಂಗ
ಸತ್ ಚಿತ್ತಾನಂದರೂಪ ಚರಕೆಯಿತ್ತೆ ಬಸವಲಿಂಗ
ಆ ! ಮಹಾತ್ಮ ನಿನ್ನ ಹಾಡಿ ಹೊಗಳಲಳವೆ ಬಸವಲಿಂಗ
ಪ್ರಮಥರೊಡೆಯ ನಿನ್ನ ಕೃಪೆಯ ಪಾಲಿಸೆನಗೆ ಬಸವಲಿಂಗ
ಸತ್ತವಂಗೆ ಮರಳಿ ಪ್ರಾಣವಿತ್ತು ಪೊರೆದೆ ಬಸವಲಿಂಗ
ಸತ್ಯ ಶರಣಸಮಲ ಕರದಿ, ಹಾಲ ಕರೆದೆ ಬಸವಲಿಂಗ ॥ ೮೦ ॥
ಅರಿತು ವಿಷವ ಕುಡಿದು ಲೋಕವರಿಯೆ ಮೆರೆದೆ ಬಸವಲಿಂಗ
ಹರಗೆ ನೊಸಲ ಕಣ್ಣು ಕೊಟ್ಟೆ ಸರಸ ನೀನು ಬಸವಲಿಂಗ
ಹೊರಗೆ ಒಳಗೆ ಪೂರ್ಣಭಕ್ತಿ ನೆರೆದು ಮೆರೆದೆ ಬಸವಲಿಂಗ
ಅರಸಿಯುಟ್ಟ ಸೀರೆ ಬೇಡೆ ಕೊಟ್ಟೆ ನೀನು ಬಸವಲಿಂಗ
ಒಡೆಯರುಗಳ ಬೇಡಿದಿಷ್ಟ ವರವನಿತ್ತೆ ಬಸವಲಿಂಗ
ನುಡಿದ ವಾಕ್ಯ ತಪ್ಪದಂತೆ ನಡೆದು ಮೆರೆದೆ ಬಸವಲಿಂಗ
ಲಿಂಗಸಂಗವಾಗಿ ತ್ರಿವಿಧವಂಗವಳಿದೆ ಬಸವಲಿಂಗ
ಸಂಗಗೊಲಿದು ನೀನು ಜಗದ ಹಂಗುದೊರೆದೆ ಬಸವಲಿಂಗ
ಆರನಳಿದು ಮೂರ ತಿಳಿದ ಅಚಲ ನೀನು ಬಸವಲಿಂಗ

ಆರ ಮೂರರಲ್ಲಿ ಕಂಡು ಧೀರನಾದೆ ಬಸವಲಿಂಗ ॥ ೯೦ ॥
ನಲ್ಲ ಬಾರೋ ಎನ್ನ ಪ್ರಾಣನಾಥ ಬಾರೋ ಬಸವಲಿಂಗ
ಅಲ್ಲಮೇಶನಂಘ್ರಿಯಲ್ಲಿ ಐಕ್ಯ ನೀನು ಬಸವಲಿಂಗ
ದೊರೆಯೆ ಬಾರೊ ಎನ್ನ ಭಕ್ತಿ ಸಿರಿಯೆ ಬಾರೊ ಬಸವಲಿಂಗ
ಬಾರೊ ಎನ್ನ ಸುಪ್ರಸನ್ನ ಭಾವಸಂಗ ಬಸವಲಿಂಗ
ಬಾರೊ ಎನ್ನ ಸಕಲಲೋಕ ಪಾವನಾಂಗ ಬಸವಲಿಂಗ
ಅಯ್ಯ ಚೆಲ್ವರಾಯ ಬಾರೊ ಅಣ್ಣ ಬಾರೊ ಬಸವಲಿಂಗ
ಜೀಯ ಎನ್ನ ಮನದಿ ನಿಂತು ಹರುಷವೀಯೊ ಬಸವಲಿಂಗ
ನಿನ್ನ ನಾಮ ಕೇಳಿದವರು ನಿತ್ಯರಹರು ಬಸವಲಿಂಗ
ನಿನ್ನ ನಾಮ ಜಪಿಸಿದವರು ನೀನೆ ಕಾಣೊ ಬಸವಲಿಂಗ ॥ ೧೦೦ ॥
ನಿನ್ನ ನೆನಹು ನಿಖಿಳ ನಿರಾಕಾರವಹುದು ಬಸವಲಿಂಗ
ನಿನ್ನ ನಾಮ ಜಪಿಸಿ ದುರಿತ ಓಡುತಿಹುದು ಬಸವಲಿಂಗ
ಪಾಹಿ ಪಾಹಿ ಎನ್ನ ಪ್ರಾಣ ಪಟ್ಟದರಸ ಬಸವಲಿಂಗ
ಪಾಹಿ ಎನ್ನ ಪೊರೆವ ಬಿರುದ ತಾಳ್ದ ದೇವ ಬಸವಲಿಂಗೆ
ಜಯ ನಮಸ್ತೆ ನಿನಗೆ ಜಯತು ಜಯತು ಬಸವಲಿಂಗ
ಜಯ ನಮಸ್ತೆ ಕೂಡಲಾದಿ ಸಂಗಮಯ್ಯ ಬಸವಲಿಂಗ
ಹೊಂದಿ ಸೋಮನಾಥಲಿಂಗದೊಲುಮೆ ಪಡೆದೆ ಬಸವಲಿಂಗ
ಅಂದದೊಳು ಶಿವೈಕ್ಯಪದವ ಹೊಂದಿ ಮೆರೆದೆ ಬಸವಲಿಂಗ ॥ ೧೦೮ ॥

– ಶ್ರೀಮತಿ ಸುಮಿತ್ರಾದೇವಿ ಅಂಗಡಿ

***

ಓಂಗುರು ಬಸವಾ

ಓಂಗುರು ಓಂಗುರು ಓಂಗುರು ಬಸವಾ
ಸದ್ಗುರು ಬಸವಾ ತವ ಚರಣಂ
ಮಂಗಳರೂಪಿನ ಜಂಗಮ ಮೂರ್ತಿ
ಮದ್ಗುರು ಬಸವಾ ತವಚರಣಂ ॥ ಪ ॥

ನಮಾಮಿ ಸದ್ಗುರು ಪ್ರಣವ ಸ್ವರೂಪಿನ್
ಮಂತ್ರ ಪುರುಷ ಹೇ ತವ ಚರಣಂ
ಜಗದೋದ್ಧಾರಕ ಪತಿತೋದ್ಧಾರಕ
ವರಗುರು ಬಸವಾ ತವ ಚರಣಂ ॥ ೧ ॥

ಶರಣ ರಕ್ಷಕ ಕರುಣಾ ಮೂರ್ತಿ
ಮರಣ ವಿದೂರ ತವ ಚರಣಂ
ಸಮತಾವಾದಿನ್ ಮನುಕುಲಕೀರ್ತಿ
ಚಿನ್ಮಯ ಮೂರ್ತಿ ತವಚರಣಂ ॥ ೨ ॥

ಸನ್ಮಯಗಾತ್ರಾ ಪರಮಪವಿತ್ರಾ
ಮಮತಾ ಮೂರ್ತಿ ತವ ಚರಣಂ
ಮಾತೃಸ್ವರೂಪಿನ್ ಪಿತೃಸ್ವರೂಪಿನ್
ಜ್ಯೋತಿ ಸ್ವರೂಪಿನ್ ತವ ಚರಣಂ ॥ ೩ ॥

ಭವತಾಪಹಾರಕ ಶಿವಸುಖದಾಯಕ
ಪಾವನ ಪುರುಷ ತವ ಚರಣಂ
ವರಗುಣಸಹಿತ ನಿರುಪಮ ಚರಿತ
ಪರಶಿವ ಭರಿತ ತವ ಚರಣಂ ॥ ೪ ॥

ನಿತ್ಯಾನಂದಿನ್ ಸತ್ಯಸ್ವರೂಪಿನ್
ಭ್ರಾಂತಿ ವಿನಾಶಕ ತವ ಚರಣಂ
ಆನಂದ ರೂಪಿನ್ ಚಿದಾನಂದ ರೂಪಿನ್
ಸಚ್ಚಿದಾನಂದ ಸಂತ ತವಚರಣಂ ॥ ೫ ॥

– ಶ್ರೀಮತಿ ಸುಮಿತ್ರಾದೇವಿ ಅಂಗಡಿ

***

ಬಸವ ಬಸವ ಮೂರಕ್ಷರ

ಬಸವ ಬಸವ ಬಸವಾ ಬಸವಾ ।
ಮೂರಕ್ಷರ ಉಸುರುವದೇ ಮಹಾಕಾರಣ ॥ ॥ ಪ ॥

ಶಿವ ಭಸಿತ ತ್ರಿಪುಂಢರಿ ಧಾರಣ ।
ಬಸವ ಮೂರಕ್ಷರ ಹೆಸರ ಜಪಿಸಿದರೆ
ಬಿಸಿಲಾಗದು ಶಶಿ ಚಂದ್ರನ ಕಿರಣ ॥ ॥ ೧ ॥

ತುತ್ತಿಗೊಮ್ಮೆ ನೀ ಮತ್ತೆ ಬಸವ ಅನ್ನು ।
ಸತ್ಯ ಪ್ರಸಾದ ಸಹ ಭೋಜನ ।
ನಿತ್ಯ ನೆನಿಯೋ ಬಸವ ರಾಜನ ।
ಕತ್ತಲಿ ಸಂವತ್ತಿನೊಳಗ ನಡೆದರೆ ।
ಎತ್ತ ಹೋದರ ನಿನ್ನ ಬೆನ್ನ ಹತ್ಯಾನೋ ॥ ॥ ೨ ॥

ಮೂರಕ್ಷರದಲಿ ಮೂರು ಲೋಕಗಳು ।
ಸಾರಾಮೃತ ಸಂಪಾದನಾ ।
ಮುಕ್ತಿ ಮುರಹರಿ ಮೂರಕ್ಷರ ಧ್ಯಾನ ।
ಮೂರರೊಳಗ ನೋಡು ಮೇರು ಶಿಖರನೇರಿ
ಆರುಸ್ಥಲದ ಜ್ಞಾನಿಸ್ಥಾನ ಹಾನ ॥ ॥ ೩ ॥

ಶ್ರೇಷ್ಠಾದ ಶ್ರೀ ಗುರು ಲಿಂಗ ಜಂಗಮ ಅಂಬೊ ।
ಬಸವನಂಗ ಅಷ್ಟಾವರಣ ।
ಹಿಡಿದ್ಧಸನ ಮಾಡಿಕೋ ತ್ರಿಕರಣ ।
ವಸುಧಿಯೊಳು ನಮ್ಮ ಹೆಸರಾದ ದ್ಯಾಗಾಯಿ।
ಬಸವ ಸ್ತೋತ್ರ ಮಾಡಿ ಹಿಡಿದೆವು ಚರಣ ॥ ೪ ॥

– ಶ್ರೀ ಶಿವಶರಣಪ್ಪ ಚಂದ್ರಾಮಪ್ಪ ನೆಲ್ಲೂರ

***

ಶ್ರೀಗುರು ಬಸವನೆ

ಶ್ರೀಗುರು ಬಸವನೆ ಭವ ಭಯ ಹರಣನೆ
ಯೋಗ ವಿಭೂಷಣ ಓಂ ಓಂ ಓಂ
ರಾಗದಿಂದೆಮ್ಮ ಬೇಗ ಪೊರೆಯಯ್ಯ
ಜಗದಾದಿ ದೇಶಕ ಓಂ ಓಂ ಓಂ ॥ ಪ ॥

ಶರಣ ಹೃದಯದ ಶರಧಿ ಚಂದ್ರಮ
ಪಾರಮಾರ್ಥ ಪಥದೊಳು ಪ್ರಣವ ಸ್ವರೂಪಿ
ಬೆಂದಿಹ ಮನಗಳ ಚಂದದಿ ತಣಿಸುವ
ಜ್ಞಾನ ತುಹಿನಕರ ಓಂ ಓಂ ಓಂ ॥ ೧ ॥

ವಿಭೂತಿ ಲೇಪಿತ ಶಿವಮಣಿ ಭೂಷಿತ
ಶಿವಧವಳಾಂಬರ ಶೋಭಿತನೇ
ಯೋಗನೇತ್ರನೆ ರಾಗರಹಿತನೇ
ಆಗು ಮಾಡೆನ್ನ ಓಂ ಓಂ ಓಂ ॥ ೨ ॥

ಶರಣಗಣ ಮಣಿ ಭಕ್ತ ಕಣ್ಮಣಿ
ಧರೆಗುತ್ತಮ ಗುರು ಚೂಡಾಮಣಿ
ಸತ್ಯ ದೀಪ್ತಿಯ ಎತ್ತಿ ಹಿಡಿಯುತ
ಮಿಥ್ಯವ ಹರಿಸೈ ಓಂ ಓಂ ಓಂ ॥ ೩ ॥

ಸತ್ತು ಚಿತ್ತಾನಂದ ವಂಶಿಕ
ಅರ್ಥಿಯಿಂದ ಈ ಇಳೆಗಿಳಿಯೆ
ಮಾತಾಪಿತೃ ನೀನೆ ಎನುತಲಿ
ಓತು ಒಲಿದೆವು ಓಂ ಓಂ ಓಂ ॥ ೪ ॥

– ಶ್ರೀಮತಿ ಸುಮಿತ್ರಾದೇವಿ ಅಂಗಡಿ

***

ಬಸವೇಶ ತಂದೆ ಬಾರೈ

ಬಸವೇಶ ತಂದೆ ಬಾರೈ
ಹಸನಾದ ಪಾದ ತೋರೈ ॥ ಪ ॥

ನಾ ನಿತ್ಯ ಭಸ್ಮವ ಧರಿಸಿ
ನಾ ನಿತ್ಯ ಪುಷ್ಪವ ಮುಡಿಸಿ
ನಾ ನಿತ್ಯ ಕರ್ಪೂರ ಬೆಳಗಿ
ನಾ ನಿನ್ನ ಸ್ವಾಗತಗೈವೆ
ಬಸವೇಶ ತಂದೆ ॥ ೧ ॥

ಮಡಿವಾಳ ಮಾಚಿದೇವ
ಹಡಪದ ಅಪ್ಪನವರು
ಎಡಗೈಯ ರುದ್ರವ ಸೇವ
ಮುಡಿಪನ್ನ ಇತ್ತರು ಜೀವ ॥ ೨ ॥

ದಾಸನ ದಾಸನು ನಾನು
ಆ ಸೇವೆ ಗೈಯ್ಯುವೆನು
ಹಸಗೂಸು ನಿರ್ಮಲಗುವೆನು
ಹೊಸ ಹುರುಪಿನಿಂ ಪೂಜಿಪೆನು ॥ ೩ ॥

– ಶ್ರೀಮತಿ ಸುಮಿತ್ರಾದೇವಿ ಅಂಗಡಿ

***

ಓ ಎನ್ನ ಬಸವಾ

ಓ ಎನ್ನ ಬಸವಾ ಅರಳಿಸು ಮನವಾ
ಜೀವನ ದಾರಿಯನ್ನು ತೋರಿಸುದೇವಾ ॥ ಪ ॥

ಸಂಸಾರ ಮಾಯಾ ಮುಚ್ಚಿದ ಕಾಯಾ
ಅನುಭವ ಹೃದಯವ ಅರಳಿಸು ದೇವಾ ॥ ೧ ॥

ಸಾಕಾಯಿತೆನಗೆ ಬಡತನದ ಬೇಗೆ
ಇದನೆಲ್ಲ ಬಿಡಿಸಿ ಕಾಪಾಡೊ ದೇವಾ ॥ ೨ ॥

ಕ್ರೋಧವನಳಿಸಿ ಮೋಹವ ಮುರಿಸಿ
ಮೋಕ್ಷದ ದಾರಿಯನ್ನು ತೋರಿಸು ದೇವಾ ॥ ೩ ॥

ನಿನ್ನಲಿ ಕರಿಸಿ ನನ್ನನು ಹರಿಸಿ
ಬಾಳಿನಲ್ಲಿ ಬೆಳಕನ್ನು ಬಿತ್ತರಿಸು ದೇವಾ ॥ ೪ ॥

ಓ ಎನ್ನ ಬಸವಾ ಕಾರುಣ್ಯ ಶಿಸುವಾ
ಕಾಲ ಕಾಲ ಶಾಂತಿಯನ್ನು ನೀ ನೀಡು ದೇವಾ ॥ ೫ ॥

– ಶ್ರೀಮತಿ ಸುಮಿತ್ರಾದೇವಿ ಅಂಗಡಿ

***

ಬಸವರಾಜ ಪಾಲಿಸೊ

ಬಸವರಾಜ ಪಾಲಿಸೋ
ದೀನರನ್ನು ರಕ್ಷಿಸೊ ॥ ಪ ॥

ಶಶಿಧರನಾಜ್ಞೆ ಮನ್ನಿಸಿ
ಬಾಗೇವಾಡಿಯೊಳು ಜನಿಸಿ
ದ್ವಿಜಕರ್ಮವನು ಧಿಕ್ಕರಿಸಿ
ದ್ವಿತಿಯ ಶಂಭುವೆಂದೆನಿಸಿ ॥ ೧ ॥

ಶಿವಯೋಗ ನಿದ್ರೆಯೊಳಿರಲು
ಜಂಗಮ ಸನ್ನಿಧಿಯೊಳು ಬರಲು
ಪೋಗಲು ಪ್ರಾಣವಂ ತೊರೆದು
ಜಂಗಮ ಪ್ರಾಣಿಯೆನಿಸಿದೆ ॥ ೨ ॥

ದುರುಳ ಬಿಜ್ಜಳನ ಗರ್ವ
ಮುರಿದು ಶರಣರ ಪೊರೆದು
ಪೊಗಳಿಕೆಯ ಜರಿದು
ಸಂಗಮನಾಥನೊಳು ಬೆರೆದು ॥ ೩ ॥

– ಶ್ರೀಮತಿ ಸುಮಿತ್ರಾದೇವಿ ಅಂಗಡಿ

***

ಬಸವಾ ಎನ್ನಿರೋ

ಬಸವಾ ಎನ್ನಿರೋ ಬಸವ ಬಸವಾ ಎನ್ನಿರೋ ॥ ಪ ॥

ಕಾಲು ಜಾರಿ ಬೀಳುವಾಗ ಕೋಲು ಹಿಡಿದು ಹೇಳುವಾಗ ।
ಬಸವ ಎನ್ನಿರೋ ॥ ೧ ॥

ತಾಯಿ ನೀನು ತಂದೆ ನೀನು ಬಂಧು ನೀನು ಬಳಗ ನೀನು ।
ಬಸವ ಎನ್ನಿರೋ ॥ ೨ ॥

ಏಳುವಾಗ ಕೂಡುವಾಗ ಮನೆಯ ಕೆಲಸ ಮಾಡುವಾಗ ।
ಬಸವ ಎನ್ನಿರೋ ॥ ೩ ॥

ಕುಟ್ಟುವಾಗ ಬೀಸುವಾಗ ತೊಟ್ಟಿಲನು ತೂಗುವಾಗ ।
ಬಸವ ಎನ್ನಿರೋ ॥ ೪ ॥

ಅಡಗಿಯನು ಮಾಡುವಾಗ ಅಡವಿಗೆ ಹೋಗುವಾಗ ।
ಬಸವ ಎನ್ನಿರೋ ॥ ೫ ॥

ಅಂಗ ನೀನು ಲಿಂಗ ನೀನು ಸಂಗ ನೀನು ಬಸವ ನೀನು ।
ಬಸವ ಎನ್ನಿರೋ ॥ ೬ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

ಎಲ್ಲಿರುವೆ ಬಸವೇಶ

ಎಲ್ಲಿರುವೆ ಬಸವೇಶ । ಎಲ್ಲಿ ಕಾಣಲೋ ನಿನ್ನ
ಒಮ್ಮೆ ದರುಶನ ನೀಡೋ । ಕಂದರನು ಕಾಪಾಡೊ ॥ ಪ ॥

ರೂಪವಂತನೆ ನಿನ್ನ । ರೂಪವನು ತೋರಯ್ಯಾ
ತಾಪವನು ಪರಿಹರಿಸಿ । ಕಾಪಾಡೊ ಬಸವೇಶ ॥ ೧ ॥

ಭಕ್ತಿಯನು ನೀಡಯ್ಯಾ । ಭಕ್ತರನು ಮಾಡಯ್ಯಾ
ಚಿತ್ತ ಶುದ್ಧಿಯನಿತ್ತು । ರಕ್ಷಿಸೆಮ್ಮನು ತಂದೆ ॥ ೨ ॥

– ಶ್ರೀಮತಿ ಪಾರ್ವತಿ ಜೆಮಶೆಟ್ಟಿ
ಹಾಗೂ ಸರ್ವಮಂಗಳ ಜೋಗೂರ

***

ಬಸವಲಿಂಗ ಸ್ವಾಮಿಯ ಧ್ಯಾನ

ಬಸವಲಿಂಗ ಸ್ವಾಮಿಯ ಧ್ಯಾನ ಮಾಡಬೇಕ ನೋಡವ್ವ
ಶುದ್ಧವಾಗಿ ಸಂಸಾರ ಸಾಗುತಾದ ನೋಡವ್ವ ॥ ಪ ॥

ಗಿಡ ಒಳ್ಳೆಯದೆಂದು ನೆರಳಿಗ ನಾ ಹೋದ
ಗಿಡದ ಮ್ಯಾಲಿನ ಘಂಟ್ಯಾ ಒರಳ್ಯಾವೋ ಬಸವಲಿಂಗ ॥ ೧ ॥

ಭಾಂಯಿ ಒಳ್ಳೆಯದೆಂದು ನೀರಿಗಿ ನಾ ಹೋದ
ಭಾಂಯಿದೊಳಗಿನ ನೀರ ಒಣಗ್ಯಾವೋ ಬಸವಲಿಂಗ ॥ ೨ ॥

ಕುಟ್ಟುವಾಗ ಬೀಸುವಾಗ ತೊಟ್ಟಿಲನ್ನು ತೂಗುವಾಗ
ನೀನೇ ಬಾರೋ ಬಸವಲಿಂಗ ॥ ೩ ॥

ಆಡ ಮಕ್ಕಳಾಡುವಾಗ ಆಡಿ ಹಾಲ ಕುಡಿಯಾಗ
ಆಡಿ ಹಾಲ ಕುಡಿಯಾಗ ನೀನೇ ಬಾರೋ ಬಸವಲಿಂಗ ॥ ೪ ॥

ಬಸವಲಿಂಗ ಸ್ವಾಮಿ ಬಂದು ತಾಳಿಕಟ್ಟಿ ಹೋದ ಬಳಿಕ
ತಾಳಿ ಕಟ್ಟಿ ಹೋದ ಬಳಕ ನಾನೇ ಗಂಡನಂತ ತಿಳಿಯೇ ॥ ೫ ॥

– ಶ್ರೀಮತಿ ಗಂಗಮ್ಮಾ ಬಾಬುರಾವ ಗೋರಂಪಳ್ಳಿ
(ಭಜನೆ \ ಮೈನೆರೆದಾಗ)

***

ತಂದಿ ಬಸವಲಿಂಗನ ಹಾಡು

ತಂದಿ ಬಸವಲಿಂಗಾ ನಮ್ಮ ತಾಯಿ ನೀಲಗಂಗಾ
ಹೊಂದಿದ ಬಳಗಾ ಪ್ರಮಥರೆಲ್ಲರು
ಪ್ರಭುರಾಯ ಗುರು ಸಿದ್ಧಲಿಂಗಾ ॥ ಪ ॥

ತೊತ್ತಿನ ಮಗನೆಂದು ಎಲ್ಲರು ಎತ್ತಿಕೊಂಡಾರೋ ಬಂದು
ಚಿತ್ತದೊಲ್ಲಭ ಗುರು ಗೊತ್ತ ತೋರಿಸಿದರೆ
ಕತ್ತಲ ಹಾರಿತು ಬೆಳಗ ಉದಾಯಿತು ॥ ೧ ॥

ಸೇವೆಯೊಳಗ ವಿಡಿಸಿ ಶಿವಾನುಭವದ ಅಮೃತ ಉಣಸೀ
ಝಾವ ನಿಲ್ಲದೇ ಭಕ್ತಿಭಾವ ನೆಲಗೊಳಿಸುತ್ತ
ಕಾವಲಿದೊಳಗಿಟ್ಟು ಕಾಯುವರೆನ್ನನು ॥ ೨ ॥

ಈ ಘನ ಸುಖ ಸಾಗರದೇ ಅನುನದಿ ಮುಣಗಿದೇ ಎಚ್ಚರದೇ
ತನು ಸುಖ ದುಃಖ ಭೋಗ ಅನುಮಾತ್ರ ಅರಿಯದೆ
ಮನದಾಂಗ್ರಿಯ ಸಿದ್ಧನಾಲ್ಮಿಯ ನರಿಯದೆ ॥ ೩ ॥

ಬಸವನ ಪಾದ ಬ್ರಹ್ಮಾನಂದಾ ಜಂಗಮ ಪಾದ ಲಿಂಗಾನಂದಾ
ಇವೆ ಶಿವಂ ॥ ೪ ।

– ಶ್ರೀಮತಿ ಶಶಿಕಲಾ ವಸ್ತದ
– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜಿಮ್ಮೆಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

ಹಾಡು ನನ್ನ ಮನವೇ

ಹಾಡು ನನ್ನ ಮನವೆ ಓಂ ಗುರು ಬಸವಾ ।
ಹೇಳು ನನ್ನ ಮನವೇ ಓಂ ಗುರು ಬಸವಾ ।
ಓಂ ಗುರು ಬಸವಾ ಶ್ರೀ ಗುರು ಬಸವಾ ॥ ॥ ಪ ॥

ಕಲ್ಯಾಣದಿ ಕೇಳಿಸಿತು ಓಂ ಗುರು ಬಸವಾ ।
ಉಡುತಡಿಯಲ್ಲಿ ಉಲಿಯಿತು ಓಂ ಗುರು ಬಸವಾ ।
ಓರಿಸ್ಸಾದಿ ಹಾಡಿತು ಓಂ ಗುರು ಬಸವಾ ॥ ॥ ೧ ॥

ಮಹಾದೇವಿ ಅಕ್ಕ ಓಂ ಗುರು ಬಸವಾ ।
ಚನ್ನಬಸವೇಶ ಓಂ ಗುರು ಬಸವಾ ।
ಸಿದ್ಧರಾಮೇಶ ಓಂ ಗುರು ಬಸವಾ ॥ ॥ ೨ ॥

ಅಲ್ಲಮ ಪ್ರಭುದೇವ ಓಂ ಗುರು ಬಸವಾ ।
ಮಡಿವಾಳ ಮಾಚಯ್ಯ ಓಂ ಗುರು ಬಸವಾ ।
ಉರಿಲಿಂಗ ದೇವ ಓಂ ಗುರು ಬಸವಾ ॥ ॥ ೩ ॥

ಮಾದರ ಚನ್ನಯ್ಯ ಓಂ ಗುರು ಬಸವಾ ।
ಡೋಹಾರ ಕಕ್ಕಯ್ಯ ಓಂ ಗುರು ಬಸವಾ ।
ಶಿವಶರಣ ಹರಳಯ್ಯ ಓಂ ಗುರು ಬಸವಾ ॥ ॥ ೪ ॥

ಮೇದಾರ ಕೇತಯ್ಯ ಓಂ ಗುರು ಬಸವಾ ।
ಹಾವಿನಾಳ ಕಲ್ಲಯ್ಯ ಓಂ ಗುರು ಬಸವಾ ।
ಅಂಬಿಗರ ಚೌಡಯ್ಯ ಓಂ ಗುರು ಬಸವಾ ॥ ॥ ೫ ॥

ನುಲಿಯ ಚಂದಯ್ಯ ಓಂ ಗುರು ಬಸವಾ ।
ಜೇಡರ ದಾಸಿಮಯ್ಯ ಓಂ ಗುರು ಬಸವಾ ।
ಗಜೇಶ ಮಸಣಯ್ಯ ಓಂ ಗುರು ಬಸವಾ ॥ ॥ ೬ ॥

ಘಟ್ಟಿವಾಳಯ್ಯ ಓಂ ಗುರು ಬಸವಾ ।
ದಯಾಮಯಿ ದಸರಯ್ಯ ಓಂ ಗುರು ಬಸವಾ ।
ಮೋಳಿಗೆಯ ಮಾರಯ್ಯ ಓಂ ಗುರು ಬಸವಾ ॥ ॥ ೭ ॥

ಸೌರಾಷ್ಟ್ರದ ಆದಯ್ಯ ಓಂ ಗುರು ಬಸವಾ ।
ಆಯ್ದಕ್ಕಿ ಮಾರಯ್ಯ ಓಂ ಗುರು ಬಸವಾ ।
ಅನುಭಾವಿ ಆಮುಗಯ್ಯ ಓಂ ಗುರು ಬಸವಾ ॥ ॥ ೮ ॥

ಸಕಲೇಶ ಮಾದರಸ ಓಂ ಗುರು ಬಸವಾ ।
ಸೋಡ್ಡಳ ಬಾಚರಸ ಓಂ ಗುರು ಬಸವಾ ।
ಹುತಾತ್ಮ ಮಧುರಸ ಓಂ ಗುರು ಬಸವಾ ॥ ॥ ೯ ॥

ನಿಜಜ್ಞಾನಿ ಅಜಗಣ್ಣ ಓಂ ಗುರು ಬಸವಾ ।
ಹೂಗಾರ ಮಾದಣ್ಣ ಓಂ ಗುರು ಬಸವಾ ।
ವೈದ್ಯ ಸಂಗಣ್ಣ ಓಂ ಗುರು ಬಸವಾ ॥ ॥ ೧೦ ॥

ಹಡಪದ ಅಪ್ಪಣ್ಣ ಓಂ ಗುರು ಬಸವಾ ।
ಕಿನ್ನರಿ ಬೊಮ್ಮಣ್ಣ ಓಂ ಗುರು ಬಸವಾ ।
ಒಕ್ಕಲಿಗ ಮುದ್ದಣ್ಣ ಓಂ ಗುರು ಬಸವಾ । ॥ ೧೧ ॥

ಮಹಾತಾಯಿ ನೀಲಮ್ಮ ಓಂ ಗುರು ಬಸವಾ ।
ಅಕ್ಕನಾಗಮ್ಮ ಓಂ ಗುರು ಬಸವಾ ।
ಅನುಭಾವಿ ಲಿಂಗಮ್ಮ ಓಂ ಗುರು ಬಸವಾ ॥ ॥ ೧೨ ॥

ಮೋಳಿಗೆಯ ಮಾಹಾದೇವಿ ಓಂ ಗುರು ಬಸವಾ ।
ಮೀರಾಗಿ ಬೊಂತಾದೇವಿ ಓಂ ಗುರು ಬಸವಾ ।
ಸುಜ್ಞಾನಿ ಮುಕ್ತಾಯಿ ಓಂ ಗುರು ಬಸವಾ ॥ ॥ ೧೩ ॥

ಆಯ್ದಕ್ಕಿ ಲಕ್ಕಮ್ಮ ಓಂ ಗುರು ಬಸವಾ ।
ಸದಾಚಾರಿ ಸತ್ಯಕ್ಕ ಓಂ ಗುರು ಬಸವಾ ।
ಅರಿವಿನ ಅಕ್ಕಮ್ಮ ಓಂ ಗುರು ಬಸವಾ ॥ ॥ ೧೪ ॥

ಭವ ಭಯ ತಾರಕ ಓಂ ಗುರು ಬಸವಾ ।
ಶರಣ ಜನ ರಕ್ಷಕ ಓಂ ಗುರು ಬಸವಾ ।
ವಿಘ್ನ ನಿವಾರಕ ಓಂ ಗುರು ಬಸವಾ ॥ ॥ ೧೫ ॥

– ಶ್ರೀಮತಿ ಸರ್ವಮಂಗಳಾ ಜೋಗೂರ
ಹಾಗೂ ಪಾರ್ವತಿ ಜೆಮಶೆಟ್ಟಿ

***

ಗುರು ಬಸವೇಶನೇ

ಗುರು ಬಸವೇಶನೇ ಗುರು ಬಾ ಬಾ ಬಾ
ಗುರುವೇ ನೀ ಬಾ ಪ್ರಭುವೇ ನೀ ಬಾ

ಗುರು ಬಸವಣ್ಣನೇ ಗುರು ಬಾ ಬಾ ಬಾ
ಗುರುವೇ ನೀ ಬಾ ಪ್ರಭುವೇ ನೀ ಬಾ ॥ ೧ ॥

ಲಾಧಿಯ ಪೀಠಕೆ ಸುಮಿ ಸುರಗ ಪಡಿಕೊಂಡಿರಿ
ಗುರುವೇ ನೀ ಬಾ ಪ್ರಭುವೇ ನೀ ಬಾ ॥ ೨ ॥

ಹುಣ್ಣಿಮೆ ಚಂದ್ರಮನಂತೆ ರೂಪದಲ್ಲಿ ಇಂದ್ರಮನಂತೆ
ಗುರುವೇ ನೀ ಬಾ ಪ್ರಭುವೇ ನೀ ಬಾ ॥ ೩ ॥

ಕಾಸನ ಹೊದಿಗಿ ವಾಸ್ಯಾ ಗುರು ರೇವಣಸಿದ್ಧೇಶ
ಗುರುಕೊಟ್ಟ ಉಪದೇಶ ಮರಿಯಲಾರೆ ನಾ ॥ ೪ ॥

– ಶ್ರೀಮತಿ ವಿದ್ಯಾವತಿ ಲಾಧಾ (ಭಜನೆ ಪದ)

***

೬. ಮಂಗಳಾರುತಿ ಹಾಡುಗಳು

*

ಜಯ ಗುರು ಜಯ ಗುರು ಬಸವಣ್ಣ

ಜಯ ಗುರು ಜಯ ಗುರು ಬಸವಣ್ಣ ।
ಜಯತು ಜಗದ್ಗುರು ಬಸವಣ್ಣ । ॥ ಪ ॥

ಜಂಗಮ ರೂಪನೆ ಬಸವಣ್ಣ ।
ಜಗದೋದ್ಧಾರಕ ಬಸವಣ್ಣ
ಕಲ್ಯಾಣ ವಾಸನೇ ಬಸವಣ್ಣ ।
ಕರ್ತ ಶಿಶುವೇ ಬಸವಣ್ಣ ॥ ೧ ॥

ಸಗುಣಕಾರನೇ ಬಸವಣ್ಣ
ಚಿದ್ಘನರೂಪನೆ ಬಸವಣ್ಣ ।
ಅಕಾರ ಉಕಾರ ಮಕಾರ ಸಂಗಮ
ಓಂ ಕಾರ ರೂಪನೆ ಬಸವಣ್ಣ ॥ ೨ ॥

ಪರಮ ಪ್ರಭುವೇ ಬಸವಣ್ಣ
ಪತಿತ ಪಾವನನೇ ಬಸವಣ್ಣ ।
ಭಕ್ತರ ಪ್ರಾಣನೇ ಬಸವಣ್ಣ
ಭವ ಭಯ ತಾರಕ ಬಸವಣ್ಣ ॥ ೩ ॥

ಮಂಗಲ ಮೂರ್ತಿಯೇ ಬಸವಣ್ಣ
ಅಂಗದ ವೈರಿಯೆ ಬಸವಣ್ಣ ।
ಮಂಕು ಮಾನವರ ಮರೆವನು ಹರಿದ
ಸದ್ಗುರುವೆ ನೀನೇ ಬಸವಣ್ಣ ॥ ೪ ॥

ಸಮತಾವಾದಿಯೇ ಬಸವಣ್ಣ
ಮನುಕುಲ ಮೌಕ್ತಿಕ ಬಸವಣ್ಣ ।

ಶರಣರ ಹೃದಯ ನಿವಾಸನೇ ಅಣ್ಣ
ಕರುಣೆಯೆ ತೋರೋ ಬಸವಣ್ಣ ॥ ೫ ॥

– ಶ್ರೀಮತಿ ಸರ್ವಮಂಗಳಾ ಜೋಗೂರ
ಹಾಗೂ ಪಾರ್ವತಿ ಜೆಮಶೆಟ್ಟಿ

***

ಮಂಗಳಾರುತಿ ಹಾಡು

ಜಯ ಗುರು ಜಯಗುರು ಬಸವೇಶ ।
ಜಯತು ಜಗದ್ಗುರು ಜಗದೀಶ ।
ಭೀಮಕವಿಯ ಶ್ರೀ ಬಸವ ಪುರಾಣದ ।
ಸ್ವಾಮಿ ಶ್ರೀ ಗುರು ಪರಮೇಶ ॥ ಪ ॥

ಬಾಗೇವಾಡಿಯ ಭಾಗ್ಯಕರ ।
ಕಲ್ಯಾಣದ ಕಲ್ಯಾಣಕರ ।
ಮಾದರಸನ ಮನ ಮಂದಾರ ।
ಮಾದಲಾಂಬಿಕೆಯ ಬಂಗಾರ ॥ ೧ ॥

ವೀರಶೈವರ ವರಕುವರ ।
ವೀರ ಧರ್ಮದ ಪರಿವರ್ತಕರ ।
ದೀನರ ಬಾಳಿನ ಸುಧಾಕರ ।
ಹೀನ ನಿಯಮಕ ಬಹುದೂರ ॥ ೨ ॥

ಕಾಯಕ ತತ್ವಕ್ಕೆ ಶ್ರೀಕಾರ ।
ದಾಸೋಹದಿ ಶ್ರೀ ಹರಿಕಾರ ।
ಅನುಭವ ಮಂಟಪದ ಆಧಾರ ।
ಜಂಗಮ ಭಕ್ತಿಯ ಭಂಡಾರ ॥ ೩ ॥

ವಚನ ರಚನೆಯ ಉಪಕಾರ ।
ಶರಣ ಸಜ್ಜನರ ಓಂಕಾರ ।
ಕೂಡಲ ಸಂಗನ ಗುಣಾಗಾರ
ಅಭಿನವ ಕುಮಾರ ಸುಖಿಸಾರ ॥ ೪ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

ಶ್ರೀಗುರು ಬಸವಲಿಂಗಾ

ಶ್ರೀ ಗುರು ಬಸವಲಿಂಗಾ ಕರುಣಾ ಕೃಪಾಂಗ
ಎನಗೆ ಶೋಭಿಸುತಿರ್ಪ ಎನ್ನಂತರಂಗ
ಶ್ರೀಗುರು ಬಸವಲಿಂಗಾ ॥ ಪ ॥

ದಶವಿಧ ಪಾದೋದಕ ಪ್ರಸಾದೊಂದು ಕರುಣಿಸಿ
ಭಸಿತ ರುದ್ರಾಕ್ಷಿ ಮಂತ್ರ ಗೆಲಿಸಿದಿಯಾ ।
ಶ್ರೀ ಗುರು ಬಸವಲಿಂಗಾ ॥ ೧ ॥

ಬಸವಾ ಇಷ್ಟಕ್ಕೆ ಗುರು । ಬಸವಾ ಪ್ರಾಣಕ್ಕೆ ಲಿಂಗ
ಬಸವಾ ಭಾವಕ್ಕೆ ಜಂಗಮಂ ಆಗಿ ಬಂದೆನ್ನ ।
ಶ್ರೀ ಗುರು ಬಸವಲಿಂಗಾ ॥ ೨ ॥

ಬಂತು ಭಕ್ತಿಯ ಜ್ಞಾನ ವೈರಾಗ್ಯದೊಳು ಸೇರಿ
ಅಂತಿಂಥ ಜನರಿಗೆ ಕಂತು ಹರನಾದಿ ।
ಶ್ರೀ ಗುರು ಬಸವಲಿಂಗಾ ॥ ೩ ॥

ಕೂಗಿದೆ ಸಿದ್ಧರಿಗೆ ಬಾಗಿದೆ ಪ್ರಮಥರಿಗೆ
ನೀಗಿದಿ ನಿಜದುಃಖ ನಿಜಭಕ್ತ ಎನಿಸಿದೆಯಾ ।
ಶ್ರೀಗುರು ಬಸವಲಿಂಗಾ ॥ ೪ ॥

ಒಳಹೊರಗು ಗುರುಸ್ವಾಮಿ ಬೆಳಕ ತುಂಬಿಟ್ಟರು
ಒಳಗೆ ಶರಣರು ಬರುವ ದಾರಿ ನೋಡೆನ್ನ ।
ಶ್ರೀ ಗುರು ಬಸವಲಿಂಗಾ ॥ ೫ ॥

ಸುಳಿದಾಡೋ ಜಗದೊಳಗೆ ಹೊಳಿತುಂಬಿ ಹೋದಂತೆ
ತಿಳಿದಾ ಸತ್ಪುರುಷರಿಗೆ ತಿಳಿನೀರಿನಂತೆ ।
ಶ್ರೀ ಗುರು ಬಸವಲಿಂಗಾ ॥ ೬ ॥

ಬಸವ ಇಟ್ಟ ದ್ಯಾಹಕ್ಕೆ ಅಂತಕರುಣದಿ ಎನ್ನ
ಚಿಂತಿಬಿಟ್ಟು ಹೋಯಿತು ಸಂತೋಷ ಹೆಚ್ಚಿತು ।
ಶ್ರೀ ಗುರು ಬಸವಲಿಂಗಾ ॥ ೭ ॥

– ಶ್ರೀಮತಿ ಗೌರವ್ವ ಕಾಡಾದಿ

***

ನಿಮ್ಮ ನಾಮ ಸರಳ ಮಾರ್ಗ

ಬಸವನ ನಾಮಕ್ಕೆ ಆದೆ ನಾ ಮರುಳಾ
ಮನದೊಳು ಉಲ್ಲಾಸ ಹಗಲಿರುಳಾ ॥ ಪ ॥

ಅಲ್ಲಮ ಪ್ರಭುಗಳು ಒಂದಿನ ಬಂದು
ಹಾಲ ತಾ ಬೇಡ್ಯಾರ ಪ್ಯಾಲೆ ಒಂದು
ಹಾಲ ಸಿಗಲಿಲ್ಲ ಎನುತಲಿ ಬಂದಾ
ಬಸವಣ್ಣ ಕೇಳ್ಯಾರ ಹಾಲಿನ ಗೋಳಾ ॥ ೧ ॥

ಬಸವಣ್ಣ ಹೊಂಟಾರ ಊರ ಹೊರಗಾ
ಸತ್ತ ಆಕಳ ಕಂಡಾರ ತಮ್ಮ ಎದುರಾ
ಬೆನ್ನ ಬಡಿದು ಎಬ್ಬಿಸಾರ ಆಕಳಾ
ಜೀವಪಡಿಸಿ ಹಾಲ ಕೊಟ್ಟಾರ ಒಯ್ದಾ ॥ ೨ ॥

ಮಹಾತ್ಮ ತೋರ್‍ಯಾರ ಜಗದೊಳ
ಎಲ್ಲರಿಗಿ ಆಗ್ಯಾರ ಮಹಾಗುರುವ
ನಿಮ್ಮ ನಾಮವೆ ನಮಗ ಸರಳ ಮಾರ್ಗ
ನಮ್ಮ ಸಿದ್ಧ ಭಜನಿಗೆ ಕಲ್ಪವೃಕ್ಷ ॥ ೩ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೇನ, ಮಹಾದೇವಿ ಕುಂಬಾರ

***

ಬಸವ ಎನ್ನಿರೋ

ಬಸವಾ ಎನ್ನಿರೋ ಬಸವಾ ಬಸವಾ ಎನ್ನಿರೊ
ಬಸವಾ ಎನ್ನಿರೋ ಬಸವಾ ಬಸವಾ ಎನ್ನಿರೊ ॥ ಪ ॥

ಏಳುವಾಗ ಕೂಡುವಾಗ ಮನೆಯ ಕೆಲಸ ಮಾಡುವಾಗ
ಬಸವಾ ಎನ್ನಿರೊ ಬಸವಾ ಬಸವಾ ಎನ್ನಿರೊ ॥ ೧ ॥

ಕುಟ್ಟುವಾಗ ಬೀಸುವಾಗ ಹಸುವಿನ ಹಾಲು ಕರೆಯುವಾಗ
ಬಸವಾ ಎನ್ನಿರೋ ಬಸವಾ ಬಸವಾ ಎನ್ನಿರೊ ॥ ೨ ॥

ಮಜ್ಜಿಗೆಯನ್ನು ಹೊಸೆಯುವಾಗ ಬಾವಿನೀರಿಗಿ ಹೋಗುವಾಗ
ಬಸವಾ ಎನ್ನಿರೋ ಬಸವಾ ಬಸವಾ ಎನ್ನಿರೊ ॥ ೩ ॥

ರೊಟ್ಟಿಯನ್ನು ಬಡಿಯುವಾಗ ಹಸಿದವರಿಗಿ ನೀಡುವಾಗ
ಬಸವಾ ಎನ್ನಿರೋ ಬಸವಾ ಬಸವಾ ಎನ್ನಿರೊ ॥ ೪ ॥

ಅಡವಿಗೆ ಹೋಗುವಾಗ ಆಕಳು ಕರು ಮೇಯಿಸುವಾಗ
ಬಸವಾ ಎನ್ನಿರೋ ಬಸವಾ ಬಸವಾ ಎನ್ನಿರೊ ॥ ೫ ॥

ಅಂಗಕ್ಕ ಜಳಕ ಮಾಡುವಾಗ ಅಂಗೈಲಿಂಗ ಪೂಜಿಸುವಾಗ
ಬಸವಾ ಎನ್ನಿರೋ ಬಸವಾ ಬಸವಾ ಎನ್ನಿರೊ ॥ ೬ ॥

ಅಂಗನೀನು ಲಿಂಗನೀನು ಸಂಗನೀನು ಬಸವಾ ನೀನು
ಬಸವಾ ಎನ್ನಿರೋ ಬಸವಾ ಬಸವಾ ಎನ್ನಿರೊ ॥ ೭ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

ಬಸವನ ನಾಮ

ಬಸವನಾ ನಾಮ ಶಿವನಿಗೆ ಪ್ರೇಮ
ಬಸವನಾ ನಾಮ ನುಡಿ ಮನವೇ
ಶಿವನಾ ಅನುಗ್ರಹ ಪಡಿ ಮನವೇ ॥ ಪ ॥

ಬಸವನಾ ನಾಮದಿ ಅಳದಾವ ಬ್ಯಾನಿ
ತಿಳಕೋ ಖಾತ್ರಿ ಇದು ನೀ ಮನವೇ
ಜತನಾಗಿ ನಾಮವ ನುಡಿ ಮನವೇ ॥ ೧ ॥

ಮೆಹಕರ್ ಊರಾಗ ಬಡಿಗಾರ ಸಂಬಣ್ಣ
ಮಾರೋಗ ಬಂದಾವ ಕೀವು ರಕ್ತ ಸುರದಾದ
ನೋಡವರು ಮೂಗ ಮುಚ್ಚಿ ನಡದಾರ ॥ ೨ ॥

ಚೀರಿ ಚೀರಿ ಅಳತಾನ ನೆಲವ ತಿಕ್ಕ್ಯಾನ
ಮುಗಿಲಿಗಿ ತಾ ಬಾಯಿ ಬಿಡುತಾನ
ಯಾರಿಗೂ ಬರುವಲ್ದು ಕರುಣೆ ಅವನ್ಯಾಲ ॥ ೩ ॥

ಶ್ರಾವಣ ತಿಂಗಳು ಊರಾಗ ನಡದಾದ
ಬಸವನ ಪುರಾಣ ಅದರಾಗ ನಡದಾದ
ಲೆಕ್ಕಿಲ್ಲದೆ ಜನರು ಕೇಳುತಾ ಕುಂತಾರ ॥ ೪ ॥

ಸಂಬಣ್ಣ ಹೊಂಟಾನ ಗುಡಿಹೊರಗ ಕುಂತಾನ
ಪುರಾಣ ಕೇಳ್ತಾನ ಪರವಶನಾಗುತಾನ
ಬಸವನ ನಾಮ ಬಾಯಾಗ ನುಡಿತಾನ ॥ ೫ ॥

ಬಸವನಾ ಹೆಸರ ಬಾಯಾಗ ಬರುವಟಗೆ
ಮೈಯೊಳಗಿನ ಉರಿಯು ತಂಪ ಆಗ್ಯಾದ
ಕೀಂವ ರಕ್ತ ಹರಿಯುವದು ನಿಂತಾದ ॥ ೬ ॥

ನುಡಿಯುತಾ ಹೊಂಟಾನ ಮನಿಗರ ಸಂಬಣ್ಣ
ಮಾರೋಗ ಎಂಬುದು ಕಳದಾನ ಅಣ್ಣ
ಬಸವಾ ಎನುತಾ ಕುಣಿಕುಣಿದಾಡುತಾ
ಹೊಸ ಮಾನವನಾಗಿ ಬದುಕ್ಯಾನ ॥ ೭ ॥

– ಶ್ರೀಮತಿ ಗೌರವ್ವ ಕಾಡಾದಿ

***

ನಾಮದ ಹಿಂದಿನ ಮಹಿಮೆ ಜೋರು

ಬಸವ ನಾಮ ಅಕ್ಷರಗಳು ಮೂರು
ನಾಮದಾ ಹಿಂದಿನ ಮಹಿಮೆ ಜೋರು ॥ ಪ ॥

ನಿಷ್ಠಾವಂತರ ಪೂಜೆಯು ಮೂರು
ಹಗಲು ಮಧ್ಯಾಹ್ನ ಇರುಳು ಮೂರು
ರಜತಮ ಸತ್ವ ಗುಣಗಳು ಮೂರು
ಸುಜನರು ಆಡುವ ಮಾತುಗಳು ಮೂರು ॥ ೧ ॥

ಬ್ರಹ್ಮ ವಿಷ್ಣು ರುದ್ರರು ಮೂರು
ಮುಕ್ಕಣ್ಣನಿಗೆ ಇರುವ ಕಣ್ಣು ಮೂರು
ಆಕಾಶಕೆ ಚುಕ್ಕಿಯಲ್ಲಿ ತಾಳವ ಮೂರು
ತ್ರಿ ಮೂರ್ತಿಗಳ ಮೂಖವೂ ಮೂರು ॥ ೨ ॥

ಬೀಸುವ ಕಲ್ಲಿಗೆ ತೂತುಗಳು ಮೂರು
ಪಥಿಕನ ವಲಯ ಗುಂಡುಗಳು ಮೂರು
ಲೆಕ್ಕಕ್ಕೆ ಮಾನವನ ವಯಸ್ಸು ಮೂರು
ತ್ರಿಶೂಲಿಗೆ ಮುಖವೂ ಮೂರು ॥ ೩ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

ಅರಳಲೆ ಬಸವನ ಹಾಡು

ಒಂದು ಸುತ್ತಿನ ಕ್ವಾಟಿ
ಅದರೊಳು ಹೊಂದಿ ನಿಂತಾನ ಬಸವ
ಬಸವಕ ಬಸವನ್ನಿರೆ
ಬಸವನ ಪಾದಕ ಶರಣನ್ನಿರೆ ॥ ೧ ॥

ಎರಡು ಸುತ್ತಿನ ಕ್ವಾಟಿ
ಅದರೊಳು ಸೊಡರು ತೂಗುವ ಬಸವ
ಬಸವಕ ಬಸವನ್ನಿರೆ
ಬಸವನ ಪಾದಕ ಶರಣನ್ನಿರೆ ॥ ೨ ॥

ಮೂರು ಸುತ್ತಿನ ಕ್ವಾಟಿ
ಅದರೊಳು ಮೂರ್ತಗೊಂಡನ ಬಸವ
ಬಸವಕ ಬಸವನ್ನಿರೆ
ಬಸವನ ಪಾದಕ ಶರಣನ್ನಿರೆ ॥ ೩ ॥

ನಾಲ್ಕು ಸುತ್ತಿನ ಕ್ವಾಟಿ
ಅದರೊಳು ನ್ಯಾಯಮೂರ್ತಿಯು ಬಸವ
ಬಸವಕ ಬಸವನ್ನಿರೆ
ಬಸವನ ಪಾದಕ ಶರಣನ್ನಿರೆ ॥ ೪ ॥

ಐದು ಸುತ್ತಿನ ಕ್ವಾಟಿ
ಅದರೊಳು ಐಕ್ಯಮೂರ್ತಿಯು ಬಸವ
ಬಸವಕ ಬಸವನ್ನಿರೆ
ಬಸವನ ಪಾದಕ ಶರಣನ್ನಿರೆ ॥ ೫ ॥

ಆರು ಸುತ್ತಿನ ಕ್ವಾಟಿ
ಅದರೊಳು ಅರಳಿ ನಿಂತಾನ ಬಸವ
ಬಸವಕ ಬಸವನ್ನಿರೆ
ಬಸವನ ಪಾದಕ ಶರಣನ್ನಿರೆ ॥ ೬ ॥

ಏಳು ಸುತ್ತಿನ ಕ್ವಾಟಿ
ಅದರೊಳು ಜಗವನಾಳುವ ಬಸವ
ಬಸವಕ ಬಸವನ್ನಿರೆ
ಬಸವನ ಪಾದಕ ಶರಣನ್ನಿರೆ ॥ ೭ ॥

ಎಂಟು ಸುತ್ತಿನ ಕ್ವಾಟಿ
ಶಿವನಿಗೆ ಕಂಟಲೆತ್ತೇನೊ ಬಸವ
ಬಸವಕ ಬಸವನ್ನಿರೆ
ಬಸವನ ಪಾದಕ ಶರಣನ್ನಿರೆ ॥ ೮ ॥

ಒಂಬತ್ತು ಸುತ್ತಿನ ಕ್ವಾಟಿ
ಅದರೊಳು ತುಂಬಿ ಬಂದಾನೊ ಬಸವ
ಬಸವಕ ಬಸವನ್ನಿರೆ
ಬಸವನ ಪಾದಕ ಶರಣನ್ನಿರೆ ॥ ೯ ॥

ಹತ್ತು ಸುತ್ತಿನ ಕ್ವಾಟಿ
ಅದರೊಳು ಸುತ್ತನೋಡಲು ಬಸವ
ಬಸವಕ ಬಸವನ್ನಿರೆ
ಬಸವನ ಪಾದಕ ಶರಣನ್ನಿರೆ ॥ ೧೦ ॥

– ಶ್ರೀಮತಿ ಸುಮಿತ್ರಾದೇವಿ ಅಂಗಡಿ

***

ಜ್ಯೋತಿ ಜಗವ ಬೆಳಗೆ

ಜ್ಯೋತಿ ಜಗವ ಬೆಳಗೆ । ಬಸವನ
ಜ್ಯೋತಿ ಜಗವ ಬೆಳಗೆ || ಪ ||

ಭಾಗ್ಯವಾಡಿಯೊಳು ಜನಸಿದ ಜ್ಯೋತಿ
ಮಾತಾಪಿತರನು ತ್ಯಜಿಸಿದ ಜ್ಯೋತಿ
ಅರುಹಿನ ಮನೆಯ ಗುರುಕುಲ ಜ್ಯೋತಿ
ಕೂಡಲ ಸಂಗನ ಕರುಣೆಯ ಜ್ಯೋತಿ || ೧ ||

ನಾಗಲಾಂಬಿಕೆಯ ಮಮತೆಯ ಜ್ಯೋತಿ
ಮಹಾದೇವಿ ಅಕ್ಕನ ಅರವಿನ ಜ್ಯೋತಿ
ಚನ್ನಬಸವನ ಚಿನ್ಮಯ ಜ್ಯೋತಿ
ಸಿದ್ಧರಾಮನ ಶ್ರದ್ಧೆಯ ಜ್ಯೋತಿ || ೨ ||

ಗಂಗಾಂಬಿಕೆಯ ಕಂಗಳ ಜ್ಯೋತಿ
ನೀಲಾಂಬಿಕೆಯ ನಿರ್ಮಲ ಜ್ಯೋತಿ
ಬಲದೇವರಸರ ಒಲವಿನ ಜ್ಯೋತಿ
ಬಿಜ್ಜಳ ರಾಜನ ಬಲಗೈಯ ಜ್ಯೋತಿ || ೩ ||

ಅಲ್ಲಮ ಪ್ರಭುಗಳ ಪ್ರೀತಿಯ ಜ್ಯೋತಿ
ಶರಣ ಶರಣೆಯರ ಮಂಗಲ ಜ್ಯೋತಿ
ಕಲ್ಯಾಣಪುರದ ಕ್ರಾಂತಿಯ ಜ್ಯೋತಿ
ಸಮತೆಯ ಸಾರಿದ ಶಾಂತಿಯ ಜ್ಯೋತಿ || ೪ ||

ಕಾಯಕ ಮಹಿಮೆಯ ಕಲಿಸಿದ ಜ್ಯೋತಿ
ಆಯಕೆ ಮಿತಿಯನು ಹಾಕಿದ ಜ್ಯೋತಿ
ಮೂಢ ರೂಢಿಗಳ ಅಳಿಸಿದ ಜ್ಯೋತಿ
ಕೂಡಲ ಸಂಗನ ಕರುಣಿಯ ಜ್ಯೋತಿ || ೫ ||

– ಶ್ರೀಮತಿ ರೇಖಾ ರಾಮಶೆಟ್ಟಿ ಕಾಡಾದಿ
– ಶ್ರೀಮತಿ ಸುಭದ್ರಾ ಗಟಾಟೆ ಹಾಗೂ
ದ್ರೌಪತಿ ಗಟಾಟೆ, ಮಹಾದೇವಿ, ಬೋರುಟಿ

***

ಕಪ್ಪುವರಣ ಒಪ್ಪುವ ಜಾತ

ಕಪ್ಪುವರಣ ಒಪ್ಪುವ ಜಾತ
ತತ್ವನ ವಿಭೂತಿ ಧರಿಸುವ ದೀಪ
ನೆತ್ತಿಮ್ಯಾಲೇಳುಸುತ್ತಿನ ಸರ್ಪ
ನಿತ್ಯ ಭೋಜನ ಮಾಡುವ ಕರ್ತ
ಎತ್ತಿ ಬೆಳಗುನು ಚಿತ್ತದ ದೀಪ
ಆರುತಿ ಬೆಳಗಿರಿ ಮೂರುತಿಗೆ
ಸೂರಿದ ರಾಜ ಬಸವೀರಥಗೆ ॥ ೧ ॥

ಭಕ್ತಿಗೆ ಒಲಿದ ಮುಕ್ತಿಗೆ ಲೇಪ
ತರುಣಿ ನೀಲಮ್ಮಗ ತ ಮನಸೋತ
ಒಡನುಡಿಸ್ಥೇಳ್ಯಾರ ಐನದ ಮಾತ
ಸದಾಶಿವ ನಂಬೂದ್ರಿ ಪರ್ವತ
ನೋಡಿರ್ಹೋಗುದು ಮಾಡಿದ ಪಾಪ
ಆರುತಿ ಬೆಳಗಿರಿ ಮೂರುತಿಗೆ
ಸೂರಿದ ರಾಜ ಬಸವಿರಥಗೆ ॥ ೨ ॥

ಚನ್ನಿಗನವ್ವ ಚನ್ನಬಸವಣ್ಣ
ಚೆನ್ನಾಗಿ ಸಲಹುವ ನಿಜಗುರುವಮ್ಮ
ಲೋಬಾನ ಪರಿಮಳ ಗುಡಿ ಗಮಗಮ
ನಗಾರಿ ಬಡಿಯುವದು ನೋಡ ದಮದಮ
ನೋಡಿದರೆ ಕಣ್ಣಿಗೆ ಏನು ಕಾಣದಮ್ಮ
ಬಸಪ್ಪನ ಮಡಿದಿ ಸತ್ಯುಳ್ಳ ನೀಲಮ್ಮ
ದುಡಿಯುವ ಕೆಲಸ ಹೊಡೆದು ಕಾಸೆಮ್ಮ
ಆರುತಿ ಬೆಳಗಿರಿ ಮೂರುತಿಗೆ
ಸೂರಿದ ರಾಜ ಬಸವೀರಥಗೆ ॥ ೩ ॥

ಬಸಪ್ಪನ ಸೇವಿಗೆ ಬಂದಂಥ ಜನರು
ಹೆಣ್ಣು ಗಂಡು ಗುಡಿಜಾತ
ಇದರಿಗೆ ಕಾಣೂದು ಈಶ್ವರನ ಗುಡಿ
ಮೊದಲಾಗಿ ಅವ್ರು ಮಜ್ಜನ ಮಾಡಿ
ಹಿಂದಾಗಿ ಅವ್ರು ಹಣ್ಣ ಕಾಯಿ ಎಡಿ
ತದಂತ ಭಕ್ತರ ಎಡಿ ನೈವೇದ್ಯ ಹಿಡಿ

ದಕ್ಕನ ನಡಿ ಪಕ್ಕನ ನುಡಿ
ದಿಕ್ಕಿನೊಳಗ ಇಂವ ಹೆಚ್ಚಿನ ಕಿಡಿ
ಆರುತಿ ಬೆಳಗಿರಿ ಮೂರುತಿಗೆ
ಸೂರಿದ ರಾಜ ಬಸವೀ ರಥಗೆ ॥ ೪ ॥

ಗಗನಕ ಮೇಲ್ ಮಿಗಿಲ ಕಾಣತೈತಿ
ಇದ ನೋಡ್ ಹಿರೇನರ್ತಿಪುರ
ಪುರದೊಳಗೈದಾನ ಬಸವೇಶ್ವರ
ದಿನಕೊಮ್ಮೆ ಕೊಡತಾನ ಸಂತಾನ ಸಾವಿರ
ಎಂತು ಹೇಳಲಿ ಇವನ ಸ್ಥಿರ
ಲಂಗಲಾಲ ಗಂಗಾಧರ
ಗಂಟಿ ಸರಪಳಿ ಗೆಜ್ಜಿಸರ
ಆರುತಿ ಬೆಳಗಿರಿ ಮೂರುತಿಗೆ
ಸೂರಿದ ರಾಜ ಬಸವೀರಥಗೆ ॥ ೫ ॥

–ಕೃತಿ: ಬಸವಣ್ಣ ನಿನ್ನ ಹೆಸರು ದೇಸೆದೇಸೆಗೆ ಶಿವಮಂತ್ರ

***

ಕರ್ಪೂರಾರುತಿ ಎತ್ತು

ಕರ್ಪೂರಾರುತಿ ಎತ್ತು ಕಾಮಿನಿ ಸದ್ಗುರು ರಾಣಿ
ಅಚ್ಚ ಮುತ್ತೈದಿ ಅರಿಷಿಣದ ತೆನಿ ॥ ಪ ॥

ಮೊದಲ ಬಾಗೇವಾಡಿ ಶುದ್ಧ ಮಾಡಿದವಗ
ಈ ಹಾಳ ಬಾಂವಿಯೊಳು ಲೀಲ ಮಾಡಿದ ಬಸವರಾಜಗ
ಸತ್ತ ಗೋವಿನ ಹಾಲ ಕರಿದವಗ
ಪಾದೋದಕ ಪ್ರಸಾದ ಕರಣತೀರ್ಥ ನೆಲಿಯಗೊಂಡವಗ
ಎಲ್ಲ ಮಹತ್ವ ಬಲ್ಲಿದಾತಗ ನಿರ್ಗುಣದವಗ ॥ ೧ ॥

ನಿತ್ಯ ನಿತ್ಯ ಬೆಳಗಬೇಕಿವಗ
ಹಿರಿಯ ಮಠದ ಧೀರನಾದ ಬಸವರಾಜಗ
ಪಾರ್ವತಾಸತಿಯ ಬಲಗೊಂಡವಗ
ಗುರು ಲಿಂಗ ಜಂಗಮ ಭಕ್ತಿಗೊಲಿದ ಬಸವರಾಜಗ
ಮುಕ್ತಿ ಸಾಧನ ಮಾಡಿದಾತವಗ ನಮ್ಮ ಬಸವರಾಜಗ ॥ ೨ ॥

ನಿತ್ಯ ನಿರಂಜನ ಬೆಳಗಬೇಕಿವಗ
ಕಲ್ಯಾಣಪುರದೊಳು ನಿಂತು ಲಿಪಿಯು ಓದಿದಾತಗ
ಮಥನ ಮುರಹರಿ ವತನ ಅಳಿದವಗ
ತ್ರಿಪುರಾಂತ ಕೆರಿಯೊಳು ಶುದ್ಧ ಮಾಡಿದ ಸಿದ್ಧವೀರಗ
ಅಕ್ಕನಾಗಮ್ಮನ ತಮ್ಮಗ ನೀಲಮ್ಮನ ಅರಸಗ
ಶರಣರಾರುತಿ ಬೆಳಗಬೇಕಿವಗ ॥ ೩ ॥

ಶಂಕರಲಿಂಗ ಶಾಂತಗುಣದ ಬಸವರಾಜಗ
ಕಂತುಹರನ ಪೂಜೆಗೊಂಡವಗ
ತೊಂಭತ್ತಾರು ಸಾವಿರ ಜಂಗಮರಿಗೆ ಭಕ್ತನಾದವಗ
ಬಿಟ್ಟು ಕಪ್ಪಡಿ ಸೇರಿದಾತಗ ಸಂಗಮನಾಥಗ ॥ ೪ ॥

ಮಾದಲಾಂಬಿಕೆ ಮಗನು ಬಸವರಾಜಗ
ನಿಜರೂಪದವಗ ಬಾಗೇವಾಡಿಯೊಳು ಜನಸಿದಾತಗ
ಕರ್ತುನಿರಂಜನ ಬೇಳಗಬೇಕಿವಗ
ಸತ್ತುಳ್ಳ ಕುಳಗೇರಿ ಪಟ್ಟದಧಿಕಾರಿ ಚನ್ನಬಸವಗ
ಇಷ್ಟು ಮಹತ್ವ ಬಲ್ಲಿದಾತಗ ನಮ್ಮ ಬಸವರಾಜಗ ॥ ೫ ॥

ಕೃತಿ: ಬಸವಣ್ಣ ನಿನ್ನ ಹೆಸರು....

***

ಜಯ ಮಂಗಲ ಮಂಗಲವೆನ್ನುತ ಪಾಡಿರಿ

ಜಯ ಮಂಗಲ ಮಂಗಲವೆನ್ನುತ ಪಾಡಿರಿ
ಸದ್ಗುರು ಸಂಗನ ಬಸವನಿಗೆ ಪ ॥

ಮಂಗಲ ಕಾರ್ಯದಿ ಮಹಿಮೆಯ ತೋರಿದ
ಕಲಿಯುಗದ ಬಸವಣ್ಣನಿಗೆ
ಜಗತ್ತಿನೊಳಗೆ ಇದ್ದು ಇಲ್ಲದಂತೆ
ತೋರುವ ಲೀಲಾಜಾಲನಿಗೆ ॥ ೧ ॥

ಅಂಗದ ಸುಖವ ಹಿಂಗಿದ ಯೋಗಿ
ಮಂಗಲ ಮೂರುತಿ ಸಂಗನ ಬಸವನಿಗೆ
ಸಂಸಾರೆಂಬುದು ಗಾಳಿಯ ಸೊಡರೆಂದು
ಬೋಧ ಮಾಡಿದ ಗುರುರಾಯನಿಗೆ ॥ ೨ ॥

ನಿನ್ನಯ ಒಡಲು ಅಮೃತ ಕಡಲು
ಎಂಬುದು ತಿಳಿಯದೆ ಲೌಕಿಕ ಮಡಲು
ಭವರೋಗದಲಿ ಬಳಲುವ ಜನತೆಗೆ
ಭೋದ ಮಾಡಿದ ಮಾಹಾಯೋಗಿಗೆ ॥ ೩ ॥

ನೇಮ ನಿರುಪಮ ನಿತ್ಯ ಮಾಡುವ
ಸತ್ಯ ಸದ್ಗುರು ಸಂಗನ ಬಸವ
ಸಾಗರದಂತೆ ಪ್ರೇಮಾಮೃತವ
ಸುರಿಸುವ ಮಹಾಶಿವಯೋಗಿಗೆ ॥ ೪ ॥

ವಿದ್ಯೆಯದಾಗರ ಬುದ್ಧಿಯ ಸಾಗರ
ಸಧ್ಯ ಕಲಿಯುಗ ಪ್ರೇಮಾಧಾರಿಗೆ
ಕಲ್ಯಾಣ ಪುರದಲಿ ಅನುಭವಮಂಟಪ ಸ್ಥಾಪಿಸಿದ
ಮಹಾಶರಣ ಬಸವಣ್ಣನಿಗೆ ॥ ೫ ॥

– ಶ್ರೀಮತಿ ಸುಮಿತ್ರಾದೇವಿ ಅಂಗಡಿ

***

ಜಯಮಂಗಳಂ ನಿತ್ಯ ಶುಭಮಂಗಳ

ಜಯಮಂಗಳಂ ನಿತ್ಯ ಶುಭಮಂಗಳ
ಜಯ ಜಯತು ಶ್ರೀ ಗುರು ಬಸವೇಶಗೆ ॥ ಪ ॥

ಮಾದಲಾಂಬಿಕೆಗೆ ತಾ ಮಗನಾಗಿ
ಮರ್ತ್ಯದೊಳು ವಾದದಲಿ ಗೆಲಿದು
ವಾದಿಗಳೆಲ್ಲರ ಸೋಲಿಸಿ
ಕಲ್ಯಾಣದಲಿ ಲಿಪಿ ಬಿದ್ದಿರಲದನೋದಿ
ಬಲ್ಲಿದನಾದ ಬಸವೇಶಗೆ ॥ ೧ ॥

ಗಂಗೆಯನು ಕೊರಳೊಳು ಘನವಾಗಿ ಧರಿಸಿದವಗೆ
ಲಿಂಗವನು ಅನಿಮಿಷಗೆ ಇತ್ತಾತಗೆ
ಕಂಗಳು ಮೂರುಳ್ಳ ಕರ್ತನ ಬಲದಿಂದ
ಜಂಗಮ ತೃಪ್ತಿಗೆ ಮುಖವಾದವಗೆ
ಜಯ ಮಂಗಳಂ ನಿತ್ಯ ಶುಭಮಂಗಳ ॥ ೨ ॥

ಲಕ್ಷದ ಮೇಲೆ ತೊಂಬತ್ತಾರು ಸಾವಿರ ಮೋಕ್ಷ ಜಂಗಮಕೆ
ಭಿಕ್ಷೆಯ ನೀಡುತ ಸಾಕ್ಷಾತ್ ಸಂಗಮೇಶ್ವರನೊಳ್
ಐಕ್ಯವಾದ ಕ್ಷಣದಿ ಬಯಲಿಗೆ ಬಯಲಾದ ಬಸವೇಶಗೆ
ಜಯ ಮಂಗಳಂ ನಿತ್ಯ ಶುಭಮಂಗಳ ॥ ೩ ॥

– ಶ್ರೀಮತಿ ಸುಮಿತ್ರಾದೇವಿ ಅಂಗಡಿ

***

ಶ್ರೀಗುರು ಬಸವ ಪ್ರಭುವೆ

ಶ್ರೀಗುರು ಬಸವ ಪ್ರಭುವೆ ನಮೋಹರನೆ
ಅನಾದಿ ರೂಪ ನಯನಾರತಿ ಬೆಳಗುವೆ ದೀಪ ॥ ಪ ॥

ಜಯಭರಿತ ಜಯ ಜಯ ಜಗದೀಶ
ಸುಗುಣೇಶ ಜಯ ಜಯ ಜಗದೀಶ
ಜಗದ್ಗುರು ಓಂ ಬಸವ ತ್ರಿಲೋಕ ಭೂಪ
ನಯನಾರತಿ ಬೆಳಗುವೆ ದೀಪ ॥ ೧ ॥

ಯುಗ ಯುಗಕೆ ಅವತರಿಸಿದಿ ದೇವ
ಬೇಗನೆ ಪಾಲಿಸಿದ ವೀರಶೈವ
ಮಂಗಲ ಜ್ಞಾನಿ ದರ್ಶನ ಪಾಪ ವಿಲೋಪ
ನಯನಾರತಿ ಬೆಳಗುವೆ ದೀಪ ॥ ೨ ॥

ಕನ್ನಯ್ಯನ ಭಕ್ತಿಗೆ ನೀನೊಲಿದಯ್ಯ
ಹೊನ್ನಿನ ಮಳೆ ಸುರಿಸಿದಿ ನೀನಯ್ಯ
ಚೆನ್ನಕ್ಕನ ಪಿತನ ಮನವೆ ಅರ್ಪಿತ ಪುಷ್ಪ
ನಯನಾರತಿ ಬೆಳಗುವೆ ದೀಪ ॥ ೩ ॥

– ಶ್ರೀಮತಿ ಸುಮಿತ್ರಾದೇವಿ ಅಂಗಡಿ

***

ಜಯ ಬಸವೇಶ ಜಯ ಭವನಾಶ

ಜಯ ಬಸವೇಶ ಜಯ ಭವನಾಶ ।
ಜಯ ಜಯ ಕಲ್ಯಾಣವಾಶ ।
ಬೆಳಗುವೆ ಮಂಗಳದಾರುತಿಯ । ॥ ಪ ॥

ಸೂರ್ಯ ಲೋಕಕ್ಕೆ ಹೋಗಿ ಸೂರ್ಯಪಾನದ್ಹೋವಾ ತಾನು
ಸೂರ್ಯಗ ಬೆಳಗನು ಬಾ । ನಾವು
ಸೂರ್ಯಗ ಬೆಳಗನು ಬಾ ॥ ॥ ೧ ॥

ಪೂಜಿಯ ಮಾಡಲು ಪುಸ್ತಕ ಓದಲು
ಪೂಜಿಗೆ ಬೆಳಗನು ಬಾ । ನಾವು
ಪೂಜಿಗೆ ಬೆಳಗನು ಬಾ ॥ ॥ ೨ ॥

ಚಂದ್ರಲೋಕಕ್ಕೆ ಹೋಗಿ ಚೆಂಡು ಹೂವ ತಂದು
ಚಂದ್ರಗೆ ಬೆಳಗನು ಬಾ । ನಾವು
ಚಂದ್ರಗೆ ಬೆಳಗನು ಬಾ ॥ ॥ ೩ ॥

– ಶ್ರೀಮತಿ ಕಲಾವತಿ

***

ಅಂಗೈಯಲ್ಲಿ ಲಿಂಗವ ನಮ್ಮ ಬಸವನ

ಅಂಗೈಯಲ್ಲಿ ಲಿಂಗವ ನಮ್ಮ ಬಸವನ
ಮುಂಗೈಯ ಜಪಮಣಿ ಶೃಂಗ ಮಣಿಮೇಲ
ಶಿವಪೂಜಿ ಮಾಡುವಂತ ಬಸವಯ್ಯಗೆ
ಎತುವೆನು ಆರುತಿಯ ಶ್ರೀಗುರುವಿಗೆ
ಬೆಳಗುವೆನು ಆರುತಿಯಾ ॥ ೧ ॥

ಗೆಜ್ಜೆ ವಜ್ಜವ ಬಾಳ ನಮ್ಮ ಬಸವಯ್ಯನ
ಜಂಗೀನ ಸಪ್ಪಳೂ ಬಾಳ ಸಂಪೂರ್ಣದಲ್ಲಿ
ಸಂಪೂರ್ಣ ಬಸವಯ್ಯಗೆ ಎತ್ತುವೆ
ಆರುತಿಯ ಶ್ರೀ ಗುರುವೀಗೆ
ಬೆಳಗುವೆನು ಆರುತಿಯಾ ॥ ೨ ॥

ಹೊನ್ನ ಗದ್ದುಗಿ ಮ್ಯಾಲ ನಮ್ಮ ಬಸವಯ್ಯಗೆ
ಚಿನ್ನ ಮಂಟಪದಾಗ ಚಿನ್ಮಯ ರೂಪ
ಚೆಲ್ವ ನಮ್ಮ ಬಸವಯ್ಯಗೆ ಎತ್ತುವೆ
ಆರುತಿಯ ಶ್ರೀ ಗುರುವೀಗೆ
ಬೆಳಗುವೆನು ಆರುತಿಯಾ ॥ ೩ ॥

ನಾಲ್ಕು ಪಾದವನಿಟ್ಟು ನಮ್ಮ ಬಸವಯ್ಯ
ಲೋಕ ಸಲವುತೆ ಬಂದಾ ಲೋಕಕ್ಕೆ
ಅಧಿಪತಿ ಚೆಲ್ವ ನಮ್ಮ ಬಸವಯ್ಯಗೆ
ಎತುವೆನು ಆರುತಿಯ ಶ್ರೀ ಗುರುವಿಗೆ
ಬೆಳಗುವೆನು ಆರುತಿಯಾ ॥ ೪ ॥

– ಶ್ರೀಮತಿ ಪಾರ್ವತಿ ಜೆಮಶೆಟ್ಟಿ
ಹಾಗೂ ಸರ್ವಮಂಗಳಾ ಜೋಗೂರ

***

ಬಸವಗ । ಬೆಳಗುವೆನಾರುತಿಯ

ಅವತಾರ ಪ್ರಭುವೆಂದೆನಿಸಿದ ಬಸವಗ । ಬೆಳಗುವೆನಾರುತಿಯ ।
ದೇವಾ ಎತ್ತುವೆನಾರುತಿಯ । ॥ ಪ ॥

ಬಾಗೇವಾಡಿಯೊಳು ಬೇಗನೆ ಜನಿಸಿ । ಆಗಮ ಬೋಧಿಸಿದೀ ।
ಬಸವಾ ಆಗಮ ಬೋಧಿಸಿದೀ ।
ಯೋಗಾನಂದ ಶಿವಯೋಗ ಮಾರ್ಗದೊಳು ।
ರಾಗವ ತೋರಿಸಿದೀ ।
ಬಸವಾ ರಾಗವ ತೋರಿಸಿದೀ । ॥ ೧ ॥

ಭಕ್ತಿ ಭಾವಗುಣ ಯುಕ್ತಿ ಕಲ್ಯಾಣದಿ । ಭಕ್ತರ ಪೋಷಿಸಿದೀ ।
ಬಸವಾ ಭಕ್ತರ ಪೋಷಿಸಿದೀ ।
ಭಕ್ತಾನಂದ ಶಿವಭಕ್ತರ ಮಾಯಾ ಯುಕ್ತಿಯ ತಿಳಿಸೀದೀ ।
ಬಸವಾ ಯುಕ್ತಿಯ ತಿಳಿಸೀದೀ । ॥ ೨ ॥

ಅಂಗ ಲಿಂಗದೊಳು ಮೆರೆಯುವ । ಕಪ್ಪಡಿ ಸಂಗಮನೆನಿಸೀದಿ ।
ಬಸವಾ ಸಂಗಮನೆನಿಸೀದಿ ।
ಲಿಂಗಾನಂದ ಶಿವ ಜಂಗಮ ಹಿತಪದ । ಪುಂಗವನೆನಿಸೀದಿ ।
ಬಸವಾ ಪುಂಗವ ನೆನಿಸೀದಿ । ॥ ೩ ॥

–ಶ್ರೀಮತಿ ತುಳಸಮ್ಮ. ಬ. ಹೂಗಾರ

***

ಮುದ್ದು ಸಂಗ ಮಡಿವಾಳ ಮಾಚ

ಮುದ್ದು ಸಂಗ ಮಡಿವಾಳ ಮಾಚ
ಸಿಂಧು ಬಲ್ಲಾಳ ನಂಬಿ ಚರಿತುಂಡ
ಚೌರ ಚಾಮರ ಬೀಸುತಾ ನಡದರಾ
ರಾಜಾಧಿರಾಜರಿಗೆ ಮಂಗಲವಾಗಲಿ
ಶ್ರೀ ಬಸವಾ ಶ್ರೀಬಸವಾ ॥ ೧ ॥

ರತ್ನದಾ ಪಚ್ಚೆ ವಜ್ರದ ಪೀಠದ
ನೀರನ ಕೀಲ ನಿರಗುಣ ಗದ್ದುಗಿ
ಜೋಡ ಮುತ್ತಿನಾ ತುರಾಯಿ ಒಪ್ಪ್ಯಾವ
ರಾಜಾಧಿರಾಜಗೆ ಮಂಗಲವಾಗಲಿ
ಶ್ರೀ ಬಸವಾ ಶ್ರೀ ಬಸವಾ ॥ ೨ ॥

ಟೋಪ ಬಂದುಕಾ ಹಾರ್‍ಯಾವ ಹನಿಪಾ
ವಾದ್ಯ ಭೇರಿಗಳು ನೂರಲಿ ಶರಿಫ
ಆನಿ ಕುದರಿ ರಥ ಪಲ್ಲಕ್ಕಿ ಮ್ಯಾಲ
ಮೆರುಸುತಾ ಹೊಂಟಾರ ಊರ ಕಲ್ಯಾಣಕ
ಶ್ರೀ ರಾಜಾಧಿರಾಜಾ ಮಂಗಲವಾಗಲಿ
ಶ್ರೀ ಬಸವಾ ಶ್ರೀ ಬಸವಾ ॥ ೩ ॥

– ಶ್ರೀಮತಿ ಗೌರವ್ವ ಕಾಡಾದಿ

***

ಮಲ್ಲಿಗೆ ಹೂವೇ

ಮಲ್ಲಿಗೆ ಹೂವೇ ನಲುಮಯದಾರುತಿ ಎಲ್ಲರೂ ಬೆಳಗಿರೆ
ಶೋಭಾದಿಂದಲಿ ಸೆರಗ ಬೀಸುತ ಬೀಸುತ ಅಣ್ಣ ಬಸವಣ್ಣಗೆ ॥ ಪ ॥

ಭಾಗ್ಯವಾಡಿಯಲಿ ಬ್ರಹ್ಮರ ಮಠದಲಿ ಹುಟ್ಟ್ಯಾರ ಬಸವಣ್ಣ
ಕಲ್ಯಾಣ ನಾಡಿಗೆ ಹುಡುಕುತ ಹುಡುಕುತ ಹೊಂಟಾರ ಬಸವಣ್ಣ ॥ ೧ ॥

ಕಲ್ಯಾಣ ನಾಡು ಕೈಲಾಸ ಮಾಡ್ಯಾರ ಅಣ್ಣ ಬಸವಣ್ಣ
ಹೂವ ಪತ್ರಿ ತಂದು ಪೂಜೆಯ ಮಾಡ್ಯಾರ ಅಣ್ಣಾ ಬಸವಣ್ಣ ॥ ೨ ॥

ಕಲ್ಯಾಣ ಬಿಟ್ಟು ಕೂಡಲ ಸಂಗಮನಾಥಗೆ ನಡುದಾರೆ ಬಸವಣ್ಣ
ಸಂಗಮನಾಥಗೆ ಕೈಮುಗಿದು ಮುಕ್ತಿ ಹೊಂದ್ಯಾರೆ ಬಸವಣ್ಣ ॥ ೩ ॥

– ಶ್ರೀಮತಿ ಶಾಂತಾಬಾಯಿ ಹೊಳಕುಂದ

***

ಸಾರ ಕರಪೂರದಾರುತಿಗಿ

ಸಾರ ಕರಪೂರದಾರುತಿಗಿ ಶಿವ ಶರಣು ಬಸವಗೆ
ಭಾರಿ ಗುಣದ ಭಾಮೆರೆಲ್ಲರು ಬೆಳಗಿರೀತಗೆ ॥ ೧ ॥

ಉದರ ಗುಡಿ ಸದರ ದರಭಾರ ಚದುರ ಬಸವಣ್ಣ
ದಿಂಬು ಧರಿಸಿದಂಥ ಗುಡಿ ಒಳಗ ಶಿವಹರಾ ॥ ೨ ॥

ಚಕ್ರದ ಕ್ವಾಟಿ ಸುತ್ತ ಮಂಟಪ ನಡುವ ಕಳಸ
ಜೋಡಕಂಬ ಮಾಲಗಂಭ ನಂದಿ ದೀವಿಗೆ ॥ ೩ ॥

ಭೂತನಿಡದು ಜಂಗಮರೆಲ್ಲರೂ ಭೀತಿ ಕಳಿವರು
ಮಾತ ಮಾತಿಗೆ ಮೈಮ ತೋರಿರಿ ಮುತ್ತ ಅಯ್ಯಗೆ ॥ ೪ ॥

ಆತನ ಪೋಳಿದಾಗ ಎಂತು ಪೇಳಲಿ
ದೊಡ್ಡಗಸಿ ನಾಗರಖಾನಿ ನೌಬತ್ತ ಬಾಜ ॥ ೫ ॥

– ಶ್ರೀಮತಿ ಸಂಗಮ್ಮ ಶರಣಪ್ಪ ಲಾಢಾ

***

ಕಳಸವ ಬೆಳಗುನು ಬನ್ನೆ

ಕಳಸವ ಬೆಳಗುನು ಬನ್ನೆ ಕಾಮಿನಿಯರು
ಕಳಸವ ಬೆಳಗುನು ಬನ್ನೆ ॥ ಪ ॥

ಅರಣ್ಯಪತಿಯಾಗಿ ಪುರಾಣ ಮುಖದಿಂದ
ಕಾರ್ಯ ಕಾರಣಗಳು ಮೀರಿ ವರ್ತಿಪನಿಗೆ ॥ ೧ ॥

ಅಡವಿ ಬಸವೇಶನಿಗೆ ಬೇಡಗರ ಧೃಡದಿಂದ
ಬಕ್ತರೆಲ್ಲರೂ ಬಂದು ಬೇಡಿಕೊಳ್ಳುವರೀಗ ॥ ೨ ॥

ದೇಶದೊಳಧಿಕವಾದ ವಾಸುಳ್ಳ ಬಾಗೇವಾಡಿ
ಈಶ ಬಸವೇಶನಿಗೆ ಶರಣು ಮಾಡುವ ಬನ್ನೆ ॥ ೩ ॥

– ಶ್ರೀಮತಿ ಸರ್ವಮಂಗಳಾ ಜೋಗೂರ
ಹಾಗೂ ಪಾರ್ವತಿ ಜೆಮಶೆಟ್ಟಿ

***

ಜಯ ಬಸವೇಶ

ಜಯ ಬಸವೇಶ ಭಕ್ತಜನ ಭಾಗ್ಯಶುಭೋದಯ ॥ ಪ ॥

ವೀರಶೈವ ನಿರ್ಣಯ ಪರಮಾವತಾರ
ಶರಣಾಗತ ರಕ್ಷಕ ಚಿದ್ಘನ ಪ್ರಭಾಮಯ ॥ ೧ ॥

ಜಗದಾದಿ ದೇಶಿಕ ಪುರಾತನ ಪುಂಗವ
ಶಾಂಭವ್ಯೆ ಪುರಾಶ್ರಯ ॥ ೨ ॥

ಜಯ ಸೋಮನಾಥ ಜಯದೇವ
ಜಯಾ ವಿರತಂ ಶಿವಾಧಾವಾಂ ॥ ೩ ॥

ವಾಗರ್ತ ಪಶುಪತ್ ವಾಗರ್ತ ಸಂಪ್ರದಾ
ಪಾರ್ವತಿಪತೇ ಶಿವ ಹರ ಮಹಾದೇವ ॥ ೪ ॥

– ಶ್ರೀಮತಿ ಪಾರ್ವತಿ ಜೇಮಶೆಟ್ಟಿ ಹಾಗೂ
ಸರ್ವಮಂಗಳಾ ಜೋಗೂರ

***

ಸ್ವಚ್ಛ ಮನದ ಶರಣರ

ಸ್ವಚ್ಛ ಮನದ ಶರಣರ ಬಳಗ
ನಿತ್ಯದಾರುತಿ ಮಾಡರೀ ।
ಹಂಚನಿಲ್ಲದ ಹೋಳಗಿ ಮಾಡಿ
ಕಲ್ಯಾಣ ಬಸವಗ ಬೆಳಗಿರಿ ॥ ಪ ॥

ಚಂಚನಿಲ್ಲದ ಸಜ್ಜಿಕ ವಡೆದು
ನಿಶ್ಚಿಂತಿಯಿಲ್ಲದ ಉಂಡಿಯ ಕಟ್ಟಿ
ಹಂಚನಿಲ್ಲದ ಹೋಳಿಗಿ ಮಾಡಿ
ಕಲ್ಯಾಣ ಬಸವಗ ನೆನಿಯಮ್ಮ ॥ ೧ ॥

ಆಕಾಶದಿಂದ ಅಕ್ಕಿಯ ತರಸಿ
ಮನ ಪಾಕದಿಂದ ಆರಿಸಿಕೊಂಡು
ಆ ನೈವೇದ್ಯ ಮಾಡಿ ಮುಟ್ಟಿಸಿ
ಕಲ್ಯಾಣ ಬಸವಗ ನೆನಿಯಮ್ಮ ॥ ೨ ॥

ಕಲ್ಲನಿಲ್ಲದ ಗಂಗಾಳ ತೊಳೆದು
ಅಲ್ಲನಿಲ್ಲದ ಮಣಿಯವ ಹಾಕಿ
ನೀ ಮಾಡಿದ ಪಾಯಸ ಭಾಗ
ಕಲ್ಯಾಣ ಬಸವಗ ನೆನಿಯಮ್ಮ ॥ ೩ ॥

ದೇವರೆಂಬುದು ದೇವಸ್ಥಾನ
ಮರಿಗುಡ್ಡ ನೋಡಿರಿ
ಕರ್ಪೂರದಾರುತಿ ಬೆಳಗಿರಿ
ನಮ್ಮ ಕಲ್ಯಾಣ ಶರಣರಿಗೆ ಬೆಳಗಿರಿ ॥ ೪ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

ಬಸವಗಾರುತಿ ಬೆಳಗುವೆನು

ಬಸವಗಾರುತಿ ಬೆಳಗುವೆನು ನಮ್ಮ ಶಶಿಮುಖಿ ನೀಲಮ್ಮನರಸು
ಕಲ್ಯಾಣದ ಬಸವಗಾರುತಿ ಬೆಳಗುವೆನು । ॥ ಪ ॥

ಕುಲ್ಲ ಜೈನರಿಗುವಾದವ ಮಾಡಿ
ಮಲ್ಲಿಗಿ ಬ್ರಹ್ಮಯ್ಯ ದೇವರು ಇರುವಂತೆ ಪೇಳಿ
ಅಲ್ಲಿಂದ ತೆರಳಿದರೋ ಸಾರಿ
ಎಲ್ಲ ಪ್ರಮಥರು ಬಸವಯ್ಯಗ ಜಯ ಜಯ ಪಾಡಿ ॥ ೧ ॥

ಹಿಂದಕ್ಕೆ ಮುನ್ನೂರು ಅರವತ್ತು ದೇವ
ಹಿಂದಕ್ಕೆ ಮುನ್ನೂರು ಅರವತ್ತು
ಭಿನ್ನನಿಲ್ಲದೆ ಗೆದ್ದರು ಪಾವಡದ ಕರತು
ನಿಮಲಿಂದೆ ನಮಗ್ಯಾರು ಗುರುತು ದೇವಾ
ನಿಮನಿಂದೆ ನಮಗ್ಯಾರು ಗುರುತು
ಧನ್ಯನಾದರೋ ಬಿಜ್ಜಳ ಬಸವಯ್ಯನ ಕರತು ॥ ೨ ॥

ಸೃಷ್ಟಿಗಿ ಸಲಹುದಾತ ದೇವಾ
ಸೃಷ್ಟಿಗಿ ಸಲಹುದಾತ
ನಿಮ ಬಿಟ್ಟು ನಾ ತೆರಳುವೆ ಇದ ಒಂದು ಮಾತ

ಸೃಷ್ಟಿ ಸಂಗಮನೋಳು ಕುಳಿತು ದೇವಾ
ಸೃಷ್ಟಿ ಸಂಗಮನೋಳು ಕುಳಿತು
ನಿಷ್ಟವಂತಿ ನೀಲಮ್ಮ ಲಿಂಗದಲ್ಯೆಕ್ಯಾದಳಂತ ॥ ೩ ॥

ಹಿಂದ್ಹತ್ತು ಮುಂದ ಹನ್ನೊಂದು ದೇವಾ
ಹಿಂದ್ಹತ್ತು ಮುಂದ ಹನ್ನೊಂದು
ಸ್ವಾಮಿ ತಿಳಿದಿಲ್ಲ ದಾರಿ ಈ ಮಾತ ಇದು ಒಂದು
ಆನಂದ ದಿನಗೋಳು ಬಂದು ದೇವಾ
ಆನಂದ ದಿನಗೋಳು ಬಂದು
ಆಗ ಬರುವಾರೋ ಚನ್ನ ಬಸವಯ್ಯನವರು ॥ ೪ ॥

ದೇಶಕೆ ನಿಲಗುಂದಿದಲ್ಲಿ ದೇವಾ
ದೇಶಕೆ ನೀಲಗುಂದಿದಲ್ಲಿ
ಶಿಸು ಹೇಳವರ ದೇಶಕೆ ಹೊಳಿ ಸಾಲ ಬಂದು
ಆನಂದ ದಿನಗೋಳು ಬಂದು ದೇವಾ
ಆನಂದ ದಿನಗೋಳು ಬಂದು
ಲಿಂಗ ಪುರದಲ್ಲಿ ವಾಸವಾಗಿರಿ ॥ ೫ ॥

– ಶ್ರೀಮತಿ ಗಂಗಮ್ಮ ಎಲಗುಂಡಿ
– ಶ್ರೀಮತಿ ಪಾರ್ವತಿ ಜೆಮಶೆಟ್ಟಿ ಹಾಗೂ
ಸರ್ವಮಂಗಳಾ ಜೋಗೂರ
– ಶ್ರೀಮತಿ ಭಾಗೀರತಿ ಮಠಪತಿ ತೆಗನೂರ

***

೭. ಭಜನೆ ಹಾಡುಗಳು

೧

ಬಾಗೇವಾಡಿ ಬಸವಾ ಮಾಡುವೆ ನಾ ನಿನ್ನ ಸೇವಾ ।
ರಾತ್ರಿ ಹಗಲ ನಿನ್ನ ನೆನೆಯುವಾ ॥
ನೀ ತೋರೊ ಎನಗೆ ಭಕ್ತಿ ಮಾರ್ಗವ ।
ಆದಿ ಅನಾದಿಯಲ್ಲಿ ನೀ ಅಡಗಿರುವ ॥
ಹೀಂಗ ವೇದ ಪುರಾಣ ಶಾಸ್ತ್ರ ಹೇಳುತಿರುವ ॥ ॥ ೧ ॥

ಶಿವನೆ ಬಸವ ಬಸವ ಶಿವನೆ ಮೂಲದಲ್ಲಿ ಒಬ್ಬಿರುವ ।
ಭಕಿ ತಿಳಿಸುದಕ ಭೂಮಿ ಮೇಲೆ ಬಂದಿರುವ ॥
ಭವತಾರಕನೆ ಮೋಕ್ಷ ಮಂದಿರನೆ ಮಹಾದೇವ ।
ಅನುದಿನ ಭಜಿಸುವೆನು ಮಾಹಾಮಹಿಮ ॥ ॥ ೨ ॥

ಶರಣರಿಗೆ ನೀನು ತನು– ಮನ– ಧನದಿಂದ ಮಾಡಿದಿ ಸೇವ ।
ಭಯ – ಭಕ್ತಿಯಿಂದ ಅವರನ ವಂದಿಸುವ ॥
ಹಿರಿ–ಕಿರಿದು ಅಳಿದು ನೀ ನಡಿಯುವ ।
ಭಕ್ತಿ ಭಾವದಿಂದ ತುಂಬಿ ತುಳಕಿದವ ॥ ॥ ೩ ॥

ಬಿಜ್ಜಳನ ಉದ್ಧಾರ ಮಾಡದಕ ಕಲ್ಯಾಣಕ ಬಂದವಾ
ಅಲ್ಲಿ ಮುಖ್ಯ ಮಂತ್ರಿ ಪದವಿ ಪಡದವ ।
ಪೂಜಿ ಮಾಡುತಿನಿ ಗುರು – ಲಿಂಗ ಜಂಗಮಗ ।
ತನು – ಮನ –ಧನ ಅರ್ಪಣ ಮಾಡವ ॥
ಮನ ನಿತ್ಯ ನಿಜ ಸಲ್ಲಿಸಿದವ ॥ ॥ ೪ ॥

ಈ ಜಗದೊಳಗ ನಾ ಒಬ್ಬ ಸೇವಕ ।
ಶಿವಶರಣರ ಮನಿ ಆಳಾಗಿದ್ದವ ॥
ಉಳಿದವರು ಶಿವ ಸ್ವರೂಪ ಅಂದವ ।
ನುಡಿದಂತ ದಿನ ನಿತ್ಯ ನಡಿಯುವ ॥ ॥ ೫ ॥

ಹರಳಯ್ಯನ ಮಗನಿಗೆ ಮಧುವರಸನ ಮಗಳಕೊಡ್ಸಿದವ ।
ನೀನು ಲೀಲಾ ಪುರುಷ ಅನಿಸಿ ಕೊಂಡವ ॥
ಕೊಂಡಿ ಮಂಚಣಗ ಬುದ್ಧಿ ಕಲಿಸಿದವ ।
ಅವ ಸತ್ಯ ನೇಮ ನಿನಗೆ ಕಾಡವ ॥ ॥ ೬ ॥

ಮೇಲು ಕೀಳು ಎರಡು ಬಿಟ್ಟು ನಿಂತವ ।
ಭೋದಿಸಿದವಾ ಮರಿಸಿ ಅಮೃತ ಉಣಿಸಿದವ ॥
ಮಾನವ ಧರ್ಮ ತಿಳಿಸಿ ಹೇಳಿದವ ।
ದೇವರೊಬ್ಬನೆ ಎಂದು ಸಾರಿದವ ॥ ॥ ೭ ॥

ದಯವೇ ಧರ್ಮದ ಮೂಲ ಎಂದವ ।
ಸಕಲ ಪ್ರಾಣಿಗಳಿಗೆ ಕರುಣ ತೋರಿದವ ॥
ಭಯ – ಲಯ ಆಗದು ಅಂದವ ।
ಓಂಗ ಶೃತಿ ಗುರುಸಾರಿ ಹೇಳಿದವ ॥ ॥ ೮ ॥

ಮುಕ್ತಿಗೆ ಮೂಲ ಭಕ್ತಿ – ಎಂದು ಸಾರಿದವ ।
ಗುರು ಲಿಂಗ ಜಂಗಮರ ಗುಟ್ಟು ತಿಳದವ ॥
ಕಾಯಕವೇ ಕೈಲಾಸ ಎಂದು ಹೇಳಿದವ ।
ಎಲ್ಲ ಶರಣರ ಸೇವೆಯಲಿದ್ದವ ॥ ॥ ೯ ॥

ಪರಮಾನಂದ ವಾಡಿಯಲ್ಲಿರುವನಣ್ಣ ।
ಗುರು ಬ್ರಹ್ಮನಂದನ ಪಾದಕ ನಮಸ್ಕಾರ ।
ಅವರ ದಯ ಸದಾ ನಮ್ಮ ಮ್ಯಾಲ ।
ಮೀರಾ ಮುಲ್ಲ ಹೇಳಿದ ಕವಿಗಾರ ॥ ॥ ೧೦ ॥

– ಶ್ರೀ ಮೀರಾಸಾಹೇಬ ಮುಲ್ಲಾ

***

೨

ಎಲ್ಲರು ಎನ್ನಿರಿ ಬಸವ ।
ಬಸವೆಂದು ಉದ್ಧಾರ ವಾಗುವ ॥ ॥ ಪ ॥

ಬಾಗೆವಾಡಿಯಲ್ಲಿ ಜನಸಿದ ಬಸವಾ ।
ಕೂಡಲ ಸಂಗನಿಗೆ ಅಡಿಯಾದ ಬಸುವಾ ।
ಕಲ್ಯಾಣ ದೊಡಿಯನಿಗೆ ಗಡಿಯಾದ ಬಸುವಾ ।
ನಾಡಿನ ಒಡೆಯನಿಗೆ ಬಾಗಿದ ಬಸುವಾ ॥ ॥ ೧ ॥

ಕಲ್ಯಾಣ ಪುರದಲ್ಲಿ ನೆಲಸಿದ ಬಸುವಾ ।
ಸರ್ವ ನಾಡಿಗೆ ಒಲಸಿದ ಬಸುವಾ ॥
ಅಮರ ವಾಣಿ ಸಾರಿದ ಬಸುವಾ ।
ಅನ್ಯಾಯಕ್ಕ ವೈರಿ ಆದಂತ್ಹ ಬಸುವಾ ॥ ॥ ೨ ॥

ಆಧ್ಯಾತ್ಮವನ್ನು ಆವರಿಸಿದ ಬಸುವಾ ।
ಬಿದ್ದ ಆತ್ಮವನ್ನು ಎಬಿಸಿದ ಬಸುವಾ ।
ವಾದದಲ್ಲಿ ಬದ್ಧವಾಗದ ಬಸುವಾ ।
ವೇದದಲ್ಲಿ ಭಾಗವಹಿಸಿದ ಬಸುವಾ ॥ ॥ ೩ ॥

ಸರ್ವರಿಗೆಸಹಾಯ ವಾದಂತ್ಹ ಬಸುವಾ ।
ಸರ್ವೇಶನಲ್ಲಿ ಐಕ್ಯಾದಂಥ ಬಸುವಾ ।
ಅಮಗಾಂಗದೊಳು ಲಿಂಗಧರಿಸಿದ ಬಸುವಾ ।
ಜಂಗಮರಿಗೆ ಹಣೆ ಒರಿಸಿದ ಬಸುವಾ ॥ ॥ ೪ ॥

ನೆನದವರಿಗೆ ಕೊನೆ ಮಾಡಿದ ಬಸುವಾ ।
ಮುನಿದವರಿಗೆ ಮಾನ್ಯ ಮಾಡಿದ ಬಸುವಾ ।
ಅಂದಿಲ್ಲ ಇಂದೆಂದು ನುಡಿದಂತ್ಹ ಬಸುವಾ ।
ನಂದಿ ಬಾಗೇವಾಡಿಗೆ ಹೊಂದಿದ ಬಸುವಾ ॥ ॥ ೫ ॥

– ಪಿಂಜಾರ ಪಿ.ಎಚ್

***

೩

ಜಗಜ್ಯೋತಿ ಬಸವಣ್ಣನೆ ಬಾರೊ ॥ ಪ ॥

ನಂದಿ ಅವತಾರ ತಾಳಿದವ ಬಾರೊ ।
ಚಂದ್ರಧರನ ವಾಹನಾದವ ನೀ ಬಾ ।
ಇಂದ್ರನ ಗರ್ವವ ಮುರಿದವ ನೀ ಬಾ ।
ನಂದನ ವನವೆಲ್ಲ ಮುರಿದವ ನೀ ಬಾ ॥ ॥ ೧ ॥

ಕಲ್ಯಾಣದ ಮಂತ್ರಿ ಆದವ ನೀ ಬಾ ।
ಅಲ್ಲಮ ಪ್ರಭುವಿನ ಶಿಷ್ಯನಾದವ ನೀ ಬಾ ।
ಇಲ್ಲದ ಪವಾಡ ಮಾಡಿದವ ನೀ ಬಾ ।
ಕಲ್ಯಾಣಕ ಕೈಲಾಸ ಮಾಡಿದವ ನೀ ಬಾ ॥ ॥ ೨ ॥

ಶರಣರ ಸಂಗದಿ ಮೆರೆದವ ನೀ ಬಾ ।
ಹರಳಯ್ಯಗ ವರ ಕೊಟ್ಟವ ನೀ ಬಾ ।
ಮರಣ ರಹಿತನಾಗಿ ಶರಣನಾದ ನೀ ಬಾ ।
ಕರುಣಾಮೃತ ರಸ ನೀಡಿದವ ನೀ ಬಾ ॥ ॥ ೩ ॥

ವೀರಶೈವ ಮತ ಉದ್ಧಾರಕ ನೀ ಬಾ ।
ಹಾರರ ಮತ ಧಿಕ್ಕರಿಸಿದವನೆ ನೀ ಬಾ ।
ಮಾರಯ್ಯನ ಭಕ್ತಿಗೆ ಒಲಿದವನೆ ನೀ ಬಾ ।
ಧೀರನಾಗಿ ಜಗ ಬೆಳಗುತ ನೀ ಬಾ ॥ ॥ ೪ ॥

ಕಾಮಕ್ರೋಧಗಳು ಅಳಿದವ ನೀ ಬಾ ।
ನೇಮ ನಿತ್ಯ ಕಾಲ ಗಳಿದವ ನೀ ಬಾ ।
ಸೋಮಧರನ ನಾಮ ಪಡದವ ನೀ ಬಾ ।
ಕಮಲನಗರಕ್ಕೆ ಹತ್ತಿಕೊಂಡವ ನೀ ಬಾ । ॥ ೫ ॥

– ಶಿವರುದ್ರಪ್ಪ ಶರಣಪ್ಪ ಬಿರಾದರ

***

೪

ಜಗಜ್ಯೋತಿ ಬಸವಣ್ಣನ ನೆನೆಯಿರೊ ಹಗಲಿರುಳು ಎನ್ನದೆ ॥ ಪ ॥

ಬಾಗೇವಾಡಿಯ ಭಾಗ್ಯದ ಬಸವಣ್ಣ ।
ಸಂಗಮನಾಥನ ನಂಬಿದ ಬಸವಣ್ಣ ।
ಜಂಗಮ ಸೇವೆಯ ಕೈಕೊಂಡ ಬಸವಣ್ಣ
ಮಂಗಳಮೂರ್ತಿಶೃಂಗಾರ ಬಸವಣ್ಣ ॥ ॥ ೧ ॥

ಹನ್ನೆರಡನೆ ಶತಮಾನದ ಬಸವಣ್ಣ ।
ಧನ್ಯಧನ್ಯ ಕ್ರಾಂತಿಪುರುಷ ಬಸವಣ್ಣ ।
ಕನ್ನಡ ನುಡಿಯಲಿ ಬರಿಸಿದ ವಚನ ।
ಅನುಭವ ಮಂಟಪ ಮಾಡಿದ ರಚನ ॥ ॥ ೨ ॥

ಜನತಾವಾದ ಉದ್ಯೋಗ ವಿಕೇಂದ್ರಿಕರಣ ।
ಜನತೆಗೆ ಕೊಟ್ಟನೊ ನೈತಿಕ ಶಿಕ್ಷಣ ।
ಘನವಾದ ಕಾಯಕ ಕೈಲಾಸವೆ ದೂರ ।
ಮಾನವಗೆ ಮಾರ್ಗದರ್ಶಕ ಬಸವಣ್ಣ ॥ ೩ ॥

ಸದ್ಭಾವನೆಯಿಂದ ಇದ್ದಾವ ಬಸವಣ್ಣ ।
ಸದ್ಬೋಧನೆಯಿಂದ ತಿದ್ದಾಂವ ಬಸವಣ್ಣ ।
ಅದ್ಭುತ ಕಾರ್ಯದ ಧುರೀಣ ಬಸವಣ್ಣ ।
ಬಿದ್ದ ಕೈಲಾಸಲಿಪಿ ಓದಿದ ಬಸವಣ್ಣ ॥ ॥ ೪ ॥

ಭಕ್ತಿಭಂಡಾರಿ ನಿತ್ಯ ಶಿವಶರಣ ।
ಮುಕ್ತಿಲಿ ತೋರಿಸಿದ ಮುಕ್ತಿ ಸೋಪಾನ ।
ಸತ್ಪಾತ್ರಕೆ ನೀಡಿದನೋ ದಾನ ।
ಮೃತ್ಯುಂಜಯನಿಗೆ ಆದನೊ ವಾಹನ ॥ ॥ ೫ ॥

ಶರಣಮಾರ್ಗದ ರಹಸ್ಯ ಅರಿತವ ।
ಪರಿಪೂರ್ಣ ದಲಿತೋದ್ಧಾರಕ ಬಸವಣ್ಣ ।
ಮರೆಯಲಾರದ ರಾಜಕಾರಣ ।
ಧರಣಿಯೊಳಗೆ ಮಾಡಿದ ಪರಿಪೂರ್ಣ ॥ ॥ ೬ ॥

ಮೂಲ ಷಟ್‌ಸ್ಥಲ ಕಾರ್ಯಚರಣ ।
ಲೀಲಾತೋರಿಸಿದ ನೀಲಾಂಬೆ ರಮಣ ।
ಕಲಿಯುಗದಲಿ ಶಿವನೇ ಬಸವಣ್ಣ ।
ಹುಲಕುಂದ ಭೀಮಕವಿ ಮಾಡಿದ ಭಜನ ॥ ॥ ೭ ॥

– ಕವಿ: ಹುಲಕುಂದ ಭೀಮಕವಿ

***

೫

ಕಲ್ಯಾಣ ಬಸವಣ್ಣ ಎಲ್ಲರೊಳು ಹಿರಿಯಣ್ಣ ॥ ಪ ॥

ಭಾಗ್ಯವಾಡಿಯೊಳು ಜನಿಸಿ ಕಲ್ಯಾಣದೊಳುದಯಿಸಿ
ತ್ಯಾಗಿ ಜೀವನಕ್ಕಾಗಿ ನೀಲಾಂಬಿಕೆನು ಒಲಿಸಿ ॥ ೧ ॥

ಲೋಕ ಜನರ ಹಿತಕ್ಕಾಗಿ ಬಿಜ್ಜಳನ ಆಳಾಗಿ
ಅನುಭವದ ಅಡುಗೆ ಮಾಡಿ ಶಿವಶರಣರಿಗೆಡೆ ಮಾಡಿ
ಕಲ್ಯಾಣದಲ್ಲಿ ಮೆರೆದೆ ಸಂಗಮನಾಥನಲ್ಲಿ ಕೂಡಿದೆ ॥ ೨ ॥

– ಮಹಾರುದ್ರ ಭೀಮಣ್ಣ

***

೬

ಬಸವಣ್ಣ ತೆರದು ನೋಡೋ ನೀ ಕಣ್ಣ ॥ ಪ ॥

ಬಸವಣ್ಣ ಸಾರ ಮುತ್ತಿನ ಹಾರ
ಮುತ್ತಿನ ಹಾರ ಮುತ್ತಿನ ಹಾರ ॥ ೧ ॥

ತಾಯಿಯು ನೀನೇ ತಂದೆಯು ನೀನೇ
ಬಂಧುವ ನೀನೇ ಬಳಗವು ನೀನೇ ॥ ೨ ॥

ಅಂಗವು ನೀನೇ ಲಿಂಗವು ನೀನೇ
ಕೂಡಲ ಸಂಗಮ ದೇವರು ನೀನೇ ॥ ೩ ॥

– ಶ್ರೀಮತಿ ಶಾಂತಮ್ಮ ಹಿರೇಮಠ
– ಶ್ರೀಮತಿ ಚಂದ್ರಮ್ಮ ನೇಳಗೆ

***

೭

ಬಸವಗ ನೆನಿ ಮನವೇ ಬೇಡಪ್ಪ ಧನವೇ
ಬಸವಗ ನೆನಿ ಮನವೇ ಬೇಡಪ್ಪ ಧನವೇ ॥ ಪ ॥

ಬಸವನೆಂದರೆ ಭಾಗ್ಯದೊರದತ್ತು
ಬಸವನೆಂದರೆ ಭಯವ ಹಾರಿ
ಬಸವನೆಂದರೆ ಹಸನು ಆದತು
ಬಸವನೆಂದರೆ ಖುಷಿಯಮುಚ್ಚತ್ತು ॥ ೧ ॥

ಧನವು ದ್ರವ್ಯ ಅವರಲ್ಲೇ ಉಂಟು
ಗುರುವಿನ ಕಟ್ಟು
ಸಡಗರದಿಂದೇ ಮಾಡೋ ಮಾರಾಟ
ಗುಡು ಲಾಭದ ಉಂಟು ॥ ೨ ॥

ಲೋಭಿ ಗುಣಗಳು ಅಳಿದು ತಿಳಿದು
ಜಾಬ ಬರೆದು ಹಾಕೋ ಬೇಗ
ಸರಿ ತಪ್ಪ ನಿನ್ನದೇಯ ಭಿನ್ನ
ರಾಜ ಬಂದು ಇಳಿವನು ॥ ೩ ॥

– ಮಹಾದೇವಪ್ಪ ಬಿರಾದಾರ, ಗೋರಂಪಳ್ಳಿ

***

೮

ಶರಣಾಗತಿ ಬಸವ ಶರಣಾಗತಿ
ಶರಣಾಗತಿ ಬಸವ ಶರಣಾಗತಿ ॥ ೧ ॥

ಕರುಣಾ ಸ್ಪೂರ್ಣವೇ ಭಕ್ತಿಯ ದಾಸನೇ
ವಾಸನೆ ಅಳಿದ ನಿಮ್ಮಯ ಕಿರತಿ
ಶರಣಾಗತಿ ಬಸವ ಶರಣಾಗತಿ ॥ ೨ ॥

ಅಣುರೇಣು ತೃಣಕಾಷ್ಠಗಳಲ್ಲಿ
ಜೀವನ ಕಂಡ ಮಹಾಜೀವಜ್ಞಾನಿಯೇ
ಸತ್ಯವ ನುಡಿದ ಗಣ್ಯಾ ಸ್ವರನೇ
ಅನುಭಾವ ಮಂಟಪದ ಆದ್ಯನೇ ವೈದ್ಯನೇ
ಶರಣಾಗತಿ ಬಸವ ಶರಣಾಗತಿ ॥ ೩ ॥

ದ್ವತಾ ದ್ವಯತದ ಸಂಗಮ ಶ್ರೇಷ್ಠನೇ
ಭೂತನಾಥ ಶಂಕರನ ಸುತನೇ
ಕಾಯಕದಲ್ಲಿ ಕೈಲಾಸ ಕಂಡವನೆ
ದಾಸೋಹದಾ ನೀ ಲಿಂಗಾಂಗಿ ನೀನೇ
ಶರಣಾಗತಿ ಬಸವ ಶರಣಾಗತಿ ॥ ೪ ॥

ವಚನ ಪಿತಾಮಹಾ ವೀರಶೈವನೆ
ಸರಳ ಭಾಷೆಯ ಸಂಶೋಧಕನೆ
ಶರಣು ಶರಣಾರ್ಥಿ ವಿನಯ ವಿಹಾರನೆ
ಶಿವ ಸಿದ್ಧ ಶುದ್ಧ ಪ್ರಸಿದ್ಧ ಬಸವಣ್ಣನೇ
ಶರಣಾಗತಿ ಬಸವ ಶರಣಾಗತೀ ॥ ೫ ॥

– ಶ್ರೀ ಮಲ್ಲಯ್ಯ ಚಿಕ್ಕಮಠ

***

೯

ಬಸವೇಶನ ನಾಮಕಾದೆ ಮರುಳ
ಉಲ್ಲಾಸ ಮನದೊಳು ಹಗಲಿರಳ ॥ ಪ ॥

ಅಲ್ಲಮಪ್ರಭು ಒಂದಿನ ಬಂದು
ಹಾಲಬೇಡಿದರ ಪ್ಯಾಲೆದಲೊಂದು

ಹಾಲ ಸಿಗಲಿಲ್ಲ ಎಣಸುತ ಬಂದ ಬೆರಳ
ಬಸವಣ್ಣಪ್ಪಾ ಕೇಳಿದಾರ ಆ ಆಳಿನ ಗೋಳ ॥ ೧ ॥

ಬಸವಣ್ಣಪ್ಪಾ ಹೊಂಟಿದರು ಊರ ಹೊರಗ
ಸತ್ತ ಆಕಳ ಸ್ವತ ಅವರು ಕಾಣಿ ಎದರಿಗ
ಬೆನ್ನ ಬಡಿದು ಬಸವ ಎಬ್ಬಿಸ್ಯಾರ ಆಕಳ
ಜೀಂವ ಪಡಿಸಿ ಒಯ್ದರ ಹಾಲು ಹೆಂತಾ ತರುಳ ॥ ೨ ॥

ಮಾತ್ವ ತೋರಿದರೋ ಜಗವೆಲ್ಲಾ
ಜೀತವಾದರೋ ಸ್ವರ್ಗದೊಳಗ
ನಿಮ್ಮ ನಾಮ ಕಿರಣ ಮಾರ್ಗಸರಳ
ನಮ್ಮ ಬಸವ ಸಿದ್ಧಗ ಭಜನೆ ಕಲ್ಪ ನೆರಳ ॥ ೩ ॥

– ಶ್ರೀಮತಿ ವಿಮಲಾಬಾಯಿ ಸಿದ್ಧೇಶ್ವರ ಹಾಗೂ
ಶ್ರೀಮತಿ ಮಹಾದೇವಿ ಹಿರೇಮಠ, ಶ್ರೀಮತಿ ಈರಮ್ಮ ಧೂಳೆ

***

೧೦

ಬಸವಣ್ಣ ಬಂದರೊ ಕಲ್ಯಾಣಕ । ಕಲ್ಯಾಣಕ
ಶಿವಮತ ಉದ್ಧರ ಮಾಡದುಕ ।

ಮೋಳಿಗಿ ಮಾರ್ಯೆ ನಿಂತ ಕಟಗಿ ತರುವುದಕ
ಅಕ್ಕನಾಗಮ್ಮ ನಿಂತಾಳಡಗಿ ಮಾಡುದಕ
ಬಸವರಾಜ ನಿಂತಾರೆಲಿ ಬಡಸದಕ । ಬಡಸದಕ
ಶಿವಮತ ಉದ್ಧರ ಮಾಡುದುಕ ।

– ಶ್ರೀಮತಿ ಉತ್ತಮಬಾಯಿ ಮಠಪತಿ

***

೧೧

ಇದು ನೋಡೋ ಬಸವನ ಕೈಲಾಸ
ಶಿವ ಶರಣರ ವಾಸ । ಇದು ನೋಡೋ ಬಸವನ ಕೈಲಾಸ ॥ ಪ ॥

ಭೂಮಿ ಮ್ಯಾಲ ಸ್ವರ್ಗ ನರಕ
ಪಾಪಿಗಳಿಗೆ ಹತ್ತಲಿಲ ನೆಲಕ

ಕಲ್ಯಾಣ ಬಸವಣ್ಣ ಹೇಳ್ಯಾರ ಬೆಳಕ
ಪಾಪಿಗಳಿಗೆ ಹತಲಿಲ ನೆಲಕ । ಇದು ನೋಡೋ .... ॥ ೧ ॥

ಹುಡಕೂತ ಹೊಂಟಾರೊ ಕಲ್ಯಾಣತನಕ
ಬಸವಣ್ಣ ಕುಂತರ ಲಿಂಗಪೂಜೆಕ
ಬಸವಣ್ಣ ಹೇಳ್ಯಾರ ಪೂಜಾದ ಬೆಳಕ
ಪಾಪಿಗಳಿಗೆ ಹತಲಿಲ್ಲ ನೆಲಕ । ಇದು ನೋಡೋ ...... ॥ ೨ ॥

ಗುರುಪುತ್ರ ಆಗಿದ್ದ ಬಳಿಕ
ಖೊಟ್ಟಿ ಗುಣಗಳು ಬಿಟ್ಟೀರಬೇಕ
ಬಸವಣ್ಣ ಹೇಳ್ಯಾರೊ ಭಕ್ತಿಯ ಬೆಳಕ
ಪಾಪಿಗಳಿಗೆ ನೆಲಕ । ಇದು ನೋಡೋ .... ॥ ೩ ॥

ಜೈಸೆ ಆಪ್ ವೈಸೆ ತೂಕ
ತೇಜಿ ಮಂದೀದ ಲೆಕ್ಕ
ಬಸವಣ್ಣ ಮಾಡ್ಯಾರೊ ಲಿಂಗದ ಲೆಕ್ಕ
ಇಷ್ಟು ಐಶ್ವರ್ಯ ಯಾರ ಪಾಲಕ । ಇದು ನೋಡೋ .... ॥ ೪ ॥

ಬಸವಣ್ಣ ನಡದಾರೊ ಕಪ್ಪಡಕ
ಸಂಗಮನಾಥನ ಬಲ್ಲಿ ಕೂಡಲಾಕ
ಸಂಗಮನಾಥ ತಿಳ್ಕೊಂಡರ ಬೆಳಕ
ಪಾಪಿಗಳಿಗೆ ಹತಲಿಲ್ಲೊ ನೆಲಕ । ಇದು ನೋಡೋ .... ॥ ೫ ॥

ಧರಿಯೋಳು ಕಲ್ಯಾಣ ಬೆಳಕ
ಬಸವಣ್ಣ ಕುಂತ್ಹೋಗಿದಿದೇ ಸ್ಥಾನಕ
ಬಸವಣ್ಣ ನಡದರ ಕಲ್ಯಾಣ ಬಿಟ್ಟು
ಇಷ್ಟು ಐಶ್ವರ್ಯ ಯಾರ ಪಾಲಕ । ಇದು ನೋಡೋ ..... ॥ ೬ ॥

ಧರಿಯೋಳು ಮೋಳ್ಕೇರಿ ವಾಸ
ಮೋಳಿಗಿ ಮಾರ್ಯೆಂದು ಅದ ನೋಡು ಬೆಳಕ
ಕವಿ ಆಗತಾವರಿ ಬೇಕಾದಷ್ಟ
ಹೋಗಿ ಬೀಳರಿ ಶರಣರ ಪಾದಕ । ಇದು ನೋಡೋ .... ॥ ೭ ॥

– ಶ್ರೀಮತಿ ಉತ್ತಮಬಾಯಿ ಮಠಪತಿ
– ಶ್ರೀಮತಿ ಮಹಾದೇವಿಸ್ವಾಮಿ ಕವಡಿಮಠ

***

೧೨

ವಿಜಯವಾಗಲಿ ನಮ್ಮ ಸುಭಗ ಕನ್ನಡನಾಡು
ವಿಜಯಧ್ವಜವನು ಪೊತ್ತು ಮೆರಿದ ಬಸವನ ಬೀಡು ॥ ಪ ॥

ಸನ್ನುತಾಲ್ಲಮ ಚೆನ್ನಬಸವ ಸಿದ್ಧರಾಮರ ನಾಡು
ಉನ್ನತೋನ್ನತ ಭಕುತ –ಭಕುತೆಯರ ನೆಲೆವೀಡು
ಅನ್ನವಸಾದಿಗಳ ದಾನಧರ್ಮದ ನಾಡು
ಚೆನ್ನ ಬನೆ – ಗಿರಿಸಿರಿಯ ಪೊತ್ತ ಚೆನ್ನದ ನಾಡು ॥ ೧ ॥

ಅಕ್ಕಮಹಾದೇವಿಗಳ ಹೆತ್ತು ಮೆರೆದಿಹ ನಾಡು
ಉಕ್ಕಿಬರುತಿಹ ಭಕುತಿ ಸಕುತಿಗಳ ತಯ್ನಾಡು
ರಕ್ಕಸರ ಹಾವಳಿಯನೊಕ್ಕಲಿಕ್ಕಿದ
ಮಿಕ್ಕಿ ಭವಭಾರಿಗಳ ಭಾರನಿಳುಹಿದ ನಾಡು ॥ ೨ ॥

ಆಗಮಾಮೃತಸಾರ ವಚನ ಶಾಸ್ತ್ರದ ನಾಡು
ಮೂಕ – ಕುರಿಗಳ ಯಾಗ ಆಗಗೊಡದಿಹ ನಾಡು
ಭೋಗ ಮೋಕ್ಷಗಳನು ಬೇಗನೀಯುವ ನಾಡು
ನಾಗಭೂಷಣನೊಲಿದು ಪಾಡಿದ ಕರುನಾಡು ॥ ೩ ॥

– ಶ್ರೀಮತಿ ಸುಮಿತ್ರಾದೇವಿ ಅಂಗಡಿ

***

೧೩

ಬಸವಣ್ಣ ಬರುವಾಗ ಹೊಸ ಮುತ್ತು ಹೊಳೆದಂತೆ ।
ಎಸಳ ರುದ್ರಾಕ್ಷಿಯಂತೆ । ಕರಣ ಕುಂಡಲಗಳಂತೆ ।
ಮುಗಳ ಹಾವಿಗಿಯಂತೆ । ಸುರಳ ಬೋಧಗಳಂತೆ ।
ಸೂರ್ಯಪಾನದಂತೆ । ಬೋರಾಡಿ ಶಂಕಂತೆ ।
ದಿಕ್ಕಾವಿ ಲೋಕವ ಸುರಿದಂತೆ ।
ಶ್ರೀ ಮೂರ್ತಿ ಚನ್ನಬಸವ ಬಂದಾನೋ ನೋಡಿರೆ ॥ ೧ ॥

ಹಸವಿಗೆ ಹಾಲಂತೆ । ಶಿಸುವಿಗೆ ಬೆಣ್ಣಂತೆ ।
ಅತ್ತ ಆಡು ಮಕ್ಕಳಿಗೆ ಬಟ್ಟಲ ಹಾಲಂತೆ ।
ಮುಪ್ಪಾದ ಮುದುಕರಿಗೆ ಮೂರೋತ್ತಿನ ಬಾನಂತೆ । ದಿಕ್ಕಾವಿ... ॥ ೨ ॥

ಅಣಿಸುದ್ದ ಕಡಿಮಾಟಿ ಅರಸವ ರತ್ನಗಳಂತೆ ।
ನಾಲ್ಕು ಪಾದಗಳ ನಡುವೆ ನೆಲಕ ಬಾಲ ಎಳಿಯಂತೆ
ಆಕಾಶದ ಮೂರ್ತಿ ಆದಿ ಕಲ್ಯಾಣ ಬಸವ ॥
ದೀಪದ ಕಲ್ಲಲ್ಲಿ ಆತ ತಾ ಮೆರೆಯುತ್ತಿದ್ದ । ದಿಕ್ಕಾವಿ... ॥ ೩ ॥

ಮೆನಪಿ ಕಲ್ಲ ಬಿದ್ದಾವ ಒಡೆದು ಹೇಳುವರಿಲ್ಲ
ಓದಿ ಹೇಳುವರಿಲ್ಲ । ದಿಕ್ಕಾವಿ ॥
ಹುಟ್ಟಿದ್ದ ಮೂರು ದಿನಕ ಅಂಬಿಗಾಲ ಹಚ್ಚುತ್ತ ।
ಮಿತ್ರ ಬಸವಣ್ಣನ ತಾಯಿ ಎತ್ತಿ ಸಲಹಿದಂತೆ । ದಿಕ್ಕಾವಿ.... ॥ ೪ ॥

– ಶ್ರೀ ವೀರಯ್ಯ ಮಠಪತಿ, ಮುಧೋಳ

***

೧೪

ಎಲ್ಲಿರುವೆ ಬಸವೇಶ । ಎಲ್ಲಿಕಾಣಲೋ ನಿನ್ನ ।
ಒಮ್ಮೆ ದರುಶನ ನೀಡೋ । ಕಂದರನು ಕಾಪಾಡೋ ॥ ಪ ॥

ರೂಪವಂತೆ ನಿನ್ನ ರೂಪವನು ತೋರೆಯ ।
ತಾಪವನು ಪರಿಹರಿಸಿ ಕಾಪಾಡೋ ಬಸವೇಶ ॥ ೧ ॥

ಭಕ್ತಿಯನು ನೀಡಯ್ಯ ಭಕ್ತರನು ಮಾಡಯ್ಯ
ಚಿತ್ತ ಸುದ್ದಿಯನಿತ್ತು ರಕ್ಷಿಸೆಮ್ಮನುತಂದೆ ॥ ೨ ॥

ಎನ್ನ ಹೃದಯವ ನಿನ್ನ ಮಂದಿರವ ಮಾಡಯ್ಯ ।
ತನು ನಿನ್ನ ಗುಡಿ ಕಂಬವನು ಮಾಡಯ್ಯ ॥ ೩ ॥

– ಶ್ರೀಮತಿ ಸರ್ವಮಂಗಳ ಜೋಗೂರು
ಹಾಗೂ ಅನ್ನಪೂರ್ಣ ದೇವಣಿ, ಪಾರ್ವತಿ ಜೆಮಶೆಟ್ಟಿ

***

೧೫

ಮನಮೋಹನ ಸುಂದರ ಮೂರುತಿಯೇ ।
ವೀರಶೈವ ಶಿಖಾಮಣಿಯೇ ಬಸವರಾಜನೇ ॥ ಪ ॥

ಕನ್ನಡ ಮಾತೆಯ ವರಪುತ್ರ ಕಣ್ದೆರೆದೆನ್ನನು ।
ನೋಡಯ್ಯ ಎನ್ನ ಮಂದಿರದೊಳಗೆ ನೀ ನೆಲೆಸು ।
ಚಿನ್ಮಯ ಮೂರುತಿ ಬಸವಣ್ಣ ಕೊನೆಗಾಣೆನು ।
ಈ ಭವಶರಧಿಯನು ದಯದಿಂದಲಿ ದಾಟಿಸಯ್ಯ ಬಸವರಾಜ ॥ ೧ ॥

ಪಂಚಾಚಾರವೇ ಪ್ರಾಣವೆಂದು ।
ಅಷ್ಟಾವರ್ಣವೇ ಅಂಗವೆಂದು ।
ಶಿವಾನುಭವದ ಮರ್ಮವನರುಹಿದ ಶಿವರೂಪನೇ ನೀ ।
ನೀ ಬಸವಣ್ಣ ಹೃದಯ ನಿವಾಸ ಕಲ್ಯಾಣ ಬಸವಣ್ಣ ॥ ೨ ॥

– ಶ್ರೀಮತಿ ಸರ್ವಮಂಗಳಾ ಜೋಗೂರ
ಹಾಗೂ ಅನ್ನಪೂರ್ಣ ದೇವಣಿ, ಪಾರ್ವತಿ ಜೆಮಶೆಟ್ಟಿ

***

೧೬

ಬಸವೇಶ್ವರ ಮಹಾರಾಜಾ ತುಮಪರ ಸಾರೆ ಪ್ರಣಾಮ ।
ತುಮಪರ ಸಾರೆ ಪ್ರಣಾಮ ॥ ಪ ॥

ಮಾದಿರಾಜ ಶಿವಭಕ್ತ ಪಿತಾತಾ ।
ಮಾದಲಾಂಬಿ ಪತಿವ್ರತಾ ಪಿಮಾತಾ ।
ಬನೆ ಸ್ವಯಂ ಗುರು ತುಮ ತುಮಪರ ಸಾರೆ ಪ್ರಣಾಮ ॥ ೧ ॥

ಶಿವಾನುಭವ ಮಂಟಪ ಉಬರಾಯ ।
ವಚನಶಾಸ್ತ ತಯಾರ ಕರಾಯ ।
ನ ಬನೆ ರೂಢಿ ಗುಲಾಮ ತುಮಪರ ಸಾರೆ ಪ್ರಣಾಮ ॥ ೨ ॥

ತರ್ಕ ಶಾಸ್ತಕೋ ತೀರ ಚಲಾಯಾ
ವರ್ಣ ಆಶ್ರಮಕೊ ದೂರ ಗಾಭಯಾ ।
ತುಮ ಹೋ ಕಲ್ಯಾಣವಾಸಿ ತುಮಪರ ಸಾರೆ ಪ್ರಣಾಮ ॥ ೩ ॥

ಕನ್ನಡ ದೇಶಕೋ ಬಚಾವೋ ಬಸವಾ ।
ಕನ್ನಡ ಭಾಷಾ ಶಿಖಾವೋ ಬಸವಾ ।
ಕರ್ನಾಟಕ ಭೂರಕ್ಷಕ ತುಮಪರ ಸಾರೆ ಪ್ರಣಾಮ ॥ ೪ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

೧೭

ಜಯ ಬಸವೇಶ ಭಕ್ತಿಯ ಕೋಶ ।
ಹೇ ಜಗದೀಶ ನಮೋ ನಮೋ ॥ ಪ ॥

ಆಡಿದ ನುಡಿಯೇ ಅಮೃತದ ಸಾರು ।
ಕೂಡಿದಡೇತಾ ನೀರಿಗೆ ನೀರು ।
ಕಾಡುವರೆ ನಿನ್ನಾ ಪಡೆದವರು ।
ಮೃಢನೊಲುವೆಯ ಅಡಿಗಡಿ ಕಂಡವರು ।
ಬಡವರುದ್ಧರಿಸಿದ ಬಸವೇಶ ।
ಹೇ ಜಗದೀಶ ನಮೋ ನಮೋ ॥ ೧ ॥

ಮಂಗಲಮಯ ನಿನನಾಮ ನೆನೆಯುತ ।
ಇಂಗಿತ ಫಲದಾಯಕ ಬಸವಾ ।
ಲಿಂಗೈಂಕ್ಯಾನಂದದೊಳಿರುವ ಸಂಗನ ।
ಬಸವೆಂದೆನಿಸಿದೆ ಬಸವ ಮಂಗಲ ।
ಪುರವಾಸ ಮಹೇಶ ಹೇ ಜಗದೀಶ ನಮೋ ನಮೋ ॥ ೨ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

೧೮

ಮನಃ ಶಾಂತಿ ಭವ ದುಃಖ ಮುಕ್ತಿ ಆತ್ಮೋದ್ಧಾರ ಗತಿ ।
ವಚನಾ ಪೇಳ್ವೆ ಬಸವೇಶ ॥ ಪ ॥

ಧರ್ಮದ ಮೂಲಾ ದಯವೇ ಶೀಲಾ ಸಮತಾಸಕಲ ತೋರಿಸಿ ।
ಕರ್ಮ ಖಂಡನಾ ಆತ್ಮಜ್ಞಾನ ಅಷ್ಟಾವರಣ ಬೋಧಿಸಿ ।
ಜನ ಪ್ರೀತಿ ಜೀವನ ನಿತ್ಯಾನಂದ ಮಾತಾ
ವಚನ । ಪೇಳ್ವೆ ಬಸವೇಶ ॥ ೧ ॥

ಜಾತಿವರ್ಣವ ಮಾಡಿ ಕಲ್ಪನಾ ಮಾನವತಾ ಮಹಾಮಂತ್ರ ।
ಕ್ರಾಂತಿ ಕಲ್ಯಾಣ ಶರಣ ಸ್ಥಾನ ಅನುಭವ ಮಂಟಪ ಕ್ಷೇತ್ರ ।
ಪ್ರಭು ಅನುಭವ ಮಂಟಪ ಕ್ಷೇತ್ರ ಘನ ಜ್ಯೋತಿ ಜಗದೀಕೀರ್ತಿ
ವಿಶ್ವೋದ್ಧಾರ ಮಾತಾ ವಚನ ಪೇಳ್ವೆ ಬಸವೇಶ ॥ ೨ ॥

ಕಾಯಕ ತಪವಾ ಭಕ್ತಿಯ ಜಪವಾ ಕೈಲಾಸ ನಿಜಭಾವ ।
ಕಾಯದ ಮಾಯಾ ಅಳಿಸೋ ಅಯ್ಯ ತಿಳಿಸಿ ತತ್ವವು ।
ದೇವಾ ತಿಳಿಸಿ ತತ್ವವು ದೇವಾ ಮನಶಕ್ತಿ ಮಂಗಲ ಮುಕ್ತಿ ।
ಚನ್ನಕವಿ ಸುಮತಿ ನಿನ್ನ ವಚನ ಪೇಳ್ವೆ ಬಸವೇಶ ॥ ೩ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

೧೯

ಅಣ್ಣಾ ಜಗವೆಲ್ಲ ನಲಿದಾಡಿತು ।
ನಿನ್ನ ಅಮರ ಕೃತಿಗೆ ಜಗವೇ ತಲೆಬಾಗಿತು ॥ ಪ ॥

ವಚನ ಜ್ಞಾನ ಜ್ಯೋತಿಯಲ್ಲಿ ನಿನ್ನ ರೂಪಕಂಡಿತು ।
ವಚನದ ಸವಿ ಉಣಿಸಿದ ಕವಿ ಸವಿದಾ ಸುಖವೆಂತು
ಆ ನುಡಿಯು ನಿನ್ನ ಪಡೆದು ನಡೆಯೇ ತಾನೆಂದಿತು ॥ ೧ ॥

ನಾದವೇದ ಮೀರಿದ ನೀನು ಭಾವ ಭಕ್ತಿ ಕಾಮಧೇನು ।
ಕಾಯಕ ಮಣಿ ಕಾವ್ಯದ ಖಣಿ ಪ್ರೇಮದ ಪರುಷಮಣಿ ।
ಗುರುವೇ ನಿಮ್ಮ ನೆನವೇ ಮರವೇ ಮರೆಯಾಯಿತು ॥ ೨ ॥

ನಾಡನಾಡ ನಾಡಿನಲ್ಲಿ ಬಸವ ಮಂತ್ರ ಹೊಮ್ಮಿತು ।
ಬಸವನ ನುಡಿ ಚಿಮ್ಮಿದ ಕಿಡಿ ಬೆಳಗಿದ ಬೆಳಕೆಂತು ।
ಆ ಬೆಳಕೆ ಇಂದು ನಮಗೆ ಶಿವ ದೀವಿಗೆಯಾಯಿತು ॥ ೩ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ
– ಶ್ರೀಮತಿ ಸರ್ವಮಂಗಳಾ ಜೋಗೂರ

***

೨೦

ಬಸವ ಮಂತ್ರವನು ಜಪಿಸಿದವರಿಗೆ
ವಿಷ ಕರ್ಮವೂ ನಾಶ ।
ಶಶಿಧರ ವಾಹನಾಗೆ ಸಂದೇಶ ಮೂಜನ
ಮಾಡಿದನೋ ಪೋಷ ॥ ಪ ॥

‘ ಬ ’ ಎಂಬ ಅಕ್ಷರವೇ ಬ್ರಹ್ಮ
‘ ಸ ’ ಎಂಬ ಅಕ್ಷರ ಸಂಬಂಧ ಶಿವ
‘ ವ ’ ಎಂಬ ಅಕ್ಷರವೇ ವಿಷ್ಣು
ತ್ರಿಮೂರ್ತಿ ನಾಮವುಳ್ಳ ತ್ರಿಪುಂಡ ಬಸವ ॥ ೧ ॥

ಬಾಗೇವಾಡಿಯಲ್ಲಿ ಬಸವನ ಮಂತ್ರ
ಜಪಿಸಿ ಪಡೆದರೋ ಸತ್ಯ ಶಿವಪುತ್ರ
ಬಸವ ನಾಮ ಇಟಕೊಂಡಿದ ಕ್ಷೇತ್ರ
ಶಿವ ಮತ ಧರ್ಮದಿ ಆದ ಪವಿತ್ರ ॥ ೨ ॥

ಭಕ್ತಿಮುನಿ ಜಡಿಯೊಳು ಹುಟ್ಟಿ
ಪ್ರಚಂಡ ಬನದೊಳು ಕೊಲ್ಲಿದಿ ಇಂದ್ರನ ದಂಡ
ದೇವಿಂದ್ರನ ಗರ್ವ ಹರಸಿದ ಪುಂಡ
ಭಜನಿಯೊಳಗ ಶಿವಾ ಓಂ ಝುಂಡಾ ॥ ೩ ॥

ಭವದೊಳು ಬಡವರ ತಾಯಿತಂದಿ
ಶಿವನ ವಾಹನನಾಗಿ ಅನಿಸಿದಿ ನಂದಿ
ಒಕ್ಕಲಿಗರಿಗೆ ಆಳಾಗಿ ದುಡಿದಿ
ಕೌಂಟಗಿ ಊರೊಳು ಮೆರೆಯುತ ನಡದಿ ॥ ೪ ॥

– ಶಿವರುದ್ರಪ್ಪ ಬಿರಾದಾರ

***

೨೧

ಬಾರೋ ಬಾರೋ ಜಗಜ್ಯೋತಿ ಬಸವಣ್ಣನೆ
ಬಾರೋ ಬಾರೋ ಜಗಜ್ಯೋತಿ ಬಸವಣ್ಣನೆ ॥ ಬಾರೋ ॥ ॥ ಪ ॥

ನಂದಿ ಅವತಾರ ತಾಳಿ ಬಂದವನೆ ಬಾ
ಚಂದ್ರಧರನ ವಾಹನಾದವ ನೀ ಬಾ
ಇಂದ್ರನ ಗರ್ವ ಹರಿದವ ನೀ ಬಾ
ನಂದನ ವನವೆಲ್ಲ ಮುರಿದವ ನೀ ಬಾ ॥ ೧ ॥

ಕಲ್ಯಾಣದ ಮಂತ್ರಿ ಆದವ ನೀ ಬಾ
ಅಲ್ಲಮ ಪ್ರಭುನ ಶಿಷ್ಯ ಆದವ ನೀ ಬಾ
ಇಲ್ಲದ ಪವಾಡ ಅಲ್ಲಿ ಮುಗಿಸಿ
ಕಲ್ಯಾಣಕೆ ಕೈಲಾಸ ಮಾಡಿದವ ನೀ ಬಾ ॥ ೨ ॥

ಶರಣ ಸಂಘದಿ ಮೆರೆದವ ನೀ ಬಾ
ಹರಳಯ್ಯಗ ವರವ ಕೊಟ್ಟವ ನೀ ಬಾ
ಮರಣ ರಹಿತನಾಗಿ ಶರಣರ ಸೇವದಿ
ಕರುಣಾಮೃತ ರಸ ನೀಡಿದವ ನೀ ಬಾ ॥ ೩ ॥

ವೀರಶೈವ ಮತ ಉದ್ಧಾರಕ ನೀ ಬಾ
ಹಾರರ ಮತ ದಿಕ್ಕರಿಸಿದವ ನೀ ಬಾ
ಮಾರಯ್ಯನ ಭಕ್ತಿಗಿ ವಲಿದವ ನೀ ಬಾ
ಧೀರನಾಗಿ ಜಗ ಬೆಳಗುತ ನೀ ಬಾ ॥ ೪ ॥

ಕಾಮಕ್ರೋಧಗಳು ಅಳಿದವ ನೀ ಬಾ
ನೇಮ ನಿತ್ಯ ಕಾಲಗಳಿದವ ನೀ ಬಾ
ಸೋಮಧರನ ನಾಮ ಪಡಿದವ ನೀ ಬಾ
ಕಮಲಾನಗರಕ ಎತ್ತಿಕೊಂಡವ ನೀ ಬಾ ॥ ೫ ॥

– ಶಿವರುದ್ರಪ್ಪ ಬಿರಾದಾರ

***

೨೨

ಶ್ರೀ ಗುರು ಬಸವ ನಿಮ್ಮ ಭಜನಿಗಿ ಬಾ ಬಾ
ಹರಿದು ಹೋಗದ ಕರ್ಮ ತಾನಾಗಿ ಬಾ ಬಾ

ಬಸವನಾಮ ಶ್ರೀ ಅಕ್ಷರ ಬ್ರಹ್ಮ ವಿಷ್ಣು ರುದ್ರ
ರಸವು ಪ್ರೇಮ ಅಮೃತ ಸಾರ ಕರುಣದೊಳು ಬಿದ್ರ

ಹರಿಹರ ಮೊದಲಿನ ಬಸವ ನೀನೇ ತಿಳಿದು ಬಾ ಬಾ
ಹರಿದು ಹೋಗದ ಕರ್ಮ ತಾನಾಗಿ ಬಾ ಬಾ

ಮೋಳಗಿ ಮಾರಾಯ್ಯ ಯಾವ ಬರಕ್ಯಾರೋ
ದೇವರ್ಥಂಗಾದಾರೋ ನೂಲ್ಕಿ ಚಂದಯ್ಯನವರು

ಧರಿ ಏರಿ ಅಕ್ಕನಾಗಮ್ಮನ ಗವಿ ಕಾಣನು ಬಾ ಬಾ
ಹರಿದು ಹೋಗದ ಕರ್ಮ ತಾನಾಗಿ ಬಾ ಬಾ

ಸಕಲ ಮತ ತಾನೇ ತಿಳಿದು ಸಂಶಯ ಕಳಿಯನು ಬಾ
ಅಕಲವಂತರ ದರುಶನಕ ಹೋಗಿ ವಚನ ಶ್ರವಣ ಮಾಡಣು ಬಾ

ಮರಿಯದೆ ಮರೀದೇವರ ಗವಿ ಸಿದ್ಧಭಜನಿಗಿ ಬಾ
ಹರಿದು ಹೋಗದ ಕರ್ಮ ತಾನಾಗಿ ಬಾ ಬಾ

– ಬಾಬು ಅಗಸೂರ

***

೨೩

ಇಂಗಳೇಶ್ವರದಲ್ಲಿ ಬಸವೇಶ್ವರ ಜನಸಿದ
ಸಂಗಮಕ ಹೋಗಿ ಮುನಿಗಳನ ಕಂಡಾನು
ಹಾಗೆ ನಡಿದುಕೊಂಡು ಕಲ್ಯಾಣಕೆ ಹೋದನು
ಕಲ್ಯಾಣಕೆ ಹೋಗಿ ಮಂತ್ರಿ ಪದವಿ ಪಡೆದನು ॥ ೧ ॥

ಕಲ್ಯಾಣದಲ್ಲಿ ಶರಣರ ಸಂಘ ಕಟ್ಯಾರ
ಎಲ್ಲರು ಒಂದೇ ಇರುವ ಗುಟ್ಟ ತಿಳಿಸ್ಯಾರ
ಕಲ್ಯಾಣದಲ್ಲಿ ಕ್ರಾಂತಿ ಮಾಡ್ಯಾರ
ಕ್ರಾಂತಿಮಾಡಿ ಬಸವಣ್ಣನವರು ಶಾಂತಿ ಕಾಪಾಡ್ಯಾರ ॥ ೨ ॥

ಕಲ್ಯಾಣದಲ್ಲಿ ಬಿಜ್ಜಳ ಅರಸನ ತಾಮ್ರ ಲಿಪಿಯ ಓದ್ಯಾರ
ಸಜ್ಜಾಗಿ ಸೈನ್ಯ ಕರಿಸಿ ನೆಲ ಅಗೆದ್ಯಾರ
ವಜ್ರದ ಒಡವಿ ಮುತ್ತುರತ್ನ ಹವಳ ತೆಗೆದು ತೋರ್‍ಯಾರ
ಮುತ್ತು ರತ್ನ ಹವಳ ಸಂಪತ್ತು ॥ ೩ ॥

ಕಲ್ಯಾಣದಲ್ಲಿ ಅನುಭವ ಮಂಟಪ ಅವರು ತೋರ್‍ಯರ
ಜ್ಞಾನದ ವಿಷಯ ಚರ್ಚೆ ಅವರು ಮಾಡ್ಯಾರ
ಅಪ್ಪಣ್ಣ ಕೇತಯ್ಯ ಅಲ್ಲಮ ಅಕ್ಕಮ್ಮರು ಹರಳಯ್ಯ
ಮಾಚಯ್ಯ ಡೋಹರ ಕಕ್ಕಯ್ಯ ॥ ೪ ॥

ದಿನದಿನಕ ಶರಣಮ್ಯಾಳ ಹೆಚ್ಚಾದ
ಹೊನ್ನಬಸವನ ಕೀರ್ತಿ ಜಗದೊಳು ಬೆಳಗೇದ
ಕೊಂಡಿ ಮಿಂಚಣ್ಣ ಬಿಜ್ಜಳಗ ಹೇಳ್ಯಾನ
ಬಸವಣ್ಣನ ದಾರಿ ಬಿಟ್ಟು ಕುಲ ಕೆಡಸತಾನ ॥ ೫ ॥

ಶರಣರ ಮೇಲೆ ಬಿಜ್ಜಳ ಕೋಪ ಮಾಡ್ಯಾನ
ಹರಣ ಮಾಡಂತ ಸೈನ್ಯಕ ಆದೇಶ ಕೊಟ್ಟಾನ
ಶರಣರೆಲ್ಲರು ಕಲ್ಯಾಣ ಬಿಟ್ಟಾರ
ಕಲ್ಯಾಣ ಬಿಟ್ಟಾರವರು ಕಾಡದಾರಿ ತುಳಿದಾರ ॥ ೬ ॥

ಅಲ್ಲಮ ಅಕ್ಕಮ ಕದಳಿ ವನಕ ಹೋಗ್ಯಾರ
ಚೆನ್ನಬಸವ ಬೊಮ್ಮಯ್ಯ ಉಳವಿಗಿ ನಡೆದಾರ
ಬಸವಣ್ಣ ನೀಲಮ್ಮ ಸಂಗಮಕ ಹೋಗ್ಯಾರ
ಸಂಗಮಕ ಹೋಗ್ಯಾರವರು ಐಕ್ಯ ಆಗ್ಯಾರ ॥ ೭ ॥

ಇಂಗಳೇಶ್ವರ ಕೀರ್ತಿ ಜಗದೊಳು ಜಾಹೀರ
ರೇವಣಸಿದ್ಧ ಗುಡದಾಗ ಯೋಗ ಮಾಡ್ಯಾರ
ಕವಿಕಲ್ಲಣ್ಣ ಕವನ ಮಾಡ್ಯಾರ
ಬಸವೇಶ್ವರ ಭಜನಿಯವರು ಹಾಡಿ ಹೇಳುವರು ॥ ೮ ॥

– ಶ್ರೀ ಗಿರಿಮಲ್ಲ ಹದಿಮೂರ

***

೨೪

ಬಸವನ ನಾಮ ವಸುಧೆಯೋಳು ಪ್ರೇಮ
ಸುಶೀಲರ ಮನಕ್ಕಿದು ಸಾರ ಸವಿಗಾರ ಸವಿ ॥ ೧ ॥

ಸದಯ ಹೃದಯದೊಳು ಉದಯದೊಳು ನೆನಿಯುತಲಿ
ಮಧುರಾಮೃತ ಫಲಹಾರ ಸವಿಗಾರ ಸವಿ ॥ ೨ ॥

ಪೃಥ್ವಿ ಜನಕೆ ಬಿಟ್ಟು ಜಾತಕಿ ಅಗಳಿಯ ಪಾಲ
ಸುಹಾಂತೆ ಫಲಕ ನೋಡಿ ಸಾರ ಸವಿಗಾರ ಸವಿ ॥ ೩ ॥

ವರದ ವನಲಿಪುರ ಮರುಳಾ ಸಿದ್ಧೇಶ್ವರಾ
ಕರುಣಾ ಪೇಳಿದ ನೋಡಿ ಸಾರ ಸವಿಗಾರ ಸವಿ ॥ ೪ ॥

– ಶ್ರೀ ಕಾಶಿನಾಥ ನರಸಿಂಗ, ಗೋರ್ಟಾ

***

೨೫

ಬಾರಯ್ಯ ಬಸವಯ್ಯ ಮುಖವ ತೋರಯ್ಯ ।
ಹಗಲು ಇರುಳು ನಿನ್ನ ಧ್ಯಾನ ಮಾಡುವೇನಯ್ಯ ॥ ಪ ॥

ನಾ ನಿನಗಾಗಿ ಕಲ್ಯಾಣಕ ಹೋಗಿ ।
ಕಲ್ಯಾಣ ಕಡಿಮಠ ಸಿಗಲಿಲ್ಲವಯ್ಯ ॥ ೧ ॥

ನಾ ನಿನಗಾಗಿ ಇಂಗಳೇಶ್ವರಕ ಹೋಗಿ
ವಚನ ಶಿಲಾ ಮಂಟಪ ನೋಡಿ ಬಂದೆನಯ್ಯ ॥ ೨ ॥

ನಾ ನಿನಗಾಗಿ ಬಾಗೇವಾಡಿಗಿ ಹೋಗಿ ।
ಬಸವನ ದರುಶನ ಮಾಡಿ ಬಂದೇನಯ್ಯ ॥ ೩ ॥

ನಾ ನಿನಗಾಗಿ ಸಂಗಮಕ ಹೋಗಿ ।
ಸಂಗಮ ನದಿಯಲ್ಲಿ ಮಿಂದು ಬಂದೆನಯ್ಯ ॥ ೪ ॥

– ಶ್ರೀಮತಿ ಸರ್ವಮಂಗಲಾ ಜೋಗೂರ
ಹಾಗೂ ಪಾರ್ವತಿ ಜೆಮಶೆಟ್ಟಿ

***

೨೬

ಭಜನಿದೊಳಗೆ ನಾ ನಿಂತ ಹೇಳತಿನಿ ಕೇಳಿರಿ ಈ ವಚನ
ಭಾಗ್ಯವಾಡಿಯಲಿ ಬ್ರಹ್ಮರ ಮಠದಲ್ಲಿ ಹುಟ್ಯಾರ ಬಸವಣ್ಣ ॥ ಪ ॥

ವೀರಶೈವರ ಮತವ ಬೆಳಸಲಿಕ್ಕೆ ಬಂದರ ಬಸವಣ್ಣ
ಮಾದಲಾಂಬಿಕೆಯ ಹೊಟ್ಟೀಲಿ ಹುಟ್ಟಿ ಜಗದೋಳು ಮೆರದಿದನ ।
ಚಿಕ್ಕ ಹುಡುಗರಾದಾಗ ಚಿಕ್ಕ ವಯಸಿನಾಗ ಚಂಡಾಟ ಆಡತಿದುರಾ
ಉರಳಿ ಚಂಡ್ಹೋಗಿ ಭಾವ್ಯಾಲಿ ಬಿದ್ದರ ಹ್ಯಾಂಗಿರ ಲೆವ್ವ ಚೈನೆ । ॥ ೧ ॥

ಆದರೊಳಗ ಒಬ್ಬ ಹುಡುಗ ದಡಗದುಡಗ ಮಾಡಿ ಭಾವ್ಯಾಲಿ ಹಾರಿದನಾ
ಚಂಡಿನ ಸಲುವಾಗಿ ನೀರ ಕುಡಿದು ಕುಡಿದು ಬಿಟ್ಟಿದನವ ಪ್ರಾಣ ।
ಎಲ್ಲ ಹುಡುಗರು ಕೂಡಿ ಕಮಿಟಿ ಮಾಡ್ಯಾರೋ ಗರೀಭಾನ ಬಸವಣ್ಣ
ತಾಯಿ ತಂದಿ ಬಂದು ಕೇಳಿದರ್ಧೇಳರಿ ನೂಕ್ಯಾನ ಬಸವಣ್ಣ । ॥ ೨ ॥

ತಾಯಿ ತಂದಿ ಬಂದು ಪೊಲೀಸದವರಿಗೆ ಕರಸ್ಯಾರಿ ಆ ಕ್ಷಣಾ
ಪೊಲೀಸದವರು ಬಂದು ಕೈ ಹಿಡಿದು ಕೇಳಿದ್ರ ಖಿನ್ನಾದ ಬಸವಣ್ಣ ।
ಎಲ್ಲ ಹುಡುಗರು ಒಂದೇ ನುಡಿತಾರ ಮಾಡಲಿ ಇನ್ನೇನ
ದಯೆ ನೀನೇ ಸಂಗಮೇಶನಂದು ನಿಂತಾರೋ ಬಸವಣ್ಣ । ॥ ೩ ॥

ಎಲ್ಲ ಹುಡುಗರು ಒಂದೇ ನುಡಿತಾರ ನೀ ಹ್ಯಾಂಗ ಹೇಳಣ್ಣಾ
ಸತ್ತಿದ ಹೆಣ ಎದ್ದು ನಿಂತು ಹೇಳ್ತಾದ ನೀನೂಕಿಲ್ಲ ಬಸವಣ್ಣ ।
ಚಂಡಿನ ಸಲುವಾಗಿ ನೀರ ಕುಡಿದು ಕುಡಿದು ಬಿಟ್ಟಿದ ನಾ ಪ್ರಾಣ
ದಯಾ ಮಾಡೋ ಹಾರಕೂಡ ಚನ್ನಬಸವ ನೀನೇ ನಿಜ ಶರಣ ॥ ೪ ॥

– ಶ್ರೀಮತಿ ಶಕುಂತಲಾ ಕಂಟೆಪ್ಪ ಗೋರ್ಟಾ
– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

೨೭

ಕಲ್ಯಾಣದಣ್ಣ ನೀ ಬಾರೊ ಬಸವಣ್ಣ
ನೀ ಬರದಿರಲು ಜಗಕೆಲ್ಲ ಅಳಿಗಾಲವಣ್ಣ ಬಾ ಬಸವಣ್ಣ ॥ ಪ ॥

ಸತ್ಯ ಸಹಧರ್ಮ ಶೀಲವು ಕ್ಷಯವಾಗಿದೆ
ಮಿಥ್ಯ ಮರೆ ಮೋಸಗಳಿಗೆಲ್ಲ ಜಯವಾಗಿದೆ
ಭಕ್ತಿ ಭಂಡಾರವು, ಮುಕ್ತಿ ಮಂದಿರವು
ನಿತ್ಯ ಜೀವನ ಸಾರವು ಬರಿದಾಗಿದೆ ॥ ೧ ॥

ನೀತಿ ನಿಜತತ್ತ್ವ ನಿಧಿಸಾರ ಹೊಲಸಾಗಿದೆ
ಪ್ರೀತಿ ವಾತ್ಸಲ್ಯ ನಿಧಿಪೂರ ಕಲಕಾಗಿದೆ
ಮರ್ತ್ಯ ಮಸಣಾಗಿದೆ, ಮೃತ್ಯ ಮನೆ ಮಾಡಿದೆ
ಸತ್ಯ ಹುಸಿಯಾಗಿ ಸುಜನರಿಗೆ ಹಗೆಯಾಗಿದೆ ॥ ೨ ॥

ಪುಣ್ಯ ಕಾರ್ಯಕ್ಕೆ ಕೈ ಮುಗಿದು ಬೋಳಾಗಿದೆ
ದೀನ ಮಾನವ ಕುಲಕೋಟಿ ಹಾಳಾಗಿದೆ
ಕರುಣೆ ಕಳೆಗುಂದಿದೆ ಧರೆಯೊಳುಬರಿ ನಿಂತಿದೆ
ಶರಣ ಕುಲಕೋಟಿ ಮಾಯಕ್ಕೆ ಬಲಿಯಾಗಿದೆ ॥ ೩ ॥

– ಶ್ರೀಮತಿ ಸುಮಿತ್ರಾದೇವಿ ಅಂಗಡಿ

***

೨೮

ಕಲ್ಯಾಣದಣ್ಣ ನೀ ಬಾರೋ ಬಸವಣ್ಣ
ನೀ ಬರದಿರಲು ಜಗವೆಲ್ಲ ಅಳಿಗಾಲವಣ್ಣ । ॥ ಪ ॥

ಕಲ್ಯಾಣದಣ್ಣ ನೀ ಬಾರೋ ಬಸವಣ್ಣ
ತನು ಹುಸಿಯಲಿ ಹೊಲಸಾಗಿ ತಾ ಬೆಳದಿದೆ ।
ಧ್ಯಾನ ಧರ್ಮಕ್ಕೆ ದೂರಾಗಿ ನೆಲ ಸೇರಿದೆ
ಧ್ಯಾನ ನಿಂತ್ಹೋಗಿದೆ ಮೌನ ಮರೆತ್ಹೋಗಿದೆ ॥ ೧ ॥

ಭಕ್ತಿ ಜನರಲ್ಲಿ ಬರುಬರುತಾ ಬರಿದಾಗಿದೆ
ಮುಕ್ತಿ ಮಾತೊಂದು ಮನದಲ್ಲಿ ಹರಿದಾಗಿದೆ ।
ಮುಕ್ತಿ ಸಾಕಾಗಿದೆ ನೀತಿ ಬೇಕಾಗಿದೆ
ಶಕ್ತಿ ನಿಂತ್ಹೋಗಿ ಮನದಿಂದು ಮರುಳಾಗಿದೆ ॥ ೨ ॥

ಧರ್ಮ ದಯೆಯಿಂದ ದೂರಾಗಿ ಧರೆಗಿಳಿದಿದೆ
ಕರ್ಮ ಕಟ್ಟಳೆಯು ಕಲಿತನದ ಕಡಿದಾಗಿದೆ ।
ಮರ್ಮ ಮರೆಯಾಗಿದೆ ಕರ್ಮ ಹೆಚ್ಚಾಗಿದೆ
ಧರ್ಮವಂತರಿಗೆ ಬದುಕೆಲ್ಲ ಬರಿದಾಗಿದೆ ॥ ೩ ॥

ಸಿದ್ದಿ ಸಂಸಾರ ಸುಖವೆಲ್ಲ ಸಾಕಾಗಿದೆ
ಬುದ್ಧಿ ಮಮಕಾರ ಸಾಕೆಂದು ಕೈ ಬಿಡುತ್ತಿದೆ ।
ಸಿದ್ಧಿ ಸಾಕಾಗಿದೆ ಬುದ್ಧಿ ಬೇಕಾಗಿದೆ
ಸುದ್ದ ಗುರುಬಸವನ ತವಸಾರ ಮನಸಾಗಿದೆ ॥ ೪ ॥

–ಶ್ರೀಮತಿ ಜಗದೇವಿ ಮುಚಳಂಬ

***

೨೯

ಬಾಗೇವಾಡಿಯಲಿ । ಬ್ರಾಮುಂಡ್ರ ಮನೆಯಲಿ ।
ಹುಟ್ಟಿದ ಬಸವಣ್ಣ। ಜಾತಿ ಬಿಟ್ಟು ನಡಿದಾನ । ಸೃಷ್ಟಿವೊಳಗ ಶರಣ ॥ ಪ ॥

ಜನಿವಾರ ಇಲ್ಲ । ಅವನಿಗೆ ಯೇನು ಕಾರಣ ।
ಯಾರು ಮಾಡಿದರು । ಲಿಂಗ ಧಾರಣ ॥

ಬ್ರಾಹ್ಮರ ಹೆಣ್ಣಿನ । ಕೂಡ ಲಗ್ಗಣ ।
ಹೋಗಿ ಸೇರ್ಯಾನೊ । ಕಲ್ಯಾಣ ಪಟ್ಟಣ ॥ ೧ ॥

ಕಕ್ಕಯ್ಯನ ಮನಿಗಿ । ಹ್ವಾದ ಬಸವಣ್ಣ ।
ಮಿಕ್ಕ ಪ್ರಸಾದ । ಸ್ವೀಕರಿಸ್ಯಾನ ॥
ಅಕ್ಕ ನಾಗಮ್ಮ । ಉಂಡಾಳ ತಾನ ।
ಹುಟ್ಟಿ ಬಂದನ । ಚನ್ನಬಸವಣ್ಣ ॥ ೨ ॥

– ಶ್ರೀಮತಿ ಅನ್ನಪೂರ್ಣ ಬ. ಮಠಪತಿ

***

೩೦

ಶಿವರಾಯನ ಮನೆಯಲ್ಲಿ ಹುಟ್ಯಾನ ಬಸವ
ಅಣ್ಣ ಬಸವಣ್ಣನ ತಾತ ಇವರು
ಬ್ರಾಮಣರ ಮನೆಯಲ್ಲಿ ಹುಟ್ಯಾರ
ಅಣ್ಣ ಬಸವಣ್ಣ ಶಿವಶಿವ ॥ ೧ ॥

ಮಾದಲಾಂಬಿಕೆ ತಾಯಿ ತಂದಿ ಮಾದರಸ
ಇವರ ಹೊಟ್ಟಿಲಿ ಜನಸಿ ಬಂದಾರ
ಇಂಗಳೇಶ್ವರದಲ್ಲಿ ಹುಟ್ಯಾರ
ಅಣ್ಣ ಬಸವಣ್ಣ ಶಿವಶಿವ ॥ ೨ ॥

ಹುಟ್ಟಿದ ಎಂಟು ದಿವಸಕ ಕಣ್ಣು
ತೆರಿಲಿಲ್ಲ ಸುಮ್ಮನೆ ಮಲಿಗ್ಯಾರ ಅಣ್ಣ
ಬಸವಣ್ಣ ಕೂಡಲ ಸಂಗಮನಾಥ ಬಂದು
ಬಸ್ಮ ಧರಿಸ್ಯಾರ ಶಿವಶಿವ ॥ ೩ ॥

ಕೂಡಲ ಸಂಗಮನಾಥ ಬಂದು
ಬಸ್ಮಧರಿಸಿ ಲಿಂಗಧಾರಣಿ ಮಾಡ್ಯಾರ
ಬಸವ ಬಸವ ಎನ್ನುತ ಅವರು
ಮಾಯ ಆಗ್ಯಾರ ಶಿವಶಿವ ॥ ೪ ॥

ಹುಟ್ಟಿದ ಎಂಟು ವರುಷಕ
ದನಕಾಯಲಿಕೆ ಹೋಗ್ಯಾರ ಅವರು
ಅಡವಿಗಿ ಅವರು ಅಣ್ಣ ಬಸವಣ್ಣ ಮದ್ಯಾಹ್ನ
ಬಿಸಲಿಗೆ ಬಾವಿ ನೀರಿಗಿ ಬಂದಾರ ಶಿವಶಿವ ॥ ೫ ॥

ಹುಡಗಹುಡಗರು ಕೂಡಿ ನೀರಿಗಿ
ಈಸಲಾಕ ಇಳಿದಾರ ಶರಣನೆಂಬ ಹುಡಗನ್ನ
ನುಗಿಸ್ಯಾರ ಅವರು ಎಲ್ಲಾ ಹುಡಗರು
ಕಡಿಯಕ ಬಂದು ಮಾತನಾಡ್ಯಾರ ಶಿವಶಿವ ॥ ೬ ॥

ಎಲ್ಲಾ ಹುಡಗರು ಕೂಡಿ ಮಾತ ನಾಡ್ಯಾರ
ಬಸವನ ಮ್ಯಾಲಹಾಕಿ ಹೋಗುನು ನಡಿರಿ
ಎಂದು ಊರಾಗ ಬಂದು
ಶುದ್ಧಿ ಮಾಡ್ಯಾರ ಶಿವಶಿವ ॥ ೭ ॥

ಹೇಳತಾರ ಅವರು ತಂದಿತಾಯಿ
ಮುಂದ ನಮ್ಮ ಶರಣ ಬಾಯಿಗಿ ಬಿದ್ದಾನು
ಬಸವಣ್ಣ ನುಗಿಸಿ ಬಂದಾನು ತಾಯಿ
ಎಂದು ಹೇಳ್ಯಾರ ಶಿವಶಿವ ॥ ೮ ॥

ಬಾಯಿಗಿ ಬಂದಾಂಗ ಬೈತಾರ ಬಸವಗ
ಏನು ಮಾಡಿಯ ನಮ್ಮ ಶರಣನ್ನ
ಅವನ ಯಾಕ ನುಗಿಸಿ ಬಂದಿದಿ
ಬಸವ ನಮ್ಮ ಶರಣನ್ನ ಶಿವಶಿವ ॥ ೯ ॥

ನಾನು ಹೇಳಿದರ ನಂಬಂಗಿಲ್ಲ
ನೀವು ಹೋಗುನು ನಡಿರಿ ಬಾಯಿ
ದಂಡಿಲಿ ನಿಮ್ಮ ಶರಣನ್ನ ಬಾಯಿಲಿ
ಕೇಳಿರಿ ನುಡಿಯ ಶಿವಶಿವ ॥ ೧೦ ॥

ಮುಂದ ಮುಂದ ಬಸವಣ್ಣ
ಹಿಂದಿಂದ ಊರ ಜನರು ಹೋಗ್ಯಾರು
ಬಾಯಿ ದಂಡಿಲಿ ಕೈಮಾಡಿ ಕೂಗಿ
ಕರೆದಾನ ಅಣ್ಣ ಬಸವಣ್ಣ ಶಿವಶಿವ ॥ ೧೧ ॥

ಮುಣಿಗಿದ ಶರಣ ಎದ್ದು ಮೇಲಕ
ಬಂದು ನೀರಿನ ಮೇಲೆ ನಿಂತ
ಶರಣ ಬಸವಣ್ಣ ನುಗಿಸಿಲ್ಲ ನನ್ನ
ಹಡೆದ ತಂದೆ ತಾಯಿ ಶಿವಶಿವ ॥ ೧೨ ॥

– ಶ್ರೀಮತಿ ಮಲಕಮ್ಮ ಶಿ. ಬೊಮ್ಮನಹಳ್ಳಿ ಹಾಗೂ
ಶ್ರೀಮತಿ ಯಮನಕ್ಕ ಶಿ. ಕಡಗೊಲ

***

ಸತ್ಯ ಮಿಥ್ಯ ನೀವು ನಿತ್ಯ ನಡಿಯರಿ ಭಜನಿಯ ಮಾಡುವರಾ
ಭಕ್ತೀಲಿ ಭಜನಾ ಮಾಡಿ ದೇವರಾದರೋ ಕಲ್ಯಾಣ ಬಸವೇಸೂರ ॥ ಪ ॥

ಬಿಜ್ಜಳಂಗರಸನ ಪ್ರಧಾನಿ ಇದ್ದಾರೋ ಸಂಶಯಿಲ್ಲ ಜರಾ
ಭಾವ ಭಕ್ತಿಲಿಂದೆ ಕೆಲಸ ಮಾಡುತಾರ ಕುಂದ ಇಲ್ಲೋ ಜರಾ
ಕೊಂಡೆಣ್ಣಾ ಮಿಂಚೆಣ್ಣ ನಿಂದ ಮಾಡುತಾರ ಕೆಟ್ಟಾಂವ ಬಸವೇಸೂರ ॥೧॥

ತೊಂಬತ್ತಾರು ಸಾವಿರ ಜಂಗಮರಿಗೆ ನಿತ್ಯ ಭಿನ್ನವು ಮುಗಿಸುವರಾ
ಎಪ್ಪತ್ತಾರುಪುರ ರೈತರು ನಿತ್ಯ ಅಲ್ಲಿ ಊಟ ಮಾಡುವರ
ಚಾಡಿ ಮಾಡಿ ಕೊಂಡೆಣ್ಣ ಮಿಂಚೆಣ್ಣ ಬಿಜ್ಜಳಗ ಹೇಳತಾರ ॥ ೨ ॥

ಬಿಜ್ಜಳ ಜಂಗಮರಿಗೆ ಆಜ್ಞೆ ಮಾಡಿದನೋ ಕರದಾರ ಬಸವೇಸೂರ
ಒಬ್ಬರೇ ಹೋದಾರ ಶಿಕ್ಷೆ ಕೊಡತೀನಿ ಹೋಗಲಿಲ್ಲ ಜಂಗಮರ
ಉಪವಾಸ ಉಳುದಾರೋ ಆ ದಿನ ಬಸವ ಕಾಯಂವ ಶಂಕರ ॥ ೩ ॥

ಮರುದಿನ ಬಸವ ಕೋರಿಶೆಟ್ಟಿಯಾಗಿ ಕಾಶ್ಮೀರಕ ಹೋಗಿದುರ
ರಾಜನ ದರಬಾರದೊಳಗ ಹೋಗಿ ಮುಜೇರಿ ಹೊಡಿತಾರ
ರಾಜ ಕೇಳುತಾನ ಯಾರೋ ತಮ್ಮ ಏನಾದೋ ನಿನ್ನ ಹೆಸರ ॥ ೪ ॥

ಬಸವ ಹೇಳುತಾನ ಕೋರಿಶೆಟ್ಟಿ ನಾವು ಖಾಸ ಕಲ್ಯಾಣದವರ
ನೋಡ್ತೇವ್ರಿ ನಿಮ್ಮೂರ ಮಾಡ್ತೇವ್ರಿ ವ್ಯಾಪಾರ ಹುಕುಮ ಕುಡ್ರಿ ಜರ
ಕೇರಿ ಕೇರಿ ತಿರುಗಿ ಜಂಗಮರಿಗಿ ಚಂಚ್ಯಾಗ ತುಂಬಿದರ ॥ ೫ ॥

ಕಾಶ್ಮೀರ ಅರಸ ಜಂಗಮರಿಗಿ ನಿತ್ಯ ಉಣಿಸದು ಮಕರಾರ
ಮರುದಿನ ಹುಡುಕಿದ್ರ ಒಬ್ಬೂರು ಸಿಗಲಿಲ್ಲ ಚಿಂತಿ ಆಯ್ತೋ ತೋರ
ಪ್ರಧಾನಿ ಹೇಳುತಾನ ಕೋರಿಶೆಟ್ಟಿಯಾಗಿ ಬಂದಾಂವ ಪಾಮರ ॥ ೬ ॥

ಕಾಶ್ಮೀರ ರಾಜ ಸಿಟ್ಟೀಲಿ ಮಿಲ್ಟ್ರೀಗಿ ಹುಕುಮ ಕೊಟ್ಟಿದಾರ
ಕಳ್ಳ ಬಸವಗ ಕಾಲಿಗಿ ಹಗ್ಗ ಕಟ್ಟಿ ಎಳ್ತರೀ ದರರಾರ
ಮಿಲ್ಟ್ರೀ ತೊಕ್ಕೊಂಡು ಕಾಶ್ಮೀರ ರಾಜ ಸ್ವತ ಕಲ್ಯಾಣಕ ಬಂದಿದರ ॥ ೭ ॥

ಬಸವೇಸೂರ ಪ್ರಭುದೇವರ ಹಂತೀಲಿ ಶರಣ ಹೋಗಿದಾರ
ಕಾಶ್ಮೀರ ರಾಜಾಗ ಏನು ಹೇಳಲಿ ಹೇಳಿರಿ ವಿಚಾರ
ಶರಣು ಹೋಗೋ ಅಂದ್ರೋ ಮರಣ ರಹಿತಗ ಕರುಣಾ ಬರಲಿ ಜರ॥೮॥

ಶರಣ ಹೋದ ಮ್ಯಾಲ ಸಿಟ್ಟೇ ಇಳಿಯಿತು ಕೆಟ್ಟು ಹೋಯ್ತು ಪೂರ
ಸೃಷ್ಠಿಯೋಳಗ ಶಿವ ಭಕ್ತನೆನಸಿದ ಬಿಟ್ಟ ರಾಜಕೀ ಪೂರ
ಮೋಳಿಗಿ ಮಾರಾಯ ಹೆಸರು ತಾಳಿಕೆ ಸತಿಪತಿ ಇಬ್ಬಾರ ॥ ೯ ॥

ಮರಣರಹಿತ ಶಿವ ಮೋಳಿಗಿ ಮಾರಾಯ ಇಂದಿಗಿ ದೇವರ
ಬಸವೇಸೂರನ ಪಾದಕ ಹೊಂದಿ ಮುಕ್ತಿಯ ಕಂಡಾರ
ಸಾವಿಜ ಮುಕ್ತಿ ಶರಣೆಂದು ಮುಡಬೇವರು ಹೇಳ್ಯಾರ ಆನಂದಯ್ಯ ಗುರುಪೂರ
॥ ೧೦ ॥

– ಶ್ರೀ ಅಣ್ಣಾರಾವ ಮುಡಬಿ

***

೩೨

ಬಲವಂತನಾರೆಂದು ಹೇಳಲಿ ದೇವಾ
ಬಲವಂತನಾರೆಂದು ಹೇಳಲಿ ದೇವಾ ॥ ಪ ॥

ಎಲು ತೊಗಿಲನೋಳಗ ಹುಟ್ಟಿ
ಮಲ ಮೂತ್ರ ಹಾಲನ ಕುಡಿದು
ಬಲವಂತನಾರೆಂದು ಹೇಳಲಿ ದೇವಾ ॥ ೧ ॥

ಬಲವಂತನೇ ನಮ್ಮ ಬಸವಣ್ಣನೇ ದೇವಾ
ಕುಲವೆಂತನೇ ನಮ್ಮ ಕೂಡಲ ಸಂಗಮ ದೇವಾ
ಬಲವಂತನಾರೆಂದು ಹೇಳಲಿ ದೇವಾ . . . . . . ॥ ೨ ॥

***

೩೩

ಬಸವ ಭೂಮಿ ನಿನ್ನ ಸೇವೆ ಹರುಷದಿಂದ ಮಾಡುವಾ
ಹಸುಳರೆಲ್ಲ ನಿನ್ನ ಚರಣದಲ್ಲಿ ಕೊರಳ ನೀಡುವಾ ॥ ಪ ॥

ಕಳೆದು ಹೋದ ಘನತೆ ಮರಳಿ ಜಗಕೆ ತೋರುವಾ ।
ಹೊಳೆವ ಬಾಲ ಸೂರ್ಯನಂತೆ ಧರೆಯನೆಲ್ಲ ಬೆಳಗುವ ॥ ೧ ॥

ವೀರಶೈವ ಧರ್ಮ ಕ್ರಾಂತಿಗಾಗಿ ದೇಹ ನೀಡುವಾ ।
ವೀರ ತರುಣ ವೃದ್ಧರೆಲ್ಲ ರಣಕೆ ಬೇಗ ಸಾಗುವ ॥ ೨ ॥

ಗುರು ವಿರಕ್ತರೆಲ್ಲ ಭೇದ ಬುದ್ದಿ ತಾಳದೆ ।
ನಿರುತ ನಿನ್ನ ಸೇವೆ ಗೈದು ಶಾಂತಿ ಗೊಳಿಸಬಾರದೇ ॥ ೩ ॥

ವೀರಶೈವ ಬಂಟರೆಲ್ಲ ಶೂರತನವ ತೋರುತ ।
ವೀರ ಮರಣವನ್ನು ತಾವು ಬೇಗನೊಪ್ಪಿಕೊಳ್ಳುತ ॥ ೪ ॥

ಮಾನ ಹೀನನಾಗಿ ಬಾಳುತಿಹೆವು ನಿನ್ನ ನರಿಯದೆ ।
ಜ್ಞಾನ ತೋರಲೀಗ ಚನ್ನಬಸವ ಜನಿಸಬಾರದೆ ॥ ೫ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

೩೪

ಕಾಯಕವೇ ಕೈಲಾಸವೆಂದು ಬಸವ ನುಡಿದನು
ಬಸವ ನುಡಿದು ನಡೆದನು ॥ ಪ ॥

ಬಾಲ ಲೀಲೆ ಸಂಗಮನಾಥನ ಸೇವೆ ಗೈದನು
ದಯವೇ ಧರ್ಮದ ಮೂಲವೆಂದು ಬಸವ ನುಡಿದನು
ಬಸವ ನುಡಿದು ನಡೆದನು ॥ ಅ. ಪ ॥

ಭಾಗ್ಯವಾಡಿಯಲ್ಲಿ ಬಸವ ಜನಿಸಿ ಬಂದನೋ
ಜಾತವೇದ ಮುನಿಗಳಿಂದ ವರವ ಪಡೆದನೋ
ನಂದಿ ಅವತಾರವೆತ್ತಿ ಬಸವ ಭೂಮಿಗಿಳಿದನು
ಬಸವ ಭೂಮಿಗಿ ಬಂದನು ॥ ೧ ॥

ಭಾಗ್ಯ ವಾಡಿಯನ್ನು ಬಿಟ್ಟು ಬಸವ ನಡೆದನೋ
ಕಲ್ಯಾಣದಲ್ಲಿ ಕರುಣಿಕನಾಗಿ ತಾನು ನಿಂತನೋ
ಬಲದೇವ ಮಂತ್ರಿಯ ಮಗಳಗೂಡ ಮದವೆಯಾದನೋ
ಬಸವ ಲಗ್ನನಾದನೋ ॥ ೨ ॥

ಕೈಲಾಸಲಿಂದ ಬಂದ ಲಿಪಿಯ ಬಸವ ಓದಿದ
ಸಿಂಹಾಸನದ ಎದುರಿನಲ್ಲಿ ದ್ರವ್ಯ ತೋರಿದ

ಭಕ್ತಿಯ ಮುಕ್ತಿಯ ಸಾಧನ ವೆಂಬ ತತ್ವ ಬೀರಿದ
ಬಸವ ತತ್ವ ಬೀರಿದ ॥ ೩ ॥

ಅನುಭವ ಮಂಟಪವನ್ನು ಬಸವ ಸ್ಥಾಪಿಸಿದನು
ಅನುಭಾವಿಗಳನ್ನು ನೆರಹಿದ
ಅಷ್ಟಾವರಣದ ಆಚಾರಗಳನ್ನು ತಿಳಿಸಿದನು
ಬಸವ ತಿಳಿಸಿದನು ॥ ೪ ॥

ಸಂಗಮನಾಥನ ಲಿಂಗದಲ್ಲಿ ಲಿಂಗ ಕಂಡನು
ಲಿಂಗಾಂಗದ ವರ್ಣನೆಯನ್ನು ವರ್ಣಿಸಿದನು
ಜಗದೋಳು ಭಕ್ತಿಯ ಜ್ಯೋತಿಯನ್ನು ಮೂಡಿಸಿದನು
ಬಸವ ಮೂಡಿಸಿದನು ॥ ೫ ॥

– ಶ್ರೀ ಮಲ್ಲಿಕಾರ್ಜುನ ಹಡಪದ

***

೩೫

ಸಿರಿ ಗುರು ಬಸವ ನಾಮ ಭಜನಿಗಿ ಬಾ ಬಾ
ಹರಿದು ಹೋಗುವದು ಕರ್ಮ ತಾನಾಗಿ ಬಾಽ ಬಾಽ ॥ ಪ ॥

ಬಸವ ನಾಮ ತ್ರಿ ಅಕ್ಷರ ಬ್ರಹ್ಮ ವಿಷ್ಣು ರುದ್ದರ
ಬಸವ ಪ್ರೇಮ ಅಂಬ್ರತ ಸಾರ ಕರಣದೋಳ ಬಿದ್ದರ
ಹರಿ ಹರ ಮೊದಲಿನ ಬಸವ ನೀನೆ ತಿಳಿದು ಬಾ ಬಾ
ಹರಿದು ಹೋಗುವದು ಕರ್ಮ ತಾನಾಗಿ ಬಾಽಽ ಬಾಽಽ ॥ ೧ ॥

ಮೋಳಿಗೆ ಮಾರಾಯ ಸತ್ಯ ಶರಣರು
ದೇವರ್ದ್ಯಾಂಗೆ ಆದರು ನೂಲಿ ಚಂದಯ್ಯನವರು
ಧರಿಯೊಳು ಅಕ್ಕನಾಗಮ್ಮನ ಗವಿಯ ನೋಡೋಣು ಬಾ
ಹರಿದು ಹೋಗುವುದು ಕರ್ಮ ತಾನಾಗಿ ಬಾಽಽ ಬಾಽಽ ॥ ೨ ॥

ಸಕಲ ಮಾತು ತಾನೇ ತಿಳಿದು ಸಂಶಯ ಕಳೆಯನು ಬಾ
ಅಕಲವಂತರ ದರುಶಣಕ್ಹೋಗಿ ವಚನ ಸೇವೆ ಮಾಡನು ಬಾ
ಮರಿಯಾದ ಮನೆದೇವರನ ಗುರುಸಿದ್ಧ ಭಜನಿಗಿ ಬಾ
ಹರಿದು ಹೋಗುವುದು ಕರ್ಮಾ ತಾನಾಗಿ ಬಾಽಽ ಬಾಽಽ ॥ ೩ ॥

– ಶ್ರೀಮತಿ ರೇಖಾರಾಮಶೆಟ್ಟಿ ಕಾಡಾದಿ
– ಶ್ರೀಮತಿ ಭಾಗೀರಥಿ ಸ್ವಾಮಿ
ಹಾಗೂ ಶ್ರೀಮತಿ ಲಕ್ಷ್ಮಿಬಾಯಿ ಕೌಡೆ,

***

ಭಕ್ತಿಲಿಂದೆ ಬಸವೇಶನ ಸ್ಮರಣೆ ನಿತ್ಯ ಸ್ಮರಿಸಿರಿ
ಭವದ ಭಾದಿಯು ನೀಗರಿ
ಸತ್ಯದ ಕಾರ್ಯಕೆ ಸದಾ ಶಾಂತಿಯೆಂಬ
ಮನವ ನೀಡರಿ ನಿಜ ಮುಕ್ತಿಯ ಬೇಡರಿ ॥ ಪ ॥

ರಾಜ ಬಸವೇಶ್ವರ ದರ್ಬಾರಲಿಂದ ತನ್ನ ಮಂದಿರಕ ನಡದಿದರೀ
ಶರಣನ ಪಾದಕ ಸಾಷ್ಟಾಂಗ ಎಂದು ಬಾಯಿಲಿ ನುಡುದಿದರೀ
ಹರಳಯ್ಯ ತನ್ನ ಮಡದೀಗ ಉಸುರಿದರೀ
ದಂಪತಿ ಚಿಂತೀಯ ಮಾಡದರೀ ॥ ೧ ॥

ಪಾಪಿ ಜನ್ಮಕ–ಇದಕೇನುಪಾಯವೆಂದು ಯೋಚನೆ ನಡೆಸಿದರೀ
ಅಂಗ ಚರ್ಮಲಿಂದ ಅಪ್ಪಗೊಪ್ಪುವಂತ ಪಾದರಕ್ಷಿ ಮಾಡಿದರೀ
ಮಡಿಯ ವಸ್ತದಲಿ ಮುಚ್ಚಿ ಬಸವನ ಎದುರಿಗೀ ಇಟ್ಟದರೀ
ಬಿಚ್ಚಿ ಬಸವ ಕೈಯಲಿ ಹಿಡಿದೀದರಿ ದಂಪತಿ ತಸ್ವೀರ ನೋಡಿದರಿ ॥ ೨ ॥

ಸಾಕ್ಷಾತ ಶಿವ ಪಾರ್ವತಿ ಇವರೆಂದು ತನ್ನ ತೆಲಿ ಮೇಲಿಟ್ಟುಕೊಂಡಿದರಿ
ಶಿವ ಶಿವ ಎಂದು ಸತ್ಯ ಶರಣನ ಸ್ತೋತ್ರ ಮಾಡಿದರಿ
ಕರ್ಮದ ಕೃತಿ ಕರದಿ ಗೈದೆನೆಂದು ಗಾಬರಿಯಾಗಿದರಿ
ಇಸಗೊಂಡು ವಾಪೀಸ ಹೊಂಟಿದರೀ ಮಧುವರಸ ಏನೆಂದು ಕೇಳಿದರಿ॥೩॥

ಖಬರವಿಲ್ಲದೆ ಜಬರದಸ್ತೀಲಿ ಕಾಲಗ ಮೆಟ್ಟೀದರಿ
ಚಟ್ಟನೆ ಚೀರಿ ಅರಸನ ಶರೀರಕ ಅರ್ಭಾಟ ಇಟ್ಟೀತರಿ
ವೈದ್ಯಗಾರ ಭಾರಿಭಾರಿ ಡಾಕ್ಟ–ರರ ಇಲಾಜ ನಿಂತಿತರಿ
ನೀರನೀರೇ ಅಂತಿದರಿ ಲೆಕ್ಕಿಲ್ಲ ಕೊಡಗಳ ನೆರಸಿದರೀ ॥ ೪ ॥

ಪಾಪೀ ಶರೀರಕ ಜಾಂಚಾಗೆದ ವಿಚಾರ ಹ್ಯಾಂಗ ಬಂದಿತರೀ
ಬ್ಯಾಸೊತ್ತು ಸಮಗಾರ ಬಚ್ಚಲ ನೀರನ್ನು ಮೇಲೆ ಸುರದಿದರೀ
ಕೂಡಲೇ ಅರಸ ತಪ್ಪಾಯ್ತೆಂದು ಸಾಷ್ಟಾಂಗ ಹಾಕಿದರೀ
ಲಿಂಗ ಧಾರಣ ಆಗೀದರಿ ಮಗಳ ಕೊಟ್ಟು ಮದುವೆಯ ಮಾಡಿದರೀ॥೫॥

ಬಸವನಿಂದೆ ಭವಲೋಕ ಶ್ರೇಷ್ಟವೆಂದು ಶೃತಿಯ ಸಾರೀತರಿ
ಬಿಡದೆ ಆತನ ನಾಮ ನುಡಿದರೆ ಹೊಂದೊದು ಸದ್ಗತೀರೀ
ದೇಶದೊಳಗೆ ಸಣ್ಣಳ್ಳಿ ಗ್ರಾಮದ ನಾಮ ಕರಹರಿ
ನೀತಿ ಮಾರ್ಗ ಹಿಡಿದು ನಡೀರಿ ಸರ್ವರಿಗೆ ಅದ ನಮ್ಮ ವಿನಂತೀರಿ ॥ ೬ ॥

– ಶ್ರೀ ಶರಣಪ್ಪ ಕರಹರಿ

***

ಬಸವಲಿಂಗವೆಂಬೈದಕ್ಷರಗಳು ರಸನೆ ಯೊಳಿರಬೇಕು
ಶಶಿಕಾಂತದೊಳಿಹ ರಸದ ಪರಿಯೋಳೀ ವಸುಧೆಯೊಳಿರಬೇಕು ॥ ಪ ॥

ಅರುಹಿನ ಕುರುಹಿಡಿದವನೀ ತಲಕವತರಿಸಿದ ಗಣಪಾಲ
ವರಗುರುಲಿಂಗ ಸುಜಂಗಮ ಸೌಖ್ಯಾಕರ ಪಾವನ ಶೀಲ
ಪರಮ ಷಡಕ್ಷರ ಪಂಚಾಕ್ಷರೆಂವೆರಡರಾದಿ ಮೂಲ
ಶರಣ ಕರಮನಭಾವದಿಂದಲುಪಚರಿಸಿಕೊಂಬ ಲೋಲ ॥ ೧ ॥

ವೇದ ಶಾಸ್ತ್ರ ಪುರಾಣ ನಿಗಮದಧಿ ಮಥನ ನವನೀತ
ಸಾದೇಹದೊಳಿಹ ನಾದಬಿಂದು ಕಳೆಗಳಿಗತ್ತಲತ್ತತೀತ
ಮೂದೇವರ ಮುತ್ತಯ್ಯನ ಪೊತ್ತು ಸಲಹಿದೆನ್ನುದಾತ
ಭೇದಿಸಲಗಣಿತ ಬ್ರಹ್ಮಾಂಡಗಳ ಧರಿಸುವ ಪ್ರಖ್ಯಾತ ॥ ೨ ॥

ಭಕ್ತಿಯನೊಲ್ಲದ ನಿರುಪಾಧಿಕ ಸದ್ಭಕ್ತರಂತರಂಗ
ಮುಕ್ತಿಯ ಸೀಮೆಯ ಮೆಟ್ಟಿದವರ ಬಹಿರಂಗದಿಷ್ಟಲಿಂಗ
ಯುಕ್ತಿಯಿಂದ ಸದ್ಭಕ್ತಿಯ ಮಾಡುವರಂಗಲಿಂಗ ಸಂಗ
ಶಕ್ತಿ ಸಮೇತ ವಿರಕ್ತಿಯ ಮಾಡುವ ದೇಶಿಕರುತ್ತುಂಗ ॥ ೩ ॥

ಕಲಿಯುಗದೊಳು ಕಲ್ಯಾಣ ಪುರವರಾಧೀಶ್ವರ ಪ್ರಧಾನಿ
ಹಲಬರ ಮಧ್ಯದಿ ಬಿದ್ದ ಲಿಖಿತವ ತೆಗೆದೋದಿದ ಸನ್ಮಾನಿ
ಕುಲಛಲ ಮೊದಲಾದಷ್ಟಮದಗಳ ಸೀಗಿದ ಸುಯ್ಜ್ಞಾನಿ
ನೆಲಜಲಾಗ್ನಿ ಮರುತಂಬರಾತ್ಮ ಷಡುತತ್ತ್ವದ ಸುಜ್ಞಾನಿ ॥ ೪ ॥

ಭಿನ್ನ ಭಕ್ತಿಯೆನಗನ್ಯವೆಂಬ ಸದ್ಭಕ್ತ ದೇಹಿಕ ದೇಹಿ
ತನ್ನ ಭಜಿಸಿ ಬಳಿಕನ್ಯವನರಿಯದ ಸಜ್ಜನ ಜನ ಮೋಹಿ
ಚಿನ್ನ ಬಣ್ಣದಂತೆರಡರಿಯದ ಶಿವಶರಣರಲ್ಲಿ ಸ್ನೇಹಿ
ಚೆನ್ನವೀರ ಮಹೇಶ ನಿರಂಜನ ಜಂಗಮ ದಾಸೋಹಿ ॥ ೫ ॥

– ಶ್ರೀಮತಿ ಸುಮಿತ್ರಾದೇವಿ ಅಂಗಡಿ

***

ಭಾಗ್ಯವಾಡಿಯಲ್ಲಿ ಜನಿಸಿ ಬಂದಿದ ಭಕ್ತಿಯ ಬಸವಣ್ಣ
ಶಂಕರನೊಲುಮೆ ಶಿವ ಮತ ಉದ್ಧಾರ ಮಾಡುತ್ತೇ ಹೊಂಟಿದನ ॥ ಪ ॥

ಸೃಷ್ಟಿಯೊಳಗೆ ಮಹಾ ಶ್ರೇಷ್ಟವೆನಸಿತೋ ಕಲ್ಯಾಣೆಂಬೋ ಗ್ರಾಮ
ಅಷ್ಟಗಳಂಗಳು ಶ್ರೇಷ್ಟವಾದವೋ ಪೂಜದಲ್ಲಿ ನೇಮ
ಕುಲಕ್ಕೊಬ್ಬ ಶರಣರು ಎಂದು ಕರದಿರೋ ಭಕ್ತಿಯ ಬಸವಣ್ಣ
ಶಂಕರನೊಲುಮೆ ಶಿವ ಮತ ಉದ್ಧಾರ ಮಾಡುತ್ತೇ ಹೊಂಟಿದನ ॥ ೧ ॥

ಸಮಗಾರ ಹರಳಯ್ಯ ನೂಲಿಯ ಚಂದಯ್ಯ ಬುಡ್ಡರ ಕೇತಯ್ಯ
ಮೋಳಿಗೆ ಮಾರಯ್ಯ ಮುಕ್ತನಾದರೋ ನೆನಸುತೆ ಬಸವಯ್ಯ
ಕೊಂಡೆಣ್ಣ ಮಂಚೆಣ್ಣ ಕಾಡುತ ಇರ್ತಿರೋ ನಿತ್ಯ ಬಸವಣ್ಣ
ಶಂಕರನೊಲುಮೆ ಶಿವ ಮತ ಉದ್ಧಾರ ಮಾಡುತೇ ಹೊಂಟಿದನ ॥ ೨ ॥

ತೊಂಬತ್ತಾರು ಸಾವಿರ ಜಂಗಮರು ಊಟಕ್ಕೆ ನಿತ್ಯ ನೇಮ
ಬಿಜ್ಜಳ ಅರಸ ಜಂಗಮರಿಗೆ ಬ್ಯಾಡಂತ ಹೇಳಿದನ
ಹಡತಿಯ ಹಂಪಯ್ಯ ಹಡತಿ ಒಳಗ ಒಂದು ಜಂಗಮಗ ತಂದೀದನ
ಶಂಕರನೊಲುಮೆ ಶಿವ ಮತ ಉದ್ಧಾರ ಮಾಡುತೇ ಹೊಂಟಿದನ ॥ ೩ ॥

ಪ್ರಭುದೇವರು ಕಲ್ಯಾಣಪುರಕ ಬಂದಾರೋ ಒಂದಿನ
ಬಸವನ ಭಕ್ತಿ ಒಲ್ತಿದ ನೋಡಿ ಆನಂದಾಯಿತೋ ಮನ
ದ್ವಿತೀಯ ಶಂಬುಲಿಂಗ ಬಸವನ ನಾಮ ಭಜಿಸಿ ಬಿಟ್ಟಾರೋ ತಾನ
ಶಂಕರ ನೊಲುಮೆ ಶಿವ ಮತ ಉದ್ಧಾರ ಮಾಡುತೇ ಹೊಂಟಿದನ ॥ ೪ ॥

ಸೃಷ್ಟಿಯೊಳಗೆ ಮಹಾ ಶ್ರೇಷ್ಟವೆನಸಿತೋ ಮುಡಬಿ ಎಂಬೋ ಗ್ರಾಮ
ಹಿರಿಮಠದ ವಿಷಯ ಘೋಷಿಸಿ ನಮ್ಮನ್ನು ತಿಳಿಸುತಾರೋ ಬಿನ್ನ
ಆನಂದಯ್ಯ ಸ್ವಾಮಿ ಅಂತಃಕರುಣಾಲಿಂದೆ ಆತ್ಮವು ತೋರಿದನ
ಶಂಕರ ನೊಲುಮೆ ಶಿವಮತ ಉದ್ಧಾರ ಮಾಡುತೆ ಹೊಂಟಿದನ ॥ ೫ ॥

– ಅಣ್ಣಾರಾಯ ಮುಡಬಿ

***

೩೯

ಬಾ ಬಸವಯ್ಯ ಭಾಗ್ಯದ ದೇವ
ನಿನ್ನ ಧ್ಯಾನವು ಮರೆಲಾರೇನು । ಭಾಗ್ಯದ ಬಸವಯ್ಯ ॥ ಪ ॥

ಮಾದಲಾಂಬಿಕೆ ಮಧುವರಸ ತಾಯಿ ತಂದಿನ
ಭಾಗ್ಯದ ಮಗ ಹುಟ್ಟಿ ಬಂದೆಪ್ಪ ನೀನ
ವೀರಶೈವ ಮತ ಮಾಡಿ ಸ್ಥಾಪನ
ಆಚಾರ ವಿಚಾರದು ಹಿಡಿದೆಪ್ಪ ಖೂನಾ
ಶಿವ ಶಿವ ಧ್ಯಾನ ಮಾಡಪ್ಪ ನೀನ
ನಿನ್ನ ಧ್ಯಾನವು ಮರೆಲಾರೇನು । ಭಾಗ್ಯದ ಬಸವಯ್ಯ ॥ ೧ ॥

ಖರೇ ಕಲ್ಯಾಣಕ ಬಂದೆಪ್ಪ ನೀನ
ಬಿಜ್ಜಳಂಗ ಅರಸಂಗಾದಿ ಪ್ರಧಾನ
ಧರ್ಮ ಮಾರ್ಗದಲ್ಲಿ ನೀ ಪರಿಪೂರ್ಣ
ಜಾತಕ ಪಾತಕ ಹಿಡಿದೆಪ್ಪ ಖೂನಾ
ಶಿವ ಶಿವ ಧ್ಯಾನ ಮಾಡಪ್ಪ ನೀನ
ನಿನ್ನ ಧ್ಯಾನವು ಮರೆಲಾರೇನು । ಭಾಗ್ಯದ ಬಸವಯ್ಯ ॥ ೨ ॥

ಕುಲಕ್ಕೊಬ್ಬ ಶರಣರು ಮಾಡಿ ಸ್ಥಾಪನ
ಮುಸಲರಿಗೆ ಮುಚ್ಚಿ ಪಾವಡ ಕೊಟ್ಟಿದಿ ಖೂನ
ತೊಂಬತ್ತಾರುಸಾವಿರ ಜಂಗಮ ಜನ
ಎಪ್ಪತ್ತಾರು ಮಂದಿ ಪುರೋಹಿತರ ಖೂನ
ಶಿವ ಶಿವ ಧ್ಯಾನ ಮಾಡಪ್ಪ ನೀನ
ನಿನ್ನ ಧ್ಯಾನವು ಮರಿಲಾರೇನು । ಭಾಗ್ಯದ ಬಸವಯ್ಯ ॥ ೩ ॥

ಎಂಟನೂರ ವರುಷ ಹೆಚ್ಚ ಹೋದಾವ್ರಿ ದಿನ
ನನ್ನ ಎದುರಿಗೆ ಇದ್ದಾಂಗ ಇದ್ರಿ ಬಸವಣ್ಣ
ಸರ್ವಕುಲ ನೀವು ಮಾಡಿ ಸ್ಥಾಪನ
ಆನಂದಯ್ಯ ಗುರುವಿಂದು ಹಿಡದೇವ್ರಿ ಚರಣ
ಸತ್ಯ ಶಿವ ಧ್ಯಾನ ಮಾಡಪ್ಪ ನೀನ
ನಿನ್ನ ಧ್ಯಾನವು ಮರಿಲಾರೇನು । ಭಾಗ್ಯದ ಬಸವಯ್ಯ ॥ ೪ ॥

– ಶ್ರೀ ಅಣ್ಣಾರಾವ ಮುಡಬಿ

***

ಸೃಷ್ಟಿಯೊಳು ಮಹಾ ಶ್ರೇಷ್ಠವೇನಸಿತರಿ ಕಲ್ಯಾಣ ನಗರ
ಅಲ್ಲಿ ಬಸವಣ್ಣನವರ ಭಾವಿಕ ಭಕ್ತಿ ಪರೀಕ್ಷಕ್ಕಾಗಿ ಬಂದಿದ ಶಂಕರ ॥ ಪ ॥

ನಿಷ್ಠೆಯಲಿಂದ ನಿತ್ಯ ಕಾಲ ಸಹಸ್ರ ಜಂಗಮರಾ
ಬೇಕಾದ ಬೇಡಿದ ಇಚ್ಛಾ ಭೋಜನ ತೃಪ್ತಿಯ ಪಡಿಸುವರಾ
ಖಾಸ ಈಶ್ವರ ಮಲೀನ ರೂಪದ ವೇಷ ತಾಳೀದರಾ
ಬಾಗಿಲದೋಳು ನಿಂತಿದರಾ ಬಸವನೆಂದು ಕೂಗಿದರಾ ॥ ೧ ॥

ದ್ವಾರ ಪಾಲೀಕರು ಲಿಂಗಿಲ್ದ ಭವಿಯೆಂದು ಹೊರಗೆ ದೂಡಿದರಾ
ಇದೇ ಝೋಲಿ ಬಸವಗೆ ತಾಕಲೆಂದು ಬಾಯಿಲಿ ನುಡಿದಿದರಾ
ಓಡಿ ಹೋಗಿ ಸತ್ಯ ಶರಣ ಹರಳಯ್ಯನ ಮನೆಯ ಸೇರಿದರಾ
ತೊಗಲಿನೋಳು ಅಡಗಿದರಾ ಚರಣ ಹೊರಗ ಚ್ಯಾಚಿದರಾ ॥ ೨ ॥

ಗಾಬರ್‍ಯಾಗಿ ಬಸವಣ್ಣ ಅಂತನ ಇಲ್ಲೀಗ ಯಾರ ಬಂದಿದರಾ
ಕೇಳಿ ಹುಡುಕುತ ಸಮಗಾರ ಹರಳಯ್ಯನ ಮನೀಗ ಹೋಗಿದರಾ
ತೊಗಲಿನೊಳಗಿನ ಮರಣ ರಹಿತನಿಗೆ ಖೂನ ಹಿಡದಿದರಾ
ಶರೀರ ಹೊರಗ ತೆಗದಿದರಾ ವಸ್ತ್ರದಲಿ ಗಂಟ ಕಟ್ಟಿದರಾ ॥ ೩ ॥

ತೆಲಿಯ ಮ್ಯಾಲೆ ಪರಶಿವನಿಗೆ ಹೊತ್ತಿಕೊಂಡು ಮನೀಗ ಹೊರಟಿದರಾ
ದುಷ್ಟ ಜೈನರು ರಕ್ತ ನೋಡಿ ಹಾಸ್ಯ ಮಾಡಿ ನಗತಿದರಾ
ದುಖಾಂಡ ಶರೀರ ಅಖಂಡ ಆಗಲೆಂದು ಪಾದೋದಕ ಹಾಕಿದರಾ
ಪ್ರತ್ಯಕ್ಷ ರೂಪ ಹೊಂದಿದರಾ ಭಕ್ತನ ಭಾವಕ ಒಲತಿದರಾ ॥ ೪ ॥

ದೇಶದೊಳಗೆ ಸಣ್ಣಳ್ಳಿ ಎನಿಸಿತರಿ ಕರ್‍ಲೀಗಿ ಊರ
ಭಕ್ತಿಮಾಡಿ ನಿಜ ಮುಕ್ತಿ ಬೇಡಿರೆಂದು ಹೇಳಿದ ಕವಿಗಾರ
ನಾಮಸ್ಮರಣೆ ಮಾಡವರೀಗೆ ಅದ ನಮದು ನಮಸ್ಕಾರ
ನರಜನ್ಮ ಉದ್ಧಾರ ಭಾವಿಕ ಭಕ್ತಿ ಪರೀಕ್ಷೆಗಾಗಿ ಬಂದಿದ ಶಂಕರ ॥ ೫ ॥

– ರಚನೆ : ಶರಣಪ್ಪ ಕರಹರಿ
–ಶ್ರೀಮತಿ ವಿಮಲಬಾಯಿ ಕಾಶಪ್ಪ
– ಪ್ರಭು ಮೈಲಾರ, ಶರಣಪ್ಪ ಗುರುಲಿಂಗಪ್ಪ.

***

ನಂಬಿಕರದಿವೊ ನಿನ್ನಾ ನಂಬದಿವೊ ನೀನಾ ।
ಸೆಂಬು ಬಸವರಾಜ್ಯ ಬಂದ ಎನಗ ಮುಖ ತೋರೊ ॥ ಪ ॥

ಬಸವರಾಜು ಹುಟ್ಟಿನ ಊರಾ ಬಾಗೇವಾಡಿ ಎಂಬ ಶಾರ ।
ವೀರಶೈವ ಧರ್ಮದವರ । ಭೇದ ಭಾವ ಬಲ್ಲಂತವರಾ ॥ ೧ ॥

ಮಾದರಸ ಬಸವನ ತಂದಿ । ಮಾದಲಾಂಬಿಕೆ ಹೊಟ್ಟಿಲೆ ಬಂದಿ ।
ಪತಿವೃತಾ ತಾಯಿ ತಂದಿ । ಮಾನವನಾಗಿ ಮರ್ತ್ಯಕ ಬಂದಿ ॥ ೨ ॥

ಚಂದ್ರ ಸೂರ್ಯರೊಳದಂಗ ರೂಪ ।
ಚಂದ್ರ ದೀಪ ಹಚ್ಚಿದಂಗ ದೀಪ ।
ಕಿರೀಟ ಕುಂಡಲ ಬರಳಗಿವಪ್ಪಾ ।
ಜಗ ಉದ್ಧಾರ ಮಾಡಿದ ಭೂಪ ॥ ೩ ॥

ಬಾಗೇವಾಡಿ ಊರ ಬಿಟ್ಟು ಕಲ್ಯಾಣಕ ಮಾಡಿದ ಮೆಟ್ಟಾ ।
ಅರವತ್ತ ಮೂರ ಮಂದಿ ಶರಣರ ಮಧ್ಯ ।
ನಿತ್ಯ ಮಾಡಿಸಿದ ಚೆನ್ನಾದ ಊಟಾ ॥ ೪ ॥

ಬಿಜ್ಜಳ ಇದ್ದ ಅರಸ । ಅವನ ಕೈಯಲ್ಲಿ ಮಂತ್ರಿಕೆಲಸ ।
ಮಾಡಿದನು ಹನ್ನೊಂದು ವರುಷ । ಆನಂದ ಆದತಾನೆ ಹರುಷಾ ॥ ೫ ॥

ನಾಳಿ ಬರದು ಇಂದ ಬರಲಿ । ಇಂದ ಬರದು ಈಗ ಬರಲೀ ।
ನಿಷ್ಠೆ ಒಂದು ನಿಜವಾಗಿರಲಿ । ದಾನ ಧರ್ಮ ಒಂದಿರಲಿ ॥ ೬ ॥

ಬಾಳಿಗೇರಿ ಊರ ಬಿಲ್ವದ ವನಾ । ಭಾಗ್ಯ ಕೊಟ್ಟು ನಡುಸವ ನೀನಾ ।
ಸಾತಯ್ಯ ಸ್ವಾಮಿ ಹೇಳಿದ ಇದನಾ । ತಿಳದು ಮಾಡ್ರಿ ಧ್ಯಾನ ॥ ೭ ॥

– ಶ್ರೀ ಸಾತಯ್ಯ ಸ್ವಾಮಿ

***

ಭಾಗ್ಯವಾಡಿಯಲ್ಲಿ ಬಸವಣ್ಣ ಜನಿಸಿದ ಮಧುವರಸನ ಕಂದ
ಮಾದಲಾಂಬಿಕೆಯ ಉದರದಿ ಉದಯಿಸಿ ಮಲಿಹಾಲ ಮೆರಸಿದ
ಬಸವಣ್ಣ ಮಲಿಹಾಲ ಮೆರಸಿದ ॥ ಪ ॥

ಜಾತವೇದ ಮುನಿ ಸೂತಕ ರಹಿತದಿ ಆ ದಿವಸ ಆಗಮಿಸಿದ
ನೀತಿಲೆ ಲಿಂಗ ಕಟ್ಟಿ ಮಾತಿಲಿ ಹೇಳಿದ ನಿತ್ಯ ಪೂಜೆ ಮಾಡಂದಿದ
ನಿನ್ನ ಕಂದನ ಕಂಟಕ ಕಡಿದು ಹೋಗತದ ಖರೆ ನುಡಿ ಅಂದಿದ ॥ ೧ ॥

ಸಪ್ತ ವರುಷ ಸರಿ ಹೋದವೋ ಬಸವಾ ಸಾಲೀಗಿ ಹೋಗಿದ
ಗುಪ್ತಲಿಂದ ತನ್ನ ತಾಯಿಗೆ ಕೇಳಿದ ಗಡಬಡ ಏನಾದ ।
ಮೋರ್ತ ಮುಂದ ನಿನ್ನ ಮುಂಜಿ ಬಂಧನದ ಅನಾಜ ನಡದಾದ
ಅಮರ ಭಟ್ಟರು ಕೂಡಿ ಅಧಿಕ ಪ್ರಸಂಗ ನುಡಿವದು ನಾಳಾದ। ॥ ೨ ॥

ಕೇಳಿ ಬಸವ ಸಂತಾಪ ತಾಳಿದನು ತನ್ನ ತಾಯಿಗಿ ಹೇಳಿದ
ನಂದಿ ನೇಮಕ್ಕಾಗಿ ಹೊಂದಿ ಬದುಕುವೇನು ಬ್ರಾಹ್ಮಣ ಆಗಲಂದಾ
ಭಾಗ್ಯವಾಡಿ ಬಿಟ್ಟು ಬಸವಣ್ಣ ನಡದಾನೋ ಕಲ್ಯಾಣ ಹಾದಿ ಹಿಡಿದ ॥೩ ॥

ಹಾದಿಯಲ್ಲಿ ಹರಿದು ಹೋಗುವ ಹಾವಿಗಿ ಅಕ್ಕಂತೆ ಕರೆದಿದ್ದ
ಅಕ್ಕ ತಮ್ಮ ಇವರೀರ್ವರು ಕೂಡಿ ಹೋಗ್ಯಾರೋ ಕಲ್ಯಾಣಕ
ಅಕ್ಕರದಿಂದೆ ಬರೆದ ಶಿಲಾಲಿಪಿ ಓದಿದ ಬೇಶಾಕ
ಚಿಕ್ಕ ಮಗನ ಕಂಡು ತಕ್ಕ ಮನ್ನಣೆ ಮಾಡಿ ಕರದಾರ ಒಳಿಯಾಕ
ಲೆಕ್ಕವಿಲ್ಲದಷ್ಟು ರೊಕ್ಕ ಏರುವದು ಕುಡು ಬಟ್ಟಲುಳ್ಳಾಕ ॥ ೪ ॥

ಪರುಷ ಬಟ್ಟಲು ತಾ ಹರುಷದಿ ಪಡೆದನು ಶರಣರ ಸಾಕದಕ
ಲಕ್ಷ ತೊಂಬತ್ತಾರು ಶರಣರ ಪಡೆದನು ಅಕ್ಷಯ ಎನ್ನುವದಕ
ದೇಶಕಧಿಕ ಸಿರಗಾಪುರ ವೀಶನ ವಾಸದ ಬಲುರೀಕ
ಖಾಸ ಮಗನ ಕವಿ ತ್ರಾಸ ಬರಿಯದು ಕಂಡು ಸಾಕಾಯಿತು ಮನಕ ॥೫॥

– ಶ್ರೀ ಕಾಶಿನಾಥ ನರಸಿಂಹ ಗೋರ್ಟಾ

***

೪೩

ಅಣ್ಣಾ ಜಗವೆಲ್ಲಾ ನಲಿದಾಡಿತೋ ನಿಮ್ಮ ಅಮರ ಕೃತಿಗೆ
ಜಗವೇ ಕುಣಿದಾಡಿತೋ ಜಗವೆಲ್ಲಾ ನಲಿದಾಡಿತೋ ॥ ಪ ॥

ವಚನ ಜ್ಞಾನ ಜ್ಯೋತಿಯಲ್ಲಿ ಶಿವನ ರೂಪ ಕಂಡಿತು
ವಚನದ ಸವಿ ಉಣಿಸಿದ ಕವಿ ವಚನ ತಾನೆಂದಿತು
ಗುರುವೆ ನಿಮ್ಮ ನೆನಿಯೆ ಮರುವಿಗೆ ಅರಿವಾಯಿತೋ ॥ ೧ ॥

ವೇದ ಜ್ಞಾನ ಮೀರಿದ ನೀನು ಭಾವ ಭಕ್ತಿ ಜ್ಞಾನಿ ನೀನು
ಕಾಯಕ ಮಣಿ ಕಾವ್ಯದ ಖಣಿ ಪ್ರೇಮದ ಪರುಷಮಣಿ
ಗುರುವೇ ನಿಮ್ಮ ನೆನಿಯೆ ಮರುವಿಗೆ ಅರಿವಾಯಿತೋ ॥ ೨ ॥

ನಾಡನಾಡನಾಡಿಯಲ್ಲಿ ಬಸವ ಮಂತ್ರ ಹೊಮ್ಮಿತೋ
ಬಸವನ ನುಡಿ ಮಿಂಚಿದ ಕಿಡಿ ಬೆಳಗಿದ ಬೆಳಕೆಂತೊ
ಆ ಬೆಳಕೆ ಇಂದು ನಮಗೆ ಶಿವದೀವಿಗೆಯಾಯಿತೊ ॥ ೩ ॥

– ಶ್ರೀಮತಿ ಪಾರ್ವತಿ ಜೆಮಶೆಟ್ಟಿ ಹಾಗೂ
ಸರ್ವಮಂಗಳಾ ಜೋಗೂರ

***

೪೪

ದೊಡ್ಡ ಮನುಷ್ಯನ ಬಲ್ಲಿ ಒಬ್ಬ ದಡ್ಡ
ದಡ್ಡನ ಮಾತು ಕೇಳಿದಂವ ಎಡ್ಡ
ಎಡ್ಡನ ಮಾತಕೇಳಿ ಕಳಕೊಂಡ ಗುಡ್ಡ
ಗುಡ್ಡ ಹೋದ ಬಳಿಕೆ ಬಿತ್ತೊ ಕೊಡ್ಡ ॥ ೧ ॥

ಕೊಂಡೆಣ್ಣ ಮಿಂಚೆಣ್ಣ ಇಬ್ಬರು ಕೂಡಿ
ಬಿಜ್ಜಳಂಗ ಹೇಳ್ತಾರೊ ಇಲ್ಲದೊಂದು ಛಾಡಿ
ಬಸವಣ್ಣಗ ಕೊಟ್ಟಾರೋ ಕೆಲಸ
ಕೆಲಸ ಮಾಡಿ ಇಟ್ಟಾನವ – ಹೊಲಸ
ಹೊಲಸಾದಲ್ಲಿ ಉಳದಿಲ್ಲೊ ದಿನಸ
ದಿನಸ ಕಳಕೊಭ್ಯಾಡ್ರಿ ರಾಜಹಂಸ ॥ ೨ ॥

ದುಷ್ಟರ ಮಾತಕೇಳಿ ಬಸವಣ್ಣಗ ಬೈದ
ಅಷ್ಟ ಐಶ್ವರ್ಯ ಹೊಯ್ತು ಮನಿ ಉರಿದ
ಸಿಟ್ಟು ಒಳ್ಳೆದಲ್ಲ ಚುಚುಲೇರ
ಸೋತು ಕುಂತಾರ ಸಿದ್ಧನ ಭಜನಿಯವರ ॥ ೩ ॥

– ಶ್ರೀಮತಿ ರಾಮಶೆಟ್ಟಿ ಖಾನಾಪುರೆ

***

೪೫

ನಿಮಗಾಗಿ ನಾನು ನಿಮಗಾಗಿ ನಾನು
ಓಡೋಡಿ ಬಂದೇ
ಕಾಪಾಡೋ ತಂದೆ ಶ್ರೀ ಗುರುಬಸವಾ
ಕರುಣಿಸೋ ತಂದೆ ಶ್ರೀ ಗುರುದೇವಾ ॥ ೧ ॥

ಮೂರ ದಿನದ ಸಂತಿ ಅದನೋಡೊ ಮಾಯದ ಭ್ರಾಂತಿ
ಕಾಪಾಡೊ ಬಸವಾ ಶ್ರೀ ಗುರುದೇವ
ಕಾಪಾಡೋ ತಂದೆ ಶ್ರೀ ಗುರು ಬಸವಾ ॥ ೨ ॥

ಆರೂ ಅಳಿದು ಮೂರು ತಿಳಿದು
ಕರುಣಿಸೊ ದೇವಾ ಗುರುಮಹಾದೇವಾ
ಕಾಪಾಡೋ ತಂದೆ ಶ್ರೀ ಗುರುಬಸವಾ ॥ ೩ ॥

ತಂದೆಯೂ ನೀನೆ ತಾಯಿಯು ನೀನೆ
ಸಂಗಮನಾಥನ ನಾಮಕೊಂಡಾಡಿ
ಕಾಪಾಡೋ ತಂದೆ ಶ್ರೀಗುರು ಬಸವಾ ॥ ೪ ॥

ಭಕ್ತಿಯ ಮಾಡಿ ಮುಕ್ತಿಯ ಬೇಡಿ
ಸಂಗಮನಾಥನ ನಾಮ ಕೊಂಡಾಡಿ
ಶ್ರೀ ಗುರು ಬಸವಾ ಕರುಣಿಸೋ ತಂದೆ
ಕಾಪಾಡೊ ತಂದೆ ಶ್ರೀ ಗುರುಬಸವಾ ॥ ೫ ॥

– ಶ್ರೀಮತಿ ರೇಖಾ ರಾಮಶೆಟ್ಟಿ ಕಾಡಾದಿ

***

೮. ವೃತ್ತಿಗಾಯಕರ ಹಾಡು

೧. ದೊಡ್ಡ ಬಸವಣ್ಣನವರು

ಸುವ್ವಾ ಬಾ ಚೆನ್ನ ಬಸವಯ್ಯ

ಕಲ್ಲು ಹುಟ್ಟೋಕು ಮುಂಚೆ ಹುಲ್ಲು ಹುಟ್ಟೊಕು ಮುಂಚೆ
ಕಲ್ಲುಗೇಳು ಜಿನಕೆ ಹಿರಿಯವರು _ ಬಸವಯ್ಯ
ಕಲ್ಯಾಣ ಪಟ್ಟಣದಲ್ಲಿ ಇರುವೋರು

ಕಲ್ಯಾಣ ಪಟ್ಟಣದಲ್ಲಿ ಇನ್ಯಾರು ಇರುವವರೆಂದರೆ
ಅವರು ಇನ್ನೂ ಶರಣಾರು ಇರುವೋರು

ಅವರು ಕಣ್ಣು ಕಾಣದವರು ಕಿವಿ ಕೇಳದವರು
ನತ್ತೀಯ ಮೇಲೆ ಮತ್ತೀಯಮರ ಹುಟ್ಟಿದವರು
ಬೆನ್ನೀನ ಮೇಲೆ ಬನ್ನೀಯ ಮರ ಹುಟ್ಟಿದವರು

ಅವರ ಪಾದದ ಮೇಲೆ ಪಾದ್ರಿಮರ ಹುಟ್ಟಿದವರು
ಕಾವಿ ಕಮಂಡಲ ಧರಿಸಿರೋವವರು
ನೂರೊಂದು ಲಿಂಗವ ಧರಿಸಿರೋವವರು

ಕತ್ತಲ್ಲಿ ರುದ್ರಾಕ್ಷಿ ಧರಿಸಿರುವವರು
ಅವರು ಅಂಗಾಲು ಜಡೆಯವರು ಇರುವವರು
ಅಂಗಾಲು ಜಡೆಯೋರು ಮುಂಗಾಲು ಜಡೆಯೋರು

ಅವರು ಇಂತಿಂಥವರೆಲ್ಲ ಇರುವೋರು
ಕಲ್ಯಾಣದಲ್ಲಿ ಕಟ್ಟಾಳುವವರು
ಹುಬ್ಬೀನ ಒಳಗೆ ಗುಬ್ಬಕ್ಕಿ ಮರಿ ಮಾಡಿದವರು
ಇನ್ನೂ ಮಹಾತ್ಮರು ಇರುವೋರು

ಹೊಲಾರ ಹೊನ್ನಯ್ಯ ಮಾದಾರ ಚೆನ್ನಯ್ಯ
ಕುಂಬಾರ ಗುಂಡಯ್ಯ ಇರುವ್ವೋರು
ಕುರುಬಾರ ಬೀರಣ್ಣ ತುರುಕಾರ ಪೀರಣ್ಣ
ಗಾಣಿಗರ ಮುದ್ದಣ್ಣ ಈಡಿಗರ ಪುಟ್ಟಣ್ಣ ಇರುವ್ವೋರು

ಮಡಿವಾಳ ಮಾಚಯ್ಯ ಒಕ್ಕಲಿಗರ ಮುದ್ದಣ್ಣ
ಏಳು ಗಡಿಯನ್ನೆ ಕಟ್ಟಾಳುವಂತವರು
ಪರಿವಾರದ ಚಿಕ್ಕಣ್ಣ ಗನಶರಣ – ಅವರು ಇಷ್ಟೊಂದು
ಕೋಟಿಶರಣಾರನೆಲ್ಲ ಕಟ್ಟಾಳುವರಲ್ಲ ಬಸವಣ್ಣ

ಕಟ್ಟು ಆಳುವಾರು ದೊಡ್ಡ ಬಸವಣ್ಣ
ಗನಶರಣ – ಅವರ ಮಡದಿ ದಂಡಕ್ಕೆ ಬಂದು
ಮತ್ತೇನು ಸ್ವಾಮಿ ನುಡಿದಾರು

ನೀ ಕೇಳು ಕೇಳೆಣ್ಣೆ ಎಳೆಯವಳೆ ನೀಲೋಜಿ
ನಾವಿಷ್ಟೊಂದು ಕೋಟಿ ಶರಣರನ್ನೆಲ್ಲ ಕಟ್ಟಾಳುವವರು
ಅವರಿಗೆ ಅಡಿಗೆ ಬೋಜನವ ಮಾಡಬೇಕು

ಅಡಿಗೆ ಮಾಡಬೇಕು ಅರಮನೆ ಶೃಂಗಾರವಾಗ್ಬೇಕು
ನೀನು ಸ್ಥಾನ ಮಾಡೆಣ್ಣೆ – ನೀಲೋಜಿ
ಚೊಕ್ಕ ಬೋಜನದವಳಗೆ ದುಡುಗೆಣ್ಣೆ

ಅವರು ಮಡದೀಗೆ ಬುದ್ಧಿ ಹೇಳಿ ಬಸವಯ್ಯ
ಸ್ಥಾನಕ್ಕೆ ಸ್ವಾಮಿ ಹೊರಟಾರು – ಅವರು ಹೋಗುವಾಗ
ಮತ್ತಿನ್ನೇನು ಒಂದೀಗೆ ಹೊರಡೀವ್ವೋ

ಅವರ ಎಡದಲ್ಲಿ ನಟಿವಿರ ಕಾಳ ಬಲದಲ್ಲಿ ಡುಂಕಿಯಕಾಳ
ಹಿಂದೆ ಮುಂದೆಲ್ಲ ಗೊಲ್ಲಾರ ಪಾರ
ಅವರ ಮುಂದೆ ಮುಂದೆ ನಂದಿಕಂಬ

ಮಧ್ಯೆ ನಡುಚಪ್ಪರ ನಗಾರಿನೌಪತ್ತು ಸೈವಾಗಿ
ಬಸವಯ್ಯ ಮದ್ದಾನೆ ಮೇಲೆ ಏರಿಕಂಡು
ಚಿತ್ರಗಲ್ಲು ದುರ್ಗಕ್ಕೆ ಹೋಗುತಾವರೆ – ಹೋಗಿನ್ನು
ಅವರು ಅಲ್ಲಿ ಸ್ಥಾನವಾ ಮಾಡುತವರೆ

ಬಸವಯ್ಯನ ಮಡದಿ ದೇವಿ ನೀಲೋಜಮ್ಮ
ಮತ್ತೇನು ತಾಯಿ ಮಾಡುತವಳೆ

ಸಣ್ಣಾ ರಜವೆಡೆಗೆಯ ತೆಗೆದು ತಾಯಮ್ಮ
ಅರಮನೆಯ ರಜಾವ ಹೊಡೆವಾಳೋ – ನೀಲೋಜಮ್ಮ
ತಾರಿಸಿ ಗುಡಿಸಿ ರಂಗೋಲೆ ಬುಡುತವಳೆ

ಅವ ಮಠನೆಲ್ಲಾ ಸುದ್ದಾ ಮಾಡೀ ಬಿಟ್ಟು
ಸ್ಥಾನವ ತಾಯಿ ಮಾಡುತವಳೆ – ನೀಲೋಜಮ್ಮ
ಅಡಿಗೇಯ ತಾಯಿ ಮಡುಗೀಳೋ
ಧಾರು ಈರಿದ ಕಾಯ ನಾರು ತೆಗೆದು ಈಡಾಡಿ
ದಾರೆಣ್ಣೆ ಒಳಗೆ ಹದಗೂಡಿ – ನೀಲೋಜಮ್ಮ
ಅದು ಒಂದು ಬಟ್ಟಲಲ್ಲಿ ಇರಿಸೀಳೋ

ಪುಟ್ಟುಗುಂಬಳ ಕಾಯ ತೊಟ್ಟು ತೆಗೆದು ಈಡಾಡಿ
ಅಟ್ಟೆಣ್ಣೆ ಒಳಗೆ ಹದಗೂಡಿ ನೀಲೋಜಮ್ಮ
ಅದು ಒಂದು ಬಟ್ಟಲಲ್ಲಿ ಇರಿಸೀಳೋ

ಮನೆಯ ಮೇಲೆ ಬೆಳೆಯ ಮದನಗುಂಬಳಕಾಯ
ಬಟ್ಟೆಣ್ಣೆ ಬಿಟ್ಟು ಹದಗೂಡಿ – ನೀಲೋಜಮ್ಮ
ಅದು ಒಂದು ಬಟ್ಟಲಲ್ಲಿ ಇರಿಸೀಳೋ

ತೋಟದಲ್ಲಿ ಹುಟ್ಟಾದು ತೋಟದಲ್ಲಿ ಬೆಳೆಯೋದು
ಊಟಕ್ಕೆ ಮುಂದಾಗಿ ಬರುವೋದು – ಬಾಳೇಕಾಯ
ತುಪ್ಪದಲ್ಲಿ ಹುರಿದು ಹದಗೂಡಿ – ನೀಲೋಜಮ್ಮ
ಅದು ಒಂದು ಬಟ್ಟಲಲ್ಲಿ ಇರಿಸವಳೆ

ಕಲ್ಲಲ್ಲಿ ಹುಟ್ಟಾದು ಕಲ್ಲಲ್ಲಿ ಬೆಳೆಯಾದು
ಹಲ್ಲಲ್ಲಿ ಚಾರಿ ತಿರುಗಾದು ಮಾಗಳಿಬೇರ
ತುಪ್ಪದಲ್ಲಿ ಹುರಿದು ಹದಗೂಡಿ – ನೀಲೋಜಮ್ಮ
ಅದು ಒಂದು ಬಟ್ಟಲಲ್ಲಿ ಇರಿಸವಳೆ

ಹತ್ರಾಸ ಮಲಾರದುಂಡೆಯ ಮಾಡಿ ನೀಲೋಜಮ್ಮ
ಅದು ಒಂದು ಬಟ್ಟಲಲ್ಲಿ ಇರಿಸವಳೆ
ಹಾಲೀಗೆ ಅಕ್ಕಿ ಸುರಿದು ನೀರೀಗೆ ಬೇಳೆ ಸುರಿದು
ಚೊಕ್ಕ ಭೋಜನದ ಅಡಿಗೆ ದುಡುಗವಳೆ – ನೀಲೋಜಮ್ಮ
ಹಾದಾದಿ ತಾಯಿ ನೋಡುತವಳೆ

ಚಿತ್ರಗಲ್ ದುರ್ಗಕ್ಕೆ ಹೋಗಿದ್ದ ಬಸವಯ್ಯ

ಅಲ್ಲಿ ಸ್ನಾನವ ಮಾಡಿನ್ನು ಮಡಿಯ ಉಟ್ಟಿನ್ನು
ಕಲ್ಯಾಣಕ್ಕೆ ಸ್ವಾಮಿನ್ನು ಬರುತವರೆ

ಕಲ್ಯಾಣಕೆ ಸ್ವಾಮಿ ಬಂದಿನ್ನು ಬಸವಯ್ಯ
ಚಂದ್ರ ಸಾಲಿಗಿನ್ನು ಹೋಗುತವರೆ – ಬಸವಯ್ಯ
ಸಾಗಿ ಬಂದಾರು ಅರಮನೆಗೆ – ಬಸವಯ್ಯ
ಮಡದೀಯ ಹೋಗಿ ಕೇಳುತವರೆ

ನೀ ಕೇಳು ಕೇಳೆಣ್ಣೆ ಎಳೆಯವಳೆ ನೀಲೋಜಿ
ಶರಣಾರನೆಲ್ಲ ಕರೆಯಬೇಕು – ಹೆಣ್ಣೆ
ನೀನು ಅಡಿಗೆ ಬೇಗಾನೆ ದುಡುಗೆಣ್ಣೆ

ಗಂಡನಾಡೀದ ಮಾತ ಕೇಳಿ ನೀಲಾಜಮ್ಮ
ಮತ್ತೇನು ತಾಯಿ ನುಡಿದಾಳು
ಅಡಿಗೇಯೂ ನಮ್ಮಲ್ಲಿ ಆಗೀದೆ ರಾಯಾರೆ
ನಿಮ್ಮ ಶರಣಾರ ಬೇಗ ಕರೆತನ್ನಿ

ಮಡದಿ ಆಡಿದ ಮಾತ ಕೇಳಿನ್ನು ಬಸವಯ್ಯ
ಅವರು ಅಷ್ಟೊಂದು ಕೋಟಿ ಶರಣಾರನೆಲ್ಲ
ಲೆಕ್ಕವಿಲ್ಲಾದೆ ಸ್ವಾಮಿ ಕರೆದಾರೋ

ಆ ದೊಡ್ಡ ಬಸವಯ್ಯನವರು ಕರೆದ ವಾಕ್ಯ ಕೇಳಿ
ಅವರು ಎಲ್ಲಾ ಶರಣರು ಬರುತವರೆ

ಬಂದಾರು ಬಸವಯ್ಯನ ನಿಂದಾರು ಅರಮಲ್ಲಿ
ಅವರು ಚಿನ್ನಾದ ಗಿಂಡಿಲ್ಲಿ ಪನ್ನೀರು ಅಗ್ಗಣಿ ತಂದು
ಅವರ ಪಾದಕೆ ಪನ್ನೀರ ಎರೆದಾರೋ

ಬಂದಾರು ಬಸವಯ್ಯನ ಕೂತಾರು ಅರಮಲ್ಲಿ
ಅಲ್ಲಿ ಮಾಡಿರುವಂಥ ಪದಾರ್ಥವನ್ನೆಲ್ಲ
ತಂದು ತಾಯಮ್ಮ ಇಕ್ಕುತಾವಳೆ

ಬಂದಿರುವ ಎಲ್ಲ ಶರಣರಿಗೂ ಬಡಿಸಿದ ಮೇಲೆ ದೊಡ್ಡ ಬಸವಣ್ಣನವರು ಮತ್ತು ನೀಲೋಜಮ್ಮನವರು ಪ್ರತ್ಯೇಕವಾಗಿ ಹಜಾರದಲ್ಲಿ ಕುಳಿತು ಕೊಳ್ಳುತ್ತಾರೆ. ಆಗ ಅಲ್ಲಿ ಸೇರಿದ್ದ ಶರಣರು ಇದೇನು ದೂರವೇ ಕುಳಿತಿದ್ದೀರಲ್ಲ, ನಿಮ್ಮ ಮಕ್ಕಳನ್ನು ಕರೆಯಿರಿ ಎಂದು ಹೇಳುತ್ತಾರೆ. ಆಗ ಬಸವಯ್ಯನವರು ನಮಗೆ ಮಕ್ಕಳಿಲ್ಲ ಸ್ವಾಮಿ. ತಾವೇ

ಬಿನ್ನವನ್ನು ಪೂರೈಸಬೇಕು ಎಂದು ಕೇಳಿಕೊಳ್ಳುತ್ತಾರೆ. ಅಲ್ಲಿ ಸೇರಿದ್ದ ಶರಣರೆಲ್ಲರೂ ಮಕ್ಕಳಿಲ್ಲದ ಮನೆಯಲ್ಲಿ ಬಿನ್ನವನ್ನು ಮಾಡುವುದಿಲ್ಲ ಎಂದು ಎಲ್ಲರೂ ಹೊರಗಡೆ ಬಂದು ಕುಳಿತುಕೊಳ್ಳುತ್ತಾರೆ. ಆಗ ಅವರು ದೊಡ್ಡ ಬಸವಣ್ಣನವರೊಡನೆ ಹೀಗೆ ಹೇಳುತ್ತಾರೆ: ಮಕ್ಕಳಿಲ್ಲದ ಮನೆ, ಮರ್ಗವಿಲ್ಲದ ತೋಟ, ಲಿಂಗವಿಲ್ಲದ ಗುಡಿ, ಜಂಗಮರಿಲ್ಲದ ಮಠ, ಅರಸರು ಇಲ್ಲದ ಅರಮನೆ, ದೀಪವಿಲ್ಲದ ಮನೆ, ರೀತಿ ಇಲ್ಲದ ಹೆಣ್ಣು ಇವುಗಳಿದ್ದರೆ ದೇಶಕ್ಕೆ ಕೇಡು ಸಂಭವಿಸಿದಂತೆ. ನೀವು ಇಷ್ಟೊಂದು ಕೋಟಿ ಶರಣರೆಲ್ಲ ಕಟ್ಟಿ ಆಳಿದುದಕ್ಕೆ ಫಲವೇನು ಎಂದು ಹೇಳಿ

ನೀವು ಪಾಪಿಗಳಿರಬಾರದು ಧರೆಯಲ್ಲಿ – ಎನುತೇಳಿ
ಅವರು ಕುಂದಾದ ನುಡಿಯ ನುಡಿದಾರೋ

ಶರಣರಾಡೀದ ಮಾತ ಕೇಳಿನ್ನು ಬಸವಯ್ಯ
ಯೋಚನೆಯ ಸ್ವಾಮಿ ಮಾಡುತವರೆ – ಬಸವಯ್ಯ
ಮೊಕೋಡನಾಗಿ ಒರಗವರೆ
ಶರಣರು ಆಡಿದ ಮಾತಿನಿಂದ ದೊಡ್ಡ ಬಸವಣ್ಣನವರಿಗೆ ತುಂಬಾ ವ್ಯಸನವಾಯಿತು. ಅವರು ಈಶ್ವರನನ್ನು ಕುರಿತು ತಪಸ್ಸುಮಾಡಿ ಮಕ್ಕಳ ಫಲವನ್ನು ಪಡೆದರಂತೆ.

ವಿ.ಸೂಚನೆ :– ಇದರ ಮುಂದಿನ ಕಥೆ "ಸಂಗೀತೆ ಅರಳೀವೆ" ಎಂಬ ಜಾನಪದ ಕವನ ಸಂಕಲನದ "ದೊಡ್ಡ ಬಸವಣ್ಣನವರು" ಎಂಬ ಕಥನ ಕವನದಲ್ಲಿ ಬಂದಿರುತ್ತದೆ. ಇದನ್ನು ಓದುಗರು ತಮ್ಮ ಅವಗಾಹನೆಗೆ ತೆಗೆದುಕೊಳ್ಳಬೇಕಾಗಿ ವಿನಂತಿ. (ಸೂಚನೆ: ಆ ಹಾಡನ್ನು ಕೆಳಗೆ ಕೊಡಲಾಗಿದೆ. ಸಂ.)

– ಕೃತಿ: ಜಾನಪದ ರಸಗಂಗೆ

***

ದೊಡ್ಡ ಬಸವಣ್ಣನವರು

ಬೂದಿಮರೆಸಿದ ಕೆಂಡ ಭೂಲೋಕಕ್ಕೆ ದೊಡ್ಡವರು
ಭೂಮಿ ಏಳು ಜಿನಕೆ ಹಿರಿಯವರು – ಬಸವಣ್ಣ
ನೆಪ್ಯಾರ ಸ್ವಾಮಿ ಧರೆಯಲ್ಲಿ.....

ಧರೆಗೆ ದೊಡ್ಡವರು ಧರೆಯ ಆಳಿದವರು
ಧರೆಗ್ಹೇಳು ಜಿನಕೆ ಹಿರಿಯವರು – ಬಸವಣ್ಣ
ನೆಪ್ಯಾರ ಸ್ವಾಮಿ ಧರೆಯಲ್ಲಿ ...

ಕಲ್ಲು ಹುಟ್ಟೋಕು ಮುಂಚೆ ಕಲ್ಯಾಣ ಕಟ್ಟೋಕು ಮುಂಚೆ
ತಾವೇ ಹುಟ್ಟಿದರು ಬಸವಯ್ಯ
ಕಲ್ಲಗ್ಗೇಳು ಜೆನಕೆ ಹಿರಿಯವರು.....

ಬಸ್ವಯ್ಯ ಹುಟ್ಟಾಗ ಬಿಸಲಿಲ್ಲ ಬೆಂಕಿಲ್ಲ
ಸೊಸಮರವಿಲ್ಲ ಸಿಸವಿಲ್ಲ – ಬಸವಯ್ಯ
ಬಸವಯ್ಯ ಹುಟ್ಟಿದ್ದು ಕೈಲಾಸ......

ಕಳ್ಳೆ ಹೊಲ ಮೇದು ಕಟ್ಟಾಜ್ಞೆ ಸಳಿಸಿ
ಕದ್ದು ಹೋಯ್ತುವ್ನೆ ಬಸವಯ್ಯ – ಮಲ್ಲಾನ ಮೂಲೆ
ಬದ್ರ ಬಾಕುಲಲ್ಲಿ ಒರಗವರೆ.....

ಉದ್ದಿನ ಹೊಲಮೇದು ಗದ್ದೆಲ್ಲಿ ಆಜ್ಞೆ ಸಲ್ಲಿಸಿ
ಎದ್ದು ಹೋಗ್ತವನೆ ಬಸವಯ್ಯ – ಮಲ್ಲಾನಮೂಲೆ
ಅವ ಬದ್ರ ಬಾಕುಲಲ್ಲಿ ಒರಗವನೆ.....

ಅಪ್ಪ ಬಸವಯ್ಯನ ಒಪ್ಪದಲ್ಲಿ ಹಿಡುಕಳ್ಳಿ
ಎಪ್ಪತ್ತು ಮಾರುದ್ದ ಹಿಡುವಗ್ಗ – ಹಾಕಂಡು
ಹಿಪ್ಪೆಯ ಮುರಕಾಕಿ ಹಿಡಿಯಾರಿ .....

ಅಣ್ಣಾ ಬಸವಯ್ಯನ ಸಂಜ್ಞೆಲ್ಲಿ ಹಿಡುಕಳ್ಳಿ
ಹನ್ನೆರಡು ಮಾರುದ್ದ ಹಿಡುವಗ್ಗ – ಹಾಕಂಡು
ಹೊನ್ನೆ ಮರಕಾಕಿ ಹಿಡಿಯಾರಿ...

ನಾಗಾಳ ಉರುಗೆಜ್ಜೆ ನಾಗಾಳ ಸರಗೆಜ್ಜೆ
ಆದ ಬೆಳ್ಳಿಲ್ಲಿ ಮೊಖರಂಭೆ ಮಾಡಿಸುವೆ
ಉಪ್ಪುರಕೆ ಚೆನ್ನ ಬಸವಯ್ಗೆ ....

ಒಕ್ಕಾಳು ಉರುಗೆಜ್ಜೆ ಒಕ್ಕಾಳು ಸರಗೆಜ್ಜೆ
ಚೊಕ್ಕಾ ಬೆಳ್ಳಿಲ್ಲಿ ಮೊಕರಂಭೆ ಮಾಡಿಸುವೆ
ಬಾಗಾಲ ಚೆನ್ನ ಬಸವಯ್ಗೆ ......

ಅಣ್ಣಾ ಬಸವಯ್ಗೆ ಮಕ್ಕಾಳು ಇಲ್ಲಾದೆ
ಯಾವ ಮಠದಲ್ಲಿ ಅನವಾಸ
ಕಕ್ಕಯ್ಯನವರ ಮಠದ ಮಿಕ್ಕಿದ ಪ್ರಸಾದಕೆ
ಅವರೆಪ್ಪತ್ತೇಳು ವರುಷ ತ್ರವಸಿದ್ರು......

ಚನ್ನಯ್ಯನವರ ಮಠದ ಹಣ್ಣಿನಂತ ಪ್ರಸಾದಕ
ಅವರು ಹನ್ನೆರಡು ವರುಷ ತ್ರವಸಿದ್ದು
ಹಾಗೂ ದೊರೆಯನಿಲ್ಲ ಪರಸಾದ....

ಹೊನ್ನಪಲ್ಲಿ ಚಿನ್ನಪಲ್ಲಿ ಅದರಲ್ಲಿ ಬಸವಣ್ಣ
ಅವರು ಹೊನ್ನರಳಿ ಮರನ ಏರಿರಲ್ಲ – ಬಸವಣ್ಣ
ದೊರೆಯನಿಲ್ಲ ಶಿವನ ಪರಸಾದ .....

ಕಾಳನಾಯ್ನಾಗೆ ತಿರುಗೀದರು ಏಳು ವರ್ಷ.
ದೊರೆಯನಿಲ್ಲ ಶಿವನ ಪರಸಾದ .....

ಗಜಲಿಂಬಿಹಣ್ಣ ತಂದರಲ್ಲ ಬಸವಣ್ಣ
ಮೇಲೆ ದಬ್ಬಳವ ಮಡಗೀರು –
ಸಣ್ಣಿಂಬಿಹಣ್ಣ ಮಡಗಿರಲ್ಲ ಬಸವಣ್ಣ
ಮೇಲೆ ಸೂಜೀಯ ನಿಲಸೀರು....

ಮೇಲೆ ಸೂಜಿಯ ನಿಲಸೀರು ಬಸವಣ್ಣ
ಶಿರಸ ಕೀಳಿಕೆ ಮಾಡಿರಲ್ಲ–
ಅವರ ಆಕಾಸುಕ ಪಾದಾವ ಮಾಡಿ
ಜಿನಾವು ಮಧ್ಯಾನ್ನ ತ್ರವಸಿದ್ರು.....

ಬಸವಣ್ಣನ ತ್ರವಸು ಕೈಲಾಸಕ್ಕೆ ಅರಿವಾಗಿ
ಮಾಯದಾಲಿ ಬರುತಾನೆ ಈಶ್ವರನು–
ಬಂದಾರು ಸ್ವಾಮಿ ದಂಡಾಕೆ ನಿಂತುಕಂಡು
ಯಾಕಪ್ಪಸ್ವಾಮಿ ಲೋಕಕ್ಕೆ ದೊಡ್ಡವನೆ
ನಿನಗ್ಯಾಕಪ್ಪ ಈ ತ್ರವಸು.....

ಬಂಜೆ ಅಂತ್ಹೇಳಿ ಲೋಕವೆಲ್ಲ ಆಡುತಾದೆ
ಬಂಜೆ ಬಸವಯ್ಯಲನುತವರೆ....

ಬೇಡಪ್ಪ ಬೇಡ ಈ ತ್ರವಸು ಬೇಡ
ಒಂದಿಡಿ ಸಣ್ಣ ಮರಳಾನೆ ತೆಗೆದಾರು
ಮಂತ್ರೀಸಿ ಧರಣೀಗೆ ಇಡುತ್ತಾರೆ,
ಬಸವಯ್ಗೆ ಪರುಷಾದ (ಪ್ರಸಾದ) ತನ್ನಿರೆಲ್ಲ .....

–ಕೃತಿ: ಸಂಪೀಗೆ ಅರಳೀವೆ

***

೨

ಕಲ್ಯಾಣದ ಪಟ್ಟಣದ ಸಾಲು

ಉತ್ತರ ದೇಸವನೆ ಬಿಟ್ಟು ಬಿಟ್ಟು ಗುರುವು
ಇಷ್ಟೊಂದು ಬಿರುದು ಲಾಂಚಾಣಗಳನೆ ಧರಿಸಿಕಂಡು
ಈಗಾ ಎಲ್ಲಿಂದ ಎಲ್ಲಿಗೆ ನಾನು ಹೋಗಬೇಕು ಎನುತ ಹೇಳಿ

ಜಗಂಜ್ಯೋತಿಯವರು
ಪರಂಜ್ಯೋತಿಯವರು ಪಾತಾಳಜ್ಯೋತಿಯವರು
ಅಲ್ಲಾಮ ಪ್ರಭು ಮಂಟೇದಾ ಲಿಂಗಪ್ಪ

ಈಗ ಆದಿ ಕಲ್ಯಾಣಕೆ ನಾನು
ಹೋಗಬೇಕು ಎಂದರಲ್ಲಾ ॥ ಸಿದ್ದಯ್ಯ ॥

ಇದು ಆದಿ ಕಲ್ಯಾಣ,
ಆದಿ ಕಲ್ಯಾಣದ ಮಟಮನೆ ಎಂದರೆ
ಅದು ಒಂದನೆ ಕೈಲಾಸ
ಈ ಕಲ್ಯಾಣಕೆ ಹೋಗಬೇಕು
ಬಸವಣ್ಣದೇವರ ದುಡುವ ನೋಡಲೇಬೇಕು
ಅವರ ಮಡದಿ ನೀಲಮ್ಮನ ಸತ್ಯ ನೋಡಲೇಬೇಕು

ಆ ಗಂಡ ಹೆಂಡ್ತಿರ ದುಡುವ
ನಾವೇ ನೋಡಲೇಬೇಕು ॥ ಸಿದ್ದಯ್ಯ ॥

ಅಯ್ಯ ಗಂಡನಲಿ ದುಡುವೋ
ಅವರ ಮಡದಿಯಲಿ ಬಕುತಿಯೋ
ನಾವಾಗೆ ನೋಡಬೇಕು
ಅ ಬಸವಣ್ಣನವರ ಬದುಕು ಕಳೆಯಬೇಕು
ಅ ನೀಲಮ್ಮನವರ ಪತುವರತಾನಗಳ ನಾನೆ ನೋಡಲೇಬೇಕು

ಅವರ ಗಂಡ ಹೆಂಡ್ತಿರ ದುಡಮನವ
ನಾವೇ ನೋಡಲೇಬೇಕು ॥ ಸಿದ್ದಯ್ಯ ॥

ಆದಿ ಕಲ್ಯಾಣದ ಮಠಕೆ ದೇವಾ
ನಾನಾಗೆ ಹೋಗಬೇಕಲ್ಲಾ
ಈಗ ಬಸವಣ್ಣನ ದುಡ ನೋಡಬೇಕು
ಅವರ ಮಡದಿ ನೀಲಮ್ಮನವರ ಪತಿವ್ರತ ನೋಡಬೇಕು
ಅವರ ಸತಿ ಪತಿಗಳ
ಬುದ್ಧಿ ಭಾವ ನೋಡಬೇಕಲ್ಲ ಅಂತಹೇಳಿ

ಅವರು ಧರೆಗೆ ದೊಡ್ಡವರು ಗುರುವು
ಅವರು ಯೋಚಿಣಿಯ ಮಾಡಿಕಂಡು ॥ ಸಿದ್ಧಯ್ಯ ॥

ಈಗ ಭಗುತಿವುಳ್ಳ ಬಸವಣ್ಣ
ನೀತಿ ಉಳ್ಳ ನೀಲಮ್ಮ
ಆಗಲೀಗಾ ಸತಿ ಪತಿಗಳೆಂದರೇ
ಆದಿ ಕಲ್ಯಾಣದಲ್ಲಿ ಕೋಟಿಗೊಬ್ಬ ಶರಣ
ಕುಲಕೊಬ್ಬ ಭಕುತಾ
ಅರುವತ್ತಾರುಮಂದಿ ಜಂಗುಮರು
ಮೂವತ್ತು ಮೂರು ಮಂದಿ ಮುನಾದಾ ಮುನಿಗಳು
ಲಕ್ಷದ ಮೇಲೆ ತೊಂಬತ್ತೇಳು ಕೋಟಿ
ಸತ್ಯ ಶರಣು ಮಾತುಮರು

ಅಪ್ಪ ಎಲ್ಲಿರುವೇ ಮಾಯುಕಾರ
ನೀ ಒದಗಿ ಬಾಪ್ಪ
ಧರ್ಮ ಗುರುವೇ ॥ ಸಿದ್ಧಯ್ಯ ॥
ನನ್ನ ಧರೆಗೆ ದೊಡ್ಡಯ್ಯ
ಮಂಟೇದಾ ಲಿಂಗಪ್ಪ
ಅಲ್ಲಾಮಪ್ರಭು
ನನ್ನ ಪರಂಜ್ಯೋತಿಯವರು
ಈಗಾ ಆದಿ ಕಲ್ಯಾಣಕೆ ನಾನು
ಹೋಗಬೇಕು ಎಂದರಲ್ಲಾ ॥ ಸಿದ್ಧಯ್ಯ ॥

ಗುರುವೇ ಆದಿ ಕಲ್ಯಾಣಕೆ ಗುರುವೇ
ನಾನೆ ಹೋಗಬೇಕು
ಬಸವಣ್ಣನವರ ಗುರುವು
ಸತ್ಯ ನೋಡಲೇಬೇಕು
ಆ ನೀಲಮ್ಮನವರ ದೇವಾ

ಭಗುತಿ ತಿಳಿಯಬೇಕು
ಅವರ ಸತಿ ಪತಿಯ ದುಡುವ
ನಾನೆ ನೋಡಲೇಬೇಕು ॥ ಸಿದ್ಧಯ್ಯ ॥

ಅವರ ಮಡದಿಯ ದುಡುವು ಗೊತ್ತಿಲ್ಲಾ
ಇಲ್ಲಾ ಬಸವಣ್ಣನ ಭಕುತಿಯ ಕಾಣೆನಲ್ಲ
ಅವರ ಭಕುತಿ ಸತ್ಯನೋಡಬೇಕಲ್ಲ ಅಂತ
ಧರೆಗೆ ದೊಡ್ಡವರು
ಉತ್ತರ ಖಂಡದಲಿ ನಿಂತುಕಂಡು
ಆದಿ ಕಲ್ಯಾಣದ ಪಟ್ನ
ಕಣ್ಣಿಂದ ನೋಡುವಾಗ ಗುರುವು
ಆದಿ ಕಲ್ಯಾಣ ಪಟ್ಟಣದಲಿ

ಹೊಲಿಯರ ಹೊನ್ನಪ್ಪ
ಅವನೊಬ್ಬ ಶಿವಶರಣ
ಮಾದಿಗರ ಚನ್ನಯ್ಯಾ
ಅವನೊಬ್ಬ ಶಿವಶರಣ
ನನ್ನ ಮಡಿವಾಳ ಮಾಚಪ್ಪ
ಒಬ್ಬ ಶಿವಶರಣಾ
ಸುವ್ವಾ ಬಾ ಚನ್ನಬಸವಣ್ಣಾ ॥ ಸುವ್ವಾ ಬಾ ॥

ಅಯ್ಯ ಮಡಿವಾಳು ಮಾಚಪ್ಪ
ಅವನೊಬ್ಬ ಶಿವಶರಣ
ನನ ಕುಂಬಾರ ಗುಂಡಯ್ಯ
ಅವನೊಬ್ಬ ಶಿವಶರಣ
ನನ್ನ ಗಾಣಿಗರ ದಾಸಯ್ಯ
ಒಬ್ಬ ಶಿವಶರಣಾ ॥ ಸುವ್ವಾ ಬಾ ॥

ನನ್ನ ಗಾಣಿಗರ ದಾಸಯ್ಯ
ಅವನೊಬ್ಬ ಶಿವಶರಣ
ನನ್ನ ಕುರುಬರ ಬೀರಪ್ಪ
ಅವನೊಬ್ಬ ಶಿವಶರಣ
ಒಕ್ಕಲಿಗರ ಮುದ್ದಯ್ಯ
ಅವನೊಬ್ಬ ಶಿವಶರಣ
ನನ್ನ ದೊಂಬರ ಕ್ಯಾತಯ್ಯಾ
ಒಬ್ಬ ಶಿವಶರಣಾ ॥ ಸುವ್ವಾ ಬಾ ॥

ಗುರುವೆ ದೊಂಬರ ಕ್ಯಾತಪ್ಪ
ಅವನೊಬ್ಬ ಶಿವಶರಣ
ನನ್ನ ಕುರುಬರ ಬೀರಪ್ಪ
ಅವನೊಬ್ಬ ಶಿವಶರಣ
ನನ್ನ ತುರುಕರ ಬೀರಯ್ಯ
ಒಬ್ಬ ಶಿವಶರಣಾ ॥ ಸುವ್ವಾ ಬಾ ॥

ನನ್ನ ತುರುಕರ ಬೀರಯ್ಯ
ಅವನೊಬ್ಬ ಶಿವಶರಣ
ನನ್ನ ಅಂಬಿಗರ ಚೌಡಯ್ಯ
ಅವನೊಬ್ಬ ಶಿವಶರಣ
ಅವರು ಇಂತಿಂತ ಶರಣರು
ಇರುತಾರೆ ॥ ಸುವ್ವಾ ಬಾ ॥

ಕೋಟಿಗೊಬ್ಬ ಶರಣ
ಕುಲಕ್ಕೊಬ್ಬ ಭಕುತಾ ದೇವಾ
ಈಗಲೀಗ ಕಲ್ಯಾಣದ ಬಸವಣ್ಣನವರು
ಆದಿ ಕಲ್ಯಾಣ ಪಟ್ಟಣಕೆ
ಎಂತಹ ಶಿವಶರಣ ಮಾತುಮರು ಎಂದರೆ
ಏನೇನೋ ಪಡೆದಂತಹ ಶರಣ ಮಾತುಮರು ಗುರುವೇ

ಇಂತಿಂತಹ ಶರಣ ಮಾತುಮರು ಗುರುವೂ
ಆದಿ ಕಲ್ಯಾಣ ಪಟ್ಟಣದಲ್ಲಿ
ವಾಸಸ್ಥಾನ ಮಾಡುವಾಗ ಗುರುವು
ಈ ಶಿವಶರಣ ಮಾತುಮರು ಅಂದುರೇ

ಅಂಗಾಲ ಜಡೆಯವರು
ಮುಂಗಾಲ ಜಡೆಯವರು
ಅವರು ಕೋಟಿಗೊಬ್ಬ ಶರಣಾರು
ಕುಲಕ್ಕೊಬ್ಬ ಭಕುತಾರು
ಅವರು ರಂಡುಮುಂಡಾ ಜಂಗಮರು
ಎಂದವರೆ ನನ್ನ ಗುರುವು
ಅವರು ನಿದ್ರೆಯ ತೊರೆದವರು
ನೇಮವ ತೊರೆದವರು
ಗುರುವೇ ಶಿವ ಪೂಜೆ ತೊರೆದವರು

ಶಿವಜ್ಞಾನವ ಮರೆತವರು
ಹೆಣ್ಣನೆ ತೊರೆದವರು
ಮಣ್ಣನೇ ತೊರೆದವರು
ನಿದ್ರೆಯ ತೊರೆದವರು
ಅನ್ನವ ತೊರೆದವರು
ಆರಾಧ್ಯಗಳ ದೇವಾ ಮರೆತವರು ಶರಣಾರು
ಅವರು ಇಂತಿಂಥ ಶರಣಾರು ಇರುತಾರೆ ॥ ಸುವ್ವಾ ಬಾ ॥

ಇಂತಿಂತಹ ಶರಣ ಮಾತುಮರು
ಆದಿ ಕಲ್ಯಾಣ ಪಟ್ಟಣದಲ್ಲಿ
ಬಸವಣ್ಣನವರಾ ಗದ್ದಿಗೆ ಒಳಗೆ
ರಂಡು ಮುಂಡು ಜಂಗುಮರು
ಬೋಳು ಬೋಳು ಜಂಗುಮರು
ಆದಿ ಕಲ್ಯಾಣ ಪಟ್ಟಣದಲ್ಲಿ ಅಡಕವಾಗಿದ್ದರಂತೆ
ಅಂತ ಆದಿ ಕಲ್ಯಾಣದಲ್ಲಿರುವಾಗ ಗುರುವೂ
ಪರಂಜ್ಯೋತಿ ಪಾವನ ಮೂರುತಿ
ಅಲ್ಲಮಪ್ರಭು ಮಂಟೇದ ಲಿಂಗಪ್ಪ
ಜಗಂಜ್ಯೋತಿಯವರು
ಈಗ ಆದಿ ಕಲ್ಯಾಣ ಪಟ್ಟಣಕೆ ಹೋಗುಬೇಕಲ್ಲ
ಬಸವಣ್ಣ ನೀಲಮ್ಮನೋರಾ ಭಕುತಿ ಸತ್ಯ ನೋಡಬೇಕು

ಅಲ್ಲಿ ಇರುತಕಂತಹ
ಶರಣರ ದುಡುವಾ ನಾನೇ ನೋಡಲೇಬೇಕು ॥ ಸಿದ್ಧಯ್ಯ ॥

ಅಲ್ಲಿ ಇರುವಂತಹ ಗುರುವೇ
ಸತ್ಯ ಶರಣರ ದುಡುವ
ನಾನೇ ನೋಡಲೇಬೇಕು
ಶರಣರ ಭಕುತಿ
ನಾನೆ ತಿಳಿಯಲೇ ಬೇಕು
ಹಾಗೆಂದು ನನ್ನ ಗುರುವು
ಧರೆಗೆ ದೊಡ್ಡಯ್ಯ
ನನ್ನ ಮಂಟೇದಾ ಲಿಂಗಪ್ಪ
ನನ್ನ ಕಂಡಾಯದ ಮೂರುತಿ
ಅವರು ಉತ್ತುರು ಕಂಡವನ್ನೇ
ಬಿಟ್ಟುಬಿಟ್ಟು ನನ್ನಪ್ಪ
ಅವರು ಕಾಲು ಚೋತ್ತು ಮಾಡಿ

ಗುರುವೇ ಕೈಯಿ ಚೋತ್ತು ಮಾಡಿ
ಅವರು ಕುಷ್ಠ ರೋಗಿ ಯಾಸವನ್ನೆ
ತಾಳಿಕಂಡುರು ಮಾಯಿಕಾರ ॥ ಸಿದ್ಧಯ್ಯ ॥

ಗುರುವೇ ಕುಷ್ಟುರೋಗಿಯ ಗುರುವೇ
ಯಾಸವಾ ಗುರುವೂ
ತಾಳಿಕಂಡು ನನಪ್ಪ
ಧರೆಗೆ ದೊಡ್ಡಯ್ಯ
ಗುರುವೇ ಆರು ಕಂಡುಗಾ
ಯಗ್ಗಜ್ಜಿ ಮಾಡಿಕಂಡು
ಮೂರು ಕಂಡುಗಾ
ತುರುಗಜ್ಜಿ ಮಾಡಿಕಂಡು
ಗುರುವೆ ಆರು ಕಂಡುಗ ಕೀವು
ಆರು ಕಂಡುಗ ರಸುಗು
ಆರು ಕಂಡುಗ ರಕುತ
ಏಳು ಕೋಟಿ ಹುಳುವಾ
ಮೈತುಂಬ ಬುಟುಕಂಡು
ಅವರು ಕಲ್ಯಾಣ ಗುರುವೇ ಅವರು
ಕಣ್ಣೆತ್ತಿ ನೋಡುತಾರೆ ॥ ಸಿದ್ಧಯ್ಯ ॥

ರುಂಡಾ ಪುಂಡಾ ಜಂಗುಮರು
ಬೋಳು ಬೋಳು ಜಂಗುಮರು
ಭಕುತಿ ಸತ್ಯ ನೋಡ ಬೇಕಾದುರೇ
ಆ ಬಸವಣ್ಣನವರ ಭಕುತಿ ತಿಳಿಬೇಕಾರೇ
ಈಗಾ ನಾನು ತಾಳಿಕಂಡಿರುವಂತ
ಕುಷ್ಟು ರೋಗಿ ಅಂದುರೇ
ಈ ಭೂಮಿ ಭೂಲೋಕ ನಡುವೇ ನರಲೋಕದಲ್ಲಿ
ನನ್ನಂತಹ ರೋಗಾದಿಗಳು ಒಬ್ಬರುಗೂ ಇಲ್ಲಾ
ಅಂತಹ ರೋಗಾದಿ ಯಾಸ ತಾಳಿಕಂಡು ನಾನೋಗಿ
ಬಸವಣ್ಣವರ ಭಕುತಿ ದುಡ ನೋಡಬೇಕು ಅನುತೇಳಿ
ಆ ಜಂಗಜ್ಯೋತಿ ಧರೆಗೆ ದೊಡ್ಡವರು ಯೋಚಣೆ ಮಾಡುವಾಗ
ಆದಿಕಲ್ಯಾಣ ಪಟ್ಟಣದಲ್ಲಿ
ಕುಂತು ಕಲ್ಯಾಣದ ಬಸವಣ್ಣ
ಈ ಕಲ್ಯಾಣ ಕುಟ್ಟುದ ಕಾಲದಿಂದಾ
ಕಲ್ಯಾಣ ಹುಟ್ಟುದ ಕಾಲದಿಂದಾ
ಕಲ್ಯಾಣ ಪಟ್ಟಣದಲ್ಲಿ

ಈಗಲೀಗಾ ಲಕುಶು ಕೋಟಿ ಜಂಗುಮರೆಲ್ಲಾ
ಬಸವಣ್ಣನೇ ಹೆಚ್ಚಿನ ಶರಣ ಅಂತ
ನನ್ನನೆ ಕೊಂಡಾಡುತವುರೇ
ಈಗಲೀಗಾ ಕಲ್ಯಾಣ ಕೈಲಾಸ ಭೂಮಿ ಭೂಲೋಕ
ಬಸವಣ್ಣನವರೇ ದುಡುವಂತುರು ಭಕುತಿವಂತರು ಅಂತೇಳಿ
ಕೈಲಾಸ ಕಲ್ಯಾಣವೆಲ್ಲಾ ಹೊಗುಳುತಾದೇ
ಅಷ್ಟು ಕಾಲದಿಂದ ಇಷ್ಟು ಕಾಲಗಂಟಾ
ನಮಗಿಂತ ಹೆಚ್ಚಿನ ಗುರುಗಳು ಅಂದರೆ ಒಬ್ಬುರು ಬರುನಿಲ್ಲಾ
ಹೆಚ್ಚಿನ ಗುರುಗಳು ನಾ ಎಲ್ಲೂ ಕಾಣನಿಲ್ಲ
ಅಂತಹ ಶರಣರು ಅಂತಹ ಭಕುತ್ರು
ತಾವಾಗಿ ಕಲ್ಯಾಣಕೆ ಪ್ರವೇಶ ಮಾಡುಬೇಕಾದ್ರೆ
ಈ ಕಡೆ ಕೈಲಾಸದ ಭಾಗದಲ್ಲಿ

ನಾಲಗೆ ಇಲ್ಲದ ಗಂಟೆ
ಬಾಗುಲಲಿ ಕಟ್ಟುಬೇಕು
ಕುಡುವಿಲ್ಲದಾ ನಗಾರಿ
ಬಾಗುಲಲಿ ಇರುಬೇಕು
ನಮಗಿಂತ ಶರಣರು
ನಮ ಕಲ್ಯಾಣಕೆ ಬಂದರೇ
ಅಲ್ಲಿ ನಾಲಗೆ ಇಲ್ಲದ ಗಂಟೇ
ಲಾದ ಸಬುದಾ ॥ ಸುವ್ವಾ ಬಾ ॥

ಅಯ್ಯಾ ನಾಲಗೆ ಇಲ್ಲದ ಗಂಟೆ
ಢಣಿ ಢಣಿನೆ ಗುರುವೇ
ಲಾದ ಶಬುದಾ ಅಗುಬೇಕು
ಅಲ್ಲಿ ಕಡುವಿಲ್ಲಾದ
ನಗಾರಿ ನುಡೀಬೇಕು ॥ ಸುವ್ವಾ ಬಾ ॥

ಅಯ್ಯಾ ಕುಡುವಿಲ್ಲಾದ ನಗಾರಿ
ನುಡಿಬೇಕು ಎನುತೇಳಿ
ಅಯ್ಯಾ ಕಡೆಯ ಬಾಗುಲ ಒಳಗೆ
ಗಂಟೇಯ ಇರಿಸವರೇ
ಅಯ್ಯಾ ಕಡೆಯ ಬಾಗುಲವಳಗೆ
ಗಂಟೇಯ ಇರಿಸವರೇ
ಅಲ್ಲಿ ಶರಣರಿಗೆ
ಬುದ್ಧಿವಾದ ಹೇಳುತಾರೇ ॥ ಸುವ್ವಾ ಬಾ ॥

ನೋಡಪ್ಪ
ಅಗಲೀಗಾ ಕಲ್ಯಾಣ ಪಟ್ಟಣದಲ್ಲಿ
ನಾಲಿಗಿಲ್ಲದ ಗಂಟೆ ಬಾಕ್ಲುಗೆ ಕಟ್ಟಿ
ಕುಡುವಿಲ್ಲದ ನಗಾರಿಯನ್ನು
ಕಡೆಬಾಗುಲಲಿ ಮಡಿಕಂಡು ಬಸವಣ್ಣನವರು
ಅರವತ್ತಾರು ಮಂದಿ ಜಂಗುಮರು
ಮೂವತ್ತಾರು ಮಂದಿ ಮುನಾದು ಮುನಿಗಳು
ಲಕುಸದ ಮ್ಯಾಲೆ ತೊಂಬತ್ತೇಳು ಕೋಟಿ
ಶಿವಶರಣು ಮಾತುಮರನೇ

ಆದಿ ಕಲ್ಯಾಣಕ್ಕೆ ಬರಮಾಡಿಕಂಡು
ದಿನಾ ದಿನಾ ಒಂದು ದಿವಸಾ ತಪ್ಪುದಂತೆ ಕೂಡಾ
ನಿಚ್ಚ ಭೋಜನ ಮಾಡುತಿದ್ದರಂತೆ
ನಿಚ್ಚ ಭೋಜನ ಅಂದರೆ
ಕಲ್ಯಾಣದಲಿ ಅನ್ನದಾನ ಮಾಡುತಿದ್ದುರು
ಅನ್ನದಾನ ಮಾಡುವ ಬಸವಣ್ಣನಾ
ಮಣ್ಯ ಸ್ಥಾನಗಳ ನಾನಾಗಿ ನೋಡಬೇಕು ಎನುತೇಳಿ
ಕುಷ್ಟರೋಗಿಯಾಗಿ ಧರೆಗೆ ದೊಡ್ಡವರು
ಕಲ್ಯಾಣ ಪಟ್ನ ಅಂತ ನೋಡುವಾಗ
ನೋಡಪ್ಪ, ಬಸವಣ್ಣೋರ ಬಾಯಲ್ಲಿ
ಒಂದು ಕೆಟ್ಟಾ ವಾರ್ತೆ ಬತ್ತಂತೆ
ಏನು ಕೆಟ್ಟಾವಾರ್ತೆ ಎಂದರೇ
ಕಲ್ಯಾಣದ ಕಡೆ ಬಾಗುಲಲ್ಲಿ
ಕಟುಗರ ಸಂಗ್ಯೆಯ್ಯ ಅಂತಕಂತವರು ಒಬ್ಬ ಕಾವಲುಗಾರ

ಅವರು ಸಂಗ್ಯೆನ ಬಳಿಗೆ ಬರುತಾರೆ ॥ ಸುವ್ವಾ ಬಾ ॥
ಗುರುವೆ ಸಂಗ್ಯೆನಾ ಬಳಿಗೆ
ಬಂದರು ಬಸವಣ್ಣ
ಅವರು ಸಂಗ್ಯೆನಿಗೆ ಒಂದು ವಾರ್ತೆ ಹೇಳುತಾರೆ ॥ ಸುವ್ವಾ ಬಾ ॥

ಸಂಗ್ಯೆನ ಬಳಿಗೆ ಬಂದು ಬಸವಣ್ಣ
ಈಗಲೀಗಾ ಚಕ್ಕುರುದಾ ಕೋಲು
ಬಲಗ್ಯೆಲಿ ಹಿಡುಕಂಡು
ಕಡೆ ಬಾಗುಲಲಿ ಕಟುಗರ ಸಂಗಯ್ಯ
ಕಾದುನಿಂತವರೇ
ಆ ಸಂಗ್ಯೆನ ಬಳಿಗೆ

ಬಸವಣ್ಣನವರು ಬಂದು ಒಂದು ಮಾತು ಹೇಳುತವರೆ
ಏನ್ರಪ್ಪ ಕಟುಗರ ಸಂಗಯ್ಯ
ಈಗ ಕಲ್ಯಾಣದಲಿ ಬೋಜನಕ್ಕೆ ಟೈಮಾಯ್ತು ಕನ್ರೊ
ಈಗ ಬೋಜಣಕೆ ಎಲ್ಲಾ ಶಿವಶರಣ ಮಾತುಮುರು ಬರ್‍ತಾರೆ
ಬಂದವರ ಬಂದಾಗೆ ಬಿಟ್ಟು ಬಿಟ್ರೆ
ಕುಷ್ಟ ಕಾಯಿಲೆ ಇರೋರು ಬರುತಾರೆ
ರೋಗ ಉಳ್ಳಾದವರೂ ಕೂಡಾ ಬರುತ್ತಾರೆ

ಅನ್ನ ಊಟ ಮಾಡಬೇಕು ಅನ್ನುವ ಆಸೆಗೆ
ಕಲ್ಯಾಣಕೆ ಬಂದುಬುಡ್ತಾರೆ ಕನ್ರಪ್ಪ
ಈ ರೋಗ ಉಳ್ಳಾದವರು
ಕುಷ್ಟ ಉಳ್ಳಾದವರು
ಕಾಯಿಲೆ ಉಳ್ಳಾದವರು
ನಮ್ಮ ಕಲ್ಯಾಣಕೆ ಬರುವುದೇ ಸತ್ಯ
ಬಂದಂತಹ ಶಿವಶರಣ ಮಾತುಮರು
ಕಾಯಿಲೇ ಕಷ್ಟದವರು
ಒಂಬತ್ತು ಜನ ಬಂದರೇ
ಸುಕಾವಾಗಿರ್‍ತಕಂತಹ ಪುಣ್ಯವುಳ್ಳಾದವರು
ನೂರುಜನ ಬರ್‍ತಾರೆ ಕನ್ರಪ್ಪ
ಆ ಒಳ್ಳೆ ಶುಭವಾಗಿ ಬರ್‍ತಕ್ಕಂತಹ ಶರಣ್ರ ಜೊತೆ ಒಳಗೆ
ಈ ಕೊಳಕು ಜಂಗಮರ ಒಬ್ಬರ ಬುಡಬ್ಯಾಡಿ
ಅಂದಚಂದಾವುಳ್ಳಾದವರು ಬಂದುಬುಟ್ರೆ
ಮೊದಲನೆ ಊಟಕೆ ಬುಟ್ಟುಬುಡು
ಏನಾರೂ ಕಷ್ಟ ಕಾಯಿಲೆಯವರು ಬಂದುದಾದರೆ
ಅವರು ಊಟವಾಗಗಂಟ
ಕಡೇ ಬಾಗ್ಲಲ್ಲಿ ಇಲ್ಲೆ ಕಾಯಿಸು

ಎರಡನೆ ಊಟಕೆ ಕಂದಾ ಅವರ
ಕಲ್ಯಾಣಕೆ ಬುಡು ಮಗನೆ ॥ ಸಿದ್ಧಯ್ಯ ॥

ಯಾವಾಗ ಬಸವಣ್ಣನವರು
ಕಟುಗರ ಸಂಗಯ್ಯನಿಗೆ
ಒಳ್ಳೊಳ್ಳೆ ಜಂಗುಮುರ ಒಳಕ್ಕೆ ಬುಟ್ಟು
ಈ ಕಷ್ಟ ಕಾಯಿಲೆ ಉಳ್ಳದವರ್‍ನ
ಎರಡನೆ ಊಟಕೆ ಬುಡು
ಮೊದಲೆ ಕಷ್ಟ ಕಾಯಿಲೆಯವರ ಮಾತ್ರ

ಬುಡುಬ್ಯಾಡ ಅಂತ ಯಾವಾಗ
ಕಟುಗರ ಸಂಗಯ್ಯನಿಗೆ ಬಸವಣ್ಣನವರು ಹೇಳಿದ್ರೊ
ಉತ್ತುರ ಖಂಡದಲಿ ನಿಂತಿದ್ರು, ಯಾರು? ಧರೆಗೆ ದೊಡ್ಡವರು

ಇವರು ಇಲ್ಲಿ ಆಡಿದ ಮಾತು ಅವರಿಗೆ
ಅಲ್ಲಿಗೆ ಅರುವಾಗುತಾದೆ ॥ ಸಿದ್ಧಯ್ಯ ॥

ಇವರು ಇಲ್ಲಿ ಆಡುದಂತಹ ಮಾತು ಗುರುವು
ಧರೆಗೆ ದೊಡ್ಡವರು ಮಂಟ್ಯಾದ ಲಿಂಗಪ್ಪ
ಜಗಂಜ್ಯೋತಿಯವರ ಪಾದಕೆ ಅರುವಾಯ್ತು
ನೋಡಿದ್ರಾ
ಕಲ್ಯಾಣದಲ್ಲಿ ಆಗತಕಂತಹ ಕಳ್ಳತನ ಸುಳ್ಳುತಾನ
ಬಸವಣ್ಣನಲ್ಲಿ ಬರ್ತಕಂತಹ ವಾಕುತಾನ
ನನ್ನ ಉತ್ತರ ದೇಶಕ್ಕೆ ಗೊತ್ತಾಗಿ ಬುಡುತಲ್ಲ
ನನ್ನ ಕಣ್ಣಿಗೆ ಕಾಣುವಾಗೆ ಹೀಗಾದುಮ್ಯಾಲೆ
ಈ ಕಲ್ಯಾಣದಲಿ ಇನೇನಾಗಿದ್ದದೊ ಗೊತ್ತಿಲ್ಲಾ

ಈ ಕಲ್ಯಾಣದ ಸತ್ಯದುಡುವ
ನೋಡಬೇಕು ಎಂದರಂತೆ ॥ ಸಿದ್ಧಯ್ಯ ॥

ಅಯ್ಯ ಕಲ್ಯಾಣದ ಸತ್ಯ
ಕಲ್ಯಾಣದ ದುಡುವಾ
ನಾನೆ ನೋಡಬೇಕು
ಹಾಗಂದು ಗುರುವು
ಈಗ ಆದಿ ಕಲ್ಯಾಣಕೆ ನನ್ನ
ದೇವರು ದಯಮಾಡುತಾರೆ ॥ ಸಿದ್ಧಯ್ಯ ॥

ಗುರುವೇ ಆದಿಕಲ್ಯಾಣಕೆ
ನನ್ನ ಪರಂಜ್ಯೋತಿಯವರು
ಪಾತಾಳ ಜ್ಯೋತಿಯವರು
ಧರೆಯ ತಂದವರು
ಧರೆಗೆ ದೊಡ್ಡವರು
ಅವರು ಓಡಿ ಓಡಿ ಬಂದರಲ್ಲಾ
ಹೆತ್ತಯ್ಯಾ ಮಂಟೇದು ಸ್ವಾಮಿ ॥ ಸಿದ್ಧಯ್ಯ ॥

ಆದಿ ಕಲ್ಯಾಣಕೆ ಸ್ವಾಮಿ
ಆಗಲೀಗಾ ಕಜ್ಜಿಕೀವು

೨೯

ಕುಷ್ಠರೋಗಿ ಯಾಸವ ತಾಳಿ
ಕೈ ಚೊತ್ತ ಕಾಲು ಚೊತ್ತ ಮಾಡಿ
ಬಂದುರು ಜಗತ್ತು ಗುರು ಧರೆಗೆ ದೊಡ್ಡಯ್ಯ
ಈ ಟೈಮಿನಲ್ಲಿ
ಬಸವಣ್ಣನವರ ಮಾತಿನ ಪರಕಾರವಾಗಿ
ಎಲ್ಲಾ ಶಿವಶರಣ ಮಾತುಮರು
ಆದಿ ಕಲ್ಯಾಣದ ಗುರುಮಠಕೆ ಬರುತಿದ್ದರು
ಬರುವಂತ ಕಾಲದಲ್ಲಿ ಗುರುವು
ಒಳ್ಳೊಳ್ಳೆ ಜಗುಮರೆಲ್ಲರ್ನುವೆ
ಕಟುಗರ ಸಂಗಯ್ಯನೋರು ಒಳಗಡೆ ಬಿಡುತಿದ್ದುರು
ಕೆಟ್ಟ ಜಂಗುಮರೆಲ್ಲಾರ್ನುವೆ ಕಣ್ಣಾರೇನೆ ಕಾದಿದ್ರು
ನೋಡಿದ್ಯಾ, ಬಸವಣ್ಣನವರ ಮಾತಿನ ಪರಕಾರವಾಗಿ
ಕಟುಗರ ಸಂಗಯ್ಯ
ಒಳ್ಳೆ ಜನರ ಮ್ಯಾಲೆ ಒಂದು ಕಣ್ಣು ಮಡ್ಗವನೆ
ಈಗಲೀಗ ನನ್ನಂತಹ ಕಷ್ಟ ಕಾಯಿಲೆಯವರ
ಮ್ಯಾಲೆ ಒಂದು ಕಣ್ಣು ಮಡಗಿ
ಕಾದು ಕುಳುತುಗಂಡು
ಈ ಬಂದಂತಹ ಒಳ್ಳೊಳ್ಳೆ ಶುಚಿಯಾಗಿರ್ತಕ್ಕಂತಹ
ಆಗಲೀಗ ಜಂಗುಮರ್ನ
ಕಲ್ಯಾಣದ ಗುರುಮಠಕ ಬುಡುತವನಲ್ಲಾ ಎನುತೇಳಿಬುಟ್ಟು
ಆ ಜಗತ್ತು ಗುರು ಧರೆಗೆ ದೊಡ್ಡಯ್ಯ

ಹಿಂದೆ ಏಳು ಜನ
ಶರಣರ ಬಿಟ್ಟುಗಂಡು
ಮುಂದೆ ಏಳುಜನ
ಶರಣರ ಬಿಟ್ಟುಗಂಡು
ಗುರುವೆ ಬಲದಲ್ಲಿ ಮೂರು ಜನ
ಶರಣರ ಬಿಟುಗಂಡು
ಎಡದಲಿ ಮೂರು ಜನ
ಶರಣರ ಬಿಟುಗಂಡು
ಅವರು ಮಧ್ಯಾದೊಳಗೆ ದೇವಾ
ಕಾಣದವರಂಗೆ ನುಗ್ಗುತಾರೆ ॥ ಸಿದ್ದಯ್ಯ ॥
ಹಿಂದೆ ಜಗುಮರು ಮುಂದೆ ಜಂಗುಮರು
ಎಡದಲ್ಲಿ ಬಲದಲ್ಲಿ ಜಂಗುಮರ ಬಿಟ್ಟುಕಂಡು
ಈ ಕಟುಗರ ಸಂಗೈನ್ಗೆ ಗೊತ್ತಿಲ್ಲದ ರೀತಿ
ಹೊರಟು ಹೋಗಬೇಕು ಅಂತ ಹೇಳಿ
ನೊಡಪ್ಪ ಧರೆಗೆ ದೊಡ್ಡವರು ಬರುತವರೆ

ಕಟುಗರ ಸಂಗಯ್ಯನವರು
ಅಯ್ಯ ಏಳುಜನ ಶರಣಾರಾ
ಒಳಗಡೆ ಬುಟ್ಟವರೇ
ಮೂರು ಜನ ಶರಣಾರಾ
ಒಳಗಡೆ ಬುಟ್ಟವರೇ
ಧರೆಗೆ ದೊಡ್ಡವರ ಹಿಂದೆ
ಮೂರು ಜನ ಶರಣರು
ಅವರ ಬೆನ್ನಿಂದೆ ಬರುವಂತ
ಏಳುಜನ ಶರಣಾರಾ
ಇವನು ಕೊಳಕ ಜಂಗುಮ ಬಂದಾ ಅಂತ
ಎಲ್ಲಾರೂನು ತಡದಾರಾಂತೆ ॥ ಸಿದ್ಧಯ್ಯ ॥

ಆಗಲೀಗಾ ಕಟುಗರ ಸಂಗಯ್ಯ
ಹಿಂದೆ ಬರುವಂತ ಏಳುಜನ ಶರಣರಾ
ತಡಿರಪ್ಪ ಅಲ್ಲೆ ಇರಿ ಅಲ್ಲೆ ಇರಿ ಅನುತ ಹೇಳಿ
ಆ ಹಿಂದೆ ಬರುವಂತ ಶರಣರ್ನಾ
ಹಿಂದಕೆ ನಿಲ್ಲಿಸಿಬುಟ್ರ
ಯಾರು ? ಕಟುಗರ ಸಂಗಯ್ಯ
ಧರಗೆ ದೊಡ್ಡವರ ಎಡಚೆರಿ ಬರುವಂತ
ಮೂರುಜನ ಜಂಗುಮರ
ಮುಂದಕೆ ಹೋಗಿರಯ್ಯ ಅನುತೇಳಿ
ಮುಂದಕ್ಕೆ ತಳ್ಳಿ ಬುಟ್ಬುರು
ಅಗ ಹಿಂದಿದ್ದೋರು ಏಳುಜನ
ಹಾಗೆ ನಿಂತುಕಂಡುರು
ಬಲಗಡೆ ಎಡಗಡೆ ಇರ್ತಕಂತಹ ಜಂಗುಮರು
ಒಳಗಡೆ ಹೊರಟು ಹೋದರು
ಈಗಲೀಲಾ
ಕುಷ್ಟರೋಗಿಯಾಗಿ ಬಂದಿರುವಾ ಪರಂಜ್ಯೋತಿ ಧರೆಗೆ ದೊಡ್ಡವರ
ಕಣ್ಣಿಂದ ನೋಡಿಬುಟ್ಬುರು ಕಟುಗರ ಸಂಗಯ್ಯ

ಇವನ ಕೈಲಿ ಮುಟ್ಟುಬಾರ್ದು ಅಂತ
ದೊಣ್ಣೆ ಒಳಗೆ ತಡೆದರಂತೆ ॥ ಸಿದ್ಧಯ್ಯ ॥

ಈ ಕೊಳಕ ಜಂಗುಮನಾ
ಕೈಲಿ ಮುಟ್ಟುಬುಟ್ಟರೇ
ಇವನಲ್ಲಿರ್ತಕಂತಹ ಕೀವು ರಗುತವೆಲ್ಲಾ ನನ ಕೈಗಾಗುಬುಡ್ತದೆ

ಇವನಲ್ಲಿರ್ತಾಕಂತಹ ಕುಷ್ಠರೋಗಾ
ನನಗು ಬಂದು ಬುಡುತ್ತದೇ
ಈ ಕುಷ್ಠರೋಗ ಅನತಕಂತಹದ್ದು ಬಾಳ ಕೆಟ್ಟದ್ದು
ಇಂತಹ ಕೆಟ್ಟರೋಗಿ ನಮ ಕಲ್ಯಾಣಕೆ ಬರುಬಹುದಾ
ಈ ಕೆಟ್ಟರೋಗಿ ನಮ್ಮ
ಆದಿ ಕಲ್ಯಾಣದ ಮಟಮನಿಗೆ ಬರುಬಹುದಾ
ಎನುತೇಳಿಬುಟ್ಟು ಕಟುಗರ ಸಂಗಯ್ಯ
ಆ ಜಗತ್ತು ಗುರು ಪರಂಜ್ಯೋತಿಗೇಳುತವರೇ
ಏನಯ್ಯ ಕುಷ್ಠರೋಗಿ
ಈಗಲೀಗಾ ಮಾತುಕತೆ ಒಂದೂ ಇಲ್ಲದೇ
ಹೋಗುವಂತಹ ಜಂಗುಮರ ಮಧ್ಯದಲ್ಲಿ
ನೆಟ್ಟಗೆ ಬಂದು ಬುಟ್ಟಿಯಲ್ಲ
ನಿನ್ನ ಏನಾರೂ ಆಗಿ ಕಲ್ಯಾಣ ಪಟ್ಟಣಕೆ
ಬಿಟ್ಟು ಬಿಟ್ಟಿದುರೇ
ಲಕುಷು ಕೋಟಿ ಆಗಾಲಿಗಾ ಜಂಗುಮರೆಲ್ಲಾ
ಅನ್ನ ಆರಾದಿಗಳ ಊಟ ಮಾಡುತವರೇ
ಅಷ್ಟು ಕೋಟಿ ಜಂಗುಮರೆಲ್ಲಾ ಅನ್ನಾ ಆರಾಧಿಗಳ ಬುಟುಬಿಟ್ಟಿ
ಕಲ್ಯಾಣ ಬುಟ್ಟು ಕಡದು ಹೊರ್ಟೇಹೋಗು ಬುಡುತಿದ್ರು

ನೀ ಕುಷ್ಟು ರೋಗಿ ಜಂಗುಮ ನಮ್ಮ
ಕ್ವಾಟೇ ಒಳಗೆ ಹೋಗಬ್ಯಾಡ ॥ ಸಿದ್ಧಯ್ಯ ॥

ನೀನು ಕುಷ್ಠ ರೋಗಿ ಎನ್ನುವನು
ನೀ ಕಲ್ಯಾಣದ ಕ್ವಾಟೇಗೆ
ನೀ ಕಾಲನೆ ಇಡುಬ್ಯಾಡ
ಈ ಕಡೆಯ ಬಾಗಲ ಒಳಗೆ
ಇಲ್ಲೆ ಕೂತುಕೋಬುಡು
ನಾನು ಬಸವಣ್ಣನಿಗೆ ಹೇಳಿ ನಿನಗೆ
ಅನ್ನ ತರಿಸಿ ಕೊಡುತೇನೆ ॥ ಸಿದ್ಧಯ್ಯ ॥

ಈಗಲೀಗಾ ಇಲ್ಲೇ ಕೂತುಕೊಬುಡು ಜಂಗುಮಾ
ಈಗಲೀಗಾ ನಿನಗೆ ಅನ್ನ ತರಿಸಿ
ಊಟಕೆ ಬಡಿಸ್ತಿನಿ
ಕಲ್ಯಾಣದ ಒಳಗಡೆ ಮಾತ್ರ ಹೋಗುಬ್ಯಾಡ ಅನುತೇಳಿ

ಅವನು ಚಕ್ರುದ ದೊಣ್ಣೆ ಒಳಗೆ
ನೂಕಿ ಅವರ ತಡೆದ ಕಂದ ॥ ಸಿದ್ಧಯ್ಯ ॥

ಚಕ್ರುದೊಣ್ಣೆ ಒಳಗೆ ತಡೆಕಂಡುರು
ತಡೆದಂತಹ ಕಟುಗರ ಸಂಗ್ಯೆನ ಮಕವ ಕಣ್ಣಿಂದ ನೋಡಿದುರು
ಜಗಂಜ್ಯೋತಿ ಧರೆಗೆ ದೊಡ್ಡಯ್ಯ
ಏನಪ್ಪ ಕಟುಗರ ಸಂಗಯ್ಯ
ಅನ್ನ ಉಂಡು ಆರು ದಿವಸವಾಯ್ತು ಕಣಪ್ಪ
ಕಣ್ಣಿಗೆ ನಿದುರೆ ಮಾಡಿ ಮೂರು ದಿವಸ ತುಂಬುಡ್ತು ಕಂದಾ
ಅಸುದು ಅಣ್ಣಾಗಿ ದಣುದು ದಾವಾಗಿ
ಅದೇ ಕಲ್ಯಾಣದ ಪಟ್ಟಣದಲ್ಲಿ
ನಿಚ್ಚಬೋಜಣೆ ಒಡುಸ್ತುರಂತೆ
ಅಸ್ತು ಬರುವಂತಹ ಜಂಗಮರಿಗೆ
ಅನ್ನದಾನ ಕೊಡುತಾರಂತೆ ಅನುತೇಳಿ
ಕಲ್ಯಾಣದಿಂದಾಚೆ ದ್ವಾರಬಾಗಲಿನಲಿ
ಎಲ್ಲಾ ಶರಣರು ಮಾತಾಡ್ತಾ ಇದ್ರು ಕಣಪ್ಪ
ಶರಣರಾಡಿದಂತಹ ಮಾತು ಕೇಳಿ ಕಂದಾ
ಬಸವಣ್ಣನವರ ಮಠಮನೆಯೊಳಗೆ ಕಂದಾ
ಅನ್ನದಾನ ದೊರೀತದೆ ಅಂತಹೇಳಿ
ಇಂತಹ ಕೊಳಕ ಜಂಗಮರಿಗೆ ಅನ್ನ ಕೊಟ್ಟುರೇ
ಬಸವಣ್ಣನವರಿಗೆ ಪುಣ್ಯ ಬರ್‍ತದೆ ಅಮತ ಏಳಿಬುಟ್ಟು

ಹಸುವನ್ನೇ ತಡಿಯಲಾರದೇ
ನಾ ಬಂದಿವ್ನಿ ಕಣಪ್ಪ
ನನ್ನ ಒಳಗಡೆ ಬುಟ್ಟುರೇ ನಿನಗೆ
ಬಾಳ ಧರ್ಮ ಬರುತಾದೇ ॥ ಸಿದ್ಧಯ್ಯ ॥

ಒಳಗಡೆ ಬುಟ್ಟರೇ
ಬಾಳ ಧರ್ಮ ಬರ್‍ತಾದೆ ಕಣಪ್ಪ
ಕಟುಗರ ಸಂಗಯ್ಯ
ಈಗಲೀಗಾ ಕಲ್ಯಾಣದ ಒಳಗಡೇ ಕಂದಾ
ದಾರಿ ಬುಟುಕೊಡು ಕಲ್ಯಾಣಕೆ ಹೊರ್‍ಪು ಹೋಗ್ತಿನಿ
ತಡದು ನಿಲ್ಲಿಸಿ ಕಂಡ್ರೆ
ಇವತ್ತು ಕಲ್ಯಾಣದಲ್ಲಿ ನನಗೆ ಅನ್ನ ಸಿಕ್ಕದಂಗಾಯ್ತದೆ ಕಂದಾ
ನಿನ್ಗೆ ಅನ್ನ ಕೊಟ್ಟು ಕಾಪಾಡ್ಡಂತಹ ಫಲ ಬರ್‍ತಾದೆ ಕಂದಾ
ಕಲ್ಯಾಣದ ಒಳಗಡೆ ನನ್ನ ಬುಟ್ಟುಬುಡು ಕಂದಾ ಬುಟ್ಟುಬುಡು

ಅಯ್ಯಾ ಕಟುಗರ ಸಂಗ್ಯೆನಾ ಮುಂದೇ
ಅವರು ನಿಂತು ಮಾತೊಂದಾಡುತಾರೆ ॥ ಸಿದ್ಧಯ್ಯ ॥

ನೋಡಪ್ಪ ಬಸವಣ್ಣನವರು
ಕೊಳಕು ಜಂಗುಮರ ಬುಡುಬ್ಯಾಡ ಅಂತ್ಹೇಳಿ
ಒಂದೆ ಮಾತು ಕಟುಗರ ಸಂಗ್ಯನಿಗೆ ಹೇಳಿರೋದ್ರಿಂದಾ
ಈ ಕಟುಗರ ಸಂಗ್ಯೆಯ ತಡಕಂಡ್ರು
ತಡಕಂಡಂತಹಾ ಕಾಲದಲ್ಲಿ ಪರಂಜ್ಯೋತಿ ಧರೆಗೆ ದೊಡ್ಡವರು
ಅನ್ನಕ್ಕಾಗಿ ಕಟುಗರ ಸಂಗ್ಯೆನ ಜೊತೆ ಒಳಗೆ ಮೂರು ಮಾತಾಡಿದ್ರು
ಅಡ್ಡಾ ಮಾತು ಆಗಲೀಗ ಮರತು ಗುರುದೇವಾ
ಕಟುಗರ ಸಂಗಯ್ನೊ
ಧರ್ಮಾನು ನೋಡ್ಲಿಲ್ಲಾ ಕರ್ಮನು ನೋಡ್ಲಿಲ್ಲಾ
ಧರೆಗೆ ದೊಡ್ಡವರು ಪಾಪದ ಮಾತಾಡಿದ್ರೋ
ಪುಣ್ಯದ ಮಾತಾಡಿದ್ರೋ ಅನ್ನಾದೇ ತಿಳಿನಿಲ್ಲ
ಕಟುಗರ ಸಂಗಯ್ಯ ಏನಂತ ಮಾತಾಡ್ತಾನೆ ಅಂದರೆ

ಏನಯ್ಯ ಜಂಗಮ
ಕ್ವಾಟೆಗೆ ನಾ ಬಿಡುವೋದಿಲ್ಲ ॥ ಸಿದ್ಧಯ್ಯ ॥

ಅಯ್ಯಾ ಉಣ್ಣವರು ಜಂಗುಮರು
ಊಟವನೆ ಮಾಡುತಾರೆ
ಅಯ್ಯ ಹೋಗುವ ಜಂಗುಮರು
ಕಲ್ಯಾಣದಿಂದ ಹೋಗುತ್ತಾರೆ
ಅಯ್ಯಾ ನಿನ್ನನೇ ನೋಡಿದಾರೆ
ಅವರು ಅನ್ನ ಊಟ ಮಾಡಾದಿಲ್ಲ ॥ ಸಿದ್ಧಯ್ಯ ॥

ಅಯ್ಯಾ ನಿನ್ನ ನೋಡಿದರೆ
ಕೇಳಿ ಜಂಗುಮರೆ
ಅನ್ನವ ಉಣ್ಣವರು
ಅನ್ನಾ ಆರಾದಿಗಳ
ಅವರು ಊಟಮಾಡುವುದಿಲ್ಲಾ
ನಾಳೆ ಭೋಜಣಕೆ ಶರಣರು
ಒಬ್ಬರು ಬರುವುದಿಲ್ಲಾ
ಈ ಕ್ವಳಕ ಜಂಗುಮರ ಮುಖವಾ
ನಾವಾಗೆ ನೋಡೋದಿಲ್ಲಾ ॥ ಸಿದ್ಧಯ್ಯ ॥

ಇಂತಹ ಕ್ವಾಳಕ ಜಂಗುಮರಾ
ಮಕವನ್ನೆ ನಾವು
ಎಂದೆಂದೂ ನಾವು

ನೋಡದಿಲ್ಲ ಜಂಗುಮರೆ
ನಿಮ್ಮ ಕುಷ್ಠರೋಗಿಗಳ
ನಾನೆಲ್ಲೂ ಕಾಣನಿಲ್ಲ ॥ ಸಿದ್ಧಯ್ಯ ॥

ಕೇಳಯ್ಯ ಜಂಗುಮರೇ
ನಿನ್ನಂತಹ ಕೊಳಕು ಜಂಗುಮರು
ಅನ್ನಕ್ಕೆ ಬಂದವರು ನಮ್ಮ ಕಲ್ಯಾಣ ಕಟ್ಟುದಾಗಲಿಂದ ಇಲ್ಲಾ
ನಿನ್ನಂತಹ ಕುಷ್ಠರೋಗಿಗಳ ನಾನು
ಆದಿಕಲ್ಯಾಣದಲಿ ಎಲ್ಲೂ ನೋಡಲಿಲ್ಲಾ
ಇಂತಹ ಕುಷ್ಠರೋಗಿಗಳು ಬಂದ ಕಾಲದಲ್ಲಿ
ಕಲ್ಯಾಣ ಪಟ್ಟಣಕ್ಕೆ
ಕಡೆ ಬಾಗುಲಿಗೂ ನಾವು ಸೇರಿಸಬಾರ್ದಾಗಿತ್ತು
ಈ ಕಲ್ಯಾಣದಾ ಕ್ವಾಟೆ ಬಾಕುಲಿಗೆ ಬಂದು ಬುಟ್ಟಿದ್ದಿಯೇ
ನಮ್ಮ ಬಸವಣ್ಣನವರು ಪ್ರತಿ ಕಾಲದಲ್ಲಿಯೇ
ಅನ್ನಾದಾನ ಕೊಟ್ಟು ಪುಣ್ಯ ಪಡಕತ್ತವರೆ
ಅಂತಹ ಪಟ್ಟಣಕ್ಕೆ ನೀನು ಬಂದಿರುವುದಿರಿಂದ
ನಿನ್ನ ಹಾಗೆ ಮಾತ್ರ ಕಳುವುದಿಲ್ಲಾ
ಕ್ವಾಟೆ ಒಳಗೆ ಬುಡಾದಿಲ್ಲಾ

ಈ ಬಾಗಲಲ್ಲೆ ಹಾಳೆ ಕೊಟ್ಟು
ಅನ್ನ ನಿನಗೆ ಕೊಡುಸುತೀವಿ ॥ ಸಿದ್ಧಯ್ಯ ॥
ಬಾಗಲಲ್ಲೆ ಹಾಳೆ ಕೊಟ್ಟು ಇಲ್ಲಿಗೆ ಅನ್ನ ತರಿಸಿ
ನಿನಗೆ ನನ್ನಿಂದೆ ಊಟಕ್ಕೆ ಬಡುಸ್ತಿನಿ
ನನ ಮುಂಭಾಗದಲಿ ನಿಂತಿರುಬ್ಯಾಡಾ
ನೋಡು ಆಚೆಕಡೆ ಕ್ವಾಟೆ ಬಾಕುಲಿಗೆ ಹೋಗಿ
ಆ ಬಾಗಲಲಿ ಕೂತುಕೋ
ಈಗಲೀಗಾ ನನ್ನ ಕಡೆ
ಶರಣರೇನಾದ್ರು ಬಂದಿದ್ದಾದರೆ
ಇದೆ ಗಳಿಗೆ ಒಳಗೆ ಅನ್ನ ತರಿಸಿ ಊಟಕ್ಕೆ ಬಡುಸ್ತಿನಿ
ಹೋಗಲ್ಲಿ ಕೂತ್ಕೊ ಅಂತಹೇಳಿ
ನೋಡಪ್ಪ ಕಟಗೇರ ಸಂಗಯ್ಯ
ನಾನು ಹೇಳಿದಂತಹ ಸ್ಥಳಕೆ ಹೋಗು
ಹೊರಟು ಹೋಗಯ್ಯ ಅಂತ ಹೇಳಿ

ಹಿಡಿದಿರುವ ದೊಣ್ಣೆವಳಗೆ
ನನ್ನ ದೇವುರನ್ನೆ ತಳ್ಳುತಾನೆ ॥ ಸಿದ್ಧಯ್ಯ ॥

ಗುರುವೇ ಸಂಗಯ್ಯನ ಮಾತಾ
ಕೇಳಿ ನನ್ನಪ್ಪ
ಧರೆಗೆ ದೊಡ್ಡವರು
ಮಂಟೇದ ಲಿಂಗಯ್ಯ
ಅಯ್ಯಾ ಉತ್ತುರು ದೇಸದಲ್ಲಿ
ನೆನಕಂಡ ಮಾತು
ಇದೆ ಕಲ್ಯಾಣದಲ್ಲಿ
ನನಗೆ ಅರುವಾಯಿತೆಂದರಲ್ಲ ॥ ಸಿದ್ಧಯ್ಯ ॥

ಏನಪ್ಪ ಕಟುಗರ ಸಂಗಯ್ಯ
ಇಂತ ವಾರ್ತೆ ಇಂತಾ ಮಾತು
ನಿನಗೆ ಹೇಳುದವರ್‍ಯಾರು
ಕ್ವಾಟೇ ಬಾಗಲಲ್ಲಿ
ನನ್ನ ತಡ್ಕೊ ಅಂತ ಹೇಳಿದವರ್‍ಯಾರು
ಎಲ್ಲಾ ಶರಣಮಾತ್ಮರ ಕಲ್ಯಾಣಕೆ ಬುಡ್ತಿಯಲ್ಲಾ
ನನ್ನ ಯಾತುಕೆ ಬುಡದಿಲ್ಲಾ ಕಂದಾ ಎಂದುರು
ಜಂಗುಮರೇ
ನಮ್ಮ ಬಸುವಣ್ಣವ್ರು
ಈಗ ತಾನೆ ಬಂದು ನಮಗೆ
ಏನಂತ ಆಗಣೇ ಮಾಡವರೇ ಗೊತ್ತಾ
ಒಳ್ಳೊಳ್ಳೆ ಶುಚಿಯಾದಂತಹ ಜಂಗುಮುರು ಬಂದುರೆ
ಮೊದಲನೆ ಊಟಕ್ಕೆ ಬುಡು
ಕಷ್ಟ ಉಳ್ಳಾದವರು ಕಾಯಿಲೇ ಉಳ್ಳಾದವರು
ರೋಗ ಉಳ್ಳಾದವ್ರು ಏನಾದ್ರು ಬಂದರೇ
ಇಲ್ಲೆ ತಡ್ದು ನಿಲ್ಲಿಸಿಕೊ
ಒಳ್ಳೆ ಜಂಗುಮುರಾ ಊಟ ಮೊದಲು
ಕೆಟ್ಟ ಜಂಗುಮುರಾ ಊಟ ಎರಡನೇ ಊಟ
ಈ ರೀತಿ ಒಳಗೆ ಕಲ್ಯಾಣದ ಬಾಗಲಿಂದ
ಒಳಗಡೆ ಬುಡು ಅಂತ ಹೇಳಿ
ಬಸವಣ್ಣನವರು ಆಗಣೇ ಮಾಡಾವರೇ

ನನ್ನ ಗರುವಿನಾ ಮಾತಾ ಮೀರಿ
ಕ್ವಾಟೆಗೆ ನಾ ಬಿಡುವುದಿಲ್ಲ ॥ ಸಿದ್ಧಯ್ಯ ॥

ಗುರುವಿನಾಗಣೇ ಮೀರಿ
ಕ್ವಾಟೇ ಒಳಗಡೆ ನಾನು ಬುಡುವುದಿಲ್ಲ ಎಂದುರು ಕಟುಗರ ಸಂಗಯ್ಯ

ಆಗ ಪರಂಜ್ಯೋತಿಯವರು
ಕಟುಗರ ಸಂಗಯ್ಯನಾ ಮುಖನೋಡಿಬಿಟ್ಟು
ಆ ಸಂಗ್ಯನ ಜೊತೆಒಳಗೆ ಮಾತಾಡ್ತಾ ಅವರೇ ನೋಡಿ
ಎನಪ್ಪ ಕಟುಗರ ಸಂಗಯ್ಯ ?
ಲಕುಶ ಕೋಟಿ ಜಂಗುಮರಿಗೆ ಬಸವಣ್ಣ
ಅನ್ನ ಇಕ್ಕಿ ಪುಣ್ಯ ಪಡಿಬಹುದು
ಅನ್ನಾಯದ ಜಂಗುಮರು ಅಂತೇಳಿ
ನನ್ನ ಕಡೇ ಬಾಗುಲಲ್ಲಿ ತಡೆದು ನಿಲ್ಲಿಸಬ್ಯಾಡಾ

ನನ್ನ ತಡೆದರೆ ನಿನಗೆ
ಬಾಳ ಕರ್ಮ ಬರುವುತಾದೆ ॥ ಸಿದ್ಧಯ್ಯ ॥

ನಿನಗೆ ಬಾಳ ಕರ್ಮವು ಕಂದಾ
ಬರುತದೆ ಸಂಗಯ್ಯ
ನಿಮ್ಮ ಬಸವಣ್ಣನಿಗೆ ಕಂದಾ
ಕಷ್ಟ ತಪ್ಪೋದಿಲ್ಲ
ನನ್ನ ತಡೆಯದೇ ಕಂದಾ ನನ್ನ
ಕ್ವಾಟೆಗೆ ಬುಟ್ಟು ಬುಡಪ್ಪ ॥ ಸಿದ್ಧಯ್ಯ ॥

ಹೋಗಾ ಜಂಗುಮರು ಹೋಯ್ತಾ ಅವರೇ
ಬರುವಂತ ಜಂಗುಮರು ಬರ್ತಾ ಅವರೇ
ಈ ಜಂಗುಮನದೇ ಒಂದು ಹರಟೆ ಮಾತಾಯ್ತಲ್ಲ
ಹೋಗು ಅಂದರೆ ನಿನಗೆ ಧರ್ಮ ಬರ್ತಾದೆ ಪುಣ್ಯ ಬರ್ತಾದೇ
ಕ್ವಾಟೆಗೆ ಬುಡು ಅಂದು ಕೇಳ್ತಾನೆ
ಹೊಗಾಬ್ಯಾಡ ಕಣಯ್ಯ ಅಂದರೆ
ನಿಮ್ಮ ಬಸವಣ್ಣನಿಗೂ ಕರ್ಮ ಬಂದು ಬುಡ್ತದೆ ಎಂದು ಹೇಳ್ತಾ ಇದ್ದಾನಲ್ಲ
ಇವನು ಯಂತಾ ಆಂಕಾರಗೆಟ್ಟ ರೋಗಿ ಆಗಿರುಬಹುದು
ಇಂತಹ ರೋಗಿಷ್ಠನಿಗೆ ಕ್ವಾಟೆಗೆ ಬುಡ್ಲೆ ಬಾರ್ದು ಅಂತ್ಹೇಳಿ
ಕಟುಗರ ಸಂಗ್ಯೆಯ್ಯನಿಗೆ ಹಟವಾಯ್ತು
ಹಟ ಮಾಡುಕಂಡು
ಜಗತ್ತು ಗುರು ಧರೆಗೆ ದೊಡ್ಡವರ
ಮುಖ ಕಣ್ಣಾರೇ ನೋಡಿಕಂಡು

ಏ ಜಂಗುಮ
ಆಡುದಾ ಮಾತಾ ಕೇಳಿಕಂಡು
ಆ ಕಡೆ ಬಾಗುಲಲ್ಲಿ ಕೂತುಕಂಡು

ಅನ್ನ ತರಿಸಿಕೊ ಊಟಾ ಮಾಡ್ಕಂಡು ಹೋಗೊದಾದ್ರೆ ಹೋಗು
ಹೆಚ್ಚು ಕಮ್ಮಿ ಮಾತನಾರೇ
ಇಲ್ಲೆ ಆಡ್ತಾ ನಿಂತುಕಂಡುದ್ದೇ ಆದ್ರೆ
ನಾನು ಇಡಿದಿರುವಂತ ದೊಣ್ಣೇ ಒಳಗೆ
ನಿನ್ನ ಎಕ್ಕತ್ತಿನಾ ಮ್ಯಾಲೆ
ಮೂರು ಏಟು ಹೊಡದುದ್ದೆ ಉಂಟಾದರೇ

ನೀನು ಭೂಮಿ ಮ್ಯಾಲೆ ಬಿಳಾಬೇಕು
ಭಕ್ಕನೇ ರಕುತಾ ಕಕ್ಕಬೇಕು ॥ ಸಿದ್ಧಯ್ಯ ॥

ಅಯ್ಯಾ ಭೂಮಿಗೆ ಬೀಳಾಬೇಕು
ನೀ ರಕುತ ಕಕ್ಕಲೇಬೇಕು
ನೀ ಪ್ರಾಣ ಬಿಡಲೇ ಬೇಕು
ಅಯ್ಯ ಅನ್ನ ಬೇಕಾದುರೇ
ನೀ ಅಲ್ಲಿಗೋಗಿ ಕೂತುಕೋ
ಬ್ಯಾಡದೆ ಹೋದಾರೆ
ನಮ್ಮ ಕಲ್ಯಾಣದಿಂದ ಹೊರಟೋಗು
ನೀನು ಹೆಚ್ಚು ಕಮ್ಮಿ ಮಾತಾಡಬ್ಯಾಡ
ಪೆಟ್ಟಾನಾದರೇ ತಿನ್ನಬ್ಯಾಡ ॥ ಸಿದ್ಧಯ್ಯ ॥

ಸಂಗೈಯ್ಯನವರ ಮಾತು ಕೇಳಿ
ಏನಪ್ಪ ನನ ಕಂದಾ ಕಟುಗರ ಸಂಗಯ್ಯ
ಬಸವಣ್ಣನವರ ಮನೆಗೆ
ಅನ್ನಕ್ಕಾಗಿ ಬರೋವತ್ತಿಗೆ
ಕ್ವಾಟೆ ಬಾಗಲ ಕಾದಿರ್ತ್ತುಕಂತಹ ನೀನು
ನನ್ನ ಎಕ್ಕತ್ತಿನ ಮ್ಯಾಲೆ ಹೊಡೆದು ರಕುತ ಕಕ್ಕಾಬೇಕು
ಪ್ರಾಣ ಬುಡಾಬೇಕು ಅಂತ ಕೇಳ್ತಿಯಲ್ಲ
ಹೇ ಕಟುಗರ ಸಂಗಯ್ಯ
ಹೋಗುವಂತ ಶರಣ್ರು ಜೊತೆ ಒಳಗೆ
ಒಳಗಡೆ ನನ ಕಳುವು
ಕಳುವುದಿಲ್ಲ ಅಂತ ಹೇಳುದ್ದೆ ಉಂಟಾದುರೇ

ಬಸವಣ್ಣ ಹೆಚ್ಚಲ್ಲಾ
ನೀನು ನನಗೆ ಹೆಚ್ಚಲ್ಲಾ ॥ ಸಿದ್ಧಯ್ಯ ॥

ನಿನ್ನ ಬಸವಣ್ಣ ಎಂದರೇ
ನನಗೆ ಬಾಳ ಹೆಚ್ಚಲ್ಲ

ನೀನು ಎಂದರೇ
ನನಗೆ ಬಾಳ ಹೆಚ್ಚಲ್ಲ
ನೀನು ದಾರಿಬುಡು ನನ ಕಂದಾ
ಹೋಗುತೀನಿ ಎಂದಾರಲ್ಲಾ ॥ ಸಿದ್ಧಯ್ಯ ॥

ನೋಡಪ್ಪ ಬಸವಣ್ಣ ಹೆಚ್ಚಾಲ್ಲಾ
ನೀನು ನನಗೆ ಹೆಚ್ಚಲ್ಲ
ಒಳಗಡೆ ಬುಡು ಹೊಯ್ತಿನಿ ಎನ್ನುವಂತಹ ಮಾತು
ಈ ಕಟುಗರ ಸಂಗೈಯ್ಯನಿಗೆ ಗೊತ್ತಾಗಿಬುಡ್ತು
ನೋಡಿದೆಯಾ
ಅರುವತ್ತಾರು ಮಂದಿ ಜಂಗುಮರು
ಮೂವತ್ತುಮೂರು ಮಂದಿ ಮುನಿಗಳು
ಲಕುಶದಾ ಮ್ಯಾಲೆ ತೊಂಬತ್ತೇಳು ಕೋಟಿ ಶರಣು ಮಾತುಮರು
ಬಸುವಣ್ಣ ಹೆಚ್ಚಿನ ದೇವರು ಅಂತಹೇಳಿ
ಅಷ್ಟು ಕೋಟಿ ಜಂಗುಮರೆಲ್ಲಾ ಕೈ ಮುಗಿತವರೇ
ಈ ಕುಷ್ಠರೋಗಿ ಜಂಗುಮ ಬಂದು
ಬಸವಣ್ಣ ಹೆಚ್ಚಲ್ಲಾ
ನಿನಾದ್ರೆ ಹೆಚ್ಚಲ್ಲ
ನನ್ನರಮನೆಗೆ ದಾರಿ ಬುಡು ಅಂತ ಕೇಳಿ ಬುಟ್ನಾಲ್ಲ
ಇವನ ಅಹಂಕಾರ ಎಷ್ಟಾಗಿಬುಡ್ತು
ದ್ವಾರಣೆ ಎಷ್ಟಾಗಿಬುಡ್ತು ನೋಡಿದೆಯಾ ಅಂತ ಹೇಳೀ
ಕಟುಗರ ಸಂಗಯ್ಯ

ಅಯ್ಯಾ ಹಿಡಿದಿದ್ದ ದೊಣ್ಣೆ ಅವನು
ಭೂಮಿಗಾದರು ಮಡಗುತಾನೇ ॥ ಸಿದ್ಧಯ್ಯ ॥

ಹಿಡುದಿರುವಂತ ದೊಣ್ಣೆ ಭೂಮಿಗೆ ಮಡಗಿ
ಧರೆಗೆ ದೊಡ್ಡವರಾ
ಮುಂಗೈಯ ತೆಗೆದು ಎಡಗೈಲಿ ಇಡಕಂಡು
ಏನೋ ಜಂಗುಮ
ಏನಂತ ಹೇಳಿದೇ
ಬಸವಣ್ಣಾದುರೇ ಹೆಚ್ಚಲ್ಲ ನಿನಾದ್ರೆ ಹೆಚ್ಚಲ್ಲ
ಕ್ವಾಟೆಗೆ ಬುಡು ಅಂತ ಕೇಳಿದಿಯಾ
ನಿನ್ನ ಅಂಕಾರ ಎಷ್ಟಾಗಿ ಬುಡ್ತು ದ್ವಾರಣೆ ಎಷ್ಟಾಗಿ ಬುಡ್ತು ಅಂತ ಹೇಳಿ
ಹಲ್ಲು ಕಡಕಂಡು ಕಟುಗರ ಸಂಗಯ್ಯ
ಬಾಗಲಿಗೆ ಜಗಂಜ್ಯೋತಿ ಪರಂಜ್ಯೋತಿಯವರ

ಮುಖ ನೋಡುವಾಗ
ಆ ಬಸವಣ್ಣನವರು ನೀಲಮ್ಮನವರು ನೋಡಪ್ಪ
ಕಲ್ಯಾಣದ ಕೊಳದಲ್ಲಿ ಸ್ನಾನ ಮಾಡುತಾವರೇ
ಕಲ್ಯಾಣ ಪಟ್ಟಣದಾ
ಕಲ್ಯಾಣಿ ಕೊಳಕೆ ಬಂದು ಆಗಲೀಗಾ ಆದಿ ಬಸವಣ್ಣನವರು
ಸ್ನಾನ ಮಡಿ ಮಾಡಿಕಂಡು
ಹೊಟ್ಟೆ ಒಳಗೆ ಲಿಂಗ ಕಳೆದು
ಅಂಗೈನಾ ಮೇಲೆ ಲಿಂಗ ಪೂಜಿಸ್ಕಂಡು
ಲಿಂಗಕ್ಕೆ ನೈವಾದನೆ ಮಾಡುವಾಗ
ಅವರು ಶಿವಾ ಶಿವಾ ಅಂತ ಏಳಿ
ಕೈ ಎತ್ತಿ ಮುಗಿಯುವ ವೇಳೆಗೆ

ಈ ಕಟುಗರ ಸಂಗಯ್ಯ
ಧರೆಗೆ ದೊಡ್ಡವರ
ಎಕ್ಕತ್ತಿನಾ ಮೇಲೆ ಗುರುವೇ
ಮೂರು ಗುದ್ದ ಗುದ್ದಿದನಂತೆ ॥ ಸಿದ್ಧಯ್ಯ ॥

ಅಯ್ಯಾ ಬಸವಣ್ಣ ಗುರುವು
ನೀಲಮ್ಮನವರು
ಕೈ ಎತ್ತಿ ದೇವಾ
ಮುಗಿಯುವಂತ ಕಾಲದಲ್ಲಿ
ಕಟುಗರ ಸಂಗಯ್ಯ
ಮಂಟೇದಾ ಲಿಂಗಯ್ಯನಿಗೆ
ಮೂರೇಟ ಹೊಡೆದಾಗ
ಅಯ್ಯಾ ಬಸುವಣ್ಣನ ಗುರುವೇ
ಎಕ್ಕತ್ತಿನ ಮೇಲೆ
ಎರಡು ಗುದ್ದು ಬೀಳುತು
ಅವರ ಮಡದಿ ನೀಲಮ್ಮನಿಗೆ
ಒಂದು ಗುದ್ದು ಬಿದ್ದೋಯ್ತು
ಇಲ್ಲಿ ನಾಲ್ಗೆ ಇಲ್ಲದ ಗಂಟೇ
ನಾದು ಶಬುತಾ ॥ ಸುವ್ವಾ ಬಾ ॥
ಗುರುವೇ ನಾದ ಇಲ್ಲುದು ಗಂಟೇ
ಧಣಿ ದಣಿನೇ ದೇವಾ
ಲಾದು ಸಬುತಾವಾಯ್ತಾದೇ
ಅಲ್ಲಿ ಕುಡುವಿಲ್ಲಾದ ನಾಗರೀ
ನುಡಿದಾವೋ ॥ ಸುವ್ವ ಬಾ ॥

ಇಲ್ಲಿ ಧರೆಗೆ ದೊಡ್ಡವರಿಗೆ ಹೊಡೆದಂತ ಏಟು
ಕಟುಗರ ಸಂಗಯ್ಯ
ಧರೆಗೆ ದೊಡ್ಡವರಿಗೆ ಬೀಳ್ಳಿಲ್ಲಾ
ಸ್ನಾನ ಮಡಿ ಮಾಡ್ತಿದ್ದರಲ್ಲಾ ಬಸವಣ್ಣ
ಬಸುವಣ್ಣನವರಿಗೆ ಎರಡು ಗುದ್ದು
ನೀಲಮ್ಮನಿಗೆ ಒಂದು ಗುದ್ದು ಬಿದ್ದಂತಹ ಕಾಲದಲ್ಲಿ
ದೂಪದುಂಡಿಗೆ ಓಡಕಂಡು ಬಸವಣ್ಣ
ಶಿವಶಿವಾ ಅಮೃತ ಕೈ ಮುಗಿತಿದ್ದವರು
ಧೂಪದುಂಡಿಗೆ ಭೂಮಿಗೆ ಬಿಟ್ಟುಬಿಟ್ಟು
ರಪ್ಪನೆ ಬಿದ್ರು, ಯಾತಕ್ಕೆ? ಭೂಮಿಗೆ
ನೀಲಮ್ಮನವರಾ
ಬೆನ್ನಿನಾ ಮೇಲೆ ಒಂದು ಗುದ್ದು ಗುದ್ದಿದೇಟಿಗೆ
ಅಶ್ ಅಂತ ಭೂಮಿಗೆ ಕೂತಕಂಡ್ರು
ಅವರು ಗಂಡ ಹೆಂಡ್ತಿರು ಮಾತಾಡ್ತಾವರೇ
ಯಾಕೆ ಸ್ವಾಮಿ?
ನಾನೇನು ತಪ್ಪು ಮಾಡ್ದೇ
ನನಗ್ಯಾತಕೆ ಗುದ್ದಿಬುಟ್ರಿ ಅಂತ ನೀಲಮ್ಮ ಕೇಳ್ತಾರೆ
ನೀಲಮ್ಮ, ನಾ ಕಣ್ಣು ಮುಚ್ಚಿಕಂಡು
ಶಿವನಾ ಜ್ಞಾನ ಮಾಡುವಾಗ
ನನಗೆ ಎರಡೇಟು ನೀನು ಗುದ್ದುಬಿಟ್ಟು
ನನಗುದ್ದಿದಿಯಾ ಅಂತ ಹೇಳಿ

ಇವರು ಸತಿಪತಿಗಳು
ಇವರೇ ಮಾತಾಡುತಾರೆ ॥ ಸಿದ್ಧಯ್ಯ ॥

ಇವರು ಸತಿ ಪತಿಗಳು ದೇವಾ ಇಬ್ಬರೂ ಮಾತಾಡಿಕಂಡು ಸ್ವಾಮಿ
ನಾನು ಮುಕ್ಕಣ್ಣ ಮಲ್ಲಯ್ಯ
ಪರಮೇಶ್ವರನಾಣೆಗೂ ಕೂಡಾ
ನಾನು ಮಾತ್ರ ನಿಮ್ಗೇ ಹೊಡಿನಿಲ್ಲಪ್ಪ
ಏ ನೀಲಮ್ಮ
ನಾನೂ ಕೂಡಾ
ಲಿಂಗದಾ ಸಾಕ್ಷಿಯಾಗಿ ಒಂದೇಟು ನಿನಗೆ ಹೊಡೆದಿಲ್ಲ
ಎನುತೇಳಿ
ಬಸುವಣ್ಣ ನೀಲಮ್ಮ ಇಬ್ಬುರೂ ಮಾತಾಡುತವರೇ
ಕಲ್ಯಾಣದ ಕಡೆ ಬಾಗಲಲಿ ಇತ್ತಲ್ಲ ಗಂಟೇ
ನಾಲಿಗಿಲ್ಲದ ಗಂಟೇ

ಧಣ ಧಣನೇ ಅಲ್ಲೆ ಸಬುದವಾಯ್ತು
ಕುಡುವಿಲ್ಲದ ನಾಗಾರಿ
ಧಿಮುಧಿಮನೆ ನುಡಿದೋಯ್ತು
ಕಲ್ಯಾಣದಲ್ಲಿ ಕತ್ತಿ ಉರಿತಿದ್ದಾ

ಹಗಲು ದೀವಿಗೆಗಳೆಲ್ಲಾ
ಪಟ್ಟನೇ ಕೆಟ್ಟೆಹೋಯ್ತು ॥ ಸಿದ್ಧಯ್ಯ ॥

ಅಯ್ಯಾ ಗುರುವೇ ಗುರುದೇವಾ
ಹಗಲುದೀವಿಗೆಗಳೆಲ್ಲಾ ಪಕ್ಕನೇ ಗುರುವೇ
ಕೆಟ್ಟೋಯ್ತೊ ನನ ಗುರುವು
ಕಲ್ಯಾಣ ಪಟ್ಟಣವೆಲ್ಲಾ
ಕಣ್ಣೀಗೆ ಕಾಣೋದಿಲ್ಲ ॥ ಸಿದ್ಧಯ್ಯ ॥

ಕಲ್ಯಾಣ ಪಟ್ಟಣಾ
ಬಸವಣ್ಣ ನೀಲಮ್ಮನ ಕಣ್ಣಿಗೆ ಗೋಚರವಾಗಲಿಲ್ಲ
ಈ ಕಲ್ಯಾಣದ ಕಡೆ ಬಾಗಲ ಗಂಟೇ ಮಾತ್ರ
ಧಣು ಧಣುನೇ ಸಬುದಾವಾಯ್ತಾ ಅದೇ
ಕುಡುವಿಲ್ಲಾದ ನಾಗರಿ ಸಬುತಾವಾಯ್ತಾ ಅದೆ
ಆಗಾ ಬಸುವಣ್ಣ ನೀಲಮ್ಮನವರು ಯೋಚುಣೆ ಮಾಡುತವುರೆ
ನೀಲಮ್ಮ ಕಡೆ ಕೈಲಾಸ ಬಾಗುಲಲಿ ಕಟ್ಟಿದ್ದುವಲ್ಲ
ನಾಲ್ಗಿಲ್ಲದ ಗಂಟೇ ಸಬುತವಾಯ್ತದೇ ನೋಡು
ಕಡುವಿಲ್ಲದ ನಗಾರಿ
ಧಿಮುಧಿಮುನೆ ಸಬುತಾ ಕೇಳಿಬರ್ತಾ ಅದೆ ಮಡದಿ

ಕಲ್ಯಾಣ ಪಟ್ಟಣಕೆ ನಾವೇ
ಹೆಚ್ಚಿನ ಶರಣ ಮಾತುಮರು ಅಂತ ಬಾಳಬಾರುದು
ನಮಗಿಂತ ಹೆಚ್ಚಿನ ಮುನಿಗಳು
ನಮ್ಮ ಆದಿ ಕಲ್ಯಾಣಕೆ ಬಂದಿರಬಹುದು
ಮೊದಲು ನಡಿ ಮಡದಿ ನಡಿ ಮಡದಿ ಅಂತೇಳಿ
ನೋಡಪ್ಪ ಅತ್ಲಿಂದಾ ಬಸುವಣ್ಣನವರು ನೀಲಮ್ಮನವರು
ಓಡೋಡಿ ಬರುತವರೇ
ಯಕ್ಕತ್ತಿನಾ ಮ್ಯಾಲೆ ಗುದ್ದಿಸಿಕಂಡು ಧರೆಗೆ ದೊಡ್ಡವರು
ಕಲ್ಯಾಣ ಬಿಟ್ಟು
ಬಸುವಣ್ಣನವರು ದೇವಾ ಬರುವ ದಾರಿ ಒಳಗೆ

ಇತ್ತಿಂದಾ ಪರಂಜ್ಯೋತಿ
ಮೆತ್ತ ಮೆತ್ತಗೆ ಬರುತಾರೆ ॥ ಸಿದ್ಧಯ್ಯ ॥

ಗುರುವೇ ಬರುವಂತ ದೇವಾ
ಧರೆಗೆ ದೊಡ್ಡವರಾ
ಬಸವಣ್ಣ ಗುರುವು
ಗುರ್ತುಸಲೇ ಇಲ್ಲ
ನೆಪ್ಪು ಕಾಣನಿಲ್ಲ ತಿಳೀಲಿಲ್ಲ
ಬರುವಂತ ನಿಲಮ್ಮನಾ
ಭಕುತಿಯನ್ನೆ ದೇವಾ
ನೋಡುಬೇಕು ಎಂತಾ
ಬಸುವಣ್ಣವರ ದುಡುವಾ
ನೋಡುಬೇಕು ಎಂತಾ
ನನ್ನ ಧರೆಗೆ ದೊಡ್ಡವರು
ಅವರು ಇಬ್ಬರಾ ಮಧ್ಯದ ಒಳಗೆ
ಇತ್ತಿಂದಾ ಬಂದಾರಲ್ಲಾ ॥ ಸಿದ್ಧಯ್ಯ ॥

ನೋಡಪ್ಪ
ಧರೆಗೆ ದೊಡ್ಡವರ ಮಹಿಮೆ ಮೈತುಗಾರ
ಆ ಬಸುವಣ್ಣ ನೀಲಮ್ಮಗೂ ಕೂಡ ತಿಳಿದಿಲ್ಲ
ಈಗಲೀಗಾ ಗುರುವು
ಇತ್ತಿಂದಾ ಬಸುವಣ್ಣ ಅತ್ತಿಂದಾ ಧರೆಗೆ ದೊಡ್ಡವರು ಬರುವಾಗ
ನೋಡಿ, ಕಟುಗರ ಸಂಗಯ್ಯನ
ಹೋಗಿ ನಾವು ಮೊದಲು ತಿಳಿಬೇಕು
ಕಲ್ಯಾಣದ ಕ್ವಾಟೆ ಬಾಗಲಲಿ
ಏನಾಗಿದಾದೋ ಗೊತ್ತಿಲ್ಲಾ ಅಂತ ಹೇಳಿ
ಬಸುವಣ್ಣ ಬಲಚೆರಿ
ನೀಲಮ್ಮ ಧರೆಗೆ ದೊಡ್ಡೋರ ಎಡಚೆರಿ ಕಡದೋದ್ರು
ಈ ಪರಂಜ್ಯೋತಿಯವುರು ಬಂದವರೆ ಎನ್ನುವುದು
ಎಳ್ಳೋಷ್ಟು ತಿಳೀಲಿಲ್ಲಾ
ಬಸುವಣ್ಣ ನೀಲಮ್ಮನವರು
ಕಲ್ಯಾಣದಲಿ ಏನೋ ನಡೆದು ಹೋಗಿರಬಹುದು
ವಾರ್ತೆ ಎಂದುಬುಟ್ಟು ಓದ್ತಾವರೇ
ಹೋಗಲಿ ಹೋಗಲಿ ಎನುತೇಳಿ
ಪರಂಜ್ಯೋತಿ ಪಾತಾಳ ಜ್ಯೋತಿಯವರು
ಹೋಗುವಂಥ ಬಸುವಣ್ಣ ನೀಲಮ್ಮನ ನೋಡುತ್ತಾ

ಧರೆಗೆ ದೊಡ್ಡವರು ಒಂದೊಂದೆಜ್ಜೆ ಒಂದೊಂದೆಜ್ಜೆ
ಇಟ್ಟುಕಂಡು ಬರುತಾವರೆ
ಕಟ್ಟುಗರ ಸಂಗೈನ ಬಳಿಗೆ ಬಂದು ಬಸವಣ್ಣ
ಏನಪ್ಪ ನನ್ನ ಕಂದಾ ಕಟ್ಟುಗರ ಸಂಗೈಯ್ಯ
ಈ ಕಲ್ಯಾಣ ದ್ವಾರಬಾಗುಲಲಿ ಏನೇನಾರೂ ಕೆಲಸ ಕಾರ್ಯಗಳು ಅದುವಪ್ಪ

ಸ್ವಾಮಿ
ಕಲ್ಯಾಣ ಕಡೆ ಬಾಗಲಲ್ಲಿ ಏನೂ ಕೆಲಸ ಕಾರ್ಯ ಆಗಿಲ್ಲ
ನಿಮ್ಮ ಮಾತಿನ ಪರಿಕಾರವಾಗಿ
ಬರುವಂತಹ ಜಂಗುಮರಲ್ಲಿ
ಒಳ್ಳೆವರ್‍ಯಾರು ಕೆಟ್ಟವರ್‍ಯಾರು ಎಂದು ಕಾದೇ ಇದ್ದೆ
ಒಳ್ಳೊಳ್ಳೆ ಜಂಗುಮರೇ ಇವತ್ತು ಬಂದಿರುವರು
ಎಲ್ಲಾರ್‍ನ್ನು ತಡೀದಂತೆ ಕ್ವಾಟೀಗೆ ಬುಟುಬುಟ್ಟೆ
ಒಬ್ಬನ್ನೆ ಒಬ್ಬ ಕುಷ್ಠರೋಗಿ ಬಂದುಬುಟ್ಟಿದ್ದ ಸ್ವಾಮಿ

ಕಜ್ಜೀ ಕೀವುವುಳ್ಳ ಕುಷ್ಟ ರೋಗಾ
ಕೈಯಿ ಚೋತ್ತ ಕಾಲು ಚೋತ್ತಾ
ಎಳುವಾದಿ ಜಂಗುಮ ಬಂದಿದಕ್ಕೆ
ಅಷ್ಟು ಕೋಡಿ ಜಂಗುಮರು ಊಟ ಮಾಡುತಾ ಅವುರೇ
ಕಲ್ಯಾಣಕೆ ನಾ ಬುಡೋದಿಲ್ಲಾ
ಈ ಕಡೆ ಬಾಗಲಲಿ ಅನ್ನ ತರಿಸಿ ಊಟಕೆ ಇಕ್ಕುತೀನಿ
ಇಲ್ಲೆ ಕೂತುಕೊ ಅಂತ ತಡೆದಿ
ನಾನಿಲ್ಲ ಕಣಪ್ಪ ಊಣ್ಣವರಂತೆ ಉಣ್ಣಬೇಕು
ವೀಳ್ಯ ಇಸುಕೊಳ್ಳವರಂತೆ ಇಸ್ಕೋ ಬೇಕು
ಜಂಗುಮರೊಂದಿಗೆ ಹೋಗಿ ಜಂಗುಮರೊಂದಿಗೆ ಬರುಬೇಕು ಅಂತ ಕೇಳ್ದ
ಏ ಜಂಗುಮ
ನಿನ್ನನೇ ಜಂಗುಮರು ಜೊತೇಲಿ ಬುಟ್ಟುಬುಟ್ರೆ
ಅನ್ನ ಉಣ್ಣವರು ಅನ್ನ ಊಟ ಮಾಡದಿಲ್ಲ ಕಣೋ
ಇವನು ಕಷ್ಠರೋಗಿ ಎಂದುಬುಟ್ಟು
ಅನ್ನ ಉಣ್ಣವರು ಬುಟುಬುಟ್ಟು ಹೋದ್ರೆ
ಎಲ್ಲಾರನ್ನ ನೀನು ಉಣ್ಣಾಕಾದಾದಾ
ಅದಾಗದಿಲ್ಲಾ ಕ್ವಾಟಗೆ ಮಾತ್ರ ಬುಡಾದಿಲ್ಲ
ಇಲ್ಲೇ ಕೂತ್ಕೊ ಅನ್ನ ಕೊಡುಸ್ತೀನಿ
ಉಣ್ಣು ಬೇಕು ಅಂದ್ರೆ ಇರು
ಬ್ಯಾಡ ಅಂದ್ರೆ ಹೊರ್‍ಟ್ಹೋಗು ಅಂತೇಳಿ
ನಾನಾಡಿದ ಮಾತ ಕೇಳಿ ಬುಟ್ಟು

ಹೇ ಇವೆಲ್ಲನೊವೆ ನಿನಗೆ ಆಗಣೇ ಇತ್ತು ಹೇಳಿದವರು ಯಾರಯ್ಯ
ಎಲ್ಲಾ ಜಂಗುಮರಂತೆ ನನ್ನ ಬುಟ್ಟುಬುಡು ಅಂತ ಹೇಳಿ
ಅಂಕಾರದ ಮಾತಾಡದ
ಆಡದ ಮಾತ ಕೇಳಿಬುಟ್ಟು ಗುರುವೇ
ಬಾಳಾ ಸಿಟ್ಟು ಬಾಳ ಕ್ವಾಪ ಬಂದೋಗಿ ಬುಡ್ತು

ಅಯ್ಯ ಬಂದಂತಹ ಕ್ವಾಪುಕೆ
ಮುಂಗೈಯ್ಯ ನಾನು
ಇಡಕಂಡು ನನ ಗುರುವು
ಅವನ ಯಕ್ಕತ್ತಿನ ಮೇಲೆ
ಮೂರು ಗುದ್ದು ಗುದ್ದಾ
ಗುದ್ದಿಬುಟ್ಟು ನನ್ನಪ್ಪಾ
ಅವನ ಮೂಡ್ಲಾಗಿ ತಳ್ಳಿ ಬುಟ್ಟೆ
ಅಲ್ಲಿ ಹೋಯ್ತಾ ಅವನೆ ಅಂದನಂತೆ ॥ ಸಿದ್ಧಯ್ಯ ॥

ಸ್ವಾಮಿ ಕ್ವಾಪ ತಡಕೊಳಕಾಗಲಿಲ್ಲಾ
ಅದಕಾಗಿ ಅವನ ಎಡಗೈ ಹಿಡಕಂಡು
ಗರಗರನೆ ಮುರು ಸುತ್ತು ತಿರುಗಿಬುಟ್ಟು
ಅವನ ಎಕ್ಕತ್ತಿನ ಮೇಲೆ ಮೂರೇ ಮೂರು ಗುದ್ದು ಗುದ್ದಿದೇ ನೋಡಿ
ಗುದ್ದಿಬುಟ್ಟು ಮೂಡ್ಲಾಗಿ ತಳ್ಳಿ ಬಟ್ಟೆ
ನೋಡಿಸ್ವಾಮಿ ನಾ ತಳ್ಳಿದೇಟಿಗೆ
ಇಂತ ಪೆಟ್ಟು ತಿಂದದ್ದು ಬ್ಯಾಡಾ
ಈ ಕಲ್ಯಾಣದ ಅನ್ನವೇ ನನಗೆ ಬ್ಯಾಡ ಅಂದುಬುಟ್ಟು
ಅಲ್ಲಿ ಹೊಯ್ತಾವನೆ ನೋಡಿ ಸ್ವಾಮಿ ಅಂದುರು
ಏನಪ್ಪ ಕಟುಗರ ಸಂಗಯ್ಯಾ
ಎಲ್ಲಿ ಹೊಯ್ತಾ ಇದಾರಪ್ಪ
ಯಾತಾವು ಹೊಯ್ತಿದಾರಪ್ಪ
ಎಲ್ಲಿ ಕಳುಹಿ ಬುಟ್ಟೆಯೋ ಕಂದಾ ಅಂತೇಳಿ
ದಿಕ್ಕು ದಿಕ್ಕನೇ ನೋಡುತವರೇ
ಯಾರು ? ಬಸುವಣ್ಣ ನೀಲಮ್ಮ
ಬಸುವಣ್ಣ ನೀಲಮ್ಮನ ಕಣ್ಣಿಗೆ
ಧರೆಗೆ ದೊಡ್ಡವರು ಗೋಚರವಿರಲಿಲ್ಲ
ಕಟುಗರ ಸಂಗೈನಾ ಕಣ್ಣಿಗೆ ಮಾತ್ರ ಗೋಚರವಾಯ್ತಿತ್ತು
ಸ್ವಾಮಿ
ನಮಗೇನು ಕಾಣ್ಣದಿಲ್ವಾ

ಅಲ್ಲೇ ಹೊಯ್ತಾವನೇ
ಇಲ್ಲಿ ಬನ್ನಿ ಅಂತಾನಲ್ಲ ॥ ಸಿದ್ಧಯ್ಯ ॥

ಗುರುವೇ ಅಲ್ಲೇ ಹೊಯ್ತಾವನೇ
ಇಲ್ಲಿ ನೋಡಿ ದೇವಾ
ಇಲ್ಲಿ ನೋಡಿ ನನ ಗುರುವೇ
ಅಲ್ಲಿ ನೋಡಿ ನನ್ನಪ್ಪಾ
ಹಾಗನುತಾನೆ ಸಂಗೈಯ್ಯ
ಅಯ್ಯ ಬಸುವಣ್ಣವರಾ ಕಣ್ಣಿಗೆ ಸ್ವಾಮಿ
ಗೋಚರವೇ ಆಗುನಿಲ್ಲಾ ॥ ಸಿದ್ಧಯ್ಯ ॥

ಬಸುವಣ್ಣನವರ ಕಣ್ಣಿಗೆ ಗೋಚರವಿಲ್ಲಾ
ನೀಲಮ್ಮನ ಕಣ್ಣಿಗೆ ಸ್ವಾಮಿ
ಗೋಚರವಾಗುನಿಲ್ಲ ಜಗತ್ತುಗುರು ಧರೆಗೆ ದೊಡ್ಡವರು
ಆಗ ಬಸುವಣ್ಣನವರ ಮಡದಿ ನೀಲಮ್ಮ ಹೇಳುತ್ತಾರೆ
ಸ್ವಾಮಿ,
ಸಂಗಯ್ಯನ ಕಣ್ಣಿಗೆ ಕಾಣುವಂತ ದೇವರು
ನಮ್ಮಿಬ್ಬರ ಕಣ್ಣಿಗೆ ಗೋಚರವಿಲ್ಲವಲ್ಲಪ್ಪ
ಒಬ್ಬ ತಂದೆಗೆ ನಾವು ಹುಟ್ಟಿ ಗುರುವು
ಒಬ್ಬ ತಾಯಿಗೆ ನಾವು ಬೆಳದು
ಈ ಕಲ್ಯಾಣ ಪಟ್ಟಣಕೆ
ಶಕ್ತುವಂತ ಶರಣು ಮಾತುಮರು ನಾವಾದರೆ
ನಮ್ಮ ಕಣ್ಣಿಗೆ ಗೋಚರವಿಲ್ಲದಂತಹ ಸ್ವಾಮಿ
ನಮಗೆ ಗೋಚರ ಮಾಡಿಕೊಡುತ್ತಾರೆ

ನಿಮ್ಮ ಕತ್ತಿನಲ್ಲಿರೋ ಲಿಂಗವ
ಕಳುದು ಬುಡಿ ಎಂದರಂತೆ ॥ ಸಿದ್ಧಯ್ಯ ॥

ಕತ್ತಿನಲ್ಲಿ ಇರುವಂತ ಲಿಂಗವನ್ನು ಸ್ವಾಮಿ
ಕಳೆದು ಭೂಮಿಗೆ ಮಡಗಿ ಸ್ವಾಮಿ ಎಂದುರು
ನೀಲಮ್ಮನ ಮಾತಾ ಕೇಳಿಕಂಡು
ಆಗ ಕಲ್ಯಾಣದ ಬಸುವಣ್ಣನವರು
ಕೊರಳಲ್ಲಿದ್ದ ಲಿಂಗವನ್ನು ತೆಗೆದು
ಭೂಮಿ ಮ್ಯಾಲೆ ಮಡಗಿ ಬುಟ್ಟು
ಆ ಲಿಂಗ ಕೇಳುತವರೇ
ಕೇಳಪ್ಪ ಲಿಂಗುವೇ

ಸತ್ಯ ಪುರುಷರು ನನ ಕಣ್ಣಿಗೆ ಗೋಚರವಿಲ್ಲದೆ
ಹೊರ್ಟೋಗ್ತಾವರೆ ಕಣಪ್ಪ
ಒಬ್ಬ ತಂದೆಗೆ ನಾವು ಹುಟ್ಟಿ
ಒಬ್ಬ ತಾಯಿಗೆ ನಾವು ಬೆಳೆದು
ಕಲ್ಯಾಣ ಪಟ್ಟಣಕೆ ನಾವು
ಸತ್‌ಪುರುಷ ಬಸವಣ್ಣ ನಾನಾದರೇ
ಪತಿವಂತೆ ಮಡದಿ ನೀಲಮ್ಮ ನನ್ನ ಮಡದಿಯಾದರೆ

ಕಾಣದಿದ್ದ ಜಂಗುಮರಾ ನೀ
ತೋರ್ಸಿಕೊಡು ಎಂದರಲ್ಲಾ ॥ ಸಿದ್ಧಯ್ಯ ॥

ಲಿಂಗಕ್ಕೆ ಮೂರು ಮಾತಾಡುದ್ರು ಬಸವಣ್ಣ
ಲಿಂಗಕ್ಕೆ ಮೂರು ಮಾತಾಡುದ್ರು ನೀಲಮ್ಮ
ಆಗಾ
ಜಗಂಜ್ಯೋತಿ ತೋರ್ಸಬೇಕು ಅಂತ ಹೇಳಿ
ನೋಡಪ್ಪ ಲಿಂಗ ಬುಡುಬುಡನೆ ಉಳ್ಳಿಕಂಡು
ಪರಂಜ್ಯೋತಿಯವರು ಹೋಗುವಂತಹ ಮಾರ್ಗದಲ್ಲಿ ಬರ್ತಾ ಅದೆ
ಮುಂದು ಮುಂದೇ ಲಿಂಗ ಉಳ್ಳಿಕಂಡು ಬಂದರೇ
ಹಿಂದಿಂದೆ ಬಸವಣ್ಣ
ಬಸವಣ್ಣನ ಮಡದಿ ನೀಲಮ್ಮ
ಲಿಂಗದ ಹಿಂದುಗಡೆ ಹುಡುಕುತ್ತ ತಡಕುತ್ತಾ

ಅವರು ಕಲ್ಯಾಣದ
ಬೀದಿ ಒಳಗೆ ಬರುತಾರೆ ॥ ಸುವ್ವಾ ಬಾ ॥

ಕಲ್ಯಾಣದ ಬೀದಿ ಒಳಗೆ ಬಸವಣ್ಣ ನೀಲಮ್ಮನವರು
ಓಡೋಡಿ ಬರುತಿದುರು
ಆಗಾ ಜಗಂಜ್ಯೋತಿ ಧರೆಗೆ ದೊಡ್ಡಯ್ಯ
ಹಿಂದಕೆ ತಿರುಗಿ ಬಸುವಣ್ಣ ನೀಲಮ್ಮರ ನೋಡಿದುರು
ನೋಡಿದಿಯಾ
ಈ ಬಸವಣ್ಣ ಸತ್ಯುವಂತರು
ಈ ಬಸವಣ್ಣನಲ್ಲಿರ್ತಕಂತಹ
ಕೊರಳಲ್ಲಿರ್ತಾಕಂತಹ ಲಿಂಗಾ
ನನ್ನನೇ ತೋರ್ಸಿ ಬುಡ್ತಾದಲ್ಲಾ
ಈಗಾ ನೀಲಮ್ಮ ಬಸವಣ್ಣ ಬರ್ತಾರಲ್ಲ ಅಂತ ಹೇಳಿ
ಒಳ್ಳೆ ದಾರಿ ಒಳ್ಳೆ ಮಾರ್ಗಾ

ಶುಚಿಯಾಗಿರ್ತಕಂತಹ ದಾರಿ ಮಾರ್ಗಾನೇ ಬಿಟ್ಟು ಬಿಟ್ಟು
ಆ ಪರಂಜ್ಯೋತಿ ಧರೆಗೆ ದೊಡ್ಡವರು
ಯಾವ ಮಾರ್ಗದಲಿ ಬರುತವರ ಅಂದುರೇ
ಈ ದಾರಿಗಂಟ ಬಂದರೆ
ಈ ಲಿಂಗ ನನ್ನ ತೋರ್ಸಿ ಕೊಡ್ತಾದೆ
ಈ ದಾರಿಗಾಣ ಹೊಗಾಬಾರ್ದು
ಕೆಟ್ಟ ಮಾರ್ಗದಲ್ಲಿ ಹೋಗಬೇಕು ಅಂತ ಹೇಳಿ
ಅಯ್ಯಾ ಹರಳಯ್ಯನವರ ಬೀದಿ ಒಳಗೆ ಗುರುವು

ನನ್ನ ಪರಂಜ್ಯೋತಿಯವರು ಬರುತಾರೆ ॥ ಸುವ್ವಾ ಬಾ ॥

ಅಯ್ಯಾ ಹರಳಯ್ಯನಾ ದೇವಾ
ಮನೆಯ ಬೀದಿಗಾಣೆ ಬರುತಾರೆ
ನನ್ನ ಪರಂಜ್ಯೋತಿ ಪರಬ್ರಹ್ಮ
ಅಯ್ಯಾ ಕೆಟ್ಟ ಮಾರುಗಾದಲ್ಲಿ
ಹೋಗುವಾ ದೇವಾ ಪರಂಜ್ಯೋತಿಯವರ ನೋಡಿ
ಅವರು ಹೋದಾ ಮಾರ್ಗದಲ್ಲಿ
ಲಿಂಗಾ ಬರುತಾದೆ ॥ ಸುವ್ವಾ ಬಾ ॥

ಹರಳಯ್ಯನವರಾ ದೇವಾ
ಬೀದಿಗಾಣೆ ಪರಂಜ್ಯೋತಿ ಪರಬ್ರಹ್ಮ ಬರುವಾಗಾ
ಇಂದಿಂದೇ ಲಿಂಗಾ
ಲಿಂಗದ ಹಿಂದುಗಡೆ ಬಸವಣ್ಣ ನೀಲಮ್ಮ
ಓಡೋಡಿ ಬರುವಾಗಾ
ಹರಳಯ್ಯನವರಾ
ಮನೆ ಮುಂಭಾಗದಲಿ ಇರ್ತಕ್ಕಂತಹ ತಿಪ್ಪೆ ಗುಂಡಿ
ಆ ತಿಪ್ಪೆಗುಂಡಿ ಎಂದುರೇ
ಹರಳಯ್ಯನವರು ಅಟ್ಟೆಗುಳವನ್ನೆ ಉನಿ ಹಾಕಿದ್ರಂತೆ
ಏನು ಅಂದರೆ ಚಮ್ಮಳಿಗೆ ಕೊಳಿವಂತ ಅಟ್ಟೆ
ಹರಳಯ್ಯನವರಾ ಗುರುವೇ
ಅಟ್ಟೆ ತೊಳಿವಂತ ತಿಪ್ಪೆಗುಂಡಿ ಬಳಿಗೆ
ನನ್ನ ಧರೆಗೆ ದೊಡ್ಡವರು ಬರುತಾರೆ ॥ ಸುವ್ವಾ ಬಾ ॥

ಜಗತ್ತು ಗುರು ಧರೆಗೆ ದೊಡ್ಡಯ್ಯ
ತಿಪ್ಪೆಗುಂಡಿ ಬಳಿಗೆ ಒರೋದರ ಒಳಗಾಗಿ
ಆಗಾ ಬಸವಣ್ಣ ನೀಲಮ್ಮನವರ ಕಣ್ಣಿಗೆ ಗೋಚರವಾಗಿಬುಟ್ರು

ಅಯ್ಯಾ ಗುರದೇವಾ ಪರಿದೇವರೇ ಬಸವಣ್ಣ
ಹರುಳಯ್ಯನವರು
ಅಟ್ಟೆ ಉನಿಯಾಕುವಂತಹ ತಿಪ್ಪೆಗುಂಡಿ
ಆ ಗುಂಡಿಗೆ ಜಂಗುಮರು ಹೋರ್ಟೋಯ್ತಾವರಲ್ಲಾ
ಅಲ್ಲಿ ಹೋಗತವರೆ ಹೋಗುತವರೇ ನಡ್ರಿಸ್ವಾಮಿ ಅಂತ ಹೇಳಿ
ಪತಿಗೆ ನೀಲಮ್ಮ ಹೇಳುತಾರೆ
ಅಯ್ಯಯ್ಯೋ ಜಂಗುಮರೇ
ನಿಮ್ಮ ಗುರುಪಾದ ಈಗ ಗೊತ್ತಾಯ್ತು
ಈಗಾ ಕಂಡುಕಂಡೋ ಅಂತೇಳಿ

ಬಸವಣ್ಣವರು ಓಡಿ ಓಡಿ ಬರುತಾರೆ
ಅವರು ಬಿಟ್ಟಂತಹ ಲಿಂಗಾ
ಬಡುಬುಡು ಬುಡಾನೇ ದೇವಾ
ಉಳ್ಳು ಕಂಡು ನನ್ನಪ್ಪ
ಅದು ತಿಪ್ಪೆಗುಂಡಿ ಬಳಿಗೆ ಬರುತಾದೇ ॥ ಸುವ್ವಾ ಬಾ ॥

ನನ್ನ ಭಕ್ತಿ ಬಾವದ ಒಡೆಯನಂತೇ
ನನ್ನ ಬಾಲ ಲೋಚನದಯ್ಯನಂತೇ ॥ ಸಿದ್ಧಯ್ಯ ॥

ನನ್ನ ಭಕ್ತಿ ಭಾವದ ಒಡೆಯ
ನನ್ನ ಬಾಲ ಲೋಚನದಯ್ಯ
ನನ್ನ ಹೊನ್ನ ಹುತ್ತದ ಒಡೆಯ
ಉರಿಯ ಗದಗೇ ನನ್ನ
ಧರೆಗೇ ದೊಡ್ಡಯ್ಯ
ಗುರುವೇ ಹರಳಯ್ಯನ ಗುಂಡಿಗೇ
ಓಡಿ ಓಡಿ ಬರುವರಲ್ಲ ॥ ಸಿದ್ಧಯ್ಯ ॥

ಕುಷ್ಠರೋಗಿ ಅವತಾರದಲ್ಲೀ ಸ್ವಾಮಿ
ಈಗಲೀಗ ಗುರುವೇ ಗುರುದೇವ
ಹರಳಯ್ಯನವರು
ಚಮ್ಮಳಿಗೆ ಹೋಲೀವಂತ
ಅಟ್ಟೇ ಉನಿಯಾಕುವ
ಆಗಲೀಗ ತಿಪ್ಪೇ ಗುಂಡಿಗೇ ಬಂದು
ಎಡ ಬಲ ತಿರುಗಿ ನೋಡುದುರು
ಧರೆಗೇ ದೊಡ್ಡವರ ದಿವ್ಯ ದೃಷ್ಟಿಗೆ
ಆಗಲೀಗ ಬೆನ್ನಿಂದೆ ಲಿಂಗ ಬರುತ್ತಿತ್ತು

ಲಿಂಗದಿಂಬಾಗದಲ್ಲಿ
ಬಸವಣ್ಣ ನೀಲಮ್ಮನವರು ಓಡೋಡಿ ಬರುತ್ತಿದ್ದರು
ಇಂತ ಬಸವಣ್ಣನ ದುಡ ನೋಡಬೇಕು
ನೀಲಮ್ಮನ ಪತುವ್ರತತನ ನಾನು ನೋಡಬೇಕು ಅಂತೇಳಿ

ಹರಳಯ್ಯನಾ ಗುರುವು
ಹನ್ನೆರಡು ವರ್ಷದಿಂದ
ಇದ್ದಂತ ಗುರುವು
ಹಳೆ ನೀರಿಗೆ
ಅವರೆ ಮಾಯದ ರೂಪಿನ ಒಳಗೇ
ಬಂದು ಬಿದ್ದೋದರಂತೇ ॥ ಸಿದ್ಧಯ್ಯ ॥

ಗುರುವೇ ಉಳ್ಳಿಕಂಡು ದೇವ
ಬಂದಂತಹ ಗುರುವೋ ಲಿಂಗ ನನ್ನ ಗುರುವೇ
ಅದುವೇ ದೇವ ನೀರಿಗೇ ಬಿದ್ದೋಯ್ತು
ಈ ಹನ್ನೆರಡು ವರ್ಷದಿಂದ
ಇದ್ದಂತಹ ಗುರುವು
ಕಪ್ಪ ಪಾಯ್ಸದ ನೀರಿಗೇ
ಲಿಂಗ ಬಂದು ಬಿದ್ದಾಗ
ಆ ಕೊಳದ ಏರಿಯ ಮ್ಯಾಲೆ ಬಂದು
ಬಸವಣ್ಣ ನಿಂತಗಂಡ್ರು ॥ ಸಿದ್ಧಯ್ಯ ॥

ಜಗತ್ತು ಗುರು ಬಂದು
ಹನ್ನೆರಡು ವರ್ಷದ ಕಪ್ಪೇ ಪಾಯ್ಸಕ್ಕೆ ಬಂದು ಬಿದ್ದುರು
ಲಿಂಗೂ ಕೊಡ ಬಿಳ್ತು
ಬಸವಣ್ಣ ನೀಲಮ್ಮನವರು
ಕೆರೇ ಏರಿಮ್ಯಾಲೇ ಬಂದು ನಿಂತಗಂಡು
ನೀಲಮ್ಮ
ಈ ಜಗತ್ತು ಗುರುಗಳು
ಅಲ್ಲಿಂದ ಬಂದು ಹರಳಯ್ಯನ
ತಿಪ್ಪೇ ಗುಂಡಿಗೇ ಬಿದ್ದೋಗುಬುಟ್ರಲ್ಲ
ಈ ಲಿಂಗೂ ಕೂಡ ಬಿದ್ದೋಯ್ತು
ಈಗಲೀಗ ಇವರ ವಂದಿಗೇ
ನಾನು ಕೊಡ ಬಿದ್ದು ಬೇಡಬೇಕ ನೀಲಮ್ಮ ಅಂತೇಳಿ
ಆಗಲೀಗ ಮಡದಿ ನೀಲಮ್ಮನ
ಬಸವಣ್ಣ ಕೇಳತ್ತಾವರೇ

ಪತೀ ದೇವರೇ ಬಸವಣ್ಣ
ನಮ್ಮ ಕಲ್ಯಾಣದ
ಗುರುಮಠಕ್ಕೆ ಬಂದಿರತ್ಕಂತ ಜಂಗುಮರು ಅಂದ್ರೆ
ಇವರು ಸಾಮಾನ್ಯವಾದ ಪುರುಷರಲ್ಲ
ನಿಮಗೇ ನಮಗೆಲ್ಲ ಹೆಚ್ಚಿನ ಶಿವಸರಣಮಾತ್ಮರೇ ಆಗಿರಬಹುದು
ಈ ನೀರಿಗೆ ಬಿದ್ದಿರುವಂತ ಸ್ವಾಮಿಗಳ

ಪಾದವನ್ನೇ ಹಿಡಿದು ನೀವು
ಎಳಕೊಳ್ಳಿ ಎಂದರಂತೇ ॥ ಸಿದ್ಧಯ್ಯ ॥

ಸ್ವಾಮಿ ಆ ಸ್ವಾಮಿಗಳ ಪಾದ ಹಿಡಿದು ಎಳೀರಿ ಸ್ವಾಮಿ ಅಂದರು
ಆಗ ಮಡದಿಯಾದ ನೀಲಮ್ಮನ
ಮಾತ ಕೇಳಕಂಡು ಬಸವಣ್ಣನವರು
ಧರೆಗೆ ದೊಡ್ಡವರ ಬಲದ ಪಾದ ಹಿಡ್ಕಂಡು ಎಳೆದರಂತೆ

ಪಾದ ಹಿಡದೂ ಏಳೀವಾಗ
ಪಾದವೇ ಕಿತ್ತು ಬಂದೀತಲ್ಲಾ ॥ ಸಿದ್ಧಯ್ಯ ॥

ಏನು ಮಡದೀ ನೀಲಮ್ಮ
ಇಂತಹ ಜಂಗುಮ ದೇವರ ಪಾದವ ಹಿಡಿದು
ನಾನು ಏಳೀವಾಗ ನೀಲಮ್ಮ
ಈ ಗುರುಗಳ ಪಾದವೆ ಕಿತ್ತು ಬರ್ತದಲ್ಲ ಅಂದ್ರಂತೆ
ಸ್ವಾಮಿ ಭಯ ಪಟ್ಟಗಬೇಡಿ
ನಿಮ್ಮ ಹೆಗಲ ಮೇಲೀರ್ತಕ್ಕಂತ
ಪಟ್ಟೇ ವಸ್ತ್ರಕೊಡಿ
ಎನುತೇಳಿ ಬಸವಣ್ಣನವರ
ಹೆಗಲ ಮ್ಯಾಲಿರ್ತಕ್ಕಂತ ಪಟ್ಟೇ ವಸ್ತ್ರವನ್ನೇ
ತೆಗೆದು ನೀಲಮ್ಮ ಭೂಮಿಗೆ ಹಾಸುಬಿಟ್ಟು
ಸ್ವಾಮಿ ಈ ಪಾದ ತೆಗೆದು ವಸ್ತ್ರದ ಮ್ಯಾಲೆ ಮಡಗಿ ದೇವ
ಇನ್ನೊಂದು ಪಾದ ಹಿಡಿದು
ಎಳಕಳ್ಳೀ ಸ್ವಾಮಿ ಅಂದರು

ಅಯ್ಯ ಮತ್ತೊಂದು ಪಾದವ
ಹಿಡಿದು ನೀಲಮ್ಮ
ಅಯ್ಯಾ ಪಟ್ಟೆ ವಸ್ತ್ರದಲ್ಲಿ ಮಡಗಿ
ಗುರುವೇ ಮತ್ತೊಂದು ಪಾದ

ಹಿಡ್ಕಂಡು ಬಸವಣ್ಣ
ಪುನಃ ಎಳೀವಾಗ
ಅಯ್ಯ ಇದ್ದದೊಂದು ಪಾದ ಗುರುವೆ
ಅದು ಕಿತ್ತು ಬಂದಿತಲ್ಲ ॥ ಸಿದ್ಧಯ್ಯ ॥

ಆ ಪಾದ ಕಿತ್ತು ಬಂದ ಕಾಲದಲ್ಲಿ ಗುರುವು
ಆಗಲೀಗ ಅದನ್ನೂ ತೆಗೆದು
ಪಟ್ಟೇ ವಸ್ತ್ರಕ್ಕೆ ಮಡಗಿಸುದ್ರು ತಾಯಿ ನೀಲಮ್ಮ
ಸ್ವಾಮಿ ಈವಾಗ ಕೈಯಿಡಿದು ಎಳೀರೀ ದೇವ ಅಂದರು
ಕೈಯಿಡಿದು ಎಳೀವಾಗ
ಕೈಯೇ ಕಿತ್ತು ಬಂದಿತಲ್ಲ ॥ ಸಿದ್ಧಯ್ಯ ॥

ಕೈಗಳು ಹಿಡಿದು ಎಳುದ್ರೂ ದೇವ ಕೈಗಳೇ ಕಿತ್ತು ಬಂದೋ
ಕಲ್ಯಾಣದ ಬಸವಣ್ಣ
ನೀಲಮ್ಮ
ಎರಡು ಕೈಯೂ ಕಿತ್ತು ಬಂದೋ ಮಡದಿ ಎಂದರು
ಅದನ್ನೇ ತೆಗೆದು ಪಟ್ಟೇ ವಸ್ತ್ರದಲ್ಲಿ ಮಡಗಿ ಸ್ವಾಮಿ ಎಂದರು
ತಲೆ ಹಿಡಿದು ಎಳ್ಕಳೀ ಸ್ವಾಮಿ ಅಂದರು
ಬಸವಣ್ಣನವರು ತಲೆ ಹಿಡಿದು ಎಳಿವಾಗ
ಕತ್ತಿನ ಸಿರುಸವೇ ಆಗಲೀಗ ಕಿತ್ತು ಬಂತು
ಗುರುದೇವ
ಕತ್ತೇ ಕಿತ್ತು ಬಂತು
ಆ ತಲೇ ತಗದು ನನ್ನ ಕೈಲಿ ಕೊಡಿ
ತಲೇ ತಗದು ನೀಲಮ್ಮ ಹಿಡಕಂಡರು
ಆ ಮುಂಡನ್ನೇ ತಕ್ಕಂಡು ಸ್ವಾಮಿ
ಈ ಪಟ್ಟೇ ವಸ್ತ್ರದ ಮ್ಯಾಲೇ ಮಡಗೀ ಅಂತೇಳೀ
ಆ ನೀಲಮ್ಮನವರು
ಮುಂಡನೇ ತೆಗೆದು ಪಟ್ಟೇ ವಸ್ತ್ರದ ಮ್ಯಾಲೆ ಮಡಗಿಸಿ

ಪಟ್ಟೇ ವಸ್ತ್ರಾದಲ್ಲೀ
ಬಿಗಿದು ಪೊಟ್ಟಣ ಕಟ್ಟುತಾರೇ ॥ ಸಿದ್ಧಯ್ಯ ॥

ಗುರುವೇ ಬಿಗಿದು ಪೊಟ್ಟಣವ
ಕಟ್ಟಿದರು ನನ್ನ ಗುರುವು
ಮಹಾಸರಣಾ ಬಸವಣ್ಣ

ಆ ಮೊಟ್ಟಣವನ್ನೇ ತಗದಾರಂತೇ
ನತ್ತಿಮ್ಯಾಲೇ ಹೊತ್ತೀಕೊಂಡರು ॥ ಸಿದ್ಧಯ್ಯ ॥

ಈ ಧರೆಗೆ ದೊಡ್ಡವರ ಮಹಿಮೆ
ಎಷ್ಟು ಕೊಂಡಾಡಲಪ್ಪ ॥ ಸಿದ್ಧಯ್ಯ ॥

ಜಗತ್ತು ಗುರುವು ಅಲ್ಲಮಾಪ್ರಭು
ಈಗಲೀಗ ಕಲ್ಯಾಣದ ಬಸವಣ್ಣನವರು
ಆಗಲೀಗ ಮೊಟ್ಟಣ ತಗದು ನತ್ತಿ ಮ್ಯಾಲೆ ಹೊತ್ತಿಕೊಂಡರು
ಮಡದಿಯಾದ ನೀಲಮ್ಮ
ಜಗತ್ತು ಗುರುಗಳ ತಲೆತಗದು ಕೈಲಿಡಕೊಂಡರು
ದೇವ ಈಗ ನಾನು ತಲೆತಕ್ಕಂಡಿದ್ದಿನಿ

ನೀವು ಮುಂಡ ಹೊತ್ತಿದ್ದೀರಿ
ಆದಿಕಲ್ಯಾಣದ ಗುರುಮಠಕ್ಕೆ ಹೋಗುವ ಬನ್ನಿ ಸ್ವಾಮಿ ಅಂತೇಳಿ
ನೋಡಪ್ಪ ಹಿಂದಿಂದೆ ನೀಲಮ್ಮ
ಮುಂದು ಮುಂದೇ ಕಲ್ಯಾಣ ಪಟ್ಟಣದ ಬಸವಣ್ಣನವರು
ಹರಳಯ್ಯನವರ
ಅಟ್ಟೇ ಉನೀಯಾಕುವಂತ ಕೊಳ ಬಿಟ್ಟು

ಕಲ್ಯಾಣ ಪಟ್ಟಣಕೇ
ನನ್ನ ಬಸವಣ್ಣ ಬರುತಾರೇ ॥ ಸಿದ್ಧಯ್ಯ ॥

ಆದಿ ಕಲ್ಯಾಣದ ಗುರು ಮಠಕ್ಕೇ ಸ್ವಾಮೀ
ಬಸವಣ್ಣ ನೀಲಮ್ಮ ಬರುವಂತ ಕಾಲದಲ್ಲಿ ಗುರುವು
ಜಗನ್ ಜ್ಯೋತಿಯವರು
ಧರೆಗೆ ದೊಡ್ಡಯ್ಯ
ಈ ಬಸವಣ್ಣನೋರು ಹೊತ್ತುಗಂಡು ಬರುವದು
ಅಗಲೀಗ ರಗುತವೇ ಅಕಾರವಾಗಿ
ಮಾಂಸದ ಮೊಟ್ಟಣ ಮಾಡಿದರಂತೆ
ಅಗಲೀಗ ಎರಡು ಕೆನ್ನೇಗಾಣೂ
ಬಸವಣ್ಣನವರ ತಲೆಯಿಂದ
ಅಗಲೀಗ ಹರಿದು ರಗುತ ಬರತದೆ
ನೀಲಮ್ಮನವರು
ಹಿಡಕಂಡು ಬರುವಂತಹ
ಧರೆಗೇ ದೊಡ್ಡವರ ತಲೆ

ಸುರಾಯದ ಗಡಗೇ ಗುರುವೇ
ಮಾಡಿದರಂತೇ ಮಾಯಿಕಾರ ॥ ಸಿದ್ಧಯ್ಯ ॥

ಸುರಾಯದ ಗಡಿಗೆ ಮಾಡಿದ್ರು
ಜಗನ್‌ಜ್ಯೋತಿ ಧರೆಗೆ ದೊಡ್ಡಯ್ಯ
ಆದಿ ಕಲ್ಯಾಣದ ಗುರು ಮಠಕ್ಕಾಗಿ
ಬಸವಣ್ಣನವರು ತಾನು ಬರುವಾಗ
ಈ ಕಲ್ಯಾಣದ ಜಂಗುಮರವರಲ್ಲ
ಕೋಟಿಗೊಬ್ಬ ಶರಣ
ಕುಲಕ್ಕೊಬ್ಬ ಭಗುತ

ಅರುವತ್ತಾರು ಮಂದಿ ಜಂಗುಮರು
ಮೂವತ್ತು ಮೂರು ಮಂದಿ ಮಹಾದಿಮುನುಗಳು
ಒಂದು ಲಕ್ಕುಸದ ಮ್ಯಾಲೇ
ತೊಂಬತ್ತು ಏಳು ಕೋಟಿ ಸತ್ಯಾ ಶರಣರು
ಅಷ್ಟು ಕೋಟಿ ಶಿವ ಶರಣ ಮಾತ್ಮರೆಲ್ಲ
ಕಲ್ಯಾಣ ಪಟ್ಟಣದಲ್ಲಿ ಊಟ ಮಾಡ್ತಿದ್ದರು
ಅವರು ಊಟ ಮಾಡೋರ ಮುಂದು ಕಾಣಿ
ಈ ಬಸವಣ್ಣನವರು ಪೊಟ್ಟಣ ಹೊತ್ತಕ್ಕಂಡು
ನೀಲಮ್ಮನವರು ಸುರಾಯದ ಗಡಿಗೆ ಹಿಡ್ಕಂಡು ಬಂದ್ಬುಟ್ರು

ಈ ಅನ್ನ ಉಣ್ಣುವ ಶರಣರೆಲ್ಲ
ಬಸವಣ್ಣನ ನೋಡುತಾರೆ ॥ ಸಿದ್ಧಯ್ಯ ॥

ಅನ್ನ ಊಟ ಮಾಡುವಂತ ಶರಣರೆಲ್ಲ ದೇವ
ಬಸವಣ್ಣನವರ ಕಣ್ಣಿಂದ ನೋಡಿಬುಟ್ಟು ಗುರುವು
ಎಲ್ಲ ಸರಣರು ಏನು ಯೋಚನೇ ಮಾಡ್ತರೆ ಅಂದ್ರೆ
ಏನಪ್ಪ ಸತ್ಯ ಶರಣರೇ
ಬಸವಣ್ಣನವರ ನೋಡ್ತ ಅನ್ನ ಊಟಮಾಡ್ತಿದ್ದೀರಲ್ಲ
ನಿಮಗೆ ಅನ್ನ ಸೇರಬಹುದ
ಕಲ್ಯಾಣ ಪಟ್ಟಣ ಬತ್ತಗೆಟ್ಟೋಗುಬುಡ್ತು
ಕಲ್ಯಾಣ ಪಟ್ಟಣ ಕೆಡ್ತು ಕಣರಯ್ಯ
ಈ ಕಲ್ಯಾಣದಲ್ಲಿರ್ತಂಕ್ಕಂತ ಬಸವಣ್ಣ
ಬಾಳ ಸತ್ಯ ಸರಣಮಾತ್ಮರು ಅಂತೇಳಿ

ಆದಿ ಕಲ್ಯಾಣಕೇ
ನಾವೆಲ್ಲ ಬರಲುಬಹುದ ॥ ಸಿದ್ಧಯ್ಯ ॥

ಅಯ್ಯಾ ಆದಿ ಗುರುಮಠಕ್ಕೆ ಗುರುವು
ನಾವೆಲ್ಲ ಬರಲೇ ಬಹುದ ॥ ಸಿದ್ಧಯ್ಯ ॥

ಕಲ್ಯಾಣ ಪಟ್ಟಣ ಬತ್ತಗೆಟ್ಟೋಯ್ತು
ಕಲ್ಯಾಣದ ಬಸವಣ್ಣ ಬತ್ತಗೆಟ್ಟೋದ
ಅವರ ಮಡದಿ ನೀಲಮ್ಮನು ಕೂಡ
ಬತ್ತಗೆಟ್ಟೋಗ್ಬುಟ್ಲು
ಈಗ ನಾವು ಸಾಧು ಸತ್ಪುರುಷರಾಗಿ
ಲಿಂಗ ಕಟ್ಟಿದ ಜಂಗುಮರಾಗಿ
ನಾವು ಸತ್ಯ ಶರಣಮಾತ್ಮರಾಗಿ
ಈ ಆದಿ ಕಲ್ಯಾಣಕ್ಕೆ ಬಂದು
ಅನ್ನ ಊಟ ಮಾಡಬಹುದ ಎನುತೇಳಿ
ಎಲ್ಲ ಸರಣಮಾತ್ಮರು ಬಸವಣ್ಣ ನೀಲಮ್ಮನವರ ನೋಡುವಾಗ
ಮತ್ತೊಬ್ಬ ಸರಣುಮಾತ್ಮರು ಹೇಳಿದ್ರಂತೆ
ಏನ್ರಯ್ಯಾ
ಆ ಬಸವಣ್ಣನೋರು ತೆಕ್ಕಂಡು ಹೋಗ್ತಾಯಿರೋದು ಏನು ?
ಆ ನೀಲಮ್ಮ ನೋರು ಇಡ್ಕಂದು ಹೋಯ್ತಾಯಿರೋದು ಏನು ?
ಏನರಯ್ಯಾ ಸರಣರೇ
ನಿಮ್ಮಗೇ ಎಳ್ಳಷ್ಟು ಗೊತ್ತಿಲ್ಲ
ಬಸವಣ್ಣನವ್ರು ಹೊತ್ಕಂಡೊಯ್ತಿರೋದು ಬಾಡಿನ ಮೊಟ್ಣ
ನೀಲಮ್ಮನವರು ಹಿಡ್ಕಂಡೋಯ್ತಿರೋದು
ಹೆಂಡದ ಸುರಾಯಿ ಗಡಿಗೆ

ಈ ಆದಿ ಕಲ್ಯಾಣ
ಕೆಟ್ಟೋಯ್ತು ಎಂದರಂತೇ ॥ ಸಿದ್ಧಯ್ಯ ॥

ಯಾವಾಗ
ಹೆಂಡದ ಸುರಾಯಿ ಗಡಿಗೆ
ಬಸವಣ್ಣ ಹೊತ್ಕಂಡೋಯ್ತಿರೋದು ಬಾಡಿನಮೊಟ್ಣ ಅಂತೇಳ್ಬುಟ್ರೋ

ಈ ಅನ್ನ ಉಣ್ಣುವ ಶರಣರೆಲ್ಲ
ಅನ್ನ ಬುಟ್ಟು ಹೋಗುತಾರೆ ॥ ಸಿದ್ಧಯ್ಯ ॥

ಗುರುವೇ ಅನ್ನ ಉಣ್ಣುವಂತ
ಸರಣರೆಲ್ಲ ಗುರುವು
ಅಯ್ಯ ನಾವುನು ಬತ್ತಗೆಟ್ಟೋ
ನಮ್ಮ ಲಿಂಗವೂ ಬತ್ತಗೆಟ್ಟೋಯ್ತು
ಅನುತೇಳಿ ನನ್ನ ಗುರುವು
ಅವರು ಕಲ್ಯಾಣಿ ಕೊಳಕೆ ಗುರುವೇ
ಓಡಿ ಓಡಿ ಬರುತಾರೇ ॥ ಸಿದ್ಧಯ್ಯ ॥

ಲಿಂಗಕೆಟ್ಟೋಯ್ತು
ಕಲ್ಯಾಣಕ್ಕೆ ಬಂದಿರ್ತಕ್ಕಂತ ನಾವು
ಸೆರಣು ಮಾತ್ಮರೆಲ್ಲ ಬತ್ತಗೆಟ್ಟೋಗುಬುಟ್ಟೋ ಅಂತೇಳಿ

ಎಲ್ಲ ಸೆರಣುಮಾತ್ಮರುವೇ
ಉಣ್ಣತ್ತಿದ್ದಂತಹ ಅನ್ನನೇ ಬಿಟ್ಟುಬಿಟ್ಟು
ಕಲ್ಯಾಣ ಪಟ್ಟಣದ ಮುಂಭಾಗದಲ್ಲಿರುವಂತ
ಕಲ್ಯಾಣಿ ಕೊಳಕೆ ಸ್ನಾನಕ್ಕೆ ಹೊರಟೋದ್ರು
ಆದಿ ಬಸವಣ್ಣನವರು ಗುರುವು
ಹೊತ್ಗಂಡು ಬಂದಂತಹ ಪೊಟ್ಟಣ ತಕ್ಕಂಡು ಬಂದು
ಉರಿಗದುಗೇ ಮೇಲೆ ಮಡ್ಗುದ್ರು
ತಾಯಿ ನೀಲಮ್ಮನವರು
ಆಗಲೀಗ ತಲೆ ಹಿಡಕಂಡು
ಸುಮ್ನೆ ನಿಂತಿದ್ದರು
ನೀಲಮ್ಮ
ಜಂಗುಮುರ್ನೆ ತಕಂಡು ಬಂದವಲ್ಲ
ಇದನ್ನೇ ಏನು ಮಾಡಬೇಕು ಮಡದಿ ಎಂದರು
ಸ್ವಾಮಿ
ಆ ಜಂಗುಮರು ಮೊದಲು
ಯಾವ ಪರಕಾರದಲ್ಲಿ ಇದ್ದರೋ
ಅದೇ ಪರಕಾರ ಮಾಡಬೇಕಾದರೇ
ಆ ಜಂಗುಮರ ಮುಂಡ ತಗದು
ಊರಿ ಗದುಗೆ ಮ್ಯಾಲೆ ಮಡಿಗಿ ಅಂತೇಳಿ
ಉರಿಗದುಗೇ ಮೇಲೆ ಮಡಗಿಸಿಬುಟ್ಟು
ಕಾಲು ಕಾಲನಾಗೇ ಕಾಲಾಗಲೀಗ ಸೇರಿಸಿ
ಕೈಯಿ ಕೈನಾಗೇ ಸೇರಿಸಿ
ತಾನು ಹಿಡದಿದ್ದಂತ
ಉರೀ ಜ್ವಾಲೆ ತಡಿಲಾರಿ ಮಡದಿ

ಈ ಬಾದಿ ಬಂಧಾನ ಸೈರಿಸಲಾರಿ ಅನುತೇಳಿ
ಆಗಲೀಗ ಬಸವಣ್ಣನವರು
ಮಡದಿ ನೀಲಮ್ಮನಿಗೆ ಹೇಳಿದರು
ಸ್ವಾಮಿ
ನಾವು ಹೊತ್ಕಂಡು ಬಂದಿರ್ತಕ್ಕಂತ
ಸ್ವಾಮಿಗೊಳು ಅಂದ್ರೇ
ಸಾಮಾನ್ಯವಾದ ಪರುಷರಲ್ಲ ದೇವ
ನಮಗಿಂತ ಹೆಚ್ಚಿನ ಮಹಾಗುರುಗಳು
ಈಗಲೀಗ ಈ ತಲೇ ತಗದು
ಅವರು ಮೊದಲು ಶಿರದ ಮೇಲಿತ್ತಲ್ಲ
ಅದೇ ಪರುಕಾರವಾಗಿ ಮಡಿಗಿ ಸ್ವಾಮಿ ಅಂತೇಳಿ
ತಲೇ ತಗದು ಬಸವಣ್ಣನವರ ಕೈಲಿ
ಕೊಟ್ಟರು
ಕೊಟ್ಟಂತಹ ತಲೆತಗದು ಬಸವಣ್ಣನವರು
ಅವರ ಶಿರದ ಮೇಲೆ ಮಡುಗಬುಟ್ಟು
ಆಗಲೀಗ ನೀಲಮ್ಮ ಬಸವಣ್ಣನವರು
ಈಗ ಜಂಗುಮರ ಪಾದಪೂಜೆ ಮಾಡಬೇಕು ಅಂತೇಳಿ
ಈಗಲೀಗ ಜಗತ್ತು ಗುರು ಧರೆಗೆ ದೊಡ್ಡವರ
ಶಿವಪೂಜೆಗೆ ಯಾವಯಾವ ಪುಷ್ಪ ಕರಿತಾರೆ ಅಂದ್ರೆ

ಅಮ್ಮ ಓಣಿಲಿ ಹುಟ್ಟವಳೆ
ಓಣಿಲಿ ಬೆಳೆಯವಳೆ
ಹೋಗವರ ಸೆರಗ ಹಿಡಿಯವಾಳೆ
ಅಮ್ಮಾ ಹೋಗವರ ಸೆರಗ ಹಿಡಿವಂತ
ಗಂಡು ಉತ್ತುರಾಣಿ ತಾಳೆ
ಶಿವನಾ ಪೂಜೇಗೆ ಬರಬೇಕು

ಅಮ್ಮಾ ಬೇಲೀಲಿ ಹುಟ್ಟವಳೆ
ಬೇಲಿ ಮ್ಯಾಲೆ ಬೆಳಿಯವಳೆ

ನೀನು ನಲ್ಲರದ ನಗು ನಗಿಯವಾಳೇ
ಅಮ್ಮ ನಲ್ಲರದ ನೆಗುವಾ
ನಗೀವಂತಾ ತುಂಬೆ ಹೂವೇ
ಶಿವನಾ ಪೂಜೆಗೆ ಬರಬೇಕು

ಅಮ್ಮ ಮಾಳದಲ್ಲುಟ್ಟವಳೆ
ಮಾಳುದಲ್ಲಿ ಬೆಳಯವಳೆ

ಕುಳ್ಳು ಕುಳ್ಳಾಗಿ ಇರುವವಾಳೆ
ಅಮ್ಮ ಕುಳ್ಳು ಕುಳ್ಳಾಗಿ
ಪುಟ್ಟು ಪುಟ್ಟಾಗಿ
ಬೆಳೆವಂತ ತುಂಬೆ ಹೋವೆ
ಹರನ ಪೂಜೆಗೆ ಬರಬೇಕು

ಅಮ್ಮ ಬೆನ್ನೈದು ಬೆಸಳ್ಳೈದು
ಅಮ್ಮ ಬನ್ನೀಸಿ ನೆಗುವ ನಗಿಯವಾಳೆ
ಅಮ್ಮ ಬನ್ನೀಸಿ ನೆಗುವ
ನಗುವಂತ ಕೆಂಗಲೂವೇ
ಶಿವನಾ ಪೂಜೆಗೆ ಬರಬೇಕು

ಅಮ್ಮ ಬೆಟ್ಟದಲ್ಲುಟ್ಟವಳೆ
ಕಲ್ಲುಬಂಡೇಲಿ ಬೆಳೆಯವಳೆ
ಅಮ್ಮ ಸೂರ್‍ಯನಿಗೆ ಕೈಯ ಮುಗಿಯವಾಳೆ
ಅಮ್ಮಾ ಸೂರ್‍ಯನಿಗೆ ಕೈಯ ನೀನು
ಮುಗಿವಂತ ಸೂರ್‍ಯಕಾಂತಿಯ ಹೂವೆ
ಶಿವನಾ ಪೂಜೆಗೆ ಬರಬೇಕು

ಅಮ್ಮಾ ನೀರಲ್ಲಿ ಹುಟ್ಟವಾಳೆ
ನೀರಲ್ಲಿ ಬೆಳಿಯಾವಳೇ
ನಲ್ಲರದ ನೆಗುವ ನೆಗಿಯೋವಳೆ
ಅಮ್ಮಾ ನಲ್ಲರದ ನೆಗುವ
ನೆಗುವಂತ ತಾವರೆ ಹೂವೇ
ಸ್ವಾಮಿ ಪೂಜೆಗೆ ಬರಬೇಕು

ಅಮ್ಮಾ ಸ್ವಾಮಿ ಪೂಜೆಗೇ ನೀನು
ಬರಬೇಕು ಎನುತೇಳಿ
ತಾಯಿ ನೀಲಮ್ಮ ನುಡಿದಾಳು
ಅಮ್ಮಾ ಸಂದುಗು ಸೂತುಕವಾಗಿ
ಸರ್‍ರಾತ್ರಿಗೆ ಬಸುರಾಗಿ
ಮುಂಜಾನೆಗೆ ಮಗನ ಪಡೆಯೋಳೆ
ಅಮ್ಮ ಮುಂಜಾನೆಗೆ ಮಗನ
ಪಡೆವಂತ ಸಾಮಂತಗೆ ಹೂವೆ
ಶಿವನಾ ಪೂಜೆಗೆ ಬರಬೇಕು

ಅಮ್ಮ ಹರಿಸಿಣದ ಸೀರೆಗೆ
ಆರುವತ್ತೈದು ನೆರಿಯ ಊಡಿ
ಪುರುಷನಿಲ್ಲದ ಬಾಲೆ ಬಸುರಾಗಿ
ಅಮ್ಮ ಪುರುಷನಿಲ್ಲಾದ ಬಾಲೆ
ಬಸುರಾದ ಚಂಡುಮಲ್ಲಿಗ್ಹೂವೆ
ಶಿವನಾ ಪೂಜೆಗೆ ಬರಬೇಕು

ಅಯ್ಯ ಗಂಜಿಯ ಸೀರೆಗೆ
ಬಿನಕನಿಂದ ನೆರಿಯ ಊಡಿ
ಗಂಡನಿಲ್ಲದ ಬಾಲೆ ಗರ್ಭಿಣಿಯಾಗಿ
ಅಮ್ಮ ಗಂಡನಿಲ್ಲದ ಬಾಲೆ
ಗರ್ಭಿಣಿಯಾದೆ ಕಣಗಲೂವೆ
ಸ್ವಾಮಿ ಪೂಜೆಗೆ ಬರಬೇಕು

ಅಮ್ಮ ಕಾಗುಡುವಾಡಿಯ ಒಳಗೆ
ಜಾಲ್ಹಾಡಿ ಬೆಳೀಯವಳೆ
ಕಾವಿಜೋತ್ರರ್ಕೆ ಅಮ್ಮ ಬರುವಾಳೆ
ಅಮ್ಮ ಕಾವಿ ಜೋತುರ್ಕೆ ನೀನು
ಅಂಬರದ ಕೆಂಡ ಸಂಪಿಗೆ ಹೂವೇ
ಸ್ವಾಮಿ ಪೂಜೆಗೆ ಬರಬೇಕು

ಅಮ್ಮ ಅಂಡು ಮಲ್ಲಿಗೇ ಹೂವೆ
ದುಂಡು ಮಲ್ಲೀಗೆ ಹೂವೇ
ದಂಡು ಗೋಪುರದ ತುಳಸೀಯೆ
ಅಮ್ಮ ದಂಡುಗೋಪುರದ
ತುಳಸೀ ಪಚ್ಚೇಯ ತೆನೆಯೆ
ಸ್ವಾಮಿ ಪೂಜೆಗೇ ಬರಬೇಕು
ನಮ್ಮ ಸ್ವಾಮಿ ಪೂಜೆಗೆ ನೀವು
ಬರಬೇಕು ಎನುತೇಳಿ
ತಾಯಿ ನೀಲಮ್ಮ ನುಡಿದಾಳು

ಇಷ್ಟೊಂದು ಪುಷ್ಪ
ಎಲ್ಲರನ್ನೂ ಕರದುರು
ಎಲ್ಲಾ ಪುಷ್ಪಗಳು ಗುರುವು
ನೀಲಮ್ಮನವರು ಕರದ ಗಳಿಗೆಗೆ
ತಪ್ಪದೇ ಬಂದವಂತೆ

ಆಗಲೀಗ ಎಲ್ಲಾ ಪುಷ್ಪನೂ ತಗದು ಕಣ್ಣು ಮೂಗಿಗೇ ಹೊತ್ತಗಂಡು
ನೀಲಮ್ಮ ಬಸವಣ್ಣನವರು
ಆ ಧರಗೆ ದೊಡ್ಡವರ
ಆಗಲೀಗ ಪಾದಕ್ಕೆ ಎಲ್ಲ ಪುಷ್ಪನೂ ಧರಿಸಿ
ಆಗ ನೀಲಮ್ಮನವರು ಯೋಚನೆ ಮಾಡಿದಂರಂತೆ
ನೋಡಿ ಸ್ವಾಮಿ ಬಸವಣ್ಣ
ಎಲ್ಲ ಪುಷ್ಪಗಳು ಕೂಡ
ಕೂಗ್ದ ಗಳಿಗೆಗೆ ಎಲ್ಲ ಬಂದುಬುಟ್ವೋ
ಒಂದು ಪುಷ್ಪ ಬರಲಿಲ್ಲ
ಆ ಬರದೇ ಇದ್ದಂತಹ ಪುಷ್ಪಕ್ಕೆ ಶಾಪ ಕೊಡ್ಬೇಕು ಅಂತೇಳಿ
ಆ ನೀಲಮ್ಮನವರು ಹೇಳ್ತಾವರೆ
ಅಮ್ಮಾ ಎಲ್ಲ ಹೂಗಳು ಬಂದೋ
ಅಮ್ಮಾ ಹುಡುಗಿ ನೀ ಯಾಕೆ ಬರಲಿಲ್ಲ
ಅಮ್ಮ ಎಲ್ಲ ಹೂಗಳು ಬಂದೋ
ಅಮ್ಮ ಹುಚ್ಚೀ ನೀಯಾಕೆ ಬರಲಿಲ್ಲ
ಅಯ್ಯಾ ಹುಚ್ಚು ನೀನ್ಯಾಕೆ

ಬೆಪ್ಪೀ ನೀನ್ಯಾಕೇ ಬರಲಿಲ್ಲ ಏನತೇಳೀ
ತಾಳೇ ಹೂಗೆ ಶಾಪ ಕೊಡುತಾರೆ

ಅಯ್ಯಾ ತಾಳೇ ಹೂವಿಗೇ ಶಾಪ
ಕೊಡ್ತಾರೆ ನೀಲಮ್ಮ
ನೀನು ಹಳ್ಳದ ಕೇರೀಲಿ ಬೆಳಿ ಹೋಗು

ಅಮ್ಮ ಹಳ್ಳದ ಕೇರೀಲಿ
ನೀರಿರುವ ಸ್ಥಳದಲ್ಲಿ
ಬೆಳಿ ಹೋಗು ತಾಳೆ ಹೂವೆ
ನೀನು ಮೂರು ಮೈಲಿಗೆ ಗಮನಾಗು

ಅಮ್ಮ ಮೂರು ಮೈಲಿಗೆ ನೀನು
ಗಮನಾಗು ತಾಳೆ ಹೂವೇ
ಕತ್ತೆ ಲದ್ದಿಯಾಗಿ ಉದುರೋಗು
ನೀನು ಕತ್ತೆ ಲದ್ಯಾಗಿ ನೀನು
ಉದುರೋಗು ತಾಳೆ ಹೂವೆ
ಬ್ರಾಹ್ಮಣರ ಬೀದೀಲಿ ಮೆರಿ ಹೋಗು

ಅಯ್ಯಾ ಬ್ರಾಹ್ಮಣರ ಬೀದಿಲಿ
ಹಾರವರ ಕೇರಿಲಿ
ನೀನು ಮೆರೆಯೋಗು ತಾಳೆ ಹೂವೆ
ನಿನ್ನ ಮುಡಿದವರಿಗೆ ಮೂರು ದಿನ ತಲೆ ನೋವು

ಅಯ್ಯಾ ಮುಡದವರ್ಗೆ ಮೂರುದಿನ
ತಲೆ ನೋವು ಬರಲೀಯೆಂದು
ತಾಳೆ ಹೂವಗೆ ಶಾಪ ಕೊಡುತಾರೆ
ತಾಳೇ ಹೂವಿಗೆ ದೇವಾ
ಶಾಪ ಕೊಟ್ರೊ
ತಾಯಿ ನೀಲಮ್ಮನವರು
ಪತಿದೇವರೇ ಬಸವಣ್ಣ
ಇನ್ನು ಒಂದು ಪುಷ್ಪ ಬಂದಿಲ್ಲ
ಅದಕ್ಕೂ ಶಾಪ ಕೊಡ್ತೀನಿ ಅಂತೇಳಿ

ಅಯ್ಯಾ ಎಲ್ಲಾ ಹೂಗಳು ಬಂದೋ
ಹಡುಗೀ ನೀನ್ಯಾಕೆ ಬರಲಿಲ್ಲ

ಅಯ್ಯಾ ಹುಡುಗಿ ನೀನ್ಯಾಕೇ
ಬೇಡಗೀ ನೀನ್ಯಾಕೆ ಬರಲಿಲ್ಲಾ
ಷಣ್ಮುಖದ ಸಣ್ಣಾ ಗರತಿ
ಎನ್ನುತೇಳಿ ನೀಲಮ್ಮ
ಎಕ್ಕದ ಹೂಗೆ ಶಾಪ ಕೊಡುತಾಲೆ

ಎಕ್ಕದೂವಿಗೆ ಶಾಪ
ಕೊಡುತ್ತಾಳೆ ನೀಲಮ್ಮ
ನೀನು ಪಾಳು ಗ್ವಾಡೇಲಿ ಬೆಳಿ ಹೋಗು

ಅಮ್ಮ ಪಾಳೂ ಗ್ವಾಡೆಲಿ ನೀನು
ಬೆಳಿಹೋಗು ಎಕ್ಕದೂವೆ ಹೂಳೇ
ನೀನು ಮಾಟ್ಲ ಕೂಟ್ಲಕ್ಕೆ ವಲಿಯೋಗು

ಮಾಟ್ಲ ಕೂಟ್ಲಕ್ಕೆ ಅಯ್ಯೋ ನೀನು
ವಲಿಯೋಗು ಎಕ್ಕದೂವೆ
ಅಂತ್ರ ಮಂತ್ರಕ್ಕೆ ವಲಿಯೋಗು

ಅಮ್ಮಾ ಅಂತ್ರ ಮಂತ್ರಕ್ಕೆ
ವಲಿಯೋಗು ಎಕ್ಕದೂವೆ
ಶಿವನಾ ಪೂಜೆಗೆ ಮರೆಯಾಗು

ನೀನು ಶಿವನಾ ಪೂಜೆಗೆ
ಮೆರಯಾಗು ಎಕ್ಕದೂವೆ
ಲಿಂಗದ ಪೂಜೆಗೆ ಸಲುಬ್ಯಾಡ

ನೀನೂ ಲಿಂಗದ ಪೂಜೆಗೆ ನೀನು
ಸಲಬೇಡ ಎನತೇಳಿ
ಎಕ್ಕದೂವಿಗೆ ಶಾಪ ಕೊಡುತಾಳೆ

ಎಕ್ಕದೂವಿಗೇ ಶಾಪಕೊಟ್ಟು
ಇಂಥಾ ಪತಿವ್ರತಿ ನೀಲಮ್ಮ
ಇನ್ನೂ ಒಂದು ಪುಷ್ಪ ಬಂದಿಲ್ಲ
ಆ ಬರದಿದ್ದ ಪುಷ್ಪಕ್ಕೂ ಶಾಪ ಕೊಡಬೇಕು ಅಂತೇಳಿ

ಅಮ್ಮ ಎಲ್ಲ ಹೂಗಳು ಬಂದೋ
ಮುದುಕೀ ನೀನ್ಯಾಕೇ ಬರಲಿಲ್ಲಾ

ಅಮ್ಮಾ ಮುದಕಿ ನೀನ್ಯಾಕೇ
ಸದಕಿ ನೀನ್ಯಾಕೆ ಬರಲಿಲ್ಲ ಎನತೇಳಿ
ಅವರು ಮರಗಣಿಗಲೆಗೆ ಶಾಪ ಕೊಡುತಾರೆ

ಅಮ್ಮ ಮರದಗಣಿಗಲೆಗೆ
ಶಾಪಕೊಡ್ತಾರೆ ನೀಲಮ್ಮ
ನೀನು ಮಾರೀರ ಮಂಡೇಲಿ ಮುಡಿ ಹೋಗು

ಅಮ್ಮ ಮಾರೀರ ಮಂಡೇಲಿ
ದುರ್ಗೀರಮಂಡೇಲಿ
ಮುಡಿಹೋಗು ಮರಗಣಿಗೆಲೆ ಹೂವೆ
ನೀನು ತಂಬಿಟ್ನಾರ್ತೀಲಿ ಮೆರಿಯೋಗು
ಮೆರಿಹೋಗು ಎನತೇಳಿ
ಶಿವನಾ ಪೂಜೆಗೆ ಸಲುಬ್ಯಾಡ

ನನ್ನ ಹರನಾ ಪೂಜೆಗೆ ನೀನು

ಸಲಬ್ಯಾಡ ಎನ್ನತೇಳಿ
ಅವರು ಮರಗಣೆಗೆಲಿಗೆ ಶಾಪ ಕೊಡುತಾರೆ.
ಮರಗಣೆಗೆಲೇಗೆ ಶಾಪಕೊಟ್ಟೂ
ಅಗಲೀಗ ಕಟ್ಟಾ ಕಡೆಗಾಲದಲ್ಲಿ ಗುರುವು
ಬಾಳೆನಾರು ಬಂದು
ಬಸವಣ್ಣ ನೀಲಮ್ಮನ
ಬಲದಲ್ಲಿ ನಿಂತಗಂಡು
ಆಗಲೀಗ ಕೇಳಪ್ಪ ಗುರುದೇವ
ನನ್ನಗೂ ಕೂಡ ಶಿವನಾ ಮೋಕ್ಷ ದೊರಕಿಸಿ ಗುರುವೆ
ಈಗಲೀಗ ನನಗೂ ಕೂಡ
ಶಿವನ ದರ್ಶನ ಆಗಿಲೀ ಸ್ವಾಮಿ ಅಂತೇಳೀ
ಬಾಳೆ ನಾರು ಬಂದು ಬೇಡ್ಕಂಡಾಗ
ಆ ನೀಲಮ್ಮನವರು ಏನೇಳ್ತರೆ ಅಂದರೆ
ಅವರು ಮತ್ತೇನ ತಾಯಿ ನುಡಿದಾಳು ॥ ಸುವ್ವಾ ಬಾ ॥

ಅಯ್ಯಾ ನಾರಿಗೆ ಶಾಪ ಕೊಟ್ಟುಬಿಟ್ಟೂ ನೀಲಮ್ಮ
ಅವರು ಮತ್ತೇನು ತಾಯಿ ನುಡಿದಾಳು ॥ ಸುವ್ವಾ ಬಾ ॥

ಪತಿದೇವರೇ ಬಸವಣ್ಣ
ಎಲ್ಲ ಪುಷ್ಪಾದಿಗಳನ್ನೂವೆ
ಈ ಸ್ವಾಮಿಗೆ ಧರಿಸಿದ್ದಾಯಿತು
ಈಗ ಇವರಿಗೆ ಈಬತ್ತಿ ಬಸುವಂಗ ಧರಿಸಬೇಕು ಅಂತೇಳಿ
ಬಸವಣ್ಣ ನೀಲಮ್ಮನವರು
ಈಬತ್ತಿ ಬಸುವಂಗ ಯಾವ ರೀತಿ ಧರಿಸ್ತರೆ ಅಂದರೆ

ಅಯ್ಯ ಗುಂಡು ಗುಂಡುಕೆ ತೈಲತಗದು
ಅದನ್ನ ಬೆಂಬೂದಿವೊಳಗೆ ಹದಮಾಡಿ
ಅಮ್ಮ ಬೆಂಬೂದಿಯೊಳಗೆ ಹದಮಾಡಿ
ಈಭುತ್ತಿಯ ಸಂಭ್ರಮದಿಂದ ಧರುಸ್ಯಾರು
ಅವರು ಸಂಭ್ರಮದಿಂದ ಧರಸಿದಾರೂ

ಈಬತ್ತಿ ಬಸುಮಂಗವನ್ನು ಧರಿಸಿ
ಆದಿ ಕಲ್ಯಾಣದ ಬಸವಣ್ಣ ನೀಲಮ್ಮನವರು
ಪತಿದೇವರಿಗೆ ಮತ್ತೇನು ಮಾತಾಡ್ತರೆ ಅಂದರೆ
ಸ್ವಾಮಿ

ಸ್ವಾಮಿ ಈಗ ಈಭಕ್ತಿ ಬಸುಮಂಗ ಧರಿಸಿದೋ
ಇವರಿಗೆ ರುದ್ರಾಕ್ಷಿ ಮಾಲೆ ಧರಿಸಬೇಕು ಅಂತೇಳಿ
ಯಾವ ರೀತಿ ರುದ್ರಾಕ್ಷೀ
ಮಾಲೆ ಧರಿಸ್ತರೆ ಅಂದರೆ

ಅಯ್ಯಾ ತಾನತಾನಕ್ಕೆ ಬಚ್ಚಿಟ್ಟತಾನ
ತೋಳಲ್ಲಿ ರುದ್ರಾಕ್ಷಿ
ನೋಡ್ದವರಿಗೆ ಕರ್ಮ ಪರಿಯಾರ
ಅಯ್ಯಾ ನೋಡ್ದವರಿಗೆ ಕರ್ಮ
ಪರಿಯಾರ ಎನತೇಳಿ ಭೂಷಣದಿಂದ ಧರಿಸಿದಾರೂಽಽ

ಭೂಷಣದಿಂದ ಗುರುವೂ
ರುದ್ರಾಕ್ಷಿ ಮಾಲೆನೆ ಧರಿಸಿ
ಈಗ ಸ್ವಾಮಿ ಪೂಜೆಗೆ ಗುರುವು
ದೂಪ ಸಾಂಬ್ರಾಣಿ ತರಬೇಕಂತೇಳಿ
ದೂಪ ಸಾಂಬ್ರಾಣಿ ಯಾವ ರೀತಿ ಕರಿತಾರೆ ಅಂದರೆ

ಅಯ್ಯಾ ಕೆಂಡದ ಮ್ಯಾಲೆ ಮಡಿಗಿದಾರೆ
ಗಗನಕ್ಕೆ ಏರುವುದು
ಗಂಧಕರ ಅಂಗಡೀಲಿ ಇರುತಾದೆ
ಅಯ್ಯಾ ಗಂಧಕರ ಅಂಗಡೀಲಿ
ಇರುವುದೂ ಮಾರುವುದೂ
ಧೂಪ ಸಾಂಬ್ರಾಣಿ ತಂದು
ಬೆಟ್ಟಿ ಮಂಗಳಾರತಿ ಬೆಳಿಗಾಳೂ

ಗಂಧಕರ ಅಂಗಡೀವಳಗಿರುವಾ
ಧೂಪ ಸಾಂಬ್ರಾಣಿನೆ ಕರೆದು
ಜಗತ್ತು ಗುರು ಧರೆಗೆ ದೊಡ್ಡವರಿಗೆ
ಏನಂತ ಎತ್ತಿ ಮಂಗಳಾರತಿ ಬೆಳಗ್ತರೆ ಅಂದರೆ
ಹರಹರ ಎನ್ನುವರ
ನೆರೆಯಲ್ಲಿ ಇರುಸಯ್ಯ
ಅಪ್ಪ ಮಲ್ಲಿಕಾರ್ಜುನನಾ ನೆನೀರಯ್ಯ
॥ ಸುವ್ವಾ ಹೇಳಮ್ಮ ದೇವಾರು ದೇವ ಸುವ್ವಿ ॥

ಗುರುವೆ ನಿಂದುಕರ ಮಾಡವರಾ
ಅಯ್ಯ ಮುಂಭಾಗದಲ್ಲಿ ನಿಲ್ಲಿಸಪ್ಪ

ಅಯ್ಯೊ ಮರುಗ ಮಲ್ಲಿಗೆ ನಮ್ಮ ಶಿವನೀಗೆ ॥ ಸುವ್ವಾ ಹೇಳಮ್ಮ ॥
ಮರುಗ ಮಲ್ಲಿಗೆ ತಂದು
ಶಿವನ ಲಿಂಗಕ್ಕೆ ಧರಿಸಿ
ನಿನಗೆ ದರ್ಶನದೊಳಗಾರುತಿ ಬೆಳಗುವೆವೊ ॥ ಸುವ್ವಾ ಹೇಳಮ್ಮ ॥

ಎತ್ತಿ ಮಂಗಳಾರುತಿ ಬೆಳಗಿ
ಬಸವಣ್ಣ ನೀಲಮ್ಮನವರು
ಜಗತ್ತು ಗುರು ಧರೆಗೆ ದೊಡ್ಡವರ ಪಾದಕ್ಕೆ ಸರಣು ಮಾಡುವಾಗ
ಯಾವಾಗ ಬಾಳ ಭಕ್ತಿ ಬಾಳ ಸತ್ಯದಲ್ಲಿ
ನೂರಾರು ಜಾತಿ ಪುಷ್ಮನು ಕರೆದೂ
ಪೂಜೆ ಮಾಡಿ ಮಂಗಳಾರುತಿ ಬೆಳಗಿ
ಧರೆಗೆ ದೊಡ್ಡವರಿಗೆ ಕೈಯೆತ್ತಿ ಮುಗಿವಾಗ

ಆಗಲೀಗ ಜಗತ್ ಗುರು ಪರಂಜ್ಯೋತಿ ಪಾತಾಳ ಜ್ಯೋತಿಯವರು
ಮಂಗಳಾರತಿ ಯಾವಾಗ ಅರ್ಪಿಸಿ
ಬೆಳಗದಂತಹ ಟೈಮನಲ್ಲಿ
ಆದಿ ಕಲ್ಯಾಣ ಪಟ್ಟಣದಲ್ಲಿದ್ದಂತಹ

ಹಗಲು ದೀಪಗಳೆಲ್ಲ
ಅಯ್ಯ ಪಕ್ಕಪಕ್ಕನೇ ದೀಪ ಕತ್ತಿಕೊಂಡೋ ॥ ಸುವ್ವಾ ಬಾ ಚನ್ನ ॥

ಅಯ್ಯೋ ಪಕ್ಕ ಪಕ್ಕನೇ ದೀಪಾ
ಕತ್ತಗೊಂಡೋ ಬಸವಣ್ಣ
ಕತ್ತಗೊಂಡೋ ನೀಲಮ್ಮ
ಅಲ್ಲಿ ಕಲ್ಯಾಣ ಪಟ್ಟಣ ಪ್ರಕಾಶವಾಯ್ತು ॥ ಸುವ್ವಾ ಬಾ ಚನ್ನ ॥

ಮಂಗಳಾರತಿ ಬೆಳಗುದರೊಳಗಾಗಿ ಗುರುವೂ
ಕಲ್ಯಾಣ ಪಟ್ಟಣದ ಹಗಲ ದೀವಿಗೆಗೊಳೆಲ್ಲ

ಧಗ ಧಗನೇ ಕತ್ತಿಕೊಂಡು
ಧಿಗೀ ಧಿಗಿನೇ ಉರಿತಿದ್ದೋ
ಬಸವಣ್ಣನವರ ಗುರುದೇವ
ಉರಿಯ ಗದ್ದುಗೆ ಮ್ಯಾಲೆ ಜಗತ್ತು ಗುರು ಧರೆಗೆ ದೊಡ್ಡಯ್ಯ

ಅವರು ನೆಗನೆಗತ
ಪರಂಜ್ಯೋತಿ ನಿಂತಾರಾಗ ॥ ಸುವ್ವಾ ಹೇಳಮ್ಮ ॥

ಧರೆಗೇ ದೊಡ್ಡವರ
ಮುಖವನ್ನೇ ನೋಡಿದರೂ
ಕಲ್ಯಾಣದ ಬಸವಣ್ಣ
ಅವರು ಕರವೆತ್ತಿ ಕೈಯ್ಯ
ಸ್ವಾಮಿ ಮುಗಿದಾರೂ ॥ ಸುವ್ವಾ ಹೇಳಮ್ಮ ॥

ಅಯ್ಯಾ ಬಲದಲ್ಲಿ ಬಸವಣ್ಣ
ಕರವೆತ್ತಿ ಕೈಮುಗುದು
ಎಡದಲ್ಲಿ ನೀಲಮ್ಮ
ಪಾದ ಜೋಡಿಸಿಗೊಂಡು
ಕಣ್ಣು ನೇತ್ರ ಮುಚ್ಚಿ
ಅವಳು ಎರಡು ಕೈಯೆತ್ತಿ
ಗುರುವೇ ಸರಣೆಂದಽಽ ॥ ಸುವ್ವಾ ಹೇಳಮ್ಮ ॥

ಸತಿ ಪತಿಗಳೂ ಕೈಯೆತ್ತಿ ಮುಗುದೂ
ಧರೆಗೇ ದೊಡ್ಡವರ ಮುಂಭಾಗದಲ್ಲಿ ನಿಂತಗೊಂಡರು
ಬಸವಣ್ಣ
ನಿನ್ನ ಸತ್ಯಕ್ಕೆ ಒಪ್ಪಿದೀ ಭಕ್ತಿಗೆ ಮೆಚ್ಚಿ ಕಂದಾ ಅಂತೇಳಿ
ಜಗತ್ತು ಗುರು ಧರೆಗೆ ದೊಡ್ಡಯ್ಯ
ಪರಂಜ್ಯೋತಿಯವರು
ಬಸವಣ್ಣ
ಉತ್ತರಕಾಂಡವನ್ನೇ ಬಿಟ್ಟುಬಿಟ್ಟು
ಆದಿ ಕಲ್ಯಾಣ ಪಟ್ಟಣ ಏನೇನು
ವಿಶ್ವಾರ್ತಿ ಅಂತೇಳೀ
ನಿಮ್ಮ ಸತ್ಯನು ಭಕ್ತಿ ನಾನೇ ತಿಳಿಬೇಕು ಅಂತೇಳಿ
ಆದಿ ಕಲ್ಯಾಣದ ಗುರು ಮಠಕ್ಕೆ ಬಂದಿ ಕಂದಾ
ನಿಮ್ಮ ಭಕ್ತಿ ಕಂಡಂಗಾಯ್ತು ಸತ್ಯ ಕಂಡಂಗಾಯ್ತು
ಈ ಆದಿ ಕಲ್ಯಾಣ ಪಟ್ಟಣ ನನ್ನ ಕಂದಾ
ಭೂಮಿ ಇರಗಂಟ
ಸ್ಥಿರುವಾಗಲಿ ಅನತೇಳಿ

ಅವರು ಬಸವಣ್ಣನಿಗೆ ಆಶೀರ್ವಾದ
ಗುರುವೇ ಕೊಡುತ್ತಾರೆಽಽ ॥ ಸುವ್ವಾ ಬಾ ಚನ್ನ ॥

ಕಲ್ಯಾಣಕೆ ಬಸವಣ್ಣ
ಹೆಚ್ಚಿನ ಭಗುತ ಸರಣಾ

ಎನ್ನುವಂತ ಹೆಸರು
ಈ ಆದಿಕಲ್ಯಾಣ ಗುರುಮಠಕೆ ಉಂಟಾಗಲಿ ಕಂದಾ ಅಂತೇಳಿ
ಪರಂಜ್ಯೋತಿ ಧರಗೆ ದೊಡ್ಡವರು
ಬಸವಣ್ಣನವರಿಗೆ ಹರಸೀ ಆಶೀರ್ವಾದ ಕೊಟ್ಟರು
ಆಗ ಬಸವಣ್ಣನವರು
ಧರಗೆ ದೊಡ್ಡವರಿಗೆ ಹೇಳುತಾವರೆ
ಸ್ವಾಮೀ
ಲಕ್ಷ ಕೋಟಿ ಜಂಗಮರೆಲ್ಲಾ
ಊಟಕ್ಕೆ ಕುಳಿತಿದ್ದರು
ನಿಮ್ಮ ಹೊತ್ತಗಂಡು ನಾನು ಬರುದ
ನೋಡುಬಿಟ್ಟು
ನಮ್ಮ ಮಡದಿ ನೀಲಮ್ಮನವರು
ನೀಮ್ಮ ತಲೇ ಇಡಕ್ಕಂಡು
ಬರುವುದು ಕಣ್ಣಾರೆ ನೋಡುಬಿಟ್ಟು
ಸತ್ಯ ಸರಣಮಾತ್ಮರೆಲ್ಲ
ಏನಂತ ಕೊಂಡಾಡ್ಕಂಡು ಕಲ್ಯಾಣ
ಬಿಟ್ಟುಬಿಟ್ಟು ಹೊರಟೋದ್ರು ಅಂದರೆ ಸ್ವಾಮಿ
ನೋಡು ಬಸವಣ್ಣ ಅಲ್ಲಿಂದ ಕಟ್ಟದೂರು
ಜಂಗುಮ ರುಸ್ತುಮರು ಕಾವೀ ಕಾಮಳ್ಳಿ ಗೆದ್ದವರೂ
ಕಲ್ಯಾಣಕ್ಕೆ ಲಿಂಗವಂತ ಅಂತ ತಿಳಕ್ಕಂಡು
ನಾವು ಊಟಕ್ಕೆ ಬಂದಿದ್ದೊ
ಈ ಕಲ್ಯಾಣದ ಬಸವಣ್ಣ
ಮಾಂಸದ ಪೊಟ್ಟಣ ಹೊತ್ಗಂಡೋಯ್ತಾವರೆ
ಇವರು ಮಾಂಸ ತಿನ್ನಬಹುದು
ನೀಲಮ್ಮ ಸುರಾಯದ ಗಡಗೆ
ತಕ್ಕೊಂಡೋಯ್ತರೆ ಹೆಂಡ ಕುಡಿ ಬೌದು ಅಂತೇಳಿ
ಎಲ್ಲಾ ಸರಣಮಾತ್ಮರು ಗುರುದೇವ
ಉಣ್ಣೋ ಅನ್ನ ಬಿಟ್ಟುಬಿಟ್ಟು
ಕಲ್ಯಾಣದಿಂದ ಕಡದುಹೊರಟೋದ್ರು ಸ್ವಾಮಿ
ಎನತೇಳಿ ಗುರುವೂ

ನನ್ನ ಬಸವಣ್ಣ ಗುರುವೇ
ಕೈಯೆತ್ತಿ ಮುಗಿವಾಗ
ನನ್ನ ಧರೆಗೆ ದೊಡ್ಡವರು
ಮಂಟೇದ ಲಿಂಗಪ್ಪ
ಮಾಯ್ಕಾರದ ಒಡೆಯ

ನನ್ನ ಪರಂಜ್ಯೋತಿಯವರು
ಅವರು ಮತ್ತೇನು ಗುರುವೂ
ನುಡಿದಾರೂ ॥ ಸುವ್ವಾ ಬಾ ಚನ್ನ ॥

ಬಸವಣ್ಣ
ಈ ಕಲ್ಯಾಣದಲ್ಲಿ
ಈಗಲೀಗ ಎಲ್ಲ ಜಂಗುಮರೂ
ಕಲ್ಯಾಣ ಬಿಟ್ಟುಹೊರಟೋದ್ರೂ ಅಂತ ಕೇಳ್ತಿಯಲ್ಲಪ್ಪ
ಬಸವಣ್ಣ
ನಿನ್ನ ಕಲ್ಯಾಣದಲ್ಲಿರ್ತಕ್ಕಂತ
ಸರಣ ಮಾತ್ಮರೆಲ್ಲ
ಒಳ್ಳೇ ಶರಣಾರಲ್ಲ ಕಣ್ಣಯ್ಯ
ಒಳ್ಳೆಯವರು ಯಾರು
ಕೆಟ್ಟವರು ಯಾರು ಎನುವುದು
ನಿನಗೆ ಇನ್ನೂ ಗೊತ್ತಿಲ್ಲ ಬಸವಣ್ಣ

ಮುವತ್ತು ಮೂರು ಮಂದಿ ಮುನಾದಿ ಮುನಾದಿ ಮುನಿಗಳು ಲಿಂಗಕಟ್ಕೊಂಡು
ಅರುವತ್ತಾರು ಮಂದಿ ಜಂಗುಮರಿಗೂ ಕೂಡ ಲಿಂಗ ಕಟ್ಟುಕೊಂಡು
ಲಕ್ಕಷದ ಮ್ಯಾಲೇ ತೊಂಬತ್ತೇಳು ಕೋಟಿ ಶಿವಶರಣಾಮಾತ್ಮರಿಗೆಲ್ಲ
ಲಿಂಗಕಟ್ಕಂಡು ಬಸವಣ್ಣ
ಈ ಕಲ್ಯಾಣದಲ್ಲಿ ಮಾಸಮಾಡ್ತೀಯಲ್ಲಪ್ಪ
ಕಳ್ಳರು ಯಾರು
ಸತ್ಯ ಪುರುಷರು ಯಾರು ಎನ್ನುದ
ನಿನ್ನ ಕಣ್ಣು ಮುಂಭಾಗದಲ್ಲೆ ತೋರಿಸ್ತೀನಿ ಮಗನೆ

ನನ್ನ ಒಂದಿಗೆ ಬಪ್ಪ ಬಸವಣ್ಣ ॥ ಸುವ್ವಾ ಬಾ ಚನ್ನ ॥
ಅಯ್ಯಾ ಒಂದಿಗೇ ಬಪ್ಪ ಬಸವಣ್ಣ ಎನುತೇಳಿ
ಅವರು ಕಲ್ಯಾಣಿ ಕೊಳಕೆ ಬರುತಾರೆ ॥ ಸುವ್ವಾ ಬಾ ಚನ್ನ ॥

ಈಗಲೀಗ ಕಲ್ಯಾಣಿ ಕೊಳಕೆ ಬಂದರು
ಕಲ್ಯಾಣಿ ಕೊಳದ ದೂರದಲ್ಲಿ
ಆ ಬಸವಣ್ಣೋರ ನಿಲ್ಲಿಸಿಬುಟ್ಟು
ನೋಡಪ್ಪ ಸತ್ಯ ಸರಣರ ಬಳಿಗೆ ಬಂದರು
ಯಾರು? ಧರೆಗೆ ದೊಡ್ಡವ್ರು
ಆಲದೆಲೆ ಅಳ್ಳಾಡ್ದಂಗೆ ತೂರಾಡ್ತ ಗುರುವು
ನೂರು ವರ್ಷದ ಹಣ್ಣಣ್ಣು

ಜಂಗುಮರ 'ಅವತಾರ ತಾಳಿಕೊಂಡು
ಆ ಸತ್ಯ ಸರಣುಮಾತ್ಮರ ಬಳಿಗೆ ಬಂದವರೆ
ಬಸವಣ್ಣನವರು ದೂರದಲ್ಲಿ
ನಿಂತುಕೊಂಡು ಸರಣಮಾತ್ಮರ ನೋಡ್ತಾವರೆ
ಈಗ ಬಸವಣ್ಣೋರು ಬಲಗಡೆ ತಿರುಗಿ ನೋಡುವಾಗ
ಬಸವಣ್ಣ
ಈಗ ಅತ್ತಗೆ ನೋಡಬೇಡ ಇತ್ತಗೆ ನೋಡು

ಇಲ್ಲಿ ಸರಣಾರ ಸತ್ಯವ ತೋರುತ್ತೀನಿ ॥ ಸುವ್ವಾ ಬಾ ಚನ್ನ ॥

ಅಯ್ಯಾ ಶರಣಾರ ಸತ್ಯವ
ತೋರ್ತಿನೀ ಎನತೇಳಿ
ನನ್ನ ಪರಂಜ್ಯೋತಿ ಸ್ವಾಮೀಯವರು ನುಡಿದಾರೂss ॥ಸುವ್ವಾ ಬಾ ಚನ್ನ ॥

ಸರಣರ ಬಳಿಗೆ ಬಂದರು
ಏನ್ರಪ್ಪ ಸರಣಾತ್ಮರೇ
ಈ ಕಲ್ಯಾಣದ ಕೊಳದ ಸುತ್ತ
ಇಷ್ಟೊಂದು ಶಿವಸರಣಮಾತ್ಮರೆಲ್ಲ
ಸ್ನಾನ ಜಪ ಮಾಡಿ ಮಾಡ್ತರಲ್ಲ ಯಾಕರಪ್ಪ ?
ಸ್ವಾಮಿ ಜಂಗುಮರೆ
ನೀವು ಯಾವ ನಾಡೂ ಜಂಗುಮರು ಹೇಳಿರಪ್ಪ
ನಾವು ಉತ್ತರ ದೇಶದ ಕಡೆ ಜಂಗುಮರು
ಉತ್ತರ ದೇಶದಿಂದ
ನನ್ನ ಕಲ್ಯಾಣದ ಗುರುಮಠಕ್ಕೆ ಯಾತಕ್ಕೆ ಬಂದಿರಿ ಸ್ವಾಮಿ
ಕಲ್ಯಾಣ ಪಟ್ಟಣದಲ್ಲಿ ಏನು ಏನು
ವಿಶ್ವಾರ್ತಿ ಅಂತೇಳಿ
ನಿಮ್ಮಗೊಳ ಮಾತ ಕೇಳಬೇಕು ಅಂತೇಳಿ
ಕಲ್ಯಾಣಕ್ಕೇ ಬರಬೇಕಾಗ್ಬುಡ್ತು ಕಾಣರಯ್ಯ
ನೀವಾಡ್ತಕ್ಕಂತ ಮಾತ
ನೀವಾಡ್ತಕ್ಕಂತ ವಾರ್ತೆಗಳೆಲ್ಲ
ನಮಗೇ ಉತ್ತರ ದೇಶಕ್ಕೆ ಗೊತ್ತಾಗುಬುಡ್ತು ಕಣರಪ್ಪಾ
ಜಂಗುಮರೇ
ಇವತ್ತೋ ಬಂದಿರೀಯೋ
ನೆನ್ನೇ ಬಂದಿರಿಯೋ
ಮೊನ್ನೆ ಬಂದಿರೀಯೋ?
ಇದೇ ಗಳಿಗೆ ಒಳಗೆ ಬಂದೂ

ಈ ಕೊಳದ ಏರಿ ಮ್ಯಾಲೆ ನಿಂತಿವ್ನಿ ಕಣಪ್ಪ
ಏನು ವಿಶೇಷವಾದ ವಾರ್ತೆ ನಿಮ್ಮ ಕಲ್ಯಾಣದಲ್ಲಿ ಎಂದರು
ಹಂಗಲ್ಲ ಸ್ವಾಮಿ
ಕಲ್ಯಾಣದ ಬಸವಣ್ಣನವರು
ಪ್ರತಿದಿವಸವೂ ಕೂಡ
ಲಕ್ಕಷ ಕೋಟಿ ಜಂಗುಮರಿಗೆಲ್ಲ
ಅನ್ನಕೊಟ್ಟು ನಿತ್ಯ ಭೋಜನ ಮಾಡ್ತಿದ್ರು
ಪ್ರತಿ ಕಾಲದಲ್ಲೂ ಬಂದು ಉಟ ಮಾಡಿ
ವೀಳ್ಯಾ ತಕ್ಕಂಡೂ ಹೋಗುತ್ತಿದ್ದೊ ಸ್ವಾಮಿ
ಇವತ್ತೂ
ತಿಳಿಯದೇ ಬಂದು ಬುಡುವತ್ತಗೆ
ನಮ್ಮಗೆಲ್ಲ ಅನ್ನ ಇಕ್ಕುತ್ತಿದ್ದರು
ಯಾರೂ? ನೀಲಮ್ಮ
ಬಸವಣ್ಣೊರೋ ಸಾರುಬಿಡ್ತಿದ್ದರೂ
ಆ ಕಡೇ ಬಾಗಲಲಿ ಒಬ್ಬ
ಕಟುಗರ ಸಂಗಯ್ಯನ ಇರಿಸೀಕಂಡವರೆಪ್ಪ
ಆ ಸಂಗಯ್ಯ ಬಸವಣ್ಣ ನೀಲಮ್ಮ ಅಂತ
ಕೂಗುಬಿಟ್ಟರೇನೂ ಅನ್ನ ಇಕ್ಕುತ್ತಿದ್ದನ್ನೂ ಬುಟ್ಬುಟ್ರು
ಸಾರು ಬುಡ್ತಿದ್ದನೂ ಬುಟ್ಟು ಬುಟ್ರು
ಆ ಸಂಗಯ್ಯದಿಕ್ಕೆ ನೋಡುಬಿಟ್ಟು ಎದ್ದೊಂಟೋದ್ರು
ಹೋಗ್ಲೀ ಅಂದುಬಿಟ್ಟು
ನಾವೆಲ್ಲ ಕೂತಿದ್ದರೆ
ಅತ್ಲಿಂದ ಏನು ತಂದರು ಗೊತ್ತ ಸ್ವಾಮಿ ?
ಬಾಡಿನ ಮೊಟ್ನ
ತಲೆಮ್ಯಾಲೆ ಹೊತ್ತಕ್ಕಂಡು ಬಸವಣ್ಣ ಬಂದ
ಹೆಂಡದ ಗಡಿಗೆ ತಕ್ಕಂಡು
ನೀಲಮ್ಮ ಬಂದರು
ಇವರು ಮಡ್ಡೀ ಮಾಂಸ ತಿನ್ನುವರೂ
ಈವಾಗಲೀಗ ಇವತ್ತೀನ ದಿವಸದಲ್ಲಿ
ಬಸವಣ್ಣೋರು ಬತ್ತಗೆಟ್ಟವರು ಅಂತೇಳಿ
ಈ ಬತ್ತಗೆಟ್ಟೋರ ಮನೇಲಿ
ಅನ್ನ ಉಂಡುಬಿಟ್ಟು ನಾವು ಸುದ್ದವಾಗ್ಲಿಲ್ಲ
ಅಂತೇಳಿ ಸ್ವಾಮೀ
ಇಕ್ಕಿದ್ದ ಬಟ್ಟೇನೆಲ್ಲಾನು ಒಗದು ಮಡಿ ಮಾಡಿ
ತಾನ ಮಡಿ
ಮಡಿ ಮಾಡಿ

ಈಗ ಜಾತಿಗೆಟ್ಟ ಮನುಷ್ಯರಾಗಬಾರುದ್ದು
ನಾವೂ ಒಳ್ಳೆಯವರಾಗಬೇಕಂತೇಳೀ
ಸುಚೀಯಾಗತಾಯಿವಿ ಸ್ವಾಮಿ ಅಂದರು
ಏನ್ರಪ್ಪ ಸರಣಾರೇ
ನೀವಾಡಿದ ಮಾತು ಗೊತ್ತಾಯಿತು ಕಣಿರಯ್ಯ
ಮೈತೊಳಕತ್ತೀವಿ ಗುರುವೂ
ನಿಮ್ಮ ಮೈನ ಕೊಳೆ ಓಂಟೋಯ್ತದೇ
ಬಟ್ಟೇ ಒಕ್ಕತ್ತಿರೀ
ಬಟ್ಟೇ ಮಡಿಯಾಯ್ತದೇ ಅಷ್ಟೇ
ಬಟ್ಟೆ ಕೊಳೆವಂಟೋಯ್ತದೆ
ನಾಲಿಗೆ ಉಜ್ಜಿಗಂದೂ
ವ್ಯಾ ಅಂತೇಳಿ ನೀರಿಗೆ ಬೊಗ್ಗಿ
ಉಗುಳಿದುರೆ
ಹೊಟ್ಟೆಲಿರುವ ಅನ್ನ ಈಚೆಗೆ ಬರಕಿಲ್ಲ ಕನಪ್ಪ
ಈ ತಾನ ಮಡಿಯ ನಾನು ಒಪ್ಪುವನಲ್ಲಾ ॥ ಸುವ್ವಾ ಬಾ ಚನ್ನ ॥

ಈ ತ್ಥಾನ ಮಡಿಯ
ನಾವೋಪ್ಪದಿಲ್ಲ ಕಣರಯ್ಯ
ಈ ಕಲ್ಯಾಣಾದ ತಾನ
ನಮಗೆ ಸರಿಯಿಲ್ಲ ಕಾಣಾ ॥ ಸುವ್ವಾ ಬಾ ಚನ್ನ ॥

ನಿಮ್ಮ ಕಲ್ಯಾಣ ಪಟ್ಟಣದ ಸ್ಥಾನ
ನಮಗೆ ಸರಿಯಿಲ್ಲ ಕಾಣರಪ್ಪ ಅಂದುರು
ಸ್ವಾಮಿ
ಏನಾರುವೆ
ತಿಳಿಯದೆ ಕುಲ ಹದಿನೆಂಟು ಜಾತಿಯವರ ಮನೆಗೂ ನಾವು
ಭಿನ್ನಕ್ಕೆ ವಂಟೋಗುಬಿಟ್ಟೇ
ಸುಚಿಯಾಗಬೇಕಾದರೆ ಹೆಂಗೆ? ಅಂದರು
ನೋಡಯ್ಯ
ಕುಲಹದಿನೆಂಟು ಜಾತಿಯೋರು ಮನೆಗ
ಹೋಗಿ ಊಟ ಮಾಡುಬುಟ್ಟು
ಶುಚಿಯಾಗುಬೇಕೆಂದರೆ ಸರಿ
ಶುಚಿಯಾಗಕ್ಕೇ ಹೇಳ್ತಿನೀ ಕೇಳ್ರಪ್ಪ
ನಾವೇನೂ ನಮ್ಮ ದೇಹವನ್ನೇ ತೊಳೆದು
ಶುಚಿ ಮಾಡ್ಕಬೇಕಾದರೆ
ನಮ್ಮ ಕತ್ತಿಲಿರುವಂತ ಲಿಂಗಗಳೆಲ್ಲನೂ

ಕಳದು ನೀರುಗಿಟ್ಟು ಬಿಡಬೇಕು
ನಮ್ಮ ನಮ್ಮ ಚಿಳ್ಳುಗುರುನ್ನೇ ತಕ್ಕಂಡು
ನಮ್ಮ ಎದೆನ ಬೊಕ್ಕಬೇಕು
ಒಳಗಿರ್ತಕ್ಕಂತ
ಕಳ್ಳು ತೊಳ್ಳೆಯೆಲ್ಲಾನೂ
ಹರೇ ಕಲ್ಲು ಮ್ಯಾಲೇ ಮಡಿಗಿ
ಸಗಟಾಗಿ ತೊಳೆದು

ಬಟ್ಟೆಯ ವಗೆದಂಗೆ ಅದುನ್ನೂವೆ ವಗೆದು
ನಾವು ಬೇಲಿಯಾ ಮೇಲೆ ಹಾಕಲುಬೇಕು ॥ ಸುವ್ವಾ ಬಾ ಚನ್ನ ॥

ಬುಟ್ಟೆ ಒಗೆವಂಗೇ ಕಳ್ಳು ತೊಳ್ಳೇನೂ ಒಗೆದು
ಬೇಲಿಮ್ಯಾಲೇ ಒಣಗಾಕು ಬಿಟ್ಟು
ಅದನ್ನೇ ತಗದು ಜನ್ಮಕ್ಕೇ
ನಾವು ಸ್ನಾನ ಮಾಡಿ ಮಾಡುಬುಟ್ಟು
ಅದ ತಗದು ನಮ್ಮ ದೇಹಕ್ಕೆ ಧರಿಸ್ಕಂಡರೇ
ನೋಡಪ್ಪ ನಾವು ಸುಂಗಾರ ಹಾಗಗಂಟ
ನಮ್ಮ ಲಿಂಗೂ ನೀರ್ನೊಳಗೆ ಸ್ನಾನ ಮಾಡ್ಕಂಡಿರ್ತದೇ
ಆ ಸುಂಗಾರವಾದಂತ ಲಿಂಗತಗದು ಕೊರಳಿಗೆ ಧರಿಸ್ಕಂಡಂರೆ
ನಾವು ಬಂಗಾರದಂತ ಶುಚಿಯಾಯ್ತಿವಿ ಕನಪ್ಪ
ಸ್ವಾಮೀ ಜಂಗುಮರೇ
ಕಳ್ಳು ತಗದು ಒಗೆದು ಮಡಿ ಮಾಡೋದು
ಯಾವ ಲೋಕದಲ್ಲಿ ಉಂಟು
ನಮ್ಮ ಉತ್ತರ ದೇಶದ ಕಡೇ
ಬತ್ತಗೆಟ್ಟದ ಮನುಷ್ಯರೆಲ್ಲ ಮಾಡ್ಕೋಳ್ಳೋದು ಹಿಂಗೆ ಕಣರಪ್ಪ ಅಂದರು

ಅಂಗರೆ ಏನೂ ಆಗಕಿಲ್ಲ ಸ್ವಾಮಿ
ಏನು ಆಗದಿಲ್ಲ
ನೀವು, ನಾವು ಮಾಡಿದಂಗೇ
ಮಾಡಕಬೇಕಾದರೇ
ಮೊದಲಾಗಿ ನಿಮ್ಮ ಲಿಂಗಗಳು ಕಳೆದೂ
ನೀರ್ಗಿಟ್ಟು ಬಿಡ್ರಪ್ಪಾ ಅಂದರು
ಈಗಲೀಗ
ಎಲ್ಲಾ ಜಂಗುಮರು ಉತ್ತರ ದೇಶದ
ಜಂಗುಮರ ಮಾತೀನಂತನೇ ಮಾಡ್ಕಬೇಕು
ಅಂತೇಳಿ

ನೋಡಪ್ಪ ಎದೆ ಬಕ್ಕೊಳಕ್ಕೂ
ಮೊದಲಾಗಿ ಲಿಂಗಗಳು ಕಳದು ಕಳದು
ಅಯ್ಯಾ ಕೊಳಕ್ಕೆ ತೆಗೆದು ಇಡುತಾರೆ ॥ ಸುವ್ವ ಬ ಚನ್ನ ॥

ಎಲ್ಲ ಲಿಂಗಗಳನೂ ದೇವಾ
ಕಳದು ಕೊಳಕೆ ಇಟ್ಟರೂ ಸ್ವಾಮಿ
ಈ ಸತ್ಯ ಸರಣಮಾತ್ಮರೂ
ಲಿಂಗಗಳಿಗೆಲ್ಲ
ಧರೆಗೆ ದೊಡ್ಡವರೂ ಮಂಟೇದ ಲಿಂಗಪ್ಪಾ
ಈಗಲೀಗ ಏನಂತ ಶಾಪಕೊಡ್ತಾರೆ ಅಂದರೇ
ಕೇಳಿರಪ್ಪ
ಈ ಕಳ್ಳ ಜಂಗುಮರೂ
ಕೊರಲಲ್ಲಿರ್ತಕ್ಕಂತ ಲಿಂಗುಗೊಳೇ
ಇವರ ಕೊರಳಲ್ಲೀ ಕಾಲ ಕಳಿಬೇಡಿ ಕಂದಾ
ಈ ಕಲ್ಯಾಣ ಪಟ್ಟಣದ ಕಲ್ಯಾಣಿ ಕೊಳದಲ್ಲಿ ನಿಮಗೆ ಸ್ಥಳವಿಲ್ಲ
ಇವರು ಬಿಚ್ಚೀ ಇಟ್ಟ ಗಳಿಗೇ ಒಳಗೆ
ನೀವು ಶುಚಿಯಾಗಬೇಕಾದರೆ
ನೀವು ಕೊಕ್ಕೋರು ಕಣಿವೆಗೆ ನೀವು ಹೋಗಿರಯ್ಯ ॥ ಸುವ್ವಾ ಬಾ ಚನ್ನ ॥

ನೀವು ಕುಕ್ಕೋರು ಕಣಿವೆಗೆ
ಹೋಗಿ ನನ್ನ ಕಂದಾ
ಅಯ್ಯ ಕುಕ್ಕೋರು ಕಣಿವೆಗೂ
ತಲಕಾಡೂ ಮಾಲಂಗೀ
ಎಂದರೆ ಗುರುವೂ
ಅಲ್ಲೀ ಎರಡು ಹೊಳೆ ಕೂಡಿದಾ
ನದಿಯಲ್ಲಿ ನನ್ನ ಕಂದಾ
ನೀವು ಶಾಶ್ವತವಾಗಿ ಇರೂರಯ್ಯ ॥ ಸುವ್ವಾ ಬಾ ಚನ್ನ ॥

ಈಗಲೀಗ ಕುಕ್ಕೋರ ಕಡೆಗೂ
ತಲಕಾಡು ಮಾಲಂಗೀ
ಮಡೂನಳ್ಳಿಗೋಗಿ ವಾಸಾಸ್ತಾನ ಮಾಡಿ ಕಂದಾ
ನಿನಗೆ ವರ್ಷಕ್ಕೆ
ಒಂದುವಾರ್ತಿ ಶಿವಪೂಜೆ
ಆಗದೇ ಹೋದ್ರು ಕೂಡ
ಈಗಲೀಗ ಆದಿನಾರಯಣಸ್ವಾಮಿ ಪಡದು
ಭೂಲೋಕದಲ್ಲೀ ಬಿಟ್ಟಿದ್ದೀನಿ

ಈಶ್ವರ ಮಲ್ಲಯ್ಯನ ಪಡೆದು
ಈ ಭೂಲೋಕಕ್ಕೆ ಕಳುಗಿದ್ದೀನಿ
ಈಗಲೀಗ ಶಿವಾ ನಾರಾಯಣ ಇಬ್ಬರೂ ಸೇರಿದಂತೆ
ಮೂರನೆ ಪೂಜೆ ನಿಮಗಾಗಬೇಕಾದರೆ

ಅಯ್ಯ ಮೂರನೇ ಪೂಜೆ ಆಗಬೇಕಾದರೆ
ಅಯ್ಯ ನಾರಾಯಣನಾ ಹೆಸರೀಗೆ
ಅಯ್ಯ ಶ್ರಾವಣ ಶನಿವಾರ
ಎನತೇಳಿ ಕಂದಾ
ಐದುವಾರ ಬರಬೇಕು
ಅಯ್ಯ ನನ್ನ ಹೆಸರಿಗೆ
ಶಿವನ ಹೆಸರಿಗೆ
ಅಯ್ಯ ಕಾರ್ತಿಕದ ಸೋಮಾರ
ಎನತೇಳಿ ಕಂದಾ
ಐದು ವಾರಬರಬೇಕು
ಬಂದಂತ ಕಂದಾ ಗಳಿಗೇಯ ಒಳಗೆ
ತಿಂಗಳ ಸೇವೆ ಮಾಡ್ತುತೀನಿ ॥ ಸುವ್ವಾ ಬಾ ಚಿನ್ನ ॥

ಅಯ್ಯ ಒಂದು ತಿಂಗಳು ಕಾಲ
ನಿಮ್ಮ ಲಿಂಗದ ಪೂಜೆಯು ಅಲ್ಲಿ
ನಡೆಯಲಿ ನನ್ನ ಕಂದಾ
ನೀವು ಮಾಲಂಗಿ ಮಡುವಿಗೆ ಹೊರಟೋಗಿರಯ್ಯ ॥ ಸುವ್ವಾ ಬಾ ಚನ್ನ ॥

ಮಾಲಂಗಿ ಮಡುವಿಗೆ
ಹೊರಟೋಗಿರಪ್ಪ ಲಿಂಗಗಳೇ ಎಂದರು
ಸತ್ಯ ಸರಣಮತ್ಮರು ಗುರುವು
ಯಾವಾಗ ಕಿತ್ತೂ
ಕಲ್ಯಾಣ ಪಟ್ಟಣದ
ಕಲ್ಯಾಣಿ ಕೊಳಕ್ಕೇ ಇಟ್ಟದುವೊ
ಇಟ್ಟಂತಹ ಲಿಂಗಗಳೆಲ್ಲ
ಮಾಲಂಗಿ ಒಳಗೆ ಮೂಡುತಾವೆ ॥ ಸುವ್ವಾ ಬಾ ಚನ್ನ ॥

ಅಯ್ಯ ಮಾಲಂಗೀ ಒಳಗೆ
ಒಡದೂ ಮೂಡೂವಾಗ
ನನ್ನ ಪರ್ಮ ಜ್ಯೋತಿ ಏನಾ ನುಡಿದಾರೋ ॥ ಸುವ್ವಾ ಬಾ ಚನ್ನ ॥

ಅಗಲೀಗ ಜಗತ್ತು ಗುರು ಧರೆಗೆ ದೊಡ್ಡಯ್ಯ
ಪರಂಜ್ಯೋತಿ ಪಾವನಮೂರ್ತಿ
ಆಗಲೀಗ ಬಸವಣ್ಣನವರು
ಕಣ್ಣಿಂದ ನೋಡುಬಿಟ್ಟು
ಬಸವಣ್ಣ
ಈ ಲಿಂಗ ಜಂಗುಮರೆಲ್ಲ
ಲಿಂಗ ಕಿತ್ತೂ ಕೊಳಕಿಟ್ಟುಬಿಟ್ರೊ ಕಣಪ್ಪ
ಈಗಲೀಗ ಜಂಗುಮರೆಲ್ಲ
ನಿಮ್ಮ ನಿಮ್ಮ ಎದೆ ಬಕ್ಕಂಡು
ತಾನ ಮಡಿ ಮಾಡ್ಕಂಡು
ಶುಚಿಯಾಗಿರಪ್ಪ ಅಂದ್ರು
ಈಗಲೀಗ ಒಬ್ಬ ಜಂಗುಮರೂ
ಚಿಳ್ಳೂ ಉಗುರಲ್ಲಿ ತನ್ನ ಎದೆ ಬಗೆದ
ಬಗದೇಟ್ಟಿಗೆ ತಟಕ್ಕನೇ ಪ್ರಾಣಬಿಟ್ಟ
ಒಬ್ಬ ಜಂಗುಮಯ್ಯ ಯಾವಾಗ
ತಟ್ಟಕ್ಕನೇ ಪ್ರಾಣ ಬಿಟ್ಟನೋ
ಇದ್ದವರ್ಗೆಲ್ಲ ಭಯ ಬಂದೋಯ್ತು
ಅಣ್ಣ
ಈ ಸರಣಮಾತ್ಮ ಇಂಥ ಒಳ್ಳೇ ಪುಣ್ಯಾತ್ಮ
ಈ ಕಲ್ಯಾಣದಲ್ಲಿ ನಾನು ಕಳ್ಳ ತಗದು
ಒಗದು ಮಡಿಮಾಡ್ಕತ್ತಿನಿ ಅಂದುಬಿಟ್ಟು
ಪ್ರಾಣನೆ ಬಿಟ್ಟು ಬಿಟ್ಟ
ಈ ಕಲ್ಯಾಣದ ಲಿಂಗೂ ನಮಗೆ ಬ್ಯಾಡ
ನಾವು ಪ್ರಾಣ ಬಿಡೋದು ಬ್ಯಾಡ ಅಂತೇಳೀ
ಎಲ್ಲ ಸರಣಮಾತ್ಮರುವೇ
ಕಲ್ಯಾಣ ಪಟ್ಟಣದಲ್ಲಿ
ಯೋಚನೇ ಮಾಡ್ಕಂಡೂ
ಮನದಲ್ಲಿ ಚಿಂತೇ ಪಟ್ಟಕ್ಕಂಡು

ಅವರು ಕಲ್ಯಾಣ ಬಿಟ್ಟೊ
ಸ್ವಾಮಿ ಹೋಗುತಾರೆ ॥ ಸುವ್ವ ಬಾ ಚನ್ನ ॥

ಅಯ್ಯ ಕಲ್ಯಾಣವಾ ದೇವ
ಬಿಟ್ಟುಬಿಟ್ಟೊ ನನ್ನ ಗುರುವೂ
ಅಯ್ಯ ಎಲ್ಲ ಸರನರುವೆ
ಕಡಕಡದೂ ಹೋಗುವಾಗ

ನನ್ನ ಧರೆಗೆ ದೊಡ್ಡವರು
ಏನ ನುಡಿದಾರು ॥ ಸುವ್ವ ಬಾ ಚನ್ನ ॥

ಬಸವಣ್ಣ
ನೋಡ್ರಪ್ಪ ನಿನ್ನ ಸರಣರ ಸತ್ಯನೋಡು
ಬಸವಣ್ಣ ಇವರೆಲ್ಲ ಕಳ್ಳ ಜಂಗುಮರು ಕಣಯ್ಯ
ಕಳ್ಳ ಜಂಗುಮರಗೆ ಲಿಮಗ ಕಟ್ಟುಕಂಡು
ವಾಸಸ್ಥಾನ ಮಾಡ್ತಿದ್ದೀಯಲ್ಲಪ್ಪ ಅಂತೇಳೀ
ಲಿಂಗ ಕಳಿಸಿ ಭಂಗ ಪಡಿಸಿ
ಜಗತ್ತು ಗುರು ಧರೆಗೆ ದೊಡ್ಡವರು
ಆಗ ಲಿಂಗ ಕಳದಾಕುಬಿಟ್ಟದ್ದ ಶರಣರೆಲ್ಲ
ಬಸವಣ್ಣರ ಬಳಿಗೆ ಬಂದು ಕೇಳಾವರೆ
ಬಸವಣ್ಣ
ನಿನ್ನ ಮನೆ ಅನ್ನ ಆಹಾರಾದಿಗಳೂ ನಮಗೆ ಬ್ಯಾಡ
ಇವತ್ತಿಗೆ ಗುರುದೇವಾ
ನಿಮ್ಮ ಕಲ್ಯಾಣಗೆ ಪಟ್ಟಣದಲ್ಲಿ
ನಿಮ್ಮ ಸೇವೆ ಮಾಡೋದು ಬ್ಯಾಡ
ಈ ಕಲ್ಯಾಣೀ ಕೊಳಕೆ ಲಿಂಗ
ಕಿತ್ತಾಕ್ಬಟ್ಟೀವಿ
ನಮ್ಮ ಲಿಂಗ ತಗೀಸ್ಕೊಟ್ಟುಡಪ್ಪ
ಲಿಂಗ ಕಟ್ಕೊಂಡು ವಂಟೋಗ್ಬುಡ್ತೀವಿ
ನಾವೂ ಲಿಂಗವಂತರಾಗೇ ಬಾಳ್ತೀವಿ
ಎಂದು ಕೇಳಿದ್ರೂ
ಆಗ ಬಸವಣ್ಣರವರು ಹೇಳ್ತಾರೆ
ಕೇಳರಪ್ಪಾ ಸರಣಮಾತ್ಮರೇ
ನೀವು ಕಿತ್ತು ಇಟ್ಟಂತ ಲಿಂಗ
ನೀವೇ ಕಿತ್ತು ಇಟ್ಟಂತ ಲಿಂಗ
ನೀವೇ ಕರದ್ರೂ ಬಂದು ಬುಡ್ತವೆ ಕಣ್ರಪ್ಪ
ಈಗಲೀಗ ನೀವೆ ಕರೆದೂ
ಕೊರಳಿಗೆ ಧರಸಕೊಂಡು
ಕಲ್ಯಾಣದ ಮರವನ್ನೇ ಬಿಟ್ಟು ಬಿಟ್ಟೊ
ಹೊರಟೋಗ್ರಪ್ಪ ಅಂತೇಳುದ್ರು
ಆಗ ತಲಕಾಡಲ್ಲಿರುವಂತ ಲಿಂಗ
ಈ ಕಲ್ಯಾಣಿ ಕೊಳದಲ್ಲಿ ಎಲ್ಲಿ ಬಂದವು
ಲಿಂಗ ಬಪ್ಪಾ ಬಪ್ಪಾ ಅಂತೇಳೀ
ಸುತ್ತಾ ಓಡಾಡ್ತರೆ

ಲಿಂಗ ಬರೋದಿಲ್ಲ
ಧರೆಗೆ ದೊಡ್ಡವರು ಏನು ಹೇಳ್ತರೇ ಅಂದರೆ
ಶರಣರೇ
ದಡದಲ್ಲಿ ನಿಂತ್ಕಂಡು ಲಿಂಗ ಬಾ
ಅಂದರೆ ಖಂಡಿತವಾಗ್ಲೂ ಬರೊದಿಲ್ಲ ಕಣರಯ್ಯ
ಈ ಲಿಂಗ ನಿಮ್ಮ ಕಣ್ಣಗೆ
ಸಿಕ್ಕ ಬೇಕಾದರೆ
ನೀವೆಲ್ಲ ಸರಣಮಾತ್ಮರುವೇ
ಈ ಕಲ್ಯಾಣದ ಕೊಳದ ನೀರು
ತಗದು ಹೊರಗೆ ಊದುಬಿಡಿ
ನೀರಾಗಲೀಗ ನೀರೆಲ್ಲಾ ಹೋದ ಮೇಲೆ
ಬಂದಿಲ್ಲಿ ಲಿಂಗ
ನಿಮಗೆ ಸಿಕ್ಕುತಾವೆ ॥ ಸುವ್ವಾ ಬಾ ಚನ್ನ ॥

ಈ ಜಂಗುಮರು ಹೇಳದ ಮಾತು ಒಳ್ಳೆದೇ
ನೀರ ತಗದು ಆಚೆಗೆ ಊದುಬಿಟ್ಟರೆ
ಲಿಂಗ ಎಲ್ಲಿಗೆ ಹೋದವು
ಒಳಗೇ ಇರ್ತವೇ ಸಿಗತ್ತಾವೆ ಅಂತೇಳಿ
ಎಲ್ಲಾ ಸರಣಮಾತ್ಮರು ಸೇರಿಕಂಡು
ನೋಡಪ್ಪಾ ಕಲ್ಯಾಣಿ ಕೊಳದ
ನೀರು ತಗದು ಹೊರಗುಯ್ತರೆ
ಈ ಧರೆಗೇ ದೊಡ್ಡವರು
ಬಸವಣ್ಣನಿಗೇ ಹೇಳ್ತಾವರೇ
ಬಸವಣ್ಣ
ಹನ್ನೆರುಡು ವರ್ಷದ ಕಪ್ಪೆ
ಪಾಯಸ ಇತ್ತು ಕಾಣಪ್ಪ ಇಲ್ಲಿ
ಇವತ್ತು ಈ ನೀರೆಲ್ಲ ಹೊರಗೆ
ವಂಟೋದ ಮ್ಯಾಲೇ

ನಾಳೆಗೆ ಒಳ್ಳೆ ನೀರು
ಕಂದಾ ಇಲ್ಲಗೆ ಬರುತಾದೆ ॥ ಸುವ್ವಾ ಬಾ ಚನ್ನ ॥

ಅಯ್ಯ ಒಳ್ಳೇ ನೀರು ಕಂದಾ
ಬರುತ್ತದೆ ಬಸವಣ್ಣ
ಅಯ್ಯಾ ಚಿಂತೆ ಪಡಬ್ಯಾಡ
ನಿನ್ನ ಮನದಲ್ಲಿ ॥ ಸುವಾ ಬಾ ಚನ್ನ ॥

ಚಿಂತೆ ಪಡಬ್ಯಾಡ ಬಸವಣ್ಣ ಅಂತೇಳೀ
ಜಗತ್ತು ಗುರು ಧರೆಗೆ ದೊಡ್ಡಯ್ಯ
ಅಲ್ಲಮಾ ಪ್ರಭು
ಮಂಟೇದ ಲಿಂಗಪ್ಪನವರು
ಮನದಲ್ಲೀ ಯೋಚನೆ ಮಾಡುವಾಗ
ಆಗ ಎಲ್ಲಾ ಸರಣಮಾತ್ಮರು ನೀರ ತಗದು
ಹೊರಗೆ ಉಯ್ತಾ ಇದ್ದರೆ
ಬಸವಣ್ಣನವರು
ಸಂತೋಷ ಪಟ್ಟಕಂಡು
ಜಗತ್ತು ಗುರು ಪರಂಜ್ಯೋತಿ ಮುಂಭಾಗದಲಿ ನಿಂತ್ಕಂಡರಂತೆ
ನಿಂತಿರುವಂತ ಕಾಲದಲ್ಲಿ ಗುರುವೂ
ಆಗಲೀಗ ಕೊಳದ ನೀರೆಲ್ಲ ಬರಿದಾಯ್ತು
ಬದೀ ಒಳಗೆ ಎಲ್ಲಾ ಲಿಂಗಗಳು ತಡಕುತಾವರೆ
ಆಗ ಪರಂಜ್ಯೋತಿಯವರು ಹೇಳ್ತಾರೆ
ಸರಣಮಾತ್ಮರೇ
ಕೊಳದೊಳಗೆ ತಡಕಿದರೆ
ಬದೀಲಿ ಲಿಂಗ ಸಿಕ್ಕಕಿಲ್ಲ ಕಣಪ್ಪಾ
ಆ ಬದೀನೂ ತಗದು ಹೊರಗಾಕಪ್ಪಾ

ಲಿಂಗ ತಡಕಿದರೆ ನಿಮಗೆ
ಬರೋದಿಲ್ಲ ಕಾಣಿರಪ್ಪ
ನೀವು ಬದಿಯ ಭೂಮಿಗೆ
ತಗೀರಯ್ಯ ॥ ಸುವ್ವಾ ಬಾ ಚನ್ನ ॥

ಕಷ್ಟ ಕಾಲದಲ್ಲಿ
ಈಗಲೀಗ ಲಿಂಗ ಹುಡುಕಿದರೆ
ಆ ಬದೀವೊಳಗೆ ಲಿಂಗ ಸಿಕ್ಕೋದಿಲ್ಲ ಕಣ್ರಪ್ಪ
ನಿಮ್ಮ ಆತುರಕೆ ಲಿಂಗಸಿಕ್ಕು ಅಂದ್ರೆ
ಮೊದಲಾಗಿ ಸಿಕ್ಕೋದಿಲ್ಲ
ಯಾಕೆ ಸಿಕ್ಕೋದಿಲ್ಲ ಅಂದರೆ
ನೀವು ಬದೀವೊಳಗೆ ತಡಕ್ತಾಯಿದ್ರೆ ಮತ್ತೂ ನೀರು ಹೆಚ್ಚಾಗ್ಬುಡ್ತದೆ
ಮೊದಲಿಂದ್ದಂಥ ನೀರು ಇನ್ನೂ ಜಾಸ್ತಿ ಬಂದ್ಬುಟ್ರೆ
ಮತ್ತೂ ನಿಮಗೆ ಕಷ್ಟವಾಗ್ಬುಡ್ತದೆ ಕಣ್ರಯ್ಯ
ಈ ಬದೀನೇ ತಗದು ಮೇಲುಕ್ಕಾಕ್ಬುಟ್ಟು
ಈಗ ದಡದಲ್ಲಿ ಬದಿಯಿದ್ದರೆ
ಇವತ್ತೊಬ್ರುಗೆ ಸಿಕ್ತವೆ ಲಿಂಗ

ಇವತ್ತು ಸಿಕ್ದೆ ಹೋದರೆ ನಾಳಕೆ ಬಂದು ಹುಡುಕುದ್ರೂವೆ ಸಿಕ್ತವೆ
ನಾಳಿದ್ದು ಬಂದು ಹುಡುಕುದ್ರೂವೆ ನಿಮಗೆ ಲಿಂಗ ಆ ಬದೀವೊಳಗೆ
ಸಿಕ್ಕೇ ಸಿಕ್ತವೆ

ಅಯ್ಯಾ ಎಲ್ಲಾ ಬದೀನೂವೆ ತಗೀರಯ್ಯ ॥ ಸುವ್ವಾ ಬಾ ಚನ್ನ ॥
ಅಯ್ಯಾ ಧರೆಗೆ ದೊಡ್ಡವರ ಗುರುವೇ
ಮಾತನ್ನೇ ಕೇಳುಕೊಂಡು
ಎಲ್ಲಾ ಶರಣರು ಅವರು
ಬದಿಯಾ ತಗುದು ಹಾಕುತಾರೇ ॥ ಸುವ್ವಾ ಬಾ ಚನ್ನ ॥

ಎಲ್ಲ ಶರಣ ಮಾಹತ್ಮರೂ
ಬದೀತಗದು ಕೊಳದ ಸುತ್ತ ಏರಿ ಕಟ್ಟುಬುಟ್ಟರು
ಆಗ ಪರಂಜ್ಯೋತಿಯವರು
ಬಸವಣ್ಣನವರಿಗೆ ಹೇಳ್ತರೆ
ಬಸವಣ್ಣ ಮೊದಲಿದ್ದಂಥ ನೀರ್ನೂ ನೋಡಪ್ಪ
ನಾಳೆ ಬೆಳಿಗ್ಗೆ ಪ್ರಾತಃಕಾಲಕ್ಕೆ ಬಂದು
ಈ ಕಲ್ಯಾಣಿ ಕೊಳ ನೋಡಿದ್ರೆ
ಪನ್ನೀರು ಕಂದಾ ಇರುತಾವೇ ॥ ಸುವ್ವಾ ಬಾ ಚನ್ನ ॥

ಪನ್ನೀರು ಇರ್ತದೆ ಕಣ್ರಪ್ಪ ಅಂತ್ಹೇಳಿ
ಆಗ ಜಗತ್ತುಗುರು ಧರೆಗೆ ದೊಡ್ಡವರು ಬಸವಣ್ಣನಿಗೆ ಹೇಳ್ತಾವ್ರೆ
ಈ ಶರಣ ಮಾತ್ಮರೆಲ್ಲ
ಬದೀ ತಗದು ದಡಕ್ಹಾಕೊಂಡು
ನೋಡಪ್ಪ ಬದೀನೇ ಹುಡುಕೀ ತಡಕೀ ನೋಡ್ತಾವ್ರೆ
ಎಲ್ಲಾ ಶರಣ ಮಾತ್ಮರೂವೆ
ಬದೀಗ್ಹೋಗಿ ಹುಡುಕುವಾಗ
ಅ ಬದೀವೊಳಗೇ ಏನು ಸಿಕ್ತು ಗೊತ್ತಾ ಸಿಕ್ಕುವರಿಗೆ
ಕಲ್ಲು ಸಿಕ್ತು

ಅಯ್ಯಾ ಲಿಂಗ ಅನುತೇಳಿ ಅವರು ಕಲ್ಲನೇ ಹೊತ್ತುಕೊಂಡು
ಅವರು ಕಲ್ಯಾಣಿ ಕೊಳವ ಬಿಟ್ಟು ಬರುತಾರೆ ॥ ಸುವ್ವಾ ಬಾ ಚನ್ನ ॥

ನೋಡಪ್ಪ ಕಲ್ಲು ಸಿಕ್ಕದಂತಹ ಶರಣಮತ್ಮರು
ಕಲ್ಲೇ ಲಿಂಗ ಅಂತ್ಹೇಳಿ
ಆ ಬದಿವೊಳಗೆ ಕಲ್ಲು ಸಿಕ್ದವ್ರು ಕಲ್ಲು ಎತ್ಕೊಂಡು
ಲಿಂಗ ಅಂದ್ಬುಟ್ಟು ಹೊಯ್ತಾವ್ರೆ

ಕಲ್ಲು ಸಿಕ್ದೆಯಿದ್ದಂತಹ ಶರಣರೆಲ್ಲ
ಜಂಗುಮರು ಹೇಳವ್ರಲ್ಲ ಉತ್ತುರದೇಸದವರು

ಇವತ್ತು ಸಿಕ್ದೇ ಹೋದ್ರೆ ನಾಳಕೆ ಬಂದು ಹುಡುಕುದ್ರೂ ಸಿಕ್ತವೆ ಅಂತ
ನಾಳಕ್ಕೆ ಬಂದು ಹುಡೀಕಂಡು ತಕ್ಕೊಳವ್ವ ಅಂದ್ಬುಟ್ಟು

ಅವರು ಕಡದು ಕಡದು
ದೇವಾ ಬರುತಾರೆ ॥ ಸುವ್ವಾ ಬಾ ಚನ್ನ ॥
ಕಡದು ಕಡದು ಈ ಕಳ್ಳ ಜಂಗುಮರುಗಳೆಲ್ಲ ಹೊರಟೋದ್ರು
ಈ ಸಾಧು ಸತ್ಪುರುಷರೆಲ್ಲ ಬಸವಣ್ಣವ್ರ ಗುರುಮಠ ಬಿಟ್ಟು ಒಬ್ರೂ ಹೋಗಲಿಲ್ಲ
ಯಾವ ಯಾವ ಶರಣಮಾತ್ಮರು ಆದಿ ಕಲ್ಯಾಣದಲ್ಲಿ ಉಳ್ಕಂಡ್ರು ಅಂದ್ರೆ
ಕೋಟಿಗೊಬ್ಬ ಶರಣರು
ಕುಲಕ್ಕೊಬ್ಬ ಭಕ್ತರು ಗುರುವೇ ಅಂಗೈನ ಒಳುಗೆ
ಲಿಂಗವ ಪಡೆದವರು ಅಯ್ಯಾ ಇಂತಿಂಥ
ಶರಣರು ಇರುತಾರೇ ॥ ಸುವ್ವಾ ಬಾ ಚನ್ನ ॥

ಈಗಲೀಗ ಎಲ್ಲಾರೂ ಹಾಳಾಗ್ಬುಟ್ರು ಕೂಡ
ತಮ್ಮ ತಮ್ಮ ಕರಡಿಗೆಗೊಳು ತಮ್ಮ ತಮ್ಮ ಅಂಗೈಗೇ ಬಂದು ಕೂತ್ಕೊಬೇಕು
ಅಂಥಂಥ ಲಿಂಗವಂಥರು ನೋಡು
ಆದಿ ಕಲ್ಯಾಣದಲ್ಲಿ ಸ್ಥಿರವಾಗಿ ಉಳಿದುಕೊಂಡರಂತೆ
ಆದಿ ಕಲ್ಯಾಣದಲ್ಲಿ ಪಟ್ಟಣದಲ್ಲಿ ಸ್ಥಿರವಾಗಿ ಉಳಿದಾಗ
ಆ ಧರೆಗೆ ದೊಡ್ಡವರು ಹೇಳ್ತರೆ
ಬಸವಣ್ಣ, ನೋಡಪ್ಪ, ಕಳ್ಳ ಜಂಗುಮರೆಲ್ಲ
ಕಲ್ಯಾಣ ಬಿಟ್ಟು ಹೊರಟೋದ್ರು
ನೋಡು ಸತ್ಯ ಸರಣಮಾತ್ಮರೂ ಅಂದ್ರೆ ಇವರೆ ಕಣಯ್ಯ
ಇಂಥಾ ಶಿವಶರಣಮಾತ್ಮರೂ
ಆದಿ ಕಲ್ಯಾಣ ಪಟ್ಟಣದಲ್ಲಿ
ಸಾಶ್ವಿತವಾಗಿ ಉಳಿದಿರೋವಾಗ
ಇವರಿಗೆ ನಾಮಕರಣ ಕಟ್ಟುಕೊಂಡು
ಕಲ್ಯಾಣದ ಗುರುಮಠ
ಉದ್ಧಾರ ಆಗಲೀ ಅಂತೇಳಿ ಹೆಸರನ್ನೇ ಇಟ್ಕೊಂಡು
ಈ ಕಲ್ಯಾಣದಲ್ಲಿ ನೀನು ಬಾಳಿ ಬದುಕಬೇಕು ಕಂದ ಅಂದರು
ಸ್ವಾಮಿ, ಈ ಕಲ್ಯಾಣ ಪಟ್ಟಣದ ಶರಣರು
ಇವರೆಲ್ಲ ಉಳಿದವರು ಯಾರು ಅಂಥ ತಿಳಿಯೋನಿ
ಎನುತೇಳಿ ಕಲ್ಯಾಣದ ಬಸವಣ್ಣ ಧರೆಗೆ ದೊಡ್ಡವರ ಕೇಳುವಾಗ

ಇವರು ಹೊಲೆಯರ ಹೊನ್ನಪ್ಪ ಮಾದಿಗರ ಚೆನ್ನಯ್ಯ
ಈ ಮಡಿವಾಳ ಮಾಚಯ್ಯ
ಒಬ್ಬ ಶಿವಶರಣಾ ॥ ಸುವ್ವಾ ಬಾ ಚನ್ನ ॥

ಅಯ್ಯಾ ಮಡಿವಾಳ ಮಾಚಪ್ಪ
ಇವನೊಬ್ಬ ಶಿವಶರಣ
ನನ್ನ ಗಾಣುಗರ ದಾಸಪ್ಪ
ಇವನೊಬ್ಬ ಶಿವಶರಣ
ನನ್ನ ಅಂಬುಗ್ರ ಚೌಡಯ್ಯ
ಒಬ್ಬ ಶಿವಶರಣ ॥ ಸುವ್ವಾ ಬಾ ಚನ್ನ ॥

ಅಯ್ಯಾ ಮಡಿವಾಳ ಚೌಡಯ್ಯ
ಇವನೊಬ್ಬ ಶಿವಶರಣ
ನಮ್ಮ ಈಡಿಗರ ಕ್ಯಾತಪ್ಪ
ಇವನೊಬ್ಬ ಶಿವಶರಣ
ನಮ್ಮ ತುರುಕರ ಬೀರಯ್ಯ
ಒಬ್ಬ ಶಿವಶರಣ ॥ ಸುವ್ವಾ ಬಾ ಚನ್ನ ॥

ನಮ್ಮ ತುರುಕರ ಬೀರಯ್ಯ
ಅವನೊಬ್ಬ ಶಿವಶರಣ
ನನ್ನ ಗಾಣಗರ ದಾಸಪ್ಪ
ಅವನೊಬ್ಬ ಶಿವಶರಣ
ನನ್ನ ಅಂಬಿಗರ ಚೌಡಯ್ಯ
ಅವನೊಬ್ಬ ದುಡಶರಣ
ನನ್ನ ಹಡಗಲಂಪಣ್ಣನವರು
ಅವರೊಬ್ಬ ಶಿವಶರಣ
ನನ್ನ ಕುರುಬರ ಬೀರಯ್ಯ
ಒಬ್ಬ ಶಿವಶರಣ ॥ ಸುವ್ವಾ ಬಾ ಚನ್ನ ॥

ಇಷ್ಟು ಮಂದಿ ಶರಣಮಾತ್ಮರು
ನಮ್ಮ ಆದಿಕಲ್ಯಾಣದಲ್ಲಿ ಉಳಿದವರೆ
ಇಷ್ಟು ಮಂದಿ ಶರಣ ಮಾತ್ಮರಿಗೂ
ಕಟ್ಟುಕೊಂಡು ಬಸವಣ್ಣ
ಈ ಕಲ್ಯಾಣ ಪಟ್ಟಣ
ಈಗಲೀಗ ಹೆಚ್ಚು ಒಕ್ಕಲಾಗಿ ಬಾಳಲಿ ಅಂತ್ಹೇಳಿ ನಾಮಕರಣ ಕಟ್ಟಿ
ನಿಮಗೆ ಕಲ್ಯಾಣ ಬಿಟ್ಟು ಮುಂದಕ್ಕೋಯ್ತಿನಿ ಕುಂದ

ಇಷ್ಟು ಮಂದಿ ಶಿವಶರಣಮಾತ್ಮುರ ಕಟ್ಟೋಂಡು
ವಾಸಸ್ಥಾನ ಮಾಡು ಕಂದ ಎಂದರು
ಆಗ, ಜಗತ್ತು ಗುರು ಧರೆಗೆ ದೊಡ್ಡವರು
ಈ ಬಸವಣ್ಣನವರಿಗೇಳುವಾಗ
ಈ ಬಸವಣ್ಣನವರು ಧರೆಗೆ ದೊಡ್ಡವರಿಗೆ ಹೇಳುದ್ರಂತೆ
ಗುರುದೇವಾ
ಇವತ್ತಿನ ದಿವ್ಸದಲ್ಲಿ
ನನ್ನ ಒಳ್ಳೊಳ್ಳೆ ಲಿಂಗಗಳು ಅಂದರೆ
ಎಲ್ಲಾ ಲಿಂಗಗಳನ್ನು ಕೂಡ ಕೀಳ್ಸಿ
ಕಲ್ಯಾಣ ಕೊಳದಲ್ಲಿ ಅಡಕವಾಗ್ಬುಟ್ಟವಲ್ಲ ಸ್ವಾಮಿ
ನಾನಾದಿ ಕಲ್ಯಾಣ ಪಟ್ಟಣದಲ್ಲಿ ಸತ್ತುವಂತ ಲಿಂಗಗಳನ್ನೇ ಕೊಟ್ಟು
ಈ ಶರಣ ಮಾತ್ಮರಲ್ಲಿ ನಾನು ಇಟ್ಟು
ಬಾಳಾಟ ಮಾಡುವುದಕ್ಕೆ
ಕಲ್ಯಾಣದ ಲಿಂಗುವೆಲ್ಲ ಭಂಗವಾಗ್ಬುಡ್ತು
ಲಿಂಗಗಳೆಲ್ಲ ಬರಿದಾಗೊಟೋಗ್ಬುಟ್ಟವಲ್ಲೊ ಸ್ವಾಮಿ ಅಂದರು
ಬಸವಣ್ಣ
ಲಿಂಗಾಗಳೆಲ್ಲ ಬರುದಾಗ್ಬುಟ್ಟೊ ಅಂಥ ಯಾಕಪ್ಪ ಚಿಂತೆ ಪಡ್ತೀಯೆ
ಯಾತಿಕ್ಕೆ ವ್ಯಥೆ ಪಟ್ಟೀಯೆ ಕಂದ
ಕಲ್ಯಾಣ ಪಟ್ಟಣಕ್ಕೆ ನಿನಗೆ ಬೇಕಾಗಿರ್‍ತಕ್ಕಂಥವರು ಸತ್ಯಾಶರಣ ಮಹಾತ್ಮರು
ಆ ಶರಣ ಮಾತ್ಮುರಿಗೂ ಗುರುವಾಗಿ
ಆದಿಕಲ್ಯಾಣದಲ್ಲಿ ವಾಸ ನೀನು ಮಾಡು
ಈಗಲೀಗ ನಿನ್ನ ಲಿಂಗಗಳ ಕಂದ ಎಲ್ಲಿ ಬಚ್ಚಿಟ್ಟು ಮಡಗೀವ್ನಿ ಅಂದರೆ
ಕುಕ್ಕುರ ಕೋಡು ತಲಕಾಡು ಮಾಲಂಗಿ
ಎರಡೂ ಹೊಳೆ ಕೂಡುವ
ನದೀವೊಳಗೆ ಬಚ್ಚಿಟ್ಟು ಮಡಗಿವ್ನಿ ಕಂದ
ನಿನ್ನ ಲಿಂಗಗೊಳ ನೋಡಿ ಆನಂದ ಪಡಬೇಕಾದರೆ
ಈ ನಡುವೆ ನರಲೋಕದ ನರಮಾನವರೆಲ್ಲ
ಈ ಗುರುವಿನ ಲಿಂಗಗಳನ್ನ ಕಣ್ಣಿಂದ ನೋಡಬೇಕಾದ್ರೆ
ಐದು ಶ್ರಾವಣ ಕಂದ ಐದು ಕಾರ್ತಿಕ ಸ್ವಾಮಾರ ಎನುತೇಳಿ
ವರ್ಷಕ್ಕೆ ಒಂದು ಸಾರಿ ಕೂಡು ಆಗಲಿ ಕಂದ
ಐದು ಸೋಮಾರ ಐದು ಶನಿವಾರ ಬಂದಂಥ ಕಾಲದಲ್ಲಿ
ಒಂದು ದಿವಸ ಎರಡು ದಿವ್ಸವಲ್ಲ
ಒಂದು ತಿಂಗಳ ಕಾಲ
ಆಗಲೀಗ ಲಿಂಗದ ಪೂಜೆ ನಡಿಸ್ತೀನಿ ಮಗನೆ
ಈಗಲೀಗ ಲಿಂಗದ ಪೂಜೆ ಯಾವ ರೀತಿ ನಡಿಸ್ತೀನಿ ಅಂದರೆ

ಕುಕ್ಕರ ಕೂಡುವಲ್ಲಿ
ತಲೆಕಾಡು ಮಾಲಂಗಿ
ಮಡುವಿನಲ್ಲಿ ಕಂದ
ಪಂಚಲಿಂಗನ ದರ್ಶನ
ಆಗಲೀ ಅನುತೇಳಿ
ಈ ನರಲೋಕಕ್ಕೆ ಹೆಸರು
ತರುತೀನಿ ॥ ಸುವ್ವಾ ಬಾ ಚನ್ನ ॥

ಅಯ್ಯಾ ಪಂಚುಲಿಂಗನ ದರ್ಶನ ಆಗಲೀ ಅಂಥ
ನರಲೋಕದ ಒಳಗೆ ನಾ ಮಾಡುಸ್ತೀನಿ ಕಂದ
ಈ ಪಂಚಲಿಂಗನ ಕಂದ ದರ್ಶನವಾಗುವಾಗ
ನೀ ಕಲ್ಯಾಣದ ಕಂದ ಬಿಟ್ಟುಬಿಟ್ಟು ನನ್ನ ಕಂದ
ಕಲ್ಲು ಬಸವನಾಗಿ ಒಡೆದು ಮೂಡಿಸುತೀನೀಽ ॥ ಸುವ್ವಾ ಬಾ ಚನ್ನ ॥

ಅಯ್ಯಾ ಕಲ್ಲಬಸವನಾಗಿ ನಿನ್ನೂವೆ ಕಂದ
ಒಡೆದು ನನ್ನ ಕಂದ ನಾ ಮೂಡುಸ್ತೀನಿ ಕಂದ
ಅಲ್ಲಿಗೇ ಹೋಗಿ ಲಿಂಗದ ಪೂಜೆ ನೋಡಯ್ಯಾ ॥ ಸುವ್ವಾ ಬಾ ಚನ್ನ ॥

ಪಂಚಲಿಂಗನ ದರ್ಶನ ಅನುತೇಳಿ ಕಂದ
ಈಗಲೀಗ ನಿನಗಾಗಿಯೇ ನರರ ಕೈಲಿ ಮಾಡಿಸ್ತೀನಿ ಮಗನೆ
ಅ ಪಂಚಲಿಂಗನ ದರ್ಶನ ಆಗುವಾಗ
ನಿನ್ನನ್ನೂ ಕೂಡ ನಾನು ಕಲ್ಲು ಬಸವನಾಗಿ ಅಲ್ಲಿಯೇ ಒಡೆದು ಮೂಡುಸ್ತೀನಿ
ಈಗಲೀಗ ಇವತ್ತು ಚಿಂತೆ ಪಡುವಂಥ ಕಾಲ ಬಂದದೆ
ನಾಳೆ ಪಂಚಲಿಂಗದ ದರ್ಶನ ಆಗುವಾಗ
ನೀನು ನೂರೊಂದು ಲಿಂಗ ನಿನ್ನ ಕಣ್ಣಿಂದ ನೋಡುವಾಗ ಕಂದ
ನಿನಗೆ ಸಂತೋಷ ಉಂಟಾಯ್ತದೆ ಕಂದ
ಅಲ್ಲಿಗೆ ಬಂದು ಕಂದ
ಇಳೆ ಮ್ಯಾಲೆ ಹುಟ್ಟಿದಂಥ ನರಮಾನವರು ಕಂದ
ನಿನ್ನ ಲಿಂಗದ ಪೂಜೆ ಮಾಡಿ
ಕೈಯೆತ್ತಿ ಮುಗಿದೋರಿಗೆ
ಅವರಿಗೆ ಸತ್ತಾಗ ಸ್ವರ್ಗ
ದೊರೆಯುತಾದೇ ॥ ಸುವ್ವಾ ಬಾ ಚನ್ನ ॥

ಅಲ್ಲಿ ಸತ್ತವರಿಗೆ ಸ್ವರ್ಗ ದೊರೀತಾದೆ ಕಂದ
ನೀನು ಹೆದುರುಬ್ಯಾಡ ಕಂದ ಬಸವಣ್ಣಾ ॥ ಸುವ್ವಾ ಬಾ ಚನ್ನ ॥

ಅಲ್ಲಿ ನಿನಗೆ ಆಗಲೀಗ
ಪಂಚಲಿಂಗ ದರ್ಶನವಾಯ್ತದೆ
ಲಿಂಗ ಕಣ್ಣಿಂದ ನೋಡಿ ಸಂತೋಷ ನಿನಗೆ ಬರ್ತದೆ
ಅಲ್ಲಿ ಬಂದು ಇಳೆ ಮ್ಯಾಲೆ ಹುಟ್ಟಿದಂಥ ನರಮಾನವರು ಕಂದ
ಲಿಂಗಗಳ ಕಣ್ಣಿಂದ ನೋಡಿ ಕೈಯೆತ್ತಿ ಮುಗಿದವರಿಗೆ
ಸತ್ತರೂ ಸ್ವರ್ಗ ದೊರೀತದೆ ಕಂದ
ಇಂಥ ಸ್ವರ್ಗಲೋಕದ ಲಿಂಗ
ಮಾಲಂಗಿ ಮಡಿಲಲ್ಲಿ ಮಡಗುತೀನಿ ಕಂದ
ಹೆದರು ಬ್ಯಾಡ ಬಸವಣ್ಣಾ ಬಪ್ಪ
ಅಂತ್ಹೇಳಿ ನೋಡಪ್ಪ ಧರೆಗೆ ದೊಡ್ಡವರು
ಕಲ್ಯಾಣಿ ಕೊಳ ಬಿಟ್ಟುಬಿಟ್ಟರು
ಕಲ್ಯಾಣ ಪಟ್ಟಣಕ್ಕೆ ಬರುತಾವರೆ
ಆಗ ಬಸವಣ್ಣನವರು ಹೇಳ್ತಾವ್ರೆ
ಸ್ವಾಮಿ ಮಾಡಿರ್ತಕ್ಕಂಥ ಬೋಜನ
ಈಗಲೀಗ ಎಲ್ಲಾ ಶರಣ ಮಾತ್ಮರೂ
ಅನ್ನ ಬಿಟ್ಟು ಹೋಟೋದ್ರು ದೇವ

ಗುರುವೇ ಅನ್ನಬಿಟ್ಟು ಬಿಟ್ಟು
ಹೋದರೂ ಗುರುವು
ಗುರುವೇ ಅಟ್ಟಂಥ ಅನ್ನ ಉಣ್ಣಲಿಲ್ಲ ॥ ಸುವ್ವ ಬಾ ಚನ್ನ ॥

ಜಗಂಜ್ಯೋತಿ ಧರೆಗೆ ದೊಡ್ಡಯ್ಯ
ಮಂಟೇದ ಲಿಂಗಪ್ಪ ಪರಾವಸ್ತು ಪಾವನ ಮೂರುತಿ
ಈ ಕಲ್ಯಾಣದಲ್ಲಿ ಸ್ವಾಮಿ
ಈಗಲೀಗ ಮಾಡಿದಂಥ
ಅಡಿಗೆ ಪರುಸಾದ ಉಳಿದೋಗ್ಬುಡ್ತಲ್ಲ ಗುರುವೇ ಎಂದರು
ಬಸವಣ್ಣ, ಇಲ್ಲಿರ್ತಕ್ಕಂಥ
ಶಿವಶರಣ ಮಾತ್ಮರು ಕಂದ
ನೀನು ಶರಣರಿಗೆ ಎಡೆಯ ಪಡುಸಯ್ಯ ॥ ಸುವ್ವಾ ಬಾ ಚನ್ನ ॥

ಅಯ್ಯಾ ಕೋಟಿಗೊಬ್ಬ ಶರಣ
ಕುಲಕ್ಕೊಬ್ಬ ಭಕುತ
ಇಲ್ಲಿ ಸತ್ಯ ಶರಣಾರು ಇರುವಾರು ॥ ಸುವ್ವಾ ಬಾ ಚನ್ನ ॥

ಅಯ್ಯಾ ಸತ್ಯ ಶರಣಾರು
ಇರುವಾರು ಬಸವಣ್ಣ

ನೀನು ಅನ್ನದಾನ ಮಾಡೋ ಬಸವಣ್ಣಾ ॥ ಸುವ್ವಾ ಬಾ ಚನ್ನ ॥

ಸತ್ಯ ಶರಣೆರೆಲ್ಲ ದೇವಾ
ಆದಿ ಕಲ್ಯಾಣದಲ್ಲಿ ಅವರಲ್ಲ ಬಸವಣ್ಣ
ಲಿಂಗವಂತರು ಹೊರಟೋದ್ರು ಅಂತ್ಹೇಳಿ
ಈಗಲೀಗ ದುಃಖ ಸಂಕಟ ಪಡುಬ್ಯಾಡಿ ಬಸವಣ್ಣ
ಬಸವಣ್ಣ ಈ ಮುಡುಕುತೊರೆ ಮಾಲಂಗಿ ಮಡಿಕಣಿವೇಲಿ ಸಿಗುವಂಥ
ಲಿಂಗಗಳ ಕಾಣಪ್ಪ

ನಮ್ಮ ಆತುಮದಲ್ಲಿರುವುದೇ ಶಿವ ಲಿಂಗ ॥ ಸುವ್ವಾ ಬಾ ಚನ್ನ ॥
ಅಯ್ಯಾ ಆತುಮದ ಲಿಂಗವೇ
ನನಗೆ ಶಿವಲಿಂಗ ಬಸವಣ್ಣಾ ಶಿವಲಿಂಗವೂ ನಮಗೆ ಇರುವಾಗ
ಮತ್ತೊಂದು ಲಿಂಗ ನಮಗ್ಯಾಕೋ ॥ ಸುವ್ವಾ ಬಾ ಚನ್ನ ॥

ಬಸವಣ್ಣಾ ಮಾತಾಡುವಂಥ ನಾಲಿಗೆ
ನಮ್ಮ ಶಿವಲಿಂಗ ಕಾಣಪ್ಪ ॥ ಸುವ್ವಾ ಬಾ ಚನ್ನ ॥

ಈಗಲೀಗ ನಾಲಿಗೆ ಶಿವಲಿಂಗ
ಈಗ ಲಿಂಗಗಳ ನೆನುಕೊಂಡು
ಲಿಂಗವಂತರೆಲ್ಲ ಹೊರಟೋದ್ರು ಅಂತ ಕೇಳ್ತೀಯಲ್ಲ
ಬಸವಣ್ಣ ಇವತ್ತು ಕಲ್ಯಾಣದಿಂದ
ಲಿಂಗ ಕಳಕೊಂಡು ಹೋಗಿರ್ತಕ್ಕಂಥ
ಶರಣ ಮಾತ್ಮರೆಲ್ಲ ನಾಳೆ ದಿವ್ಸ ಸತ್ತುಟ್ಟುವಾಗ
ಏನಂಥ ಹುಟ್ಟುತ್ತಾರೆ ಗೊತ್ತು
ಅವರು ಲಿಂಗವಿಲ್ಲದ
ಬಯಲು ಜನ ಆಗುತಾರೆಽಽ ॥ ಸುವ್ವಾ ಬಾ ಚನ್ನ ॥

ಅವರು ಲಿಂಗವಿಲ್ಲದ ಕಂದ
ಬಯಲು ಜನವಾಗಿ ಹುಟ್ಟುತಾರೆ ನನ್ನ ಕಂದ
ಅವರು ಹುಟ್ಟಿದ ಕಾಲದ ಒಳಗೆ ಕೇಳಪ್ಪಾ ಕಂದ
ಅವರು ದೈಯ್ಯ ದೇವಾರನ್ನೆ ಮರಿವಾರುಽಽ ॥ ಸುವ್ವಾ ಬಾ ಚನ್ನ ॥

ಅಯ್ಯ ದೆಯ್ಯ ದೇವಾರ ಗ್ಯಾನ ಅವ್ರು ಮರೀತಾರೆ ಬಸವಣ್ಣ
ಈ ಸತ್ಯಶರಣರ ಕಂದ ಮರೀತಾರೆ
ಅವರ ಬುದ್ಧಿ ಸ್ಥಾನದ ಒಳಗೆ ಬಾಳುತಾರೆ ॥ ಸುವ್ವಾ ಬಾ ಚನ್ನ ॥

ಬಸವಣ್ಣಾ
ದೇವ ದೇವಮಾನ್ರ ಗ್ಯಾನ ಮರೀತಾರೆ ಕಂದ
ಗುರು ಗ್ಯಾನ ಮರೀತಾರೆ ಕಂದ
ಅವರವರ ಬುದ್ಧಿ ಸ್ಥಾನದಲ್ಲಿ
ಬಾಳಿ ಬದುಕುತಾರೆ ಕಂದ ಸರಿಯಪ್ಪ
ನಾಳೆ ಕಾಲದಲ್ಲಿ ಲಿಂಗುವಿಲ್ಲದೆ
ಬಯಲು ಜನಗಳಾಗಿ ಬುಡ್ತರೇ ಮಗನೆ
ಇವತ್ತಿನ ದಿವ್ಸದಲ್ಲಿ ಇಲ್ಲಿ ಕಲ್ಯಾಣದಲ್ಲಿ ಉಳಿದಿರುವಂಥ
ಸತ್ಯ ಶರಣಮಾತ್ಮರು ಅಂದ್ರೆ ಬಸವಣ್ಣ

ಇವರು ಭೂಮಿಯಿರುವ ತನಕ
ಅವರು ದೇವರ ನೆನೆಯುತಾರೆ
ಈ ಭೂಮಿಯಿರುವ ತನಕ
ಕಂದ ನಿನ್ನ ಪಾದ ನನ್ನ ಪಾದ
ಅಯ್ಯಾ ದೈವ ದೇವಮಾನರ ಪಾದ
ನೆನೆಯುವಂತ ಕಂದ
ಈ ಕಲ್ಯಾಣದ ಒಳಗೆ ಕೇಳಪ್ಪ ಬಸವಣ್ಣ
ಈ ಶರಣಾರು ಕಂದಾ ಇರುತಾರೆ ॥ ಸುವ್ವಾ ಬಾ ಚನ್ನ ॥

ಕಲ್ಯಾಣದ ಒಳಗೆ ಇರುವಂಥ
ಸತ್ಯ ಶರಣ ಮಾತುಮರು ಬಸವಣ್ಣ
ಹೇಳುವೆನು ಕೇಳು ಕಂದ
ಬಸವಣ್ಣ ಎಲ್ಲಾ ಶರಣಮಾತ್ಮುರು ಕಳದೋಗಿ
ಈ ಕಲ್ಯಾಣದಲ್ಲಿ ಉಳಿದಿರುವಂಥ ಶರಣಮಾತ್ಮರು
ಬಾಳ ಸಾಧು ಸತ್ಪುರುಷರು ಕಣಪ್ಪ
ನಾಳೆ ಕಾಲದಲ್ಲಿ ಕಂದ
ತಲ್ಲಿಂದ ತಲೆಗಂಟ ಬಸವಣ್ಣ
ನಿನ್ನ ಮಠಮನೆಗೆ ಮಕ್ಕಳಾಗಿರ್ತಿಕ್ಕಂಥ ಶರಣಮಾತ್ಮರು ಇವರೇ ಕಂದ

ಕಂದ ನನಗೂ ಬೇಕಾದವರೂ
ನಿನಗೂ ಬೇಕಾದವರೂ
ಅಣ್ಣಾ ಮುಕ್ಕಣ್ಣ ಮಲ್ಲಯ್ಯನ
ಪರಶಿವನಿಗೆ ಕಂದಾ
ಬೇಕಾದ ಶರಣರು ನನ್ನ ಆದಿ ನಾರಾಯಣನಿಗೆ
ಬೇಕಾದ ಭಕುತರು ಈ ಆದಿ ಬ್ರಹ್ಮನಿಗೆ
ಬೇಕಾದ ಶರಣರು

ಈ ಕಲ್ಯಾಣದವೊಳಗೆ ಇರವವರೂ ॥ ಸುವ್ವಾ ಬಾ ಚನ್ನ ॥

ಬಸವಣ್ಣ
ಈಗ ಕಲ್ಯಾಣದಲ್ಲಿ ಉಳ್ದಿರ್ತಕ್ಕಂಥ ಶರಣಮಾತ್ಮರು ಅಂದ್ರೆ
ವಿಷ್ಣು ಈಶ್ವರ ಬ್ರಹ್ಮ ತ್ರಿಮೂರುತಿ
ನಿನ್ನ ಕಲ್ಯಾಣಕ್ಕೆ ಬೇಕಾದಂಥ ಶರಣಮಾತ್ಮರು
ನನಗೆ ಬೇಕಾದಂಥ ಶಿವಶರಣರು ಕಾಣಪ್ಪ
ತಲಿಂದ ತಲೆಗಂಟ ಕಂದಾ
ಈಗಲೀಗ ಹುಟ್ಟಿದಂಥ ಮಕ್ಕಳು

ಬಸವಣ್ಣ ಎನುತೇಳಿ
ಹೆಸರು ಕರೆಯುತಾರೆ
ಕಂದಾ ಚಿಕ್ಕು ಬಸವಾ ಎಂತ
ನಾಮಕರಣ ಕಟ್ಟುತ್ತಾರೆ
ದೊಡ್ಡ ಬಸವಾ ಅಂತ
ನಮಗೆ ಹೆಸರು ಕರೀತಾರೆ
ಅಪ್ಪಾ ಹುಟ್ಟಿದ ಮಕ್ಕಳು
ನಮಗಾಗಿ ಹುಟ್ಟುತ್ತಾವೆ
ಬೆಳೆಯುವಂತ ನರಮಾನವರು
ನಮಗಾಗಿ ಬೆಳೆಯುತಾರೆ
ಈ ನನಗೆ ಒಕ್ಕಲಾಗಿರುವ
ಶರಣಾರ ಬಸವಣ್ಣ
ಕೈಬಿಡದೆ ನಾವು ಕಾಯಲೇಬೇಕು ॥ ಸುವ್ವಾ ಬಾ ಚನ್ನ ॥

ಅಯ್ಯಾ ಕೈ ಬಿಡದೆ ಕಂದಾ
ನೀನೂ ನಾವು ಕಾಯುಬೇಕು ಕಂದಾ
ಕೇಳಪ್ಪ ಬಸವಣ್ಣಾ
ಈ ನರಲೋಕ ಇವರ ಕೈಲಿ ಪಡಿಸಬೇಕು ॥ ಸುವ್ವಾ ಬಾ ಚನ್ನ ॥

ಅಯ್ಯಾ ನರಲೋಕದಲ್ಲಿ
ಇವರ ಕೈಯಲ್ಲಿ ನಾವು ಲೋಕ ಬೆಳೀಸಬೇಕು
ಈ ದೈವ ದೇವಮಾನವರಿಗೆ ಇವರು ಭಕುತರಾಗಬೇಕು
ಇಂಥಾ ಭಕುತಾರ ನಾವು ಕಾಯಲೇಬೇಕು ॥ ಸುವ್ವಾ ಬಾ ಚನ್ನ ॥

ತಲಿಂದ ತಲೆಗಂಟ ಕಂದ ಬಸವಣ್ಣಾ
ಹುಟ್ಟಿದ ಮಕ್ಕಳ ಹೆಸರು ಕೊಡ್ತಾರೆ ಕಂದ

ಚಿಕ್ಕು ಬಸವ ದೊಡ್ಡು ಬಸವ
ಪುಟ್ಟು ಬಸವ ಅಂತ್ಹೇಳಿ ನಿನಗೇ ನಾಮಕರಣ ಕೊಡ್ತರೆ
ಈಗಲೀಗ ನನಗೂ ಕೂಡ
ಚಿಕ್ಕುಮಂಟೆ ದೊಡ್ಡಮಂಟೆ ಅಂತ್ಹೇಳಿ
ಜ್ಯೋತಿಲಿಂಗ ಅಂತ್ಹೇಳಿ
ನನಗೂ ನಾಮಕರಣ ಕೊಡ್ತಾರೆ
ವಿಷ್ಣು ಈಶ್ವರ ಬ್ರಹ್ಮ ತ್ರೀಮೂರ್ತಿಗೂಳಿಗೂ ಹೆಸರು ಕೊಡ್ತಾರೆ
ಕಂದ
ಪ್ರಪಂಚಕ್ಕೆಲ್ಲ
ಆಗಲೀಗ ಸತ್ಯಪುರುಷರಾಗಿ
ದೇವಮಾನರಿಗೆಲ್ಲ ಸತ್ಯ ಶರಣರಾಗಿ
ಲಿಂಗವಿಲ್ಲದ ಬಯಲು ಜನಗಳಿಗೆಲ್ಲ
ಇವರೇ ಗುರುವಾಗಿ ಕಂದ
ಈ ನಾವು ಪಡೆದ ನರಲೋಕ ಬೆಳಿಸ್ತಾರೆ ಮಗನೆ
ಇಂಥ ಶರಣರಿಗೆ
ಅನ್ನದಾನವನ್ನು ಕೊಟ್ಟು
ನೀನು ಪುಣ್ಯ ಪಡಿಯಪ್ಪ ಬಸವಣ್ಣ ॥ ಸುವ್ವಾ ಬಾ ಚನ್ನ ॥

ಅಯ್ಯಾ ಪುಣ್ಯ ಪಡೀಯಪ್ಪ ಬಸವಣ್ಣ ಎಂತ
ನನ್ನ ಧರೆಗೆ ದೊಡ್ಡವರು ನುಡಿದಾರು ॥ ಸುವ್ವ ಬಾ ಚನ್ನ ॥

ಜಗತ್ತು ಗುರುಗಳ ಮಾತು
ಮಂಟೇದ ಲಿಂಗಯ್ಯನವರ ಮಾತು
ಕರ್ಣದಲ್ಲಿ ಕೇಳುಕೊಂಡು ಕಲ್ಯಾಣದ ಬಸವಣ್ಣ
ಆಗ ಕೋಟಿಗೊಬ್ಬ ಶರಣರು
ಕುಲಕ್ಕೊಬ್ಬ ಭಕುತರು
ಸತ್ಯಾ ಶರಣ ಮಾತ್ಮರ್ನೇ ಕರೆದು
ಆಗಲೀಗ ಹಾಳೆಕೊಟ್ಟು ಅನ್ನ ಬಡಿಸಿ
ಕಲ್ಯಾಣದಲ್ಲಿ ಕುಂತು ಬಸವಣ್ಣ ನೀಲಮ್ಮನವರು
ಕಲ್ಯಾಣಕ್ಕೆ ಹೆಚ್ಚಿನ ಶಿವಶರಣ ಮಾತ್ಮುರು ಎನುವಂಥ
ನಾಮಕರಣಾನೇ ಶರಣರಿಂದ ಪಡೆದು
ಅನ್ನ ಊಟ ಮಾಡ್ದಂಥಹ ಶಿವಶರಣ ಮಾತ್ಮರಿಗೆ ಗುರುವು
ಅಯ್ಯಾ ವೀಳ್ಯ ಕೊಡಪ್ಪ ಶಿವಶರಣ ॥ ಸುವ್ವ ಬಾ ಚನ್ನ ॥

ಅಯ್ಯಾ ವೀಳ್ಯ ಕೊಡಪ್ಪ ಕಂದ ಶಿವಶರಣ ಎನುತೇಳಿ
ನನ್ನ ರಾಚಪ್ಪಜಿಯವರ ಕರೆದಾರು ॥ ಸುವ್ವಾ ಬಾ ಚನ್ನ ॥

ಅಯ್ಯಾ ಬಸವಣ್ಣನ ಮಾತು
ಕೇಳುಕೊಂಡು ರಾಚಪ್ಪಾಜಿ
ಊಟವ ಮಾಡಿ
ಕಲ್ಯಾಣದವೊಳಗೆ
ಇರುವಂಥ ಶರಣರ
ನೋಡ್ಕಂಡು ನನ್ನ ಗುರುವು
ಅಯ್ಯಾ ಶರಣರಿಗೆ ಈಳ್ಯವ ಕೊಡುತಾರೆ ॥ ಸುವ್ವಾ ಬಾ ಚನ್ನ ॥

ಸತ್ಯ ಶರಣರಿಗೆ ದೇವಾ
ಈಗಲೀಗ ಒಬ್ಬರಿಗೂ ತಪ್ಪಿಸದಂತೆ
ರಾಚಪ್ಪಾಜಿಯವರು ಶರಣಮಾತ್ಮರಿಗೆಲ್ಲ
ಕೈಗೆ ಈಳ್ಯ ಕೊಟ್ಕಂಡು ಬಂದ್ರಂತೆ
ವೀಳ್ಯ ಕೊಟ್ಕಂಡು ಬಂದು
ಈಗಲೀಗ ಬಲದಲ್ಲಿ ಬಸವಣ್ಣ
ಎಡದಲ್ಲಿ ನೀಲಮ್ಮ
ಮಧ್ಯಾದೊಳಗೆ ಗುರುವು
ಜಗತ್ತು ಗುರುಗಳಾಗಿರ್ತಕ್ಕಂಥ ಪರಂಜ್ಯೋತಿ ಧರೆಗೆ ದೊಡ್ಡವರ
ಮೋರ್ತ ಮಾಡಿರುವಂಥ ಟೈಮ್ನಲ್ಲಿ ಗುರುವು
ಹಾಳೆ ಕೊಟ್ಬುಬಿಟ್ಟು ಅನ್ನ ಬಡಿಸಿಬಿಟ್ಟು
ವೀಳ್ಯ ಕೊಟ್ಬುಬಿಟ್ಟು ಆ ರಾಚಪ್ಪಾಜಿಯವರು ಬಂದು
ಮೂರು ಮಂದಿ ಮೂರ್ತಿಗಳ ಮುಂಭಾಗದಲ್ಲಿ ಬಂದು ನಿಂತ್ಕಂಡರಂತೆ
ಬಸವಣ್ಣ ಎಲ್ಲಾ ಶರಣಮಾತ್ಮರೂ ಊಟಮಾಡಿ
ವೀಳ್ಯ ಕೊಟ್ಟೆ ಸ್ವಾಮಿ
ಎಲ್ರೂಗೂ ಒಬ್ರೂಗು ತಪ್ಪಸ್ದೆ ಕೊಟ್ಯ ಕಂದ ಅಂತ್ಹೇಳಿ
ಆ ಜಗತ್ತು ಗುರುಗಳಾಗಿರ್ತಕ್ಕಂಥ ಧರೆಗೆ ದೊಡ್ಡವ್ರು ಕೇಳುದ್ರು
ಗುರುದೇವಾ ಒಬ್ರೂಗು ತಪ್ಪಿಸ್ದಂತೆ
ತೆಪ್ಪದಂತೆ ಎಲೆ ಕೊಟ್ಕಂಡು ಬಂದಿದ್ದೀನಿ ಸ್ವಾಮಿ
ಇನ್ನು ಉಳಿದಿರೋದು ಒಂದೇ ಎಲೆ
ಇದು ಕರಿಯೆಲೆ ಸ್ವಾಮಿ ಅಂತ ಹೇಳಿದ್ರು
ಏನಪ್ಪ ನನ ಕಂದ

ಎಲ್ಲಾ ಭಕ್ತರಾದ ಭಕ್ತರು ಶರಣರಾದ ಶರಣರಿಗೆಲ್ಲ
ಎಲೆ ಕೊಟ್ಕೊಂಡು ಬಂದ್ಬುಟ್ಟು
ಉಳಿದಿರೋದು ಒಂದೇ ಎಲೆ
ಇದು ಕರೀಎಲೆ ಅಂತ ಕೇಳಿದ್ಯಲ್ಲ ಕಂದ
ಕೇಳಪ್ಪ ನನ್ನ ಕಂದ ರಾಚಪ್ಪಾಜಿ

ಇವತ್ತಿನ ದಿವ್ಸದಲ್ಲಿ ಉಳಿದಿರೋದು ಕಂದ
ಒಂದೇ ಎಲೆ ನಿನಗಾಗಿಯೇ ಉಳಿದಿದೆ ಕಂದ
ಇದು ಕರಿ ಎಲೆ ಅಂಥ ನೀನು ಹೇಳ್ಕಂಡಿಯಲ್ಲ
ಕರೆ ಎಲೆ ರಾಚಪ್ಪಾಜಿ ಎನ್ನುವಂಥ
ನಾಮಕರಣ ನಿಗಾಗಲೀ ಮಗನೇ ಅಂತ್ಹೇಳಿ

ಆದಿ ಕಲ್ಯಾಣದಲ್ಲಿ ಅವರಿಗೆ
ಕಲ್ಯಾಣದ ಒಳಗೆ ಹೆಸರ ಕರೆದಾರು ॥ ಸುವ್ವಾ ಬಾ ಚನ್ನ ॥
ಕಲ್ಯಾಣದಲ್ಲಿ ಗುರುವು
ಕರಿಯೆಲೆ ರಾಚಪ್ಪಾಜಿ ಎನುತೇಳಿ
ರಾಚಪ್ಪಾಜಿಯವರಿಗೆ ಸ್ವಾಮಿ
ಧರೆಗೆ ದೊಡ್ಡವರು ಯಾವಾಗ ಹೆಸರುಕೊಟ್ಟು ನಾಮಕರಣ ಪಡೆದರೋ

ಕಲ್ಯಾಣವಾದ ಕಲ್ಯಾಣ ಪಟ್ಟಣವೆಲ್ಲ
ಹಗಲು ದೀಪಗಳೆಲ್ಲ ಧಗ್ಗನೆ ಕತ್ತುಕೊಂಡು
ನೋಡಪ್ಪ ಬಸುವಣ್ಣ
ಕರಿಯೆಲೆ ರಾಚಪ್ಪಾಜಿಯವರು ನಾಮಕರಣ ಕರದೇಟಿಗೆಯೇ
ಕಲ್ಯಾಣದಲ್ಲಿರ್ತಕ್ಕಂಥ ಹಗಲು ದೀಪಗಳೆಲ್ಲ
ಆಗಲೀಗ ಹಗಲು ಮತಾಪು ಕಸ್ತಂತೆ
ಕಲ್ಯಾಣ ಪಟ್ಟಣದಲ್ಲಿ ಹಗಲು ದೀಪುಗಳೆಲ್ಲ ಕತ್ತು ಉರೀತಾವೆ
ನೋಡು ಕಂದ ಅಂದ್ರು
ಧರೆಗೆ ದೊಡ್ಡಪ್ಪ ರಾಚಪ್ಪಾಜಿಯವರಿಗೆ ನೀವು ಹೆಸರು ಕಟ್ಟಿದುದಕಲ್ಲ
ಹಗಲು ದೀಪ ಕತ್ತಿ ಉರೀಬೇಕಾಗಿರೋದು
ನೀವು ಜ್ಯೋತಿ ಲಿಂಗಯ್ಯ ನೀವು ಆದದ್ದರಿಂದ ಗುರುವು
ನನ್ನ ಕಲ್ಯಾಣದ ಜ್ಯೋತಿಯೆಲ್ಲ ಬೆಳಗಿದವು ॥ ಸುವ್ವಾ ಬಾ ಚನ್ನ ॥

ಅಯ್ಯಾ ಕಲ್ಯಾಣವೆಲ್ಲ
ಜ್ಯೋತಿ ಬೆಳಗವೆ
ಗುರುವೇ ಗುರುದೇವ
ಇದು ನಿಮ್ಮ ಮಹಿಮೆ ಗುರುವು
ನಿಮ್ಮ ಶಾಸನವಪ್ಪ
ನಿಮ್ಮ ಮೈಮೆ ಕಂಡವರೆ ಮೊದಲಿಲ್ಲ ॥ ಸುವ್ವಾ ಬಾ ಚನ್ನ ॥

ಸ್ವಾಮಿ, ನಿಮ್ಮ ಮೈಮೆ ಮೈತ್ಯಗಾರದಿಂದ
ಈ ರೀತಿ ದೀಪಗಳೆಲ್ಲ ಕತ್ತಿ ಉರಿತಾವೆ ದೇವ
ನಮ್ಮ ಆದಿಕಲ್ಯಾಣಕ್ಕೆ ಬಂದು

ಅಜ್ಞಾನವೇ ದೂರಮಾಡ್ಬುಟ್ಟು
ಸುಜ್ಞಾನವೇ ಕೊಟ್ಟು
ಈಗಲೀಗ ಲಿಂಗವಂತರ್ನೇ ಕಳೆದು
ಗುರುವಿಗೆ ಶಿಶು ಮಕ್ಕಳಾಗಿರ್ತಕ್ಕಂಥ
ಸತ್ಯ ಶರಣರನ್ನೇ ನನಗೆ ಮಕ್ಕಳು ಮಾಡುವುದಕ್ಕೆ
ಈಗಲೀಗ ಜ್ಯೋತಿ ಲಿಂಗಪ್ಪ ನೀವೇ ನನ್ನಪ್ಪ ಎನುತೇಳಿ

ಅಯ್ಯಾ ಜ್ಯೋತಿ ಲಿಂಗಯ್ಯ ಎಂದು
ಹೆಸರನ್ನೇ ಕರಿದಾರು
ಅವರು ಶರಣರು ಚಪ್ಪಾಳೆಯ ಹೊಡೆದಾರು ॥ ಸುವ್ವಾ ಬಾ ಚನ್ನ ॥

ಅಯ್ಯೋ ಶರಣರು ಚಪ್ಪಾಳೆಯ
ಗುರುವೇ ಹೊಡೆದಾರು ನನ್ನ ಗುರುವು
ಧರೆಗೆ ದೊಡ್ಡಯ್ಯ
ಅವರು ಪರಂಜ್ಯೋತಿ ಎಂದು ಹೆಸ್ರ ಕರಿದಾರು ॥ ಸುವ್ವಾ ಬಾ ಚನ್ನ ॥

ಪರಂಜ್ಯೋತಿ ಜ್ಯೋತಿಲಿಂಗಯ್ಯ ಎನ್ನಿಸ್ಕೊಂಡು
ಹೆಸರು ಕರೀಸ್ಕಂಡು ಧರೆಗೆ ದೊಡ್ಡವರು
ನಾಮಕರಣ ಕಟ್ಟಿಸ್ಕಂಡು ಎಲ್ಲಾ ಸತ್ಯಾಶರಣಮಾತ್ಮರ ಕೈಲಿ
ಕೈ ಚಪ್ಪಾಳೆ ಹೊಡಿಸ್ಕಂಡು
ಕಲ್ಯಾಣದ ಉರಿಗದ್ದುಗೆ ಬಿಟ್ಟು
ಧರೆಗೆ ದೊಡ್ಡವರು ಬಂದು ಬಸವಣ್ಣನವರು ಮುಂಭಾಗದಲ್ಲಿ ನಿಂತ್ಕಂಡ್ರು
ಬಸವಣ್ಣ ಇವತ್ತು ನಿಮ್ಮ ಆದಿಕಲ್ಯಾಣ ಪಟ್ಟಣಕ್ಕೆ
ನಾನು ಬಂದಿದ್ದಕ್ಕೆ ನನ್ನ ಕಂದ
ಕಲ್ಯಾಣ ಪಟ್ಟಣದಲ್ಲಿ ಕಂದ
ಈ ಶರಣ ಮಾತುಮರಲ್ಲಿ
ಈಗಲೀಗ ನಿಮಗೆ ಬೇಕಿಲ್ಲದಂಥ ಒಬ್ಬ ಶರಣ
ಯಾರನ್ನಾರು ಒಬ್ರ
ಕಂದ ನನ್ನ ವಂದಿಗೆ ಮಗನೇ
ನೀನು ಶಿಶುಮಗನಾಗಿ ಕಳುಗಯ್ಯ ॥ ಸುವ್ವಾ ಬಾ ಚನ್ನ ॥

ಈಗಲೀಗ ಕಲ್ಯಾಣದಿಂದ ಕಂದಾ
ಇಷ್ಟು ಕೋಟಿ ಶರಣರಲ್ಲಿ
ಒಬ್ಬರೇ ನನಗೆ ಸಾಕು ಕಂದ
ನನಗೆ ಶಿಶುಮಗನಾಗಿ ಕಳುಗಪ್ಪ ಎಂದರು
ಗುರುದೇವ,

ಈಗಲಿನೆ ಇಲ್ಲಿರ್ತಕ್ಕಂಥ ಸತ್ಯ ಶರಣಮಾತ್ಮರಲ್ಲಿ
ನಿಮಗೆ ಯಾವ ಶಿಶುಮಗ ಬೇಕು ದೇವ
ಈಗಲೀಗ ಬೇಕಾದಂಥ
ಶಿಶುಮಗನ ಕರಕೊಳೋ ನನ್ನಪ್ಪ ಒಪ್ಪುಸ್ಕಳೀ ಗುರುವೇ ಎಂದರು
ಬಸವಣ್ಣ, ಈ ಕೋಟಿಗೊಬ್ಬ ಶರಣರು ಕುಲಕ್ಕೊಬ್ಬ ಭಕುತರಲ್ಲಿ
ಎಲ್ಲಾ ಶರಣರನ್ನೂ ಕೂಡ ಕಲ್ಯಾಣದಲ್ಲಿ ಅಡಕವಾಗಿ ಮಡಿಕೋ ಕಂದ
ಈ ಕರಿಯೆಲೆ ನನಗುಳೀತು ಅಂತ ಹೇಳಿದ್ರಲ್ಲ
ಅ ಕರಿಯೆಲೆ ರಾಚಪ್ಪಾಜಿಯ
ನನಗೆ ಮಗನಾಗಿ ಕಳುಗಯ್ಯಾ ॥ ಸುವ್ವಾ ಬಾ ಚನ್ನ ॥

ಈ ಕರಿಯೆಲೆ ರಾಚಪ್ಪಜಿಯವರ
ನನಗೆ ಶಿಷ್ಯನಾಗಿ ಕಳುಗು
ಮಗನಾಗಿ ಕಳುಗಪ್ಪ
ಕಲ್ಯಾಣದ ಬಸವಣ್ಣ ಎಂದರು
ಆಡಿದಂಥ ಮಾತುಕೇಳಿ ಬಸವಣ್ಣ
ಕೇಳಿ ಜಗತ್ತು ಗುರುವೇ
ಜ್ಯೋತಿ ಲಿಂಗಪ್ಪ
ಈ ಕರಿಯೆಲೆ ರಾಚಪ್ಪಾಜಿಯವರು
ನಿಮಗೆ ಶಿಶುಮಗನಾಗಿ ನಾನು ಕಳುಗಬೇಕೆ ದೇವ
ಆಗಲೀ ಗುರುವು

ಒಪ್ಪೀದೆ ಗುರುವು
ರಾಚಪ್ಪಾಜಿಯವರ ಶಿಶುಮಗನಾಗಿ ಗುರುವು
ಮಾಡಶೀವಿ ಅನುತ್ತೇಳಿ
ನನ್ನ ಕಲ್ಯಾಣದ ಬಸವಣ್ಣನವರು ನುಡಿದಾರು ॥ ಸುವ್ವಾ ಬಾ ಚನ್ನ ॥

ಈಗಲೀಗ ಗುರುದೇವಾ
ಇಂಥಾ ಕರಿಯೆಲೆ ರಾಚಪ್ಪಾಜಿಯವರ
ನಿಮಗೆ ಭಕುತನ ಮಾಡ್ತೀವಿ ಸ್ವಾಮಿ
ನಿಮಗೆ ಶಿಷ್ಯನ ಮಾಡ್ತೀನಿ ಅಂತ್ಹೇಳಿ
ಆ ಕರಿಯೆಲೆ ರಾಚಪ್ಪಾಜಿಯವರ ಕರೆದು
ಕಲ್ಯಾಣದ ಬಸವಣ್ಣನವರು
ಕೇಳಪ್ಪ ನನ್ನ ಕಂದ
ಆದಿ ಕಲ್ಯಾಣದಲ್ಲಿ ರಾಚಪ್ಪಾಜಿ
ನನಗೆ ಶರಣನಾಗಿ ನನಗೆ ಶಿಶುಮಗನಾಗಿದ್ದೆ ಕಂದ
ಇವತ್ತು ಕಲ್ಯಾಣದಿಂದ ಕಂದ

ಈ ಜ್ಯೋತಿ ತಂದಂಥ ಜ್ಯೋತಿ ಲಿಂಗಯ್ಯ
ಈ ಜಗತ್ತು ಗುರುಗಳಿಗೆ ಶಿಶುಮಗನಾಗಿ
ಇವರ ಮಂದಿಗೆ ಹೋಗಿ

ಕಂದ ಆಸ್ತಿಪನಾಗಿ ಐಶುವಂತಿಗನಾಗಿ
ಈ ಧರೆಗೆ ದೊಡ್ಡವರಿಗೆ ಮಗನಾಗಿ ॥ ಸುವ್ವಾ ಬಾ ಚನ್ನ ॥

ಇಂಥಾ ಧರೆಗೆ ದೊಡ್ಡವರು
ಮಂಟೇದ ಲಿಂಗಯ್ಯನಿಗೆ
ಮಗನಾಗಿ ಕಂದ
ಇವರ ಒಂದ್ಗೂಡಿ ಕಂದ ಬದುಕಯ್ಯಾಽ ॥ ಸುವ್ವಾ ಬಾ ಚನ್ನ ॥

ಅಯ್ಯಾ ಕೈಹಿಡಿದು ದೇವಾ
ಕಲ್ಯಾಣದ ಬಸವಣ್ಣ
ನೀವು ಕೇಳಿದಂಥ ಗುರುವು
ಮಗನು ನನ್ನ ಗುರುವು
ನಿಮಗೆ ಶಿಷ್ಯನಾಗಿ ಶಿಶುಮಗನಾಗಿ
ನ ಕೊಡುತೀನಿ ಅನುತ್ಹೇಳಿ
ರಾಚಪ್ಪಾಜಿಯವರ ಕೈಯ್ಯ ಹಿಡಿದು ಗುರುವು
ನನ್ನ ಧರೆಗೆ ದೊಡ್ಡವರಿಗೆ ಕೊಡುತಾರೆ ॥ ಸುವ್ವಾ ಬಾ ಚನ್ನ ॥

ಆದಿ ಕಲ್ಯಾಣದಲ್ಲಿ ಪರಂಜ್ಯೋತಿ ಪಾವನ ಮೂರುತಿ
ಬಸವಣ್ಣನ ದುಡ ನೋಡಿ
ನೀಲಮ್ಮನವರ ಪತಿವ್ರತವನ್ನ ನೋಡಿ
ಆ ಕಲ್ಯಾಣದಲ್ಲಿರ್ತಕ್ಕಂಥ ಸಾಧು ಸತ್ಪುರುಷರ ದುಡ ನೋಡ್ಕಂಡು
ಭಕ್ತಿಗೆ ಮೆಚ್ಚಿ
ಆ ಕಲ್ಯಾಣಕ್ಕೆ ಬೇಡಿದಂಥ ವರಾಕೊಟ್ಬುಟ್ಟು ಪರಂಜ್ಯೋತಿಯವ್ರು
ಕರಿಎಲೆ ರಾಚಪ್ಪಾಜಿಯವರ ಶಿಶುಮಗನ ಮಾಡಿಕೊಂಡು
ಗುರುವೇ ರಾಚಪ್ಪಾಜಿಯವರ
ಗುರುವೇ ವಂದಿಗೆ ಕರಕೊಂಡು
ನನ್ನ ಪರಂಜ್ಯೋತಿಯವರು ಬರುತಾರೆ ॥ ಸುವ್ವಾ ಬಾ ಚನ್ನ ॥

ರಾಚಪ್ಪಾಜಿಯವರ ಕಂದಾಽ
ಬಾರಪ್ಪ ನನ್ನ ಕಂದ ಬಪ್ಪ ಶಿಶುಮಗನೆ ಎನುತೇಳಿ
ಆ ರಾಚಪ್ಪಾಜಿಯವರ ಸ್ವಾಮಿಯವರು
ಜಗಂಜ್ಯೋತಿ ಧರೆಗೆ ದೊಡ್ಡಯ್ಯ

ಕೈಯ್ಯನ ಇಡಕೊಂಡು ಗುರುವು
ಕಲ್ಯಾಣ ಬಿಟ್ಟುಬಿಟ್ಟು
ಕಡೇ ಬಾಗಿಲಿಗೆ ಬಂದರಂತೆ
ಕಲ್ಯಾಣ ಪಟ್ಟಣದ ಕಡೇ ಕೈಲಾಸದ ಬಾಗಿಲಲ್ಲಿ

ಅಯ್ಯ ಅಲ್ಲೊಬ್ಬ ಶರಣ
ಅಲ್ಲೊಬ್ಬ ಭಕುತ ಅಲ್ಲೊಬ್ಬ ಗುರುವು
ಶಿವಶರಣದೇವ ಅಲ್ಲಿ ತಾನಾಗಿ ಗುರುವೇ ಕುಳಿತಾರು ॥ ಸುವ್ವಾ ಬಾ ಚನ್ನ ॥

ಕಡೇ ಕೈಲಾಸದ
ಕಡೇ ಬಾಗಿಲಲ್ಲಿ ಗುರುವು
ಬಾಚಿ ಬಸವಯ್ಯ
ಈಗಲೀಗ ಕಡೇ ಕೈಲಾಸ್ದ ಬಾಗಿಲಲ್ಲಿ
ಮರಳಿನಲ್ಲಿ ಲಿಂಗ ಮಾಡಿಕೊಂಡು
ಈ ಮರಳು ಲಿಂಗವೇ ದೇವರು ಅಂತ್ಹೇಳಿ
ಆಗಲೀಗ ಕೈಯೆತ್ತಿ ಮುಗಿದು
ಹಾಸಿ ಅಡ್ಡಬೀಳ್ತಿದ್ದಂಥ
ಬಾಚಿ ಕೈ ಬಸವೇಶ್ವರನ ಕಣ್ಣಿಂದ ನೋಡ್ತಾ
ರಾಚಪ್ಪಾಜಿಯವರ ವಂದಿಗೆ ಕರಕೊಂಡು

ನನ್ನ ಧರೆಗೆ ದೊಡ್ಡವರು ಬರುತಾರೇ ॥ ಸುವ್ವಾ ಬಾ ಚನ್ನ ॥

ಗುರುವೇ ಧರೆಗೆ ದೊಡ್ಡವರು
ಗುರುವೇ ಗುರುದೇವ
ಅಯ್ಯಾ ಮರಳು ಲಿಂಗಾವ
ಕಣ್ಣಾರು ನೋಡವ್ರೆ
ಗುರುವೇ ಶಿವಪೂಜೆ ಮಾಡುವ
ಮಗನನ್ನೋ ನೋಡವ್ರೆ
ಅವರು ಬಾಳ ಯೋಚ್ನೆಯ ಸ್ವಾಮಿ ಪಡುತಾರೆ ॥ ಸುವ್ವಾ ಬಾ ಚನ್ನ ॥

ಬಾಚಿ ಕೈಯ ಬಸವಯ್ಯನ ದೇವಾಃ
ಕಣ್ಣಾರ ನೋಡ್ಕಂಡು ಜಗತ್ಗುರು ಧರೆಗೆ ದೊಡ್ಡಯ್ಯ
ಆ ಮಾಡಿಕೊಂಡಿರ್ತಕ್ಕಂಥ ಮರಳು ಲಿಂಗಾನೆ ಕಣ್ಣಿಂದ ನೋಡ್ತ

ರಾಚಪ್ಪಾಜಿಯವರ ಬಲದಲ್ಲಿ ನಿಲ್ಲಿಸ್ಕಂಡು
ಅರಗಳಿಗೆ ನಿಂತು ಯೋಚ್ನೆ ಮಾಡಿ ನೋಡ್ತಿದ್ರಂತೆ

ಯಾರು ? ಧರೆಗೆ ದೊಡ್ಡವರು
ಈ ಬಾಚಿ ಕೈ ಬಸವಯ್ಯ
ಇದೇ ದೊಡ್ಡದೇವರು
ಇದೆಯೇ ಶಿವಲಿಮಗ
ನನಗೆ ವರಕೊಡಪ್ಪ ನನಗೆ ವರಕೊಡೊ ಗುರುವೇ ಎನುತೇಳಿ

ಹಾಸಿ ಅಡ್ಡಬಿದ್ದು ಕರವೆತ್ತಿ ಕೈ ಮುಗಿಯುವಾಗ
ಕಣ್ಣಿಂದ ನೋಡ್ಕಂಡ್ರು ಮಾಗುರು ಮಂಟೇದಸ್ವಾಮಿ

ಗುರುವೇ ಶಿವಪೂಜೆ ಮಾಡುವ
ಗುರುವೇ ಶುಶುಮಗನ ಗುರುವು
ಕಣ್ಣಾರ ನೋಡುತ
ನನ್ನ ಪರಂಜ್ಯೋತಿಯವರು ಬರುತಾರೆ ॥ ಸುವ್ವಾ ಬಾ ॥

ಅಯ್ಯ ಕೈಯೆತ್ತಿ ಮುಗಿತಾನೆ
ಆರುಸತಿ ಅಡ್ಡಬೀಳ್ತನೆ ನನ್ನ ಗುರುವು
ಅಯ್ಯಮರಳು ಲಿಂಗಾದಲ್ಲಿ ಬೇಡುತಾನೆ ॥ ಸುವ್ವಾ ಬಾ ಚನ್ನ ॥

ನೋಡಿದೇಯಾ ಆದಿಕಲ್ಯಾಣದಲ್ಲಿ ಕತೃ ಬಸವಣ್ಣನವರು
ಜಾತಿಗೊಂದು ಬಗೆಯ ಪುಷ್ಪ ತಂದು
ಪಾದ ಪೂಜೆ ಮಾಡಿ
ಮಂಗಳಾರ್ತಿ ಬೆಳಗುದ್ರು ಯಾರು
ಅಷ್ಟು ಕೋಟಿಶರಣಮಾತ್ಮುರು ಬಸವಣ್ಣನವರು
ಈ ಶಿಶುಮಗ ಕಡೇ ಕೈಲಾಸ್ದ ಬಾಗಿಲಲ್ಲಿ ಕೂತ್ಕಂಡು
ಬಸವಣ್ಣನವರು ಅಷ್ಟು ಮಂದಿಗೆ ಲಿಂಗ ಕಟ್ಕೊಂಡು ಬಾಳಿ ಬದುಕುತ್ತಿದ್ರೆ
ಈ ಕಡೇ ಕಲ್ಯಾಣದಲ್ಲಿ ಮರಳುಲಿಂಗ ಮಾಡಿಕೊಂಡು
ಹಣ್ಣೆಲ್ಲ ಕಾಯಿಲ್ಲ ಪುಸುಮಾವೇ ಒಂದಿಲ್ಲ
ಬರೀ ಮರಳು ಲಿಂಗಕ್ಕೆ ಕೈ ಮುಗಿದು ಅಡ್ಡಬಿದ್ದು
ವರ ಕೊಡು ಅಂತ ಕೇಳ್ತಾವ್ನಲ್ಲ
ಇವನು ಎಂಥಾ ಶಿಶುಮಗನು ಆಗಬಹುದು ಎನುತೇಳಿ
ಮರಳು ಲಿಂಗ ಪೂಜೆ ಮಾಡುವಂಥ
ಮಗನ ಬಳಿಗೆ
ಪರಂಜ್ಯೋತಿ ಪಾವನ ಮೂರುತಿ
ಅಲ್ಲಮಾಪ್ರಭು ಮಂಟೇದಲಿಂಗಪ್ಪ
ಈ ಮಗನ ದುಡ ನೋಡ್ಬೇಕು ಈ ಮಗನ ಸತ್ಯ ನೋಡ್ಬೇಕು

ಇಲ್ಲಿ ಕೈಯೆತ್ತಿ ಮುಗಿದು ಅಡ್ಡ ಬೀಳುವಂಥ ಮಗನ
ದುಡ ಪಡಿಸಲು ಈಗಲೀಗ ಪರೀಕ್ಷೆ ಮಾಡಬೇಕಂತ್ಹೇಳಿ

ಧರೆಗೆ ದೊಡ್ಡವರು ಕಣ್ಣಿಂದ ನೋಡುತ್ತಾ
ಆ ಬಸುವರಲಿಂಗಯ್ಯನವರ ಎಡಭಾಗದಲ್ಲಿ ಹೋಯ್ತಿದ್ರು
ಹೋಗುವಂಥ ಧರೆಗೆ ದೊಡ್ಡವ್ರ ಕಣ್ಣಿಂದ ನೋಡ್ತಾ
ಈಗಲೀಗ ಮಾಡುವಂಥ ಶಿವಲಿಂಗನೇ ಬಿಟ್ಟು
ಹೋಗುವಂಥ ಧರೆಗೆ ದೊಡ್ಡವರ ಪಾದ ಹಿಡಕೊಂಡು
ಯಾರು? ಬಸವಲಿಂಗಯ್ಯ

ಓಡಿ ಬಂದು ಸ್ವಾಮಿಯ ಪಾದ
ತಾನಾಗೆ ಹಿಡಕೊಂಡು
ಕರವೆತ್ತಿ ಕೈಮುಗಿದು
ಗುರುವೇ ಗುರುದೇವ
ಅವರು ಮತ್ತೇನ ಗುರುವು ನುಡಿದಾರು ॥ ಸುವ್ವಾ ಬಾ ಚನ್ನ ॥

ಧರೆಗೆ ದೊಡ್ಡವರ ಪಾದವ ಸ್ವಾಮಿ
ತಾನಾಗಿ ಹಿಡಕೊಂಡು
ಬಸವಲಿಂಗಯ್ಯನವರು
ಸ್ವಾಮಿ ನೀವು ಯಾರಪ್ಪ
ತಾವು ಯಾರು ಗುರುದೇವಾ
ಈ ಮಹಾನುಭಾವನ ಕರ್‍ಕೊಂಡು ಎಲ್ಲಿಗೆ ಪಯಣ ಮಾಡ್ತಾಯಿದ್ದಿರಿ
ಈಗಲೀಗ ನಾನೂ ನಿಮ್ಮ ಜೊತೇಲಿ ಬರುತೇನಿ
ನಿಮಗೆ ಶಿಶುಮಗನಾಯ್ತೀನಿ ಸ್ವಾಮಿ
ನಿಮಗೆ ಭಕುತನಾಯ್ತಿನಿ ತಂದೆ
ನಿಮಗೆ ನಾನು ಮಗನಾಯ್ತಿನಿ

ನನ್ನ ಕರಕೊಂಡು ನಡೀರಿ ಸ್ವಾಮಿ ನಾನು ಬರ್‍ತೀನಿ ಎಂದರು
ಶಹಭಾಷ್ ನನ ಕಂದ ಶಹಬಾಷ್ ಮಗನೇ
ಬಸುಲಿಂಗಯ್ಯ ಈಗ ನಾನು ಉತ್ತರಕಾಂಡವನ್ನು ಬುಟ್ಬುಟ್ಟು
ಕಲ್ಯಾಣಕ್ಹೋಗ್ಬುಟ್ಟು ಕಲ್ಯಾಣದಲ್ಲಿ ಬಸವಣ್ಣನವರ ದುಡಾನೋಡ್ಬುಟ್ಟು
ಅಲ್ಲಿರ್‍ತಕ್ಕಂಥ ಸತ್ಯ ಶರಣಮಾತ್ಮರ ಭಕ್ತಿ ನೋಡ್ಬುಟ್ಟು
ಈ ಕರಿಯೆಲೆ ರಾಚಪ್ಪಾಜಿಯವರ ಶಿಶುಮಗನ ಮಾಡಿಕೊಂಡು
ಈಗ ನಾನು ಹೊಯ್ತಾಯಿವ್ನಿ ಕಂದ
ಈ ಹೋಗೊ ಮಾರ್ಗದಲ್ಲಿ ಬಂದು ನನ್ನ ಪಾದ ಹಿಡ್ಕೊಂಡು

ನನ್ನನ್ನೂ ಕರ್ಕೊಂಡು ನಡೀರಿ ಗುರುವು
ಮಗನಾಯ್ತಿದ್ದೀನಿ ಅಂತ ಬಂದಿದ್ದೀಯಲ್ಲೋ ಕಂದ
ಕಂದ ಈ ಜಲ್ಮಕ್ಕೆ ನೋಡಿದ್ರೆ
ಆರು ಸರತಿ ಹುಟ್ಟಿ ಆರು ಸರತಿ ಬಾಳಿಬದುಕಿ
ಆರು ಜಲುಮ ಹೆತ್ತು ಬಂದಿದ್ರು ಕೂಡ ಕಂದ
ನೀನು ಮಾಡಿರ್ತಕ್ಕಂಥ ಪಾಪ ಕರ್ಮ ಇನ್ನೂ ಕಳಿದಿಲ್ಲ ಕನಪ್ಪ
ಈ ಆರನೇ ಜಲ್ಮದಲ್ಲಿ ಮಗನೇ
ಮರಳುಲಿಂಗದ ಮುಂಭಾಗದಲ್ಲಿ ಕೂತ್ಕಂಡು ಮರಳುಲಿಂಗ ಪೂಜೆ ಮಾಡಿದ್ದೀಯೆ
ಆ ಲಿಂಗಕ್ಕೆ ನಿನಗೆ ಶಿವಪೂಜೆ ಮಾಡ್ತೀನಿ ಅಂದ್ರೆ ಪುಷ್ಪವೇ ಇಲ್ಲ
ಈಗ ಪುಷ್ಪಾ ಇಲ್ಲಿದ್ದ ಮರಳು ಲಿಂಗಕ್ಕೆ ಶಿವಪೂಜೆ ಮಾಡ್ಕಂಡು
ಈ ಲಿಂಗದ ಮುಂಭಾಗದಲ್ಲೆ ಕರ್ಮ ಪಾಪ ಎಲ್ಲಾನೂ ಕಳೆದ್ಬುಡು

ಈಗಲೀಗ ನನ್ನ ಕಂದ
ನಾಳೆ ಬರುವಂಥ ಏಳನೇ ಜಲ್ಮ ಎತ್ತಿ ಬರುವಾಗ ಮಗನೇ
ನಿನ್ನ ಕರ್ಮ ಪಾಪ ಎಲ್ಲಾ ತೀರೋಯ್ತದೆ
ಏಳನೇ ಜಲ್ಮ ಎತ್ತಿ ಬರುವಾಗ
ಬಾಚಿ ಬಸವಯ್ನ ಗರ್ಭಕ್ಕೆ ನಿನ್ನ ಹಾಕ್ತೀನಿ
ಮುದ್ದಮ್ಮ ಹೊಟ್ಟೇಗೆ ನಿನ್ನ ಕೂಡ್ತೀನಿ ಕಂದ
ಈಗ ಬಸುವಲಿಂಗಯ್ನಾಗಿದ್ದೀಯೆ
ನಾಳೆ ಏಳಾ ಜಲ್ಮ ಎತ್ತಿ ಹುಟ್ಟುವಾಗ
ಈ ಕಿರಿಕೆಂಪಾಚಾರಿಯಾಗಿ ಹುಟ್ಟುಪ್ಪ
ನೀನು ಹುಟ್ಟಿದ ಏಳೇ ವರ್ಷಕ್ಕೆ ನಾನೇ ಬರ್ತೀನಿ ಕಂದ
ನಾನೆ ಬಂದು ನಿನ್ನ ಮಗನ ಮಾಡ್ಕತೀನಿ
ಈ ಜಲ್ಮದಲ್ಲಿ ನಿನ್ನ ಕರ್ಮ ಕಳ್ಕೊಬುಡು ಅಂತ್ಹೇಳಿ
ಆ ಕಲ್ಯಾಣದ ಕಡೇ ಬಾಗಿಲಲ್ಲಿ
ಬಸುಲಿಂಗಯ್ನೆ ಬಿಟ್ಟು ಬಿಟ್ಟು

ಅವರು ಒಬ್ಬಾರೆ ಸ್ವಾಮಿ ಬರುತಾರೆ ॥ ಸುವ್ವಾ ಬಾ ಚನ್ನ ॥

ಪಾಪ ಈವತ್ತಿನ ದಿವ್ಸದಲ್ಲಿ
ಯಾರೊ ಮಹಾಮುನಿಗಳು ಯಾರೋ ಸಿಕ್ಕಿದ್ರು
ಈಗ ನಾಳೆ ಆರು ಜಲ್ಮ ಎತ್ತಿದ್ರೂ ಕರ್ಮ ತೀರ್ನಿಲ್ಲ
ಏಳನೇ ಜಲ್ಮಕ್ಕೆ ಮಗ್ನ ಮಾಡ್ಕತೀನಿ ಅಂದ್ಬುಟ್ಟು
ಈ ಕಲ್ಯಾಣದ ಕಡೇ ಬಾಗ್ಲಲ್ಲಿ ಬಿಟ್ಟುಬುಟ್ಟು ಹೊರಟೋದ್ರಲ್ಲ ಅಂತ್ಹೇಳಿ
ಆ ಬಸುಲಿಂಗಯ್ನವರು

ಅರವತ್ತಾರು ಟೈಮು ಮೂವತ್ತು ಮುರು ಗಳಿಗೇಲೂ ಕೂಡ
ಮರಳು ಲಿಂಗದ ಪೂಜೆ ಮಾಡ್ಕಂಡು
ಕಡೇ ಕೈಲಾಸದ ಬಾಗಿಲಲ್ಲಿ ವಾಸ ಮಾಡ್ತಿದ್ದರಂತೆ
ರಾಚಪ್ಪಾಜಿಯವರ ಕರಕೊಂಡು ದೇವಾss
ಆದಿಕಲ್ಯಾಣ ಬಿಟ್ಟು ಬಿಟ್ಟು ಗುರುವು
ಧರೆಗೆ ದೊಡ್ಡವರು ಮಂಟೇದ ಲಿಂಗಪ್ಪ

ಅವರು ತಾವಾಗೆ ಸ್ವಾಮಿ ಬರುತಾರೆ ॥ ಸುವ್ವಾ ಬಾ ಚೆನ್ನ ॥

ಗುರುವೇ ತಾವಾಗೆದೇವ ಬರುತಾರೆ ॥ ಸುವ್ವಾ ಬಾ ಚೆನ್ನ ॥

ತಾವಾಗೆ ಬಂದು ಜಗತ್ತು ಗುರು ಧರೆಗೆ ದೊಡ್ಡವರು ಮಂಟೇದ ಲಿಂಗಯ್ಯ
ರಾಚಪ್ಪಾಜಿ ಬಲದಲ್ಲಿ ನಿಲ್ಲಿಸ್ಕಂಡು
ಕಲ್ಯಾಣ ಬಿಟ್ಟು ಹೊರಗಡೆ ಬಂದು

ಈಗ ಎಲ್ಲಿಂದ ಎಲ್ಲಿಗೆ ನಾನು ಹೋಗಬೇಕು ಎಂದರಂತೆ ॥ ಸಿದ್ಧಯ್ಯಾ ॥

ಅಯ್ಯಾ ರಾಚಪ್ಪಾಜಿಯವರ
ಕಟ್ಟುಕೊಂಡು ನನ್ನ ಗುರುವು
ಈಗ ಎಲ್ಲಿಗೆ ಹೋಗಬೇಕು
ಯಾತಕ್ಕೆ ಹೋಗಬೇಕು
ಹಾಗಂದು ಗುರುವು
ಧರೆಗೆ ದೊಡ್ಡಯ್ಯ
ಅವರು ಬಾಳ ಚಿಂತೆ ಮಾಡುತಾರೆ
ಎತ್ತಯ್ಯ ಪರಂಜ್ಯೋತಿ ॥ ಸಿದ್ಧಯ್ಯ ॥

ಈಗಲೀಗ ಗುರುದೇವಾsss
ನಾನು ಎಲ್ಲಿಂದ ಯಾತಾವುಕೆ ಹೋಗಬೇಕು ಏನುತೇಳಿ
ಪರಂಜ್ಯೋತಿ ಪಾವನಮೂರ್ತಿಯವರ
ರಾಚಪ್ಪಾಜಿ ಶಿಶುಮಗನ ಮಾಡಿಕೊಂಡು
ಕಲ್ಯಾಣದ ಬೀದಿಬುಟ್ಟು ಕಲ್ಯಾಣದ ಪಟ್ಟಣದ ಮೇಲೆ ಕಡದು
ರಾಚಪ್ಪಾಜಿ ವಂದಿಗೆ ಕರಕೊಂಡು
ಹೊನ್ನರಳಿ ಮರ ಕಣ್ಣಾರೆ ನೋಡುತ್ತಾ
ಈ ಹೊನ್ನರಳಿ ಮರದಡಿಗೆ
ನಾನು ಅರ್ಧಗಳಿಗೆ ಗುರುವು
ಪಾವಾಡಿಸಬೇಕು ಅನುತೇಳಿ

ನನ್ನ ಧರೆಗೆ ದೊಡ್ಡವ್ರು
ಮಂಟೇದ ಲಿಂಗಪ್ಪ
ಗುರುವೇ ತಾವೇ ದಯೆ ಮಾಡಿಕೊಂಡು
ನನ್ನ ಗುರುವು ನನ್ನ ಮಂಟೇದ ಲಿಂಗಯ್ಯ
ನನ್ನ ಮಾಯ್ಕಾರದ ಒಡೆಯ
ನನ್ನ ಪರಂಜ್ಯೋತಿಯವರು
ಗುರುವೇ ಹೊನ್ನರಳಿ ದೇವ
ಮರವನಲಿ ನೋಡಿ
ಅರಳೀಕಟ್ಟೆ ಜಗಲೀಗೆ ಓಡಿ ಓಡಿ ಬಂದು
ಅವರು ನವಿಲುಗರಿ ಸಂದಿಯಾವೊಳಗೆ
ಅರಳಿಕಟ್ಟೆ ಜಗುಲಿ
ದುಂಬು ಧೂಳ ದೇವ
ಹೊಡೆದವರೇ ನನ್ನಪ್ಪ
ಅವರು ಹುಲಿಯ ಚರ್ಮ ಹಾಸಿಕೊಂಡ್ರು
ಅವರು ಹರಡಿದರು ಈಬತ್ತಿಗಟ್ಟಿ
ಅವರು ಹುಲಿಯ ಚರ್ಮ ದೇವ
ಹಾಸುಕೊಂಡು ನನ್ನ ಗುರುವು
ಗುರುವೇ ಹುಲ್ಲೆ ಚರ್ಮ ದೇವ
ಹೊದ್ದುಕೊಂಡು ನನ್ನಪ್ಪ
ಅವರು ನವಿಲುಗರಿ ಗೊಂದಿಯಾ
ಎಳೆಯ ಬೇವಿನ ಮರಕೆ ಒರಗಿಸ್ಬುಟ್ಟು
ಅವರು ನಿಶಾನಿದ್ದೆಳಾದ ಗುರುವೇ
ಹೊನ್ನರಳಿ ಮರದ ಮೇಲಕ್ಕೆ ಏರಿಸಿಬುಟ್ಟು
ಭೂಮಿ ತೂಕದ ಗುಳಿಗೆ ತಕ್ಕಂಡು ನನ್ನ ಗುರುವು
ತಲೆಗೆ ದಿಂಬನ್ನೇ ಮಾಡ್ಕಂಡು ನನ್ನಪ್ಪ
ಅವರು ಅರಳಿಕಟ್ಟೆ ಮೇಲೆ ಮೋರ್ತ ಮಾಡುತಾರೆ ॥ ಸುವ್ವಾ ಬಾ ಚನ್ನ ॥

ಅರಳೀ ಕಟ್ಟೆ ಜಗಲೀಮ್ಯಾಲೆ ದೇವ
ಮೋರ್ತುವಾಗಿ ಮಾಗುರು ಮಂಟೇದಲಿಂಗಪ್ಪ ಪರಂಜ್ಯೋತಿಯವರು
ಕಂದ ರಾಚಪ್ಪಾಜಿ,
ಅರಳೀಕಟ್ಟೆ ಜಗಲೀಮ್ಯಾಲೆ ಅರ್ಧಗಳಿಗೆ ಕಂದ
ಪವಾಡಿಸಿ ನಿದ್ರೆ ಮಾಡ್ತೀನಿ ಕಂದ
ನಾನು ನಿದ್ರೆ ಮಾಡುವಾಗ ಕಂದ
ಆಯಾಸ ನಿನಗೆ ಉಂಟಾದರೆ
ಮೂಡುಲಾಗಿ ಹೋಗು ಕಂದ
ಆಯಾಸ ಉಂಟಾಗ್ಬುಟ್ರೆ ಕಂದ

ಆಗಲೀಗ ಪೂರ್ವಕ್ಕೆ ಹೋಗಪ್ಪ
ಈಗಲೀಗ ಕಂದ ಪಶ್ಚಿಮಕ್ಕೆ ಹೋಗುಕಂದ
ದಕ್ಷಿಣ ದಿಕ್ಕಿಗೆ ಮಾತ್ರ ಹೋಗಬೇಡ ಕಣಪ್ಪ ಅಂತ್ಹೇಳಿ
ಯಾತಕ್ಕೆ ಅಂದ್ರೆ ಕಂದ
ಮೂರು ದಿಕ್ಕು ಬಿಟ್ಟು ಒಂದು ದಿಕ್ಕಿಗೆ ನೀನು ಹೋದದ್ದೇ ಹೌದಾದರೆ
ನಿನಗೆ ಕಷ್ಟ ಬರ್ತದೆ ಕಂದಾ ಸುಖ ದೊರೆಯೋದಿಲ್ಲ
ಈಗಲೀಗ ಮೂರುದಿಕ್ಕಿಗೆ ಹೋಗು ಕಂದ
ಈ ದಿಕ್ಕಿಗೆ ಹೋಗುಬ್ಯಾಡ ಎನುತೇಳಿ
ಅರಳೀಕಟ್ಟೆ ಜಗಲೀಮ್ಯಾಲೆ ಗುರುವು
ಒರಗಿದಂತಹ ಕಾಲದಲ್ಲಿ ಗುರುದೇವ
ಇಂಥ ರಾಚಪ್ಪಾಜಿಯವರು ಧರಗೆ ದೊಡ್ಡವರ ತಲೆದೆಸೆ
ನಮ್ಮ ಗುರುಗಳು ಭೋಗದಲ್ಲಿ ನಿದ್ರೆ ಮಾಡುತಾವ್ರೆ
ಅವರಿಗೆ ನಿದ್ರೆ ಭಂಗ ಮಾಡುಬಾರ್ದು ಅನುತೇಳಿ
ಧರೆಗೆ ದೊಡ್ಡವರ ತಲೆದೆಸೆ ಗುರುವು

ಅವರು ಕೂತು ಯೋಚನೆಯ ಮಾಡುತಾರೆ ॥ ಸುವ್ವಾ ಬಾ ಚೆನ್ನ ॥
ಅವರು ಕುಂತು ಯೋಚನೆಯ ಪಡುತಾರೆ ॥ ಸುವ್ವಾ ಬಾ ಚೆನ್ನ ॥

ಕುಂತು ಯಾಚನೆ ಮಾಡ್ಕಂಡು ನನ್ನಪ್ಪ
ನಮ್ಮ ಜಗತ್ತು ಗುರುಗಳು
ಮೂಡ್ಲಾಗ್ಹೋಗು ಪಡುಲಾಗ್ಹೋಗು
ಬಡಗಲಾಗೋಗಪ್ಪ ತೆಂಕಲಾಗೋಗಬ್ಯಾಡ ಅಂದ್ರಲ್ಲ ಯಾತಕ್ಕೆ ?
ಅಲ್ಲಿ ಏನೇನು ವಿಷಯ ಇರಬಹುದು
ಅಲ್ಲಿ ಏನೇನು ವಾರ್ತೆ ಇರಬಹುದು
ಈಗ ನಮ್ಮ ಗುರುಗಳು ನಿದ್ರೆ ಬಂದು ಮಲಗಿರುವಂತ ಕಾಲ್ದಲ್ಲಿ

ನಾನೆ ಹೋಗಬೇಕಲ್ಲ
ಅಲ್ಲಿರ್ತಕ್ಕ ವಾರ್ತೆ
ನನ್ನ ಕಣ್ಣಾರ ನೋಡಿ ಬರಬೇಕು
ಹಾಗಂದು ರಾಚಪ್ಪಾಜಿಯವರು
ನಿದ್ರೆ ಮಾಡುವಂಥ ಜಗತ್ತು ಗುರುಗಳ ನೋಡಿ
ಮನದಲ್ಲಿ ಯೋಚನೆ ಮಾಡಿಕೊಂಡು
ಮನಸಲ್ಲಿ ಕೊರತೆ ಮಾಡಿಕೊಂಡು
ಈಗ ಅದೇ ದಿಕ್ಕಿಗೆ ಹೋಗ್ಬುಟ್ಟು ಬರಬೇಕಂತ್ಹೇಳಿ

ಅವರು ಹೇಳದೆ ಕೇಳದೆ
ನನ್ನ ದುಡುವುಳ್ಳ ರಾಚಪ್ಪಾಜಿ
ನನ್ನ ಧರೆಗೆ ದೊಡ್ಡವರ
ಪಾದವ ಬಿಟ್ಟುಬಿಟ್ಟು
ನನ್ನ ಮಂಟೇದ ಲಿಂಗಪ್ಪನವರ
ಮೈಮೆಯ ಬಿಟ್ಟು ಬಿಟ್ಟು
ಅವರು ತಾವಾಗೆ ಬರುತಾರೆ
ಎತ್ತಯ್ಯ ಪರಂಜ್ಯೋತಿ ॥ ಸಿದ್ಧಯ್ಯ ॥

ಗುರುವೆ ಧರೆಗೆ ದೊಡ್ಡವರೇ
ಮಂಟೇದ ಲಿಂಗಪ್ಪ
ಮಾಯ್ಕಾರದ ಒಡೆಯ
ನನ್ನ ಪರಂಜ್ಯೋತಿ ಪರಬ್ರಹ್ಮ
ನಿಮ್ಮ ಪಾದವೇ ನಮಗೆ ಗತಿ ಎನುತೇಳಿ
ಅವರು ರಾಚಪ್ಪಾಜಿಯವರು
ಗುರುವೇ ಗುರುದೇವ
ಅವರು ತೆಂಕಲಾ ದಿಕ್ಕುಗಾಣೆ ಬರುತಾರೆ ॥ ಸುವ್ವಾ ಬಾ ಚನ್ನ ॥

ತೆಂಕಲ ದಿಕ್ಕು ಗಾಣೆ ಗುರುವು
ತಾವಾಗಿ ಬರುತ್ತಿದ್ರು
ಆಗಲೀಗ ರಾಚಪ್ಪಾಜಿಯವರು
ರಾಚಪ್ಪಾಜಿಯವರು ಬರುವಾಗ
ಅಲ್ಲಿ ಮೋಡಿಕಾರರು ಗುರುವು ಇರುತಾರೆ ॥ ಸುವ್ವಾ ಬಾ ಚನ್ನ ॥

ಗುರುವೇ ತೆಂಕಲು ದಿಕ್ಕಿನ ಒಳುಗೇ
ಕಾಲ ಕಳಿಯುವಂಥ
ಅವರು ಮೋಡಿ ಮಸ್ತುಮಕಾರರು
ಎಂದಾರೆ ನನ್ನ ಗುರುವು
ಅಯ್ಯಾ ವಿದ್ಯಾಬುದ್ಧಿಕಾರರಲ್ಲಿ
ಬಾಳ ಬುದ್ಧಿ ಉಳ್ಳವರು

ಗುರುವೇ ಮಂತ್ರಕಾರದಲ್ಲಿ
ಬಾಳ ದೊಡ್ಡವರು
ಅಂಥ ಮೋಡಿಕಾರರ ಗುರುವೇ
ಬಳಿಗೆ ನನ್ನ ಗುರುವು

ಕಿಡುಗಣ್ಣ ರಾಚಪ್ಪಾಜಿ
ತಾವಾಗಿ ಸ್ವಾಮಿ ಬರುತಾರೆ ॥ ಸುವ್ವಾ ಬಾ ಚನ್ನ ॥

ಮೋಡಿಕಾರರು ದೇವ
ಈಗಲೀಗ ರಣಮೋಡಿಕಾರರು ಗುರುವು
ಆ ದಿಕ್ಕಿನಲ್ಲಿ ಬಾಳಿ ಬದುಕುವಾಗ
ಮೋಡಿ ಮಸ್ತಪಕಾರರು ಅಂತ್ಹೇಳಿ
ನಾಮಕರಣನೇ ಪಡೆದು
ವಿದ್ಯೆದಲ್ಲಿ ಬಹಳ ಬುದ್ಧಿವುಳ್ಳವರು
ಮೋಡಿವೊಳಗೆ ಹೆಸರಾಗಿ ಬಾಳಿ ಬದುಕುತಿರುವರು
ಅಂಥವರ ಬಳಿಗೆ ದೇವ
ಕಿಡುಗಣ್ಣ ರಾಚಪ್ಪಾಜಿಯವರು ಗುರುವು
ಧರೆಗೆ ದೊಡ್ಡವರ
ತಲೆ ದೆಸೆ ಮಡಗಿದ್ದಂಥ
ಮುತ್ತಿನ ಜೋಳಿಗೆ ಮುಂಗೈಗೆ ಆಧಾರಮಾಡಿಕೊಂಡು
ಧರೆಗೆ ದೊಡ್ಡವರ ಜೋಳಿಗೆಯಲ್ಲಿರ್ತಕ್ಕಂಥ
ಮಟ್ಟೀಕಪ್ಪನ್ನೇ ತಕ್ಕಂಡು
ಈ ಬತ್ತಿ ಬಸುವಂಗನೇ ತಕ್ಕೊಂಡು

ಮೋಡಿ ಮಸ್ತಪಗಾರರ ಬಳಿಗೆ ಗುರುವು ಬರುತಾರೆ ॥ ಸುವ್ವಾ ಬಾ ಚನ್ನ ॥

ಅಯ್ಯಾ ಧರೆಗೆ ದೊಡ್ಡವರ
ಪಾದವ ನೆನೆಯುತ
ಮಂಟೇದ ಲಿಂಗಪ್ಪ
ಮೈಮೇರು ತಿಳಿಯುತ
ಗುರುವೇ ಪರಂಜ್ಯೋತಿಯವರ
ಪಾದವ ನೆನೆಯುತ
ಕಿಡುಗಣ್ಣ ರಾಚಪ್ಪಾಜಿ
ಅವರು ತಾವಾಗಿ ತಾವೇ ಬರುತಾರೆ ॥ ಸುವ್ವಾ ಬಾ ಚನ್ನ ॥

–ಶ್ರೀ ಮಂಟೇಸ್ವಾಮಿ
(ಮಂಟೇಸ್ವಾಮಿ ಕಾವ್ಯದಿಂದ)

***

೯. ತೊಟ್ಟಿಲಿನ ಹಾಡುಗಳು

ಹಾಡು ಬಸವಣ್ಣನವರ ಕುರಿತು

ಎಲ್ಲಿ ಹುಟ್ಟಿ ಎಲ್ಲಿ ಬೆಳದಿ ಬಾರೋ ಬಸವಣ್ಣ ।
ಕರಮುಗಿದು ಶಿರಬಾಗಿ ಬೇಡುವೆ ವರಗಳನ್ನ ॥

ಮಾದಲಾಂಬಿಕೆ ತಾಯಿ ಬ್ರಾಹ್ಮಣರ ಮನೆತನ ।
ಮಾದರಸ ನಿನ್ನ ತಂದೆ ಬಾಗೇವಾಡಿ ಠಿಕಾಣ ॥
ಇಂಗಳೇಶ್ವರದಲ್ಲಿ ಆಗೇದ ನಿನ್ನ ಜನನ ॥ ಕರಮುಗಿ...... ॥ ೧ ॥

ಹುಟ್ಟಿ ಐದು ದಿವಸ ಮಗು ಕುಡಿಯಲಿಲ್ಲ ಮಲೀನ ।
ಮುಸಕಿನೊಳಗ ಮಲಕೊಂಡಿದ್ದ ಮುಚ್ಚಿಕೊಂಡ ಕಣ್ಣ ॥
ಮಹಾಮಂತ್ರ ಕಿವಿಯಲ್ಲಿ ಗುರು ಮಾಡಿ ಹೋದ ಬೋಧನಾ ॥ ॥ ೨ ॥

ಕಪ್ಪಡಿನಾಥ ಬಂದಾ ಮಾತಾಡಿಸಿದ ಕೂಸಿನ ।
ಏಳು ಬಸವ ಎಷ್ಟು ಹೊತ್ತ ಮಲಗಿದಿ ಸೇವಿಸಪ್ಪ ಹಾಲನ್ನ ॥
ಭಯ ಇಲ್ಲದೆ ಮಗು ಮಲಿ ಕುಡಿದಾನೋ ಹೆಂತದೊ ಗುರುಕರುಣಾ ॥೩॥

ತಾಯಿ ತಂದಿ ಅಂತಾರ ಈತಗ ಹೆಸರೇನ ಇಡವೊನ ।
ಬಸವ ಬಸವ ಎಂದ ಕಸರಯಿಲ್ಲಲ್ಲದೆ ಇವಗ ಮಾತ್ರಿ ನಾಮಕರಣ ॥
ಇಷ್ಟು ಹೇಳಿ ಹೊರಟ ಹೋದ ಗುರು, ಆಗಿ ನಿಂತ್ರೋ ಬಿನ್ನ ॥ ॥ ೪ ॥

ಬಾಲೇರು ಎಲ್ಲಾರೂ ಬಾಗಿಣಕ ಬಂದಾರ ಕಟ್ಯಾರ ತೊಟ್ಟಿಲನ್ನ ।
ಹಿಗ್ಗಿಲಿಂದ ಗುಗ್ಗರಿ ಹಾಕಿ ಮಾಡ್ಯಾರ ಸಿಂಗರನ ॥ ಜೋ ಜೋ ॥
ಬಸವ ಅಂತ ಮಾಡ್ಯಾರೋ ನಾಮಕರಣ ॥ ॥ ೫ ॥

ಬಾಳಿ ಸುಳಿಯಂತೆ ಬಸವ ಬೆಳೆಯುತ ನಡದಾನ ।
ತಾಯಿ – ತಂದಿ ಅಂದಾರ ಇವಗ ಮಾಡಬೇಕು ಉಪನಯನ ॥
ಬಸವಣ್ಣ ಅಂತಾನ ಜನಿವಾರ ಹಾಕುದಕ ಧಿಕ್ಕಾರ ಮಾಡ್ಯಾನ ॥ ॥ ೬ ॥

ಹುಟ್ಟಿದಾಗ ಗುರು ಬೋಧ ಕೊಟ್ಟು ತೋರಿ ಅಂತಃಕರಣ ।
ವಿಶ್ವಗುರು ಅನಸಿ ಬಸವ ಜ್ಯೋತ್ಯಾಗಿ ಬೆಳಗ್ಯಾನ ॥
ಕರಮುರಿದು ಶಿರಬಾಗಿ ಬೇಡುವೆ ವರಗಳನ್ನ । ॥ ೭ ॥

ಇಳೆಯೊಳಗ ಇಂಗಳೇಶ್ವರ ನಾಡಿಗಿ ವಾಯಣ ।
ಅಲ್ಲಿ ನೆನದಾನ ಕೇಳ್ರಿ ಗುರುವ ರೇವಣ ॥ ಕಂದ ಭೀಮಣ್ಣ
ಕವಿಮಾಡಿ ತಿಳಸ್ಯಾನ ಹಿಡದೋ ಗುರು ಚರಣ ॥ ॥ ೮ ॥

***

ಕಲ್ಯಾಣಪುರದೊಳು ನಿತ್ಯಕ ಜಂಗಮರಿಗೆ

ಕಲ್ಯಾಣಪುರದೊಳು ನಿತ್ಯಕ ಜಂಗಮರಿಗೆ
ಅನ್ನ ಪ್ರಸ್ತವನಿಟ್ಟ ಬಸವೇಶ್ವರನು ॥ ಪ ॥

ಲಕ್ಷದ ಮೇಲೆ ತೊಂಭತ್ತು ಸಾವಿರ
ಜಂಗಮರಿದ್ದ ಬಸವೇಶ್ವರನು
ಇನ್ನಾರು ಸಾವಿರ ಜಂಗಮರು ಬೇಕೆಂದು
ಯೋಚನೆ ಮಾಡಿ ಬಸವೇಶ್ವರನು ॥ ೧ ॥

ತೆಪ್ಪಿದ ನಿಜರೂಪ ಹಚ್ಚಿದ ವಿಭೂತಿ
ಬೆತ್ತ ಹಿಡಿದು ಬಸವೇಶ್ವರನು
ಅಡ್ಡಗೊಂಗಡಿ ಹೊತ್ತು ಲಿಂಗ ವಸ್ತ್ರವ ಕೋರಿ
ಸಂಗಮನಾದ ಬಸವೇಶ್ವರನು ॥ ೨ ॥

ಗಗ್ಗರಿ ಉಂಗುರ ಜಂಗಮಲಕಿನ ಚೀಲ
ಹೆಗಲಲಿ ಹೊತ್ತು ಬಸವೇಶ್ವರನು
ಹಿಂಗೆಲ್ಲ ಹುಡುಕಿದರ ಎಲ್ಲಿ ಸಿಕ್ಕಾರೆಂದು
ಆಲೋಚಿಸಿದ ಬಸವೇಶ್ವರನು ॥ ೩ ॥

ಮಾದೇವರಾಜನ ಬಳಿಯಲ್ಲಿ ಜಂಗಮರು
ಇದ್ದಾರೆಂದನು ಬಸವೇಶ್ವರನು
ಕಾಲಲಿ ನಡಿದರ ಕಾಮಿಕದೊನಕೆ
ಹ್ಯಾಂಗ ಹೋಗುವದಂದ ಬಸವೇಶ್ವರನು ॥ ೪ ॥

ಮನಸಿಗೆ ತಿಳಿದಾನು ಮಾಯದಲಿ ಒಂದು
ಕ್ಷಣದಾಗ ಹೋದ ಬಸವೇಶ್ವರನು
ಕಾಮಿಕ ವನದ ಅಗಸಿ ಬಾಗಿಲ
ಕಾಣೂತಂದ ಬಸವೇಶ್ವರನು ॥ ೫ ॥

ಅಗಸಿಯ ಬಾಗಿಲಿಗೆ ಆಳಿನ ಕಾವಲು
ಇದ್ದಾರೆಂದು ಬಸವೇಶ್ವರನು
ಬಂದೇವಿ ಇಲ್ಲಿಗೆ ಮುಂದಿನ ಯತ್ನ ಹ್ಯಾಂಗ
ಹೋಗುವದಂದ ಬಸವೇಶ್ವರನು ॥ ೬ ॥

ಇಂಗು ಜೀರಿಗಿ ಮಾರುವ ಕೋರಿ
ಶೆಟ್ಟಿಯಾದನು ಬಸವೇಶ್ವರನು
ಕಂಚು ತಾಂಬರ ಹಿತ್ತಾಳಿ ಕೊಡರ್ಥಿಂಗ
ಅನ್ನುತ ಹೊಂಟ ಬಸವೇಶ್ವರನು ॥ ೭ ॥

ಶೆಟ್ಟಿಯ ಕಂಡಾರ ಸಿಟ್ಟೀಲೆ ಕೇಳ್ಯಾರ
ಕೊಟ್ಟವರ್ಯಾರ ನಿನಗಪ್ಪಣೆಯನು
ಬಿಟ್ಟಾರ ಎನ್ನುದು ದೃಷ್ಟಾಂತ ತಿಳಿ ಇಷ್ಟು
ಹೇಳುವೆ ರಾಜನ ಆಜ್ಞೆಯನು ॥ ೮ ॥

ಹೊರಗಿನ ಜನ ಬಂದು ವನದೊಳಗ ಹೊಕ್ಕರ
ಚಾಕರಿ ಕಸಗೊಂಡು ಅಟ್ಟುವನು
ವನದ ಒಳಗಿನ ಜನ ಹೊರಿಯಾಕ ಬಿಟ್ಟರೆ
ಅನ್ನುವನು ನಮಗ ಶಿಕ್ಷೆಯನು ॥ ೯ ॥

ಪಕ್ಷಿ ಪಶು ಮೃಗ ವೃಕ್ಷವು ಹೊಕ್ಕರೆ
ಕೋಪಿಸಿ ಕೊಟ್ಟಾನು ಅಪ್ಪಣಿನು
ರಾತರಿ ಹಗಲಿಯು ನಿಂತಲ್ಲೇ ಪಾರವು
ಘಾತಕ ರಾಜನ ಭೀತಿಯನು ॥ ೧೦ ॥

ಒಂದಿವಸ ಆಪತ್ತು – ಅನುವ ಇಲ್ಲೆಂದು
ಅನುಭವ ಅವರಿಗೆ ಹೇಳಿದನು
ಬಿಟ್ಟರೆ ನೀ ಹೋಗಿ ಭೆಟ್ಟಿಯಾದರೆ
ನಿಮ್ಮನ್ನಿಟ್ಟಿದ್ದು ಯಾಕೆಂದು ಕೇಳುವನು ॥ ೧೧ ॥

ಬಡವರು ಆಡುವ ನುಡಿಗಳು ನಿಶ್ಚಯ
ಬಿಡುವರು ಹ್ಯಾಗೆಂದು ತಿಳಿಯುವನು
ಕೇಳಿರಿ ಪಾಲಕರ ಹೇಳುವೆನು ನಮ್ಮ
ಜಾತಿಯು ಆದಿ ಬಣಜಿಗನು ॥ ೧೨ ॥

ನಿತ್ಯಕ ಜಂಗಮರು ತಪ್ಪಿದರೆ ನಮ
ಗನ್ನಕ ಅಪ್ಪಣೆ ಇಲ್ಲನುವನು
ನೀತಿಯ ನಿಷ್ಠೆಕ ಬ್ಯಾಸರ ಬಳಸಿದರ
ಯಾತಕ್ಕ ಕಲಿಯೊಳು ಹುಟ್ಟುವದು ॥ ೧೩ ॥

ಹಸುವಾಗಿ ಎನ್ನಗ ಅಸುವು ಹಾರುವದು
ಬಕ್ಷೀಸ ಬಿಡಿರೆಂದು ಕೇಳಿದನು
ಹಾರೂದು ಹಲ್ಲಾಣ ಮಾಡಿರಿ ಕಲ್ಯಾಣ
ಶಿಶುವಿಗೆ ಸಿಗುವದು ಪುಣ್ಯವನು ॥ ೧೪ ॥

ಕಳ್ಳ ಅಲ್ಲ ನಾನು ತಳ್ಳಿಸು ಲಗುಮಾಡಿ
ಕೊರಳಲ್ಲಿ ರುದ್ರಾಕ್ಷಿ ಲಿಂಗವನು
ವಿಶ್ವಾಸ ಕೊಟ್ಟವಗ ವಿಘ್ನವ ತಂದರೆ
ಅಗ್ನಿಯ ಪ್ರವೇಶನಾಗುವೆನು ॥ ೧೫ ॥

ಹೇಳಿದನಾತಂಗ ಬಂದೀತು ಕರುಣವು
ಜ್ಞಾನಿ ಇದ್ದನು ಒಬ್ಬ ಪಾಲಕನು
ಕೇಳೋ ಬಣಜಿಗ ನಿನ್ನ ಹೇಳೋ ಪ್ರಲಾಪ ಎನ್ನ
ಕಾಯದೊಳಗಾತು ಕಷ್ಟವನು ॥ ೧೬ ॥

ಬರುವಂಥ ವಿಘ್ನಕ ಎದುರಾಗಿ ಇರತೇನಿ
ಬಿಡತೇನಿ ಹೋಗೆಂದ ಹಾದಿಯನು
ಹೋಗಿ ಹೊಳ್ಳಿ ಬರುವಾಗ ನಾಲ್ಕು ಮಂದಿ ಆಳಿಗೆ
ಸ್ವಾದೀನ ಕೊಡಬೇಕು ನೋಡುವೆನು ॥ ೧೭ ॥

ಸಂತೋಷ ಒಡಲೊಳು ಸಮುದ್ರ ಸಮನಾಗಿ
ಪ್ರತ್ಯಕ್ಷ ಇದುರಿಗೆ ಈಶ್ವರನು
ಶರಣೆಂದು ಕರಮುಗಿದು ಬರುವೆನು ಹೋಗೆಂದು
ವನದೊಳಗ್ಹೊಕ್ಕ ಬಸವೇಶ್ವರನು ॥ ೧೮ ॥

ಮಡಿವಾಳ ಗುರುವಿನ ಮನದಲಿ ಸ್ಮರಿಸುವೆ
ಕೇಳರಿ ಮುಂದಿನ್ನು ಹೇಳುವೆನು
ಮಾದೇವರಾಜನ ವನದಾಗಿನ್ನೈಶ್ವರ್ಯಕ
ಆಶ್ಚರ್ಯನಾದ ಬಸವೇಶ್ವರನು ॥ ೧೯ ॥

ಮಲ್ಲೀಗಿ ಮುಳಜಾಜಿ ಬಿಲ್ವ ಪತ್ತರಿ ಗಿಡ
ಗುಲಾಬಿ ಕಾಮ ಕಸ್ತೂರಿ ವಾಸನಿಯೋ
ಸೂರ್ಯಪಾನ ಡೇರೆದ್ಹೂ ಟೆಂಕೇಂಶ್ವರ ದಾಳಿಂಬ್ರ
ಸದರಿಗೆ ಒಪ್ಪುವದು ಅಗ್ರವನು ॥ ೨೦ ॥

ಕ್ಯಾದಗಿ ವನದೊಳು ವಸಂತಕಾಲದಿ
ಕೋಗಿಲ ದನಿಗಳ ಕೇಳಿದನು
ವಜ್ರದ ಅರಮನಿ ಕನ್ನಡಿ ಹೊಳದಾವು
ಕಿರಣ ಸೂರ್ಯನ್ಹಂಗ ಜ್ಯೋತಿಯನು ॥ ೨೧ ॥

ಮಂಟಪ ಸಿಂಹಾಸನ ಗದ್ದಗಿಮ್ಯಾಲಿನ್ನು
ವಿರಕ್ತ ಮುನಿಗಳ ಕಾಣುವನು
ಊದುವರು ಹಾಡುವರು ಬಾರಿಸುವರು ಜಂಗಮರು
ಯಾವತ್ತು ಶಿವಯೆಂಬ ಶಬ್ದವನು ॥ ೨೨ ॥

ಪಂಚಾಕ್ಷರಿ ಶಿವಮಂತ್ರ ಓದೂದ ಕೇಳಿ
ಸಂತೋಷನಾದ ಬಸವೇಶ್ವರನು
ಇಂಥವರಿಗಿನ್ಯಾಂಗ ಸಂರಕ್ಷಣೆ ಮಾಡ್ಯಾರೆಂದು
ನಿಂತಲ್ಲೆ ತರತರ ನಡುಗುವನು ॥ ೨೩ ॥

ಇಷ್ಟೂರಿಗೆ ತಿಳಿದೊಬ್ಬ ಹೆಚ್ಚಿನ ಶರಣ
ಶೆಟ್ಟಿಯ ಕಣ್ಣಿಗೆ ಕಾಣುವನು
ಕಾಮಿಕದೊನದೊಳು ಬರುವಷ್ಟು ಧೈರ್ಯ
ಮನುಷ್ಯಾನಲ್ಲಿಂವ ಹೆಂಗೆಂಬುವನು ॥ ೨೪ ॥

ಯಾವ ನಾಡಿನವನೆಂದು ಮಾತಾಡಿಸಿ ಕೇಳಿದ
ಬಂದದ್ದು ಹ್ಯಾಂಗೆಂದು ಹೇಳೆಂದನು
ಕೇಳರಿ ಶಿವ ಶಿವ ಹೇಳುವೆನು ನಿಮಗ
ಬಂದದ್ದು ಎಂಥಾ ವ್ಯಾಳ್ಯೇವನು ॥ ೨೫ ॥

ಕಲ್ಯಾಣ ದೇಶದ ಬಣಜಿಗನು ಕೋರಿ
ಶೆಟ್ಟಿಯ ಸಂಗಮನೆಂಬುವನು
ತಿರಗುತ್ತ ಬಂದೇವಿ ಪರನಾಡ ಇಲ್ಲಿಗೆ
ತರಬಿದ್ದು ಖರೆ ಹೌದೆಂಬುವನು ॥ ೨೬ ॥

ಇಂಗು ವ ಜೀರಿಗೆ ಮಾರುವೆನು
ಕಂಚು ತಾಂಬರ ಹಿತ್ತಾಳಿ ಎತ್ತುವೆನು
ಒಂದ್ಹೊತ್ತು ಉಪವಾಸ ಬಂದಿತು ಸಂತಾಪ
ಅನುಭವ ಅವರಿಗೆ ಹೇಳಿದನು ॥ ೨೭ ॥

ಅನ್ನವ ನೀಡುವೆ ಕಂಚಾಣ ಕೊಡುವೆನು
ಬರ್ರೊಬ್ಬ ಶಿವ ಶಿವ ಎಂಬುವನು
ಅನಬ್ಯಾಡೋ ಈ ನುಡಿ ಮಾದೇವ ಕೇಳಿದರ
ಮುಂದೇನು ಹೇಳೂನು ಮಾರ್ಗವನು ॥ ೨೮ ॥

ಪುಣ್ಯವ ಪಡೆಯುದಕ ಆರಸಾವಿರ ಜಂಗಮರಿಗೆ
ಅನ್ನದ ಆಧಾರ ನೀಡುವೆನು
ಅವನಲ್ಲೇ ದೃಢವಿರುತ ಅನ್ನಿಗರನ್ನದ
ಆಸೇವು ನಮಗೇನು ಎಂಬುವರು ॥ ೨೯ ॥

ಎನ್ನಲ್ಲೇ ಹಿಡಿ ಅನ್ನ ಕಣ್ಣೀಗೆ ತೋರುವದು
ಇಷ್ಟೂರನ್ನಿದರೊಳಗೆ ಉಣಿಸುವೆನು
ಇಷ್ಟೂರಿಗೆ ಹಿಡಿಯನ್ನ ಕೊಟ್ಟೇನಿ ಅಂತಾನು
ಅವನಲ್ಲೇ ಏನೈತೋ ನಿಷ್ಠವನು ॥ ೩೦ ॥

ಖಂಡಗನ್ನ ಒಮ್ಮೆ ಉಂಡರೆ ಸಾಲದು
ಬಂಡಾಗುದು ಬಂತು ವಾಳ್ಯವನು
ನೂಕುತಲೊಬ್ಬಬ್ಬರು ಹೊಡೆ ಹೊಡೆದು ನಗತಾರೋ
ಅಂತಾರು ಇದು ಒಳ್ಳೆ ಆಶ್ಚರ್ಯವನು ॥ ೩೧ ॥

ಕರದಂಥ ಪ್ರಸ್ತಕೆ ಬಾರದಿರ್ದೊಡೆ
ಕಾದೂವ ಗೂಳ್ಯಾಗಿ ಹುಟ್ಟುವನು
ಬರತೇವಿ ಎಲ್ಲಾರು ಹರದಾಡಿತೋ ಮನ
ಗಟ್ಟ್ಯಾಗಿ ಹೇಳಂದಾರೊ ವಚನವನು ॥ ೩೨ ॥

ಏಳರಿ ಶಿವ ಶಿವ ಆಗಲಿ ಜಳಕವು
ಮಾಡಿರಿ ನೀವು ಲಿಂಗಪೂಜಿಯನು
ಜಳಕಾಗಿ ಮುಡಿಯುಟ್ಟು ಮುಗಿಸ್ಯಾರು ಜಪತಪ
ಮುಂದಿನ್ನ ನಡಿಯೂದು ಊಟವನು ॥ ೩೩ ॥

ಮಡಿವಾಳ ಗುರುವಿನ ಮನದಲ್ಲೇ ಸ್ಮರಿಸುವೆ
ಕೇಳಿರಿ ಮುಂದಿನ್ನು ಹೇಳುವೆನು
ಹಿಡಿಯ ಅನ್ನದ ಗಂಟು ನಡುಮಧ್ಯದಲ್ಲಿಟ್ಟು
ನಡೆಯಲೆಂದ ಬಸವೇಶ್ವರನು ॥ ೩೪ ॥

ನೀಡುವ ಇದನ ಹ್ಯಾಂಗ ಉಣ್ಣುನು ಅಂತೀರಿ
ಕಾಣದೆ ಬಂದಿಲ್ಲ ಅನ್ನುವನು
ಬಿಟ್ಟು ಬಿಟ್ಟೇಳೂರು ಬಿಚಗ್ಯಾಸಿಯಾಡೂರು
ತರವಲ್ಲ ಇನ್ನತಿ ಕೋಪವನು ॥ ೩೫ ॥

ಕಾಸಿಯ ಬಿಗದುಟ್ಟು ನಿಂತಾನೋ ಬಸವಣ್ಣ
ನಡಿಯಿರಿ ಶರಣರೆ ನೀಡುವೆನು
ಗಿಂಡಿಯಷ್ಟು ಅನ್ನ ದಂಡಿಗೆ ಉಣಸಿದರೆ
ಇದ್ದಷ್ಟು ಇತ್ತ ಹಿಡಿಬುತ್ತಿಯನು ॥ ೩೬ ॥

ಉಣಸಿದ ಜನಕೆಲ್ಲ ಅಂತಾನೊ ಬಸವಣ್ಣ
ಇದರ ಮರ್ಮ ಕೇಳಬೇಡಿರಿ ಅನ್ನವನು
ಉಣ್ಣುವದಕ್ಕಿಂತ ಅನ್ನೂರು ಮನದೊಳು
ತಿಳಿಲಿಲ್ಲ ಇವ ಬಸವೇಶ್ವರನು ॥ ೩೭ ॥

ಹಾಲು ಸಕ್ಕರೆ ತುಪ್ಪ ನಿತ್ಯದಲುಂಡೇವಿ
ಅದಕ ಹೆಚ್ಚಿನ ರುಚಿ ಬುತ್ತಿಯನು
ಅಕ್ಕರದಲಿ ಉಂಡು ನಕ್ಕಾರು ಡೇಗುತ
ಸಿಕ್ಕಾನು ನಮಗಿಂದು ಈಶ್ವರನು ॥ ೩೮ ॥

ಶಿವ ಶಿವ ನಿನ ಪುಣ್ಯ ಬಹಳಾತೊ ನಮಗಿನ್ನು
ತಿಳಿಯದು ಹೇಳರಿ ಕೂನವನು
ಹೇಳಿದ ಆಜ್ಞೆಯ ಕೇಳಿದರ ಇದಕ
ಹೆಚ್ಚಿಂದು ಕಂಡೀರಿ ಐಶ್ವರ್ಯವನು ॥ ೩೯ ॥

ಬಿಜ್ಜಳನ ಐಶ್ವರ್ಯಕ ಹೇಳೂದಕಳತಿಲ್ಲ
ಕಲ್ಯಾಣ ಕಾಣೂದು ಪುಣ್ಯವನು
ನಿಮ್ಮೇಲೆ ಮನಸಾಗಿ ಬಂದೇನಿ ಇಲ್ಲಿಗೆ
ಹೌದೇಳು ನಾ ಬಸವೇಶ್ವರನು ॥ ೪೦ ॥

ಸಲಹು ಗಣಂಗಳು ಬರುಮನವಿದ್ದರೆ
ನಡೆಯಿರಿ ಕಲ್ಯಾಣಕ ಹೋಗುವುನು
ಬಸವಣ್ಣ ಇಂಥದಕ ಅಗಸಿಗೆ ಕಾವಲು
ಹೋಗುವದ್ಹ್ಯಾಂಗೇಳೋ ಮಾರ್ಗವನು ॥ ೪೧ ॥

ಇದಕ್ಯಾಕ ಭೀತಿಯೆಂದು ಬಿಚ್ಚಿದನೊ ಚೀಲ
ಇದರೊಳಗೊಬ್ಬಬ್ಬರ್ಹೋಗೆಂದನು
ಬಸವಣ್ಣ ನಿನ್ನ ಮಹಿಮೆಯು ತಿಳಿಯದು ನಮಗಿನ್ನು
ಚೀಲವು ಹಿಡಿಸದು ಒಬ್ಬರನು ॥ ೪೨ ॥

ಸಬ್ಬೈಲ ಸಾಲದು ಆರುಸಾವಿರ ಜನ
ಇದರೊಳಗ್ಹ್ಯಾಂಗಿನ್ನು ಹೋಗುವದಿನ್ನು
ಹಿಂಚಾಳಿಸುವದ್ಯಾಕ ಹಂತೇಕ ಬರತೇನಿ
ನಡೆಯಿರಿ ಒಳಿಯಾಕ ನೋಡುವುನು ॥ ೪೩ ॥

ಸರ್ವರು ನಡೆದಾರು ಹೆಚ್ಚಿನ ಸದರಿನ್ನು
ಮುತ್ತಿನ ಅರಮನಿ ಗದ್ದಗೀನೋ
ಬಸವನ ಭಾವಕ ಹಸುವಿನ್ನು ಹರಿದಾವು
ಶರಣರು ಆದರು ಮೋಕ್ಷವನು ॥ ೪೪ ॥

ಶಿವ ಶಿವ ಎನ್ನುತಲಿ ಹೊತ್ತಾನು ಚೀಲವು
ಬಿಟ್ಟಾನ್ನು ವನ ಬಸವೇಶ್ವರನು
ಬರುವಾಗ ಆಳಿಗೆ ಆಜ್ಞೇವ ಹೇಳಿದ್ದೆ
ಆಗೂನು ಅವರಿಗೆ ಭೆಟ್ಟಿಯನು ॥ ೪೫ ॥

ಪಾಲ್ಕುರಿರಾ ಇನ್ನ ಕಲ್ಯಾಣಕ ಹೋಗುವೆ
ಸ್ವಾಧೀನ ನೋಡಿರಿ ಅನ್ನುವನು
ಬರಿಯದು ಚೀಲವು ಅದರೊಳಗೇನೈತಿ
ಹೋಗಂತ ಕೊಟ್ಟಾರು ಅಪ್ಪಣೆನೋ ॥ ೪೬ ॥

ಅಗಸಿಯ ದಾಟಿಂದ ಆರು ಸಾವಿರ ಜನ
ಕದಕೊಂಡ ಹೋದ ಬಸವೇರ್ಶವರನು
ಹ್ವಾದಾನು ಕಲ್ಯಾಣ ಧೀರದಂಡು ಒಳ್ಳೇ
ತುಂಬಿಕೊಳ್ಳುವದು ಲಿಂಗಪೂಜೆಯನು ॥ ೪೭ ॥

ಲಕ್ಷದ ಮೇಲೆ ತೊಂಭತ್ತಾರು ಸಾವಿರ
ಜಂಗಮರ ನಿತ್ಯಕ ಸಲುಹಿದ ಬಸವೇಶ್ವರನು
ಜಂಗಮರ ಕದ್ದ ಕಥೆಯನ್ನು ಕೇಳರಿ
ಇದಕಾದ ಚೋರ ಬಸವೇಶ್ವರನು ॥ ೪೮ ॥

ಮಹಾಶರಣ ಮಡಿವಾಳ ಗುರುವಿನ ಮನದಲಿ ಸ್ಮರಿಸುವೆ
ಕೇಳಿರಿ ಮುಂದಿನ್ನು ಹೇಳುವೆನು
ಮಾದೇವ ಜಂಗಮರ ಹಾದಿಯ ನೋಡ್ಯಾನು
ಆದೀತು ಶಿವಪೂಜೆ ವ್ಯಾಳ್ಯೇವನು ॥ ೪೯ ॥

ತಿಳಿಲಿಲ್ಲೋ ಮಾಯವು ತಲ್ಲಣಿಸುತ ವನ
ಎಲ್ಲಿ ನೋಡಿದರೆ ಶಬ್ದವಿಲ್ಲ
ಹಸಿದಾರು ಜನರೆಂದು ವಿಷವು ಆದಿತು ಮನ
ಮಾಡುವದೇನಾತು ಮೋಸವನು ॥ ೫೦ ॥

ಮುಣಗಿತು ಪುಣ್ಯವು ಮುನಿದಾನು ಈಶ್ವರ
ಮನದಲ್ಲೇ ತಾಳಿದ ಕೋಪವನು
ಕಪಟವ ತಿಳಿದಾನು ಕಲ್ಯಾಣಕ ಜಂಗಮ್ರನ
ಒಯ್ದಿರುವ ಬಸವೇಶ್ವರನು ॥ ೫೧ ॥

ಉಗ್ರವ ತಾಳಿದ ತಿದ್ದಿದ ಮಿಸೆಯು
ಇನ್ಯಾಕ ನಡೆಯಲಿ ಯುದ್ಧವನು
ಕಡಿದು ಅವನ ಶಿರ ಹರಿಸುವೆ ರಕ್ತವು
ಬಿಡಿರೆಂದು ಮಾಡಿದ ಪಂಥವನು ॥ ೫೨ ॥

ಇನ್‌ಯಾತರಾಸೇವು ಬಸವಣ್ಣನ ಬಲ
ಮುರಿದಿದ್ದರಲ್ಲೆಂದ ಮಾದೇವನು
ತನ್ನಲ್ಲಿ ಇದ್ದಾಂವ ಬಲ್ಲಾಂವ ಪೌರಾಣಿ
ಸಲ್ಲದು ಬ್ಯಾಡೆಂದು ವ್ಯಾಜ್ಯವನು ॥ ೫೩ ॥

ಮರ್ತ್ಯದೊಳು ಹುಟ್ಟಿದಾಂವ ಮನುಷ್ಯನು ಅಲ್ಲಾಂವ
ಕಂಡುಳಿದನು ಕೈಲಾಸವನು
ಆಗಿನ್ನ ತಿಳಿದಾನು ಅರಣ್ಯದೊಳಗಿದ್ದ
ಕರಸಿದ ಕಳ್ಳ ಕಿರಾತರನು ॥ ೫೪ ॥

ಬ್ಯಾಡರಿಗೆ ಹೇಳಿದ ಮಾಡಿದ್ದು ಬಸವಣ್ಣ
ಮಾಯದಲ್ಲೆ ಒಯ್ದಾನು ಶರಣರನು
ಜೈಸಿರಿ ಈ ವ್ಯಾಳ್ಯಾ ಮಾಯಾದಲ್ಲೆ
ನಿಮ್ಮ ಆಯುಧದಲ್ಲೆ ಹೊಡೆಯಿರೆಂಬುವನು ॥ ೫೫ ॥

ಈಶ್ವರ ಇದು ಎಂಥ ವ್ಯಾಳವ ತಂದಾನು
ಪ್ರಾಣವ ಕೊಲ್ಲುದು ಪ್ರಾಪ್ತಿಯನು
ಕ್ರೋಧವ ತಾಳಿ ಹ್ಯಾಂಗ ಕಾದುವುದು
ಅಲ್ಲಿ ಕಲ್ಯಾಣದೊಳು ಬಸವೇಶ್ವರನು ॥ ೫೬ ॥

ಶಿವ ಶಿವ ಶರಣನ ವಚನ ಹ್ಯಾಂಗ ಮೀರುನು
ಚಿಂತೀಲಿ ಹಿಡಿದಾರು ವೀಳ್ಯವನು
ಬ್ಯಾಡರ ಹುಡುಗರ ಅರೆಚಣ್ಣ ತೆಗಿಸ್ಯಾನು
ಆದರು ಜಂಗಮ ವೇಷವನು ॥ ೫೭ ॥

ಔಡಲಕಟಗಿಯ ಬೆತ್ತವ ಮಾಡಿದರು
ಕಾಯಿಸರ ರುದ್ರಾಕ್ಷಿ ಲಿಂಗವನು
ಹಚ್ಚಿದರ ವಿಭೂತಿ ಹೊತ್ತಾರು ಕಾವಿ ವಲ್ಲಿ
ಮುಚ್ಚಿ ಹಿಡಿದರು ತಮ್ಮ ಆಯುಧವನು ॥ ೫೮ ॥

ಮಾರ್ಗವ ಹಿಡಿದಾರು ಮಹದೇವನಾಜ್ಞೆವ
ಮರತಾರು ಮತ್ತೇನು ಜ್ಞಾನವನು
ಅಜ್ಞಾನವ ಅಳಿದಾರು ಸುಜ್ಞಾನವ ಜೈಸುತ
ಬಸವಣ್ಣನ ಮೇಲೆ ಭಕ್ತಿಯನು ॥ ೫೯ ॥

ನೆನೆಯುತ ಕಲ್ಯಾಣಕ ಹೋದರು ಮಠಕಲ್ಲೆ
ಜಂಗಮರ ಕಂಡ ಬಸವಣ್ಣನು
ಜಂಗಮರ ಲಿಂಗಪೂಜೆ ನಡೆದಿತ್ತು ಜನರೊಳು
ಕೂಡ್ರಿಸಿದ ಬ್ಯಾಡರನು ॥ ೬೦ ॥

ಶಿವ ಶಿವ ಶಿವಪೂಜೆ ಮಾಡೋನು ನಮ್ಮಲ್ಲಿ
ಆಯುಧ ಔಡಲ ಫಳಕವನು
ಮಾಡಿದ ಅವರಂತೆ ನೋಡಿದರ ಸರ
ಆಗ್ಯಾವು ರುದ್ರಾಕ್ಷಿ ಲಿಂಗವನು ॥ ೬೧ ॥

ತೀರಿತು ಊಟವು ಕಿರಾತರ ಕರೆದು
ಹೇಳಿದನು ಬಸವೇಶ್ವರನು
ಶಿವಶರಣನ ಆಜ್ಞೇವ ಮಿರಬ್ಯಾಡರಿ ನೀವು
ತಿಳಿಸಿರಿ ಬಂದ ಕಾರ್ಯವನು ॥ ೬೨ ॥

ಶಿವ ಶಿವ ಈ ನುಡಿ ಅನಬ್ಯಾಡೊ ನಮಗಿನ್ನು
ಸಲುಹೆಂದು ಹಿಡಿದಾರು ಪಾದವನು
ಕಲ್ಯಾಣದೈಶ್ವರ್ಯ ನೋಡತಿರೋ ನೀವು
ಬಲ್ಲವರ್ನೊಂದಿರಿ ಮೋಕ್ಷವನು ॥ ೬೩ ॥

ಶಿವ ಶಿವ ಈ ವ್ಯಾಳ್ಯ ಎಂದಿಗೂ ಸಿಗದಿನ್ನು
ಹೊಂದಿಸು ಗತಿ ಬಸವೇಶ್ವರನು
ಕೈಲಾಸದಿಂದ ಪುಷ್ಪದ ವಿಮಾನ
ಇಳದಾವೊ ಹೊಂದಿರಿ ಮೋಕ್ಷವನು ॥ ೬೪ ॥

ಮಡಿವಾಳ ಗುರುವಿನ ಮನದಲ್ಲೆ ಸ್ಮರಿಸುವೆ
ಕೇಳರಿ ಮುಂದಿನ್ನು ಹೇಳುವೆನು
ಕಿರಾತರು ಮೋಕ್ಷ ಹೊಂದಿದ ಸುದ್ದಿಯ
ದೂರದಿರುವ ಮಾದೇವ ಕೇಳಿದನು ॥ ೬೫ ॥

ಜೋಡ ಮಡದಿಯು ತನ್ನ ಮಾದೇವಿ ಕರದಾನು
ಹಿಡದಾನು ಕಲ್ಯಾಣದ ಹಾದಿಯನು
ಬಾಧಿನಿತೊಡಲೋಳು ಹೋದಾನು ಕಲ್ಯಾಣಕ
ಹೊರಗಿರುತಲಿ ಉಸುರು ಹಾಕುವನು ॥ ೬೬ ॥

ಮಾದೇವ ಎಂಬುವ ನಾಮ ತೆಗೆದ ಅಂವ
ಹೆಸರಿಟ್ಟು ಮೋಳಗಿ ಮಾರಯ್ಯನು
ಆಗದ ಕಾಯಕ ಕಷ್ಟ ಎಂದು ಹೇಳದೆ
ಕಟ್ಟಗಿ ಹೊರಿ ತಂದು ಮಾರುವನು ॥ ೬೭ ॥

ಕಾಲವನು ಹಾಕುತ ಕಲ್ಯಾಣದೊಳು ಹೊರಿ
ನಿಲ್ಲಿಸಿ ಬಿಸಿಲೊಳು ಮಾರುವನು
ನಿತ್ಯಕ್ಕ ನಾಲ್ಕುದುಡ್ಡು ರೊಕ್ಕ ದುಡಿದು
ಒಬ್ಬ ಜಂಗಮನ ಅನ್ನ ನಡಿಸುವನು ॥ ೬೮ ॥

ಕಂಡಾನೋ ಬಸವಣ್ಣ ಐಶ್ವರ್ಯದಲ್ಲೆ
ಇದ್ದವಗ ಎಂಥ ವ್ಯಾಳ್ಯೇವನು
ಮರಗುತ್ತ ಸೆರಗಿಲೆ ಜಾಳಿಗೆ ಹೊನ್ನನು ಕಟ್ಟಿ
ಜಂಗಮನಾಗಿ ತಾ ಹೋಗುವನು ॥ ೬೯ ॥

ನಿತ್ಯಕ್ಕ ನಡಿವಂತೆ ಮಾದೇವಿ ಪಾದಪೂಜೆ
ನಡಸಿದಳಾತನ ಊಟವನು
ಹೊನ್ನ ಅವ್ರ ಮನೆಯಲ್ಲಿ ಜಗಲಿ ಮ್ಯಾಲಿಟ್ಟು
ಮಾಯವಾದನೊ ಬಸವೇಶ್ವರನು ॥ ೭೦ ॥

ಬಂದಾನೊ ಮಾದೇವ ಮನೆಯಲ್ಲಿ ದ್ರುವ್ಯವ
ಜಗಲಿಯ ಮ್ಯಾಲೆ ಕಾಣುವನು
ಅಕಟಕಟಾ ಎಂದು ಮಾದೇವಿ ಕರದಾನು
ಇಲ್ಲಿ ಬಂದವರು ಯಾರು ಎಂದು ಕೇಳಿದನು ॥ ೭೧ ॥

ಜಂಗಮರು ಶಿವ ಇನ್ನಾರು ಬರುವರು
ಅರಿಯೇನು ಎಂದಳು ಮಾದೇವಿಯು
ಕೇಳ ಮಡದಿಯೆ ಜಾಳಿಗೆ ಹೊನ್ನನು
ಕಾಲಿಲೆ ಉರುಳಿಸಿ ತಿಪ್ಪಿಯೊಳಗೆಸೆದನು ॥ ೭೨ ॥

ಲಕ್ಷದ ಮೇಲೆ ತೊಂಭತ್ತಾರು ಸಾವಿರ
ಬಸವಣ್ಣನ ಜನಕ ಊಟ ಹೇಳಿದನು
ಇಂಥ ಬಡವ ಇಷ್ಟು ಜನಕೇನು ಉಣಿಸ್ಯಾನು
ಅಂತಾರು ಜಂಗಮರು ಆಶ್ಚರ್ಯವನು ॥ ೭೩ ॥

ಶರಣ ಜನರಿಗೆ ಕರೆತಂದು ಬಂಗಾರದ
ಹರವಾಣದಲ್ಲಿ ಅವರ ಊಟವನು
ಬೇಡಿದ್ದ ಊಣಸಿದ ಮಾಡಿದ ಭಿಕ್ಷವ
ಜಂಗಮರಿಗೆ ಬಂಗಾರದ ಬೆತ್ತವನು ॥ ೭೪ ॥

ನಗುನಗುತ ಜಂಗಮರು ಹೊಂಟಾರು ನಿಂತವ್ರ
ಹಾದಿಯ ನೋಡುವ ಬಸವೇಶ್ವರನು
ವ್ಯಾಳ್ಯೇವಾದಿತು ಎಲ್ಲಿ ಹೋಗಿದ್ದಿರಿ ನಡೆಯಿರಿ
ಆಗಲಿ ಅಂದ ಜಳಕವನು ॥ ೭೫ ॥

ಜಂಗಮರು ಅಂತಾರು ಬಸವಣ್ಣ ಮೋಳಿಗೆಯ
ಮಾರಯ್ಯನ ಮನೆಯಲ್ಲಿ ಊಟವನು
ಬೇಡಿದ್ದು ಊಣಸಿದ ಮಾಡಿದನು ಬಿಕ್ಷವ
ಜಂಗಮರಿಗೆ ಬಂಗಾರದ ಬೆತ್ತವನು ॥ ೭೬ ॥

ಮಾದೇವ ಶರಣ ಮಾಮಹಿಮನಿರುವನು
ಹರುಷಾಗಿರಲೆಂದ ಬಸವೇಶ್ವರನು
ಉಳುವಿಯ ಬಾಗಿಲ ಕುಂದಗೋಳ ಮಡಿವಾಳ
ಗುರುವಿನ ಮನದಲ್ಲಿ ಸ್ಮರಿಸುವೆನು ॥ ೭೭ ॥

– ಕೃತಿ: ಬಸವಣ್ಣ ನಿನ್ನ ಹೆಸರು ದೆಸೆದೆಸೆಗೆ ಶಿವಮಂತ್ರ

***

ಕಲ್ಯಾಣ ಪಟ್ಟಣದಾಗ ಕೋಟಿ ಜಂಗಮ್ರ ತಂದು

ಕಲ್ಯಾಣ ಪಟ್ಟಣದಾಗ ಕೋಟಿ ಜಂಗಮ್ರ ತಂದು
ಭಕ್ತಿಮಾಡಿದ ಬಸವೇಶ್ವರನು ॥ ಪ ॥

ಲಕ್ಷದಮ್ಯಾಲ ತೊಂಭತ್ತಾರು ಸಾವಿರ
ಮೊದಲ ಮಾಡಿದ ಬಸವೇಶ್ವರನು
ಅಂಗೈಯಾಗ ಇಟ್ಟು ಪೂಜೆ ಮಾಡಿದರ
ವಿಭೂತಿ ಕೊಟ್ಟ ಬಸವೇಶ್ವರನು ॥ ೧ ॥

ತಾಲಿ ತಂಬಿಗಿ ಕೊಟ್ಟು ಗಿಂಡಿಲುದಕವಿಟ್ಟು
ತಳಗಿ ಕೊಟ್ಟ ಬಸವೇಶ್ವರನು
ಕುಂತ ಜಂಗಮರಿಗೆಲ್ಲ ಕಾಣುಕಂತಿಕೊಟ್ಟು
ಸತ್ಯವಂತ ಬಸವೇಶ್ವರನು ॥ ೨ ॥

ಕುಂತ ಜಂಗಮರಿಗೆಲ್ಲ ಪಂಚಪಕ್ವಾನ್ನ ಮಾಡಿ
ನೀಡತಿದ್ದ ಬಸವೇಶ್ವರನು
ದ್ವಾರಬಾಗಿಲದೊಳು ಪಾರಕಾವಲ ಇಟ್ಟು
ದ್ವಾರಪಾಲಕರ ಬಸವೇಶ್ವರನು ॥ ೩ ॥

ಬಸವಣ್ಣ ಭಕ್ತಿಯ ಸಾರುದು ಶಿವ ಕೇಳಿ
ನೋಡಬೇಕೆಂದಲ್ಲಿ ಈಶ್ವರನು
ಕಪಟ ರೂಪವ ತಾಳಿ ಕಲ್ಯಾಣಕ ಬಂದು
ಕುಲ್ಲ ಜನರ ಕೇಳಿದ ಈಶ್ವರನು ॥ ೪ ॥

ಬಿಜ್ಜಳನ ಮನಿ ಮುಂದ ಬಸವಣ್ಣನ ಮನಿ ಕೇಳಿದ್ರ
ಕೈಮಾಡಿ ತೋರಿಸಿದ ಬಿಜ್ಜಳನು
ಹೆಂಡ ಕಂಡನೊಯ್ದು ಬಂಗಿಚೀಲನಾಕಿ
ಬಾಗಿಲಿಗೆ ನಿಂತಾನು ಈಶ್ವರನು ॥ ೫ ॥

ಕ್ವಾರ್ಹಲ್ಲು ತೋರುತ ವಾರಿನೋಟ ನೋಡುತ
ಅರಮನಿಗ್ಹೋದ ಈಶ್ವರನು
ದ್ವಾರಪಾಲಕರು ನೀವ್ ಯಾರಂತ ಕೇಳಿದರ
ಊಟಕ ಬಂದೇವಿ ಎಂದ ಈಶ್ವರನು ॥ ೬ ॥

ಅಂಗರೂಪವ ತಾಳಿ ಲಿಂಗವಿಲ್ಲವೆಂದು
ಜಂಗಮ ಬಂದನು ಈಶ್ವರನು
ಹೇಸಿ ಮಾನವನಲ್ಲಿ ಈಶ್ವರ ಶಿವಪ್ಪನು
ದಾರಿ ಕೇಳಿದ ಬಸವೇಶ್ವರನು ॥ ೭ ॥

ಯಾಸಿಗಾಲವನು ಕೇಳಿ ಮಾರ್ಗ ಹಿಡಿದು
ಕೇತನಕೇರಿಗ್ಹೋದ ಈಶ್ವರನು
ಕೇತನಕೇರಿಯೊಳು ಸತ್ತ ಕರವ ಬಿಚ್ಚಿ
ಹಾಲ ಹಾಕಿದ್ದ ಈಶ್ವರನು ॥ ೮ ॥

ಇಷ್ಟ ಮಾತ ಕೇಳಿ ಬಿಟ್ಟಾನು ಅರಮನಿ
ಕೇಳಿಮಾರ್ಗ ಹಿಡಿದ ಬಸವೇಶ್ವರನು
ಕೇಳಿಮಾರ್ಗ ಹಿಡಿದು ಕೇತನಕೇರಿಗ್ಹೋದ
ಈಶ್ವರನ ಕಂಡ ಬಸವೇಶ್ವರನು ॥ ೯ ॥

ಬಾರಪ್ಪ ಶಿವನೆಂದು ಬಾಗಿ ಪಾದಕ ಹಿಡಿದರ
ಪಾದ ಕಿತ್ತು ಬಂದ ಈಶ್ವರನು
ಕಿತ್ತ ಪಾದ ನೋಡೋ ಹೊತ್ತಾನು ಬೆನ್ನಿಲೆ
ಅರಮನಿಗ್ಹೋದ ಬಸವೇಶ್ವರನು ॥ ೧೦ ॥

ಅರಮನಿ ಒಳಗೊಂದು ಗುರುವಿನ ಗದ್ದಿಗಿ
ಓದು ಇಳವಿದ ಬಸವಣ್ಣನು

ಹತ್ತ ಅವತಾರ ತಾಳಿ ದಶಭುಜವ ತೋರಿದ
ಪಂಚಮುಖದ ಪರಮೇಶ್ವರನು ॥ ೧೧ ॥

ಬಾರಪ್ಪ ಬಸವಣ್ಣ ನಿನ್ನ ಭಕ್ತಿಗೆ ಒಲಿದೆ
ಏನ ಬೇಡತಿದಿ ಎಂದ ಈಶ್ವರನು
ಬೇಡಿದ್ದ ಕೊಡು ಗುರುಭಕ್ತಿ ಮಾಡುವಂಥ
ಪರುಷ ಒಟ್ಟಲ ಬೇಡಿದ ಬಸವೇಶ್ವರನು ॥ ೧೨ ॥

– ಕೃತಿ: ಬಸವಣ್ಣ ನಿನ್ನ ಹೆಸರು ....

***

ಬಿಜ್ಜಳರಾಜನ ಓಲಗದಲ್ಲಿ

ಬಿಜ್ಜಳ ರಾಜನ ಓಲಗದಲ್ಲಿ
ಬಲ್ಲಿದ ಬಲ್ಲವ ಬಸವಣ್ಣ
ಮೂನ್ನೂರ ಅರವತ್ತು ಜನ ಬಿಜ್ಜಳ
ಮುಂದೆ ಕುಳಿತನು ಬಸವಣ್ಣ ॥ ೧ ॥

ದಿಗ್ಗನೆ ಎಂದು ಅಂದೇನಂದ್ರ
ತನ್ನ ಹಸ್ತವ ನೆಗವಿದ ಬಸವಣ್ಣ
ಕುಂತ ಜನರು ಏನಂತ ನುಡಿತಾರ
ಎಂತ ಪಾತಕಿಂವ ಬಸವಣ್ಣ ॥ ೨ ॥

ಭೀತಿ ಇಲ್ಲದೆ ಬಿಜ್ಜಳರಾಜನ
ಗುದ್ದಿ ಕೊಲ್ಲುವನು ಬಸವಣ್ಣ
ವಿಚಾರ ಉಳಿಯದೆ ವಿರಸದಿಂದ
ಮಾತನಾಡುತಂತಾನ ಬಸವಣ್ಣ ॥ ೩ ॥

ಮತ್ತೇನೊ ನಿನ್ನ ಮಹಾತ್ಮೆ ಇರುವದು
ಪ್ರಮಾಣ ತೋರಿಸೊ ಬಸವಣ್ಣ
ಹೋಗರಿ ಇಲ್ಲಗೆ ನಾಲ್ಕು ಗಾವುದ ಮೇಲೆ
ಇರುವನು ಬಸವಣ್ಣ ॥ ೪ ॥

ಅಲ್ಲೊಬ್ಬ ಶರಣ ಲಿಂಗಪೂಜೆಯೊಳು
ಬಲ್ಲವನಿದ್ದನು ಬಸವಣ್ಣ

ಹಾಲಿನ ಅಭಿಷೇಕ ಹತ್ತು ಸಾವಿರ ಕೊಡ
ನಿತ್ಯ ನಡಿಸುವೆ ಬಸವಣ್ಣ ॥ ೫ ॥

ಭಕ್ತಿ ಗುಣ ಪತಿವ್ರತೆ ಜಾಣೆ
ಕೊಡ ಹೊತ್ತು ಬರುವಾಗ ಬಸವಣ್ಣ
ಕಾಲುಜಾರಿ ಕೈ ಬಿಟ್ಟ ವ್ಯಾಳ್ಯಕ
ಅಪ್ಪಯ್ಯನೆಂದಳು ಬಸವಣ್ಣ ॥ ೬ ॥

ಅರಿವು ತಿಳಿದು ಆ ಕ್ಷಣಕ ಎದ್ದು
ಅಂತರಲೆ ಹಿಡಿದನು ಬಸವಣ್ಣ
ಅಸಾಧ್ಯ ಮಾತನು ಅನುಭಾವ ತಿಳಿಯದೆ
ಅಲ್ಲಿಂಗ ಹೋದ್ಯೋ ಬಸವಣ್ಣ ॥ ೭ ॥

ಇಲ್ಲೇ ಇರು ಎಲ್ಲಾರು ಹೋಗತೇವಿ
ಇಲ್ಲೆ ಇರಬೇಕು ಬಸವಣ್ಣ
ಖರೆ ಇದ್ದರೆ ತಿರುಗಿ ಬಂದು ನಾವು
ಶರಣು ಮಾಡತೇವಿ ಬಸವಣ್ಣ ॥ ೮ ॥

ಆಜ್ಞೇಕ ಸರಿ ಅವರು ಹೊರಟು ಹೋದರು
ಇಲ್ಲೆ ಕುಳಿತನು ಬಸವಣ್ಣ
ನೋಡಿದರ್ಹೋಗಿ ಅಂತಾರೊ ಹೌದು
ಅಂತರಲೆ ಹಿಡಿದಾನ ಬಸವಣ್ಣ ॥ ೯ ॥

ಕರುಣದಿಂದ ಕೈ ಹಿಡಿದು ಎತ್ತಿ ಕೊಡ
ಹೊರಸಿ ಹೋಗಂದಾನ ಬಸವಣ್ಣ
ಖರೆಯೆಂದು ಕಲ್ಯಾಣಕ ಬಂದರ
ಇಲ್ಲೆ ಕುಳಿತಾನ ಬಸವಣ್ಣ ॥ ೧೦ ॥

ಏನು ತಿಳಿಯದು ವಿಚಾರ ಮಾಡುವನು
ಹೆಚ್ಚಿನ ಶರಣೆಂವ ಬಸವಣ್ಣ
ಸಧ್ಯ ಹೋಗಿ ಇದ್ದಲ್ಲಿ ನೋಡಿ
ಗೊಲ್ಲತಿ ಬರಲೆಂತ್ಹೇಳಿದನು ॥ ೧೧ ॥

ಎಲ್ಲರು ಕೂಡಿ ನಡಿದಾರು ಅರಸ
ಕರೆದ ನಡಿ ಹೋಗುನು
ಅರಸ ಕರೆದಾನಂತ ಮನಸಿನೊಳು
ಧನ್ಯಳಾದೆ ಇಂದಿಗೆ ನಾನು ॥ ೧೨ ॥

ಬಂದ ಸಭಾಕ ಸಾಷ್ಟಾಂಗ ಮಾಡಿದಳು
ಅರಸು ಆಕಿಯನು ನೋಡಿದನು
ಎಲ್ಲಿ ಬಿದ್ದಿ ನಿನ್ಯಾರ ಎಬ್ಬಿಸಿದರು
ಎಲ್ಲಾ ತಿಳಿಸುದು ಏನೇನು ॥ ೧೩ ॥

ನಿನ್ನ ಮನಸು ಆನಂದವಾಗುವಂತೆ
ನಿಜಸ್ಥಿತಿಯನು ಹೇಳುವೆನು
ಪನ್ನಂಬಯನೆಂಬ ಶರಣನಿದ್ದ
ಶಿವಪೂಜೆಯಲಿ ಮಹಾಬಲ್ಲಿದನು ॥ ೧೪ ॥

ಶಿವಾರ್ಚನೆ ಪರಿಮಳ ತರುವಾಗ
ಕಾಲು ಜಾರಿ ಕೈಯ್ಯೂರಿದನು
ಶಂಭೋ ದಯಾನಿಧಿ ಉದ್ಧರಿಸೆಂದರ
ಈಶ್ವರ ಬಂದವನೆಬ್ಬಿಸಿದನು ॥ ೧೫ ॥

ಧರಿಯೊಳು ಕುಂದಗೋಳ ಶಿವಬಸವನ
ಚರಣ ಪಿಡಿದು ಹೇಳಿದ ನಾನ
ಚರಣ ಪಿಡಿದು ಹೇಳಿದೆ ನಾನ
ನಿನ್ನ ತರುಳನೆಂದು ಕಾಪಾಡೆನ್ನ ॥ ೧೬ ॥

– ಕೃತಿ: ಬಸವಣ್ಣ ನಿನ್ನ ಹೆಸರ....

***

ನಿರಂಕಾರ ಅಡ್ಡ ಅಗಲ ಗುರಳಿ ಹುಟ್ಟಿತೊ

ನಿರಂಕಾರ ಅಡ್ಡ ಅಗಲ ಗುರಳಿ ಹುಟ್ಟಿತೊ
ಆಕಾಶದ ಅಡ್ಡ ಅಗಲ ಬಸವಯ್ಯನೊ
ಗುರಳಿ ಒಡೆಯಿತೊ ಗಗನ ತುಳಿಕಿತೊ
ಸಾಕ್ಷಾತ್ ಭಗವಂತ ಬಸವಯ್ಯನೊ ॥ ೧ ॥

ಸಾಕ್ಷಾತ್ ಭಗವಂತ ಲಗ್ನ ಹಿಡಿದಾನ
ಏನ ಹೇಳಲ್ಯೊ ಬಸವಯ್ಯನೊ
ದೇವಿ ದ್ಯಾವರ ಲಗ್ನ ಹಿಡಿದಾನ
ಭಕ್ತಿವಂತ ನನ್ನ ಬಸವಯ್ಯನೊ ॥ ೨ ॥

ಕತ್ತಲೆಂಬುದೊಂದು ಹಂದರ ಹಾಕಿದನೊ
ಏನ ಹೇಳಲೆಪ್ಪ ನಾ ಬಸವಯ್ಯನೊ
ಅರವತ್ತಾರು ಸೂರ್ಯರ ತಳಕ ಕಟ್ಟಿದನೊ
ಭಕ್ತಿವಂತೆ ನನ್ನ ಬಸವಯ್ಯನೊ ॥ ೩ ॥

ತನ್ನ ಶರೀರದಿಂದ ವಿಚಾರವೆನ್ನ
ಹಾಲಗಂಬ ಕಟ್ಟತಾನ ಬಸವಯ್ಯನೊ
ತನ್ನ ಶರೀರ ಮಣ್ಣನು ತಗದು
ಏನು ಹೇಳಲೆಪ್ಪ ನಾ ಬಸವಯ್ಯನೊ ॥ ೪ ॥

ಐರಾಣಿ ಮಗಿ ಮಾಡಿದನೊ ನನ್ನ ಬಸವಯ್ಯನೊ
ಪಂಚತಂತ್ರದಿಂದ ಐದು ಮಂತ್ರ ಊದಿ
ಮುತ್ತೈದಿಯರ ಮಾಡತಾನೊ ಬಸವಯ್ಯನೊ
ಏನ ಹೇಳಲೆಪ್ಪ ನಾ ಬಸವಯ್ಯನೊ ॥ ೫ ॥

ಇಬತ್ತಿ ಧರಿಸಿ ಸುರಗಿಮಗಿ ಹಿಡಿಸತಾನ
ಭಕ್ತಿವಂತ ನನ್ನ ಬಸವಯ್ಯನೊ
ತನ್ನ ಶರೀರದಿಂದ ಎಳಿಯನು ತಗದ
ಸುರಗಿ ಸುತ್ತತಾನ ಬಸವಯ್ಯನೊ ॥ ೬ ॥

ವಿಚಾರಿಂದ ಗಣಗಳ ಹಿಡಕೊಂಡು
ಬಾಸಿಂಗ ಕಟ್ಟತಾನೊ ಬಸವಯ್ಯನೊ
ತಾನೆ ಬ್ರಹ್ಮ ತಾನೆ ಉಪಾಧ್ಯಾಯ
ಏನ ಹೇಳಲೆಪ್ಪ ಬಸವಯ್ಯನೊ ॥ ೭ ॥

ಸೋಬಾನ ಅನ್ನೀರೆ ಸೋಬಾನ ತಂಗಿ
ಸೋಬಾನ ಸೋ ಅನ್ನಿ ಬಸವಯ್ಯನೊ
ಪಂಚತಂತ್ರದಿಂದ ಐದು ಮಂತ್ರ ಊದಿ
ಕಂಕಣ ಕಟ್ಟತಾನ ಬಸವಯ್ಯನೊ ॥ ೮ ॥

ಸಾಮದೋಮ ಎಂಬ ಮಂತ್ರವ ಊದಿ
ಅಕ್ಕಿಕಾಳ ಹಾರಸತಾನ ಬಸವಯ್ಯನೊ
ಬಸವರಾಜನಂತ ದೇವರ್‍ಯಾರೊ ಇಲ್ಲ
ಏನ ಹೇಳಲೆಪ್ಪ ನನ್ನ ಬಸವಯ್ಯನೊ ॥ ೯ ॥

ನೀರಿನ ಮ್ಯಾಲ ಮೆರವಣಿಗಿ ತಗಿಸ್ಯಾನ
ಆಕಶಕ ಬಾರಿಸೆಂದ ಬಸವಯ್ಯನೊ
ನಡುವ ಸುಳ್ಯಾಗ ನೊಸಲಗಣ್ಣ ಇಟಗೊಂಡ
ಹಗಲದೀಪ ಹಚ್ಚ್ಯಾನ ಬಸವಯ್ಯನೊ ॥ ೧೦ ॥

ಸುಳ್ಳ ಅನಬ್ಯಾಡರೆಪ್ಪ ಸುಟಗೊಂಡ ಸತ್ತೀರಿ
ಬಬಲಾದಿ ತಳದಾಗ ನೋಡಂದೇನಿ
ಕಲ್ಲ ಕಾಗದಮ್ಯಾಲ ಬರದ ಇಟ್ಟೈತೊ
ಏನ ಹೇಳಲೆಪ್ಪ ನಾ ಬಸವಯ್ಯನೊ ॥ ೧೧ ॥

– ಬಸವಣ್ಣ ನಿನ್ನ ಹೆಸರು ....

***

ಧರೆಯ ಮೇಲೆ ನಿಂತು ಕರವ ಮುಗಿದು ನಾ

ಧರೆಯ ಮೇಲೆ ನಿಂತು ಕರವ ಮುಗಿದು ನಾ
ಮಾರಹರನನು ಸ್ಮರಿಸುವೆನು ನಾ
ಹೇ ಮಂಡಗಿ ಮಾದರಸು ಮಡದಿ ಗರ್ಭದಲ್ಲಿ
ಸೇರಿದನು ಬಸವೇಶ್ವರನು ವೃಷಭೇಶ್ವರನು ॥ ೧ ॥

ನವಮಾಸ ತುಂಬ್ಯಾವ ನಾರಿಮಾದಲಾಂಬಿಗೆ
ಹಡಿದಾಳು ಗಂಡುಮಗನನ್ನು ಪುಂಡಬಸವಣ್ಣನೊ
ಸಂಗಮೇಶ್ವರ ಬಂದು ಮಂಗಳಾತ್ಮಕ ಲಿಂಗ
ಅಂಗಕ್ಕ ಧರಿಸಿದ ದೀಕ್ಷೆಯನು ಶಿವಮಂತ್ರವನು ॥ ೨ ॥

ವಸುಧಿಯೊಳಗೆ ಬಸವ ಎಸಳಾಗಿ ಬೆಳೆಯಲೊ
ಸಾಲಿಗೆ ಹಾಕಿದ ಮಾದರಸೊ ಮೊದಲ ಕಲಿತಿದ್ದನೊ
ಹುಡುಗರೆಲ್ಲರು ಕೂಡಿ ಹಲಗಿ ಪೂಜ ಮಾಡಲೆಂದು
ಹಳ್ಳದೊಳ್ಗಲಿಗಿ ತೊಳದಾರೊ ಬೇಗ ಬಂದಾರೊ ॥ ೩ ॥

ಬೆನಕನೆಂಬುವ ಹುಡುಗ ಮಠದೊಳು ಮುಳುಗಲು
ಬಸವನ ದೂಡ್ಯಾನೆನ್ನುವರೋ ಸುಳ್ಳು ಹೇಳುವರೋ
ಬೆನಕನ ತಾಯಿ ತಂದಿ ಅತಗೋತ ಬಂದಾರೊ
ನಮ್ಮ ಹುಡುಗ್ಗ ದೂಡಿದ್ಯಾಕೋ ಬಸವ ಬೇಗನೆ ತಿಳಿಸೋ ॥ ೪ ॥

ನಾನೇನು ದೂಡಿಲ್ಲ ತಾನೇ ಕಾಲ ಜಾರಿ ಬಿದ್ದಾನಂದು
ಬೇಕಾದ್ರ ಕೇಳ್ನಡಿರೆಂದನೋ ಕರಕೊಂಡ್ಹೋದಾನೊ
ಬಸವ ಬೆನಕನನ್ನು ಕರೆಯಲು ಆವಾಗ ಬಂದು
ಹೇಳಿದನಾಗ ನಾನೇ ಬಿದ್ದಿದ್ದೆನೊ ಕಾಲು ಜಾರಿದ್ದೆನೊ ॥ ೫ ॥

ಮೃತಪಟ್ಟು ಹುಡುಗನ್ನ ಮಾತಾಡಿಸಿದನೆಂದು ಕೂಡಿದವರು
ಮಾಡ್ಯಾರೊ ಯುಕ್ತಿಯನೊ ಬಸವಗ ಗಾಳವನೊ
ಬಸವ ಬರುವ ಓಣಿಯಲ್ಲಿ ಹೆಣದ್ಹಂಗ ಕೂಡ್ರಿಸಿ
ಅದಕ ಮಾಡ್ಯಾರೊ ಸಿಂಗಾರವನು ಬಸವನ ಕರಿದಾರಿನ್ನು ॥ ೬ ॥

ಮಾತಾಡಿಸೊ ಬಸವ ಎನ್ನಲು ಆವಾಗ
ಸತ್ತವನು ಹೆಂಗ ಮಾತಾಡ್ಯಾನೊ ಎಂದು ನುಡಿದಾನೊ
ನಾವು ಮಾತಾಡಸ್ತೇವಿ ನೋಡೋ ಬಸವ ಎಂದು ಒದರಿದರ
ಮಾತಾಡಲೊಲ್ಲನೊ ಮಡಿದು ಹೋಗಿದ್ದನೊ ॥ ೭ ॥

ನಮ್ಮ ಅಪರಾಧವನ್ನು ಕಾಪಾಡು ಎನ್ನಲು
ಹಿಡಿದಾರೊ ಬಸವನ ಅಡಿಗಳನ ಪ್ರಾಣ ಪಡಿದಾರಿನ್ನ
ಧರೆಯೊಳು ಡಂಬಳಪುರದಲ್ಲಿ ಮರೆಯುವ
ಗುರುಸಿದ್ಧಲಿಂಗನ ಕರುಣದಲಿ ಅತಿಶೈಲದಲಿ ॥ ೮ ॥

– ಬಸವಣ್ಣ ನಿನ್ನ ಹೆಸರು....

***

ಮಾದಲಾಂಬಿ ಮಡದಿ ನೋಡು

ಮಾದಲಾಂಬಿ ಮಡದಿ ನೋಡು ನಾಮಸ್ಮರಣ ಮಾಡತಿದ್ದಳು
ಹೋರಿಮಠದ ಗುಡ್ಡದಲ್ಲಿ ನಿತ್ಯ ತಪಸಮಾಡುತಿದ್ದಳು ಬಸವೇಶ್ವರನು
ಸ್ವರ್ಗಲೋಕ ಬಿಟ್ಟಿದ್ದಾನೋ ಮರ್ತ್ಯಲೋಕಕ ಇಳಿದಿದ್ದಾನು
ಬಾಗೋಡಿ ತಳಕ ಬಂದಿದ್ದಾನೊ ಬಸವೇಶ್ವರನು ॥ ೧ ॥

ಬಾಗೋಡಿ ತಲಕ ಬಂದಿದ್ದಾನೊ ಜ್ವಾಳದ ಹೊಡಿಯೊಳು ಜನಿಸಿದ್ದಾನು
ಮಾದಲಾಂಬಿ ಮಗನಾದ ಬಸವೇಶ್ವರನು
ಏಳಂಕಣ ಪಡಸಾಲ್ಯಾಗ ಬಣ್ಣ ತೊಟ್ಟಿಲ ಕಟ್ಟಿ
ಅದರೊಳು ಆಡತ್ತಿದನೊ ಬಸವೇಶ್ವರನು ॥ ೨ ॥

ಮಾದಲಾಂಬೆ ಹಾಲು ಕುಡಿದು ಆತುಮದಲ್ಲಿ ಧರಿಸಲಾಕಿ
ಎರಡು ದವಡೆಯಲಿ ಹಿಡಿದಿದ್ದಾನೊ ಬಸವೇಶ್ವರನು
ಬೆರಳಲ್ಲಿಟ್ಟಾನೊ ಬಂಗಾರುಂಗರ ಕೊರಳಲ್ಲಿ ಹಾಕ್ಯಾನೊ ಹಸನಂಪೂರ
ಬುರಸಾನ ಕುಂಚಗಿ ಹೊತ್ತಿದಾನೊ ಬಸವೇಶ್ವರನು ॥ ೩ ॥

ಸಂತೋಷ ಮಾಡಲಾಕ ಮನಿ ಮನಿ ತಿರಗಿದರ
ಹಾಲುಮುಕ್ಕ ದೊರಿಯಲಿಲ್ಲ ಬಸವೇಶ್ವರನು
ಕೈಯಾಗ ಹಿಡಿದಾನೊ ಬಂಗಾರ ಹೂಜಿ ರಸ್ತೆಗುಂಟ ಹೋಗುವಾಗ
ಚೆನ್ನಪಟ್ಟಣಕ ಹೋಗಿದ್ದಾನೊ ಬಸವೇಶ್ವರನು ॥ ೪ ॥

ಚೆನ್ನಪಟ್ಟಣಕ ಹೋಗಿದ್ದಾನೊ ಹೊತಿಗಿ ಓದಿದ್ದಾನೊ
ಸತ್ತಾಕಳ ಬದಕಿಸಿದ್ದಾನೊ ಬಸವೇಶ್ವರನು
ಸತ್ತ ಆಕಳ ಎಬ್ಬಿಸಿಕೊಂಡು ನಾಲ್ಕುಮಲಿಯ ಹಾಲು ಹಿಂಡಿ
ಬಂಗಾರಹೂಜಿ ತುಂಬಿದ್ದಾನೊ ಬಸವೇಶ್ವರನು ॥ ೫ ॥

ಬಂಗಾರಹೂಜಿ ತುಂಬಿಕೊಂಡು ರಸ್ತೆ ಗುಂಟ ಬರುವಾಗ
ಊರ ಜನ ಕೇಳತಾರ ಬಸವೇಶ್ವರನು
ಸತ್ತ ಆಕಳ ಹಾಲವು ಸ್ವಾರ್ಥಕ ಬರುದಿಲ್ಲೆಂದಾರಿವರು
ಆಯಿ ಮುತ್ಯಾನ ತರತೇನೆಂದಾನೊ ಬಸವೇಶ್ವರನು ॥ ೬ ॥

ಆಯಿ ಮುತ್ಯಾ ತರತೇನೆಂದಾನು ಬಸವೇಶ್ವರ ನೋಡಲ್ಲಿ
ರುದ್ರ ಭೂಮಿಗಿ ಹೋಗಿದ್ದಾನೊ ಬಸವೇಶ್ವರನು
ರುದ್ರ ಭೂಮಿಗಿ ಹೋಗಿದ್ದಾನೊ ಬತ್ತೀಸಕಾಳ ಊದಿದ್ದಾನೊ
ಸತ್ತ ಮನುಷ್ಯರ ಎಬ್ಬಿಸಿದ್ದಾನೊ ಬಸವೇಶ್ವರನು ॥ ೭ ॥

ಸತ್ತ ಮನುಷ್ಯರ ಎಬ್ಬಿಸಿಕೊಂಡು ಮನಿತಾನಾ ಕರಕೊಂಡ ಬಂದು
ಮನಶಾಗೊಂದು ಒಡ್ಯಾಣ ಕೊಟ್ಟಾನ ಬಸವೇಶ್ವರನು
ಮನಶಾಗೊಂದು ಒಡ್ಯಾಣ ಕೊಟ್ಟು ಹೊಟ್ಟಿತುಂಬ ಅನ್ನಾ ಹಾಕಿ
ಕಾಗಿ ಮಾಡಿ ಹಾರಿಸಿ ಬಿಟ್ಟಾನ ಬಸವೇಶ್ವರನು ॥ ೮ ॥

– ಬಸವಣ್ಣ ನಿನ್ನ ಹೆಸರ......

***

ಹೆಂತವನೊ ನನ್ನ ಬಸವಣ್ಣ

ಹೆಂತವನೊ ನನ್ನ ಬಸವಣ್ಣ ಮತ್ತೇನ್ ಅವತಾರ ತಾಳೀದ್ಯೊ
ಹಂದರಕ ದುಂದಕರ ಅವತಾರ ತಾಳಿ ಆಲದ ಎಲಿಮ್ಯಾಗ ನಿಂತವನೊ ॥ ಪ ॥

ಆಲದ ಎಲಿಮ್ಯಾಗ ನಿತ್ಯ ನಿರಾಕಾರಾ ನಿರಮಳ ಮಾಡಿದ ಬಸವಣ್ಣ
ನಿರಮಳ ಮಾಡಿ ಮತಗಳ ಅಳಿದು ಮೆಟ್ಟಿ ಕಡಿದ ಬಸವಣ್ಣ
ಮೂರು ಲೋಕದಾಗ ಮಂಡಿಗೆ ಒಳಗ ಪಿಂಡನಾದ ಬಸವಣ್ಣ
ಹೆಂತವನೊ ನನ್ನ ಬಸವಣ್ಣ ಮತ್ತೇನ್ ಅವತಾರ ತಾಳೀದ್ಯೊ ॥ ೧ ॥

ಅವತಾರ ತಾಳಿದ ಬಸವಣ್ಣ ಬನ್ನಿ ಮಾಂಕಾಳಿಯಲ್ಲಿ ಇದ್ದವನೊ
ಬನ್ನಿ ಮಾಂಕಾಳಿಯಲ್ಲಿ ಇದ್ದ ಬಸವಣ್ಣ ಹೊನ್ನ ಪೂಜಿಗೊಂಡ ಬಸವಣ್ಣ
ಹೊನ್ನ ಪೂಜಿಗೊಂಡ ಬಸವಣ್ಣ ಶಿವಗದಿಗೆ ಉದಿಹಾಯಿದವನೊ
ಶಿವಗದಿಗಿ ಮೇಲಾ ಉದಿಹಾಯಿದ ಬಸವಣ್ಣ ಶಿವಪೂಜೆಗೊಂಡ ಬಸವಣ್ಣ ॥ ೨ ॥

ಹೆಂತವನೊ ನನ್ನ ಬಸವಣ್ಣ ಮತ್ತೇನ್ ಅವತಾರ ತಾಳೀದ್ಯೊ
ಮತ್ತೇನ್ ಅವತಾರ ತಾಳೀದ್ಯೊ ಬಸವಣ್ಣ ಹೊನ್ನಿಯ ಹುಳದಾಗ ಸುಳದಾಡಿದ್ಯೊ
ಹೊನ್ನ ಗದಗಿ ಮೇಲಾ ಮೂರ್ತಿಗೊಂಡು ಹೊನ್ನ ಪೂಜಿಗೊಂಡ ಬಸವಣ್ಣ
ಹೊನ್ನ ಪೂಜಿಗೊಂಡ ಬಸವಣ್ಣ ಬಿಲ್ವ ಪತ್ರಿ ಮುಡಿದವನೊ ॥ ೩ ॥

– ಬಸವಣ್ಣ ನಿನ್ನ ಹೆಸರ.......

***

೧೦. ಗೀಗೀ ಹಾಡುಗಳು

ಕನ್ನಡ ನಾಡಿನ ಹಿರಿಯಣ್ಣ ಬಸವಣ್ಣ

ಕನ್ನಡ ನಾಡಿನ ಹಿರಿಯಣ್ಣ ಬಸವಣ್ಣನವರು ಧನ್ಯ ಧನ್ಯ ಮಾಡಿದ ಕ್ರಾಂತಿ
ರನ್ನ ಗನ್ನಡಿಯಂತೆ ಎನ್ನುತ ಜೀವಕ ಸನ್ಮಾರ್ಗ ತೋರಿ ಬಿಡಿಸಿದ್ರಿ ಭ್ರಾಂತಿ ॥ ಪ ॥

ಪುಣ್ಯಭೂಮಿ ವಿಜಾಪುರ ಜಿಲ್ಲೆಯ ಇಂಗಳೇಶ್ವರ ಬಾಗೇವಾಡಿಯಲ್ಲಿ
ಮಾನ್ಯವಂತಿ ಮಾದಲಾಂಬಿಕೆ ಉದರದಲ್ಲಿ ಉದಯವಾದರು ಶುಭಮೂರ್ತದಲ್ಲಿ ॥
ಜನಿಸಿದಾಗ ಪ್ರಾಣವಿದ್ದಿಲ್ಲ ಕೂಸಿಗೆ ಅವರ ಜನಕ ಕುಳಿತಿದ್ದನು ಚಿಂತಿಯಲಿ
ಚಿನ್ಮಯ ಜಾತವೇದ ಮುನಿಗಳು ಬಂದರು ಓಂ ನಮಃ ಶಿವಾಯ ಅನ್ನುತಲಿ ॥
ಅನುತಾಪಗೊಂಡಂತ ಮಾದರಸನು ಹೋಗಿ ಮುದದಿಂದವರ ಚರಣಕೆರಗುತಲಿ
ಮುನಿವರ್ಯರೆ ಕೂಸಿಗಸುಯಿಲ್ಲ ವ್ಯಸನದಿಂದ ಉಸುರುತಲಿ ॥
ಅನುರಾಗದಿಂದ ತನಯನ ಹಣೆಗೆ ಧರಿಸಿರೆಂದು ಭಸ್ಮ ಕೊಟ್ಟಾರಾಕ್ಷಣವಲಿ
ಅನಿಮಿಷದಲಿ ನೋಡಿದರು ಬಾಲಕ ಕಣ್ತೆರದಾಡುತಲಿ ॥
ಅನುಭಾವಿ ಆಗುವನು ಬಸವರಾಜನೆಂದು ಹೆಸರಿಟ್ಟು ಕರೆಯಿರಿ ಪ್ರೀತಿಯಿಂದಲಿ
ಅನಿವಾರ್ಯ ಆತನ್ನ ನಮ್ಮ ಆಶ್ರಮಕ್ಕೆ ಕಳಿಸಿರಿ ಎಂಟು ವರ್ಷದವನಾಗುತಲಿ ॥

॥ ಚಾಲ ॥
ಇನಿತೇಳಿ ಮುನಿಗಳು ಅಲ್ಲಿಂದ ಮಾಯವಾಗಿ ಹೋದರು
ಜನರಿಗಾನಂದ ಜೋಗುಳ ಹಾಡ್ಯಾರ ಮುತ್ತೈದಿಯರು ಬಂದ

ಬಸವರಾಜ ಬಸವರಾಜದೇವ ಹಸನ್ಮುಖ ಬಸವ ಹೀಂಗ ಅಂದಂದ
ನಾಮಕರಣವಾಯಿತು ನಾಗಮ್ಮನಿಂದ

ಮುಂದ ಎಂಟನೆಯ ವರ್ಷ ಆದಿಂದ ಉಪನಯನ ಮಾಡಬೇಕಂದ
ಮಾದರಸನು ನಡಸಿದ್ದ ಬಸವಣ್ಣನವರಿಗೆ ಕಾಣಲಿಲ್ಲದು ಚಂದ

॥ ಏರು ॥
ಸನ್ನಿವೇಶಕ್ಕೆ ತಕ್ಕ ಸಿದ್ದರಾಗಿ ಸನ್ಯಾಸಿ ಬಳಿಕ ಹೋದ್ರು ನಿಶ್ಚಿಂತ
ಕನ್ನಡ ನಾಡಿನ ಹಿರಿಯಣ್ಣ ಬಸವಣ್ಣನವರು ಧನ್ಯ ಧನ್ಯ ಮಾಡಿದ ಕ್ರಾಂತಿ ॥ಪ೦೧॥

ಆಶ್ರಮ ಮುನೀಶ್ವರರ ವಿಶ್ವಾಸಕ್ಕೆ ಪಾತ್ರರಾಗಿ ಆಧ್ಯಾತ್ಮ ಜೀವನ ನಡದಿತವಾಗಿ
ವಿಶ್ರಮವಿಲ್ಲದೆ ಶಾಸ್ತ್ರ ಸಂಶೋಧನ ಅಭ್ಯಾಸ ಮಾಡಿ ನಿಶ್ಚಯಕ ಬಂದ ಆತ್ಮಸ್ಥೈರ್ಯರಾಗಿ
ದಿಟ್ಟ ನಿಷ್ಠೆ ನೋಡಿ ಶ್ರೇಷ್ಠ ಬಲದೇವ ಮಂತ್ರಿ ಮಗಳು ಕೊಟ್ಟರು ಬೆರಗಾಗಿ
ಪಟ್ಟಣ ಸಿಂಗರಿಸಿ ಅಷ್ಟೈಶ್ವರ್ಯದಿಂದ ಲಗ್ನಾತ ಗಂಗಾಂಬಿಕೆ ಬಸವರಾಜರಿಗಿ
ಗಂಡುಮಕ್ಕಳಿಲ್ಲ ಹಿಂದು ಮುಂದಿಲ್ಲ ಮನಿಯೊಳಿರಲೆಂದು ಮಂತ್ರಿ ಅಳಿಯ
ಅವರಿಗಿ
ಪಂಡಿತ ಬಸವಣ್ಣನವರು ಖಂಡಿತ ಹೇಳಿದರಾಗ ಬೇರೆ ಇರತೇನಂತ
ಮಾವಂದಿರಿಗಿ
ಪುಟ್ಟ ಸಂಸಾರ ಉತ್ಕೃಷ್ಟ ಚೊಕ್ಕಮನಿ ಪಟ್ಟದ ಸ್ತ್ರೀಯಳ ಕಟ್ಟಿಕೊಂಡ ತ್ಯಾಗಿ
ಹೊಟ್ಟೆಯ ಪಾಡಿಗಾಗಿ ತಟ್ಟನೆ ಕಾಯಕ ದರಬಾರದೊಳಗೆ ಕರಣಿಕನಾಗಿ
ಸಜ್ಜನ ಮುಖ್ಯಮಂತ್ರಿ ದುರ್ಜನನಾದ ಅರ್ಥಮಂತ್ರಿ ಮಂಚಣ್ಣನೆದರಿದ್ರ ಎದುರಿಗಿ

॥ ಚಾಲ ॥
ರಾಜ್ಯದ ಆರ್ಥಿಕ ಸ್ಥಿತಿ ಕೆಟ್ಟಿತ್ತು ಚರ್ಚೆ ನಡೆದಿತ್ತು
ಖಜಾನಿ ಬರಿದಾಗಿ ಲೆಕ್ಕಪತ್ರ ಇದ್ದಿಲ್ಲ ಸರಿಯಾಗಿ

ಆಸ್ಥಾನದಲ್ಲಿ ಬಿತ್ತ ಒಂದು ಓಲೆ,
ಇತ್ತ ತಾಡವಾಲೆ ಕೊಟ್ಟರು ದೊರಿಗಳಿಗೆ ಅಕ್ಷರ ತಿಳಿಲಿಲ್ಲ ಯಾರ್‍ಯಾರಿಗೆ

ಸರ್ವರ ಸರತಿ ಮುಗಿದ ಮೇಲೆ ಬಸವಣ್ಣನವರ ಬದಿಗಿ ಬಂದಿತ ಲಿಪಿ ತಿರಗಿ
ತೆಗೆದುಕೊಂಡಾರವರು ಕೈಯಾಗಿ

॥ ಏರು ॥
ಚೆನ್ನಾಗಿ ಓದಿಕೊಂಡು ಪೂರ್ಣ ತಿಳಕೊಂಡು ಬಿಜ್ಜಳರಸಗ ತಿಳಿಸ್ಯಾರ ಮಾಹಿತಿ
ಕನ್ನಡ ನಾಡಿನ ಹಿರಿಯಣ್ಣ ಬಸವಣ್ಣನವರು ಧನ್ಯ ಧನ್ಯ ಮಾಡಿದ ಕ್ರಾಂತಿ।

॥ ಚೌಕ೨ ॥

ಸದರಿನ ಬುಡದಲ್ಲಿ ನಿಧಿ ಇದ್ದದ್ದು ಕೇಳಿ ಅಗಸಿದಾಗ ದೊರೆ ಆಕ್ಷಣಕ
ಅದರಲ್ಲೆಲ್ಲ ವಜ್ರ ವೈಡೂರ್ಯ ಹೊನ್ನು ಮುತ್ತು ರತ್ನ ಮಾಣಿಕ
ಬಾಗಿ ನೋಡಿ ಅಪಾರ ಸಂತೋಷವಾಗಿ ಬಸವರಾಜರಿಗೆ ಒಯ್ಯಂದ ಚೊಕ್ಕ
ಕಪ್ಪಡಿ ಸಂಗಮನಾಥನ ಕೃಪೆಯಿಂದ ಕೊರತೆ ಇಲ್ಲಂದ
ಕೆಲವು ಕಾಲದ ಮೇಲೆ ಕಾಯಿಲೆಯಾಗಿ ಬಲದೇವಮಂತ್ರಿ ನೆಲ ಹಿಡಿಯುವದಕ
ಹಲವು ಪರಿಯಿಂದ ಉಪಚಾರ ಮಾಡಿದರು ಉಪಯೋಗವಾಗದೆ ಹೋದ ಸ್ವರ್ಗಕ್ಕ
ತರುಣಿ ಗಂಗಾಂಬಿಕೆ ನಾಗಲಾಂಬಿಕೆಯರು ಪರಿ ಪರಿಯಿಂದ ಮಾಡ್ಯಾರ ಶೋಕ
ಪರಮ ಪುರುಷ ಹರಭಕ್ತ ಬಸವಣ್ಣನವರು ವೈರಾಗ್ಯ ಹೇಳಿ ಬಿಡಿಸ್ಯಾರ ದುಃಖ
ಧರಿಣಿಪ ಮರಮರಗಿ ಸರಳ ವ್ಯಕ್ತಿ ಹೋಯ್ತು ಮಂತ್ರಿ ಪದ ಇನ್ಯಾರ್‍ಯಾರಿಗೆ ಕೊಡಬೇಕ
ದರಬಾರ ಹಿರಿಯರ ಕರಸಿ ವಿಚಾರ ಮಾಡಲಾಗಿ ಬಸವಣ್ಣನವರದು ಬಂತ ಬಹುಮತಕ

॥ ಚಾಲ ॥
ಮಂಚಣ್ಣಗಿಲ್ಲ ಸಮಾಧಾನ ಹಾಕತಿದ್ದ ಗೋಣ ಮನದಾಗ ಕಸವಿಸಿ
ತಾನೇ ಆಗಬೇಕೆನ್ನುವ ದುರಾಸಿ

ಬಿಜ್ಜಳರಾಯ ಬಸವಣ್ಣನವರನ್ನು ಆದರದಿಂದ ಕರಿಸ್ಯಾನ ಮೇಲೆ ಕುಳ್ಳರಿಸಿ
ದಿವಾಣಖಾನಿಯೊಳಗಿಂದ ವಿವರಿಸಿ

ಖಜಾನಿಯೊಳಗಿನ ಹಣ ಲೆಕ್ಕ ಪತ್ರ ಪೂರ್ಣ ಅವರಿಗೊಪ್ಪಿಸಿ
ಎಲ್ಲಾ ಹೊಣೆ ಹೊರಸಿ ನಮಸ್ಕರಿಸಿ

॥ ಏರು ॥
ಚಿನ್ನ ಹರಿವಾಣದಲ್ಲಿ ಉಡುಗೊರೆ ರಾಯಸ ಖಡ್ಗ ಪ್ರಧಾನಿಗೆ ಕರೆದುಕೊಟ್ಟ ಪ್ರಜಾಪತಿ
ಕನ್ನಡನಾಡಿನ ಹಿರಿಯಣ್ಣ ಬಸವಣ್ಣನವರು ಧನ್ಯ ಧನ್ಯ ಮಾಡಿದ ಕ್ರಾಂತಿ ॥ ಚೌಕಿ ॥

ಕಲ್ಯಾಣ ಪಟ್ಟಣಕ ಬಲ್ಲಿದ ಮಂತ್ರಿಯೆಂದು ಅಲ್ಲಲ್ಲೆ ಜನ ಮಾತಾಡಿದರು
ಎಲ್ಲರ ಪ್ರೀತಿಗೆ ಪಾತ್ರರಾದ ಬಸವೇಶ್ವರರು ಉಲ್ಲಾಸದಿ ಅಧಿಕಾರ ವಹಿಸಿದರು
ಆಧ್ಯಾತ್ಮ ರಾಜಕಾರಣ ವೃದ್ಧಿಯಾಗಲೆಂದು ಬುದ್ಧಿಯಿಂದ ಪ್ರಜಾರಾಜ್ಯ ನಡೆಸಿದರು
ಶುದ್ಧ ಹೃದಯದಿಂದ ದಾಸೋಗ ನಡೆಸುತ ದಾಸೋಹ ಭಾವದಿಂದ ಸಾಗಿದರು
ದಶ ದಿಕ್ಕಿನೊಳಗೆಲ್ಲ ಪಸರಿಸಿತು ಸುದ್ದಿ ಅಶನಕಾಗಿ ಜನ ಬರುತ್ತಿದ್ದರು
ವಿಶಾಲ ಹೃದಯದ ವಿಶಾರದ ಜಂಗಮರು ವಿಷಯ ಲಂಪಟರು ಕೂಡಿದರು
ಮಹಿಮೆಯ ಕೇಳಿ ಮಹಾ ಮಹಾ ಶರಣರು ಮಹತ್ವ ಅರಿಯಲಿಕ್ಕೆ ಸೇರಿದರು
ಗ್ರಹಸ್ಥಾಶ್ರಮಿಗಳು ಗುಹೆಯಲ್ಲಿರುವವರು ಸಹಸ್ರಾರು ಜನ ಬಂದಿದ್ದರು
ಸೋದರಳಿಯ ಷಟ್‌ಸ್ಥಲ ಚಕ್ರವರ್ತಿಯು ಆತ್ಮಜ್ಞಾನಿಯು ಚನ್ನಬಸವಣ್ಣರು
ಸಾಧನೆಯಿಂದ ಸಮಾಜ ಸುಧಾರಣೆಯ ಬೋಧಿಪ ಚಿಕ್ಕದಣ್ಣಾಯಕರು

॥ ಚಾಲ ॥
ಸುತ್ತಲು ಹಬ್ಬಿತು ವಾರ್ತೆ ಬಸವಣ್ಣನವರ ಕೀರ್ತಿ
ದೇಶ ದೇಶಾಂತರ ಕೇಳಿ ಬಂದರು ಪ್ರಭುದೇವರು
ಅವರು ಹೋದಲ್ಲೆ ಹೆಜ್ಜೆ ಗುರ್ತಿಲ್ಲ ನಿಂತಲ್ಲೆ ನೆರಳಿಲ್ಲ
ಮಾಯೆಯ ಗೆದ್ದವರು ನಿರಾಕಾರ ಮಹಿಮಾ ಪುರುಷರು
ಸಿದ್ಧರಾಮಶಿವಯೋಗಿ ಜೊತೆಗೂಡಿ ಬರುವದನ್ನು ನೋಡಿ
ಗಾಬರ್ಯಾದರು ಭಕ್ತಿ ಭಾಂಡಾರಿ ಬಸವಣ್ಣವನರು

॥ ಏರು ॥
ತನ್ನ ಗುರುವರ್ಯರೆಂದು ತನ್ಮಯರಾಗಿ ಚರಣಕ್ಕೆ ಮಾಡ್ಯಾರ ಶರಣಾರ್ಥಿ
ಕನ್ನಡ ನಾಡಿನ ಹಿರಿಯಣ್ಣ ಬಸವಣ್ಣನವರು ಧನ್ಯ ಧನ್ಯ ಮಾಡಿದ ಕ್ರಾಂತಿ।
॥ ಚೌಕಳ ॥

ಉತ್ಸಾಹದಿಂದ ಊಟೋಪಚಾರಕ್ಕಾಗಿ ಸಕಲ ಸಿದ್ಧತೆಗಳ ಮಾಡಿಸುತ
ಭಕ್ತಿ ಭಾವದಿಂದ ನಮ್ರಪೂರ್ವಕವಾಗಿ ಗುರುಗಳ ಚರಣಕ್ಕೆ ಶಿರಬಾಗುತ್ತ
ಕೃತಾರ್ಥನಾದೆನು ಯತಿವರ್ಯರೆ ನಿಮ್ಮ ಯಥೇಷ್ಟ ಭೋಜನವಾಗಲಿ ತ್ವರಿತ
ಒಂದು ಒಕ್ಷ ತೊಂಭತ್ತಾರು ಸಾವಿರ ಜಂಗಮರಿಗೆ ಮಾಡಿದಡಿಗಿ ಜಿಡಲಿಲ್ಲ ತುತ್ತ
ಗಾಭರ್‍ಯಾಗಿ ಬಸವದೇವರಂತಾರ ನನ್ನ ಶರೀರ ತಕ್ಕೊಂಡು ಆಗಿರಿ ತೃಪ್ತ
ಪ್ರಭುದೇವರು ಬಂದ ಬಿಗಿದಪ್ಪಿಕೊಂಡವ್ರ ಭಕ್ತಿಗೆ ಮೆಚ್ಚಿ ಆದೆನು ಬ್ರಾಂತ
ಸಕಲ ಮಹೇಶ್ವರರು ತೃಪ್ತಿಯಾದರು ಇನ್ನು ಮುಂದಿನ ಕೆಲಸ ಸಾಗಲಿ ಶಿಸ್ತ

॥ ಚಾಲ ॥
ಅದ್ವಯ ಅಲ್ಲಮಪ್ರಭುಗಳು ಅಧ್ಯಾಪಕತ್ವದೊಳು ಸ್ಥಾನ ಸ್ವೀಕರಿಸಿ
ಶಿವಶರಣರನೆಲ್ಲ ಅಣಿಗೊಳಿಸಿ
ಅವರವರಿಗಾದ ಅನುಭವ ವಚನ ರಚಿಸಿಕೊಂಡು ಪೂರ್ಣ
ಒಂದು ವಿವರಿಸಿ ಅದರಂತೆ ಎಲ್ಲಾರು ಆಚರಿಸಿ
ಮಂತ್ರಿ ಬಸವಣ್ಣನವರ ನೇತೃತ್ವದೊಳಗ ಸಾಗತಿತ್ತ ಹೀಗ
ಕಾಲಕ್ಕನುಸರಿಸಿ ವೀರಶೈವ ಸಿದ್ಧಾಂತ ಶೃಂಗರಿಸಿ

॥ ಏರು ॥
ಅನ್ಯರಾಜ್ಯದಿಂದ ಅನೇಕ ಜನರು ಬಂದು ಜ್ಞಾನಮಾರ್ಗ ತಿಳಿದುಕೊಂಡ್ರು ನಿಜಸ್ಥಿತಿ
ಕನ್ನಡನಾಡಿನ ಹಿರಿಯಣ್ಣ ಬಸವಣ್ಣನವರು ಧನ್ಯ ಧನ್ಯ ಮಾಡಿದ ಕ್ರಾಂತಿ
॥ ಚೌಕಶಿ ॥

ಜಾತ್ಯಾತೀತ ನೀತಿವಂತ ಬಸವಣ್ಣನವರು ಮಾತಿನಂತೆ ಇದ್ರು ಕೃತಿಯೊಳಗ
ಪಾತಕ ಜನರು ಹೊಕ್ಕು ಘಾತ ಮಾಡತಿದ್ರು ಬೇತಾಳದಂತೆ ಒಳಗಿಂದೊಳಗ
ಮಧುರ ವಚನ ಹೇಳಿ ಅವರ್ನ ಹಾದಿಗೆ ತರತಿದ್ರು ಯಾರ್‍ಯಾರದು ಮನ
ನೋಯಿಸದ್ಹಂಗ
ಸದಾ ಸಂಗಮನಾಥನ ವಾದದಲ್ಲಿ ಧ್ಯಾನ ಗುರುಲಿಂಗ ಜಂಗಮ ಸೇವೆಯೊಳಗ
ವಿಶ್ವಧರ್ಮ ವಿಶ್ವಸ್ಥ ಅಹಿಂಸಾಮೂರ್ತಿ ವಿಶ್ವಾತ್ಮರ ಕೆಲಸ ಅಮೋಘ
ನಿಶ್ಚಿತ ದೇಶಾಭಿಮಾನ ದಶಬಲ ಇದ್ದಲ್ಲೆ ನಿಶ್ಚಿಂತಿಯಿಂದ ಸಾಗಿಸಿದ್ರೊ ಯೋಗ
ಏಳ್ನೂರ ಎಪ್ಪತ್ತು ಅಮರ ಗಣಾದೀಶ್ವರರು ಎಲ್ಲಾ ಜಾತಿಯರು ಕಲೆತಿದ್ದರಾಗ
ವೀರಶೈವ ಧರ್ಮಸ್ಥಾಪಕರು ಸೇವಕರು, ಪೋಷಕರು, ಮಾರ್ಗದರ್ಶಕ ನಾಲ್ಕು
ಭಾಗ ಬೇರೆ ಬೇರೆ ಕಾಯಕ ಅವರವರ ಯೋಗ್ಯತೆಯಂತೆ ಹಂಚಿ ಕೊಟ್ಟಿದ್ರು
ಬಸವಣ್ಣವರು ಬೇಗ

॥ ಚಾಲ ॥
ಶೂದ್ರರ್ಹಿಡದ ಬ್ರಾಹ್ಮಣರ ತನಕ ಬೇಧವಿಲ್ಲ ಯಾವದರಲ್ಲಿ ಆಹಾರ ವ್ಯವಹಾರಕ
ಶರೀರ ಸಂಬಂಧಮ್ದು ಎಳದಿತ್ತು ನೆಲಕ

ಮದುರಸ ಬ್ರಾಹ್ಮಣನ ಮಗಳನ್ನು ಹರಳಯ್ಯ ಮಚ್ಚಿಗನ ಮಗನಿಗೆ ಕೊಟ್ಟು ಚೊಕ್ಕ
ಲಗ್ನವಾಗಿ ಹೋಯ್ತು ಖಡಕ
ಶಿವಕುಲ ಭವಿಕುಲ ಎರಡು ಬಾಕಿದೆಲ್ಲ ಗೊತ್ತು, ಠರಾವ ಹೀಂಗ ನಿರಕ
ಅನುಭವ ಮಂಟಪ ಸ್ಥಲಕ

॥ ಏರು ॥
ಶೂನ್ಯ ಸಿಂಹಾಸನದಲ್ಲಿ ಕಾನೂನು ಬದ್ಧವಾಗಿ ಕರ್ಮಾಚರಣೆಗೆ ಬಂದಿತು ಕ್ರಾಂತಿ
ಕನ್ನಡನಾಡಿನ ಹಿರಿಯಣ್ಣ ಬಸವಣ್ಣನವರು ಧನ್ಯ ಧನ್ಯ ಮಾಡಿದ ಕ್ರಾಂತಿ ।
॥ ಚೌಕ೬ ॥

ಮಚ್ಚಿಗೆ ಬ್ರಾಹ್ಮಣರಿಗೆ ಮದುವಿಯಾದದ್ದು ದರಬಾರಕ್ಕೆ ಹೋಯಿತು ಸುದ್ದಿ
ಆಶ್ಚರ್ಯಚಕಿತನಾಗಿ ಬಿಜ್ಜಳರಾಯನು ಬಸವೇಶ್ವರರನ್ನು ಕರಿಸ್ಯಾನ ಜಲ್ದಿ
ಅಧಿಕಾರ ಸಿಕ್ಕತಿ ಅಂತ ಊರು ಹೊಲಗೇರಿ ಒಂದ ಮಾಡುದು ತಗದಿರಿ ಹಾದಿ
ಸುಧಾರಣೆ ಮಾಡತೀವಂತ ಸಮಾಜದೊಳಗ ಅಶಾಂತಿ ತಂದು ಕಳದ್ರಿ ಮರ್ಯಾದಿ
ಬಸವರಾಜರಂತಾರ ವೀರಶೈವರಾದ ಮೇಲ್ ಪೂರ್ತಿ ಇರತಾರ ತ್ರಿಕರಣ ಶುದ್ಧಿ
ವಿಶಾಲ ತತ್ವದವರು ಜಾತ್ಯಾತೀತರು ಮುಟ್ಟ ಮೈಲಿಗಿಯಿಲ್ಲದ ಮಂದಿ
ಭಾರಿ ಸಿಟ್ಟಿಗೆದ್ದ ದೊರಿ ಚಿರಿದಲಂತಾನ ಯಾರ ಮುಂದ ಹೇಳುವಿರಿ ತತ್ವ ತಿದ್ದಿ
ತರಿಸಿ ಅವರನ್ನ ಶೂಲಕೇರಸ್ತೇನಿ ಆಮೇಲಿ ಬರತದ ನಿಮಗ ಬುದ್ಧಿ
ಒದಗಿಬಂತ ಕಾಲ ರಾಜ್ಯ ಹಾಳಾಗುವದು ಕಾಯ್ದುಕೊಂಡು ಕೂತಿತ್ತ ವಿಧಿ
ಮದುವರಸ ಹರಳಯ್ಯ ಮೊದಲಾದವರಿಗೆ ಮರಣದಂಡನೆ ಆಯ್ತು ಆ ಕ್ಷಣದಿ

॥ ಚಾಲ ॥
ಶಿವಶರಣರ ವಧೆಯಾದಮೇಲೆ ಇರುವದ್ಯಾಕ ಇಲ್ಲಿ ಅಂತ ಎಲ್ಲಾರು
ಪ್ರಭುದೇವರು ಶ್ರೀಶೈಲಕ್ಹೋದರು
ಬಸವರಾಜ ಮಂತ್ರಿ ಪದವಿ ಬಿಟ್ಟು ಹೊರಟು ಹೋದರು
ಕೂಡಲಸಂಗಮನಾಥನ ಕೂಡಿದರು
ಚನ್ನಬಸವಣ್ಣವರು ಕೆಲವು ದಿವಸ ಇದ್ದ ನೋಡಬೇಕೆಂದ್ರು ಮುಂದಿನ ಹುನ್ನಾರ
ಅವರ ಕೂಡ ಉಳಿದ್ವಾರು ಶಿವಶರಣರು

॥ ಏರು ॥
ಅನ್ಯಾಯ ಅನೀತಿ ಅಧರ್ಮ ನಡೆದ ಮೇಲ್ ಇನ್ನಾರು ಕನ್ನಡ ರಾಜ್ಯಕ ಗತಿ
ಕನ್ನಡನಾಡಿನ ಹಿರಿಯಣ್ಣ ಬಸವಣ್ಣನವರು ಧನ್ಯ ಧನ್ಯ ಮಾಡಿದ ಕ್ರಾಂತಿ ॥ಚೌಕ೭ ॥

ಜಗದೇವನೆಂಬೊಬ್ಬ ಹಿಗಿಲಾದ ಶರಣನು ಪ್ರತಿಜ್ಞೆ ಮಾಡಿದ ಬಿಜ್ಜಳನ್ಹೊಡಿಯಕ
ಜಗಜಗಿಸುವ ಖಡ್ಗ ಬಗಲಿಗೆ ಹಾಕಿಕೊಂಡು ಹಗಲಿರುಳು ತಿರುಗುವ ಸಮಯಕ
ಊಟಕ ಹೋದಾಗ ಆತನ ತಾಯಿ ಕೇಳಿದಳು ಶಿವದ್ರೋಹಿನ್ನ ಬಿಟ್ಯಾಕೋ

ಇಲ್ಲೀತನಕ
ಥೇಟ ನಾಯಿ ನೀನು ಊಟ ಯಾತಕಂತ ರೊಟ್ಟಿ ಪಲ್ಯ ಚಲ್ಲ್ಯಾಳ ನೆಲಕ
ಕೈಯಲ್ಲಿ ಹಿಡಿಯದಲೆ ನಾಯಿಯಂತೆ ಅದ್ನ ಬಾಯಿಲೆ ತಿಂದಾನ ಪಕ ಪಕ
ಅಯ್ಯ ಮಲ್ಲಿ ಬೊಮ್ಮರಸ ಜಗದೇವ ಕೂಡಿ ನಿಲ್ಲದೆ ಹೋದರು ದರಬಾರಕ
ದೊರಿ ಬಿಜ್ಜಳನ ಶಿರಕೊರದ ಒಗೆದರು ಹೊನ್ನಮ್ಮನ ಚಾವಡಿಯ ಸನಿಹಕ
ಬರಾಬರಿ ಜಗದೇವ ತಮ್ಮ ಮನಿಗೆ ಬಂದ ತನ್ನ ಕೊರಳ ಕೊಯ್ಸಿಕೊಂಡು
ಬಿದ್ದಾನು ನೆಲಕ
ಉಳಿದ ಶಿವಶರಣರೆಲ್ಲ ಉಳವಿ ಕಡೆಗೆ ಹೋದ್ರು ಚನ್ನಬಸವಣ್ಣವರ ಕೂಡ ತಕ್ಷಣಕ
ಹಾಳ ಆಗಿ ಹೋಯ್ತೀ ಕಲ್ಯಾಣ ಪಟ್ಟಣ ಚಾಡಿಖೋರರ ದವಡಿಗೆ ಸಿಕ್ಕ
॥ ಚಾಲ ॥
ಬಸವಣ್ಣನವರು ಬರೆಸಿ ಬರೆದ ವಚನ
ಜಗತ್ತಳಿಯುತನ ಜನಕೆ ದಾರಿ ದೀಪ
ಓದಿ ನಡದವರಿಗ್ಹೋಗತದ ಪಾಪ
ಅವರು ಪವಾಡ ಮಾಡಿದ ವರ್ಣನ ಹೇಳಿದ್ರ ಸರಿದೂಕ ಹಾಕಿದಂತೆ ಧೂಪ
ಸ್ಥಳ ಸಾಲದಕ ಬಿಟ್ಟೇನರಪ್ಪ
ಭಕ್ತಿ ಭಂಡಾರಿಯವರ ಪುರಾಣ ತತ್ವದರ್ಶನ
ಆತ್ಮಕೆ ಇಂಥದ ತಿಳಕೊಂಡವರಿಗಾಗುದು ದೇವಕೃಪ

॥ ಏರು ॥
ಸಣ್ಣ ಹುಲಕುಂದ ಊರ ಬಣ್ಣಿಪ ಭೀಮ ಕಟ್ಟಿ ಪದಮಾಡಿ ಪಡಕೊಂಡ
ಮನಶಾಂತಿ
ಕನ್ನಡ ನಾಡಿನ ಹಿರಿಯಣ್ಣ ಬಸವಣ್ಣನವರು ಧನ್ಯ ಧನ್ಯ ಮಾಡಿದ ಕ್ರಾಂತಿ ॥

ಕೃತಿ–ಬಸವಣ್ಣ ನಿನ್ನ ಹೆಸರು.....

***

ಧನ್ಯ ಧನ್ಯ ಬಸವಣ್ಣ ಭಕ್ತಾಧೀನ

ಧನ್ಯ ಧನ್ಯ ಬಸವಣ್ಣ ಭಕ್ತಾಧೀನ
ನನ್ನ ಹೃದಯ ನಿನಗೆ ಅರ್ಪಣ
ಕಾಯೋ ದೇವ ನಿನ್ನ ಕಂದನ ಗೀ ಗೀ

ವಿಜಾಪುರ ಜಿಲ್ಲೆಯ ಬಾಗೇವಾಡಿಯಲ್ಲಿ ಜನನ
ಬಿಜ್ಜಳನ ರಾಜ್ಯದೊಳು ಖ್ಯಾತಿ ಹೊಂದಿದಂತೆ ಶರಣ
ಪ್ರಜ್ಞೆರಿಗೆ ಜ್ಞಾನವನು ತಿಳಿಸಿ ಹೇಳಿದಂತ ಜಾಣ

ಕಲ್ಯಾಣ ರಾಜ್ಯದೊಳು ಮಂತ್ರಿ ಪದವಿಯಲಿ ಕೆಲಸ ಮಾಡಿದಂತ ನಿಪುಣ
ಸರ್ವಜ್ಞಮೂರ್ತಿಯು ನೀನ ಗೀ ಗೀ ॥ ೧ ॥

ಶೃಂಗಾರ ಬಸವಣ್ಣ ಚಂದಿರ
ಬಸವಣ್ಣ ಹೃದಯಪುಷ್ಪ ಹಂದರ
ಗುರುವಾಣಿ ಬಹಳ ಸುಂದರ ಗೀ ಗೀ

ಸಂಗಮನಾಥನನ್ನು ನಿತ್ಯ ಭಜಿಸುವಂಥ ವ್ಯಕ್ತಿ
ಜಂಗಮರ ಸೇವೆಯಲಿ ನಿಷ್ಠೆ ತೋರಿದಂಥ ಭಕ್ತಿ
ಲಿಂಗದ ಮರ್ಮವನು ಗಟ್ಟಿ ನಂಬಿದಂತ ಶಕ್ತಿ
ಜಗಜ್ಯೋತಿ ಬಸವಣ್ಣ ನಿತ್ಯ ಸಂಪೂರ್ಣ ಶರಣ ಹೇಳಿದಂಥ ಯುಕ್ತಿ
ಇದರಿಂದ ಸಿಗುವುದು ಮುಕ್ತಿ ಗೀ ಗೀ ॥ ೨ ॥

ವೈರಾಗ್ಯ ಬಸವಣ್ಣ ಭಕ್ತಿ ಸಂಪೂರ್ಣ
ಶಿವನಿಗಾದೆ ವಾಹನ
ನಿತ್ಯ ಹೃದಯ ಸ್ಮರಿಸುವೆನು ನಾ ನಿನ್ನ ಗೀ ಗೀ

ಅನುಭವ ಮಂಟಪ ರಚನೆ ಮಾಡಿದಂಥ ಖ್ಯಾತಿ
ಕನ್ನಡ ನಾಡಿನಲಿ ಹುಟ್ಟಿ ಬೆಳದಂಥ ಜ್ಯೋತಿ
ಭಂಡಾರಿ ಬಸವಣ್ಣ ಕಲ್ಯಾಣಿ ಬಸವಣ್ಣ ಅಣ್ಣ ಹೇಳಿದಂಥ ಸ್ಫೂರ್ತಿ
ತಿಳಿದರ ಆಗುವುದು ಶಾಂತಿ ಗೀ ಗೀ ॥ ೩ ॥

ಬಿಜ್ಜಳದೊರೆಗೆ ಕೀರ್ತಿಯನ್ನು
ತಾ ಗಳಸಿ ಕೊಟ್ಟ ಭಗವಾನ
ಶಿವಭಕ್ತರಲ್ಲಿ ಶಿವಶರಣ ಗೀ ಗೀ

ಹರ ಹರನ ಕೈಯಿಂದ ಕೊರಳಿಗೆ ಲಿಂಗಧಾರಣ
ಧರೆಯೊಳು ನಂದಿಅವತಾರವಾದೀತಾ ದಿನಾ
ಶರಣರಿಗೆ ಒಲಿದು ಬಂದು ನಿಂತ ತಾ ಭಗವಾನ
ಧರೆಯೊಳು ರಾಜಕಾರಣ ಗಂಗಾಂಬೆಯ ರಮಣ
ವಸುಧಿಯೊಳು ಆದಿ ನೀನು ವಾಯಿನ ಈ ಯುಗದ ಶಿವನೇ ಬಸವಣ್ಣ ಗೀ ಗೀ ॥ ೪ ॥

ಧಾತ್ರಿಯೊಳು ಕೀರ್ತಿಯನ್ನು ಮರಸಿ
ಶಿವಲಿಂಗದಲ್ಲಿ ಆದಿ ಐಕ್ಯ
ಕರುಣಿಸಯ್ಯ ಎನಗೆ ನೀ ಸೌಖ್ಯ ಗೀ ಗೀ

ವಿಶ್ವದಲ್ಲಿ ನೀನು ಬೋಧಿಸಿದಿ ಜ್ಞಾನದ ಬೆಳಕ
ಶಿವತತ್ವವನು ಸಾರಲು ಬಂದೆ ಈ ಲೋಕಕ
ಕುವರ ವಿಕ್ರಮನ ತಂದೆಯವರು ಬರದಾರೀ ಜುಳಕ
ಮುಕ್ಕಾಂ ಪೋಸ್ಟ ತಲ್ಲೂರ ಜಿಲ್ಲಾ ಬೆಳಗಾಂವ ಸವದತ್ತಿ ತಾಲೂಕ
ಪತ್ರ ಬರೆಯಿರಿ ಯುವಕ ಮಂಡಳಕ ಗೀ ಗೀ ॥ ೫ ॥

– ಕೃತಿ: ಬಸವಣ್ಣ ನಿನ್ನ ಹೆಸರ..

***

ಮರಿಬ್ಯಾಡ್ರಿ ಗುರುನಾಮ

ಮರವೀನ ಜಲ್ಮಕ ಬಂದುಽಽ ಮರಿಬ್ಯಾಡ್ರಿ ಗುರುನಾಮ
ಅರವೀನೊಳು ಪರಬ್ರಹ್ಮಽಽ ತ್ರಿಕೂಟ ಸಂಗಮಽಽ
ಗುರುಲಿಂಗ ಜಂಗಮ ತ್ರಾಯಿ ತ್ರಾಯಿ ಮಾಡತಿದ್ದ
ಬಸವರಾಜಗ ಅಹಂಭಾವನಾ ಬಂತ್ರಿ ಒಮ್ಮಾ ಜೀ ಜೀ ॥ ಪ ॥

ಗುರುವೆಂಬೋ ಗಂಟಲಗಾಣಽಽ ಅರುವೆಂಬೋ ಆತ್ಮಜ್ಞಾನ
ಅರವತ್ಮೂರು ಮಂದಿ ಪುರಾತನರಲ್ಲಿಽಽ
ಚನ್ನಬಸಣ್ಣ ಅಕ್ಕ ನಾಗಲಿಽಽ ಪ್ರಭುದೇವರ ಬದಿಯಲಿಽಽ
ತೊಂಬತ್ತಾರು ಸಾವಿರ ಜಂಗಮರೀಗೆಽಽ
ಅನ್ನ ಬಸವ ಹಾಕುವ ಕೈಲಿಽಽ ಜೀ ಜೀ ॥ ೧ ॥

ಶರಣರ ಸಮುದಾಯ ಶರಣೆಯರ ಗುಂಪು
ಆಗುತ ಅರುಣೋದಯದಿ ಪೂಜೆ ಅಲ್ಲಿ
ಅಷ್ಟವರುಣದ್ವೈತಿ ತಾಳೀ ಇಷ್ಟಲಿಂಗ ಕೊರಳಲ್ಲಿ
ಅನುಭಾವ ಮಠದಾಗ ಅನುಭಾವವೆಲ್ಲ
ಎಷ್ಟೋ ಹೇಳುತೀರು ಬಾಯಲೀ ಜೀ ಜೀ ॥ ೨ ॥

ದ್ವಿತೀಯ ಶಂಭು ಬಸವ ಅಂದಾನ ಹೀಂಗ
ನಾನೆ ಪ್ರಸಾದ ನೀಡಾಂವ ನಿತ್ಯದಲೀ
ನನ್ನ ಹೊರತು ಯಾರೂ ಇಲ್ಲಽ ಅನ್ನುದೆಲ್ಲ
ಪ್ರಭುವ ನಾಮದಲ್ಲಿ ನಿರ್ಬೈಲ ಮಾಯೇ
ನಿರಾಧಾರನಾಗೀ ಅವತಾರ ಕೊಟ್ಟಾರ ಅಲ್ಲಿ ಜೀ ಜೀ ॥ ೩ ॥

ಚಾಲ :

ಅಲ್ಲಮ ಪ್ರಭುವದೇವರು ಜಂಗಮ ಇದ್ದಾರು
ಜಂಗಮ ನುಡಿಸುತ ಹೋದ ಅನುಭವ ಮಠಕಲ್ಲಿ । ಅನುಭವ ಮಠsಕಟ್ಟಿ ।
ಬಸವs ಅನ್ನ ನೀಡು ನೀ ತಟsಕ । ಹಾ ಗೀ ಗೀ

ಮೂರದಿವಸ ಎನಗ ಅನ್ನ ಇಲ್ಲ ನಿರಾರ ನಿರ್ಬೈಲs
ಸೋತವ ಕೈಕಾಲs ಕೇಳು ಕ್ಷಣಕss ಕೇಳೊ ಈ ಕ್ಷಣಕ
ಶಾಂತಿಹ್ಯಾಂಗ ಮಾಡತಿ ನನ್ನ ಈ ಕ್ಷಣಕ । ಹಾ ಗೀ ಗೀ

ಆಗ ಬಸವ ಅಂದ ಅವರೀಗೀ ಕೂಡ್ರಿ ಪಂತೀಗಿ
ನಾನೆ ನೀಡತೀನಿ ನಿಮಗ ಸಧ್ಯಕ ಸಧ್ಯಕ ನಿಮಗ ಸಧ್ಯsಕss । ಹಾ
ಲೆಕ್ಕಿಲ್ದೆ ಜನ ಉಣ್ತಾರು ಉದಯssಕ । ಗೀ ಗೀ

ಏರು :

ಕೇಳಿ ಅಲ್ಲಮ ಪ್ರಭು ಮುಗುಳ ನಗಿಯ ನಕ್ಕss
ಉಕ್ಕತಿತ್ತು ಅವರ ಆತ್ಮss
ಗಕ್ಕನ ಎದ್ದು ಬಸವನ ದಿಮ್ಮssಕ
ಮುಕ್ಕಣ್ಣ ಅಂದ ಒಳ್ಳೇದು ತಮ್ಮ
ತಾಯ್ರಿತ್ರಾಯಿ ಮಾಡತಿದ್ದೋ
ಬಸವರಾಜಗ ಅಹಂಭಾವನ ಬಂತ್ರಿ ಒಮ್ಮss । ಗೀ ಗೀ ॥ ಚೌಕ ೧ ॥

ಅನ್ನ ಭುಂಜಿಸುವದಕss ಅಲ್ಲಮ ಮಹಾಪ್ರಭುss
ಪಂಕ್ತಿಯೊಳಾಗss ಕುಂತss ಬಸವನೇ ನೀಡ್ತಿನಂದ ಸ್ವಂತss
ಅಂಗದೆಡಿ ನೀಡ್ಯಾನೂಟಕss
ತಾಸಬುಟ್ಟಿ ಹೋಳಗಿ ತ್ರಾಸಿಲ್ದೆ ನೀಡಿದ
ಆಗಿಲ್ಲರಿ ಗಿರದ ತುತ್ತಾss । ಗೀ ಗೀ

ಮೂರು ಬುಟ್ಟಿ ಹೋಳ್ಗಿs ಮುರ್ದು ತುರುಕೇದss
ಆರ ಬುಟ್ಟಿ ಮತ್ತಾss
ಇಪ್ಪತ್ತೈದಗಳ ಹೊತ್ತಾss । ಮುವತ್ತಾರಳತಿ ತುತ್ತಾ ।
ಇನ್ನೂರ ಹದ್ನಾರ ಚೀಲ ನಿಮಿಷದಾಗ ಸೇವಿಸಿ ಬಿಟ್ಟ
ಬಸವ ತೊಟ್ಟ ಶರಹತss ಗೀ ಗೀ

ಜಂಗಮರೂಪಿ ಪ್ರಭು ಕರದುss ಹೇಳತಾರ
ಬಸವ ಕೇಳ ಎನ್ನ ಮಾತss
ಹಸುಮತ್ತಿಷ್ಟು ಆಯ್ತು ಹೆಚ್ಚ ಉರಿ ಕಿಚ್ಚಾಗವ್ರೊಲ್ದು ಶಾಂತss
ನೂರಾವ್ರೊಂದು ಮೆಣಸಿsನ ಅಂಡಗೀ
ಕಂಡಂಗ ನುಂಗಿ ಕುಂತ ಗೀ ಗೀ

ಇಪ್ಪತ್ತೊಂದು ಸಾವೀರs ಆರ್ನೂರ ಕೋಟಿಗಳು
ಎಲ್ಲಾ ಆದುವ್ರ ಚುಕ್ತಾ
ಕಟ್ಟss ಆಯ್ತು ಪರೋಕ್ಷದsತ್ತಾ
ಕೆಟ್ಟ ವ್ಯಾಳೆ ತಂದ ಸಾಕ್ಷಾತs
ಅಷ್ಟು ಖಂಡಗ ಖಾನಿ ನಷ್ಟ ಮಾಡಿ ಬಿಟ್ಟ
ಬಸವ ಆಳ್ಕೋತ ಕೂತ । ಗೀ ಗೀ

ಚಾಲ :
ಚನ್ನಬಸವನಲ್ಲಿ ಜ್ಞಾನಭಕ್ತಿ ನೋಡಿದ ನೆದರೆತ್ತಿss
ಬಲ್ಲಾವ ಬಸವ ಅದಿಯೋss ನೀನs ।
ಅದಿಯೋ ನೀನss ಹಾ ಹಾ
ಅಲ್ಲಮಪ್ರಭು ಜಂಗಮಾದಾನs । ಜೀ ಜೀ

ಅರವೀನಗುಣಗಳು ಬಿಡದೇ ಅರವು ಇಟ್ಟ ನಡಿರಿ
ಖರೇ ದೊರೆಯುದು ಗುರುವೀನ ಬೋಧ।
ದೊರೆಯುದು ಗುರುವಿನ ಬೋಧ
ನೂರs ವರುಷ ಎಲ್ಲsರ ವಾಯೀದಾss ಗೀ ಗೀ

ಪಂಚಾಕ್ಷರಿ ಷಡಕ್ಷರಿss ಮಂತ್ರss ಅರವ ಕೆಟ್ಟ ಯಾತ್ರss
ದೇಹದಲ್ಲಿ ಇರತಾದ ಜಾಗ ಯಾವssದ ಯಾವದ
ಜಾಗ ಯಾವssದ ಆ ಹಾ ಹಾ
ಇದುss ಎಲ್ಲ ಹೇಳಿ ಹೋಗ್ರೊ ಜಾಪ್ತಾss ಗೀ ಗೀ

ಏರು :
ಪೊಡವಿಯ ಮಾಗಾಯಿ ಉಡತಡಿ ಮಹಾದೇವಿ
ಪೊಡವಿಯ ಮಾಗಾಯಿ ಉಡತಡಿಗೆ ಮಹಾದೇವಿ
ಕವಿs ಪಂಚಾಕ್ಷರಿಯ ಮರಮss

ನೀಲೂರ ಶರಣರ ನೇಮಾs। ಸಾರಿ ಹೇಳಿದಾರಿ ನೇಮss
ತ್ರಾಯಿ ತ್ರಾಯಿ ಮಾಡತಿದ್ರೊ
ಬಸವರಾಜಗ ಅಹಂಭಾವನ ಬಂತ್ರಿ ಒಮ್ಮ್ಯಾss । ಜೀ ಜೀ

– ಕವಿ : ಮೀರಾಸಾಬ ಪಂಚಾಕ್ಷರಿ ಮಹಾಗಾಂವ

***

ಸಜ್ಜನ ಸಂಗ ಕುಂತೀರಿ ನೀವು

ಸಜ್ಜನ ಸಂಗ ಕುಂತೀರಿ ನೀವು ಮಜ್ಜನ ಮಾಡಿ ಪೇಳುವೆನು
ಗರ್ಜನ ಮಾಡಿ ಹೇಳತೇನಿ ಕೌತುಕ
ಕಲ್ಯಾಣ ಪ್ರಾಂತದೊಳು ಬಸವೇಶ್ವರ ತೋರಿದ ಮಹತ್ವಕ
ಅವರ ಚರಿತ್ರ ಕೇಳಿದರ ನಮ್ಮ ನಿಮ್ಮ ಜನ್ಮಾಗುವದು ಸಾರ್ಥಕ
ಮುಂಡ ತರುಣರು ಕಣ್ಣಾರ ಕಂಡು ಲಿಂಧಾರಣ ಬಿಟ್ಟಾರ ಮಾತನಕ ಜೀ ಜೀ॥ಪ ॥

ಆಚಾರ ವಿಚಾರ ತಿಳಿದು ಸುವಿಚಾರದಿಂದ ಬಸವಣ್ಣನವರು
ಕಲ್ಯಾಣ ಕಡಿಮಠಕ ಇಟ್ಟಾರ ದಾಸೋಗಿ
ನಿತ್ಯ ಹನ್ನೆರಡು ಸಾವಿರ ಜಂಗಮರಿಗೆ ಉಣಿಸುವರು ಹೋಳಿಗಿ
ಮಕ್ಕಳು ಸೋಗ್ಯಾನಂಗ ಬಗಲಿಗಿ ಹಾಕ್ಕೊಂಡ ಬರುತಿರು ಜೋಳಗಿ
ಗಂಗಯ್ಯ ಎಂಬುವ ಮುಂಡ ಜಂಗಮ ಪಾತೇಲಿ ಹುಗ್ಗಿ ಸುಂಕದ ಸುರವಿಗಿ
ಶೆಟ್ಟಿರ ಮಠದಾಗ ಬಿದ್ದಿದ್ದ ಹೊರಗ ಒಮ್ಮೆ ಹಾಕ್ಯಾರ ಗಾಳಿಗಿ ಜೀ ॥

ಗಂಗಯ್ಯ ಸಾಯತಾನೆಂದು ಸಂಗಯ್ಯ ಅಳುತ್ತಿದ್ದ ಒಂದೇ ಸವನ
ಭಯಂಕರ ಬೆಂಕಿಯ ಹೊಟ್ಟ್ಯಾಗ ತಗಿಬಗಿ
ಆ ಬಸವರಾಜಗ ಹೋಗಿ ಹೇಳಂದರ ಲಗುಬಗಿ
ಆತ ಪೂಜಾಕ ಕೂತಾರ ನೋಡಿರಿ ಸತ್ಯ ಶಿವಯೋಗಿ
ಪೂಜಾ ಮುಗಿದಮ್ಯಾಲ ಬಸವನ ಹಸ್ತಹೊಯ್ಯ ಹಚ್ಚ್ಯಾರ ಹೋ ಬಾಗಿ
ಎದ್ದು ಬಾರ ಹೋಳಿಗಿ ಮಡಚಿ ಹಿಡಿದಾರ ಒಂದೊಂದು ತುತ್ತಾಗಿ ಜೀ ॥

ಲಿಂಗವಿಲ್ಲದ ಭವಿಗಳಗಿ ಮಠದಾಗ ಬರಗೊಡತಿದ್ದಿಲ್ರಿ
ಮಾಣಿಕ ಪ್ರಭು ಬಂದಾರ ನೋಡ್ರಿ ಮುಪ್ಪಾನ ಮುದುಕಾಗಿ
ಬರೆ ಲಿಂಗಂತು ಕಾಣಲಿಲ್ಲವರ ಕೊರಳಿಗಿ
ರೋಗಾದವರಂಗ ಬಂದು ಕುಂತಾರ ಮಠದ ಬಾಗಿಲಗಿ
ಗಣಂಗಳ ಪಂತಿ ದಾಟ ಹೊಳ್ಳಿ ನೋಡಿದರಾಗ ಬಿದ್ದಾರವರ ದೃಷ್ಟಿಗಿ
ಭವಿ ಬಂದಾನೆಂದು ಪಂತಿ ಬಿಟ್ಟು ನಡಿಸ್ಯಾರ ಗುದಮುರಗಿ ಜೀ ॥

॥ ಚಾಲ ॥
ಬಸವನೋಡಿ ಪ್ರಭು ಎಂದು ಎರಡು ಕೈ ಹಿಡಿದ ಕೈಗಳ ಒಂದು ಕಡದ
ದೇಹವು ಒಡೆದು ಛಿದ್ರಾಗಿ ಬಿತ್ತು ನೆಲಪಾಲ
ಬಳದು ಗಂಟಕಟ್ಟಿ ಹೊತ್ತ ಭೂಪಾಲ ಜೀ ॥

ವಜ್ಜಿ ಒಯ್ದು ಮೆಲ್ಲಕ ಮಠದಾಗಿಳಿಸಿ ಸ್ವಚ್ಛ ಜಳಕ ಮಾಡಿಸಿ
ಮುಚ್ಚಿ ಒಯ್ದು ಕುಂಡರಿಸಿ ಬಿಟ್ಟಾರ ಗದ್ದಗಿ ಮ್ಯಾಲ
ಜಂಗಮರು ಬಡಕೊಂಡಾರ ಗಲ್ಲ ಗಲ್ಲ ಜೀ ॥

ಲಿಂಗದಿಂದ ಎದ್ದಾನ ಕೇವಲ ಹಿಡಿದಿದ್ದ ತ್ರಿಶೂಲ
ಅಖಂಡಮೂರ್ತಿ ನಿಂತಂಗ ಗುಂಡಗೋಲ
ಗಣಂಗಳು ನೋಡಿ ಹಿಡಿದಾರ ಪ್ರಭುವಿನ ಕಾಲ ಜೀ ॥

ನೀರಾದುದು ಶರೀರ ಒಂದು ತಾಸಿನಾಗ ಶುದ್ಧ ಮಾಡಿದ ಶರಣ
ಖಾಸ ನಾವು ಕಣ್ಣಾರ ಕಂಡೇವು ಎಂಥಾ ಸೋಜಿಗ
ಬಸವ ಪುರಾಣ ಬರೆದು ಕೊಟ್ಟಾರ ನೋಡಿರಿ ತಾರೀಕ
ಅಂಥ ಜ್ಞಾನದವ ನೋಡಬೇಕ್ರಿ ಭಾಳ ಬಾರೀಕ ಜೀ ॥ ॥ ಚೌಕ ೧ ॥

ಆರಮಂದಿ ಕಳ್ಳರು ಜೋರಿಲಿಂದ ಕಳ್ಳತನಕ ಬಂದು
ಪಾರಾಗಿ ಹೋಗ್ಯಾರ ವಸ್ತೀಗಿ
ಖರೆ ಕಳ್ಳತನ ಅಂತೂ ಸಾಧಿಸಲಿಲ್ಲ ಅಂದು ಅವರಿಗಿ
ತಿರುಗಿ ಬರಬೇಕಂದ್ರ ಹೊತ್ತು ಬಂತು ಜೋರಾಗಿ
ರೊಟ್ಟಿ ಬುತ್ತಿ ಒಬ್ಬರಕ್ಕೊಬರು ಮಾತಾಡ್ತಾರ ಹ್ಯಾಂಗ ನಾಳಿಗಿ
ಒಬ್ಬ ನೀಚ ಕಳ್ಳ ಸೂಚನೆ ಹೇಳಿ ಹಾಕ್ಯಾರ ಮೇಳಿಗಿ ಜೀ ॥

ಕಲ್ಯಾಣ ಬಸವಣ್ಣೆಪ್ಪನ ಮಠದಾಗ ದಾಸೋಗಂತೂ ಕಡಿಮಿಲ್ಲ
ಕಲತು ಹೋಗೋಣಪ್ಪ ಊಟದ ಟೈಮಿಗಿ
ಒಬ್ಬ ಮುಖಂಡ ಮನುಷ್ಯ ವಿಚಾರ ಮಾಡಿ ಹೇಳಿದವರಿಗಿ
ಖರೆ ಮಠದಾಗಂತು ಬರಗೊಡುವದಿಲ್ಲ ಲಿಂಗವಿಲ್ಲದವರಿಗಿ
ಬಜಾರದಾಗ ಹೋಗಿ ಬದನಿಕಾಯಿ ಖರೀದಿ ಮಾಡಿ ಹಿಡದಾರ ಕೈಯಾಗ
ಉಚ್ಚಿ ಬೀಳಬಾರದೆಂದು ಗಟ್ಟಿ ಕಟ್ಟಿ ಸಿಗಸ್ಯಾರ ಕಚ್ಚ್ಯಾಗ ಜೀ ॥

ಬ್ಯಾಸಿಗಿ ಬಿಸಲಾಗ ಬಂದು ಹೊಕ್ಕಾರ ಕಲ್ಯಾಣ ಮಠದಾಗ
ಹನ್ನೆರಡು ಸಾವಿರ ಜಂಗಮರದು ಪೂಜಿ ನಡದಿತ್ತ ಬಾರದ ವ್ಯಾಳ್ಯಾಗ
ಈ ಕಳ್ಳರು ಗಪ್ಪ ಹೋಗಿ ಕುಂತಾರ್ರಿ ಅವ್ರ ಪಂತ್ಯಾಗ
ಅಂಗೈಯಾಗ ಬದನಿಕಾಯಿಟ್ಟು ಕಣ್ಣಮುಚ್ಚಿ ಮಂತ್ರ ನುಡದಾರು
ವಟ ವಟ ಬಾಯ್ಯಾಗ

ಆ ಚಿಟ್ಟಿಯ್ಯ ಕೆಟ್ಟ ಕಣ್ಣಲಿ ನೋಡಿದವರೀಗ ಜೀ ॥

॥ ಚಾಲ ॥
ಕರೀ ಬದನೀಕಾಯಿ ಐಗೋಳು ಎಂದರಪ್ಪ ಮಠದಾಗ
ಚಿಟ್ಟ ಐನೋರು ಹೇಳ್ಯಾನೆಲ್ಲರಿಗಿ ಜೀ ॥

ಪೂಜಾ ಬಿಟ್ಟು ಜಂಗಮರು ನಿಂತಾರ ನೋಡಿ ಕಡಿ ಕಡಿಗಿ
ಮುಟ್ಟಲಿಲ್ಲ ಬಸವಣ್ಣನ ಎಡಿಗಿ ಜೀ ॥

ಬಸವಣ್ಣಂದು ಬಸ್ಮವಂದು ಬಿಟ್ಟಾರ ಬದನಿಕಾಯಿ ಮ್ಯಾಗ
ಲಿಂಗಾಂಗಿ ತೋರ‍್ಯಾವ ಕ್ಷಣದಾಗ ಜೀ ॥

ಸಾಗಿತು ಪಂತಿ ಮುಗಿಸಿ ಕುಂತಿದಾರು ಹಿಂತದು
ನಾವು ಎಂದು ಕಂಡಿಲ್ಲೆಂದ ಮೋದ ಜೀ ॥

ಒಬ್ಬ ಶಂಬಯ್ಯ ಎಂಬು ಜಂಗಮಂದು ಬಹಳಿತ್ತ ನಾಜುಕ
ಒಳ್ಳೇ ಅಡಾಡಿ ಮಾಡಿ ಕಡಾಯಿ ಒಮ್ಮೆ ನುಂಗ್ಯಾನ ಸಜ್ಜಕ ಜೀ ॥ ಚೌಕ ೨ ॥

ಪಂಚಮೂಲದ ಪಂಚಯ್ಯನವರು ಹಂಚಿಕೆ ಹಾಕಿದರು
ಶರಣರ ಭಕ್ತಿ ಪರೀಕ್ಷೆ ಮಾಡಲಾಕ ಎಂದು ನಿಂತಾರ
ಹಸಿವೆಯಾಗೇದೆಂದು ತಳಮಳಿಸಿ ನೆಲಕ ಬಿದ್ದಾರ
ಶರಣರು ಕಣ್ಣಾರ ನೋಡಿ ಅಂತಾರಪ್ಪ ಎಂಥಾ ಚಮತ್ಕಾರ
ತೊಂಭತ್ತಾರು ಸಾವಿರ ಜಂಗಮರಿಗೆ ಮಾಡಿದ ಮೃಷ್ಟಾನ್ನ ಅದ ತಯ್ಯಾರ
ತಡವ್ಯಾಕ ಸ್ವಾಮಿ ಊಟ ಮಾಡಿರಿ ಹಸಿದು ಬಂದೀರಿ ಒಳೆ ಜೀ ॥

ಜಡಿ ಬಿಚ್ಚುತ ಜಂಗಮರು ತ್ರಿಪುರಾಂತಕ ಕೆರಗಿ ಜಳಕಕ್ಕ ಹೋಗ್ಯಾರ
ಜಡಿ ಬಿಟಗೊಂಡ ಮಠದ ಮೂಲ್ಯಾಗ ಊಟಕ್ಕೆ ಕುಂತಾರ
ಮಾಡಿದ ಅಡಿಗಿನೆಲ್ಲ ಒಬ್ಬರೆ ನುಂಗ್ಯಾರ ಎಂಥಾ ಚಮತ್ಕಾರ
ಹುಡುಕಿ ನೋಡಿದರ ಒಂದು ಅಗಳ ಸಹ ಉಳಿಲಿಲ್ಲರಿ
ಬಸವಣ್ಣನವರು ತಾನೇ ಬಾನಾಗ್ಯಾರ ಜೀ ॥

ಚನ್ನ ಶರಣೆಂಬುವರು ಅಂಬ್ರುತ್ತಾಕಿ ಗಂಗಾಳ ತುಂಬ್ಯಾರ
ಒಂದ ಗುಟಕಮಾಡಿ ಗುಟಕಿಸಿ ಕುಡದ ಪಂಚಯ್ಯನವರು ಮನ ತೃಪ್ತಿಯಾಗ್ಯಾರ
ಅಂತು ಶಾಂತಾಗಿ ಒಮ್ಮೆ ಡರಕಿ ಹೊಡದಾರ
ಚನ್ನಬಸವಣ್ಣನವರು ಒಡಲಿಂದ ಕಡಗಿ ಹಾಕ್ಯಾರ ಜೀ ॥

॥ ಚಾಲ ॥
ಶರಣರದು ಎಂಥದು ನೋಡಿರಿ ಮನಸ
ನನಗುಣಿಸ್ಯಾರ ನೋಡಿರಿ ಅಮೃತ ರಸ ಜೀ ॥
ಚೈತನ್ಯ ಬಂದು ನನಗಾಗ್ಯಾದ ನೋಡಿರಿ ಉಲ್ಲಾಸ
ಬರ್ಘೂರಾಗೇತ್ರಿ ಸಂತೋಷ ಜೀ ॥

ಕಲ್ಯಾಣೆಂಬುದು ಆಗಲಿ ನೋಡ್ರಿ ಕೈಲಾಸ
ಬಸವಣ್ಣಂದು ಸದಾ ಯಿರಲಿ ವಾಸ ಜೀ ॥

ಬ್ರಹ್ಮಜ್ಞಾನ ತಿಳಿದ ಮ್ಯಾಲ ಸ್ವತಃ ಬ್ರಹ್ಮತಾನೇ ಶರಣರ
ಮುಟ್ಟಿದಡೆ ಜಗಕ ತಿಳಿದ ಜ್ಞಾನ ತೋರಿಬಿಟ್ಟಾರ ಜೀ ॥
ಬಾಳಮಂದ್ಯಾಗ ಅಂಬಾರಾಯ ದ್ಯಾಗಾಯಿ ಪದಮಾಡಿ ಹಾಡ್ಯಾರ
ಶೇಖ ಜಿಂದಾವಲಿ ಚರಣಕ ಮಂಡ ಶರಣ ಶಾಹೀರ ಜೀ ॥

ಕವಿ : ಅಂಬಾರಾಯ ದ್ಯಾಗಾಯಿ

***

ಬಸವಣ್ಣ

ಸಭಿಕರ ಮುಂದ ಸಣ್ಣ ಕೂಸ ಸಾರಿ ನಾನು ಹೇಳತಿನಿ ಸವಿಸ್ತಾರ ।
ಸಾವಧಾನದಿಂದ ಕೇಳಬೇಕ್ರಿ ಆದ ವಿಸ್ತಾರ ।
ಸಾಕ್ಷಾತ ನೋಡಿಕೋರಿ ಈಗ ಹಾನ ದೇವರ ।
ಶಿವನ ವರವಿಲಿ ಹುಟ್ಟಿ ಬಂದು ಶ್ರೀ ಗುರುವೆ ಅಧಿಕ
ಅಂದು ಆದ ಜಾಹೀರ ।
ಶ್ರೀ ಬಸವನ ಪುರಾಣ ಕೇಳಿದವರ ಜಲ್ಮ ಉದ್ದಾರಾ । ಗೀ ಗೀ

ಪಾರ್ವತಿ ಪರಮೆಸೂರ ಪ್ರೇಮದೋಳು ಸಭಾ ಮಾಡೀರು ।
ಸಂಭ್ರಮದಿಂದೆ ತುಂಬಿ ತುಳಕಿತ್ತು ಕೈಲಾಸ ಮಂದಿರ ।
ಅಲ್ಲಿ ಯಾವ ಮಾತಿಂದೇನೂ ಇದ್ದಿದಿಲ್ಲ ತೊಂದರ ।
ಭೃಂಗಿ ನಾಟ್ಯ ಆಡಿ ನಗಸ್ತಿದ್ದ ನಾನಾ ಪ್ರಕಾರ ।
ತ್ರಿಲೋಕ ಸಂಚಾರ ತಿರಗುತ ನಾರದ
ತ್ರೀಮುಖನ ಮುಂದ ನಿಂತು ಅಂದ ಹರಹರ ।
ಮಂದಿ ಮಾನುಲೋಕದಾಗ ಹಾರ ಭಾಳ ತೊಂದರ । ಗೀ ಗೀ

ಅಷ್ಟಾವರಣ ಅಂಬುದು ಅಣು ಮಾತ್ರ ಇಲ್ಲರಿ
ಆಲ್ಪರಿಮು ಹೇಳಿದಾನ ಘಟ್ಟಿ ಆಗಿ ಕೊಟ್ಟ ಲೆಕ್ಷರ ।

ಅಷ್ಟು ಕೇಳಿ ಮಹಾದೇವ ನಂದಿಕೇಸೂರಗ ಮಾಡ್ಯಾನ ತಯ್ಯಾರ ।
ಭೂಮರತೆ ಲೋಕಕ ಹೋಗಬೇಕು ಅಂದು ಹೇಳ್ಯಾರ ।
ಭಗವಂತನ ಮಾತಿಗಿ ಬಸವಣ್ಣ ಬೆರಗ ಆಗಿ
ಭವಸಾಗರ ನೀಗಿ ಹೋಗಾದು ಭಾಳ ದುಸ್ತರ ।
ಬಹು ಬಂಧನ ತಂದು ಇಟ್ಟರಿ ಭವಳಿ ಶಂಕರ । ಗೀ ಗೀ

ದುಮಾಲಿ: ಭಗವಂತ ಬಸವಗ ಹೇಳ್ಯಾನ ।
ಬಾಗೆವಾಡಿಗಿ ಹೋಗಬೇಕು ನೀನ ।
ಬ್ರಾಹ್ಮಣರಲ್ಲಿ ಆಗೊ ಜನನ ।
ಭಕ್ತಿಲಿ ಬೆಳಸು ಅಷ್ಟಾವರಣ । ಗೀ ಗೀ

ಏರು: ನಿನ್ನ ದಸಿಂದ ನಾನು ಕಪ್ಪಡಿ ಸಂಗಮ ಆಗಿ ಬರ್ತಿನಿ
ಮರ್ತ್ಯಲೋಕಕ ಬಿಟ್ಟ ಬರ್ತಿನಿ ಕೈಲಾಸ ಮಂದಿರ ।
ಯಾಕ ಆಗಲದೆಂದು ಬಸವೆಸೂರ ಆದ ತಯ್ಯಾರ ।
ಉಮ್ಮೆದಾರಿಲಿ ಇಬ್ಬರೂ ಕೂಡಿ ಭವಾಕ ಬಂದಾರ । ಗೀ ಗೀ

॥ ಚೌಕ ೧ ॥

ಕೈಲಾಸ ಮಂದಿರ ಬಿಟ್ಟು ಜಂಗಮ ರೂಪ ತೊಟ್ಟು
ಭಾಗ್ಯವಾಡಿಗ ಬಂದು ಇಳದ ಭಾಳ ಕುಸಿಯೇಲ ।
ಮಾದಲಾಂಬಿಕೆ ಮಾದರಸನ ಭಕ್ತಿ ಬಸವನ ಮ್ಯಾಲ ।
ಕುಂತರ ನಿಂತರ ಬಸವ ಬಸವ ಅಂತೀರು ನಿತ್ಯನ ಕಾಲ ।
ಭಗವಂತ ಭಕ್ತಿ ಭಾವ ನೋಡಿ ಬಂದ ಅಲ್ಲಿಗಿ ಲಗು ಮಾಡಿ
ಭಿಕ್ಷಾಂದೇವಿ ಅಮೃತ ನಿಂತ ಕೇವಲ ।
ಮಾದರಸನ ಮುಖ ನೋಡಿ ಮಾತ ಆಡಸ್ಯಾನ ಜಗಪಾಲ । ಗೀ ಗೀ

ನಿಮ್ಮ ಉದರದಿಂದ ಒಬ್ಬ ಸುಂದರ ಪುತ್ರ ಹುಟ್ಟತಾನ
ಬಸವ ಅಂತ ನಾಮಕರಣ ಇಡ್ರಿ ಖುಸಿಯೇಲ ।
ಮಾದರಸ ಮಾತ ಕೇಳಿ ಭಾಳ ನಕ್ಕ ಖಿಲ ಖಿಲ ।
ದೊಡ್ಡ ಶರಣರು ಕಾಣಸ್ತೀರಿ ಸುಳ್ಳ ಹೇಳಾದು ನಿಮ್ಮ ಧರ್ಮ ಅಲ್ಲ ।
ಐಂಸಿ ವರಸ್ಯಾದ ಉಮರದವರು ಆಗಿ ಹೊಯ್ತು
ನಮಗೆಲ್ಲ ಮಕ್ಕಳ ಹ್ಯಾಂಗ ಆದಾವು ಮೈಯ್ಯಾಗ ಚೈತನ್ಯ ಉಳಿದಿಲ್ಲ ।
ಹಿಂತ ಐಗೋಳು ಬಹಳ ಬರತಾವ್ರೆಪ್ಪ ಹೇಳಕೋತ ತೋಲ । ಗೀ ಗೀ

ಮಾದೇವ ಅಂತಾನ ಮಾದರಸಗ ಮಾತ ಜರ ಕೇಳರಿ ನಂದು
ಮೊದಲ ಹೋಗಿ ಜಳಕ ಮಾಡಿ ಬರ್ರಿ ತತ್ಕಾಲ

ತೀರ್ಥ ಗುತ್ಯಾನ ಭಾಂಯಿ ಮ್ಯಾಲ ।
ಇಷ್ಟು ಹೇಳಿ ಕೇಳಿ ತಿರುಗಿ ಹೋಗಿದ ಇಳಿಸಿ ತ್ರಿಶೂಲ ।
ತೀವ್ರ ಜಳಕ ಮಾಡಿರು ತೀರ್ಥಗುಂಡದಾಗ ವರ್ತ ತತ್ಕಾಲ ।
ಬದಲ ಆಯ್ತು ರೂಪಯೆಲ್ಲ ಚಿನ್ನ ಬಂತು ಮಾರಿ ಮ್ಯಾಲ ।
ಮಾತ ಆಡತಾರ ಸತಿಪತಿ ನಮ್ಮಗ ತಿಳಿದಿಲ್ಲ ।
ಅಂವ ಯಾರು ಬಂದು ಹೋದಂವ ಏನು ಗುರುತ ಹತ್ತಿಲ್ಲ । ಗೀ ಗೀ

ದುಮಾಲಿ: ಗರ್ಭಚಿನ್ನ ತೋರಿತು ಅದೇ ದಿನ।
ಬೆಳಿತು ಒಂದೆ ಸವನ ।
ನವಮಾಸ ತುಂಬಿದವು ನಾರಿಗಿ ಪತಿಪೂರಣ ।
ಬ್ಯಾರೆ ಆಗಿತ್ತು ಮಾತ ಯಾರಿಗಿ ಇಲ್ಲ ಖೂನ । ಗೀ ಗೀ

ಮಾದಲಾಂಬಿಕೆ ಮನಗೀಳು ಒಂದ ದಿನ ।
ನಿದ್ದಿ ಹತ್ತಿ ಘನ ।
ಹುಟ್ಟಿದ ಸಣ್ಣ ತರುಣ ।
ಬಲ್ಯಾಕೆ ಇದ್ದ ಬಗವಾನ । ಗೀ ಗೀ
ಲಕ್ಷೀಮಿ ಸರಸ್ವತಿ ಪಾರ್ವತಿ ಅದೆ ದಿನ ।
ಬಂದರಲ್ಲಿತನ । ನೋಡ್ಯಾರ ಕಂದನ ।
ತೊಟ್ಟಿಲ ಕಟ್ಟಿದಾರು ಸುವರಣ ।
ಸೊಗಸಾಗಿ ಜೋಗುಳ ಹಾಡುವರು ಪುರಾಣ । ಗೀ ಗೀ

ಮಂದರ ಗಿರಿವರ ಕಂದುಗೊರಳನೆ
ನಂದಿಯೆ ನೀ ಬಾರೊ ।
ಬಾಗೆವಾಡಿ ಬ್ರಾಹ್ಮರ ಮತದಲ್ಲಿ ।
ನಿನ್ನ ಮಾತ್ವ ತೋರೊ । ಗೀ ಗೀ

ಮಾದಲಾಂಬಿಕೆ ಮಾದರಸರ ಬಾಲ
ಮುದ್ದು ಮುಖ ತೋರೊ ।
ಕಲ್ಯಾಣಕ ಹೋಗಿ ಕಲ್ಲ ಲಿಪಿ ಓದಿ
ಇಲ್ಲದ ಮಾತ್ವ ತೋರೋ । ಗೀ ಗೀ

ಲಕ್ಷದ ಮ್ಯಾಲ ತೊಂಬತ್ತಾರ ಸಾವಿರ
ಮಿಂಡ ಜಂಗಮರೊ ।
ಕಂಡದ್ದೆ ನೋಡಿ ಬೇಡಿ ಕಾಡಿ
ಭಂಡ ಎಬ್ಬಿಸುವರೊ । ಗೀ ಗೀ

ಏರು : ಭಕ್ತಿಲಿಂದ ತೊಟ್ಟಿಲ ತೂಗಿ ಬಸವ ಎಂದು ನಾಮ ಇಟ್ಟು ಬಿಟ್ಟು
ಭಸ್ಮಾ ಧರಿಸಿ ಹೋಗ್ಯಾರ ।
ಮಾದಲಾಂಬಿಕಿಗಿ ಎಚ್ಚರಾಗಿತು ಎದ್ದು ಕುಂತಾಳ ನೇರ ।
ಮೈ ಹವುರಾಗ ಆಯ್ತು ತೊಟ್ಟಲದಾಗಿನ ಪುತ್ತರ ಕಂಡಾರ ।ಗೀ ಗೀ
॥ ಚೌಕ ೨ ॥

ಮಾದಾಲಾಂಬಿಕಿ ಮಾದ ಅರಸನ ಬಾಲ ದಿನದಿನಕ ಬೆಳಿದ ಒಳ್ಳೆ ಅಸಲ।
ರೂಪ ಸೂರ್ಯನ ಕಿರಣ ಬಿದ್ದಂಗ ಬಿಸಲ ।
ಸೂಚಿಭ್ರೂತಲಿಂದೆ ನಡಿತಿದ್ದ ಮಡಿ ಮೀಸಲ ।
ಕಪ್ಪಡಿ ಸಂಗಮಗ ಹೋಗಿ ಕೈ ಜೋಡಿಸಿ ಬೇಡಿಕೊಂಡ
ಕಂದುಗೊರಳಕಾಯೊ ನೀನೆ ಕೇವಲ ।
ಹೀಂಗ ಅಂದು ಬೇಡಿಕೊಂಡ ಸಣ್ಣ ಬಾಲ । ಗೀ ಗೀ

ಮಾದಲಾಂಬಿಕಿ ಮಾದ ಅರಸ ಇಬ್ಬರು ಕೂಡಿ
ಮುಂಜಿ ಮಾಡಬೇಕು ಅಂಬೋದು ಅವರ ಹಂಬಲ ।
ಬಸವಣ್ಣ ಕೇಳಿ ಅಂತಾನ ಬೇಕಾಗಿಲ್ಲ ।
ಚಂಡಿಕಿ ಜನಿವಾರ ಜರೂರಿಲ್ಲ ।
ಪಂಚಾಕ್ಷರಿ ಷಡಕ್ಷರಿ ಶಬ್ದ ನುಡ್ಯಾಂವ ನಿತ್ಯನಕಾಲ ।
ಓಂ ನಮ ಶಿವಾಯ ಮೂಲ ಮ್ಯಾಲ । ಗೀ ಗೀ

ದುಮಾಲಿ : ಬಾಗೆವಾಡಿ ಬ್ರಾಹ್ಮಣರೆಲ್ಲ ಕೂಡಿ
ಆಡತಾರ ಮಾತ ಮಧು ಅರಸಗ ।
ಇಡರಿ ಕುಲದ ಹೊರತ । ಗೀ ಗೀ

ಅವನ ಮಗ ತಿಂದು ತ್ವಾಳ ಆಗಿ
ತಿರಗತಾ ನಗರತ ।
ವಿರುದ್ಧ ಬೆಳಸತಾನ ಮಾತ । ಗೀ ಗೀ

ನಾಳಿ ಹಿರಿಯರ ಹಬ್ಬಕ
ಊಟಕ ಹೋಗಬಾರದಂತ ।
ಹೀಂಗ ಹಾಕಿದರು ತಿವರೂಪ । ಗೀ ಗೀ

ಏರು : ಹಿರಿಯರ ಹಬ್ಬಕ ಊಟಕ ಕರದರ ಮಧು ಅರಸಗ ಬರಲಿಲ್ಲ ಯಾರ
। ಅವನಿಗಿ ಚಿಂತಿ ಆಗಿತ ಭಲ್ತೆನೆ ಜೋರ ।
ಮುಪ್ಪಿನ ಕಾಲಕ ಮಗಾ ತಂದಾನ ಅಂದ ಅಂವಸರ ।
ಶಿವನ ವರವಿಲಿ ಹುಟ್ಟಿ ಬಂದು ಶ್ರೀ ಗುರುವೆ ಅಧಿಕ ಅಂದು

ಆದ ಜಾಹಿರ ।
ಶ್ರೀ ನಂದಿ ಬಸವನ ಪುರಾಣ ಕೇಳಿರಿ ಜಲ್ಮ ಉದ್ಧಾರ । ಗೀ ಗೀ

॥ ಚೌಕ ೩ ॥

ಬಸವಣ್ಣ ಕೇಳಿ ಭಾಳ ಪ್ರೇಮಲಿಂದೆ ಹೇಳ್ತಾನ
ಚಿಂತಿ ಯಾಕ ಮಾಡ್ತಿರಿ ಈಗ ।
ಹಿರಿಯರ ಹಬ್ಬಕ ಹಿರಿಯರಿಗಿ ತರಬೇಕು ಊಟಕ ।
ಈ ಬೋಳಿ ಮಕ್ಕಳ ಕಾರಭಾರ ಯಾಕ ಇದರಾಗ ।
ಸ್ಮಶಾನ ಭೂಮಿಗಿ ಹೋಗಿ ಸೊನ್ನಿ ಮಾಡಿ ಕರಿತಾನ ।
ಮುಪ್ಪಿನ ಮುದಕರು ಮನಿಗಿ ನಡಿರಿ ಭೋಜನ ಮಾಡಿರಿ ಈಗ ।
ಆಮಂತ್ರಣ ಬಿನ್ನ ಹೇಳಾಕ ಬಂದಿನಿ ನಿಮಗ । ಗೀ ಗೀ

ರಣ ಎದ್ದು ನಡದಂಗ ಹಾದಿ ಹಿಡದಾರ ಆಗ ಹೋಗಿ ಕುಂತರ
ಪಡಸಾಲ್ಯಾಗ ।
ಪತರೋಳಿ ಹಾಸಿ ಪಾಯಸ ಬಡಸ್ಯಾರ ಅದರಾಗ ।
ಹಪ್ಪಳ ಸಂಡಿಗಿ ಉಪ್ಪಿನಕಾಯಿ ಇಟ್ಟರು ಊಟಕ ।
ಭಕ್ತಿಲಿಂದ ಬಸವ ನಿಂತು ಬಾಗಿ ಎಲ್ಲರಿಗಿ ನೀಡತಿದ್ದ
ಭಾಳ ಆನಂದ ಆಯ್ತು ಅವರ ತಂದಿಗ ।
ತಾಯಿ ನೋಡಿ ಸೋಜಿಗ ಆಗ್ಯಾಳ ನೋಡಿ ಮನದಾಗ । ಗೀ ಗೀ

ನಾರಾಯಣ ಅಂಬಾಂವ ಹುಡುಗ ಭಾಳ ಬಿಡಕಿ ಊರಾಗ ।
ಹಣಿಕಿ ಹಾಕಿ ನೋಡಿದ ಹೋಗಿ ಖಿಡಕ್ಯಾಗ ।
ಅವರ ಕಾಕಾ ಯಂಕಣ್ಣ ಕುಂತಿದ್ದ ಎದುರಿಗ ।
ಎದಿ ಒಡದ ಬೆದರಿ ಓಡತಾನ ಓಣ್ಯಾಗ ।
ಕಂಡವರ ಮುಂದ ಭಾಳ ಭಂಡ ಮಾಡಿ ಹೇಳತಾನ ।
ದೆವ್ವ ನೆರದಾವ ಮಾದರಸನ ಮನಿಯಾಗ ।
ನಾ ನೋಡಿ ಓಡಿ ಬಂದಿನಿ ಈಗ । ಗೀ ಗೀ

ದುಮಾಲಿ : ಮಗಾ ಬಸವಗ ಪೇಚಿನೊಳಗ ಹಾಕಿ ಹಿಡಿಯರಿ
ಹ್ಯಾಂಗರೆ ಮಾಡಿ ಹೊಡಿಯಿರಿ । ಗೀ ಗೀ

ಹೀಂಗಂದು ಭಾವಿಸಿ ಕರಕೊಂಡು ಹೋಗ್ಯಾರ ಪರಬರಿ ।
ನಡಿಯಪ್ಪ ಜಳಕ ಮಾಡಿರಿ । ಗೀ ಗೀ

ಬಸವಾನೆ ಮಾಡಿ ಮತ್ತ ಒಬ್ಬ ಗ ಹಿಡದು ನೂಕ್ಯಾರ್ರಿ ।
ಕೃಷ್ಣಪ್ಪ ಅಂಬೊ ಹುಡುಗ ಬಿದ್ದಾನರಿ । ಗೀ ಗೀ

ಏರು :   ಬಸವಣ್ಣ ನೂಕ್ಯಾನಂದು ಭಂಡ ಮಾಡಿ ಹೇಳತಾರ ।
ಓಡಿ ಹೋಗಿದಾರ ಊಳದವರು ।
ಭಂಡ ಮಾಡಿ ಓಡಿದಾರು ಬ್ರಾಹ್ಮರ ।

ನಮ್ಮೂರಿಗಿ ಮೂಲ ಆಗ್ಯಾನ ಅಂತರ ಚೋರ ।
ಶ್ರೀ ನಂದಿ ಬಸವನ ಪುರಾಣ ಕೇಳರಿ ಜಲ್ಮ ಉದ್ಧಾರ । ಗೀ ಗೀ
॥ ಚೌಕ ೪ ॥

ಬ್ರಾಹ್ಮರ ಭಟ್ಟರು ಬಂದಾರ ಓಡಿ ಮೂಳ ಬಂದಾದ ಅಂತರ ಖೋಡಿ
ಭೇಗಿ ಹೋಗಿ ಹಿಡಿಯಿರಿ ತುಡುಗ ಬಸ್ಯಾಗ ।
ಈ ಮಗಾ ಸಿಕ್ಕಾನ ಪೇಚಿನ ಒಳಗ ।
ನೀಚ ಜಡಿರಿ ಹೋಗ್ತಾನ ಎಲ್ಲಿಗ ।
ಹೀಂಗ ಅಂದು ಜಮಾಗೂಡಿ ಜಲ್ದಿ ಬಂದಾರ ಓಡಿ
ಜಾಲಹಾಕಿ ಹಿಡಿಯಬೇಕಂತರ ಅವನಿಗ ।
ಜಾಣ ಜಾರಿ ಹಾರಿ ಹೋದ ಸಿಕ್ಕಿಲ್ಲ ಯಾರಿಗ । ಗೀ ಗೀ

ಸಡಿಲಗಚ್ಚಿ ಹಾಯಕೊಂಡು ಸಾಯ ಖಬರ ಇಲ್ಲದೆ ಓಡತಾರ
ಬಿಡಬಾರದು ಅಂತಾರ ಅವನಿಗ ।
ಹೊಳಿ ಅಡ್ಡ ಗಟ್ಟಿತು ಹೋಗಾ ದಾರಿಗ ।
ಈಗ ಸಿಕ್ಕಿ ಮಗನೆ ಹೋಗತಿ ಎಲ್ಲಿಗ ।
ಕಾಡೊ ಕಂಟಕ ಕರಮ ಕಲತು ಬಂದದ
ನೆನಿಯೊ ನಿನ್ನ ತಾಯಿ ತಂದಿಗಿ ಬಂಧುಬಳಗದವರಿಗಿ
ಗುರು ಹಿರಿಯರಿಗಿ । ಗೀ ಗೀ

ಕಪ್ಪಡಿ ಸಂಗಮ ಕಾಯೊ ಎಂದು ಕಾಲ ಇಟ್ಟ ನೀರಾಗ ।
ಬೈಲ ಆಗತೀವು ನೀರ ಹೋಗೊ ಹಾದಿಗ ।
ಹಿಂದ ಕಲಿತೈತಿ ನೀರ ಹಾಂಗೆ ಬೆನ್ನಿಗ ।
ಮಳ್ಳ ಆದ್ರು ಬ್ರಾಮರು ನೋಡಿ ಅವನಿಗ ।
ಕಡಿಗ ಹೋಗಿ ನಿಂತು ಬಸವ ಕೈ ಮಾಡಿ ಕರಿತಾನ
ಬರ್ರಿ ನಿಂತಿರ್ಯಾಕೊ ಬೈಲಿಗ ।
ಹೀಂಗ ಅಂದು ಹಿಡದು ನಡದ ಮುಂದಿನ ಮಾರ್ಗ । ಗೀ ಗೀ

ದುಮಾಲಿ : ದಾರಿ ಹಿಡಿದು ಮುಂದ ನೋಡಿ ಹೋಗುತಿದ್ದ ಅಂವ ಸುಮ್ಮ ।
ಎದುರಿಗಿ ಸರ್ಪ ಬಂತು ಏಕದಮ್ಮ । ಗೀ ಗೀ
ಅವನ ಪಾದಕ ಎರಗಿ ಪಾವನ ಆಯ್ತು ಹಾವಿನ ಜಲ್ಮ ।
ಅದರಾಗೆ ಹುಟ್ಯಾಳ ಅಕ್ಕನಾಗಮ್ಮ । ಗೀ ಗೀ

ಇಷ್ಟು ನೋಡಿ ಬ್ರಾಹ್ಮರು ದಂಗ ಆಗಿ ನಿಂತರು ಸುಮ್ಮ ।
ಧನ್ಯ ಧನ್ಯ ಅಂದು ತಮಾಮ । ಗೀ ಗೀ

ಏರು : ಗಲ್ಲ ಗಲ್ಲ ಬಡಕೊಂಡು ಗಾಬರಿ ಆಗಿ ನೋಡತಾರ
ತ್ರಾಹಿ ತ್ರಾಹಿ ಅಂದಾರ ತಾರಿಪ ನೋಡಿ ಎಲ್ಲ ।
ತಿರುಗಿ ಬಾರೊ ಬಸವ ಏನು ಮಾಡೊದಿಲ್ಲ ।
ಅಕ್ಕಗ ಕರಕೊಂಡು ಅಕ್ಕರತಿಲಿ ಬಂದ ಖುಸಿಯೇಲ ।
ಶ್ರೀ ನಂದಿ ಬಸವನ ಪುರಾಣ ಕೇಳರಿ ಜಲ್ಮ ಉದ್ಧಾರ । ಗೀ ಗೀ
॥ ಚೌಕ ೫ ॥

ಬಸವಣ್ಣ ತಿಳಸಿ ಹೇಳತಾರ ಬ್ಯಾಡರೀಗ ತಕರಾರ
ಬಾವಿಗಿ ನಡಿರಿ ಬೇಕಾದರ ।
ಅವರು ಎಲ್ಲಾರು ಯಾಕಾಗಲ್ದು ಅಂದಾರ ।
ಜಲ್ದಿ ಮಾಡಿ ಜಮಾಗೂಡಿ ಬಂದಾರ ।
ಬಸವಣ್ಣ ನಿಂತು ಒಳ್ಳತಾನ ಬಾರೋ ಕ್ರಿಷ್ಣಪ್ಪ ಹೋರಗ ।
ನಿನಗ ಯಾರು ನೀರಾಗ ನೂಕ್ಯಾರ ।
ಈಗ ಹೇಳಿ ಹೋಗೋ ಜರ ಅವರ ಹೆಸರ । ಗೀ ಗೀ

ಜಲದ ಒಳಗಿಂದು ಬಂದು ಹುಡುಗ ।
ಜಲ್ದಿ ಮಾಡಿ ಹೇಳತಾನ ದಿಡಗ ಬಸವನ ಸರಿಯಾಕೊ ತಕರಾರ ।
ನನಗ ನೂಕಿದಂವ ಮತ್ತೊಬ್ಬ ಪಾಮರ ।
ಇಷ್ಟು ಹೇಳಿ ಮುಳಗಿಹೋಗ್ಯಾನ ಪೂರ ।
ತಾಯಿ ತಂದಿಗಿ ನೋಡಿ ಭಾಳ ತಾರೀಪ ಕಂಡಿತು ।
ಬಸವನ ಪಾದ ಗಟ್ಟಿ ಹಿಡದಾರ ।
ನಮ್ಮ ಬಾಲಗ ಮಾಡರೆಂತಾರ ಉದ್ಧಾರ । ಗೀ ಗೀ

ಕೈ ಜೋಡಿಸಿ ಅವರು ಕಣ್ಣೀರ ಸುರಸುತ
ಸಾಷ್ಟಾಂಗ ಹಾಕಿ ಅಡ್ಡಬಿದ್ದಾರ ।
ನಮ್ಮ ಬಾಲಗ ಮಾಡರೆಂತಾರ ಉದ್ಧಾರ ।
ನಮ್ರತ ಭಾವಲಿಂದ ಬೇಡಿಕೊಂಡರ ।
ಇದ್ದ ಮಗ ಒಬ್ಬ ಬಿದ್ದ ಭಾಂಯಾಗ ಎಬ್ಬಸಿ ಮಾಡರಿ ಉದ್ಧಾರ ।
ಯಾರು ಇಲ್ಲದಂಗ ಆಯ್ತು ನಮ್ಮ ಸಂಸಾರ । ಗೀ ಗೀ

ದಮಾಲಿ : ದಯಾನಿಧಿ ಬಸವಗ ಅಂತಃಕರಣ ಮುಟ್ಟಿತು ಕಳಕಳಿ ।
ಕ್ರಿಷ್ಣಪ್ಪಗ ಕರಿತಾನ ಒಳ್ಳಿ । ಗೀ ಗೀ
ಆ ಹುಡುಗ ಎದ್ದು ಬಂದ ಬಸವನ ನುಡಿ ಕೇಳಿ
ಅಲ್ಲೆ ಸುರದೀತು ಹೂವ್ವಿನ ಮಳಿ । ಗೀ ಗೀ

ತಾಯಿ ತಂದಿ ನೋಡಿ ಹಿಡಿಲಾರದಷ್ಟು ಸಂತೋಷ ತಾಳಿ ।
ಕೈಲಾಸದಲ್ಲಿ ನುಡಿದವು ನೌಬತ ನಗಾರಿ ಕಾಳಿ । ಗೀ ಗೀ

ಧಂಗಾಪೂರ ಊರ ಭರತಿ ದೇವರ ಮಾರುತಿ
ಶಿವಶರಣಕವಿ ಮಾಡಿ ಮತ್ತರ ।
ಸ್ವರ ಹಾಡೆನಂದರ ಇಲ್ಲ ಜರ ಜಾಸ್ತಿ ಎತ್ತರ ।
ಅವನ ಭಾವಕ ಆಗಿ ಒಲ್ತ ಭಕ್ತ ಬಾ ಅಂತ ದೇವರ ।
ಶ್ರೀ ನಂದಿ ಬಸವನ ಮರಾಣ ಕೇಳರಿ ಜಲ್ಮ ಉದ್ಧಾರ । ಗೀ ಗೀ
॥ ಚೌಕ ೬ ॥

– ಕವಿ: ಶಿವಶರಣಪ್ಪಧಂಗಾಪುರ

***

ಕಲ್ಯಾಣದ ಬಸವಣ್ಣನ ಕಥೆಯನು ಹೇಳುವೆ

ಕಲ್ಯಾಣದ ಬಸವಣ್ಣನ ಕಥೆಯನು ಹೇಳುವೆ ಕೇಳಿರಿ ಸರ್ವ ಜನ
ಸಲ್ಲೀಲೆಯಲಿ ಲೋಕದ ಕಲ್ಯಾಣಕೆ ಅವತರಿಸಿದ ಶಿವಶರಣ ॥ ಪ ॥

ಕ್ರಿಸ್ತಶಕದ ಹನ್ನೊಂದುನೂರು ಮೂವತ್ತೊಂದರಲಿ ಬಸವಣ್ಣ
ಮುಕ್ತಿಕ್ಷೇತ್ರ ಶ್ರೀ ಇಂಗಳೇಶ್ವರ ಬಾಗೇವಾಡಿಯಲ್ಲಿ ಶುಭಜನನ
ಭಕ್ತರಾದ ಮಾದರಸ ಮಾದಲಾಂಬೆಯರ ಗರ್ಭದಲಿ ಒಂದು ದಿನ
ಭಕ್ತಿ ಬೆಳಕ ಬೀರಲ್ಕೆ ಹುಟ್ಟಿದನು ಶಿವ ಶಿವನೆನ್ನುತ ಪ್ರಮಥಗಣ ॥ ೧ ॥

ಹುಟ್ಟಿದೊಡನೆ ಗುರುಲಿಂಗ ಕಟ್ಟಿದನು ಬೆಳೆದ ಭಾಗ್ಯ ಬಿದಿಗೆಯ ಚಂದ್ರ
ಘಟ್ಟಿಗೊಂಡು ಮನ ಎಂಟು ವರ್ಷಗಳ ಕಳೆದನಲ್ಲಿ ತಾ ಬಾಲೇಂದ್ರ
ಬಿಟ್ಟನೂರನಲ್ಲಿಂದ ಕಪ್ಪಡಿಯ ಸಂಗಮಕ್ಷೇತ್ರಕೆ ತಾ ಬಂದ
ಶ್ರೇಷ್ಠಗುರು ಜಾತವೇದ ಶಿವಯೋಗಿಯಲ್ಲಿ ವಿದ್ಯಪಡಕೊಂಡ ॥ ೨ ॥

ಕ್ರಿಸ್ತಶಕದ ಹನ್ನೊಂದುನೂರು ಐವತ್ಮೂರು ಇಸ್ವಿಯ ತನಕ
ಶಿಸ್ತಿನಿಂದ ಅಧ್ಯಯನ ಮನನ ಅನುಭಾವ ಪಡೆದ ಬಳಿಕ
ಸಕಲವೇದ ಶಾಸ್ತ್ರಾದಿ ಪುರಾಣಗಳರ್ಥವನ್ನು ಜಾಣ
ಅಖಿಲ ನಾಡಿನಲಿ ಬೀರಲೋಸುಗ ಸಿದ್ಧನಾದ ಶ್ರೀಬಸವಣ್ಣ ॥ ೩ ॥

ಗುರುಗಳಾದ ಶ್ರೀ ಜಾತವೇದ ಶಿವಯೋಗಿಗಳಾಜ್ಞೆಯ ಪಾಲಿಸುತೆ
ಪರಮ ಸಾಧ್ವಿ ಗಂಗಾಂಬೆಯ ಮದುವೆಯನಾದನಾಕೆ ಬಲುಗುಣವಂತೆ
ಕರುಣೆಯ ಸೋದರಮಾವನ ಮಾತನು ಪಾಲಿಸಿ ಪೋದನು ಸತಿಸಹಿತ
ದೊರೆಬಿಜ್ಜಳನು ಕರಣಿಕನಾಗಿ ಮಂಗಳವಾಡದಿ ತಾ ನಿಂತ ॥ ೪ ॥

ಮಹತ್ವಾಕಾಂಕ್ಷಿಯ ಬಿಜ್ಜಳರಾಯನು ಚಾಲುಕ್ಯರ ಸಾಮ್ರಾಜ್ಯಕ್ಕೆ
ಮಹಾರಾಜನು ತಾನಾಗಿ ಬಂದನು ಸುಂದರ ಕಲ್ಯಾಣ ಪಟ್ಟಣಕೆ
ಪ್ರಸ್ತುತ ಸಾಮ್ರಾಜ್ಯಕೆ ಪ್ರಧಾನ ಭಂಡಾರಿಯಾದನು ಬಸವಣ್ಣ
ಕ್ರಿಸ್ತಶಕದ ಹನ್ನೊಂದುನೂರು ಐವತ್ತನಾಲ್ಕರಲಿ ತಾ ಜಾಣ ॥ ೫ ॥

ಮುಂದೆ ಹನ್ನೊಂದನೂರು ಅರವತ್ತರೊಳಗೆ ಮುಖ್ಯಮಂತ್ರಿ
ಬಂಧುರ ಸ್ಥಾನಕೆ ಬಂದನು ಜಗದಲ್ಲಿ ಬೆಳಸಿದ ರಾಜ್ಯವ ಸತ್ಕೀರ್ತಿ
ಬಂಧು ಭಾವದಲಿ ಪ್ರಜೆಗಳ ಕಾಣುತ ರಾಜ್ಯಭಾರ ನಡೆಸಿದ ಮೂರ್ತಿ
ಎಂದೂ ಅಳಿಯದ ಸುಂದರ ಸಮಾಜ ರಚನೆಯ ಮಾಡಿದ ಪ್ರಖ್ಯಾತಿ ॥ ೬ ॥

ಹನ್ನೊಂದನೂರರವತ್ತೇಳರ ತನ್ನ ಪೂರ್ಣ ಪ್ರಧಾನಿ ಪಟ್ಟದಲಿ
ಸನ್ನುತ ಕಲ್ಯಾಣದ ರಾಜ್ಯದಲಿ ಬೆಳಗಿದ ದಿನಮಣಿ ತಾನಲ್ಲಿ
ಸನ್ಮಾನಿತ ಮತ ಸತ್ಕಾಯಕ ವೃತ ಪೂರ್ಣ ಮಾಡಿದನು ಬಾಳಿನಲಿ
ಇನ್ನೆ ನಿದೆ ಜಗದಲಿ ಎಂದು ಬೆರೆದನು ಕೂಡಲಸಂಗಮನಲ್ಲಿ ॥ ೭ ॥

ಕಲ್ಯಾಣವು ತಾ ಕಟಗರೋಣಿಯಾಗುವದು ಎಂದು ಕಣಿಯನು ನುಡಿದ
ಬಲ್ಲಿದ ಬಸವಣ್ಣನ ಮಾತದು ತಾ ನಿಜವಾಯಿತು ಜಗದಲಿ ಮುಂದ
ಎಲ್ಲರ ಮುಂದೆ ಕಣ್ಮಣಿಯಾಗಿ ಬೆಳಗಿದ ಮೂವತ್ತಾರು ವರ್ಷ
ಕಲ್ಯಾಣದಲಿ ಕಾಯಕ ಮಾಡಿದ ದಿನಗಳು ಹನ್ನೆರಡು ವರ್ಷ ॥ ೮ ॥

ನೀಲಾಂಬಿಕೆಯು ಚಿಕ್ಕಹೆಂಡತಿಯು ಪರಮ ಪುಣ್ಯಚರಿತೆ
ಬಾಲಸಂಗಯ್ಯನೆಂಬ ಪುತ್ರನನು ಪಡೆದಿದ್ದಳು ಆ ನಿಜಮಾತೆ
ಲೀಲೆಗಳಿಲ್ಲದೆ ಲಿಂಗದೊಳೈಕ್ಯವ ಪಡೆಯಿತು ಮಗು ಬಹುಜನ ಪ್ರೀತಿ
ಕಾಲಹರನೆ ಕರದೊಯ್ದನೆಂದು ಘನಶ್ಯಾಂತಿಯೊಳಿದ್ದಳು ನೀಲಮತಿ ॥ ೯ ॥

ಅಲ್ಲಮಪ್ರಭು ಶ್ರೀಚನ್ನಬಸವಣ್ಣ ಮಡಿವಾಳ ಮಾಚಿದೇವಣ್ಣ
ಬಲ್ಲಿದ ಭಕ್ತನು ಅಪ್ಪಣ್ಣಾ ಶಿವಯೋಗಿ ಸಿದ್ಧರಾಮಣ್ಣ
ಎಲ್ಲರಿಗಕ್ಕ ಮಹಾದೇವಿ ನಾಗಮ್ಮರಿಂದ ಆ ಕಲ್ಯಾಣ
ಬಲ್ಲವರಿಗೆ ಮಾಣಿಕ್ಯವು ತಾನಾಗಿದ್ದನು ಬಸವಣ್ಣ ॥ ೧೦ ॥

ಬಸವಣ್ಣನವರ ಸರ್ವಕಾರ್ಯಕೆ ಶ್ರೀ ಪ್ರಭುದೇವರು ಚಾಲಕರು
ಕುಶಲಮತಿಯು ಶ್ರೀಚನ್ನಬಸವಣ್ಣ ಕ್ರಿಯಾ ಶಕ್ತಿಯನು ನೀಡಿದರು
ಅಸಂಖ್ಯಾತ ಶಿವಶರಣ-ಶರಣೆಯರು ಬೆಂಬಲವಾಗಿ ನಿಂತವರು
ವಸುಧಿಯೊಳಗೆ ಕಲ್ಯಾಣದ ಕೀರ್ತಿಯ ಬಾವುಟವನ್ನು ಮೆರೆಸಿದರು ॥ ೧೧ ॥

ಕಲ್ಯಾಣದ ಮಹಾಕ್ರಾಂತಿಗೆ ಕಾರಣವಾಯಿತು ಕೇಳರಿ ಒಂದು ದಿನ
ಎಲ್ಲ ಶರಣರಲಿ ಹಿರಿಹರಳಯ್ಯನ ಭೆಟ್ಟಿಯಾದ ಶ್ರೀಬಸವಣ್ಣ
ಉಲ್ಲಾಸದಿ ಶರಣೆಂದು ಕೈಮುಗಿದ ಬಸವಣ್ಣಗೆ ತಾ ಹರಳಣ್ಣ
ಬಲ್ಲಿದನಾದರೂ ಶರಣು-ಶರಣು ಎಂದನು ಪ್ರತಿಯಾಗಿ ಬಸವಣ್ಣ ॥ ೧೨ ॥

ನೊಂದನು ಬೆಂದನು ಹರಳಯ್ಯನು ತಾ ಪಾಪಿಯಾದೆ ನಾ ಎಂದೆನುತ
ಬಂದನು ಮನೆಕಡೆ ಮಡದಿಗೆ ತಿಳಿಸಿದ ಮುಂದಿನ ವಿಚಾರವೇನೆನುತ
ಬಂಧುರ ಭಕ್ತಿಯ ಮಾದೇವಿಯು ತಾ ಅಂಜದೆ ಅಳುಕದೆ ಯೋಚಿಸುತ
ಇಂದಿನ ಕಾಯಿಕ ಪುನೀತವಾಯಿತು ಎಂದಳು ಪತಿ ಸಂತೈಸುತ ॥ ೧೩ ॥

ನಮ್ಮೀ ಎಡ ಬಲತೊಡೆಗಳ ಚರ್ಮವ ಪಾದುಕೆಗಳನು ಮಾಡೋಣ
ನಮ್ಮೊಡೆಯರು ಶ್ರೀ ಬಸವಣ್ಣವರು ಮೆಟ್ಟಲು ಕಾಣಿಕೆ ನೀಡೋಣ
ಸುಮ್ಮನೆ ಸೋಕಿಸಿ ಫಲವೇನಿಲ್ಲವು ಕಾಯಕವಿದು ಶರಣರ ಪ್ರಾಣ
ಒಮ್ಮನದಿಂದಲಿ ಏಳಿರಿ ಎಂದಳು ತೋರಿದಳಾಗಾದರ್ಶನವನು ॥ ೧೪ ॥

ಸತಿಮಣಿ ಚತುರತೆ ಭಕ್ತಿಯ ಕಂಡಾ ಹರಳಯ್ಯನು ಆನಂದಿಸಿದ
ಅತಿಯಾತುರದಲಿ ಶಿವ ಶಿವ ಬಸವ ಎನ್ನುತ ತೊಡೆ ಚರ್ಮವ ತೆಗೆದ
ಮತಿವಂತೆಯು ಮಾದೇವಮ್ಮನು ಸಹ ತನ್ನೆಡ ಚರ್ಮವ ಮುದದಿಂದ
ಅತಿ ಭಕ್ತಿಯಲಿ ತೆಗೆದಳು ಸುಂದರ ಪಾದುಕೆಗೈದಳು ಭರದಿಂದ ॥ ೧೫ ॥

ಇಬ್ಬರ ತೊಡೆಗಳ ಚರ್ಮದ ಪಾದುಕೆ ಭಕ್ತಿಯ ಬೆಳಕಿಲೆ ಮಿಂಚಿದವು
ಮಬ್ಬಾಗಿಹ ಜನ ಕಣ್ಮನ ಬೇಧಿಸಿ ಅರುಹಿನ ಕಾಂತಿಯ ಬೀರಿದವು
ಸಭ್ಯರು ಸತ್ಯರು ಶರಣರು ಸತಿ ಪತಿ ಸತ್ಕಾಯಕದಲಿ ಬಲ್ಲಿದರು
ಉಬ್ಬಿದರವುಗಳ ನೋಡುತ ಪಾವನರಾದೆವು ಎನ್ನುತ ನಮಿಸಿದರು ॥ ೧೬ ॥

ಸದ್ಗುರು ಬಸವೇಶ್ವರಗೊಪ್ಪಿಸಲಾ ಹರಳಯ್ಯನು ತಾ ಹೊರಟಾಗ
ಉದ್ಧಾರ ಶ್ರೀ ಸ್ವಾಮಿಯೆ ಎದುರಿಗೆ ಬಂದನು ನೋಡಿದ ದಾರ್‍ಯಾಗ
ಮದ್ಗುರು ಬಸವ ಸ್ವೀಕರಿಸೆನ್ನುತ ಹರಳಯ್ಯನು ಶಿರಬಾಗಿಸಿದ
ಮುಗ್ಧ ಮನದ ಹಿರಿಶರಣನ ಅಪ್ಪುತ ಬಸವೇಶ್ವರ ಆನಂದಿಸಿದ ॥ ೧೭ ॥

ಹರಳಯ್ಯ ತಂದೆ ಏನಿದು ಎಂದು ಕೇಳಿದ ಬಸವಣ್ಣನು ತಾನು
ಗುರುವೆ ಕರುಣಸಾಗರನೆ ಇದು ಕಾಣಿಕೆ ಸ್ವೀಕರಿಸೆಂದನು
ಚರಣದೊಳಿಟ್ಟನು ಮನದಣಿ ಕುಣಿದನು ಶಿವಶರಣೋತ್ತಮ ಹರಳಯ್ಯ
ಹರ ಹರ ಶಿವ ಶಿವ ಸಂಗನಬಸವ ಎನ್ನುತ ನಲಿದಾಡಿದನು ॥ ೧೮ ॥

ಪಾವನಮಯ ಶರಣರ ತೊಡೆ ಪಾದುಕೆ ಸ್ವೀಕರಿಸುತ ಬಸವೇಶ್ವರನು
ಭಾವೋನ್ಮಾದದಿ ತನ್ನಯ ಶಿರದಲಿ ಹೊತ್ತನು ಕುಣಿಕುಣಿದಾಡಿದನು
ದೇವ ದೇವ ಶ್ರೀಮಹದೇವ ಗುರು ಕೂಡಲಸಂಗನ ಸ್ಮರಿಸಿದನು
ಜೀವನವಿಂದಿಗೆ ಸಾರ್ಥಕವಾಯಿತು ಎನ್ನುತ ಶರಣನ ಅಪ್ಪಿದನು ॥ ೧೯ ॥

ತಂದೆಯ ರೂಪದ ಹರಳೈ ಶರಣ ಸಂಗನ ಪಾದುಕೆ ಇವು ಎಂದಾ
ನಂದದಿ ಇವುಗಳ ಮನೆಯಲಿ ಪೂಜಿಸಿ ಮುಕ್ತಿಯ ಪಡೆಯಲು ಬೇಕೆಂದಾ
ಕಂದನು ನಾನು ಶಿವಭಕ್ತರಿಗೆ ಇವುಗಳ ಮೆಟ್ಟಲು ಯೋಗ್ಯ ಇಹೆನೇನು ?
ಎಂದೆನ್ನುತ ಬಸವಣ್ಣನು ಶರಣಗೆ ಪಾದುಕೆಗಳ ತಾ ನೀಡಿದನು ॥ ೨೦ ॥

ಗುರುಬಸವೇಶನ ಅಣತಿಯಂತೆ ಹರಳಯ್ಯನು ಸ್ವೀಕರಿಸಿದನು
ಪರಮಾನಂದದಿ ಶಿರದಲಿ ಹೊತ್ತನು ಹರ ಹರನೆನ್ನುತ ಸಾಗಿದನು
ಪರವಾದಿಗಳಲಿ ಮುಖ್ಯನು ಮಧುವಯ್ಯಂಬುವನಲ್ಲಿಗೆ ಬಂದಿಹನು
ಹರಳಯ್ಯನ ಕಂಡವನನು ಕೆಣಕುತ ಅಣಕಿಸಿ ಮುಂದೆ ನಿಂತಿಹನು ॥ ೨೧ ॥

ಎಲೆ ಎಲೆ ಹರಳಾ ಮಾದಿಗರವನೆ ಕೈಯೊಳಗೇನಿದೆ ಹೇಳೆಂದಾ
ಬಲುಮೆಯ ಮಾಡುತ ಹಾಸ್ಯವ ನುಡಿಯುತ ನಿಂತನು ದಾರಿಗೆ ತಾ ಮುಂದ
ಒಲವಿನ ಮಾತಿಗೆ ಹರಳಯ್ಯ ಶರಣನು ಪರಿಪರಿಯಾಗಿ ಪೇಳಿದನು
ಛಲ ಬೇಡೆನ್ನುತ ಮುಂದಕೆ ಸಾಗಲು ಮದುವಯ್ಯನು ಅಡ್ಡಾಗಿಹನು ॥ ೨೨ ॥

ಬಲಾತ್ಕಾರದಲಿ ಪಾದುಕೆಗಳನು ಕಸಿದನು ಕಾಲಲಿ ಮೆಟ್ಟಿದನು
ಪ್ರಳಯಾಗ್ನಿಯು ಆ ಕ್ಷಣದಿ ಹೊತ್ತಿತು ಮೈ ಉರಿ ಎನ್ನುತ ಬಿದ್ದಿಹನು
ಹುಲಿಮೀಸೆಯ ಹಿಡಿದುಯ್ಯಾಲೆಯನು ಆಡಿದ ಪರಿ ಶಿವಶರಣರನು
ಖಳಬುದ್ಧಿಯಲಿ ಕೆಣಕಲುಬಹುದೆ ಪ್ರಾಯಶ್ಚಿತವ ಪೊಂದಿದನು ॥ ೨೩ ॥

ಹರಳಯ್ಯ ತಂದೆ ಮನ್ನಿಸು ಎನ್ನುತ ಚರಣಕಮಲದೊಳು ಬಿದ್ದಿಹನು
ಕರುಣಾಮೂರ್ತಿಯೆ ರಕ್ಷಿಸು ರಕ್ಷಿಸು ಎಂದೆನ್ನುತ ಹೊರಳಾಡಿದನು
ಶರಣರ ಕೆಣಕಿದ ಮದುವಯ್ಯಗೆ ಜನ ಛಿ ಥೂ ಹಾಕುತ ಬೈದಿದರು
ಹರಳಯ್ಯ ಶರಣನ ಬಚ್ಚಲ ನೀರನು ಹರ ಹರ ಎನ್ನುತ ಸುರವಿದರು ॥ ೨೪ ॥

ಶಾಂತಿಯ ಪೊಂದಿದ ಮದುವಯ್ಯನು ಶಿವದೀಕ್ಷೆಯನು ಪಡೆದಿಹನು
ಭ್ರಾಂತಿಯ ಬಿಟ್ಟನು ಮಗಳನು ಕೊಟ್ಟನು ಹರಳಯ್ಯನ ಮಗನಿಗೆ ತಾನು
ಕ್ರಾಂತಿಯು ಹುಟ್ಟಿತು ಕುಲಸಂಕರದಲಿ ಕೋಪಿತನಾದನು ಬಿಜ್ಜಳನು
ಶಾಂತಿಯ ತಾಳದೆ ಮಧು – ಹರಳಯ್ಯರ ಆನೆಯ ಕಾಲಲಿ ತುಳಸಿದನು ॥ ೨೫ ॥

ಶರಣರ ಸಾವಿಗೆ ಕಲ್ಯಾಣದಲಿ ಕ್ರಾಂತಿಯೆ ಆಯಿತು ಆ ಕ್ಷಣದಿ
ಶರಣರು ಸಿಟ್ಟಿಲೆ ಬಿಜ್ಜಳದೊರೆಯನು ಕೊಲೆ ಮಾಡಿದರಾ ಪಟ್ಟಣದಿ
ಶರಣರ ಸಂಜೀವಿನಿ ಬಸವೇಶ್ವರನು ಮರಮರ ಮರಗುತ ಪ್ರಜೆಗಳನು
ಪುರವನು ಬಿಟ್ಟನು ಕಣ್ಣೀರಿಟ್ಟನು ಸಂಗಮಕ್ಷೇತ್ರಕೆ ಸಾಗಿದನು ॥ ೨೬ ॥

ಕಲ್ಯಾಣವು ತಾ ಪ್ರಣತೆಯಾಯ್ತು ಭಕ್ತಿ ತೈಲವಾದನು ಬಸವಣ್ಣ
ಸಲ್ಲೀಲೆಯಲಿ ಪೂರ್ಣಜ್ಞಾನದ ಬತ್ತಿಯಾದ ಚನ್ನಬಸವಣ್ಣ
ಅಲ್ಲಮಪ್ರಭುಗಳು ಜ್ಯೋತಿಯಾದರು ಆರುಸ್ಥಳದ ಪ್ರಭೆ ಬೆಳಗಿತ್ತು
ಕಲ್ಯಾಣ ವಿಪ್ಲವಗೊಂಡಿತು ಪ್ರಣತೆಯು ಒಡೆಯಿತು ಜ್ಯೋತಿಯು ಬೈಲಾಯ್ತು॥೨೭॥

ಲಕ್ಷದ ಮೇಲೆ ತೊಭಂತ್ತಾರು ಸಾವಿರ ಗಣಗಳ ನಿತ್ಯದ ತೃಪ್ತಿಯಲಿ
ಲಕ್ಷವು ಚಲಿಸದೆ ಭಕ್ತಿಯ ಮಾಡಿದ ಬಸವೇಶ್ವರ ಕಲ್ಯಾಣದಲ್ಲಿ
ಮೋಕ್ಷದ ಮಾರ್ಗದಿ ಗಂಗಾ – ನೀಲಾ ಕಣ್ಣಾಗಿದ್ದರು ಬಾಳಿನಲಿ
ರಕ್ಷಣೆಗಾಗಿ ಕೂಡಲಸಂಗನು ನಿಂತಿದ್ದನು ದಿನ ರಾತ್ರಿಯಲಿ ॥ ೨೮ ॥

ಬಸವಣ್ಣನವರು ಶುದ್ಧ ಸಿದ್ಧ ಸಮೃದ್ಧ ಸಮಾಜವ ಕಟ್ಟಿದರು
ವಸುಧಿಯೊಳಗೆ ವರವೀರಶೈವ ಮತ ಉದ್ಧಾರವನು ಮಾಡಿದರು
ನಿತ್ಯವ್ರತ ಕೃತಿ ವೀರರು ಅಂತ್ಯಜರಿಗೆ ಅಬಲರಿಗೆ ರಕ್ಷಕರು
ಸತ್ಯವನರಿದಾ ನಿಶ್ಚಿಂತರು ಈ ಮರ್ತ್ಯವನರಿದಾ ಮಹಂತರು ॥ ೨೯ ॥

ನ್ಯಾಯ ನಿಷ್ಠುರರು ವಿನಯ ಶೀಲರು ಭಕ್ತಿ ಭಂಡಾರಿಯಾದವರು
ಧ್ಯೇಯವಾಧಿ ಸಾಮಾಜಿಕ ಆರ್ಥಿಕ ಧಾರ್ಮಿಕ ನೀತಿಯ ನುಡಿದರು
ವೃತ್ತಿಸ್ವಾತಂತ್ರ್ಯ ವಕ್ತಿಸ್ವಾತಂತ್ರ್ಯ ಸಂಘಸ್ವಾತಂತ್ರ್ಯ ಕೊಟ್ಟಿಹರು
ಸೂಕ್ತಮಾತು ಸಹಬಾಳು ಸಮಪಾಲು ಸರ್ವೋದಯ ಸಾಧಕರು ॥ ೩೦ ॥

ಮೇಲು ಜಾತಿಗಳ ಸ್ವತ್ತಾಗಿದ್ದ ಧರ್ಮದ ಬಾಗಿಲು ತೆರೆದವರು
ಬಾಳಿನ ಬೆಳಕಲಿ ಆತ್ಮೋನ್ನತಿಯನು ಸಾಧಿಸಿಕೊಳ್ಳಲು ಸಾರಿದರು
ಬಾಲರು ವೃದ್ಧರು ಸರ್ವರು ಧರ್ಮಕೆ ಸಮಾನರೆಂದು ಪೇಳಿದರು
ಬಾಲೆಯರನು ಸಹ ಮೇಲಕೆ ಕರೆದು ಮನ್ನಣೆಯನ್ನು ಕೊಟ್ಟಿಹರು ॥ ೩೧ ॥

ಕೊಲ್ಲುವವನೆ ಮಾದಿಗನವ ಹೊಲಸು ತಿಂಬುವನೇ ಹೊಲೆಮನದವರು
ಇಲ್ಲಿ ಸಲ್ಲುವರಲ್ಲಿ ಸಲ್ಲುವರು ಎಂಬ ತತ್ವವನು ತಿಳಿಸಿದರು
ಕಾಯಕದಿಂದಲೇ ಕುಲಗಳ ಕಟ್ಟಿದ ಕಾರಣ ಪುರುಷರಾಗಿಹರು
ಕಾಯದ ಮೇಲೆ ಕುಲವನು ಎಣಿಸದೆ ಗುಣಕಾದರ್ಶವ ಕೊಟ್ಟಿಹರು ॥ ೩೨ ॥

ವರ್ಣಬೇಧಗಳು ಲಿಂಗಬೇಧಗಳು ಮಹಾಶಾಪವೆಂದರುಹಿದರು
ಪೂರ್ಣವಾಗಿ ಶಿವಶಕ್ತಿ ಕೊಟ್ಟು ಸಲಕರಿಗೆ ಲೇಸನೆ ಬಯಸಿದರು
ಹೆಣ್ಣು ಗಂಡು ಅಂತ್ಯಜ ಹಾರುವನೆಂಬುವ ಬೇಧವನು ಬಿಡಿಸಿದರು
ಮಾನ್ಯತೆಯಲಿ ಸತ್ಯಂ ಶಿವಂ ಸುಂದರಂ ಎಂಬುದನ್ನು ತಿಳಿಸಿದರು ॥ ೩೩ ॥

ನುಡಿಯಲಿ ಎಚ್ಚತ್ತಾ ನಡೆ ತಪ್ಪಲು ಹಿಡಿದಿಹ ಲಿಂಗವು ನಾಗರವು
ಬಿಡದಾಚಾರವು ಸ್ವರ್ಗವು ಸರ್ವಕೆ ಧರ್ಮವೇ ಮೂಲ ಕಾರಣವು
ನುಡಿ ಸತ್ಯವಿರೆ ದೇವಲೋಕವು ಮೃದುವಚನಗಳೇ ಜಪ ತಪವು
ಒಡಲಂತರಂಗದ ಬಹಿರಂಗದ ನಿಜ ನೀತಿಯ ಬೋಧಿಸಿದಾ ಗುರುವು ॥ ೩೪ ॥

ಸತ್ಯ ಶುದ್ಧ ಕಾಯಕವೇ ಕೈಲಾಸವು ಎಂಬುವ ತತ್ವವ ತಿಳಿಸಿದರು
ನಿತ್ಯ ಕಾಯಕದಿ ಕುಲಬೇಧವಿಲ್ಲದೆ ಮೇಲು – ಕೀಳುತನ ಕಳೆದಿಹರು
ಭಕ್ತರಾಗಲಿ ಗುರುವಾಗಿರಲಿ ಜಂಗಮರೂ ತಾವಾದವರು
ಮುಕ್ತಮನದಿ ಕಾಯಕವನು ಮಾಡಿ ದುಡಿದುಣ್ಣಲು ಬೇಕೆಂದಿಹರು ॥ ೩೫ ॥

ನುಡಿದರೆ ಮುತ್ತಿನ ಹಾರವು ಶಿವ ಮೆಚ್ಚಹುದೆಂದನಬೇಕೆಂದವರು
ನುಡಿ ಕನ್ನಡದಲಿ ವೇದ ಉಪನಿಷತ್ ಸಾರಸಂಗ್ರಹವ ಮಾಡಿದರು
ಒಡವ ಬಲ್ಲಿದಗೆ ಮನಕೆ ಮುಟ್ಟುವಂತಾ ಸತ್ವವನು ತೋರಿದರು
ನುಡಿ ನಾಡುಗಳಿಗೆ ಕುಲಗುರುವಾಗಿ ಆತ್ಮ ಸಾಹಿತ್ಯವ ಬೀರಿದರು ॥ ೩೬ ॥

ಜನಮನ ತಿದ್ದಲು ಕಟ್ಟಿದ ಸಂಘವು ಕೈಲಾಸದ ಸಿರಿ ತಂದಿತ್ತು
ಅನುಭವ ಮಂಟಪವೆಂಬುವ ಧಾರ್ಮಿಕ ಚೇತನ ನಾಮವ ಪಡೆದಿತ್ತು
ತನುಸ್ವಾತಂತ್ರ್ಯವ ಮನಸ್ವಾತಂತ್ರವ ಧರ್ಮಸ್ವಾತಂತ್ರ್ಯವ ಸಾರಿತ್ತು
ಚಿನುಮಯಮೂರುತಿ ಬಸವೇಶ್ವರನ ಸನ್ನುತ ಕೀರ್ತಿಯ ಬೆಳಗಿತ್ತು ॥ ೩೭ ॥

ಶಾಂತಿಯ ತವನಿಧಿ ಸಮತಾವಾದಿ ಸರ್ವಾರ್ಪಿತ ಶ್ರೀಶಿವಶರಣ
ಕ್ರಾಂತಿಯ ವೀರನು ಕರುಣಾಪಾರನು ಮಂಗಳದಾಯಕ ಬಸವಣ್ಣ
ಇಂತೀ ಕಥೆಯನು ಕೇಳಿದ ಜನಗಳಿಗೊದಗುವುದಾ ನಿಜಸುಖ ಪುಣ್ಯ
ಸಂತಸದಿಂದಲಿ ಬರೆದು ಹಾಕಿದನು ಮುದ್ದು ಬಸವ ಕವಿ ತಾ ಧನ್ಯ ॥ ೩೮ ॥

– ಕೃತಿ: ಬಸವಣ್ಣ ನಿನ್ನ ಹೆಸರು ......

***

ಗುರುವನ ಸ್ಮರಿಸಿ ಭರದಿ ಪೇಳುವೆನು

॥ ಅಂತರ ॥
ಗುರುವಿನ ಸ್ಮರಿಸಿ ಭರದಿ ಪೇಳುವೆನು ಗುರುಬಸವೇಶನ ಕಥಾಸಾರ
ಶರಣ ಜೀವನದ ವಿಸ್ತಾರ ಆಗಿತ್ತು ಜಗವೆಲ್ಲ ಪಾಪದ ಆಗರ,
ಬೇಕಿತ್ತು ಆಗ ಶಿವನವತಾರ ॥

ನೊಂದು ಬೆಂದ ಜನ ಅತ್ತು ಕರೆದರು ಮರ್ತ್ಯಕೆ ಬಾರೋ ಪರಮೇಶ್ವರ
ಆಗಿದೆ ಬಾಳೆಲ್ಲ ನಿಸ್ಸಾರ ಬೇಗ ಬಾರೋ ದೀನೋದ್ಧಾರ ॥

॥ ಇಳವು ॥
ಸ್ವಜನರ ಮೊರೆಗೆ ಓಗೊಟ್ಟು ಶಿವ ನಿರಾಕಾರವನು ಬಿಟ್ಟು
ಸಾಕಾರ ರೂಪವನು ತೊಟ್ಟು ಭುವಿಗಿಳಿದುದ್ಧೇಳ್ವೆ ಒಳಗುಟ್ಟು
ನಾಡೊಳಗೆ ಶಿವಭಕ್ತಿ ಸೂರಿ ಬೆಳಗಬೇಕಿತ್ತು ಆಗ ಬಾಗೇವಾಡಿ
ದಂಪತಿಗಳಿರ್ವರು ಕೂಡಿ ಶಿವ ಮಗುವ ಕೊಡು ಎಂದು ಹಾಡಿ
ಬೇಡಿದರು ಹರಗೆ ಕೈಮಾಡಿ ಶಿವ ಬಾರೊ ಬೇಗ ಓಡೋಡಿ
॥ ಚಾಲ ॥
ಸ್ಮಾರ್ತಬ್ರಾಹ್ಮಣ ಮತದವರು ಮಾದರಸ ಮಾದಲಾಂಬೆಯರು

॥ ಅಂತರ ॥
ಹಗಲಿರುಳೆನ್ನದೆ ಮಗನ ಚಿಂತೆಯಿಂ ಮಾದಲಾಂಬಿಕೆಯು ಮರುಗಿದಳು
ರಾತ್ರಿ ಒಂದು ದಿನ ಮಲಗಿದಳು, ಜಡದೇಹವು ತಾ ಮಲಗಿರಲು,
ಮನದಲಿ ಶಿವನಾಮ ಬಿಡದಿಹಳು ॥
ಎಡ ಬಿಡದಲೆ ಶಿವಮಂತ್ರವ ಪಠಿಸಲು ಶಿವಕರುಣವ ತಾ ಪಡೆದಿಹಳು,
ಹೊಳೆವ ಜ್ಯೋತಿಯಂ ನೋಡಿದಳು
ಗರ್ಭಧಾರಣ ಮಾಡಿದಳು ಶಿವಾನಂದದಿ ಮೈಮರೆದಿಹಳು ॥
ಒಂದ್ಸಾವಿರ್ದ ಒಂದನೂರ ಆರನೆ ದಿನದಂತು ಭಾಗ್ಯ ಭಾಸ್ಕರನು ಮೂಡಿದನು
ಮೃರ್ತ್ಯದ ಕತ್ತಲೆ ಹರಿಸಿದನು ತಾಯ್ಸಿರಿ ಮಡಲೊಳಗೊಪ್ಪಿದನು ॥

ಮಂದಸ್ಮಿತನಾಗಿ ಮಗ್ಗಲೊಳಾಡುವ ಮುದ್ದಿನ ಮಗುವ ತಾಯ್ನೋಡಿದಳು
ಹರುಷದಿ ಗಂಡಗೆ ತೋರಿದಳು ಮುತ್ತೈದಿಯರನು ಕರೆಸಿದಳು ॥

ಪುರದ ನಾರಿಯರೆಲ್ಲ ಹರುಷದಿ ಭರದಿಂದ ಮನೆಯ ತುಂಬ ತಾವ್ನೆರೆದಿಹರು
ಭಾನುಪ್ರಕಾಶದಿ ಹೊಳೆಯುವ ಕೂಸನು ಭವ್ಯ ತೊಟ್ಟಿಲೊಳ್ಹಾಕಿದಳು,
ಹೆಸರಿಗಾಗಿ ತಾಯ ಕೇಳಿದರು ॥

ಸಂಗಮೇಶ್ವರನು ಸ್ವಪ್ನದಿ ಬಂದು ನುಡಿದ ವಾಕ್ಯವನೆ ಹೇಳಿದಳು
ನೆಪಮಾತ್ರಕೆ ನಮ್ಮ ಮಗನಿಹನು, ಜಗದ ಗುರುವೆ ತಾ ಜನಿಸಿದನು
ಭವಿಗಳ ಭವವನು ಕಳೆಯ ಬಂದೀತಗೆ ಬಸವನೆಂದ್ಹೆಸರಿಡಲು ಹೇಳಿದಳು ॥

॥ ಜೋಗುಳ ॥
ಜೋ ಜೋ ಬಸವಣ್ಣ ಭಾಗ್ಯದ ನಿಧಿಯಣ್ಣ ಸದ್ಭಕ್ತಿ ಸುಧೆಯಣ್ಣ ಜೋ ಜೋ
ಜೋ ಜೋ ಮುಕ್ಕಣ್ಣ ನೀನಾಗು ಜಗದಣ್ಣ ಎಂದು ಜೋಗುಳವನು ಪಾಡಿದಳು
ಬಸವನ ಜಸವನು ಮಿಗೆ ಕೊಂಡಾಡುತ ತಮ್ಮ ಗ್ರಹಗಳಿಗೆ ತೆರಳಿದರು ॥

ಬಿದಿಗಿಯ ಚಂದ್ರನ ತೆರದಲಿ ಬಸವಣ್ಣ ಬೆಳದು ಬಾಲಲೀಲೆ ತೋರಿದನು
ಸರ್ವರ ಮನವನು ಸೆಳೆದಿಹನು, ಉಪನಯನ ಕಾರ್ಯವ ಬೇಗ ಮುಗಿಸಲೆಂದು
ಮಾದರಸ ಮನದಲಿ ಮಾಡಿದನು ॥

॥ ಇಳವು ॥
ಉಪನಯನ ಸಿದ್ಧತೆಯ ನಡೆಸಿ, ಬಂಧು ಬಳಗೆಲ್ಲರನು ಕರೆಸಿ
ಮನೆಮಾರುಗಳನು ಶೃಂಗರಿಸಿ, ಮಂಚವನು ಪಟ್ಟಸಾಲೆಗಿಡಿಸಿ
ಆಚಾರ್ಯ ಭಟ್ಟರನು ಕರೆಸಿ, ಬಸವನಿಗೆ ಜಳಕವನು ಮಾಡಿಸಿ
ಮೈಯಲ್ಲಿ ಗಂಧವನು ಪೂಸಿ, ತಕ್ಕಂತೆ ಮಂತ್ರವನು ಪಠಿಸಿ

॥ ಚಾಲ ॥
ಆಗ ಆಚಾರ್ಯನು ಕೊರಳಿಗೆ ಜನಿವಾರ ಹಾಕಲು ಕೈ ಮುಂದೆ ಚಾಚಿದನು
ಬಾಲಬಸವನಿದ ನೋಡಿದನು ಮಾಡುವದೇನೆಂದು ಕೇಳಿದನು ॥

॥ ಅಂತರ ॥
ಬ್ರಾಹ್ಮಣ ದೀಕ್ಷೆಯ ಕೊಡುವೆವು ನಾವೆಂದು ಆಚಾರ್ಯ ನಗುತಲಿ ಹೇಳಿದನು
ಹಾಕಲು ಕೈ ಮುಂದೆ ಮಾಡಿದನು ಮಂತ್ರವ ವಟ ವಟ ವದರಿದನು ॥

॥ ಇಳವು ॥
ಎನಗೇತಕಯ್ಯ ಈ ಪಾಶ? ಎನ್ನೊಳಗೆ ಇಹನು ಲಿಂಗೇಶ
ಎದ್ಹೇಳ್ದ ಬಾಲಬಸವೇಶ, ಎಲ್ಲರಿಗಾಯ್ತು ಬಹುಕ್ಲೇಶ

॥ ಚಾಲ ॥
ಚಕ್ಕನೆ ಎದ್ದು ಅಕ್ಕನಾಗಮ್ಮನ ಪಕ್ಕಕ್ಕೋಡ್ದ ಬಸವೇಶ

॥ ಅಂತರ ॥
ಸಿಟ್ಟಿನಿಂದ ವಟಗುಟ್ಟುತ ಭಟ್ಟರು ಒಟ್ಟಾಗಿ ಮೇಲಕೆ ಎದ್ದಿಹರು
ಜುಟ್ಟು ಜನಿವಾರವ ತೀಡಿದರು, ಕಟ್ಟಳೆ ಮಿರಿದ ಭ್ರಷ್ಟನಿವನಿಗೆ
ಬಹಿಷ್ಕಾರವೆಂದು ಸಾರಿದರು ॥

ಅಂಜದೆ ಅಳುಕದೆ ಚಂದದಿ ಬಸವನು ತಂದೆ ತಾಯ್ಗಳಿಗೆ ನಮಿಸಿದನು
ಅಕ್ಕನ ಕೈ ಹಿಡಿದೆಳದಿಹನು, ಮಾವ ಶಿವದೇವಗೆ ನೋಡಿದನು,
ಸಂಗಮ ಕ್ಷೇತ್ರಕೆ ಗಮನಿಸಿದನು ॥

ವೇದಶಾಸ್ತ್ರ ಆಗಮಗಳ ವಿದ್ಯೆಯ ಶಿವಸ್ವಾಮಿಯು ದಿನ ಕಲಿಸುವನು
ಮಾವ ಅಕ್ಕಗಳ ಅಕ್ಕರತೆಯಲಿ ಕಾರಣಿಕನು ತಾ ಬೆಳೆಯುವನು
ಹೆಣ್ಣಿಗೆ ಶೂದ್ರಳು ಎನ್ನುವ ವೈದಿಕ ಕರ್ಮದ ಕಥೆಯನು ಕೇಳಿದನು ॥
ವಿಶ್ವಧರ್ಮ ಸಂಸ್ಥಾಪನೆಗೋಸುಗ ಅನ್ನ ನೀರುಗಳ ತೊರೆದಿಹನು
ಅಖಂಡ ಚಿಂತನ ಮಾಡಿದನು, ಹೆಣ್ಣುಗಂಡಲ್ಲದ ಬೆಳಗುವ ಬಯಲಿಗೆ
ಲಿಂಗವೆಂಬ ಹೆಸರಿಟ್ಟಿಹನು, ಕೊರಳಲಿ ತಾನೇ ಧರಿಸಿಹನು ॥

ಲಿಂಗ ಪ್ರಕಾಶದ ಮಂಗಲ ಪ್ರಭೆಯನು ಮರ್ತ್ಯದಿ ಬೆಳಗಿಸಬೇಕಿತ್ತು
ಅವತಾರ ಅದಕಾಗಿ ಆಗಿತ್ತು, ಕಲ್ಯಾಣದ ಕರೆ ಬಂದಿತ್ತು
ಅಕ್ಕನಾಗಮ್ಮಗಿದು ಗೊತ್ತಿತ್ತು ॥

॥ ಇಳವು ॥
ಬಸವನ ಮಾವ ಬಲದೇವ, ಅಳಿಯನ ಮೇಲೆ ಬಲು ಜೀವ
ಬಿಜ್ಜಳ ರಾಜನ ಒಲವ ಪಡೆದಿದ್ದ ಮಂತ್ರಿ ಬಲದೇವ
ಕೂಡಿದ್ದು ಅವು ಎರಡು ಜೀವ ಎಂದೆಂದು ಅಗಲದ ಭಾವ
ರಾಜನ ತಂಗಿ ನೀಲಾಂಬ ಮಂತ್ರಿಯ ಮಗಳು ಗಂಗಾಂಬ

॥ ಚಾಲ ॥
ದೇಹ ಬೇರಾದರು ನೀಲ-ಗಂಗ ಎಂಬ ಒಪ್ಪಾದ ಹೆಸರು ಪಡೆದಿದ್ದರು,
ಸಂಗಮ ಕ್ಷೇತ್ರಕೆ ಹೊರಟಿದ್ದರು

॥ ಅಂತರ ॥
ಬಂಧುಗಳೊಡಗೂಡಿ ಬಂದಾನು ಬಲದೇವ ಸಂಗಮ ಕ್ಷೇತ್ರಕೆ ತ್ವರಿತದಲಿ
ಅಳಿಯನ ಕಾಣುತ ಭರದಲ್ಲಿ, ಬಹುಜನ್ಮ ಸಾಫಲ್ಯವಾಯ್ತಲ್ಲ ಎಂದು
ಹಿಗ್ಗಿದನವನು ಮನದಲ್ಲಿ ॥
ಅಕ್ಕನಾಗಮ್ಮನು ಅಕ್ಕರದಿಂದಲಿ, ಅಪ್ಪಿ ಸ್ವಾಗತವ ಮಾಡಿದಳು
ಕಾಲಿಗೆ ನೀರನು ಕೊಟ್ಟಿಹಳು, ಗಂಗಾ-ನೀಲಾ ಬನ್ನಿರಿ ಎಂದು
ಹಿಗ್ಗಿ ಒಳಗೆ ಕರೆದೊಯ್ದಿಹಳು ॥
ಓರೆನೋಟದಲಿ ನಾರಿಯರಿಬ್ಬರು ಧೀರ ಬಸವನನು ನೋಡಿದರು
ಮನಸ್ಸಿನಲ್ಲಿ ತಲೆಬಾಗಿಹರು, ಹೃದಯದಲ್ಲಿ ಸ್ಥಲ ಕೊಟ್ಟಿಹರು
ತಮ್ಮನ್ನೇ ತಾವ್ ಮರೆದಿಹರು ॥

ಬಲದೇವ ಶಿವದೇವ ಅಣ್ಣ – ತಮ್ಮರು ಕೂಡಿ ಯೋಚನೆಯ ಮಾಡಿದರು
ಅಕ್ಕನಾಗಮ್ಮನಿಗೆ ತಿಳಿಸದಿರು, ಲಗ್ನ ಕಾರ್ಯಕೆ ಬಸವೇಶನನ್ನು
ಒಪ್ಪಿಸಿರೆಂದು ಹೇಳಿದರು ॥
ಆತ್ಮ ವಿಶ್ವಾಸದ ಅಕ್ಕನಾಗಮ್ಮನು ವಿಷಯವ ತಮ್ಮಗೆ ತಿಳಿಸಿದಳು
ಒಪ್ಪಿಗೆಗಾಗಿ ಕಾದಿಹಳು, ಗೃಹಸ್ಥನಾಗಿ ಲೋಕದ ಗುರುವಾಗಿ,
ಹೆಣ್ಣಿನ ಕಣ್ಣೀರೂರಸೆಂದಳು ॥
ಅಕ್ಕನ ಮಾತನು ಮಿಕ್ಕಿ ನುಡಿಯದೆ, ಒಪ್ಪಿಗೆ ಬಸವೇಶ ಕೊಟ್ಟಿಹರು
ನೀಲಾ – ಗಂಗಾಂಬಿಕೆಯರು ನಮಿಸಿದರು, ಬಂಧುಗಳುಬ್ಬಿ ಕುಣಿದಾಡಿದರು,
ಅಂದೇ ಕಲ್ಯಾಣಕೆ ಗಮಿಸಿದರು ॥
ಕಲ್ಯಾಣ ರಾಜ್ಯದಿ ಬಿಜ್ಜಳರಾಜನು ಬಸವಣ್ಣ ಬಂದುದ ಕೇಳಿದನು
ಮನದೊಳು ಸಂತಸವ ತಾಳಿದನು, ಹರಷಿದಿ ಸ್ವಾಗತ ಕೋರಿದನು,
ದರ್ಬಾರಕೆ ಬರಮಾಡಿದನು ॥

ಬಲದೇವರೊಡಗೂಡಿ ಬಸವಣ್ಣ ಬರುವದು ಭೂಪ ಬಿಜ್ಜಳನು ನೋಡಿದನು
ಸಿಂಹಾಸನ ಬಿಟ್ಟು ತಾನಿಳಿದಿಹನು, ಬಾರಯ್ಯ ಬಸವಣ್ಣ ರಾಜ್ಯವು ನಿನ್ನದಣ್ಣ
ಎಂದು ಉತ್ಸಾಹದಿ ಹೇಳಿದನು, ಉನ್ನತಾಸನದಿ ಕುಳ್ಳಿರಿಸಿದನು ॥

ಕುಶಲ ಪ್ರಶ್ನೆಯನ್ನು ಮಾಡುತ ಬಿಜ್ಜಳ, ಕುಲ ಕುಲ ನಗುತಲಿ ಹೇಳಿದನು
ಹೃದಯದ ಬಾಗಿಲು ತೆರೆದಿಹನು, ಕರಣಿಕನಾಗಿ ನಮ್ಮಯ ಒಡನಿದ್ದು
ಮುನ್ನಡಸಿರೆಂದು ಕೇಳಿದನು ॥
ನೀತಿ ನಿರ್ಮಲ ನಿಷ್ಪಕ್ಷಪಾತದ ರಾಜನ ಹೃದಯವ ನೋಡಿದನು
ಕರದೊಳು ಕರವನು ಇರಿಸಿದನು, ಜನಹಿತ ಕಾರ್ಯವ ಮನದಲಿ ನೆನೆಯುತ
ಬಸವನರಾಜ ತಾನೊಪ್ಪಿದನು ॥
ಭಳಿರೆ ಭಳಿರೆ ಭಾಷು ಬಸವಣ್ಣ ಎನ್ನುತ ಬಿಜ್ಜಳರಾಜ ಕೊಂಡಾಡಿದನು
ಆನಂದದಿ ಮೈ ಮರೆದಿಹನು, ನಮ್ಮಯ ರಾಜ್ಯಕೆ ಸರಿ ಮಿಗಿಲಿಲ್ಲೆಂದು
ಊರೊಳು ಡಂಗುರ ಹೊಯ್ಸಿಸಿದನು ॥
ಬಸವರಾಜನ ಮದುವೆ ಕಾರ್ಯವು ಸಂಭ್ರಮದಿಂದ ಸಾಗಿತ್ತು,
ಕಲ್ಯಾಣ ಜನತೆಯೆಲ್ಲ ಸೇರಿತ್ತು
ಬಿಜ್ಜಳ ಭೂಪನ ಮಂತ್ರಿ ಮಾರ್ಜಲವು ಅಲ್ಲಿಯೇ ಬಂದು ನೆಲಸಿತ್ತು,
ಒಂದಾಶ್ಚರ್ಯವು ನಡೆದ್ಹೋಯ್ತು ॥
ಅಕ್ಕಗಂಗಾಂಬಿಯ ತೆಕ್ಕಿಲಿ ನೀಲಮ್ಮ ದುಃಖದಿ ಮುಖವನು ಇಟ್ಟಿಹಳು
ನಡುಗುವ ಧ್ವನಿಯಿಂದ ಹೇಳಿದಳು, ಇಬ್ಬರ ಸೇವೆಯ ಭಾಗ್ಯವು ಇರಲೆಂದು
ದೊಪ್ಪನೆ ಧರೆಯಲಿ ಬಿದ್ದಿಹಳು ॥
ಗಾಭರಿಗೊಳ್ಳುತ ಬಿಜ್ಜಳ ಭೂಪನು ದುಃಖಸಾಗರದಿ ಮುಳುಗಿದನು
ನೀಲಾ ಎಂದು ಚೀರಿದನು, ಬಸವರಾಜನನು ನೋಡಿದನು
ತಂಗಿಯ ಪ್ರಾಣವ ಉಳಿಸಬೇಕೆಂದು ಹಣೆಯನು ಪಾದದಲಿ ಇಟ್ಟಿಹನು ॥

॥ ಇಳವು ॥
ಕರುಣವು ತಾಳಿ ನಾಗವ್ವ ಮುನಿಯದಿರು ಎನ್ನ ಗುರುಬಸವ
ನಾಬಲ್ಲೆ ನಿನ್ನ ಮನದ ಭಾವ
ನಿನಗಿಲ್ಲ ಸಂಸಾರದ ಮೋಹ, ಧರೆಯಲ್ಲಿ ಬೆಳಗಿಸಲು ಸೇವೆ
ಪಿಡಿ ನೀನು ನೀಲಮ್ಮನ ಕರವ, ಎಂದ್ಹೇಳ್ದ ಅಕ್ಕನಾಗವ್ವ
ಸಮ್ಮತಿಯ ಕೊಟ್ಟ ಗುರುಬಸವ ॥

॥ ಚಾಲ ॥
ಹರುಷದಿ ಜನರೆಲ್ಲ ಹರಸಿದರು, ಅರಳಮಲ್ಲಿಗೆ ಮಳೆ ಸುರಿಸಿದರು
ಲಗ್ನ ಕಾರ್ಯವನು ಮುಗಿಸಿದರು, ಉಂಡು ಸಂತಸದಿ ತೆರಳಿದರು ॥

ಕರಣಿಕ ಕಾಯಕ ಬಸವಣ್ಣ ಮಾಡುತ ಬದ್ಧಿ ಕುಶಲತೆ ತೋರಿದನು
ತಪ್ಪಿದ ಲಕ್ಕವ ತಿದ್ದಿಹನು, ಸ್ವಾರ್ಥಿಗಳಾಟವ ಬಯಲಿಗೆ ಮಾಡುತ
ರಾಜನ ಮೆಚ್ಚಗೆ ಪಡೆದಿಹನು ॥

ಬಸವಣ್ಣನೇಳ್ಗೆಯ ಜಸವನು ಕಾಣುತ, ಮನದೊಳು ಬೆಂಕಿಯ ಕಾರುವರು
ಆಸ್ಥಾನ ಪಂಡಿತರಾದವರು, ತಪ್ಪನು ಹುಡುಕಲು ಕಾದಿಹರು,
ಭಟ್ಟ ಮಂಚಣ್ಣ ಮುಂತಾದವರು ॥

॥ ಇಳವು ॥
ದರ್ಬಾರ ಒಂದು ದಿನ ಇತ್ತು, ಶಿವಲೀಲೆ ಅದಾರಿಗೆ ಗೊತ್ತು ?
ಕಂಚಿನ ಲಿಪಿಯು ಸಿಕ್ಕಿತ್ತು, ಓದುವ ಕೆಸ ನಡೆದಿತ್ತು
ಆವರಿಸಿ ಆಗ ಬಂದಿತ್ತು, ಪಂಡಿತರೆಲ್ಲರಿಗೆ ಕುತ್ತ
ಆರಾರು ನುಂಗದ ತುತ್ತು, ಎಲ್ಲಾರ ಬಾಯಿ ಬಂದಾಯ್ತು
ದರ್ಬಾರ ಮೌನದೊಳಗಿತ್ತು, ಅಣ್ಣನ ಸರದಿ ಬಂದಿತ್ತು
ಬಸವನ ಮಹಿಮೆಯ ಸಂಪತ್ತು, ಜಗಕೆಲ್ಲ ತಿಳಿಬೇಕಿತ್ತು
ಕಾಲವು ಒದಗಿ ಬಂದಿತ್ತು ಓದುವ ಕೆಲಸ ಮುಗಿದಾಯ್ತು

॥ ಚಾಲ ॥
ದಿವ್ಯ ಜ್ಞಾನದಿಂ ನೋಡಿದನು ರಾಜನಿಗೆಲ್ಲವ ಪೇಳಿದನು

॥ ಅಂತರ ॥
ಅಣ್ಣನ ಮಾತನು ಅಳೆದು ನೋಡುವೆನೆಂದು ಆಳುಗಳಾಗಲೆ ಕರೆಸಿದನು
ಹೇಳಿದ ಗುರುತನು ತೋರಿದನು, ರಂಗ ಮಂಟಪವನು ಅಗಿಸಿದನು,
ಅಗಣಿತ ದ್ರವ್ಯವ ನೋಡಿದನು ॥
ಆಶ್ಚರ್ಯಪಡುತಲಿ ಆಸ್ಥಾನದವರೆಲ್ಲ ಒಬ್ಬರೊಬ್ಬರ ಮುಖ ನೋಡಿದರು

ಹೌಹಾರಿ ಎಲ್ಲರು ನಿಂತಿಹರು, ಆಳಿಗಾಲ ಬಂತೆಂದು ಬಗೆದಿಹರು,
ಅಪಮಾನವಾಗಿ ಮರುಗಿದರು ॥

॥ ಇಳುವು ॥
ತೋರಿದನು ರಾಜ ಸಂತಸವ, ಘನಲೀಲೆ ತೋರಿದನು ಬಸವ
ನಾನೊಲ್ಲೆನಯ್ಯ ಈ ಧನವ, ಸ್ವೀಕರಿಸು ಮಹಾನುಭಾವ
ತೆರವಾದ ಮಹಾಮಂತ್ರಿ ಪದವ ಆರೋಹಿಸಯ್ಯ ಶ್ರೀಬಸವ

॥ ಚಾಲ ॥
ಎಂದು ರಾಜ ಕೈ ಹಿಡಿದಿಹನು, ಮಹಮಂತ್ರಿ ಪಟ್ಟವ ಕಟ್ಟಿದನು,
ರಾಜ್ಯದಿ ಡಂಗುರ ಹೊಯ್ಯಿಸಿದನು

॥ ಅಂತರ ॥
ಮಹಾಮಂತ್ರಿ ಕೆಲಸವ ಬಸವಣ್ಣ ನಡೆಸುತ ಅನ್ನದಾಸೋಹವ ಇರಿಸಿದನು
ದಯವೇ ಧರ್ಮವೆಂದು ಸಾರಿದನು, ದೀನರ ಮೇಲ್ದಯ ತೋರಿದನು,
ಎಲ್ಲರಣ್ಣನಾಗಿ ಬಾಳಿದನು ॥
ಜಾತಿಯ ಭೂತದ ಆಟವ ನೋಡುತ ಮನದೊಳು ಕಸವಿಸಿಗೊಂಡಿಹನು
ಅದಕಾಗಿ ದೃಢವ್ರತ ತೊಟ್ಟಿಹನು, ಅನುಭವ ಮಂಟಪ ಕಟ್ಟಿದನು,
ಸರ್ವಸಮಾನತೆ ಸಾರಿದನು ॥

ಶಿವಯೋಗ ಸೂತ್ರವನು ರಚಿಸಿ, ಕುಲ ಜಾತಿ ಭೀತಿಗಳ ಕೆಡಸಿ
ಅನುಭಾವ ತತ್ವ ತುತ್ತಿಟ್ಟು, ಶಿವದೀಕ್ಷೆ ಎಲ್ಲರಿಗೂ ಕೊಟ್ಟು
ಕೀಳೆಂಬ ಕಲ್ಪನೆಯ ಬಿಡಿಸಿ ಮೇಲೆಂಬ ಹಮ್ಮನು ಅಳಿಸಿ
ಭಕ್ತಿಯ ಪಥವನು ತಿಳಿಸಿ, ಐಕ್ಯಾದ ಠಾವನು ತೋರಿಸಿ
ವರವೀರಶೈವದ ಜ್ಯೋತಿ, ಕರುಣಾಳು ಗುರುಬಸವ ಮೂರ್ತಿ
ಹರಡಿತ್ತು ಕಲ್ಯಾಣದ ಕೀರ್ತಿ, ಅಣ್ಣನ ಸಹೃದಯ ಮೂರ್ತಿ

॥ ಚಾಲ ॥
ದರ್ಶನಕ್ಕಾಗಿ ಬರುತಿಹನು ಶಿವಗಣರೆಲ್ಲರು ನೆರದಿಹರು

॥ ಅಂತರ ॥
ಶರಣರ ಬರವನು ಬಸವಣ್ಣ ನೋಡುತ ಮನದಲಿ ಹಿರಿ ಹಿರಿ ಹಿಗ್ಗಿದನು
ವೀರಶೈವ ಧರ್ಮ ಧ್ವಜ ನಿಲ್ಲಿಸಿದನು, ಜಗದ್ಗುರುವಾಗಿ ಮೆರೆದಿಹನು
ಕಲ್ಯಾಣ ಕೈಲಾಸವ ಮಾಡಿದನು ॥
॥ ಇಳವು ॥
ಜಂಗಮ ಜ್ಯೋತಿ ಪ್ರಭುದೇವ, ಕೂಡಲಸಂಗ ಗುರುಬಸವ
ಚಿಜ್ಯೋತಿ ಚನ್ನಬಸವಣ್ಣ, ಮಹಲಿಂಗ ಹಡಪದಪ್ಪಣ್ಣ

ಶಿವಯೋಗಿ ಸಿದ್ಧರಾಮಣ್ಣ, ಮಡಿವಾಳ ವೀರಮಾಚಣ್ಣ
ಶಿವಶರಣ ಕಿರಣ ಹರಳಯ್ಯ, ಕಿನ್ನರಿಯದೇವ ಬಮ್ಮಯ್ಯ
ಮಹಾತ್ಯಾಗಿ ಮೋಳಿಗಿ ಮಾರಯ್ಯ, ದಾಸೋಹಿ ನುಲಿಯ ಚಂದಯ್ಯ
ಗಣಾಚಾರಿ ಅಂಬಿಗ ಚೌಡಯ್ಯ, ಅಯ್ದಕ್ಕಿ ಕಾಯಕ ಮಾರಯ್ಯ
ಮಹಾಯೋಗಿ ಮಾದರ ಚನ್ನಯ್ಯ, ಅನುಭಾವಿ ಡೋಹರ ಕಕ್ಕಯ್ಯ

॥ ಚಾಲ ॥
ಇಂಥ ಶರಣರೆಲ್ಲ ಸೇರಿದರು, ಲಿಂಗ ಪ್ರಕಾಶವ ಬೀರಿದರು,
ಭುವನ ಸ್ವರ್ಗವನು ಸೃಜಿಸಿದರು

॥ ಅಂತರ ॥
ಅಕ್ಕಮಹಾದೇವಿ ಮುಕ್ತಾಯಿ ನೀಲಮ್ಮ ಗಂಗಮ್ಮ ಲಕ್ಕಮ್ಮ ಶರಣೆಯರು
ಲಿಂಗಮ್ಮ ಮಹಾದೇವಿ ಅಕ್ಕನಾಗಾಯಿ ತಾಯಿಕಲ್ಯಾಣಮ್ಮ
ಅನುಭವ ಮಂಟಪದೊಳಿಹರು, ಲಿಂಗವೆ ಪತಿಯೆಂದು ನಂಬಿಹರು,
ಕಾಯಕದೊಳು ಶಿವನ ಕಂಡಿಹರು ॥

ಶಿವಜ್ಞಾನ ಪಡಿಯಲಿಕ್ಕೆ ಸ್ತ್ರೀಯು ಪುರುಷರೆಂಬ ಬೇಧವೆ ಇಲ್ಲೆಂದು ತಿಳಿಸಿದನು
ಸ್ತ್ರೀಯರಿಗೆ ಸ್ವಾತಂತ್ರ್ಯ ಕೊಟ್ಟಿಹನು, ವಿಶ್ವಜ್ಯೋತಿಯಾಗಿ ಬೆಳಗಿದನು
ಅರಿದೊಡೆ ಶರಣ ಮರೆದೊಡೆ ಮಾನವ ಎಂಬ ಮಾನವ ನೀತಿ ಪೇಳಿದನು
ಆವ ಕುಲವಾದರು ಶಿವಭಕ್ತನೇ ಕುಲಜ ಎಂಬ ತತ್ವವನು ಸಾರಿದನು,
ಕುಲದ ಸಂಕೋಲೆಯ ಹರಿಸಿದನು ॥

ನಡೆದಂತೆ ನುಡಿದು, ನುಡಿದಂತೆ ನಡೆದು ಅಮೃತ ವಚನವ ರಚಿಸಿದನು
ಶಿವಶರಣರಿಗೆ ಉಣಬಡಿಸಿದನು ಕೂಡಲಸಂಗನೊಳು ಕೂಡಿದನು ॥

॥ ಇಳವು ॥
ಶಿವಯೋಗಿ ಚಂದ್ರ ನಿಸ್ಸೀಮ, ಸೇರಿದನು ನಿಜ ಶಾಂತಿಧಾಮ
ನುಡಿಯಲು ಗುರುಬಸವ ನಾಮ, ಪಾವನವಹುದು ಶತ ಜನುಮ
ಅರಳಿಸಿದ ಲಾವಣಿಯ ಕುಸುಮ ಶರಣರ ಕಂದ ಸಿದ್ಧರಾಮ

॥ ಚಾಲ ॥
ಜಯ ಜಯ ಜಯ ಜಯ ಜಯ ಗುರುಬಸವ
ನೀಡು ಎಲ್ಲರಿಗೂ ಶಿವಭಕ್ತಿ ಸುಖವ
ಜಯವೆಂದು ಪಾಡುವೆ ಮಂಗಲವ, ಬೇಗನೆ ಬಾರಯ್ಯ ಗುರುಬಸವ ॥

– ಕೃತಿ: ಬಸವಣ್ಣ ನಿನ್ನ ಹೆಸರು..

.***

ಜಗಜ್ಯೋತಿ ಬಸವೇಶ್ವರ

ಯದಾಯದಾಹಿ ಧರ್ಮಸ್ಯ ಗ್ಲಾನಿರ್ಭತಿ ಭಾರತೆಂಬೋಕ್ತಿಯನು ।
ನಂದಿಯೆ ಬಸವನ ಹೆಸರನು ಧರಿಸಿ ಸಿದ್ಧಿಸಿ ಸಿದ್ಧಿಸಿ ಭಾರತ ಬೆಳಗಿದನು ॥ ೧ ॥

ಶುದ್ಧಬ್ರಾಹ್ಮಣ ಮಾದರಸನ ಸುತ ಬಾಗೆವಾಡಿಯೊಳು ಜನಿಸಿದನು ।
ಬಿದಿಗೆಯ ಚಂದ್ರನ ತದುಪರಿ ಬೆಳೆದನು ಇಹಪರ ವಿದ್ಯೆಯ ಗಳಿಸಿದನು ॥ ೨ ॥

ಹದಗೆಡಿಸುವ ಖಿಲ ಮೂಲ ವಿಚಾರವ ಸದೆಬಡಿಯುವ ನಿಜತತ್ವವನು ।
ಮದಮತ್ಸರ ಮೋಹಾದಿ ಅಳಿಸುವ ಸದಸದ್ಗುರುವಿನ ಶೋಧವನು ॥ ೩ ॥

(ಚಾಲ)
ತಂದೆ ತಾಯಿ ಬಂಧು ಬಳಗವನು । ಮಾಯಾ ಮೋಹವನು ।
ಅಳಿದು ಮನೆಬಿಟ್ಟು ನಡೆದು ಹಿಡಿದನು । ಕೂಡಲ ಸಂಗಮ ದಾರಿಯನು ॥

ವಂದ್ಯ ಜಾತವೇದ ಮುನಿಯನ್ನು । ಮಾಡಿ ಸೇವೆಯನು ।
ಶಾಸ್ತ್ರ ವೇದಾಗಮ ಅಭ್ಯಾಸವನು । ಸಾಧಿಸಿದ ಆದಿ ಆತ್ಮನನು ॥

ಒಂದೇ ಇರುವ ಸರ್ವರಾತ್ಮವನು । ಮಾಡಿ ಭೇದವನು ।
ಜಾತೀಯತೆ ಅತಿ ದ್ವೇಷವನು । ನೋಡಿ ಮನದಿ ಬಹಳ ನೊಂದಿಹನು ॥

(ಏರ)
ಮೋದದಿ ಬ್ರಾಹ್ಮಣ ಧಾರ್ಮಿಕದೀಕ್ಷೆ । ಮಾದರಸನು ತಾ ಮಾಡುವದಕ್ಕೆ
ಪ್ರೇಮದಿ ಕರೆಸಿ ಹೇಳತಾರ ಬಸವಣ್ಣನ ॥
ನಂದಿಯೆ ಬಸವನ ಹೆಸರನು ಧರಿಸಿ ಸಿದ್ಧಿಸಿ ಭಾರತ ಬೆಳಗಿದನು ॥ ಚೌಕ ೧ ॥

ಸೊಟ್ಟಮೂರು ಎಳೆಕಟ್ಟಿದರೇನು । ನಿಷ್ಠೆಬೇಕು ನಿಜ ತಿಳಿಯುದಕೆ ।
ಮುಟ್ಟುವ ಗುರಿಯನು ಸ್ಪಷ್ಟ ತೋರಿಸುವ । ಶ್ರೇಷ್ಠ ತತ್ವಮತ ಧರಿಸುವಿಕೆ ॥ ೧ ॥

ನಷ್ಟವಾದ ವೀರಶೈವ ಶ್ರೇಷ್ಠಮತ । ಸೃಷ್ಟಿಸಿ ಪುನಃ ಉದ್ಧರಿಸುದಕೆ ।
ಶ್ರೇಷ್ಠ ಇಷ್ಟಲಿಂಗ ಕಟ್ಟಿ ನಡೆದನು । ಅಷ್ಟಾವರಣವ ತಿಳಿಯುದಕೆ ॥ ೨ ॥

ಅಷ್ಟರಲ್ಲಿ ಬಲದೇವ ಮಾವನು । ಮಗಳು ಗಂಗಾಬಿಕೆ ವರಿಸುದಕೆ ।
ಇಷ್ಟದಿಂದ ಕರೆಸಿದನು ಕಲ್ಯಾಣಕೆ । ಮಂತ್ರಿಪದವ ಒಪ್ಪಿಸುವದಕ್ಕೆ ॥ ೩ ॥

(ಚಾಲ)
ಬಲದೇವಮಾವ ಮಡಿದನು । ಅಳಿಯ ಬಸವನ ।
ಕರೆದುಕೊಟ್ಟಾನ ಮಂತ್ರಿಪದವನು । ಕಲ್ಯಾಣ ರಾಜ ಬಿಜ್ಜಳನು ॥

ಬಸವಣ್ಣ ಲಿಪಿ ಓದಿದನು । ನೆಲವ ಅಗಿಸಿದನು ।
,ಉತ್ತು ರತ್ನದ್ರವ್ಯ ತೆಗೆಸಿದನು । ಬಿಜ್ಜಳ ರಾಜ ಮೆಚ್ಚಿದನು ॥

ಕೀರ್ತಿಯ ಪಡೆದನು ಬಸವಣ್ಣ । ಮಾಡಿ ನಡೆಸಿಹ ಧಾರ್ಮಿಕ ಜ್ಞಾನ ।
ಮಂತ್ರಿಕಾರ್ಯದ ಮಾನ । ಪರಮಾರ್ಥ ಚಚಾಕೂಟವನು ॥

(ಏರ)
ಜಾತಿ ವಿಜಾತಿ ಭೇದವ ತೆಗೆದು । ನೀತಿಯೆ ನಿಜವಾದ ಜಾತಿಯು ಎಂದು ।
ಮಾತಿನ ಚರ್ಚೆಗೆ ರಚಿಸಿದನವನು ಅನುಭವ ಮಂಟಪವ ॥
ನಂದಿಯೆ ಬಸವನ ಹೆಸರನು ಧರಿಸಿ ಸಿದ್ಧಿಸಿ ಭಾರತ ಬೆಳಗಿದನು ॥ ಚೌಕ ೨ ॥

.ಅನುಭವ ಮಂಟಪ ಅಧ್ಯಕ್ಷತೆಯನು । ಅಲ್ಲಮಪ್ರಭುವರ ವಹಿಸಿದನು ।
ಚೆನ್ನಬಸವ ಮರೆಮಿಂಡದೇವ । ತಿರುವಾಂಕುರೀಶ ಚೋಳ ಚೌಡಯ್ಯನು ॥ ೧ ॥

ಕಿನ್ನರಿ, ಕೋಹೂರ ಬೊಮ್ಮಯ್ಯ । ಹರಳಯ್ಯ ಕಕ್ಕಯ್ಯ ಮಡಿವಾಳ ಮಾಚಯ್ಯನು
।ಪೊನ್ನಾಂಬಲ ಮಾರಯ್ಯ ಕೇತಯ್ಯ । ಓಹಿಲಾರ್ಯ ಶಿವಶರಣನು ॥ ೨ ॥

ಅಣ್ಣನ ಬಳಗದ ಹಿನ್ನೆಲೆಯಾಗಿ । ಅಕ್ಕನ ಬಳಗವ ಬೆಳೆದನು ।
ಹೊನ್ನಮ್ಮ ಲಕ್ಕಮ್ಮ ಅಕ್ಕಮಹಾದೇವಿ । ಜ್ಞಾನವಂತ ಶರಣೆಯರನು ॥ ೩ ॥

(ಚಾಲ)
ಜೀವಿಗಳೆಲ್ಲ ಒಂದೇ ಜಾತಿ । ಎಲ್ಲರಲಿ ಪ್ರೀತಿ ।
ದಯವಿರುವದೇ ಧರ್ಮದಮೂಲ ಉಚ್ಚ ನೀಚ ಜಾತಿಯಲ್ಲಿಲ್ಲ ।

ದೇವನೊಬ್ಬನಿರುವನೆಲ್ಲರಲ್ಲಿ । ಸರ್ವ ಹೃದಯದಲಿ ।
ತಿಳಿದುನಡೆಯುವದೇ ನೀತಿಯ ಮೂಲ । ನೀತಿಗೆ ಜಾತಿ ಭೇದವಿಲ್ಲ ॥

ಭಾವ ಶುದ್ಧಬೇಕು ಸರ್ವರಲಿ । ಸರ್ವರಲಿ । ಸಲ್ಲಬೇಕು ಇಲ್ಲಿ ।
ಅಲ್ಲಿ ಸಲ್ಲುವವರು ಮಾತಿನಮೂಲ । ಅರಿಸಿದ ಕೃತಿಯಲ್ಲಿ ಮಾತಿನಲ್ಲಿಲ್ಲ ॥

(ಏರ)
ಲಕ್ಷದ ಮೇಲೆ ತೊಂಬತ್ತಾರು ಸಾವಿರ ಜನರು ಸುಧೆಯುಂಡವರು ।
ತಾತ್ವಕ ನುಡಿಯನು ನಡೆದು ತೋರಿಸಿದ ಸ್ವತಃ ಬಸವಣ್ಣನು ॥
ನಂದಿಯೆ ಬಸವನ ಹೆಸರನು ಧರಿಸಿ ಸಿದ್ಧಿಸಿ ಭಾರತ ಬೆಳಗಿದನು ॥ ಚೌಕ ೩ ॥

ಅನುಭವ ಮಂಟಪ ದಿನದಿನ ಬೆಳೆಯಿತು । ಕೈಲಾಸವೆನಿಸಿತ್ತು ಕಲ್ಯಾನ
ಮಾನವ ಕುಲ ಉದ್ಧಾರವಾಗುವ । ವೀರಶೈವ ಮತ ಹೆಚ್ಚಾಯ್ತು ॥ ೧ ॥

ಅನ್ಯರ ಕುಲವನು ಸೇರನು ಎಂಬ । ಮತ್ಸರ ಭಾವನೆ ಹುಟ್ಟಿತ್ತು ।
ಕನಲಿದ ಕೊಂಡಿ ಮಂಚಣ್ಣರ ಜಾರಿಗೆ । ರಾಜನ ಮನವದು ಒಡೆದಿತ್ತು ॥ ೨ ॥

ಋಣಸಂಬಂಧ ಮಧುವಯ್ಯ ಹರಳಯ್ಯ । ರಾಜನ ಕಿವಿಗೆ ಮುಟ್ಟಿತ್ತು ।
ಕಣ್ಣುಕಿತ್ತಿಸಿ ಇಬ್ಬರ ಶಿಕ್ಷಿಸಿದ್ದು । ಜನತೆಯ ಈರ್ಷೆಗೆ ಗುರಿಯಾಯ್ತು ॥ ೩ ॥

(ಚಾಲ)
ಕಲ್ಯಾಣ ಕ್ರಾಂತಿ ಎದ್ದಿತು । ಕೊಲೆಯ ನಡೆಯಿತು ।
ಬಿಜ್ಜಳನ ಮರಣವಾಯಿತು । ಬಸವಗೆ ದೋಷ ತಟ್ಟಿತು ॥

ಶರಣರ ಕೊಲೆಯು ತಿಳಿಯಿತು । ಬಸವಗೆ ಕಸಿವಿಸಿಯಾಯಿತು ।
ನಾಲ್ಕೂದಿಕ್ಕಿನ ಹೋಳಿಗೆ ಮನದನೊಂದು । ಅಣ್ಣನು ಕೂಡಲ ಸೇರಿದನು ॥

ಬಸವನ ತತ್ವವೆ ವಚನಗಳಾದವು । ಎಂಟು ನೂರು ವರ್ಷದ ಈ ಮಾತು ।
ಇಂದಿಗು ನಾಡಲಿ ಮರೆಯುತಿದೆ । ವಾಲಿ ಶರಣನ ಹಾಡಿನಲಿ ॥

(ಏರ) ಬಸವನ ಚರಿತೆಯ ಬಣ್ಣಿಸಿ ಬೆಳೆಸಿದೆ ಕನ್ನಡಿ ಹಿಡಿದು ತೋರುವ ತೆರದಿ ।
ವಿಶ್ವಮಾನ್ಯ ಬಸವಣ್ಣನ ಚರಿತೆಯ ಕೇಳಿರಿ ಕೂಡಿದ ಜನರೆಲ್ಲ ॥
ನಂದಿಯೆ ಬಸವನ ಹೆಸರನು ಧರಿಸಿ ಸಿದ್ಧಿಸಿ ಭಾರತ ಬೆಳಗಿದನು ॥ ಚೌಕ ೪ ॥

ರಚನೆ – ಶ್ರೀ ಶರಣಪ್ಪ ವಾಲಿ
– ಕೃತಿ: ಶರಣಸ್ಮೃತಿ

***

ಮಂದಮತಿ ನಿಂದೆ ನಿರತ ನೀ ಭಜಿಸೋ

ಮಂದಮತಿ ನಿಂದೆ ನಿರತ ನೀ ಭಜಿಸೋ ॥ ಪ ॥

ಮಂದಮತಿ ನಿಂದೆ ನಿರತ ನೀ ಭಜಿಸೋ
ಒಂದೇ ಮನದಲ್ಲಿ ಧರ್ಮ ದಾನ ಮಾಡಿ ಬಸವನಾಮ ಭಜಿಸೋ ಗೀ ಗೀ

ಬಂದ ಭವ ಚಿಂತಿಯ ತ್ಯಜಿಸೋ
ಸಂಧಿಸಲು ಜೀವ ಜ್ಯೋತಿರ್ಲಿಂಗನ ಜನ್ಮದಿ ಪೂಜಿಸೋ ಗೀ ಗೀ

ಇಂದು ನಾಳೆನ್ನದೆ ವರ್ಜಿಸೋ
ಗಂದದಂಥ ನಿರ್ಮಲ ಆತ್ಮನ ಸತ್ಸಂಗ ಅರ್ಜಿಸೋ ಗೀ ಗೀ
ಕಂದ ಮುಲ್ಲಾನ ಆಡು ನುಡಿ ಕೇಳಿ ಕೇಸರಿ ಗರ್ಜಿಸೋ ಗೀ ಗೀ

ಸ್ತೋತ್ರ ಮಾಡಿ ನಾನು ಶೃತಿ ಸಾರುವೆನು
ಸರಿಯಾಗಿ ಕೇಳರಿ ನುಡಿ
ಸರಸವಾದ ಪದ ಪ್ರಾಸ ಅಡಿ
ಶರಣ ಹುಟ್ಟಿದನು ಬ್ರಾಹ್ಮಣರ ಮನೆಯಲ್ಲಿ ಬಸವ ಬಾಗೇವಾಡಿ ಗೀ ಗೀ

ಸತಿ ಪತಿ ಮಾದರಸ ಮಾದಲಾಂಬಿಕೆ
ಶಿವನಂದೀಶನ ಪೂಜೆ ಮಾಡಿ ಗೀ ಗೀ

ಸರಿಯ ಬರಲಿಲ್ಲ ತಾಯಿ ತಂದಿ ನಡಿ
ಶರ್ತಿಲಿಂದ ಆದ ಕಡಿ
ಸುಸ್ವಾದ ಸುಗಂಧ ಮನಸಿನ ಎಡಿ
ಸೋಸಿ ನೋಡಲಿಕ್ಕೆ ಮತ ಬಿಟ್ಟಿದಾರ ಧೈರ್ಯ ಗಟ್ಟಿಮಾಡಿ ಗೀ ಗೀ

॥ ಇಳವು ॥
ಸುಖ ದುಃಖ ತುಚ್ಛ ಮಾಡಿ
ಹೊಂಟಿದಾರ ಕಡದಾಡಿ
ಸೇರಲಿಲ್ಲ ತಮ್ಮ ಮತ ಬ್ರಾಹ್ಮಣರದು ನೋಡಿ ಗೀ ಗೀ

ಶಿಶುವಾಗಿ ಕಪ್ಪಡಿ ಸಂಗಮನಾಥಗವರು ಬೇಡಿ
ಸವಿನಾದ ತಿಳಿದರು ಎಂಟು ವರುಷನಾಗ ಜಾಡಿ ಗೀ ಗೀ

ಸತ್ಯ ಶರಣ ಸಂಘ ಬೆಳಸಲಿಕ್ಕೆ ಬಂದ ಕಲ್ಯಾಣಕ ಓಡಿ
ಸೋದರಮಾವ ಬಲದೇವ ಇದ್ದನು ರಾಜ ಬಿಜ್ಜಳರಡಿ ಗೀ ಗೀ

॥ ಏರು ॥
ಶೋಧ ಮಾಡಿ ಮನ ಅರಸ ನೋಡಿ
ಸರ್ವ ಅಂಗ ಮುಖದ ಕಳೆನಾಡಿ

ಸರ್ಪ ಎತ್ತಿ ನೋಡಿದ್ದಂಗ ಹೆಡಿ
ಶರಣ ಹುಟ್ಟಿದನು ಬ್ರಾಹ್ಮಣರ ಮನೆಯಲ್ಲಿ ಬಸವ ಬಾಗೇವಾಡಿ ಗೀ ಗೀ

ಸರಸವಾಗಿ ಬಸವ ತಿಳಿದನು ಶರಧಿ ಶಿಲ್ಪ ಕನ್ನಡಿ
ಸುಲಿದು ಅರ್ಥ ಮಾಡಿದರು ಪುಡಿ
ಸಿಂಹಾಸನ ಇಳಿದು ನೋಡಿದ ಅರಸ ಕಿತ್ತಿದ ಗದ್ದಗಿ ಗೋಡಿ ಗೀ ಗೀ

ಸವಿಯಲಾರದಷ್ಟು ದ್ರವ್ಯ ದೊರಕಿತು ಸದರ ಸಿಂಹಾಸನದಡಿ
ಸನ್ಮಾರ್ಗ ಮಂಗಲಂ ಪಾಡಿ
ಸರ್ವಭಾರ ಬಸವಣ್ಣಗ ಒಪ್ಪಿಸಿದರು ಶರಣರು ಒಡಗೂಡಿ ಗೀ ಗೀ

ಸರಸ ನುಡಿಯು ಹೆಸರು ಪಸರಿಸಿತು ಸುವರ್ಣ ನೀಲಮ್ಮರ ಮಡಿ
ಸ್ವಾಮಿ ಬಸವಣ್ಣಗಾದಳು ಎಡಿ
ಸುವಾಸನ ಹರಡಿತು ಸ್ವರ್ಗ ಮರ್ತ್ಯದೊಳು ಸುತ್ತ ನಾಲ್ಕುಕಡಿ ಗೀ ಗೀ

॥ ಇಳವು ॥
ಶ್ವೇತಮಂಡಲದಲ್ಲಿ ಕೋಟಿ ಮಿಂಚುಗಳ ಹೂಡಿ
ಸಕಲ ದೇವತರು ಹರುಷದಿಂದ ನಲಿದಾಡಿ
ಶೋಭಾ ತೀರದು ತ್ರಿಲೋಕದಲ್ಲಿ ಎತ್ತಾಡಿ
ಶಿರಸು ಹೋದರು ಪರಸು ತೋರಿದರು ಬಸವನ ಸತ್ಯ ಸುರಿದಾಡಿ ಗೀ ಗೀ

ಸಿಂಹ ಗರ್ಜನೆ ಮಾಡಿದ ಬಿಜ್ಜಳ ತಿಂದು ದಂತಗಳ ದವಡಿ
ಶಿವನ ಮಾತು ಶಿವಶರಣರೆ ಬಲ್ಲರು ಕಲ್ಯಾಣವಾಯಿತು ಕಡಿ ಗೀ ಗೀ

॥ ಏರು ॥
ಶಬ್ದವೇದಿ ಶೂರ ಸಿದ್ದ ಸಾಧಕರು ಸಂಹಾರ ಸೊಬಗಿನ ಸಿಡಿ
ಸೌಂದರ್ಯ ಸ್ಮರಣಿ ಮತಿಗೆಟ್ಟ ಕಿಡಿ
ಶರಣ ಹುಟ್ಟಿದನು ಬ್ರಾಹ್ಮಣರ ಮನೆಯಲ್ಲಿ ಬಸವ ಬಾಗೇವಾಡಿ ಗೀ ಗೀ

ಶಾಂತಿ ಕ್ರಾಂತಿಯ ವಿಶ್ವಕಲ್ಯಾಣ ಸಮತೂಕ ಮಾಡಿ ತಕ್ಕಡಿ
ಸವಿದೋರಬಾರ ಸಂತರ ಕಡಿ
ಸಮಾಗಮ ನಮ್ಮ ಸ್ವರಾಜ್ಯದಲ್ಲಿ ಸುಗಂಧ ಸೂತ್ರಗಾಡಿ ಗೀ ಗೀ

ಸಾಕು ಎಂಬ ಮಾತು ಸಾಕಾರವಾಗಲಿ ಸೇರಿದರು ಸಂಗಮನ ಉಡಿ
ಶತಮಾನ ಎಂಟನೂರ ಕಡಿ
ಶಿವನ ಲೀಲೆಯು ಮೂವತ್ತಾರು ವರ್ಷ ಮುಕ್ತಿಮಾರ್ಗ ಬೇಡಿ ಗೀ ಗೀ

ಸರ್ವಮತ ಬೇಧ ನೀತಿಗೆ ಒಲಿಸಿ ಸ್ವತಂತ್ರ ಭಾರತ ಕೊಡಿ
ಸೂತಕ ಮೈಲಿಗ್ಯಾತರ ವಡಿ
ಸತ್ತು ಹೋದವರು ಮತ್ತೆ ಬದುಕಿದಂತೆ ಜತೆಗಿರಲಿ ಜೋಡಿ ಗೀ ಗೀ

॥ ಇಳವು ॥
ಸತ್ಯೇದ ಮಾತು ನಿತ್ಯ ಸಾರಬೇಕು ಇದರಂತೆ ನೀವು ಪಾಡಿ
ಶಾಂತಿಯಿಂದ ಶಿಶುವಾಗಿ ಬಾಳಿರಿ ಕೆಟ್ಟ ಸಿಟ್ಟಿಗಿ ಹೊರದೂಡಿ ಗೀ ಗೀ

ಶರಣರ ನೀತಿಗೆ ಸನಿಯು ಬರುವದಿಲ್ಲ ಪಾಪ ಹೋಗುವದು ಓಡಿ
ಸಂಶಯವಿಲ್ಲದ ಸಾಗರ ದಾಟಿರಿ ಮುಟ್ಟತೀರಿ ಹೋಗಿ ದಡಿ
ಶೇಶಪೀರಲಿಂಗ ಕರದಳ್ಳಿ ಊರಾಗ ಜೋಡಿ
ಶಿಶು ಭಾಷಾದಾಗ ಮುಲ್ಲಾ ಬರೆದರು ಕವಿ ಕನ್ನಡದಾಗ ತೀಡಿ ಗೀ ಗೀ

॥ ಏರು ॥
ಸೃಷ್ಟಿಕರ್ತರಿಗೆ ಸಂತೋಷವಾಯಿತು ಸಾಕಿದ ಬಸವಣ್ಣನ ನುಡಿ
ಶಿವಶರಣರಿಗೆ ಅಂಮೃತ ಎಡಿ
ಶರಣ ಹುಟ್ಟಿದನು ಬ್ರಾಹ್ಮರ ಮನೆಯಲ್ಲಿ ಬಸವ ಬಾಗೇವಾಡಿ ಗೀ ಗೀ

॥ ಖ್ಯಾಲಿ ॥
ಸಾಕೀದ ಬಸವಣ್ಣ ದಯಾಮಯ ಪ್ರೇಮ ಧರ್ಮಕ್ಕೆ ಹೋರಾಡಿ
ಸಮಗಾರ ಹರಳಯ್ಯನ ಭಕ್ತಿ ನೋಡಿ
ಸವೆಯಲಾರದು ಹೇಳಿದರೆ ಕತಿಮಾಡಿ
ಸಾಕೀದ ಬಸವಣ್ಣ ದಯಾಮಯ ಪ್ರೇಮ ಧರ್ಮಕ್ಕ ಹೋರಾಡಿ ಗೀ ಗೀ

ಸಾರ್ಥಕ ಮಾಡಿದ ನಡೆನುಡಿ ತೀಡಿ
ಸತ್ಯೇಕ ಬಸವಣ್ಣ ಇದ್ದಂವ ನಿಮ್ಮಡಿ
ಸದಾ ಮನಸು ಮಧುರ ಅರಸಗ ನೀಡಿ
ಸನ್ಮಾರ್ಗ ತೋರಿದರು ಶರಣರೊಳಗಾಡಿ
ಸಾಕೀದ ಬಸವಣ್ಣ ದಯಾಮಯ ಪ್ರೇಮ ಧರ್ಮಕ್ಕ ಹೋರಾಡಿ ಗೀ ಗೀ

ಸರಸ ಮಾತು ಕೊಂಡಿಯ ಮಂಚಣ್ಣ ಹೂಡಿ
ಶಿವನ ಆಣಿ ಅರಸ ಬಿಜ್ಜಳ ಆಡಿ
ಸ್ವಾಮಿ ಬಸವಣ್ಣಗ ಕಲ್ಯಾಣಾತು ಕಡಿ
ಸೇರಿದರು ಹೋಗಿ ಕಪ್ಪಡಿಸಂಗಮನಾಥರಡಿ
ಸಾಕೀದ ಬಸವಣ್ಣ ದಯಾಮಯ ಪ್ರೇಮ ಧರ್ಮಕ್ಕ ಹೋರಾಡಿ ಗೀ ಗೀ

ಸವಿಮಾತು ಕರದಳ್ಳಿ ಕವಿಗಳ ನುಡಿ
ಶರಣ ಮಹಬೂಬ ಸುಬಹಾನಿ ನೆನೆದ ಜಾಗ ನೋಡಿ
ಸದಾ ಭಕ್ತ ನಿತ್ಯ ಆತನ ಪಾದದಲ್ಲಿ ಪಾಡಿ
ಸನ್ಮಾರ್ಗ ತೋರಿದರು ಮುಲ್ಲಾ ಮುದ್ದಾಡಿ
ಸಾಕೀದ ಬಸವಣ್ಣ ದಯಾಮಯ ಪ್ರೇಮ ಧರ್ಮಕ್ಕೆ ಹೋರಾಡಿ ಗೀ ಗೀ

– ಕೃತಿ : ಬಸವಣ್ಣ ನಿನ್ನ ಹೆಸರು....

***

ಅಣ್ಣ ಬಸವಣ್ಣ ಚಿನ್ನದಂತ ಬದುಕಿನ ಮಾನ್ಯತೆ

ಅಣ್ಣ ಬಸವಣ್ಣ ಚಿನ್ನದಂತ ಬದುಕಿನ ಮಾನ್ಯತೆ ನಿಮ್ಮ ಮುಂದೆ ಹೇಳುವೆ ನಾ
ಕನ್ನಡದ ಗುಡಿಯೊಳಗ ಕಲ್ಯಾಣದ ಹಣತೆಯೊಳಗ
ಎಣ್ಣೆಯಾಗಿ ಬೆಳಗಿ ತೊಲಗಿದಾನ

ಹನ್ನೊಂದನೂರ ಮೂವತ್ತೊಂದು ಅಣ್ಣ ಹುಟ್ಟಿದಂತ ಇಸ್ವಿ
ಕಣ್ಣ ಮೂಡಿ ಬಂದಂಗಾತೋ ಭಕ್ತಿಗಿನ್ನಾ
ಬಾಗೇವಾಡಿ ಪುರದಾಗ ಭಾಗ್ಯದ ರವಿ ಬಂದ
ಬಡವರ ಬಂಧು ಹಿರಿಯಣ್ಣ ಗೀ ಗೀ

ಮಾದರಸ ಮಾದಲಾಂಬೆ ಬೇಡಿದರು ಶಿವನಲ್ಲಿ
ಓ ದೇವಾ ಕೊಡು ಸುತನ
ನಂಬಿದ ಭಕ್ತರ ಹಂಬಲ ತಿಳಕೊಂಡ
ಸಾಂಬ ಕೊಟ್ಟ ವರಪುತ್ರನನ್ನ ಗೀ ಗೀ

॥ ಶೃತಿ ॥
ಕೂಸು ಹುಟ್ಟಿದ ಮೇಲೆ ಜೋಗುಳ ಪದ ಹಾಡಿದರೇನ
ಹಾಡಿದರ ಕೇಳ ತಮ್ಮ
ಜೋ ಜೋ ಜ್ಯೋತಿಯ ಕಂದ ಜೋ
ವಸುಧಿ ಪೊರೆವ ಶಿಶುವ ಜೋ

ನಂದಿಯ ಅವತಾರ ಕಂದ ನೀ ಜೋ
ಮಹಿಯ ದಾತಾರ ಮಹಾದೇವ ಬಂದ
ಗುರುವೆ ಜೋ ಹರನೆ ಜೋ
ಜೋ ಜೋ ಜ್ಯೋತಿಯ ಕಂದ ಜೋ

ಈ ಕೂಸಿಗೆ ಲಿಂಗ ಯಾರು ಕಟ್ಟಿದರು
ಹೆಸರು ಏನಂತ ಇಟ್ಟರು ಕೇಳ ತಮ್ಮ
ವರಪುತ್ರ ಶಿಶುವಿನ ಕೊರಳಿಗೆ ಲಿಂಗವ ಹರನೆ
ಧಾರಣ ಮಾಡಿದನ
ನಂದಿಯ ಅವತಾರ ಕಂದ ನೀ ಎನ್ನುತ ಬಸವ
ಎಂಬ ಹೆಸರಿಟ್ಟಾನ ಗೀ ಗೀ

॥ ಚಾಲ ॥
ಬಸವಣ್ಣನ ಜನನಿ ಜನಕರು
ಹೆಸರಾದ ಮಗನ ಹಡೆದಾರು
ತುಸು ದಿನದಿ ಕಾಲವಾದರು
ವಸುಧಿಯನು ಬಿಟ್ಟು ನಡೆದಾರು

॥ ಏರು ॥
ನಂಬಿದವರ ಕೈ ಬಿಡದೆ ಸಾಂಭಶಿವ ಸಲುವತಾನು
ಎಂಬ ಮಾತು ಖರೆ ಪ್ರಮಾಣ
ಕನ್ನಡದ ಗುಡಿಯೊಳಗ ಕಲ್ಯಾಣದ ಹಣತೆಯೊಳಗ
ಎಣ್ಣಿಯಾಗಿ ಬೆಳಗಿ ತೊಳಗಿದನ ಗೀ ಗೀ

ಎಂಟು ವರ್ಷ ಕಳೆದ ಮೇಲೆ ಹೊಂಟ ನಿಂದ ಬಸವಣ್ಣ
ಬಂಟನಾಗ ಕೂಡಲಸಂಗಮಕ
ಬಾಲಬಸವನ ಲೀಲೆಯ ಕಂಡಮ್ಯಾಲೆ ಹರುಷ
ಬಾಗೇವಾಡಿ ಜನಕ ಗೀ ಗೀ

ಜಾತವೇದ ಮುನಿಗಳು ಪ್ರೀತಿಯಿಂದ ಕಂಡಾರ
ನೀತಿ ನಿಯಮಗಳ ಕಲಿಸುವದಕ
ವೇದ ಶಾಸ್ತ್ರಗಳ ಓದಿಸಿ ಬಸವಗ
ಬೋಧಿಸಿ ಮಗನಂಗ ಸಲವುದಕ ಗೀ ಗೀ

ಗುರುಗಳು ಒಂದಿನ ಕರೆದಾರು ಬಸವನ
ಸರಿಯಾದ ದಾರಿಯ ತೋರುದಕ
ಬಿಜ್ಜಳ ದೊರೆಯಲ್ಲಿ ಕರಣಿಕನಾಗಿ ನೀ
ಕಾಯಕವನು ಕೈಕೊಳ್ಳಬೇಕ ಗೀ ಗೀ

॥ ಶ್ಲೋಕ ॥
ಕಾಯೋ ದೇವ ಕಂದಿ ನೊಂದು ಬಂದೆ ಸ್ವಾಮಿ
ತೊರೆಯಬೇಡ ರಕ್ಷಿಸಯ್ಯ ತಂದೆ ಗುರುವೆ
ಮೈದಡವಿ ಕಂಬನಿಂ ಪೂಸಿ ಕಾತರಬೇಡ ಕಂದ
ನನ್ನಾಣೆ ನನ್ನ ಕೊರಳಾಣೆ ನಾ ನಿನ್ನ ಕೈಬಿಡೆನು ನಂಬು ದಮ್ಮಯ್ಯ
ನಾನಿರುವೆ ನಿನ್ನ ಹಿಂದೆ ಅಯ್ಯ ಹೋಗಿಬಾರಯ್ಯ

॥ ಚಾಲ ॥
ಗುರುವಾಜ್ಞೆ ಹೊತ್ತು ಬಂದಾನು ಕರಣಿಕನಾಗಿ ನಿಂದಾನು
ನಿಷ್ಠೆಯಲ್ಲಿ ನಡೆದು ತೋರಿದನು ಪಟ್ಟವನು ಪಡೆದನು ತಾನು ಗೀ ಗೀ

॥ ಏರು ॥
ವಿದ್ಯಾ ಬುದ್ಧಿ ಇದ್ದವರಿಗೆ ಇದ್ದಲ್ಲೇನ ಸ್ವರ್ಗ ಬಂದು
ಸದ್ದಿಲ್ಲದೆ ಶರಣಾದಿತೊ ಸಂಪೂರ್ಣ
ಕನ್ನಡದ ಗುಡಿಯೊಳಗ ಕಲ್ಯಾಣದ ಹಣತೆಯೊಳಗ
ಎಣ್ಣಿಯಾಗಿ ಬೆಳಗಿ ತೊಳಗಿದನ ಗೀ ಗೀ

ಹನ್ನೊಂದನೂರ ಅರವತ್ತೆರಡಕ್ಕೆ ಅಣ್ಣ ಹೋದ ಕಲ್ಯಾಣಕ್ಕ
ತನ್ನ ಕೂಡ ಪರಿವಾರ ಕರಕೊಂಡ
ಏಳು ವರ್ಷ ಭಂಡಾರಿ ಕಾರ್ಯವನ್ನು ಮಾಡಿದಾನ
ಸಾಮ್ರಾಟನ ಪ್ರೇಮವನ್ನು ಪಡಕೊಂಡ ಗೀ ಗೀ

ಭೂಪತಿ ಬಿಜ್ಜಳನು ಚಕ್ರವರ್ತಿಯಾದಾನ
ಕಳಚೂರ್ಯ ಸಾಮ್ರಾಜ್ಯ ಹಿಡಕೊಂಡ
ಮುಂದೆ ಏಳು ವರ್ಷ ಬಸವ ಚಂದದಿಂದ ಸೇವೆ ಸಲ್ಲಿಸಿ
ಪ್ರಧಾನ ಮಂತ್ರಿಯಾಗಿ ಬೆಳಕೊಂಡ ಗೀ ಗೀ

ಗುರು ಲಿಂಗ ಜಂಗಮ ಹರನೆಂದು ತಿಳಿದಂವ
ಶರಣರ ಚರಣವ ಹಿಡಕೊಂಡ
ಹರನಾಮ ಹರಪೂಜೆ ಹರಲೀಲೆ ಎಂದರೆ
ಧರಿಯ ಮೇಲೆ ಹಚ್ಚೆಂದು ಮನಗಂಡ ಗೀ ಗೀ

॥ ಚಾಲ ॥
ಬಸವನ ಕೀತಿ ಹಬ್ಬಿತು ದೆಸೆದಿಕ್ಕುಗಳನ್ನು ತಬ್ಬಿತು
ವಚನಗಳ ಭೇರಿ ಮೊಳಗಿತು ಕನ್ನಡದ ಜ್ಯೋತಿ ಬೆಳಗಿತು
ಲಿಪಿ ಒಂದ ಆಗ ಸಿಕ್ಕಿತು ಸಿಂಹಾಸನದ ಎದುರಿನಲ್ಲಿ
ದ್ರವ್ಯ ಇದ್ದದ್ದು ತಿಳಿದಿತು ಆಗ ಗೀ ಗೀ

॥ ಏರು ॥
ಹರನ ವರದ ಕಂದನು ಧರೆಗಿಳಿದು ಬಂದಮೇಲೆ
ಕೊರತೆ ಎಂಬುದು ಇಲ್ಲರಿ ಏನೇನ
ಕನ್ನಡದ ಗುಡಿಯೊಳಗ ಕಲ್ಯಾಣ ಹಣತೆಯೊಳಗ
ಎಣ್ಣಿಯಾಗಿ ಬೆಳಗಿ ತೊಳಗಿದನ ಗೀ ಗೀ ॥ ಚೌಕ ೨ ॥

ಯಾರ‍್ಯಾರು ತಿಳಿಯದ ಘೋರ ಲಿಪಿ ಓದ್ಯಾನ
ತೋರಿಸ್ಯಾನ ಪಾಂಡಿತ್ಯ ರಾಜ್ಯ ಸಭಾಕ

ಬಸವನ ದಯದಿಂದ ವಸುಪತಿ ಪಡೆದಾನ
ಹೊನ್ನ ಕೊಪ್ಪರಿಗೆಯ ಬೊಕ್ಕಸಕ್ಕ ಗೀ ಗೀ

ಗಣಕರೆಲ್ಲರು ಕೂಡಿ ಎಣಿಸ್ಯಾರು ದ್ರವ್ಯವ
ದಣಿದಾರ ಲಕ್ಕವ ತಿಳಿಯದಕ
ಕ್ಷಣದೊಳಗ ಬಸವಣ್ಣ ಎಣಿಕೆ ಮಾಡಿದರಣ್ಣ
ಅಚ್ಚರಿಯಾಯಿತು ಕೂಡಿದ ಸಭಾಕ ಗೀ ಗೀ

ಬಸವಣ್ಣನ ಕೀರ್ತಿ ಕಂಡು ಕಸವಿಸಿಯಾಗೇತಿ
ಕೊಂಡಿಯ ಮಂಚಣ್ಣ ಜನಕ್ಕ
ಭೂಪತಿ ಬಿಜ್ಜಳಗ ಉಪ್ಪು ಕಾರ ಹಚ್ಚಿ
ತಪ್ಪು ಹೊರಸಿ ಚಾಡಾ ಹೇಳುವುದಕ ಗೀ ಗೀ

॥ ಚಾಲ ॥
ಜಾತಿಯನು ಕೆಡಸಿ ಬಸವಣ್ಣ ನೀತಿಯನು ಬಿಟ್ಟು ನಡೆದಾನ
ಹರಮತವನೊಂದೆ ಉಳಿಸಿದನ ಪರಮತಗಳನ್ನು ಅಳಸಿದನ
ಚಾಡಿ ಹೇಳತಾನ ಮಂಚಣ್ಣ ಕೊಂಡಿಯ ಮಂಚಣ್ಣ
ಬಿಜ್ಜಳನ ಬುದ್ಧಿಯ ಕೆಡಸತಾನ ಗೀ ಗೀ

ಜಂಗಮರ ಮಹಿಮೆಯ ಇಂಗಿತ ತಿಳಕೊಂಡ
ಜಗದ ಜನಕ ತಿಳಿಸಿದ ತತ್ವವನ
ಕನ್ನಡದ ಗುಡಿಯೊಳಗ ಕಲ್ಯಾಣದ ಹಣತೆಯೊಳಗ
ಎಣ್ಣೆಯಾಗಿ ಬೆಳಗಿ ತೊಳಗಿದನ ಗೀ ಗೀ

ಇದ್ದದೊಂದು ಇಲ್ಲದೊಂದು ಸುದ್ದಿ ಕೇಳಿ ಬಿಜ್ಜಳನ
ಬುದ್ಧಿ ಕೆಡಸಿ ಬಿಟ್ಟರಪ್ಪ ದುರಳ ಜನ
ಹೊಟ್ಟೆಕಿಚ್ಚು ಮಾಡುವಂಥ ದುಷ್ಟ ಜನ ಇರುವಲ್ಲಿ
ಶ್ರೇಷ್ಠ ಕೆಲಸ ಆಗುವದು ಬಹು ಕಠಿಣ ಗೀ ಗೀ

ದುರಳರ ಮಾತ ನಂಬಿ ಕರಸಿದಾನೊ ಬಸವನ
ಪರಿಪರಿಯಿಂದ ದೊರೆ ಕೇಳಿದಾನ
ಕ್ರೋಧದಿಂದ ಕನ್ನಡಿಯ ಬೂದಿ ಹಚ್ಚಿ ಬೆಳಗಿದಂಗ
ವಾದದ ಕಣದಾಗ ಇಳದಾನ ಗೀ ಗೀ

ಮಾದಿಗರ ಮನೆಯೊಳಗ ಮೋದದಿಂದ ಉಣ್ಣುವವ
ಸೇರುವದಿಲ್ಲ ನೀನು ಯಾಕ ಭವಿಗಳನ

ಮಾದರ ಮೈಯಾಗ ಹಾಲ ಭವಿಗಳ ಮೈಯಾಗ ರಕ್ತ
ಹರದಾಡತೈತೇನೋ ಹೇಳ ನೀನ ಗೀ ಗೀ

ಮುಗಳನಗೆ ನಕ್ಕು ಕೈ ಮುಗಿದ ಬಸವ ನಯದಿಂದ
ತಗದ ಹೇಳತಾನ ಶಾಸ್ತ್ರದ ಉದಾಹರಣ
ಲಿಂಗವಿಲ್ಲದ ಭವಿಗಳ ಸಂಗ ನಾನು ಮಾಡಲಾರೆ
ಲಿಂಗವಿದ್ದ ಹೊಲೆಯ ನನ್ನ ದೇವರಣ್ಣ ಗೀ ಗೀ

॥ ಚಾಲ ॥
ಬೆಳಗುವ ಹಣತಿ ಕಲ್ಯಾಣ ಉರಿಯವ ಎಣ್ಣಿಯು ಬಸವಣ್ಣ
ಬತ್ತಿ ಆದ ಚನ್ನಬಸವಣ್ಣ ಪ್ರಭುದೇವ ಜ್ಯೋತಿಯಾದಾನಣ್ಣ ಗೀ ಗೀ

॥ ಏರು ॥
ರಾಜಕೀಯ ರಾಡಿಯಿಂದ ಪಾರಾಗಿ ಬಸವಣ್ಣ
ಕೂಡಲ ಸಂಗಮಕ ಬಂದಾನ
ಕನ್ನಡದ ಗುಡಿಯೊಳಗ ಉಳವಿಯ ದಾರಿಯನ
ಮುರಗೋಡ ಕಾರಿಮನಿ ಊರ ಕಕ್ಕೇರಿಯೊಳಗ
ಶರಣರು ಇರಸ್ಯಾರ ಕುರುಹನ್ನ ಗೀ ಗೀ

ಹನ್ನೆರಡನೆಯ ಶತಮಾನ ಅಣ್ಣನವರು ಹೊತ್ತಿಸಿದ್ದು
ಕನ್ನಡದ ಗುಡಿಯಲ್ಲಿ ಜ್ಯೋತಿಯನ
ಅಂದಿನಿಂದ ಇಂದಿಗೂ ಮುಂದೆ ಎಂದೆಂದಿಗೂ
ಬೆಳಗುವದದು ಕೀರ್ತಿಯನ ಗೀ ಗೀ

॥ ಚಾಲ ॥
ಧರ್ಮದ ನೇತ್ರ ಜಂಗಮ ಮುಕ್ತಿಯ ಧಾತ ಜಂಗಮ
ಸರ್ವಾಂತರಯಾಮಿ ಜಂಗಮ ಸರ್ವಜ್ಞಮೂರ್ತಿ ಜಂಗಮ
ಏರುಗೋಡ ನಾಡೊಳಗ ಕಾರಿಮನಿ ಮಡಿವಾಳ
ಮಾಚಯ್ಯ ನೆಲಸಿದ ಸ್ಥಾನ
ಕನ್ನಡದ ಗುಡಿಯೊಳಗ ಕಲ್ಯಾಣದ ಹಣತೆಯೊಳಗ
ಎಣ್ಣಿಯಾಗಿ ಬೆಳಗಿ ತೊಳಗಿದಾನ ಗೀ ಗೀ

– ಕೃತಿ : ಬಸವಣ್ಣ ನಿನ್ನ ಹೆಸರು....

***

ಕರ್ಮವೀರನೆನಸಿ ಜನರ ಮರ್ಮವನ್ನು ಅರಿತು

ಕರ್ಮವೀರನೆನಸಿ ಜನರ ಮರ್ಮವನ್ನು ಅರಿತು
ಶಿವಶರಣನಾಗಿ ದರಣಿಯ ಮೇಲೆ ಬಂದಾನ
ಬಂದು ವೀರಶೈವ ಧರ್ಮವನ್ನು ಬೆಳಸ್ಯಾನಾ
ಸತ್ಯ ತಿರುಳು ತಿಳಿಸಿ ಗಳಿಸಿ ಕೀರ್ತಿ ಉಳಸ್ಯಾನ
ಪರಮಪಾವನ ಪರಂಜ್ಯೋತಿ ಬಸವದೇವ ಪ್ರಭುಮೂರ್ತಿ
ಇರುಳು ಹಗಲು ಮಾಡುವೆವು ಗುಣಗಾಯನ ಸಚ್ಚರಿತವನ

ಕರಿನಾಡ ಸೆರಗಿನಲ್ಲಿ ಮರೆವಂಥ ಬಾಗೇವಾಡಿ
ಸ್ಮರಿಸಿದರೆ ನಮ್ಮ ಜಲ್ಮ ಉದ್ಧರಣ
ಅಲ್ಲಿ ಹರನ ಭಕ್ತನಾದ ಮಾದರಸನನ್ನ
ವರಿಸಿ ಇರುವ ತಾಯಿ ಮಾದಲಾಂಬಿಕೆಯನ್ನ
ವರ್ಣಿಸಲಾರೆ ದಂಪತಿ ಗುಣ ಸರ್ವಕಾಲ ಶಿವಧ್ಯಾನ
ಕ್ಷೀರ ಸಕ್ಕರಿ ಬೆರಸಿದಂತೆ ಅವರ ಜೀವನ ಪ್ರೀತಿ ಪರಿಪೂರ್ಣ

ಮಕ್ಕಳಿಲ್ಲದ ಮಾದಲಾಂಬೆ ಮುಕ್ಕಣ್ಣನ ನಂದಿಗೆ ನಂಬಿ
ಭಕ್ತಿಯಿಂದ ಮಾಡೆಳ ಸೇವಾ ವ್ರತವನ್ನ
ಆಗ ಅಕ್ಕರದಿಂದ ನಂದಿ ಆದ ಪ್ರಸನ್ನ
ದಿಕ್ಕ ದಿಕ್ಕಿನಿಂದ ಪುಷ್ಪಮಳಿ ಸುರಿಸ್ಯಾನ
ಚೊಕ್ಕಮಗ ಹುಟ್ಟಿ ಅಜ್ಞರ ಸೊಕ್ಕು ಮುರಿದು ಬಾಳತಾನ
ಯಾಕ ಚಿಂತಿ ಆಶೀರ್ವಚನ ಮಾಡಿದನಾಕ್ಷಣ

ನಂದೀಶ್ವರನ ಪಾದಾರವಿಂದದಲ್ಲಿ ವಂದನೆ ಮಾಡಿ
ಅಂದದಲ್ಲಿ ವ್ರತ ಹಿಡಿದು ಆಚರಣ
ಭಕ್ತಿಯಿಂದ ಗೈಯ್ಯತಿದ್ದಳು ತಾಯಿ ಪಾರಾಯಣ
ತಿಂಗಳೊಂದರಲ್ಲಿ ತಾಳಿ ಗರ್ಭಧಾರಣ
ಸುಂದರ ರೂಪಿನ ಕಂದ ಜನಿಸಿ ತಾಯಿ-ತಂದೆಗಾನಂದೆನಿಸಿ
ಮಂದಭಾಗ್ಯವಂತರೆನಿಸಿತಿಬ್ಬರಿಗಾ ದಿನ

॥ ಇಳುವು ॥
ಹುಟ್ಟಿದಂತ ಬಾಲ ಮುಟ್ಟಲಿಲ್ಲ ಮಲಿ
ದಿಟ್ಟಿಸಿ ತೆರೆಯಲಿಲ್ಲ ಕಣ್ಣ ಕೆಟ್ಟ ನಿಸಿತು ತಾಯಿಗೆ ವ್ಯಸನ
ಇಂಥ ಖೇದ ಸುದ್ದಿ ಊರತುಂಬ ಹರಿಡಿತಾಕ್ಷಣ

ಜಾತವೇದ ಮುನಿಗಳು ಬಂದು ನೋಡಿ ಶಿಶುವನ್ನ
ಅತಿಮೋದದಿಂದ ಶಿಶುಕಾಯ ಮುಟ್ಟಿ ಲಕ್ಷಣ ಕಂಡು ಹಿಡಿದರು
ಮಗುವದು ಮಂಡಲಪತಿ ಕಲಿಗಂಡ ಮುಂಡ ಶಿವಜ್ಞಾನಿ ಅಖಂಡ ತತ್ವ ಸಂಪನ್ನ

ಭಾಗ್ಯವಂತ ಬಾಗೇವಾಡಿ ಗ್ರಾಮದಲ್ಲಿ ಜನಿಸಿ ಬಂದ ಭಗವಾನ
ಮಾಡುವದಕೆ ಜಗಪಾವನ
ಐದಾರು ಬಂಡಿ ಹೇರಿ ಹಂಚ್ಯಾರ ಸಕ್ಕರಿಯನ್ನ
ನೂರಾರು ಬ್ರಾಹ್ಮಣ ಜಂಗಮರಿಗೆ ದಕ್ಷಿಣ
ಮಿತಿಮಿರಿ ಕೊಟ್ಟ ಮಾದರಸ ಹರುಷಗೊಳಿಸ್ಯಾನ
ಪಂಚಮುಖಿಗೆ ಕಾಂಚನ ಕಲಶದಲ್ಲಿ ಪಂಚಾಮೃತದಭಿಷೇಕವನ
ಸಂಭ್ರಮದಿ ಮಾಡಿದನು ಜಾಣ

ಬಿದಿಗೆಯ ಚಂದ್ರನ ಪರಿ ಬೆಳೆದನು
ಸದಮಲಕಾಯದವರನ್ನ
ಹೆದರದಂತೆ ಮನಸಿನೊಳು ತಾಳಿರೆಂದ ಮೋದವನ
ಹದಗೆಡಿಸುವ ಬಲು ಮೂಢವಿಚಾರ ಎಸೆದು ಬಿಡುವನ
ಸದಸದ್ವಿವೇಕದಿ ಬೆಳಸಿ ಪೊರೆವೀ ಜನವಿನ್ನ
ಮದ - ಮತ್ಸರ ಲೋಭಾದಿ ಆರು ಗುಣವಳಿದು ತಿನ್ನುವ ಬೆಳಕನ್ನ

॥ ಚಾಲ ॥
ಲಿಂಗಾಂಗ ಸಾಮಾರಸ್ಯವನ ಅರಿತ ಮಗುವನ
ಬಸವನೆಂದವನ ಇಡಿರಿ ಹೆಸರನ್ನ
ಬಿಡಿರಿನ್ನು ನಿಮ್ಮ ಚಿಂತೆಯನ್ನ
ಸಂಗಮನ ಸ್ಮರಿಸಿ ಭಸ್ಮವನ ಮಾಡ್ರಿ ಲೇಪವನ
ಅಂತ ಹೇಳ್ಯಾನ ಯೋಗಿ ಸಂಪನ್ನ
ಮಾಡಿದೊಡೆ ತೆರದಿಹನು ಕಣ್ಣ

॥ ಏರು ॥
ಹರುಷವಾಗಿ ಹದಿಮೂರು ದಿನಕ
ನಾಮಕರಣ ಮಾಡೋದಕ
ಕರೆದು ತಂದು ಮುತ್ತೈದಿಯರ ಗುಂಪನ್ನ
ನಾ ವರ್ಣಿಸಲಾರೆ ಅವರ ದನಿ ಸೊಂಪನ್ನ
ಮನಕರಗಿಸುವಂತೆ ಬೀರತಿದ್ರು ಇಂಪನ್ನ
ಪರಮ ಪಾವನ ಪರಂಜ್ಯೋತಿ ಬಸವದೇವ ಪ್ರಭುಮೂರ್ತಿ
ಇರುಳು ಹಗಲು ಮಾಡುವೆವು ಗುಣಗಾಯನ ಸಚ್ಚರಿತವನ ॥ ಚೌಕ ೧ ॥

॥ ಜೋಗುಳ ॥
ಬಸವನೆ ಬಸವನೆ ಜೋ ಜೋ ಜೋ
ಶಶಿಧರ ರೂಪನೆ ಜೋ ಜೋ ಜೋ
ಜೋ ಜೋ ಜೋ .... ॥

ಆದಿ ಮಧ್ಯಂತರ ರೂಪನೆ
ನಾದ ಬಿಂದು ಕಲಾ ಸಂಪೂರ್ಣನೆ
ವೇದ ವೇದಂಗಳ ಸಾರನೆ
ಬೇಧ ಬೇಧವನೆಲ್ಲ ಅಳಿದಾತನೆ ॥

ಸಂಗಮನಾಥನ ಅನುಗ್ರಹನೆ
ಮಂಗಲ ರುದ್ರಾಕ್ಷ ಭಸ್ಮಾಂಗನೆ
ಬಂಗಾರ ತೊಟ್ಟಿಲ ಭೂಷಣನೆ
ಗಂಗಾಧರನ ಸಮಚಿದ್ರೂಪನೆ ॥

ನವಚಕ್ರ ನವಕೋಟಿ ನವಪೀಠನೆ
ನವಲಿಂಗ ನವಪೂಜೆ ನವಮಂತ್ರನೆ
ನವಶಕ್ತಿ ನವಭಕ್ತಿ ನವನಾಥನೆ
ನವಕಳೆಯನೊಳಗೊಂಡ ಶಿವದೇವನೆ ॥
ಆರು ಅರಿವರ್ಗವನಳದಾತನೆ
ಮೂರು ಕಾಲದಿ ನಿತ್ಯ ಹೊಳೆವಾತನೆ
ಮೇರುಗಿರಿಯ ಮೇಲೆ ಸುಳಿವಾತನೆ
ಪರಬ್ರಹ್ಮ ಹರ ಪರಮಾತ್ಮನೆ ॥

ಮೂಲ ಸ್ಥಾನದ ಮುದ್ರೆ ಬಲಗೊಂಡಾತನೆ
ಕೀಲ ಕುಂಡಲಿ ಸರ್ಪಬಿಗಿದಾತನೆ
ಮೇಲು ಮಂಡಲದಲಿ ತೂಗಿದಾತನೆ
ಸಾಲೋಟಗಿಯ ಗೀ ಗೀ ಗೊಲಿದಾತನೆ ॥

ಐದು ಆರು ವರ್ಷದೊಳಗೆ ಓದು ಬರಹ ವಿದ್ಯಾ ಕಲಿತ
ಮಾದಲಾಂಬೆಯ ಕುವರನಾದ ಬಸವಣ್ಣ
ಹೌದು ಹೌದು ಅನಿಸಿರುವ ಚೋದ್ಯಾಗೊಳಿಸ್ಯಾನ
ಆತ್ಮ ಬೋಧೆದೊಳು ಮನಸು ಪೂರ್ಣಹಾಕ್ಯಾನ
ಮಾದರಸನು ಬಸವನ ಮುಂಜೆ ಮೋದದಿಂದ ಮಾಡುವ ಕುರಿತು
ಬೋಧಮಾಡಲು ವಾದವನು ಹೂಡ್ಯಾನ ಮಾತು ಮೀರ್ಯಾನ

ಸೊಟ್ಟ ಮೂರೆಳೆಯನ್ನು ಕಟ್ಟಿಕೊಂಡರ್ಧಿಂಗುವದೇನು
ಗಟ್ಟಿ ತಿಳಿದು ಬಿಟ್ಟುಬಿಟ್ಟಾ ಮನಿಯನ್ನ
ಆಗ ತಟ್ಟನೆ ಜಾರಿ ಸಂಗಮದ ದಾರಿ ಹಿಡದಾನ
ಅಲ್ಲಿ ಶ್ರೇಷ್ಠಗುರು ಜ್ಯಾತವೇದ ಮುನಿಯನ
ನಿಷ್ಠೆಯಿಂದ ಸೇವಾಧರಿಸಿ ಇಷ್ಟ ಲಿಂಗದ ಜ್ಞಾನ ಗಳಿಸಿ
ಅಷ್ಟಾವರ್ಣ ಗುಟ್ಟ ಗುರಿ ತಿಳಿದಾನ ಶಾಂತಿ ಪಾಠನ್ನ

ಜ್ಯಾತಿವೇದಮುನಿ ಸೇವಾ ಪ್ರೀತಿಯಿಂದ ಮಾಡಿ ಬಸವ
ಖ್ಯಾತಿ ಪಡೆದು ಸಂಗಮದಲ್ಲಿ ನಿಂತಾನ
ರಾಜನೀತಿಯೊಳು ಮನಸ ಹಾಕಿ ಕುಂತಾನ
ಸುಳ್ಳೆ ಜಾತಿ ಬೇಧ ಮಾಡುವದ್ಯಾಕಂತಾನ
ಮಾತೃಭೂಮಿ ಸೇವಾವಹಿಸಿ ನೀತಿ ತತ್ವದ ದಾರಿ ಹಿಡಿಸಿ
ಶಾಂತಿಧರ್ಮ ನೆಲಿಸಿ ಇರುವ ಹಿತಚಿಂತನಗೈಯ್ವನೊಂದೇ ಸವನ ॥

॥ ಇಳವು ॥
ಬಸವನ ಸೋದರಮಾವ ಕುಶಲ ಬಲದೇವ
ಇರುವುದು ಕಲ್ಯಾಣ ಬಿಜ್ಜಳನ ಶ್ರೇಷ್ಠ ಪ್ರಧಾನ
ತನ್ನ ಅಳಿಯ ಬಸವನ ಕೀರ್ತಿಭರಿತ ವರ್ತಮಾನ
ತಾನೇ ತಿಳಿದು ಕಲ್ಯಾಣಕೆ ಭರದಿ ಕರಿಸಿಕೊಂಡಾನ
ಚನ್ನಕಳಿಯ ಗಂಗಾಂಬಿಕೆಯೆನ್ನುವ ತನ್ನ ಮಗಳನ್ನ
ವಧು ನೇಮಿಸಿ ಬಸವೇಶ್ವರನ ಸಂಗಡ ಮದುವೆ ಮಾಡಿದಾನು
ಕರುಣ ಕಲ್ಯಾಣದಿ ವಿಜೃಂಬಣ

ಪಟ್ಟಸಾಲಿ ಮೇಲೆ ಶ್ರೇಷ್ಠ ಬಸವ ಗಂಗಾಂಬಿಕೆಯರನ್ನು ಕೂಡಿಸಿದರಿಂದಿನ್ನಾ
ಕುಣಿಕುಣಿದು ದಾಸಿಯರು ಹಾಡುತ್ತಿದ್ದರು ಗಾಯನ
ಮಣಿ ಮಣಿದು ಮಾಡುವರು ಊರ ಪ್ರಮುಖರು ಶರಣ
ನೆನೆ ನೆನೆದು ಬಯಸುವರು ದಂಪತಿಗಳ ಕಲ್ಯಾಣ
ಅಮರೇಂದ್ರನ ವೈಭವವನು ಮರೆಸುವ ಪರಿ
ಮೆರದಾಯ್ತು ಲಗ್ಗಣ ಗಂಗಾ ಬಸವನ

॥ ಚಾಲ ॥
ಬಸವನ ಕುಶಲತೆ ಪಸರಿಸಿ ಎಸೆಯುತೆ ದೆಸೆ ದೆಸೆಯೊಳು ಕ್ಷಣ ಕ್ಷಣ
ಹೆಸರೆತ್ತಿ ಹೊಗಳುವರು ಜಾಣ ಬಸವ ಭಾಸ್ಕರನ
ಮುಸುಕಿದ ಅಜ್ಞರ ಕಸುವಿನ ಕತ್ತಲೆ ನಶಿಸಲು ಜ್ಞಾನದ ಕಿರಣ
ಹೊಸ ಹೊಸ ವಿಚಾರದಿ ತೋರುತಿರುವ ಅನುದಿನ
ಹಸನ ಹೃದಯದಿಂದುಸುರುತೆ ಹುಸಿನುಡಿ ವಿಷಯ ವಿಲಾಸಿಗಳನ್ನು
ನಸುನಗುತ ಬೋಧದಿಂದ್ಹಾದಿಗೆಳಿಯುವನು ಜಾಣ ॥

ಊರ ತುಂಬ ತಳಿರು ತೋರಣದೀಪ ರೋಷಣ
ವಾದ್ಯ ಘೋಷಣ ಪೂರ್ಣ ಕಲ್ಯಾಣ ಹೊಳೆದಾಯಿತು ಆನಂದ ಘನ
ಬಲದೇವ ಮಂತ್ರಿ ಬಸವನ ನೋಡಿ ಖುಷಿಯನ ವ್ಯಕ್ತಪಡಿಸ್ಯಾನ
ತನ್ನದೇ ಪುಣ್ಯ ಭಾಗ್ಯವಂತ ತಾನೇ ತಾನ ॥

॥ ಏರು ॥
ಹಿರಿಯತನ ಒಪ್ಪಿಸಿ ತನ್ನ ನೆರೆಯೊಳರಿಸಿ ಇಬ್ಬರನ್ನ
ಸರಳ ಪ್ರೀತಿಯಿಂದ ಮಾಡಿ ಜೋಪಾನ
ಮನ ಬೆರಗು ಆಯಿತೆಂದ ನೋಡಿ ಅಳಿಯನ್ನ
ಇದು ಹರನ ಮಹಿಮೆ ಎಂದು ಹೊಗಳಿಕೊಂಡಾನ
ಪರಮ ಪಾವನ ಪರಂಜ್ಯೋತಿ ಬಸವೇಶ್ವರಪ್ರಭು ಮೂರುತಿ
ಇರಳು ಹಗಲು ಮಾಡುವೆವು ಗುಣಗಾಯನ ॥ ॥ ಚೌಕ ೨ ॥

ಅರಸು ಬಿಜ್ಜಳರಾಯನ ತನಕ
ಮೆರದು ಹೋಯಿತು ಬಸವನ ಬೆಳಕ
ಕರೆಸಿಕೊಂಡು ದರ್ಶನವ ಪಡೆದನ
ಅರಸನಿರಿಸಿದಂಥ ರಾಜಸೂತ್ರ ಹಿಡಿದಾನ
ಒಳ್ಳೆ ಸರಸದಿಂದ ಕಾರಬಾರ ನಡಿಸ್ಯಾನ
ಜಡ್ಡಿನಿಂದ ಬಲದೇವ ಮರಣ ಹೊಂದಲು ಮಂತ್ರಿ ಪದವ
ಧರಿಸಿಕೊಂಡನು ಜಾಣಬುದ್ಧಿ ಬಸವಣ್ಣ ಸತ್ಯಶರಣ

ಎಂದೂ ಯಾರು ನೋಡದಂತ ಸುಂದರವಾದ ಲಿಪಿಯ ಪತ್ರ
ಇಂದು ಬಿಜ್ಜಳನ ಓಲಗದಲ್ಲಿ ತಂದಾನ
ಎಲ್ಲರ ಮುಂದೆ ಇಟ್ಟು ಓದಿ ಹೇಳಿರೆಂದಾನ
ಸಂದಿ ಸಾಧಿಸಿ ಬಸವಧೀಶ ಮುಂದೆ ಬಂದು ಲಿಪಿಯ ಸಾರ
ಒಂದು ಬಿಡದೆ ಓದಿ ಪೂರ ತಿಳಿಸ್ಯಾನ ಹರುಷಗೊಳಿಸ್ಯಾನ

ಅರಸನ ಸಿಂಹಾಸನ ಬದಿಗೆ ಹೇರಳ ದ್ರವ್ಯ ಹುಗಿದಿದೆಯೆಂದು
ಬರೆದ ಲೇಖದಂತೆ ಅಗೆದು ತೆಗೆಸ್ಯಾನ
ಅಲ್ಲಿ ಹೊರಟ ಮುತ್ತು ರತ್ನ ವರಹ ತೆಗೆಸ್ಯಾನ
ಬಸವೇಶ್ವರನ ಬುದ್ದಿ ಚಾತುರತೆ ಹೊಗಳ್ಯಾನ
ತರಸಿ ಪುಷ್ಪದ ಹಾರ ಉಡುಗೊರೆ ಹರುಷದಿ ಆಹೇರ ಮಾಡಿ
ಮೆರಸಿದರು ಆನೆಯ ಮೇಲೆ ಆ ದಿನ ಬಸವದೇವನ

॥ ಚಾಲ ॥
ದಿನಮಣಿ ಬಸವೇಶನು ನಿರ್ಮಿಸಿದನು ಅನುಭವ ಮಂಟಪವನ್ನ
ಅಲ್ಲಿ ಊಣಿಸಿದನು ಜ್ಞಾನ ಸುಧೆಯನ್ನ

ಪ್ರಭುದೇವ ಅಲ್ಲಮ ಸಿದ್ಧರಾಮೇಶ್ವರರನ್ನ
ಮಹದೇವಿಯಕ್ಕ ಮಡಿವಾಳ ಮಾಚಿದೇವನ್ನ
ಅನುಭಾವಿ ಅಂಬಿಗರ ಚೌಡೇಶ್ವರ ಶರಣನ್ನ
ದಿನಗೂಡಿಸಿ ಸರ್ವರ ವಾದ ವಿವಾದದಿ ಶಿವ - ಜೀವರ ತಿರುಳನ್ನ
ಮನಗಾಣುವಂತೆ ಊಣಬಡಿಸುತಿರುವ ಬಸವಣ್ಣ

ವೀರಶೈವ ಮತಸಾರದ ಬಾವುಟ ಧಾರುಣಿಯಲ್ಲಿ ಮೆರಸ್ಯಾನ
ಧೀರಾತ್ಮ ಸಂದಿ ಅವತರಣ
ಜಾತಿ ಜಾತಿ ತೊಡಕಗಳ ಬಿಡಿಸಿ ಹಾದಿ ಹಿಡಿಸ್ಯಾನ
ಒಳ್ಳೆ ನೀತಿವಂತರನು ಪ್ರೀತಿಯಿಂದ ಬೆಳಿಸ್ಯಾನ
ಕುಲಘಾತ ನಿಂದಕರ ಸೊಕ್ಕು ಮುರಿದು ಕಳಿಸ್ಯಾನ
ಇದು ಸೇರದೆ ಅರಸನ ಮುಂದೆ ಚಾಡಿ ಹೇಳಿ
ಕೊಂಡಿದೇವ ಮಂಚಣ್ಣ ಸುಳ್ಳೆ ಕಟ್ಟಿಕೊಂಡ್ರು ದ್ರೋಹವನ

॥ ಚಾಲ ॥
ವೀರಶೈವರನು ಹೊರತು ಅನ್ಯರನು ಸೇರನೆಂಬ ದೂರವನ
ಸಾರಿದರು ಬಿಜ್ಜಳನ ಮುಂದೆ ಹೋಗಿ ಚಾಡಿಯನ
ಕ್ರೂರತನದಿ ಹಲವಾರು ದೋಷದಿಂದ ಕಾಣುತಿರುವ ಅರಸನ
ತೋರಿದನು ನ್ಯಾಯವೆಂದರುಹಿ ತನ್ನ ಆಚರಣ
ಪಾರಮೂರ್ತಿ ಹಿತಕರ ಬಸವ ಉಪಕಾರಗೈಯ್ಯುವ ಕೃತಿಗಳನ
ಅವರವರು ವರ್ಣಿಸಿ ಮಾಡತಲಿಹರು ಗಾಯನ ॥

॥ ಚಾಲ ॥
ಜಾತಿಗೆಡಿಸುವಂಥ ಬೊಧವನ ಮಾಡಿ ಕೃತಿಗಳನ
ನಡಿಸತಾನ ದಿನ ಅಂತ ದೋಷವನ
ಹೊರಸ್ಯಾರ ಬಸವನಲಿ ಪೂರ್ಣ
ಡೋಹರ ಮನ್ಯಾಗ ಭೋಜನ
ಪೂಜ ಅರ್ಚನ ಮಾಡುವಂಥವನ

॥ ಏರು ॥
ಅರಸ ಬಿಜ್ಜಳರಾಯ ಭೂಪ ಕೆರಳಿ ಬಸವನ ಮೇಲೆ ಕೋಪ
ಧರಿಸಿ ಬಿಡಿಸಿದನು ಮಂತ್ರಿ ಪದವನ್ನ
ಇದನು ಅರಿತು ತನ್ನ ತಾನೇ ನಕ್ಕ ಬಸವಣ್ಣ
ನಿನ್ನ ದಾರಿಗೆ ನೀನೇ ಹೋದಿ ಅಂದಾನ
ಪರಮ ಪಾವನ ಪರಂಜ್ಯೋತಿ ಬಸವಪ್ರಭು ಮೂರುತಿ
ಇರಳು ಹಗಲು ಮಾಡುವೆವು ಗುಣಗಾಯನ ಸಚ್ಚರಿತವನ

॥ ಚೌಕ ॥
ಸುರಪತಿ ಇಂದ್ರನ ನಂದನವನ ಬ್ರಹ್ಮದೇವನ ಸ್ವರ್ಣಭವನ
ಹರಿಯ ವೈಕುಂಠ ಕೈಲಾಸ ಸಮಾನ
ಆಗಿ ಇರಲಿ ಬಿಜ್ಜಳರಾಯನ ಕಲ್ಯಾಣ
ಮುಂದೆ ತೋರಹತ್ತಿತ್ತಯ್ಯ ಶುದ್ಧ ಸ್ಮಶಾನ
ಸಾರಹೀರಿ ಹಾರಿ ಹೋದ ಮರದಂತೆ ಕಲ್ಯಾಣದೊಳು
ಯಾರು ಒಬ್ಬರುಳಿಯಲಿಲ್ಲ ಸತ್ಯಶರಣ ಆಯ್ತು ಬಣಬಣ
ಜೀವ ಇಲ್ಲದ ದೇಹದಂತೆ ದೇವರಿಲ್ಲದ ಗುಡಿಯಂತೆ
ಬಾವರಸವಿಲ್ಲದಂತೆ ರಾಜನ
ಕೆಟ್ಟ ಹಾವಿನಂತೆ ನಡೆಯ ಹತ್ತಿತು ಬಹುಜನ
ಯಾರು ಮಾಡದಾದರು ಬಹುಮಾನ
ಮಾವಿನಹಣ್ಣಿಗೆ ದೂರಮಾಡಿ ಬೇವಿನಹಣ್ಣಿಗೆ ಕೈಯ ಮಾಡಿ
ಸಾವೀಗೀಡಾಯ್ತು ದುರ್ಮರಣ ಬರೆದ ವಿಧಿ ಘಟನ

॥ ಚಾಲ ॥
ತಾ ಮಾಡುವಂಥ ಸೇವೆಯನ ಮಾಡಿ ಬಸವಣ್ಣ
ಬಿಟ್ಟ ಕಲ್ಯಾಣ ಹೊರಟು ಬಂದನ ಮುಗಿಸುವದಕೆ ದೇಹದವಸಾನ
ಮಲಪಹಾರಿ ಮತ್ತು ಕೃಷ್ಣಾ ಕೂಡಿದ ಸ್ಥಾನ
ತನ್ನ ಗುರುವಿನ ಸಂಗಮೇಶನ ನೆನೆದು ಐಕ್ಯ ಹೊಂದ್ಯಾನ

ಕೃತಿ – ಬಸವಣ್ಣ ನಿನ್ನ ಹೆಸರು ....

***

ಬಸವ ವಿಜಯ

ಬಸವ ವಿಜಯದಾಗ ಬರೆದ ಭವಿಷ್ಯ ಕುಂತು ಕೇಳಿರಿ ಹಿರಿಕಿಯರಾ ॥
ಕಲ್ಯಾಣ ಅನಿಸಿತು ಕೈಲಾಸ ಕಡಿದ್ವಾರ ॥
ಲಕ್ಷದ ತೊಂಭತ್ತಾರು ಸಾವಿರ ಜಂಗಮರ॥
ಮಹಾ ಭಾವ ಬಸವೇಶ್ವರ ಜನಿಸಿದ ಭೂಲೋಕ ಮಾಡುವದಕ ಉದ್ದಾರ ॥ ಜೀ॥

ಶ್ರೇಷ್ಠ ಬಸವ ಅಷ್ಟಾವರಣ ಮಹತ್ವ ಸೃಷ್ಟಿಯೊಳು ಮಾಡುತ ಪ್ರಚಾರ ॥
ಗುರುಲಿಂಗ ಜಂಗಮ ಇವು ಮೂರು ॥ ಪಾದೋದಕ ಪ್ರಸಾದದ ವಿಚಾರ ॥
ವಿಭೂತಿ ರುದ್ರಾಕ್ಷಿ ಮಂತರ ಎಂಟು ವಿಧ ತಿದ್ದಿ ಹೇಳುತಿರು ಸಮಾಚಾರ ॥ ಜಿ ॥

ಜಗಭರಿತ ಜಂಗಮ ಲಿಂಗ ಮಧ್ಯ ಜಗ ನಗರದೊಳಧಿಕ ಧೀರ ॥
ಗುರುವಿನಕಿಂತಲೂ ಅಧಿಕ್ಕಿಲ್ಲ ಯಾರ ॥ ಮನಶ್ಯಾನ ಜನ್ಮಕ ಗುರುತ
ಹೇಳುತ ನಿರತ ನಡಿಸಿದರು ಚರ ಚರ ॥ ಜೀ ॥
ಮಿಕ್ಕಿದ ವೀರಶೈವ ಮತ ಇರುವದೆಂದು ಸಿಕ್ಕವರಿಗೆ ಮಾಡುತ ಸಂಸ್ಕಾರ ॥
ಶಿವನಾಮ ಮಾಡರೆಂದು ಉಚ್ಚಾರ ॥ ಅಡಿ ಅಡಿಗೆ ಹೇಳುತಿರು ಎಚ್ಚರ ॥
ಭಾಷೆ ಪಾಲಿಪನ ಮಾತು ಪಾಸ ಬೀಳದೆ ನಿಂದೆ ಮಾಡತಿರು ಲುಚ್ಚೇರ ॥ ಜೀ ॥

॥ ದುಮಾಲಿ ॥
ಹಿಂಗ ಬಸವ ಕೊಡುತಿದ್ದನು ಬೋಧ ॥
ತೋರುತ ದಾರಿ ಸೀದ ॥ ಸೇರಿಸಿ ನಾದ ॥
ಮಾಡುತಿದ್ದ ಗುಂಗ ॥ ಕಂಡು ಹಿಡಿದು ಕಟ್ಟುತ್ತಿದ್ದ ಲಿಂಗ ॥ ಜೀ ॥
ಜೈನ ಜನರಿಗೆ ಬಿತ್ತು ಗಾದ ॥ ಬಸವ ಅಶುದ್ಧ ॥ ನಡಶ್ಯಾನ ಬೇಬದ್ಧಾ ॥
ಮಾಡಬೇಕು ಹ್ಯಾಂಗ ॥ ಸರ್ವರಿಗಿ ಅನು ಅಂತಾನ ಸವನ ॥ ಜೀ ॥
ನಮಗೆ ಶ್ರೇಷ್ಠಾದ ರಾಧಾಕೃಷ್ಣರ ಹಿಡಿದು ಅವರ ಪಾದ ॥ ಓದುವೆವು ವೇದ ॥
ಅನ್ನುತ ಪಾಂಡುರಂಗ ಪ್ರಭುದೇವರಿಗಿರದು ನಮಗಿಲ್ಲ ಹಂಗ ॥ ಜೀ ॥

॥ ಏರ ॥
ಬಸವ ತ್ರಿಪುಂಡ ಧರಿಸಿದವರಿಗೆಲ್ಲ ಭವಿ ಅಂತಾನ ಬಸವ ಪಡದಾರ ॥
ತಾಯಿ ಹೊಟ್ಯಾಗ ಕಟ್ಟಗಿಟ್ಯಾನೇನ ಉಡದಾರ ॥ ಯಾರು ಕೇಳಲಿಲ್ಲ
ಬಾಯಿ ಬಾಯಿ ಬಡದರ ॥ ಮಹಾನುಭಾವ ಬಸವೇಶ್ವರ ॥ ಜನಿಸಿದ
ಭೂಲೋಕ ಮಾಡುವದಕ ಉದ್ಧಾರ ॥ ಜೀ ॥ ॥ ಚೌಕ ೧ ॥

ಬ್ರಾಹ್ಮಣರ ಹೊಟ್ಟೆಯೊಳು ಹುಟ್ಟಿದ ಬಸವಣ್ಣ ವೀರಶೈವ ಮತ ಬೆಳೆಸಿಟ್ಟ ॥
ಬ್ರಾಹ್ಮರ ಭೋಗಕಿದು ಬಹುಕೆಟ್ಟ ॥ ಮತ ಅಭಿಮಾನಿಗಿ ಮಾತಿನ ಪೆಟ್ಟ ॥
ಕುಲದಣ್ಣನ ಕುಂಡ್ಯಾಗ ಕುಲದಣ್ಣ ಸೇರಿ ಅಳು ಮಾಡಿದಂಗಾಯಿತು ಘಟ್ಟ ॥ ಜೀ॥

ಹತ್ತೆಂಟು ಮಂದಿ ಥೊಂಟರು ಕೂಡಿ ತಮ್ಮ ತಮ್ಮರೊಳು ಮಾಡಿರು ಅಟ್ಟ॥
ಹೊಂಬ ಬಸ್ಯಾ ನಡಶ್ಯಾನ ಹುಡಗಾಟ ॥ ನಮ್ಮ ಹೊಟ್ಟೆಯೊಳು ತುಂಬ್ಯೆತಿ ಕುಟ್ಟ॥
ಮೋಸಗಾರಕಿ ವೇಷಹಾಕಿಕೊಂಡು ಹೋಗಿ ದಾಸೋಗದಾಗ ಮಾಡನು ಊಟ ॥
ಜೀ ॥

ಕುಂಟಣಗಿತ್ತಿ ಮಗ ಥೊಂಟ ಹೇಳತಾನ ಮಸ್ತ ಅವಾ ಬದನಿಕಾಯಿ ತೋಟ ॥
ಕರಿಬದನಿಕಾಯಿ ಆಗ್ಯಾವ ಘಟ್ಟ ॥ ಮನಶಾಗೊಂದೊಂದು ಕಡಕೊಂಡ ಜಟಪಟ॥
ಬುತ್ತಿ ಅರವ್ಯಾಗ ಹಾಕಿ ಕಂಟದೊಳು ಕಟಕೊಂಡು ಹಣಿಮೇಲಿಡೊನು
ಬೂದಿ ಬಟ್ಟಿ ॥ ಜೀ ॥

ರೈಟ ಕೆಲಸ ಪೈಟನ ಮೇಲೆ ಹೇಳಿದೆಂದು ಹಾಗೆ ಮಾಡಿದರು ಪಟಪಟ ॥
ದಾಸೋಗದ ಕಡಿ ಬಂದಿರು ಲಟಲಟ ॥ ಸುಮನೆ ಮಂತ್ರ ನುಡಿದಿರು ಪಟಪಟ ॥
ಕಂಟದೊಳು ಲಿಂಗ ಕಟ್ಟಿದು ನೋಡಿ ಕಾವಲುಗಾರ ಅವರಿಗೆ ಒಳಗ ಬಿಟ್ಟ ॥ ಜೀ॥

॥ **ದುಮಾಲಿ** ॥
ನಮ್ಮ ಕೆಲಸೈತೆಂತರ ನಕ್ಕು ದಾಸೋಗದಾಗ ಚೊಕ್ಕ ಕುಂತಿರು ಹಾಕಿ ಚಪಗಾಲ ॥
ಪೂಜಾದ ಘಂಟಿ ಅಂದಿತು ಘಣ ಘಣಲ್ ॥ ಜೀ ॥
ಥೊಂಟರ ಕುಂಡಿ ಅಂದಿತು ಪುಕ ಪುಕ್ ॥
ಸುಮ ಸುಮನೆ ಮಾಡಿಕೊಂಡೆವು ದುಃಖ ॥ ಜೀ ॥
ಎದಿ ಅಂದಿತು ಝಲ್ ॥ ಬುಡಕ ನಡಗತಿವು ಕೈಕಾಲ ॥ ಜೀ ॥
ಅದರೊಳೊಬ್ಬ ಹೇಳಿದ ಹುಸುಕು ದೋತರ ಹಾಕಿ ಮುಸಕ ಪೂಜಾ
ಬೇಷಾಕ ॥ ಜೀ ॥
ಮಾಡುತ ಬಂದವರಿಗೆಲ್ಲ ॥ ಆ ಜಂಗಮರಿಗೆ ಜಯವಿಲ್ಲ ॥ ಜೀ ॥

॥ **ಏರ** ॥
ಬಡು ಬ್ರಾಹ್ಮಣನ ಮಗ ಬಹಳ ಥೊಂಟಿ ಕರಿ ಬದನಿಕಾಯಿಬಿಚ್ಚಿ ಹಿಡಿದಿದ ಎದರ॥
ಬರೋಬರಿ ಕಾಣತಿದಿಲ್ಲ ಅವನೆದರ ॥ ಮಾರಿಗಿ ಹಾಕಿ ದೋತರ ಪದರ ॥
ಮಹಾನುಭಾವ ಬಸವೇಶ್ವರ ಜನಿಸಿದ ಭೂಲೋಕ ಮಾಡುವದಕ ಉದ್ಧಾರ ॥ಜೀ॥
॥ ಚೌಕ ೨ ॥

ಹುಚ್ಚ ಬ್ರಾಹ್ಮಣ ಹುಡುಗ ಬದನಿಕಾಯಿ ಬಿಚ್ಚಿ ಹಿಡಿದಿದ ನೀಚ ಜಂಗಮ ಇದ್ದ
ಅವನ ಬಗಲಾಗ ॥ ಹಣಕಿ ಹಾಕಿ ನೋಡಿದ ಅವನ ಮಗಲಾಗ ॥
ಬದಿನಿಕಾಯಿ ತುಂಬ ಕಂಡಿತು ಬೆಳ್ಳಗ ॥ ಏಯಪ್ಪಾ ಬದನಿಕಾಯಿ ತುಡಗರು
ಬಂದಾರ ನಮ್ಮ ದಾಸೋಗದಾಗ ॥

ನಾ ಬಾ ನೀ ಬಾ ಎಂದು ನೆರದಿದರು ಥೊಂಟ ಹೋಗಿ ನಿಂತಿರು ಮೂಲ್ಯಾಗ ॥
ಅವರಿಗಿ ಹಿಡಿದು ತಂದರು ಬಯಲೀಗ ॥
ಮಾತಾಡೆನೆಂದರೆ ಏಳುವಲ್ಲದು ನಾಲಿಗ॥
ಘನ ಮಹಿಮ ಬಸವಗ ॥ ಗಳಂಗರು ಹೇಳಿರು
ಮಾತ ಮಾತ್ರ ಐತಿ ಧಗಾ ॥ಜೀ॥

ವಾದ ವಿವಾದ ದಾಸೋಗದಾಗ ನಡೆದಿತು ಬಸವಗ ಬಂದಿತು ಖ್ಯಾಲಿಗ ॥
ಗಡನೆ ನಡೆದು ಹೋಗಿದಾರೋ ಅಲ್ಲೀಗ ॥ ಅವರ ಅಂಗದ ಮೇಲೆ ಹಾಕಿರು ನಿಗ॥
ಮಹಾಪ್ರಭು ಸಂಗಮೇಶ್ವರ ದೇವ ನಿನ ಕಡಿನೆ ಬಂತು ಈ ಪ್ರಸಂಗ ॥ ಜೀ ॥

ಜಗ ಜನಕ ಬಸವಗ ಜಂಗಮರು ಅಂದಿರು
ಭವ ಹದಗೆಡಿಸಿ ಬಿಟ್ಟಾರೋ ಹಿಂಗ॥
ಬದನಿಕಾಯಿ ಕಟ್ಯಾರ ಕೊರಳೊಳಗ ॥ ಜಾಗಾದಿಂದ ನೋಡಿದೆವು ಅವರೀಗ
ಭಯವಿಲ್ಲದೆ ಭಯಗೇಡಿ ಸೂಳಿಯಮಕ್ಕಳು
ಹೀಂಗ ಮಾಡಿ ಕೆಡಶ್ಯಾರ ಜಗ ॥ಜೀ॥
ಬಸವಣ್ಣ ಹೇಳಿರು ಬಾಕಿ ಜನರೆಲ್ಲ ನೀವು ಮಾಡಿರಿ ಹಾಂಗ ॥ ಅವರು
ಬದನೀಕಾಯಿ ಕಟ್ಟಿದ್ದಾಂಗ ಬಸವ ಹಸ್ತ ಮುಟ್ಟಿದ ಆಗಿವ ಲಿಂಗ ॥
ದಂಗ ಆಗಿ ಮಂಗ್ಯಾ ಥೊಂಟರು ಬಸವಾಗ ಹಾಕಿರು ಸಾಷ್ಟಾಂಗ ॥ ಜೀ ॥

॥ ದುಮಾಲಿ ॥
ಬಸವ ಥೊಂಟರಿಗಿ ಕೊಟ್ಟಿದ ಗುರುಭೋದಿ ॥
ಬಿಡರಿ ಇಂಥ ಹಾದಿ ॥ ಆಗಿ ಛಲವಾದಿ ॥
ಇರ್ರಿ ಊರ ಹೊರಗ ಕೇಳಿ ಬ್ರಾಹ್ಮರು ಆಗಿರು ಬೆರಗ ॥ ಜೀ ॥

ಥೊಂಟರು ಅಂದಿರು ಬಸವ ನಿಧಿ ಬಂತು ಭವಬಾಧಿ
ನಮಗೂಧಿ ॥ ನಾವೇ ಖೆಡವಿ ಕೊಂಡೆವು ಕಡೀಗ ॥
ದೋಷಯಾಕ ಕೊಡಾನು ನಿಮ್ಮ ಅಡಿಗ ॥ ಜೀ ॥

ಶರಣರು ಸತ್ತಿದು ಕೇಳಿ ವರದಿ ಗಂಟಿಕಟ್ಟಿ ॥
ಗರದಿ ಎದರ ನಿಂತ ತೊರದಿ ಚುಕ್ತಾ ಜಗದಾಗ ॥
ಬ್ರಾಹ್ಮರ ಪೂಜಾ ಕಲಿಯುಗದಾಗ ॥ ಜೀ ॥

॥ ಏರ ॥
ಬಸವಾನೆ ಶಿವಶಿವ ಹೌದೆಂದು ಥೈ ಥೈ ಕುಣದಿರು ಸಿದ್ಧ ಸಾಧುರು ॥
ಹಿಂಗ ಜೈಘೋಷ ಹೊಡದಿರು ಸಂತ ಸಾಧೂರ ॥
ಎಲ್ಲಾ ಪುರಾತರು ಅಂದಿರು ಬಸವ ಬಹದ್ದೂರ ॥
ಮಹಾನುಬಾವ ಬಸವೇಶ್ವರ ಜನಿಸಿದ
ಭೂಲೋಕ ಮಾಡುವದಕ ಉದ್ಧಾರ ॥ ಜೀ ॥ ॥ ಚೌಕ ೩ ॥

ಮೊದಲಿನ ಕಾಲಕ ಕುಲಕೊಬ್ಬ ಶರಣೆಂದು ಕಲ್ಯಾಣದೊಳು ಕೂಗ್ಯಾರ ॥
ಎಷ್ಟೋ ಮಹಾತ್ಮರು ಆಗಿ ಹೋಗ್ಯಾರ ॥
ಮಾನವರು ಅವರ ಪಾದಕ ಬಾಗ್ಯಾರ ॥
ಶಿವಶರಣರ ನಾಮ ಇಟ್ಟು ಮಕ್ಕಳ ತೊಟ್ಟಿಲು ಕಟ್ಟಿ ತೂಗ್ಯಾರ ॥ ಜೀ ॥

ಮುಸಲ್ಮಾನ ಮತದಲ್ಲಿ ಮಹ್ಮದ ಪೈಗಂಬರ ಜನಿಸಿ ಬಂದಿದಾರು ಸರದಾರ ॥
ಬಾಗಿ ಹೊಡಿಯೋನು ಬಾ ಎಂದು ಕರದಾರ ॥

ಕಲಮಾ ಓದಿಸಿ ಮಾಡಿಸಿರು ದಿನದಾರ ॥
ಯಾವ ಕಾಲದೊಳಂದ್ರು ಕೊಂಡಿ ಮಿಂಚಣ್ಣಗಳು
ಆಗು ಈಗು ಇದ್ದೆ ಇರತಾರ ॥ ಜೀ ॥

ಹತ್ತು ಎಂಟು ಮಂದಿ ಥೊಂಟರು ಕೂಡಿ ನಬಿ ಶರಣರಿಗಿ ತಡದಾರ ॥
ಕೈಯಾಗ ಹಿಡಿ ಹಿಡಿ ಹಳ್ಕಾ ಹಿಡದಾರ ॥
ಇವು ಏನವ ಎಂದು ನುಡದಾರ ॥
ಇದ್ದ ಮಾತು ಸಿದ್ಧಾಂತ ಹೇಳಿದರ ಪಾದಕ ಮಾಡತೆವು ನಮಸ್ಕಾರ ॥ ಜೀ ॥

ನಬಿ ಶರಣರು ಹೇಳಿರು ನಿಮ ಕಿವಿಗೆ ಹಚಿಕೋರಿ ವತ್ತರ ॥
ಅವೇ ದಿನಸ ಕೊಡತಾವ ನಿಮ ಉತ್ತರ ॥
ಆ ವ್ಯಾಖ್ಯಾಕ ಆಗತಿರಿ ಗುರುಪುತ್ತರ ॥
ನಾನು ನಿಮ್ಮಂತೆ ಮನಶ್ಯಾ ಇರವೆನು ನನ್ನ ಮೈಯೊಳು ಐತಿ ನೆತ್ತರ ॥ ಜೀ ॥

ಬಿಡಕಿ ಥೊಂಟರ ಶಬ್ದ ನುಡದಿತು ಅಲ್ಲಾ ಹೂ ಅಕಬರಾ ॥
ಮತ್ತು ಲಾಹಿಲಾ ಇಲ್ಲಿಲ್ಲಾ ತೂರಾ ॥
ಮಹ್ಮದ ರಸುಲುಲ್ಲಾ ಪರವರದಿಗಾರ ॥
ಇಷ್ಟ ಕೇಳಿ ಜಟ್ಟನೆ ಪಾದಕ ಬಿದ್ದಾರ ॥ ಜೀ ॥

॥ ದುಮಾಲಿ ॥
ಮೂಢತನರ ಬುದ್ದಿ ಮಾಡಿ ಹೊಡೆಯದೆ ನಿಮ್ಮ ಖೂನ್ ಆದವು ಅಪಮಾನ ॥
ಶರಣರ ರಸೂಲುಲ್ಲಾ ಮರಣ ರಹಿತ ಮಾಡಿಕೋರಿ ಚೇಲಾ ॥ ಜೀ ॥
ರಾಮ ರಹಿಮ ನೀನೆ ರಹಿಮಾನ ॥ ಖರೆ ನಿಮ್ಮ ಖುರಾನ, ಆಗತೆವು ಮುಸಲ್ಮಾನ॥
ನುಡದಿರು ಬಿಸಮಿಲ್ಲಾ ॥ ಆಗ ಪೈಗಂಬರ ಕೂಡಸಿರು ಪ್ಯಾಲ ॥ ಜೀ ॥
ಸವಾಲಕ್ಷ ಕೂಡಿತು ಜನ ಮಕ್ಕಾ ಮದಿನಾ ಶರಣರ ವತನ ॥
ಇಂದು ಹಗಲೆಲ್ಲಾ ತಗಲಿಲ್ಲದೆ ಓದಿ ಕಲಾಮುಲ್ಲಾ ॥

॥ ಏರ ॥
ಧರಿಯೊಳು ಹಿರೆಸಾವಳಗಿ ಜಗದ್ಗುರು ಶಿವಯೋಗಿ ಕಮರಿಯೊಳು ಸಿದ್ದರ ೩೬೦
ಇನಾಮ ಗೆದ್ದಾರ ॥ ಮಹ್ಮದ ಕವಿ ಅವರಿಂದೆ ಉದ್ದಾರ ॥
ಮಹಾನುಬಾವ ಬಸವೇಶ್ವರ ಜನಿಸಿದ ಭೂಲೋಕ ಮಾಡುವದಕ ಉದ್ಧಾರ ॥ ಜೀ॥

— ಕವಿ: ಸಾವಳಗಿ ಮಹಮ್ಮದಸಾಬ
ಸಂಗ್ರಹ : ಡಾ। ಹರಿಶ್ಚಂದ್ರ ದಿಕ್ಸಂಗಿಕರ್

***

ಬಾಗೇವಾಡಿ ಬಸವಣ್ಣ ಗೀಗೀ ಪದ

ಬಾಗೇವಾಡಿ ಎಂಬುವದು ಅವರೊತನಾ ।
ಪ್ರವೀಣಾ । ಹುಟ್ಟಿದನೋ ಬಸವಣ್ಣ ॥ ಜೀ ಜೀ ॥
ಎಲ್ಲಾನು ಬಲ್ಲವನಾಗಿ ದಿನದಿನಕ ದೊಡ್ಡವನಾಗಿ ।
ಅಲ್ಲಿಂದ ಹಿಡದಾನೋ ಹಾದಿ ।
ಬಿಜ್ಜಳಂದು ಕಂಡನು ಗಾದಿ । ಬಿದ್ದಂತ ಲಿಪಿ ಓದಿ ।
ಕಲ್ಯಾಣ ಎಂಬುವ ಪುರುವ ।
ಅಲ್ಲಿ ನಡೆಸಿದ ಹೆಚ್ಚಿನ ವರವಾ ।
ಬಿಜ್ಜಳಂದು ಮುರಿದಾನೋ ಗರುವಾ ।
ಬಸವನೆಂಬೋ ನಾಮಾ । ಸರ್ವರಿಗೆ ಪ್ರೇಮಾ ॥ ಬಾಗೇವಾಡಿ ॥ ಜೀ ಜೀ ॥

ಜೈನಮತವಾ ಉರಸಿದನೋ ಮುಖ್ಯ ತಾನಾ । ಬಸವಣ್ಣಾ ।
ಮಾಡಿದಾನೋ ಲಿಂಗಧಾರಣಾ । ಜೈನ ಮತವಾ ।
ಲಕ್ಷದ ಮೇಲೆ ತೊಂಭತ್ತಾರು ಸಾವಿರ ಜಂಗಮರನಾ ।
ಬಸವೇಶ್ವರ ಪಡಿಸಿದ ತೃಪ್ತಿ । ಇಟ್ಟಾನೋ ಭಕ್ತಿ ।
ಜಂಗಮರು ನಡಿಸ್ಯಾರೋ ಜಾತೀ ।
ಶಾಪಿಟ್ಟಾನೋ ಬಸವಣ್ಣ ಬಾಯಲಿ । ಕಲ್ಯಾಣ ಕಟಗ್ಗೇರಾಗ್ಲಿ ।
ಕರಿಮಲ್ಲಿಗೆ ಗಿಡ ಒಂದು ಚಿಗಿಯಲಿ ।
ಹಿಂಗಿಟ್ಟಾನೋ ಶಾಪಾ । ನಡಿದಾನೋ ಬಸವಾ । ಬಾಗೇವಾಡಿ ॥ ಜೀ ಜೀ ॥

ಅಲ್ಲಿಂದ ಕಪ್ಪತಿ ಸಂಗಮಕ ಹೋದ ಐಕ್ಯಾದ ।
ಹಂಪಿಲಿ ಜನನಾದ । ಕಾಗಿನೆಲಿಯನ ಕಂದ । ಮಲ್ಲಶೆಟ್ಟಿ ವೈದಾನ ಬಂದ ।
ದಿನದಿನಕ ದೊಡ್ಡವನಾಗಿ ದೇಶ ಸಂಚಾರ ಮಾಡಿದ ಹೋಗಿ ।
ಎಲ್ಲಾನು ದೇಶವ ತಿರುಗಿ ।
ಸಲಗಾಯಿ ಎಂಬುವ ಊರಾ । ಅಲ್ಲಿ ಹೊಕ್ಕಾನೋ ಬಸವೇಶ್ವರ ।
ಹನ್ನೊಂದು ಮಂದಿ ಹಟಗಾರ ಹತ್ತಿದಾರೋ ಬೆನ್ನ ।
ಕರೆತಂದ ಬಸವಣ್ಣಾ ॥ ಬಾಗೇವಾಡಿ ॥ ಜೀ ಜೀ ॥

ಲಿಂಗ ಬರಗೆದು ನಿಂತ್ರು ನದಿಯಾಗ ।
ಒಬ್ಬವ ಉಳಿಸಿದಾನೋ ಕೊರಳಾಗ ।
ಬಗೆದ ಲಿಂಗ ಕೂತಾವ ಗಂಗಾ ।
ಕಾಯದವೇ ಕೇಳಿ ಬೇಡಿ ಲಿಂಗ ।
ಹತ್ತಿದಾರೋ ಆತನ ಹಿಂದ ।

ಬಸವಣ್ಣ ಕರೆತಂದ ನೋಡಿದ ಸ್ಥಳ ಬಂದ ।
ಕೊಡೇಕಲ್ ಎಂಬುವ ಗ್ರಾಮ । ಅಲ್ಲಿ ತೋರಿದ ಬಸವ ಮಹಿಮೆ ।
ಇರಲಿಕ್ಕೆ ಮಾಡಿದ ಕಾಯಮ ।
ಹಿಂಗೇಳಿ ಕಾಯ ಮಾಡಿದನೋ ಮಾಯ ॥ ಬಾಗೇವಾಡಿ ॥ ಜೀ ಜೀ ॥

ಹೋದಂತ ಜನರು ಅಲ್ಲಿಗೆ ಹೋಗಿ ।
ಸ್ಥಿರವಾಗಿ ನಿಂತರು ಪೂಜಿಗಿ ।
ಹಗರಲಿರುಳು ಬಸವನ ಧ್ಯಾನ । ಮಾಡಿ ಅವರು ಹಿಡಿದಾರೋ ಚರಣ ।
ಗುಡಿ ಕಟ್ಟಲಿಕ್ಕೆ ಆರಂಭ ।
ತೊಲಿ ತುಂಡು ಕಲ್ಲಿನ ಕಂಬ ।
ಅವನಿಗನ್ನಬೇಕು ದೇವತೆಯ ಸಾಂಬಾ ॥
ಛತ್ತರ ಕಟ್ಟಿ । ಮತ್ತೊಂದು ಹುಟ್ಟಿತು ಹೊಸ ಪ್ಯಾಟಿ ।
ಅಲ್ಲೊಂದು ಗುಡಿಯ ಕಟ್ಟಿ ।
ಜಾತ್ರೆಯ ನೇಮಿಸಿ ಜೋಡ ಪಲ್ಲಕ್ಕಿ ಮೆರೆಸಿ ॥ ಬಾಗೇವಾಡಿ ॥ ಜೀ ಜೀ ॥

ಹಟಯೋಗದಿಂದ ನಡೆದವರೋ । ಎಂಥವರೋ ।
ಗುಡಿ ಕಟ್ಟಿ ಮಾಡ್ಯಾರೋ ಸ್ಥಾಪನಾ ।
ಗುರುಸ್ವಾಮಿ ಬಸವರಾಜಪ್ಪನ ।
ಬಹಳವರ ಪ್ರಬಲತ್ವ । ಬಲ್ಲವರವರು ಎಲ್ಲಾ ನೀತಿ ತತ್ವ ।
ಬೇರೆ ಆದೋ ಅವರ ಮಹತ್ವ ।
ಕುಲದೊಳಗೆ ಆದರು ಪೂಜಾ ।
ಮುಂಚ್ಯಾಗಿ ಬರುವದು ತಾಜ ।
ಪ್ರಣವಾಕ್ಷರ ಮಂತ್ರದ ಬೀಜ ।
ಅವರಲ್ಲಿ ಸಿಲುಕ್ಯಾದೋ ಮತ್ತ್ಯಾಯಾರಿಗೆ ನಿಲುಕ್ಯಾದೋ ॥ಬಾಗೇವಾಡಿ ॥ಜೀಜೀ॥

ಹಿರಿತನದವರು ಹೋಗವ ರಸ್ತೆ । ಹಿಡಿದು ಬಸ್ತಿ । ಸರ್ಕಾರದ್ದು ಸುತ್ತಗಸ್ತಿ ।
ದೇಸಾಯಿಯವರು ಸೊಗಸ । ಬರ ಮುಂದ ಭಾಳ ಕಳಸ ।
ದೀನ ಬಾಜಿ ತಮ್ಮಟಿ ಭೇರಿ । ಚೆನ್ನ ಕಹಳೆ ಊದುವನ ಪೂರಿ ।
ಮುಂದೂದುವ ಎರಡು ತುತ್ತೂರಿ ।
ಹತ್ತೆಂಟು ಮೇಲ್ಗಡಿ ಮೇಳ । ಲೆಕ್ಕಿಲ್ಲದೆ ಬಡಿದಾರು ತಾಳ ।
ಹಲಗಿ ಕೊಂಬಿನ ಸಪ್ಪಳ ।
ಬ್ರಹ್ಮಾಂಡ ನಡಗಿತೋ । ಪಿಂಡಾಂಡ ಸಡಿಲಿತೋ ॥ ಬಾಗೇವಾಡಿ ॥ ಜೀ ಜೀ ॥

॥ ಚೌಕ ೧ ॥

ಸುದ್ದಿ ಹರಡಿತೋ ಸಗರನಾಡ ಮಲ್ಲಾಡ । ಹುಬ್ಬಳ್ಳಿ ಧಾರವಾಡ ।
ಬೇಡಿಕೊಂಡ್ರು ಭಕ್ತಿಂದ । ಪಡೆದಂಥ ಕೂಸಿನ್ನ ತಂದ ।

ಗುಡಿಯ ಮುಂದೆ ಕೂಸಿನ್ನ ಹಾಕಿಸಿ । ನಿಂತಾರೋ ಕೈ ಜೋಡಿಸಿ ।
ಅವರ ಮಕ್ಕಳ ಪ್ರಾಣ ಉಳಿಸಿ ।
ತಮ್ಮ ಮಕ್ಕಳ ತಮ್ಮ ಉಕಿಯಾಗ । ಭಕ್ತಿ ಇಟ್ಟು ನಡಕೊಂಡವಗ ।
ಬೇಡಿದ್ದು ದೊರಿಯುವುದೋ ಪಾಪ ಹರಿಯುವುದೋ ॥ ಬಾಗೇವಾಡಿ ॥ ಜೀಜೀ॥

ಮೈ ಯೊಳಗ ದೆವ್ವ ಭೂತ ಇದ್ದವರು ಎದ್ದವರು ।
ಥೈ ಥೈ ಎಂದು ಕುಣಿಯುವರೋ ।
ಕುಣಿತಾರೋ ಕೂದಲ ಬಿಚ್ಚಿ । ಜನ ನೋಡಿ ನಿಂತಾರೋ ನಾಚಿ ।
ಲೋಬಾನ ಕರ್ಪೂರ ಕಾ । ಮುಳಗಿ ಹೊಡದಾರೋ ಜಕ್ಕಣಿ ಬಾಯಿ ।
ಹೊರತೊಂದೇ ತಂದೆ ತಾಯಿ ।
ಅಮ್ಮಾಪುರ ಎಂಬುವ ಗ್ರಾಮ । ಅಲ್ಲಿ ಹಾಡುವರು ಬಸವ ಹನುಮ ।
ಪದಮಾಡಿದ ಸರ್ವೋತ್ತಮ । ಜನ ನೋಡಿ ಕೇಳಿ ಊದಿಸಿದರೋ ಕಹಳೆ ॥
ಬಾಗೇವಾಡಿ ॥ ಜೀ ಜೀ ॥

– ಕವಿ: ಸರ್ವೋತ್ತಮ ಅಮ್ಮಾಪುರ

***

ಬಸವೇಶ್ವರ ಚರಿತ್ರೆಯ ಲಾವಣಿ

ಶಿವಪಥದವರು ಕೇಳಿರಿಸುಧಾರಿಸಿ ಆದಿ ಅನಾದಿಯಲ್ಲಿ ।
ಮಾನ್ಯರು ಜನಿಸದರಲ್ಲಿ ॥
ಬಸವೇಶ್ವರನ ಕತೆಬಿಚ್ಚಿ ಹೇಳುವೇನು ನೆರದಸಭಾದಲ್ಲಿ ॥ ಜೀ ಜೀ ॥ ಪ ॥

ಮೂರುಲೋಕ ತರುಗಾಡಿ ನಾರದ ಹೋದ ಶಿವನಲ್ಲಿ ।
ದೇವತೆಗಳ ಸಭಾ ಕೂಡಿತಲ್ಲಿ ॥
ಮರ್ತ್ಯಲೋಕದ ವರ್ತಮಾನ ಕೇಳತಾರ ಏನೇನ ಇರುವದಲ್ಲಿ ॥ ಜೀ ॥

ನಾರದನಿಂತು ಮಹಾದೇವರ ಮುಂದ ಹೇಳತಾನ ಬಾಯಿಲಿ ।
ಆದ ರೀತಿ ಭೂಮಿ ಮ್ಯಾಲಿ ।
ವೀರಶೈವ ಮತಕ್ಷೀಣವಾಗತಾದ ಹೀನಾವಸ್ಥೆಯಲ್ಲಿ ॥ ಜೀ ಜೀ

ಪಂಚ ಮುಖದ ಪರಮಾತ್ಮ ಪಾರ್ವತಿ ಗಂಗಾಜಡಿಯಲ್ಲಿ
ಗಣಪಕೂತಿದ್ದ ತೋಡಿಮ್ಯಾಲಿ
ನಂದಿವಾಹನಗೆ ಮುಂದ ಹೋಗಂತ ಹೇಳತಾನ ಕರ್ಣದಲ್ಲಿ ॥ ಜೀ ಜೀ ಜೀ

॥ ಇಳವು ॥
ಈ ಪೊಡವಿಯೊಳಗ ನೀಲಗಿರನ್ನುವಊರಾ ।
ಈಗಾಯಿತು ಬಾಗೇವಾಡಿ ಹೆಸರ ।
ಆ ಪಟ್ಟನಾದ ರಾಜರು ಮಾಡತಿದ್ರು ಪರೋಪಕಾರ ।
ಅವರಿಗಿದ್ದಿದಿಲ್ಲ ಪುತ್ತರಾ ।
ಮದುವರಸ ತಂದಿ ಮಾದಲಾಂಬಿಕೆ ತಾಯಿ ಹೆಸರು ।
ಇವರ ಭಕ್ತಿಗೊಲಿದ ಶಂಕರ ॥ ಜೀ ಜೀ

॥ ಏರು ॥
ಹುಟ್ಟಿದ ಐದು ದಿನಕ್ಕೆ ಸಂಗಮನಾಥ ಬಂದ ಶಿಶುವಿನಲ್ಲಿ ।
ಲಿಂಗಧಾರಣ ಮಾಡಿದ ಅಂಗದಲ್ಲಿ ।
ಬಸವೇಶ್ವರನ ಕತಿ ಬಿಚ್ಚಿ ಹೇಳುವೆ ನೆರದಸಭಾದಲ್ಲಿ ॥ ಜೀ ಜೀ ಜೀ

ಬಹಳ ದಿವಸಕ ಬಾಲ ಹುಟ್ಟಿದನಂತ ಪ್ರೀತಿಯಿಂದ ಊರಾಗ ಜೈಭೇರಿ ಹೊಡಿಸಿದ
ರಾಜಸಭಾ ಮಾಡಿ ಸಕ್ರಿ ಹಂಚಿದರೊ ಗಾಡಿ ಮಾಡಿ ನೂರಾವೊಂದಾ
ಬ್ರಾಹ್ಮಣರ ಹೊಟ್ಟಿಲೆ ಹುಟ್ಟಿ ಬಸವೇಶ್ವರಾ ಬಾಳಿಎಲೆಯಂತೆ ಬೆಳೆದ ।
ಸೂರ್ಯನಂತೆ ಹೊಳೆದು । ಜೀ ಜೀ

ಆರು ಶಾಸ್ತ್ರ ಹದಿನೆಂಟು ಪುರಾಣ ತಿಳಿದಿದ್ದ ನಾಲ್ಕು ವೇದ ।
ಒಂದಾನೊಂದು ದಿವಸ ಹುಡುಗರ ಸಂಗಾಟ ಭಾವಿ ಜಳಕಕ್ಕ ಹೋಗಿದ್ದ
ಹತ್ತಿರದಲ್ಲೊಬ್ಬ ನಿಂತಿದ್ದ ।
ಕಾಲು ಜಾರಿ ನೀರೊಳಗ ಮುಳುಗಿತೊ ಬಸವೇಶ್ವರಗೆ ಬಂತೊ ಶಬ್ದ । ಜೀ

ನೆರೆದ ಹುಡುಗರೆಲ್ಲ ಹರಿದು ಓಡಿದವು ಬಂದದಾರಿ ಹಿಡಿದ ।
ಬಸವಗ ಕೇಳತಾರ ಬಡದಾ ।
ನಾ ನೂಕಿಲ್ಲ ತಾನೆ ಬಿದ್ದಾನಂತ ಬಸವನು ಹೇಳಿದಾ । ಜೀ ಜೀ ಜೀ

॥ ಇಳವು ॥
ಈಗ ಸುಳ್ಳಾದರೆ ನೀವು ನಡಿರಿ ಭಾವಿಗೀ ।
ಕಬಲ ಮಾಡಸ್ತಿವಿ ಗಳಿಗ್ಯಾಗ ।
ಇಷ್ಟು ಹೇಳಿದ್ದು ಕೇಳಿ ಜನಕೂಡ್ಯಾದ್ರಿ ಆಗ ।
ಬಾ ಎಂದು ಕರದಾನೊ ಹೊರಗ ।
ಆ ಸತ್ತ ಹುಡುಗ ಎದ್ದುನಿಂತ ನೀರಿನ ಮ್ಯಾಗ
ಯಾರು ನೂಕಿಲ್ಲ ಅಂತಾನ ನನಗ ॥
ಇಷ್ಟು ಹೇಳಿ ಹುಡುಗ ಮಾಯವಾದನು ನೀರೊಳಗ ।
ಜನ ದಂಗಾದಿತು ಆಗಾ ॥ ಜೀ ಜೀ ಜೀ

॥ ಏರು ॥
ಆ ಗಾಥ ಮಹಿಮ ಆದದ್ದು ನೋಡಿ ಬಸವನ ಮೈ ಮ್ಯಾಲಿ
ತಂದ ಹಾಕತಾರ ಹೂವಿನ ಮಾಲಿ ।
ಬಸವೇಶ್ವರನ ಕತೆ ಬಿಚ್ಚಿ ಹೇಳುವೇನು ನೆರೆದಸಭಾದಲ್ಲಿ ॥ ಜೀ ಜೀ ॥ ಚೌಕ ೩ ॥

ಬಸವನ ತಾಯಿತಂದಿ ಹರಹರ ಎನ್ನುತಲಿಮಂತ್ರ ಜಪಿಸುವರು ।
ಬ್ರಾಹ್ಮಣರ ಕರಸಿದರೊ ।
ನಾಳ ನಮ್ಮಲ್ಲಿ ಯಜ್ಞ ಆದಂತ ಊಟಕ ಹೇಳಿದರೋ ॥ ಜೀ

ಸರ್ವ ಸಾಹಿತ್ಯ ಅಡಗಿಯ ಮಾಡಿ ಎಲೆಗಳ ಬಡಿಸಿದರೊ ।
ಆಚಾರ್ಯರು ಊಟಕ ಕೂತಾರೋ ।
ಆಕಳ ಹಾಲು ತರಬೇಕಂತ ಮಧುವರಸನ ಕೇಳಿದರೋ ॥ ಜೀ ಜೀ

ಆಕಳ ಹಾಲು ತುರ್ತು ತರಬೇಕಂತ ಬಸವನ ಕಳಿಸದರೊ ।
ಹಾಲು ಕೊಡವಲ್ಲರು ಯಾರ್‍ಯಾರು ॥
ಸತ್ತ ಆಕಳ ಹೊತ್ತು ಪಾಡೆವಾರರು ಎದುರಿಗೆ ಬರುತಿದ್ರೊ । ಜೀ ಜೀ
ಹಾಲು ಸಿಕ್ಕವಂತ ಅದೇ ಆಕಳ ಮನಿಕಡೆ ಹೊರಸಿದರೊ ।
ಎಬ್ಬಿಸಿ ಕೊಡಹಾಲ ಕರಸಿದರೋ ।
ಸತ್ತ ಆಕಳ ಹಾಲು ಸೂತಕ ಆಗತಾವ ಸಾಕಂತ ಎದ್ದರೊ । ಜೀ ಜೀ

॥ ಇಳವು ॥
ಕುಲಾಚಾರ ದೈವಕ್ಕೆ ಮಾಡಿಸಿದಂತ ಬಾ ಬಾ ।
ಸದ್ಯ ಆಗದು ಬಂತು ನಷ್ಟಾ ।
ಬಸವನ ತಾಯಿ ತಂದಿಗಿ ಬಂತು ಸಂಕಟಾ ।
ಕೈಲಾಸಕ ವರ್ದಿಕೊಟ್ಟಾ ।
ಮಡದಂತ ಮಾನ್ಯರು ಬಂದಾರ ಕೈಲಾಸಬಿಟ್ಟಾ ।
ಸರ್ವರಿಗೆ ಮಾಡಿಸಿದ ಊಬಾ ।
ಇಂಥ ಎಷ್ಟೊ ಪವಾಡ ಮಾಡಿಸಿದ ಬಸವ ಬಂಟಾ ।
ಬಸವನು ಗುರುಪಾದ ಕಡೆ ಚಿತ್ತಿಟ್ಟಾ ॥ ಜೀ ಜೀ ಜೀ

॥ ಏರು ॥
ಮಹಾದೇವ ಹೇಳಿದ ಮಾತು ಮನಸಿಗೆ ತಂದುಹೋದನು ಗುರುವಿನಲ್ಲಿ ।
ಕೃಷ್ಣನದಿ ದಂಡಿಮ್ಯಾಲಿ ।
ಬಸವೇಶ್ವರನ ಕತೆ ಬಿಚ್ಚಿ ಹೇಳುವೆನು ನೆರದ ಸಭಾದಲ್ಲಿ ॥ ಜೀ ಜೀ ॥ ಚೌಕ ೩ ॥

ಅಕ್ಕನಾಗಮ್ಮನ ಕರಕೊಂಡು ಬಸವಣ್ಣ ನಡದಾನ ಕಲ್ಯಾಣಕ ।
ವೀರಶೈವ ಮತ ಬೆಳಸುದಕ ॥
ಆ ಪಟ್ಟಣದ ರಾಜ ಜೈನಮತದವನು ಇದ್ದನು ಬಿಜ್ಜಳಂಕ ॥ ಜೀ ಜೀ

ಹಗಲದೀವಟಿಗಿ ಅಡ್ಡಪಲ್ಲಕ್ಕಿಯಲ್ಲಿ ಬರುತಾದ ಸದನಕ ।
ಬಲದೇವ ಮಂತ್ರಿ ಬಂದ ಆಕ್ಷಣಕ ॥
ಆಕಾಶದಿಂದ ಲಿಪಿಯಕಲ್ಲ ಬಂದ ಬಿದ್ದಿತೊ ತಿಳಿಯಾಕ । ಜೀ

ಕಲ್ಲಿನ ಸುತ್ತ ಬಲ್ಲ ಜಾಣರು ನೆರದಾರು ನೋಡುದಕ ।
ಓದುವ ಹವಣಿಕೆ ಹಾಕಿದರು ॥
ಅರಸನು ಬಂದು ಬಂದು ಲಿಪಿಯ ನೋಡಿ ತಾ ಮಾಡತಾನ ತರ್ಕ । ಜೀ

ಯಾರ ಕಡೆ ಓದುದು ಆಗದು ತಿಳಿಯದು ಇದರ ಹೊಯ್ಕ ।
ಕುಂತ ಹಾಕತಾರ ತೂಕ ॥
ಆಕಶವಾಣಿ ಬಸವನ ಹೆಸರ ಹೇಳಿ ಹೋಯಿತೊ ಗಗನಕಾ ॥ ಜೀ ಜೀ ಜೀ

॥ ಇಳವು ॥
ಬಸವನ ಕರಸಬೇಕಂತ ಅರಸ ಹೇಳಿದನೋ
ಬಲದೇವ ಹರ್ಷವಾದನೋ ।
ಅಳಯನ ಮುಂದ ಬಲದೇವ ಹೇಳಿದನೋ ।
ರಾಜಾಜ್ಞೆಯನ್ನು ತಿಳಿಸದನೋ ।
ಸುದ್ದಿ ಕೇಳಿ ಬಸವ ತಯ್ಯಾರಾಗಿ ತೇಜವರಿದನೋ
ಸಂಭ್ರಮದಿ ಸಭೆಗೆ ಬಂದಾನೋ
ಅಂತರಂಗದಲ್ಲಿ ಗುರುವಿನ ಸ್ಮರಣಿ ಮಾಡಿದನೋ
ಆ ಲಿಪಿಯ ಕಲ್ಲ ಓದಿದನೋ ॥ ಜೀ ಜೀ

॥ ಏರು ॥
ಪರಂಜ್ಯೋತಿ ಪರಮಾತ್ಮ ಬಸವನ ಕೀರ್ತಿ ಲೋಕದಲ್ಲಿ
ಸಾರುದನಂತ ಯುಗದಲ್ಲಿ ।
ಬಸವೇಶ್ವರನ ಕತಿ ಬಿಚ್ಚಿ ಹೇಳುವೆನು ನೆರದ ಸಭಾದಲ್ಲಿ । ಜೀ ಜೀ ॥ ಚೌಕ ೪ ॥

ಲಿಪಿಯ ಮಜಕೂರ ನಾ ಸಾರಿ ಹೇಳತೀನಿ ಕೇಳಿರಿ ನೀವು ಕಿವಿಕೊಟ್ಟ
ಅ್ಕ ್ಮನ ಅಕ್ಷರದ ಬಿಕ್ಕಟ್ಟಾ ।
ಹಿಂದಿನ ರಾಜರು ಎಳು ಕೋಟಿ ದ್ರವ್ಯ ಹೋಗ್ಯಾರ ಹೂಳಿಟ್ಟಾ ॥ ಜೀಜೀ ಜೀ

ದಾನ ಧರ್ಮ ಪರೋಪಕಾರ ಮಾಡಿ ನಡಿಸಬೇಕು ಈ ಪಟ್ಟಾ ।
ಅನ್ಯಾಯ ಸರ್ವರಿಗೂ ಕೆಟ್ಟ
ಸಿಂಹಾಸನದ ಬುಡದಲ್ಲಿ ಇರುವದೆಂದು ಹೇಳಿದನಾ ಗಂಟಾ । ಜೀ ಜೀ ಜೀ

ಹರ್ಷದಿಂದಲಿ ಪುರುಷ ಬಿಜ್ಜಳರಾಜ ತಗಿಸದನು ಆ ಗಂಟಾ ।
ಧನದ ರಾಶಿ ನೋಡಿ ಕಣ್ಮುಟ್ಟಾ ।
ಮಾಡಿದ ಲೀಲಾ ನೋಡಿ ಬಸವೇಶ್ವರಗೆ ಕೊಟ್ಟ ಪ್ರಧಾನಿ ಪಟ್ಟಾ ॥ ಜೀ ಜೀ

॥ ಇಳವು ॥
ಬಿಜ್ಜಳರಾಜ ಬಸವೇಶಗೆ ಮಾಡಿ ಬಹುಮಾನ
ಮೇಣೆದಲ್ಲಿ ಕೂಡ್ರಿಸಿ ಕಳಿವಿದನು ॥
ಎಡಬಲ ಛತ್ರ ಚಾಮರ ಹೂವಿನ ಹಾರವನಾ ।
ಕಂದುಗೊರಳನಂತ ರಂಭಾವನಾ ।
ರಾಜನ ಮುಂದ ಬಲದೇವ ವಚನ ಕೊಟ್ಟನಾ ।
ಮಗಳ ಕೊಟ್ಟ ಮದುವೆ ಮಾಡುವೆನಾ ।
ಲಗ್ನ ಮಾಡಿ ಕೊಟ್ಟ ಬಸವಣ್ಣಗೆ ನೀಲಮ್ಮನ ।
ಪ್ರದಾನಿ ಮಂತ್ರಿ ಪಟ್ಟ ಏರಿದನಾ ॥ ಜೀ ಜೀ ಜೀ

॥ ಏರಿ ॥
ಶಿವನು ಕೊಟ್ಟ ವಚನ ಶೀಘ್ರದಿಂದ ಬ್ಯಗು ಶರಣರ ಸಭೆಯಲ್ಲಿ
ಮಡಿವಾಳ ಮಾಚಯ್ಯನಲ್ಲಿ ।
ಬಸವೇಶ್ವರನ ಕಥೆ ಬಿಚ್ಚಿ ಹೇಳುವೆನೆಂದ ಸಭಾದಲ್ಲಿ ॥ ಜೀ ಜೀ ॥ ಚೌಕ ೫ ॥

ಬಸವೇಶ್ವರನು ಶವಮತದವರಿಗೆ ಹೇಳತಾನ ಅಕಲಾ ।
ಲಾಗ ಧರಿಸಿರೊ । ಇನ್ನಮ್ಯಾಲಾ ।
ಪುಂಡ ಜಂಗಮರಿಗೆ ಕೊಂಡಿ ಮಂಚಣ್ಣ ವೈರಿಯಾದನಲ್ಲಾ । ಜೀ ಜೀ

ಗಂಡ ಇಲ್ಲದೆ ಬಾಲಿ ಗರ್ಭಿಣಿ ಇದ್ದಾಳಂತ ಸುದ್ದಿಮಾಡಿದನಲ್ಲಾ ।
ನಾಗಮ್ಮನ ಸಭೆಗೆ ತಂದಾನಲ್ಲಾ ।
ಸಿಟ್ಟಿನಿಂದ ಹೊಟ್ಟೆಯೊಳಗಿನ ಕೂಸು ತಾನೇ ಉಸುರಿತಲ್ಲ ॥ ಜೀ ಜೀ ಜೀ

ಸಿಟ್ಟಿನಿಂದ ಜೈನ ಮತದವರ ಕೋಡು ಮುರಿಯುವದಕ್ಕೆ ಬರವೆ ನಿನ್ನ ಮ್ಯಾಲ ।
ಬರತಿನಿ ತಡಮಾಡುವದಿಲ್ಲಾ ।
ಇಷ್ಟುಕೇಳಿ ಜೈನರಿಗೆ ಜಲ್ಲ ಹೊಕ್ಕಿತೊ ಗಾಬರಾದರಲ್ಲೊ ॥ ಜೀ ಜೀ ಜೀ

॥ ಇಳವು ॥
ಬಲ್ಲಿದ ಶರಣರಿಗೆ ಬಸವನು ಹೇಳಿದನಪ್ಪಾ ।
ಕಲ್ಯಾಣಕ ಕೊಟ್ಟನೊ ಶಾಪ ।
ಲಕ್ಷ ತೊಂಬತ್ತಾರು ಸಾವಿರ ಗಣಂಗಳ ಗುಂಪು ।
ತನ್ನೊಳು ಮಾಡಿದನು ಗಪ್ಪಾ
ನಿರಕ್ಷರಿ ಮನುಷ ನಿಮಗ್ಹಾಡಿ ಹೇಳತಿನಿ ಸ್ವಲ್ಪಾ ।
ಮಾನ್ಯರು ಮಾಡಬೇಕರಿ ಮಾಪಾ
ದೇಶದೊಳಗ ಇಂಗಳಿಗಿ ಊರಾದ ಅಪರೂಪ ।
ಬಡೇ ಸಾಹೇಬ ಪೀರಾನ ಭೂಪ । ಜೀ ಜೀ ಜೀ

॥ ಏರು ॥
ಮಲ್ಲಾಹಸನ ಸಾಹೇಬ ಸಭಾದಾಗ ಬಂದು ಹೇಳತಾನ ಬಾಯಿಲಿ
ಆದ ರೀತಿ ಭೂಮಿಮ್ಯಾಲ
ಬಸವೇಶ್ವರ ಕಥೆ ಬಿಚ್ಚಿ ಹೇಳುವೆ ನೆರದ ಸಭಾದಲ್ಲಿ ॥ ಜೀ ಜೀ ॥ ಚೌಕ ೬ ॥

ಕವಿ : ಹಸನಸಾಬ ಬೀಬೀ ಇಂಗಳಗಿ
ಸಂಗ್ರಹ : ಶಂಕರಗೌಡ ಬಿರಾದಾರ

***

ಭಾಗ–೨

ಅಕ್ಕನಾಗಮ್ಮ– ಚೆನ್ನಬಸವಣ್ಣ ನೀಲಲೋಚನೆ ಹಾಡುಗಳು

೧೧. ಅಕ್ಕನಾಗಮ್ಮ – ಚನ್ನಬಸವಣ್ಣನವರ ಹಾಡುಗಳು

ತಂದೆಯು ಶಿವಸ್ವಾಮಿ

ತಂದೆಯು ಶಿವಸ್ವಾಮಿ ತಾಯಿಯು ನಾಗಮ್ಮ
ಕಂದನು ಚನ್ನಬಸವನು । ಸೋದರ್ಮಾವ
ದೊಡ್ಡವರು ಭೂಮಿಗಿ ಬಸವಣ್ಣ ॥ ೧ ॥

ಕಂದನ ಕೈ ಹಿಡಿದು ಮಠಕ್ಕೆ ಹೋಗತಿಯಾರ
ಕಂದ ಚನ್ನಣ್ಣನ ಹಡದವ್ವ । ನಾಗಮ್ಮ
ಕಂದಗ ಕರಕೊಂಡು ಹೊಂಟಾಳ ॥ ೨ ॥

ಆಚಕ ನಾಗಮ್ಮ ಈಚಾಕ ಶಿವಸ್ವಾಮಿ
ನಡಬರಕ ಹಾರ ಚನ್ನಬಸವಣ್ಣ । ಅವರಿಬ್ಬರ
ಮುಂದಿನ ಹಾರ ಬಸವಣ್ಣ ॥ ೩ ॥

ಕೂಡಲ ಸಂಗಮದಾಗ ಕುಂತಾರ ಬಸವಣ್ಣ
ಮಾಡ್ಯಾರ ನೋಡ ಹೊಸ ಆಟ । ಸೋದರಳಿಯ
ಕೂಡ್ಯಾರ ಅವರ ಆಟಕ್ಕ ॥ ೪ ॥

ಚಿಕ್ಕವರು ಚನ್ನಣ್ಣ ದೊಡ್ಡವರು ಧರಮತ
ಮಿಕ್ಕ್ಯಾದ ಜ್ಞಾನ ಅವರೊಳಗ । ಮಂಟಪಕ
ಚುಕ್ಕಿ ಚಂದ್ರಮರಾಗ್ಯಾರ ॥ ೫ ॥

– ಶ್ರೀಮತಿ ಗೌರವ್ವ ಕಾಡಾದಿ

***

ಚೆನ್ನಬಸವಣ್ಣ

ಕೂಡಲ ಸಂಗಮದಾಗ ಕೂಡ್ಯಾರ ಮಾವ ಅಳಿಯ
ನಡದಾರ ಧರಮದ ಹೊಸ । ಹಾದ್ಯಾಗ
ಹಾಡ್ಯಾರ ಹೊಸ ಧರುಮಕ ಹೊಸಹಾಡ ॥ ೧ ॥

ಸಂಗಮ ಬಿಡತಾರ ಕಲ್ಯಾಣಕ ಹೊರಟಾರ
ಸಣ್ಣವ ಚನ್ನ ಅಳತಾನ ಬಸವಣ್ಣ
ಕರಕೊಂಡು ಹೊಂಟಾರ ತನಗೂಡ ॥ ೨ ॥

ಸಣ್ಣಂವ ಹ್ಯಾಂಗ ಅನಬೇಕ ಚನ್ನಗ
ಕಣ್ಣಾಗಿ ಬೆಳದಾನ ಬಸವನ । ಸುಣ್ಣ
ಹಾಂಗ ದುಡದಾನ ಧರಮಕ ॥ ೩ ॥

ಬೆಳೆಯುತ ಬೆಳೆಯುತ ಯೋಗಿಯೇ ಆಗ್ಯಾನ
ಅಳದಾನ ಕಾಮಕ್ರೋಧ । ಲೋಭೆಲ್ಲ
ಚನ್ನನು ಶರಣ ಬಳಗಕ ಚಂದಿರನು ॥ ೪ ॥

ಪಂಚಾಚಾರ ಅಷ್ಟಾವರಣ.ಷಟ್‌ಸ್ಥಲ ಎಂಬವು
ಸಾಧಿಸಿ ತಾ ತೋರಿ ನುಡದಾತ ಚನ್ನಣ್ಣ
ಷಟ್‌ಸ್ಥಲ ಮೂರುತಿ ಆಗ್ಯಾನ ॥ ೫ ॥

– ಶ್ರೀಮತಿ ಗೌರವ್ವ ಕಾಡಾದಿ

***

ಅರತೀಲಿ ನಾನು ನೆನದೀನ

ಗುರುವಿಗಿ ನೆನದಿನಿ ಲಿಂಗಕ್ಕ ನೆನದಿನಿ
ಗುರುವಿನ ಗುರುವು ಉಳವಿಯ । ಚನ್ನರಿಗಿ
ಅರತೀಲಿ ನಾನು ನೆನದಿನಿ ॥ ೧ ॥

ಆಚ್ಯಾಕ ಶಿವಸ್ವಾಮಿ ಈಚ್ಯಾಕ ನಾಗಮ್ಮ
ನಟ್ಟ ನಡುಬರಕ ಕುಂತು ಚೆನ್ನರು । ನೋಡ್ಯಾರ
ಮಾವ ಬಸವನ ಶಿವಪೂಜೆ ॥ ೨ ॥

ಹುಟ್ಯಾರ ಕಪ್ಪಡಿ ಬೆಳದಾರ ಕಲ್ಯಾಣ
ಜೀವ ತೊರದಾರ ಉಳವ್ಯಾಗ । ಚನ್ನರು
ಉಳುವಿಯ ಚನ್ನ ಎನಿಸ್ಯಾರೊ ॥ ೩ ॥

ವಯದಾಗ ಸಣ್ಣವರು ಜ್ಞಾನಕ ದೊಡ್ಡವರು
ಮಾಯವ ಹರಿದು ನಿಂತವರು । ಚನ್ನರು
ಕಾಯವ ಧರ್ಮಕ ಮೀಸಲು ॥ ೪ ॥

ಬಸವಣ್ಣ ಗುರುವಾಗಿ ಲಿಂಗವ ಕಟ್ಯಾರ
ಗಟ್ಯಾಗಿ ಆ ಲಿಂಗ ಉಳದಾದ । ಚನ್ನರು
ಗಟ್ಟಿಯ ತತ್ತ್ವ ನುಡದಾರೊ ॥ ೫ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

ಚನ್ನಬಸವಣ್ಣ ಬರುತಾರಂತ

ಬರತಾರಂತ ಬರುತಾರಂತ
ಚನ್ನಬಸವಣ್ಣ ಬರುತಾರಂತ ॥ ಪ ॥

ಅಂದು ಇಂದು ಅನಬಾರದಂತ
ಸಂದ ನೋಡಿ ಬರುತಾರಂತ
ಸಂದ ನೋಡಿ ಬರುತಾರಂತ
ಜನರ ಝುಡತಿ ಕೇಳುತಾರಂತ ॥ ೧ ॥

ಹಣಿಮ್ಯಾಲ ವಿಭೂತಿ ಧರಿಸಬೇಕಂತ
ಹಣಿ ಕೆತ್ತಿ ನೋಡುತಾರಂತ
ವಿಭೂತಿಯಿದ್ದವರು ಅವರ ಮಕ್ಕಳಂತ
ಇಲ್ಲದವರು ಭವಿಗಳಂತ ॥ ೨ ॥

ಆಚಾರ ವಿಚಾರ ಇರಬೇಕಂತ
ಇದ್ದವರಿಗಿ ಸಲುತಾರಂತ
ತಾಯಿ ತಂದೆ ಮಾತ ಮೀರಬಾರದಂತ
ಮೀರಿದವರು ಮಹಾರೋಗಿ ಆಗುತ್ತಾರಂತ ॥ ೩ ॥

ಜಾರ ಕರ್ಮ ಮಾಡಬಾರದಂತ
ಮಾಡಿದವರಿಗಿ ನರಕವಂತ
ಕುಚಲಗುಣ ಇರಬಾರದಂತ
ಕುರುಡರಾಗಿ ಹುಟ್ಟುತ್ತಾರಂತ ॥ ೪ ॥

ಖೊಟ್ಟಿ ಮಾಪಿಲಿ ಅಳಿಬಾರದಂತ
ಕೊಟ್ಟಿದ ಗಂಟ ಬರದಿಲ್ಲಂತ
ಹಣಬಂದರ ಹಿಗ್ಗಬಾರದಂತ
ಬಡತನ ಬಂದರ ಅಳಬಾರದಂತ ॥ ೫ ॥

– ಶ್ರೀಮತಿ ಗೌರವ್ವ ಕಾಡಾದಿ

***

ಬರುತಾರಂತ ಬರುತಾರಂತ

ಬರುತಾರಂತ ಬರುತಾರಂತ ಚನ್ನಬಸವಣ್ಣ ಬರುತಾರಂತ ॥ ಪ ॥

ಅಂದು ಇಂದು ಅನ್ನಬೇಡರಂತ ಸಂದ ನೋಡಿ ಬರುತಾರಂತ
ಸಂದ ನೋಡಿ ಬರುತಾರಂತ ಜಗದ ಥಡಕಿ ತೊಗೋತಾರಂತ ॥ ೧ ॥

ಹಣಿಕೆತ್ತಿ ನೋಡುತಾರಂತ ಇಬತ್ತಿದ್ದರಿಡುತಾರಂತ
ಇಬತ್ತಿಲ್ದೋರಿಗಿ ಬಯತಾರಂತ ಏನ ಸಜಾ ಕೊಡುತಾರಂತ ॥ ೨ ॥

ಊರು ಊರಿಗಿ ಹೋಟೆಲ ಸಿಸ್ತ ಚ್ಯಾ ಕುಡ್ಯಾ ಮಂದಿ ಆಯುಷ್ಯಾ ಹೋಯ್ತು
ಹೆಂಡರ ಮಕ್ಕಳ ಅಳತಾರ ಕುಂತ ಮನ್ಯಾಗ ಜ್ವಾಳವಿಲ್ಲಂತ ॥ ೩ ॥

ಶರಿ ಸಿಂಧಿ ಕುಡಿತಾರಂತ ಜುವ್ವಾ ಬಾಜಿ ಆಡತಾರಂತ
ಹೊಲ ಮನಿ ಮಾರ್ತಾರಂತ ಮರ್ತ್ಯದ ಮ್ಯಾಲೆ ಹೋಗುತಾರಂತ ॥ ೪ ॥

ಖೊಟ್ಟಿ ಮಾಪ ಇಡತಾರಂತ ಕೊಟ್ಟಿದ ಗಂಟ ಬರದಿಲ್ಲಂತ
ಹಣ ಇದ್ದರ ಹಿಗ್ಗಬೇಡರಂತ ಬಡತನ ಬಂದರ ಅಳಬೇಡರಂತ ॥ ೫ ॥

ಅನ್ನ ದಾನಿ ಆಗಿ ಮಾರೈತ ಹೊನ್ನಿಗೊಮ್ಮನ ಧನಿ ಮಾರೈತ
ಕಾಲಜ್ಞಾನ ಸೂಚಕ ಮಾತ ಕಡಿಗ ಬಂದು ನಿಂತಂಗೈತ ॥ ೬ ॥

ಘುಮ್ಮನಸೂರ ಊರಾದಂತ ರೇವಪ್ಪಸ್ವಾಮಿ ಜ್ಞಾನಿವಂತ
ಸಿದ್ಧಪದ ಹಾಡ್ಯಾರಂತ ಬೇಕಾದವರು ಬರಕೋರೆಂತ ॥ ೭ ॥

– ಶ್ರೀಮತಿ ಜಯಶ್ರೀ ಪತಂಗೆ
–ಶ್ರೀಮತಿ ಈರಮ್ಮ ಅಕ್ಕಸಾಲಿಗ ಗೋರ್ಟಾ (ಬಿ)

***

ಕುಡು ನಮ್ಮ ಕೃಪನುಳ್ಳ

ಕುಡು ನಮ್ಮ ಕೃಪನುಳ್ಳ ದೃಢಚಿತ್ತ ಉಳ್ಳವರಿಗಿ
ಹೂವ ಪತ್ತರಿ ಪುಷ್ಪ ಧರಿಸುವಂತ ಶರಣರಿಗಿ
ಕುಡಬೇಕರಿ ನಮಗ ಚನ್ನಬಸವಣ್ಣ ॥ ॥ ೧ ॥

ಕಟ್ಟಿದಾ ಲಿಂಗವ ತೆಗೆದು ನೆಟ್ಟಿದಾ ಗೂಟಕ್ಕೆ ಹಾಕಿ
ಅಟ್ಟಾಡಿ ಮನೆಯ ಕೆಲಸ ಮಾಡುವಂತ
ಅಷ್ಟ ಮೂರ್ಖರಿಗೆ ಕೊಡಬ್ಯಾಡರಿ ಚನ್ನಬಸವಣ್ಣ ॥ ॥ ೨ ॥

ಕೊರಳಾ ಲಿಂಗವ ತೆಗೆದು ಸೀರೆ ಸೆರಗಿಲಿ ಕಟ್ಟಿ
ಸೀರಿ ಮಾಸ್ಯಾವಂತ ಅಗಸರಿಗಿ ಬೀಸಾಡುವಂತ
ಹೇಸಿಗಿ ಜನರಿಗಿ ನಮಗ ಕೊಡಬ್ಯಾಡರಿ ಚನ್ನಬಸವಣ್ಣ ॥ ॥ ೩ ॥

ಧರಿಸಿದಾ ಲಿಂಗವ ತೆಗೆದು ಹೊರಸಿನ ಕಾಲಿಗಿ ಹಾಕಿ
ಸರಸಾಡಿ ಮನೆಯ ಕೆಲಸ ಮಾಡುವಂತ
ಅಷ್ಟ ಮೂರ್ಖರಿಗಿ ನಮಗ ಕೊಡಬ್ಯಾಡರಿ ಚನ್ನಬಸವಣ್ಣ ॥ ॥ ೪ ॥

ಹಬ್ಬ ಹುಣ್ಣಿಮಿ ದಿನ ಉಬ್ಬಿ ಹೋಳಿಗಿ ಮಾಡಿ
ಒಬ್ಬ ಜಂಗಮಗ ತುತ್ತನ್ನ ನೀಡದಂತ
ಖಬರಗೇಡಗಿ ನಮಗ ಕೊಡಬ್ಯಾಡರಿ ಚನ್ನಬಸವಣ್ಣ ॥ ॥ ೫ ॥

ಹಸಿದನಲ್ಲೊ ಗುರುವೆ ಹಸಿದು ಚಂಚಲನಾಗಿ
ನೊಸಲಿಗಿ ವಿಭೂತಿ ಎಡಮರತ ಈ ತಪ್ಪ
ಮೋಕ್ಷ ಮಾಡರಿ ಎಮಗ ಚನ್ನಬಸವಣ್ಣ ॥ ॥ ೬ ॥

ಉಂಡಾನಲ್ಲೋ ಗುರುವೆ ಉಂಡು ಚಂಚಲನಾಗಿ
ನೊಸಲಿಗಿ ವಿಭೂತಿ ಎಡಮರೆತ ಈ ತಪ್ಪ
ಮೋಕ್ಷ ಮಾಡರಿ ಎಮಗ ಚನ್ನಬಸವಣ್ಣ ॥ ॥ ೭ ॥

– ಶ್ರೀಮತಿ ಗೌರವ್ವ ಕಾಡಾದಿ

***

ಶ್ರೀ ಗುರುವೆ ನೀ ಕೇಳೋ

ಶ್ರೀ ಗುರುವೆ ನೀ ಕೇಳೋ ಚೆನ್ನಬಸವಣ್ಣಾ
ಭಿನ್ನ ಭೇದವ ಬೇಡಿರಣ್ಣಾ ॥ ಪ ॥

ಉತ್ರಿಯ ಮಳೆಬಂದು ಸುತ್ತಿ ಸುತ್ತಿ ಹೊಡಿವಾಗ
ಜತ್ತಿಗ್ಯಾಗಳ ನೀರು ಬುತ್ತ್ಯಾಕಿಳಿದಾವಣ್ಣಾ
ಭಿನ್ನ ಭೇದವ ಬೇಡಿರಣ್ಣಾ ॥ ೧ ॥

ಗುಂಡದಾಗಳ ನೀರು ಕಂಡವರು ಕಾಲೆದ್ದಿ
ಕುಂಡ್ಯಾಮಂಡ್ಯಗಳೆಲ್ಲ ತೊಳಿದು
ಲಿಂಗಕ್ಕೆ ಮಜ್ಜನ ಮಾಡುವರಣ್ಣಾ ॥ ೨ ॥

ಹೆಣ್ಣುಗಂಡೆಂಬುವದು ಎರಡೇ ಜಾತಿ
ನಮ್ಮ ಬೆಂಡಿ ಪರಪ್ಪೈಯ್ಯ ಹೇಳಿದ ಮಾತು ॥ ೩ ॥

–ಮಹಾನಂದಿ ಪೂಜಾರಿ

***

ಚೆನ್ನಬಸವಣ್ಣ

ಪಾಲಿಸಯ್ಯ ಪರಮ ಗುರುವರ
ಶ್ರೀ ಚೆನ್ನಬಸವ ಪಾಲೀಸಯ್ಯ ಪರಮ ಗುರುವರ ॥ ಪ ॥

ಏಕಮೇವ ದುತಿಯ ನಂಬದು
ಬೇರಿಲ್ಲ ನೋಡು ಕಾಕಮನದ ತಳ್ಳಿ ಏನಿದು
ಜ್ವಾಕಿಮಾಡಿ ಕುಡದೆ ಎನ್ನ।
ನೂಕಿ ಬಿಡುವತಿರುವುದಯ್ಯಾ ॥ ೧ ॥

ಮೂರು ಗುಣವ ನಷ್ಟ ಮಾಡಿದ
ಅಷ್ಟಾಂಗದಲ್ಲಿ ನಿಷ್ಠಿದಿಂದಲಿ ಮನವ ಕರಗಿದ ।
ದುಷ್ಟ ಗುಣವ ದೂರಮಾಡಿ
ಕಷ್ಟತನವನಳಿದ ಮ್ಯಾಲೆ ॥ ೨ ॥

ವಸುಧಿಯೊಳಗ ಬಸವತೀರ್ಥವು
ಇಳೆಯಲ್ಲಿ ಇಲ್ಲ ಅಸಮ ಗಣಕೆ ಹೃದಯ ವಾಸೆವು
ಬಸವ ಎಂಬ ಪ್ರಣಮದಲ್ಲಿ
ಬೆರೆದು ಚೆನ್ನಬಸವ ರಾಜನೆ ॥ ೩ ॥

–ಶ್ರೀಮತಿ ಭಾಗೀರಥಿ ಕಾಡಾದಿ

***

ಚನ್ನಬಸವಣ್ಣನವರ ಜೋಗುಳ

ಜೋ ಜೋ ಜೋ ಅಂದಾಳ ಗೋಪಿ ಜೋ ಜೋ ॥ ಪ ॥

ಮುತ್ತೀನ ತೊಟ್ಟಿಲಿಗಿ ರತ್ನದ ಹರಳ್ಹಚ್ಚಿ
ಮತ್ತೆ ಗಣಂಗಳಿಟ್ಟು ಪಾಡೀರಿ । ಜೋ ಜೋ
ಬಣ್ಣದ ತೊಟ್ಟಿಲಿಗಿ ರನ್ನದ ಹರಳ್ಹಚ್ಚಿ
ಮುನ್ನ ಗಣಂಗಳ ಇಳಿವಿಟ್ಟು ಪಾಡೀರಿ । ಜೋ ಜೋ ॥ ೧ ॥

ಬಾಳೀಯ ಹಣ್ಣೀಗೆ ನೀಲದ ವಸ್ತ್ರಸುತ್ತಿ
ನೀಲಮ್ಮನ ಮನೆಯ ಶರಣಾರು । ಜೋ ಜೋ
ನೀಲಮ್ಮನ ಮನೆಯ ಶರಣ ಮುತ್ತೈದೇರು
ನಮ್ಮ ಬಾಲನ ಬಾಗಣಕ ಬರಬೇಕು । ಜೋ ಜೋ ॥ ೨ ॥

ನಿಂಬೀಯ ಹಣ್ಣೀಗೆ ನೀಲದ ವಸ್ತ್ರಸುತ್ತಿ
ನಿಂಬೆವ್ವನ ಮನೆಯ ಶರಣರು । ಜೋ ಜೋ
ನಿಂಬೆವ್ವನ ಮನೆಯ ಶರಣ ಮುತ್ತೈದೇರು
ನಮ್ಮ ಕಂದಾನ ಬಾಗಣಕ ಬರಬೇಕು । ಜೋ ಜೋ ॥ ೩ ॥

ಅಕ್ಕನಾಗವ್ವನ ಹಸ್ತ ಕಡಗದ ಮೇಲೆ
ಚಿಕ್ಕರೂಪಿನ ಚೆನ್ನಬಸವಣ್ಣ । ಜೋ ಜೋ
ಚಿಕ್ಕರೂಪಿನ ಚೆನ್ನಬಸವಣ್ಣ ಹುಟ್ಯಾನೆಂದು
ಅಕ್ಕನಾಗವ್ವ ಒಳಗ ಅಂಜಿ ಕುಂತಾಳ । ಜೋ ಜೋ ॥ ೪ ॥

ಆಯಲ್ಲಿದ ಹುಟ್ಟೈತೆ ಬಾವುಲಿಲ್ಲದ ಕೂಸು
ಬಾಲ ನಿನ್ನೆಲ್ಲಿ ನಾ ಬಚ್ಚಿಟ್ಟು ಸಲುಹಲಿ । ಜೋ ಜೋ
ಬಾಲ ನಿನ್ನೆಲ್ಲಿ ನಾ ಬಚ್ಚಿಟ್ಟು ಸಲುಹಲಿ
ತಾಯಿ ನಾಗಮ್ಮ ಒಳಗಂಜಿ ಕುಂತಾಳ । ಜೋ ಜೋ ॥ ೫ ॥

ಅಂದವಿಲ್ಲದೆ ಹುಟ್ಟೈತಿ ಬಿಂದುಲಿಲ್ಲದ ಕೂಸು
ಕಂದ ನಿನ್ನೆಲ್ಲಿ ಬಚ್ಚಿಡಲಿ । ಜೋ ಜೋ
ಕಂದ ನಿನ್ನೆಲ್ಲಿ ಬಚ್ಚಿಟ್ಟು ಸಲುಹಲೆಂದು
ಅಕ್ಕನಾಗಮ್ಮ ಒಳಗಂಜಿ ಕುಂತಾಳ । ಜೋ ಜೋ ॥ ೬ ॥

ಚಂದವಿಲ್ಲದೆ ಹುಟ್ಟೈತಿ ಬಿಂದುವಿಲ್ಲದ ಕೂಸು
ಕಂದ ನಿನ್ನೆಲ್ಲಿ ಬಚ್ಚಿಡಲಿ । ಜೋ ಜೋ
ಕಂದ ನಿನ್ನೆಲ್ಲಿ ಬಚ್ಚಿಟ್ಟು ಸಲುಹಲೆಂದು
ಅಕ್ಕನಾಗಮ್ಮ ಒಳಗಂಜಿ ಕುಂತಾಳ । ಜೋ ಜೋ ॥ ೭ ॥

– ಶ್ರೀಮತಿ ಸುಮಿತ್ರಾದೇವಿ ಅಂಗಡಿ

***

ಜೋಗುಳ ಪದ

ಕಲ್ಯಾಣಲಿಂದ ಬಸವಣ್ಣ ಬಂದಾರ
ಕಾವಿ ಅಂಗಿ ಕಾವಿ ರುಮಾಲ ಕಟ್ಯಾರ
ಮನಿಯಾಗ ಅಕ್ಕನಾಗಮ್ಮ ಹಡದರಾಗ
ಬಸವ ಲಿಂಗ ಕಟ್ಟುತ್ತಾನೆ ನೀರ ಮುಗಿಲಿಲ್ಲ ಜೋ ಜೋ ॥ ಪ ॥

ಲಿಂಗ ಕಟ್ಟಲೆಂಬ ಸುದ್ದಿ ಕೇಳ್ಯಾರ
ಲಿಂಗ ತೊಗೊಂಡೆ ತಯ್ಯಾರ ಆಗ್ಯಾರ
ಹಿಂಗ ನಂದೀಶ್ವರ ಬಂದು ಲಿಂಗ ಕಟ್ಯಾರ ಜೋ ಜೋ ॥ ೧ ॥

ತರೆವ್ವ ಬಾಲೇರ ಬೆಳ್ಳಿ ಬಟ್ಟಲ
ಅದರಾಗ ಕಲಸರಿ ಸಕ್ಕರಿ ಹಾಲ
ಸವಿಯೆಂದು ರುಚಿಯಂದು ಕಡಿಯಿರಿ ಕೋಮಲ
ಕುಡಿದು ತೊಟ್ಟಿಲದಾಗ ಬೀಸಿ ಕೈಕಾಲ ಜೋ ಜೋ ॥ ೨ ॥

ಐವರು ಮುತ್ತೈದೇರು ಬಂದಿದಾರಣ್ಣಾ
ರೇಶಿಮೆ ನೂಲ ತಂದಿದರಾಗ
ಅವರ ಮನ್ಯಾಗ ತೊಟ್ಟಿಲ ಕಟ್ಟಿದಾರಾಗ
ರೆತೋರಿ ಹೊಡೆದು ಅಂತಾರ ಬಾಯಲ್ಲಿ ವಿಠಲ ಜೋ ಜೋ ॥ ೩ ॥

ಹೆಸರೇನು ಇಡಬೇಕು ಹೇಳರಿ
ಹಿರಿಯರ ಹೆಸರ ನಮಗ ಗುರುತು ।
ಹೀಂಗೆ ಅಂತಾರ ಜನರಿಗೆ ಬೇಟಿಯಾಗಿಲ್ಲ ಜೋ ಜೋ ॥ ೪ ॥

ಹೆಸರಿಟ್ಟು ಕರೆಯಿರಿ ಚನ್ನಬಸವಣ್ಣಾ
ಸಂಗಮ ಪುರದೊಳು ಇನ್ನು ಬಿಟ್ಟಿಲ್ಲ
ಶರಣರಾಳಾಗಿ ತಗೊಂಡಾರ ಗುರುವಿನ ಸ್ಮರಣೆ ಜೋ ಜೋ ॥ ೫ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

ಐದಾಚಾರ ನಡಸ್ಯಾಳ ತಾಯಿ

ಶಿವಸ್ವಾಮಿ ಮಡದಿ ಅಕ್ಕನಾಗಮ್ಮ ತಾಯಿ
ಚೊಚ್ಚಿಲ ಬಸರಿಗಿ ಒಪ್ಯಾಳೆ
ಕುಬುಸಕ ನಡಿರಿ ನೀವೆಲ್ಲಾ ॥ ಪ ॥

ಒಂದ ತಿಂಗಳ ತುಂಬಿ
ಒಂದೇನು ಬಗಸ್ಯಾಳ ತಾಯಿ
ಒಂದೇ ದೇವರೆಂದು ನಂಬಿ
ಒಂದ ಪೂಜ ನಡಸ್ಯಾಳ ತಾಯಿ ॥ ೧ ॥

ಐದ ತಿಂಗಳ ತುಂಬಿ
ಐದೇನು ಬಗಸ್ಯಾಳ ತಾಯಿ
ಐದೆಂಬ ಆಚರ ಬಗಸಿ
ಐದಾಚಾರ ನಡಸ್ಯಾಳ ತಾಯಿ ॥ ೨ ॥

ಆರ ತಿಂಗಳ ತುಂಬಿ
ಆರೇನು ಬಗಸ್ಯಾಳ ತಾಯಿ
ಆರು ವೈರಿ ಬಿಡಬೇಕೆಂದು
ಆರು ಮೆಟ್ಟಲ ಏರ್‍ಯಾಳ ತಾಯಿ ॥ ೩ ॥

ಒಂಭತ್ತು ತಿಂಗಳ ತುಂಬಿ
ಒಂಭತ್ತೇನು ಬಗಸ್ಯಾಳ ತಾಯಿ
ಆರುಮೂರು ಒಂಭತ್ತ ಅರಿತು
ಸಾಂಭನೇ ಆಗ್ಯಾಳ ತಾಯಿ ॥ ೪ ॥

ಸಾಂಭನಾಗ್ಯಾಳೆ ರಂಭಿ
ಒಂಭತ್ತು ತಿಂಗಳಮ್ಯಾಲ
ಒಂಭತ್ತು ದಿನ ತುಂಬಿ
ರಂಭಿ ತಾ ಹಡದಾಳ ಶಿವಪುತ್ರನಿಗಿ ॥ ೫ ॥

ಅಂಜುತ್ತಾ ಅಳಕುತ್ತ ನಾಚುತ್ತಾ ಉಳಕುತ್ತ
ಸೋದರತ್ತಿ ಗುದ್ದು ತಿನ್ನುತ್ತಾ
ಸೋದರತ್ತಿ ಗುದ್ದು ತಿನ್ನುತ್ತಾ ಕುಣಿ ಕುಣಿದು
ಗುರುವಿನ ಹೆಸರ ಇಡುತಾಳ ಜೋ ಜೋ ॥ ೬ ॥

ಗುರುವಿನ ಹೆಸರಿಟ್ಟ ಸೋದರತ್ತಿಗಿ
ಬಂಗಾರದ ಸೀರಿ ಉಡಸ್ಯಾರ
ಬಂಗಾರದ ಸೀರಿ ಉಟಗೊಂಡು ಚಂದ್ರಮತಿ
ಅಮರನಾಗೆಂದು ಹರಸ್ಯಾಳ ಜೋ ಜೋ ॥ ೭ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

ಅಕ್ಕನಾಗಮ್ಮನವರ ಪದ

ತಮ್ಮನಾ ಊರಾಗ ದಾಸೋಹ ಮನಿಯಾಗ
ಒಮ್ಮನದ ಹುಟ್ಟು ಹಿಡದಾಳ । ನಾಗಮ್ಮ
ಓಂಯೆಂದು ತಾನು ಬಡಸ್ಯಾಳ ॥ ॥ ೧ ॥

ತ್ಯಾಗದ ಊರಾಗ ಕಲ್ಯಾಣದ ಭೂಮ್ಯಾಗ
ಯೋಗದ ದಂಡು ಹಿಡದಾಳ । ನಾಗಮ್ಮ
ಶಿವಯೋಗಿ ಆಗಿ ನಿಂತಾಳ ॥ ॥ ೨ ॥

ತಮ್ಮನ ಮಾಮನಿಯಗ ಒಲಿಹಚ್ಚಿ ಹಂಚಿಟ್ಟು
ಒಮ್ಮನದಿ ರೊಟ್ಟಿ ಬಡಿತಾಳ । ನಾಗಮ್ಮ
ತಮ್ಮನ ದಂಡಿಗಿ ನೀಡ್ಯಾಳ ॥ ॥ ೩ ॥

ಅಂಗವು ದುಡಸ್ಯಾಳ ಜಂಗಮರ ತಣಿಸ್ಯಾಳ
ಸಂಗನಿಗಿ ಶರಣು ಹೋಗ್ಯಾಳ । ನಾಗಮ್ಮ
ಗುಂಗೆಲ್ಲಾ ತಮ್ಮನ ಮಾತಾಗ ॥ ॥ ೪ ॥

ಬಸವಣ್ಣ ಬಿಟ್ಟಹೋದ್ರು ನಾಗಮ್ಮ ಬಿಡಲಿಲ್ಲ
ಕಲ್ಯಾಣ ಊರ ಕಾಯ್ತಾಳ । ಕೊನಿತನ
ತಮ್ಮನ ದೀಪ ಕಚ್ಚ್ಯಾಳ ॥ ॥ ೫ ॥

ವಚನವ ಬೆನ್ನಿಗಿಕಟ್ಟಿ ಕುದುರಿಯು ತಾ ಹತ್ತಿ
ಬಸವನ ಬಳಗ ಕರಕೊಂಡು । ಹೊಂಟಾಳ
ಕಲ್ಯಾಣ ಊರಿಗೆ ನಮಿಸ್ಯಾಳ ॥ ॥ ೬ ॥

ಕಲ್ಯಾಣ ಊರಿಗಿ ಕೊನಿ ನಮನೆ ಮಾಡ್ಯಾಳ
ಇಲ್ಲದ ದುಃಖ ಆಗ್ಯಾದ । ನಾಗಮ್ಮ
ಎಲ್ಲದಕೂ ಶಿವನೆ ಅಂದಾಳ ॥ ೭ ॥

– ಶ್ರೀಮತಿ ಗೌರವ್ವ ಕಾಡಾದಿ

***

ಕ್ರಾಂತಿಯೋಗಿ ಅಕ್ಕ ನಾಗಮ್ಮ

ಶಿವಶಿವಯೆನ್ನುತಲಿ ಶಿವಶರಣರ ನೆನೆಯುತಲಿ
ಶರಣೆ ನಾಗಮ್ಮನ ಚರಿತೆ ಹಾಡುತಲಿ
ಶರಣೆ ನಾಗಮ್ಮನ ಚರಿತೆ ಹಾಡುವಾಗ
ಚಿತ್ತಿಟ್ಟು ಕೇಳರಿ ಶರಣೆಂದು ‖ ಪ ‖

ಮಾದಮ್ಮನ ಮಗಳಾಗಿ ಬಸವನ ಅಕ್ಕಾಗಿ
ಬಾಗೇವಾಡಿಯೊಳು ತಾ ಜನಿಸಿ
ಬಾಗೇವಾಡಿಯಲಿ ತಾ ಜನಿಸಿ ನಾಗಮ್ಮ
ಏಳ್ವರ್ಷಕ ಸಂಗಮದ ಸೊಸೆಯಾಗಿ ‖ ೧ ‖

ಸಂಗಮದ ಶಿವಸ್ವಾಮಿಗಿ ನಾಗಮ್ಮ ಸತಿಯಾಗಿ
ಬಾಲ ಚನ್ನಬಸವನ ತಾಯಾಗಿ
ಬಾಲ ಚನ್ನಬಸವನ ತಾಯಾಗಿ ನಾಗಮ್ಮ
ಬಾಲಿ ಹೊಳದಾಳ ರವಿಕಿರಣ ‖ ೨ ‖

ತಮ್ಮನ ಹೊಂಟಾನ ಜನಿವಾರ ಕಿತ್ತಿಟ್ಟು
ನಾಗಮ್ಮನ ಮ್ಯಾಲ ವಿಶ್ವಾಸಿಟ್ಟು
ನಾಗಮ್ಮನ ಮ್ಯಾಲರ ವಿಶ್ವಾಸ ತಾನಿಟ್ಟು
ಸಂಗಮದಾಗ ಕುಂತಾರ ಎಲ್ಲ ಬಿಟ್ಟು ‖ ೩ ‖

ಕಿರಿತಮ್ಮ ಬಸವಗ ಹಿರಿಯಕ್ಕ ನಾಗಮ್ಮ
ಮಾವಿನ ಗಿಡದ ನೆರಳಾಗಿ
ಮಾವಿನಗಿಡದ ನೆರಳಾಗಿ ನಾಗಮ್ಮ
ಛಾಯದ ನೆರಳ ನೀಡ್ಯಾಳ ‖ ೪ ‖

ಕಲ್ಯಾಣಕ ಹೊಂಟಾರ ಕಲ್ಪವೃಕ್ಷ ಬಸವಣ್ಣ
ಅಕ್ಕನಾಗಮ್ಮ ಜೊತೆಯಲ್ಲಿ
ಅಕ್ಕನೆ ನಾಗಮ್ಮನ ಜೊತೆಯಲ್ಲಿ
ಮುಕ್ಕ ಬಿಜ್ಜಳನ ಮಂತ್ರಿಯಾಗಿ ‖ ೫ ‖

ಸಂಸಾರ ಎಂದಿಲ್ಲ ನಿಸ್ಸಾರ ಮಾಡಿಲ್ಲ
ಹಂಸವು ತಾನಾಗಿ ನಾಗಮ್ಮ
ಹಂಸವು ತಾನಾಗಿ ಪ್ರೀತಿಲಿ ನಾಗಮ್ಮ
ತಮ್ಮ ಬಸವನ ಮಾತಿಗಿ ॥ ೬ ॥

ಬಸವನ ಅಕ್ಕಾಗಿ ಹೆಚ್ಚಿನ ತಾಯಾಗಿ
ಟೊಂಕ ಕಟ್ಯ್ಯಾಳೆ ಧರಮಕ
ಟೊಂಕ ಕಟ್ಯ್ಯಾಳೆ ಧರಮಕ ನಾಗಮ್ಮ
ಕ್ರಾಂತಿಯೋಗಿ ಎನಿಸ್ಯಾಳ ॥ ೭ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

ಅಕ್ಕನಾಗಮ್ಮನ ಹಾಡು

ಅಕ್ಕನಾಗಮ್ಮನ ಬರದಿದ ಬರಿ ಕೇಳಿ
ರೀತಿಲಿ ನಡೆದವರ ಸದ್ಗತಿ ಮುಕ್ತಿ ಸ್ವರ್ಗ ॥ ಪ ॥

ಪತಿ ಸೇವದಲ್ಲಿ ಸರಿಯಾಗಿ ನಡದರ ಸ್ವರ್ಗ ಇಲ್ಲ ದೂರ
ಅತ್ತಿ ಮಾವ ನಾದಿನಿ ಗೂಡ ಪ್ರೀತಿಲಿ ನಡೆದವರ
ಸತಿ ಪತಿ ಒಂದು ಮನಸಿಲಿ ನಡದರ ಶಿವದೂತ ದುಡಿಯುವರ
ಶುದ್ಧ ಪ್ರಸಾದ ಪಡೆಯುವರ ॥ ೧ ॥

ಗುರುಲಿಂಗ ಜಂಗಮ ಪಾದೋದಕ ಪ್ರಸಾದ ಈಬತಿ ರುದ್ರಾಕ್ಷಿ
ಮಂತ್ರ ಅಂಗ ಅನುಭಾವ ಅಷ್ಟಾವರಣ ಶಿವದರುಶನ ಸಾಕ್ಷಿ
ಲಿಂಗತಾನೆ ಬಂದು ಬಿದ್ದಿತಯ್ಯ ನುಲುಕಿಯ ಚಂದಯ್ಯರ
ನಮ್ಮ ಸಂಗನ ಶರಣರ ॥ ೨ ॥

ಅಂಗನೆ ಕುಚಗಳು ಲಿಂಗ ಭವಿಸಿ ಪೂಜೆಮಾಡಿ
ಜಂಗಮ ರೂಪ ವೇಶಧರಿಸಿ ಬಂದರೋ ಪ್ರತ್ಯಕ್ಷ
ಲಿಂಗಮಯವಾಗಿ ನಿರಾಳ ಮನುಜಗ ಪ್ರಸಿದ್ಧ ಪಡಸ್ಯಾರ
ಅಕ್ಕನಾಗಮ್ಮ ಸಾರ್ಯಾರ ॥ ೩ ॥

ಪತಿವರತ ಅನುಷಾಯಿ ಮನಿಗ್ಹೋಗಿ ನಾರಂದ ಬೇಡಿ ಭಿಕ್ಷಾ
ಅತಿ ಪ್ರೀತಿಲಿಂದ ಬೇಡಿದು ನೀಡ್ಯಾಳ ಹೆಂತ ಕಲ್ಪವೃಕ್ಷಾ
ನಾರಂದ ಗಾಬರ್‍ಯಾಗಿ ಒಣಕಿಗಿ ನೋಡತಾರ
ನಿಂತದ ನಿರಧಾರ ಸಿದ್ಧ ಹೆಂತಾ ಸತಿಕಾರ ॥ ೪ ॥

– ಶ್ರೀಮತಿ ಮಹಾದೇವಿ ಹಿರೇಮಠ
ಹಾಗೂ ಶ್ರೀಮತಿ ವಿಮಲಾ ಸಿದ್ದೇಶ್ವರ.

***

ಅಕ್ಕನಾಗಮ್ಮನ ಕರಸಿ

ಕೊಂಡಣ್ಣ ಮಿಂಚಣ್ಣ ಮಾತಾವು ಕೇಳಿ
ಬಿಜ್ಜಳಂಕ ಸಭ ನೆರಸಿ ಅಕ್ಕನಾಗಮ್ಮನ ಕರೆಸಿ ॥ ಪ ॥

ಗಂಡನಿಲ್ಲದೇ ಗರ್ಭಿಣಿ ಹ್ಯಾಂಗ
ಸಭಾ ಮಾಡ್ರಿ ಚೌಕಾಶಿ
ಬ್ರಹ್ಮಾಂಡದೊಳು ದಾನಪೂರಾಣದೋಳು
ಬರದಿಟ್ಟ ಯಾವಾಸಿ ॥ ೧ ॥

ಕೊಂಡಣ್ಣ ನಗವುತ ರಾಜಾಗ ಹೇಳ್ವನು
ನಿಮ ಅಂಜಿಕಿಲ್ಲೋ ಮಾಸಿ
ಆಟ ಹೂಡ್ಯಾರ ತಮಾಸಿ ॥ ೨ ॥

ನಿಷ್ಠಿಲಿಂದೇ ಅಕ್ಕನಾಗಮ್ಮ ಹೇಳ್ವಳು
ಸಭಾದೋಳು ಬಂದು ತಿಳಿಸಿ ।
ಶರಪಿಂಗೆ ಸಾಂಗಬೇಕು
ತಿಳಿಲಾಕ ಬಸವಣ್ಣ ಮುಂದ ಬಂದು
ಹೇಳ ತಿಳಿಸಿ, ದುಷ್ಟರಿಗೆ ಸಮಝಾಸಿ ॥ ೩ ॥

ಸಿಟ್ಟಿಲಿಂದೇ ಬಸವಣ್ಣ ಕೇಳಿದ್ದಾನೋ
ಯಾ ರೀತಿ ಗರ್ಭಧರಿಸಿ
ಸಿಡಿಲಿನಂತೆ ಅಬ್ಬರ್‍ಸಿ ಹೇಳಿದ್ದನೋ
ಚೆನ್ನಚೆನ್ನಬಸವಣ್ಣಗ ಕರಸಿ ॥ ೪ ॥

ನಿಂದಿದವರಿಗೆ ಈಗ ಕೊಂದುಹಾಕುವೆ ನಾನು
ಸಭಾ ನೋಡ್ರಿ ಜಮಾಸಿ
ನಿಮ್ಮ ಹುಕ್ಮಾಗಲಿ ಮರ್ಮಾಸಿ ॥ ೫ ॥

ಕೊಂಡಣ್ಣ ಮಿಂಚಣ್ಣ ಬಿಜ್ಜಳಂಕ ಕೂಡಿ
ಹೆಂತಾ ತಪ್ಪ ಆಡಿಕೇಸಿ
ಅಕ್ಕನಾಗಮ್ಮ ಚೆನ್ನಬಸವಣ್ಣ ಕೂಡಲವಾಸಿ
ಸಿದ್ಧ ಭಜನಿದೊಳಗೆ ಬೆರಸಿ ॥ ೬ ॥

– ಶ್ರೀಮತಿ ಮಹಾದೇವಿ ಹಿರೇಮಠ ಹಾಗೂ
ಶ್ರೀಮತಿ ವಿಮಲಾಬಾಯಿ ಸಿದ್ದೇಶ್ವರ

***

ಎಣ್ಣಿ ಕೊಡದ ಮ್ಯಾಲ

ಎಣ್ಣಿ ಕೊಡದ ಮ್ಯಾಲ ಶೆಣ್ಣ ಲಿಂಬೆವನಿಟ್ಟು
ಹೊನ್ನಮ್ಮ ದಿನದಲ್ಲಿ ಗರಮೇರಿತಾ
ಹೊನ್ನಮ್ಮ ದಿನದಲ್ಲಿ ಗರಮೇರಿ ಬಸವಗ
ಅಣ್ಣಾ ಯಂಕಟರಾಯ ಪತಿಪಾದಿಸೆ
ಜೈ ಮಂಗಲ ನಿತ್ಯೆ ಶುಭ ಮಂಗಲೆ ॥ ೧ ॥

ಅಕ್ಕನಾಗಮ್ಮ ಚಿಕ್ಕ ಚನ್ನಮ್ಮ
ನಿತ್ಯದ ಬದ್ದರಿ ಕಾಳಮ್ಮಗೆ
ನಿತ್ಯದ ಬದ್ದರಿ ಕಾಳಮ್ಮ ಬರುವಾಗ
ಅಣ್ಣಾ ಯಂಕಟರಾಯ ಪತಿಪಾದಿಸೆ
ಜೈ ಮಂಗಲ ನಿತ್ಯೆ ಶುದ್ಧ ಮಂಗಲೆ ॥ ೨ ॥

ಹಾದಿ ಹಾದಿಗೊಂಟ ಹಗರಣ ಬಡಿಗೋಳು
ಖ್ಯಾದಿಗಿ ಬನದೋಳ್ ನದಿ ತೆಟ
ಕ್ಯಾದಿಗಿ ಬನದೋಳು ನದಿ ತೆಟ ಬರುವಾಗ
ಅಣ್ಣಾಯಂಕಟರಾಯ ಪತಿಪಾದಿಸೆ
ಜೈ ಮಂಗಲ ನಿತ್ಯೆ ಶುಭ ಮಂಗಲೆ ॥ ೩ ॥

ಊರಗಣ್ಣಯ್ಯ ಕಣತೂಕ ಘಾತಕ
ನಿಂಗದಳ್ಯಾಗಿರುವ ನಿರಧಾರಣೆ
ಬೆಳ್ಳಿ ಪಾವಡನಾಗಿ ಬಂಗಾರ ಸಮನಾಗಿ
ಸಿಂಗರಾಗಿ ಬರುವಾ ಸರ್ಬಯ್ಯಗೆ
ಜೈ ಮಂಗಲ ನಿತ್ಯೆ ಶುಭ ಮಂಗಲೆ ॥ ೪ ॥

– ಶ್ರೀಮತಿ ಗಂಗಮ್ಮ ಜೋಳಾ

***

ಅಕ್ಕನಾಗಮ್ಮ ಬಸವಣ್ಣ ಕೂಡಿ

ಅಕ್ಕ ನಾಗಮ್ಮ ಬಸವಣ್ಣ ಅಕ್ಕ ನಾಗಮ್ಮ ಕೂಡಿ
ಮಿಕ್ಕ ಪ್ರಾಸ್ಯಾದ ದಾವಲ್ಲಿರುವ ಗುಪ್ತ ಮಾತನಾಡಿ ॥ ಪ ॥

ನಿತ್ಯ ಹರೀವ ಗಂಗ ಸ್ನಾನ ಚಿತಾ ಭಸ್ಮ ಧರಿಸಿ
ಸ್ವತಾ ಮೈನತಿ ಮಾಡಿ ತಂದ್ರೋ ಸತಿಪತಿ ಜೀವಿಸಿ
ಹಿಂತವರೆಲ್ಲ ಉಂಟೆಂದು ಮಾಡಿದ್ರು ಚೌಕಾಸಿ ॥ ೧ ॥

ಲಕ್ಷ ತೊಂಬತ್ತಾರುಸಾವಿರ ಜಂಗಮರೋಳ್ ಆರಿಸಿ
ಲಕ್ಷದೋಳು ಕಾಣಿ ಮಾಳೀಗಿ ಮಾರಾಯ ತಪ್ಪಿಸಿ
ಭಿಕ್ಷಾ ಎಂದು ಮೂವರು ಹೋಗಿ ನಿಂತ್ರೋ ಮುರುಮಾಸಿ ॥ ೨ ॥

ಮೋಳಿಗೆ ಮಾರಾಯ್ಯ ಅಂತಾರು ಮನಿಯೋಳ್ ಮಾಡಿಕೋರಿ ಚೌಕಾಸಿ
ಘಳಿಗೆ ಹುಡುಕಿದರೆ ಪ್ರಾಸ್ಯಾದ ಸಿಗಲಿಲ್ಲನ್ನ ಮಾಸಿ
ಹನ್ನೆರಡು ವರುಷ ತಿರುಗಿ ಅಂತಾರ ಸಿಗಲಿಲ್ಲನ್ನ ಮಾಸಿ ॥ ೩ ॥

ಅಕ್ಕ ನಾಗಮ್ಮ ಹೋಗಿ ಕುಂತಾಳ್ ಒಂದೀನ್ ಜಪ್ಪಾಸಿ
ಅಕ್ಕಿ ಜಾನಾಗ ಒಂದಗಳ್ ಬಂತೋ ಬಚ್ಚಲಾಗ ಮುರಮಾಸಿ
ಅಗಳ ತಿಂದು ಅಮರಾಗರೆಂದು ಸಿದ್ಧ ಹಾಡಿ ನೆನಸಿ ॥ ೪ ॥

ನೌಕರಿ ಇರಲೇನ ನಿರಮಾಳ್ ಗುರುವಿನ ಸ್ಥಳಾ
ಅಕ್ರಿ ಆಡಲ್ದಾಹಂಗ ಝಳ ಝಳಾ
ಮುಂಜನೀ ಏಳಬೇಕು ನೂರಮನಿ ಉಡಗಬೇಕು ॥ ೫ ॥

ಹಿರಮನಿ ಪಡಸಲಿ ಅಂಗಳ ಗುಂಜಲಿಂದೇ ಬೆಳಗಿ
ಅಡುಗಿ ಸಾಮಾನ ಸ್ವಚ್ಛ ಗಂಗಳ
ಬಾರಾ ಮಂದಿ ನೌಕ್ರಿ ದುಡಿಬೇಕು ಬಾರಾಸೇ ತಿಂಗಳ ॥ ೬ ॥

ಭಾರಿ ಮನಸ ಇರಬೇಕು ದೈಯ್ಯಾಳ
ಸರಿ ಇರತಾನ ಸವಳ ನೌಕ್ರಿ ಇರತಿರೇನ್ ನಿರಮಾಳ್
ಊರ ಮುಂದೀನ ಹೊಲಕ್ಕೋಗಬೇಕು ಆರೆತ್ತಾ ಬಿಟಕೋ ಬೇಕು ॥ ೭ ॥

ಊರೋರ ಬೀಗಕ್ಕ ನೇಗಿಲ ಪಾಳಿಸೋಳ
ಆರೆತ್ತಾ ವೈದು ಮೇಯಿಸಾಬೇಕು ಬ್ಯಾರೆ ಬ್ಯಾರೆ ಆವ ಬೀಳ ॥ ೮ ॥

– ಕೃಷ್ಣಪ್ಪ ದಗಳ

***

ಚನ್ನಬಸವಣ್ಣನವರು

ಎತ್ತಬಾರದ ಹೊಟ್ಟೆ ನಿನಗೆ ಸುತ್ತ ಸರ್ಪನ ಕಟ್ಟು
ಪಟ್ಟದ ಗೌರಿಯ ಮಗನು ವರಸುತನು
ಸೊಂಡಲ ಬೆನವಯ್ಯ ಎಪ್ಪತ್ತುಬಾರಿ ಶರಣು ಶರಣಾರ್ತಿ

ತಿಗಡಿಂ ತಾಳ ತಂಬೂರಿ ಮದ್ದಲೆ ಲಯಗೂಡಿ
ಎದ್ದು ನಾಟ್ಯವನಾಡುವ ಗೌರಿಯ ಸುತನೆ
ನಿಮ್ಮ ಭಜಿಸುವೆನಯ್ಯ ಗುರುವೆ ಎಪ್ಪತ್ತು ಬಾರಿ ಶರಣು ಶರಣಾರ್ತಿ

ಕಾಯನೆ ಮೂರು ಕಾಲಾರು ಕಂಗಳು ಹದಿನೆಂಟು
ಜೋಲುವ ಕಿವಿಗಳು ನಾಲ್ಕು ಹದಿನೆಂಟುಚೋಣಿ
ಮಾರ್ಬಲದವನೆ ಗಣಪ ಕೊಡು ಮತಿಯ

ಎಪ್ಪತ್ತೇಳು ವರ್ಷ ಹುತ್ತದಲಿದ್ದಂಥ
ಈ ಸುತ್ತ ಐವತ್ತಾರು ದೇಶ ಬಲ್ಲಂಥ
ಕಪಿನಿ ವರ್ಣದ ನೀಲ ಕರೆದು ನೀಡುವರು ತಮಗೆ
ಈ ಚುಚ್ಚುಗಮನದೊಳಗಿರುವ ಲಿಂಗಸಂತಾನ ಶರಣು ಶರಣಾರ್ತಿ

ಕರ್ತೃ ಕೈಲಾಸದಿಂದಿಳಿಯಲು ಕಣ್ಣೇರಿ ಶಿವಭಕ್ತ ಬಂದು
ಪಾದಬಿನ್ನವ ಮಾಡುತಿರಲು ಪಾದತೀರ್ಥಂಗಳನು ಕೊಟ್ಟು
ಪಂಚಾಕ್ಷರಿಯನ್ನು ಜಪಿಸಿ
ಓದು ಮಠದಲ್ಲಿರುವ ಒಲವಸಿದ್ದೇಶ ಕೊಡು ನಮಗೆ ಮತಿಯ

ಒಲಿದು ಬೇಡುವೆನು ಸದ್ಗುರುವೆ
ಸುರ ಮುನಿಸೇವಿತ ಸುಂದರ ಗಣನಾಥ
ಶರಣು ಶರಣಾರ್ಥಿ

೧

ಸುವ್ವಿ ಹೇಳಮ್ಮ ದೇವರದೇವ ಸುವ್ವೀ
ಸುವ್ವಾ ಬಾ ಚನ್ನಬಸವಯ್ಯ ಸುವ್ವೀ

ಹತ್ತುವೆ ಮಾರುದ್ದ ಪುಸ್ತಕವ ಹಿಡಕೊಂಡು
ಎತ್ತುವೆನು ಅವರ ಮೊದಲಿಂದ – ಕಲ್ಯಾಣದ
ಕರ್ತೃ ಬಸವಣ್ಣನವರ ವಚನವ

ಆರುವೆ ಮಾರುದ್ದ ಓಲೆಯ ಹಿಡುಕೊಂಡು
ಹೇಳುವೆನು ಅವರ ಮೊದಲಿಂದ – ಕಲ್ಯಾಣದ
ಕರ್ತೃ ಬಸವಯ್ನ ಗುರುವಚನ

ಹೇಳು ಹೇಳಂದರೆ ಹೇಳದಿದ್ದರೆ ಕರ್ಮ
ಹೇಳಿದ ಗುರುವಚನ ಪರಜ್ಞಾನ ಕೇಳದ – ಪರವಾದಿಗಳಿಗೆ
ನಾಲಿಗೆಯಲಿ ಉಂಟು ದೊಡ್ಡಯಮಗಂಡ

ಹೇಳಿದವರಿಗೆ ಹತ್ತು ಕೋಟಿ ಕೇಳಿದರಿಗನ್ನೊಂದುಕೋಟಿ
ಸುವ್ವಿ ಅಂದರೆ ಕರ್ಮ ಪರಿಹಾರ ನೀವಿಗ
ಬೆಳ್ಳಿ ತೊಳದಂತೆ ಪಾಪ ಪರಿಹಾರ

ಸುವ್ವಿ ಸಂಗಯ್ನ ಗುರುವಚನ ಹೇಳುತೀನಿ
ತೊಡೆ ಮಸಕದೆ ಕೇಳಿ ಹಿರಿಯರೆ – ನೀವೀಗ
ಬೆಳ್ಳಿ ತೊಳದಂತೆ ಪಾಪ ಪರಿಹಾರ

ಬಸವಯ್ಯ ಹುಟ್ಟುವುದು ಹೊಸಬೀದಿ ಕಟ್ಟುವುದು
ಬಸವಯ್ಯ ಏಳು ಬೀದೀಲಿ ಮರೆಯುವುದು ಮಾನ್ಯವರೆ
ಮೆರೆವ ಗುರುವಚನ ಓದುತೀನಿ

ಕಲ್ಯಾಣ ಪಟ್ಟಣ ಅಂದರೆ ನೂರತೊಂಬತ್ತು ಯೋಜನೆ
ನೆಟ್ಟ ಹನ್ನೆರಡು ಯೋಜನವಂತೆ
ಬಸವಣ್ಣನವರಿಗೆ ಏಳು ಬೀದಿ ಬಿಜ್ಜಳದೊರೆಗೆ ಆರು ಬೀದಿ
ಬಸವಣ್ಣನವರ ಕೇರೀಲಿ ಶರಣರು

ಕುಲಕೆ ಬಿಜ್ಜಳ ಶರಣ
ಪ್ರಧಾನಿ ಕೊಂಡಕಾರ ಮಂಚಣ್ಣನ
ನೆನೆದರೆ ನಾವು ಹೊದ್ದಿದ್ದ ಪಾಪ ಪರಿಹಾರ

ಬಸವಣ್ಣನವರ ಬೀದೀಲಿ ಸತ್ಯ ಶರಣರಿರುತಾರೆ
ಬಿಜ್ಜಳನ ಬೀದಿಲಿ ಸತ್ತಭವಿಗಳು

ಬಸವಣ್ಣನವರ ಕೇರೀಲಿ ಯಾರ್‍ಯಾರು ಶರಣರು
ಕಕ್ಕೆ ಚಿಕ್ಕಯ್ಯ ಘನ ಶರಣ ಕಲ್ಕೂಚು ಬ್ರಹ್ಮಯ್ಯ ಶರಣ
ಘಟ್ಟವಾಳಯ್ಯ ಘನಶರಣ

ಅಲವೆ ಹುಲ್ಲನು ತಂದು ನುಲುದು ಸಿಂಬೆಯ ಮಾಡಿ
ಒಲುಮೇಲಿ ಜಂಗಮರಿಗೆ ಎಡೆಮಾಡಿ – ಮುಕ್ತಿಪಡೆದ
ನುಲಿಯ ಚಂದಯ್ಯ ಘನಶರಣ

ಬೆಟ್ಟಕಾದರು ಹೋಗಿ ಅಷ್ಟಮೃಗಗಳ ತಂದು
ಸುಟ್ಟ ಮಾಂಸನ ಶಿವನಿಗೆ – ಎಡೆಮಾಡುವ
ಬೇಡರ ಕಣ್ಣಯ್ಯ ಘನಶರಣ

ಒಕ್ಕಲಿಗರ ಮುದ್ದಯ್ಯ ಶರಣ ಕುರುಬರ ಬೀರಯ್ಯ ಶರಣ
ಕುಂಬಾರ ಗುಂಡಯ್ಯ ಘನಶರಣ

ಹೊಲೆಯ ಹೊನ್ನಯ್ಯ ಶರಣ ಮಾದಾರ ಚನ್ನಯ್ಯ ಶರಣ
ಮಡಿವಾಳ ಮಾಚಯ್ಯ ಘನಶರಣ

ಅಂಗಡಿ ಸಾಲಲ್ಲಿ ಆದ ಅಕ್ಕಿಯ ತಂದು
ಬೇಗದಲಿ ಜಂಗಮರಿಗೆ ಎಡೆಮಾಡಿ – ಮುಕ್ತಿಪಡೆವ
ಆಯ್ದಕ್ಕಿ ಮಾರಯ್ಯ ಘನಶರಣ

ಮಡಿವಾಳ ಮಾಚಯ್ಯ ಶರಣ ತುರಕರ ಪೀರಯ್ಯ ಶರಣ
ಕಟ್ಟಿಗೆ ಲಿಂಗಮ್ಮ ಘನಶರಣೆ

ಸಟ್ಟುಗಳಲಿ ಹೊಡೆದು ಮಸ್ತಕ ಉರಿ ಎದ್ದೊ
ತಪ್ಪು ಮಾಡಿದ್ದೇನೊ ಘನಶರಣೆ – ಕಲ್ಯಾಣಿ
ಕೈಲಾಸದಲ್ಲಿರುವ ಕಟ್ಟಿಗೆ ನಿಂಗಮ್ಮ ಘನಶರಣೆ

ಹಾದ್ರವ ಮಾಡಿ ಹಾಗದ ಕಾಸತಂದು
ಆಗೊಬ್ಬ ಜಂಗಮನಿಗೆ ಎಡೆಮಾಡಿ – ಮುಕ್ತಿಪಡೆವ
ಹಾದ್ರವ ನೆಂಬಯ್ಯ ಘನಶರಣ

ಕುಲಕೊಬ್ಬ ಶರಣರು ಕೋಟಿಗೊಬ್ಬ ಭಕ್ತರು
ಲಕ್ಷದ ಮೇಲೆ ತೊಂಬತ್ತಾರು ಸಾವಿರ ಗಣಂಗಳಿಗೆ
ಮೋಕ್ಷ ಕೊಡುವುದಕೆ ಹಿರಿಯ ಬಸವಯ್ಯ

ಶೋಕಾವಳಿ

ಒಕ್ಕಳ ಅಕ್ಕಿಯ ಹಾಕಿ ಒಂದೇ ಬದನೆಕಾಯಿ ಹಾಕಿ
ಒಂದು ಮಾನ ಬೇಳೆಕಾಳು ಹಾಕಿ – ಒಂದೇ ಬಾಂಡಲೆಯಲಿ
ಅಡಿಗೆಯನು ತಾವು ಮಾಡಿ

ಹೆಚ್ಚಚ್ಚಿ ಬಂದ ಭೋಜಣವ ನಿಚ್ಚ ನೀಡುವರಂತೆ
ಹಿರಿಯ ಬಸವಯ್ಯನ ಮಠದಲ್ಲಿ

ಎಡೆಯನ್ನು ಬಡಿಸಿ ಮಿಕ್ಕ ಪ್ರಸಾದವನ್ನು
ಕಲ್ಲುಬಂಡಿಯನ್ನು ಕಟ್ಟಿ ಕಲ್ಯಾಣ ಪಟ್ಣದ – ಬೀದಿಯ ಒಳಗೆ
ಆ ಪರಸಾದವ ಈಡಾಡುವರಂತೆ

ಎಂಜಲು ಅನ್ನೋರ ಶಿರವು ಎರಡಾಗಲಿ
ಎನ್ನುತ ಪ್ರಸಾದವ ನೀಡುವರಂತೆ

ಹಿರಿಯ ಬಸವಣ್ಣನವರ ಗುರುಮಠದಲ್ಲಿ ನೀಲಮ್ಮ ತಾಯಿ
ಇಷ್ಟು ಗಾತ್ರ ಶರಣರಿಗೆ ನೋಡೀಗ – ಘನ ಶರಣೆ
ಎಡೆಯನಾದರೆ ಮಾಡುವರು

ನಂದಿ ಮಂಚದ ಮೇಲೆ ಕೂತರು ಬಸವಣ್ಣನವರು
ಅವರ ವಾಲೆಯ ತಗದು ಓದಿದರು
ಬಸವಣ್ಣನವರು ವಾಲೆ ಓದುವಂಥ ಕಾಲದಲ್ಲಿ
ನೀಲಮ್ಮ ತಾಯಿ ದುಃಖ ಪಡುತಾರೆ

ಕೈಲಾಸದಿಂದ ಬರುವಾಗ ನಮ್ಮ ಬಸವಣ್ಣನವರು
ಐದು ಪರಸಾದದಲ್ಲಿ ಬಂದಾರು – ಆದರೆ
ಮಕ್ಕಳ ಪರಸಾದವ ತರಲಿಲ್ಲ

ನಡಿಗೆ ಪರಸಾದ ತಂದರು ನುಡಿಗೆ ಪರಸಾದ ತಂದರು
ಭಕ್ತಿಯ ಪರಸಾದ ಭಾಮದ ಪರಸಾದವ – ಅವರಾದ್ರೆ ತಂದರು
ಮಕ್ಕಳೆಂಬೋ ಪರಸಾದವ ತರಲಿಲ್ಲ

ಮಕ್ಕಳೆಂಬುವಂಥ ಒಂದು ಪರಸಾದವು
ಹಳಯ್ಯನವರ ಮಠಕೆ ಸೇರಿಕೊಂಡು

ಲಕ್ಷದ ಮೇಲೆ ತೊಂಬತ್ತಾರು ಸಾವಿರ ಶರಣರಿಗೆ
ಪರಸಾದ ನೀಡುವ ನನ್ನ ಹೊಟ್ಟೀಲಿ – ನನ್ನೊಡೆಯ
ಮಕ್ಕಳ ಫಲವೆ ಮೊದಲಿಲ್ಲ

ಈರೆಂಭತ್ತೇಳು ಕೋಟಿಯೆಲ್ಲ ನಮಗೆ ಮಕ್ಕಳೆ ಆಗ್ಯವೆ
ನಮ್ಮ ಹೊಟ್ಟೀಲಿ ಮಕ್ಕಳ ಫಲವಿಲ್ಲ – ಏಕೆಂದು
ಮಡದಿಗೆ ಬಸವಯ್ಯ ನುಡಿದಾರೆ

ಭೂಮಿಗೆ ದೊಡ್ಡೇರೆ ಭೂಲೋಕವನು ತಂದವರೆ
ನಮ್ಮ ಕರ್ಮವ ಕಳಿಯೋದಕೆ – ಹೊಟ್ಟೀಲಿ
ಸಂತಾನವ ನಾವು ಪಡಿಬೇಕು

ನೀಲಲೋಚನೆಯ ಮಾತ ಕೇಳಿದರು ಬಸವಣ್ಣನವರು
ಕುಂದಿತು ಅವರ ಕಲಿಮಕ

ಕುಂದಿತಲ್ಲ ಕಲಿಮಕ ಬಂದೀತಲ್ಲ ಕಡುದುಃಖ
ಸಡಗರದಿಂದ ಗುರುವು ನಲಿದೆದ್ದ – ಬಸವಯ್ಯ
ಹಿರಿಯ ಕಕ್ಕಯ್ಯ ಮಠಕೋಗಿ

ಕಕ್ಕಯ್ಯನವರ ಮಠದ ಕರುಣದ ಪ್ರಸಾದಕ್ಕೆ
ಹನ್ನೆರಡು ವರ್ಷ ಬಸವಯ್ಯ
ಹರಳಯ್ಯನವರ ಮಠದ ಹರಡಿದ ಪರಸಾದಕ್ಕೆ
ಹಗಲನ್ನೆರಡು ವರ್ಷ ಬಸವಯ್ಯ

ಹಗಲು ಹನ್ನೆರಡು ವರ್ಷ ಇರುಳು ಹನ್ನೆರಡು ವರ್ಷ
ಅನ್ನ ಹಾರಾದಿಯನೆ ತಾ ಬಿಟ್ಟು – ಬಸವಯ್ಯ
ನೀರು ನಿದ್ರೆಗಳನೆ ತಾ ಬಿಟ್ಟು

ಒಕ್ಕಾಲ ತ್ರಬಸ ಮಾಡುತಾರಾಗ ಬಸವಣ್ಣನವರು
ಸಿಕ್ಕಲಿಲ್ಲ ಅವರಿಗೆ ಪರಸಾದ

ಬಸವಣ್ಣನವರು ನಿಂತು ಪಬಸು ಮಾಡುವುದನ್ನು
ಕೈಲಾಸದಲಿ ಕಂಡರು ಪರಮೇಶ್ವರ – ಆಗಲೆ
ಹರಹರ ಎಂದು ಶಿರದೂಗಿ

ಕಂಡುಕೊಂಡರು ಆಗ ಗುರುಮೂರ್ತಿ ಪರಮೇಶ
ಏನನುತ ಆಗ ನುಡಿಯವರು
ಇಷ್ಟು ಭಕ್ತಿ ಮಾಡೊ ಬಸವಣ್ಣನವರಿಗಾದರೆ
ಮುಕ್ತಿಯ ನಾನು ಹೊಂದಿಸಬೇಕು – ಎನುತೇಳಿ
ಮುಕ್ಕಣ್ಣಯ್ಯನವರು ಬರುತಾರೆ

ಮುಕ್ಕಣ್ಣ ಪರಶಿವನು ಎರುವಿನ ಯಾಸವ ತಾಳಿ
ಹಿರಿಯಕಕ್ಕಯ್ಯನ ಗುರುಮಠಕ್ಕೆ – ತಾವೋಗಿ
ಆಗ ಏನನ್ನು ಮಾಡುತಾರೆ

ಕಕ್ಕಯ್ಯನವರ ಮಠದ ಕಡೆಯ ಬಾಗಲ ಒಳಗೆ
ಮುಕ್ಕಣ್ಣೇಸುರ ಪರಶಿವನು – ಮೂರುತ ಮಾಡಿ
ಎರವಾಗಿ ಅಲ್ಲಿ ಬರುತಾರೆ

ಕಕ್ಕಯ್ಯನವರ ಮಡದಿ ಕಲ್ಯಾಣಿ ಎಂಬುವಳು
ಪುರುಷರಿಗೆ ಎಡೆಯ ತರುವಂಥ – ಕಾಲದಲಿ
ಒಂದು ಸಾಮಕ್ಕಿ ಪರಸಾದ ಸಿಡಿದೀತು – ಆ ಕ್ಷಣದಲ್ಲಿ
ಸಿಕ್ಕೀತು ಸಣ್ಣ ಎರವೀಗೆ

ಸುವ್ವಿ ಹೇಳಮ್ಮ ದೇವರ ದೇವ ಸುವ್ವಿ
ಸುವ್ವಿ ಬಾ ಚನ್ನಬಸವಯ್ಯ ಸುವ್ವಿ

ಎತ್ತಿಗಂಡಿತು ಎರಡ ಹಸ್ತದಲಿ ಪರಸಾದವ
ಒತ್ತುಗಂತು ತನ್ನ ನಯನಕೆ

ಬಾಯಲ್ಲಿ ಕಚ್ಚಿದರೆ ಪರಸಾದ ಯಂಜಲಾಯ್ತದೆಂದು
ಎತ್ತಿ ನೆತ್ತಿ ಮ್ಯಾಲೆ ಹೊತ್ತುಗಂಡು

ಮೂರು ಕೈಯನೆ ಧರಣಿ ಮೇಲೆ ಊರಿತು
ಒಂದು ಕೈಲಿ ಪರಸಾದ ಹಿಡಕಂತು – ಸಣ್ಣೆರವು
ರಾಜ ಬೀದಿ ಬೆಂಬಳ ಬರುತದೆ

ಶೋಕಾವಳಿ

ಎರವು ಪರಸಾದವ ತರುವುದ ಕಂಡರು ಬಸವಣ್ಣನವರು
ಹರಹರ ಎಂದು ಶಿರವ ತೂಗಿ

ಬಹಳ ಕಷ್ಟದಿಂದ ಪರಸಾದ ತರುತದೆ
ಇದು ಹಾಗೆ ಬಿಡಿಸಿದರೆ ಕಂದುವುದು ಎನ್ನುತ
ನಂದಿ ಗುರು ಮಠಕೆ ತೆರಳಿದರು
ತುಪ್ಪ ಸಕ್ಕರೆಯ ಮಡಿಲಲ್ಲಿ ಕಟ್ಟಿಕೊಂಡು
ಎರವು ಬರುವ ಮಾರ್ಗಕ್ಕೆ ಬರುತಾರೆ

ಜೇನು ಸಕ್ಕರೆಯ ತಂದರು ಬಸವಣ್ಣನವರು
ತುಪ್ಪ ಸಕ್ಕರೆಯ ಕಟ್ಟಿ ಕಟ್ಟಿದರು

ಮಡಿಯ ಮ್ಯಾಕೆ ಬಂದಿತು ಸಣ್ಣೆರುವು
ತುಪ್ಪ ಸಕ್ಕರೆ ಸೀಯ ಕಂಡಿತು

ಅನ್ನದ ಪರಸಾದ ಮಡಿಯ ಮ್ಯಾಲೆ ಬಿಟ್ಟಿತು
ಜೇನು ಸಕ್ಕರೆಯ ಸಲಿಸೀತು

ಎರವು ಪರಸಾದವ ಬಿಡುವುದು ಕಂಡು ಬಸವಣ್ಣನವರು
ಹರಹರ ಎಂದು ಶಿರದೂಗಿ – ಬಸವಣ್ಣನವರು
ಎತ್ತುಗಂಡರು ಎರಡು ಹಸ್ತದೊಳಗೆ

ಒತ್ತಿಗಂಡರು ತಮ್ಮ ನಯನಕೆ ಪರಸಾದವ
ಕಟ್ಟಿಕೊಂಡರು ಚಿಂದಿ ಸೆರಗಿಗೆ

ಸುತ್ತಿಗೊಂಡರು ತಮ್ಮ ನಡುವಿಗೆ ಬಸವಣ್ಣನವರು
ತಮ್ಮ ನಂದಿ ಗುರುಮಠಕೆ ಬರುತಾರೆ

೨

ತಮ್ಮ ನಂದಿ ಗುರುಠಕೆ ಬಂದರು ಬಸವಣ್ಣನವರು
ನಂದಿ ಮಂಚದ ಮ್ಯಾಲೆ ಬಂದು ಕುಳಿತರು

ಬಹಳ ಕಷ್ಟದಿಂದ ನಾವು ಪರಸಾದವ ಪಡೆದೀವಿ
ಹಾಗೆ ಸಲಿಸಿದರೆ ಕರ್ಮವು – ಬರುತದೆಂದು
ಸುತ್ತೂರಿಗ್ವಾಲೆ ಬರೆದರು

ಸುತ್ತೂರು ಹೊಳಿಯ ಜಲದಿ ಅಗ್ಗಣಿ ಬರಲಿ
ತಂದೆ ಬಸವಣ್ಣನವರ ಗುರುಮಠಕೆ
ಗಾಗಡಿಕಾರರ ಕರೆದು ಗಂಧವೀಳ್ಯವ ಕೊಟ್ಟು
ಬಾಗೂರು ಬಳಿಯ ಜಲಧಿಯ – ಅಗ್ಗಣಿ ಬರಲಿ
ನಮ್ಮ ದೇವರು ಬಸವಣ್ಣನವರ ಸ್ನಾನಕ್ಕೆ

ಕುಂದೂರಿಗ್ವಾಲೆ ಶೀಘ್ರದಲಿ ಬರೆದರು
ಕುಂದೂರು ಹೊಳೆಯ ಜಲಧಿಯ – ಅಗ್ಗಣಿ ಬರಲಿ
ನಮ್ಮ ತಂದೆ ಬಸವಣ್ಣನ ಸ್ನಾನಕ್ಕೆ

ಸುತ್ತಮುತ್ತಲ ಅಗ್ಗಣಿ ಬಂದವಲ್ಲ ಬಸವಣ್ಣನವರ ಮಠಕೆ
ಸಿದ್ದಪ್ಪಾಜಿಯವರು ಕೊಡಕೆ ಎರದರು

ಹತ್ತು ಕೊಪ್ಪರಿಕೆ ಒಳಗೆ ಎತ್ತಿ ಕಾದೊ ಪನ್ನೀರು
ಕಪ್ಪುರವು ಬರೆದ ರವಸೀಗೆ

ಕಪ್ಪುರವು ಬೆರೆದ ಸೋಜಿಗದ ಅಗ್ಗಣಿಗೆ
ದೇವೀರಿ ಅಗ್ಗಣಿ ತಂದು ಬೆರಸಿದರು

ಆರು ಕೊಪ್ಪರಿಕೆ ಒಳಗೆ ಸೇರಿ ಕಾದೊ ಪನ್ನೀರು
ರಾವಚ್ಚ ಬೆರೆದ ರವಸೀಗೆ

ರಾವಚ್ಚ ಬೆರೆದ ರವಸೂಜಿಗದ ಅಗ್ಗಣಿಗೆ
ದೇವೀರಮ್ಮ ಅಗ್ಗಣಿ ತಂದು ಬೆರಸಿದರು

ಕೊಪ್ಪ ಕೊಪ್ಪರಿಗೆ ಒಳಗೆ ಎತ್ತಿಕಾದೊ ಪನ್ನೀರು
ನೀಲಮ್ಮ ಪುರುಷರ ಬಳಿಗೆ ಬರುತಾರೆ
ಪುರಷರ ಬಳಿಗೆ ಬಂದರು ನೀಲಮ್ಮ
ಕೂಡೆರಡು ಕರವ ನಮಿಸಿದರು

ದೇವರೆ ಬಿಜ ಮಾಡಿ ದೇವುಸ್ವಾಮಿ ಬಿಜ ಮಾಡಿ
ಪಾವನ್ನ ಮೂರ್ತಿ ಬಸವಯ್ಯ
ಪಾವನ್ನ ಮೂರ್ತಿ ಬಸವಯ್ಯ – ಬಸವಣ್ಣನವರೆ
ದೇವರೆ ಮಜ್ಜಣಕೆ ದಯಮಾಡಿ
ಕರೆದರೆಯ ಏನುತೇಳಿ ಸಡಗರದಿಂದ ನಸುನಗುತ
ಚಂದಾಗಿ ವಸ್ತುರವ ಇಳಿ ಮಡಗಿ – ಬಸವಣ್ಣನವರು
ಅವರು ನಂದಿಗುರು ಮಠ ಬಿಟ್ಟು ಬರುತಾರೆ

ಗುರುಮೂರ್ತಿ ಬಸವಣ್ಣ ತಾನ ಮಾಡುವರ ಮನೆಗೆ
ವಜ್ರರೇವಣಿಸಿ ಬಿಗಿದದೆ – ರವ ಪೀಠಕದ
ಗದ್ದಿಗೆ ಮ್ಯಾಲೆ ಆವಾಗ – ಮುದ್ದು ಬಸವಯ್ಯನವರು
ಹೋಗಿ ಮೂರುತವ ಮಾಡಿದರು

ಹರಹರ ಎನುತೇಳಿ ಹತ್ತಿದರು ಗದ್ದುಗೆಯ
ಶಿವಶಿವ ಎನುತೇಳಿ ಕುಳಿತರು

ಲಕ್ಷದ ಮೇಲೆ ತೊಂಬತ್ತಾರು ಸಾವಿರ ಗಣಂಗಳು
ಬಸವಣ್ಣನವರಿಗೆಂದರೆ ಒಂದೊಂದು – ಉಳಿಗವ
ತಾವಾದರಾಗ ಮಾಡುತಾರೆ

ಆರೆಣ್ಣೆ ಮಲ್ಲರು ತೋರೆಣ್ಣೆ ಮಲ್ಲರು
ಮ್ಯಾಲೊಂದು ವಜ್ರದ ಮಲಕೀನ – ಗೊಲ್ಲರು
ಅವರು ಪಾದಕೆ ಒಳ್ಳೆಣ್ಣೆ ಎರೆದರು

ಹತ್ತೆಣ್ಣೆ ಮಲ್ಲರು ಒತ್ತೆಣ್ಣೆ ಮಲ್ಲರು
ಮತ್ತೊಂದು ವಜ್ರದ ಮಲಕಿನ – ಗೊಲ್ಲರು
ಅವರು ಮಸ್ತಕಕೆ ಎಣ್ಣೆ ಎರೆದರು

ಹಸಿನೀರು ಬಿಸಿನೀರು ಹದಿನೈದು ಕೊಪ್ಪರಿಕೆ
ಕುಶಲದ ಚೊಂಬು ಬಲಗೈಲಿ – ನೀಲಮ್ಮನವರು
ಹಸೆಯೋರಿಗಗ್ಗಣೆಯ ಎರೆದಾರು

ತಣ್ಣೀರು ಬಿಸಿನೀರು ಹನ್ನೆರಡು ಕೊಪ್ಪರಿಕೆ
ಚಿನ್ನದ ಚೊಂಬು ಬಲಗೈಲಿ – ನೀಲಮ್ಮನವರು
ಪುರುಷಗಗ್ಗಣೆಯ ಎರೆದರು

೩

ಕರ್ತೃ ಬಸವಣ್ಣನವರು ತಾನಕೆ ಹೋದ ಯಾಳ್ಯದಲಿ
ಅವರ ತಂಗಿ ನಾಗಮ್ಮ ಏನ ನುಡಿದಾಳು

ಅಣ್ಣಯ್ಯ ಗುರುಮೂರ್ತಿ ಸ್ನಾನಮಾಡಿ ಬರೊ ಹೊತ್ತಿಗೆ
ಶಿವಪೂಜೆ ಗುರುಮಠವ ಸಿಂಗರಿಸುವ – ಅನುತೇಳಿ
ಮಾಣಿಕದ ರಜಬೋದಗೆ ಬಲಗೈ ತಕ್ಕಂಡು
ಮಾಳಿಗೆ ಗುರು ಮಠಕೆ ತೆರಳಿದಳು

ಮಾಳಿಗೆ ಗುರುಮಠಕೆ ಬಂದರು ನಾಗಮ್ಮನವರು
ನಂದಿ ಮಂಚದ ಮೇಲೆ ಬಂದು ಕುಳಿತರು
ನಂದಿ ಮಂಚದ ಮೇಲೆ ಕುತುಗಂಡ ನಾಗಮ್ಮನ ಕಣ್ಗೆ
ಹರಳಯ್ಯನ ಮಠದ ಪರಸಾದ

ಹರಳಯ್ಯನವರ ಮಠದ ಸಾಮಕ್ಕಿ ಪರಸಾದದ
ಪಟ್ಟೆ ವಸ್ತ್ರದ ಗಂಟ ಕಂಡಳು

ಹೊನ್ನು ಚಿನ್ನ ಅಣ್ಣಯ್ಯ ಕಣ್ಣೆತ್ತಿ ನೋಡೋದಿಲ್ಲ
ಅಣ್ಣಯ್ಯ ಕಟ್ಟಿದ ಗಂಟು ಇಪರೀತ

ಮುತ್ತು ರತ್ನಗಳ ಅಣ್ಣಯ್ಯ ಮುಟ್ಟುವ ಗುರುವಲ್ಲ
ಇದು ಎತ್ತಲ ಚೋಜಿಗದ ಹೊಸಗಂಟು – ಎನುತಂದು

ಬಿಚ್ಚಿ ನೋಡಿದರು ಹತ್ತು ಬೆರಳಲ್ಲಿ ಆವಾಗ
ಕಂಡರು ಸಾಮಕ್ಕಿ ಪರಸಾದ – ನಾಗಮ್ಮ
ಒತ್ತಿಗಂಡರು ತಮ್ಮ ನಯನಕ್ಕೆ

ಕಕ್ಕಯ್ಯನವರು ಮಠಕೆ ಬಿನ್ನಕೋಗಿದ್ದರೇನೊ
ತಮ್ಮೆಡೆಯ ತಾವು ಸಲಿಸ್ಯವರೆ
ಹರಳಯ್ಯನವರ ಮಠಕೆ ಬಿನ್ನಕೋಗಿದ್ದವರು
ತಮ್ಮೆಡೆಯ ತಾವು ಸಲಿಸ್ಯವರೆ – ಅಣ್ಣಯ್ಯ
ನಮ್ಮೆಡೆಯ ತಂದು ಮಡಗ್ಯವರೆ

ಒಡಹುಟ್ಟು ಎಂಬುವದ ಮರೆಯದೆ ಅಣ್ಣಯ್ಯ
ಎಳ್ಳೋಟು ಪರಸಾದ ತಂದು ಮಡಗ್ಯವರೆ – ಅನುತೇಳಿ
ಎಡೆಯ ಸಲಸ್ಯವರೆ ನಾಗಮ್ಮ

ಕಂಡಂಥ ಪರಸಾದ ಗುಂಡಿಗಾಧಾರ ಎಂದು
ಲಿಂಗ ಜಂಗಮರ ಶರಣರ
ಲಿಂಗ ಜಂಗಮರು ಶರಣರ ಪಾದವ ನೆನೆದು
ಲಿಂಗಕರ್ಪಣೆ ಮಾಡಿ ಸಲಿಸಿದೆ

ಶರಣರ ಮಠದ ಪರಸಾದ ನಾಗಮ್ಮನ ಹೃದಯಕೆ ಬಿದ್ದಿತು
ಬಂದು ಚನ್ನಣ್ಣ ಮೂರ್ತವಾದ

ಹರಳಯ್ಯನವರ ಮಠದ ಪರಸಾದ ತಾನಾಗ
ನಾಗಮ್ಮನವರ ಗರ್ಭಕೆ ಹೋಗಿ ಬೀಳಲು – ಅವಾಗ
ಬಂದು ಚನ್ನಣ್ಣ ಮೂರ್ತವಾದ

ಯಾವಾಗ ನೋಡಿದರೆ ಸೂರ್ಯನ ಪ್ರಕಾಶ
ನಾರಿ ನಾಗಮ್ಮನ ಗರ್ಭದಲಿ – ಪರಸಾದ
ಚಿನ್ನದಗ್ಗಣಿಯಾಗಿ ಒಲದೀತು

ಅಕ್ಕನಾಗಮ್ಮನ ಹೃದಯದಲಿ ಪರಸಾದ
ಹವಳದ ಕುಡಿಯಾಗಿ ಒಲದೀತು

ಒಲದೀತು ಪರಸಾದ ಬೆಳದಿತೊಂದು ಮಗುವಾಗಿ
ಅಕ್ಕನಾಗಮ್ಮನ ಹೃದಯದೊಳಗೆ

ಶರಣರ ಮನೆ ಪ್ರಸಾದವ ಸಲಿಸಿದರು ನಾಗಮ್ಮ
ಶಿವಪೂಜೆ ಗುರುಮಠವ ಸಿಂಗರಿಸಿ

ಗದ್ದುಗೆ ಗುರುಮಠದ ತೀರ್ಥವ ತೆಗೆತಂದು
ಒತ್ತಿದರು ನಾಲ್ಕು ಚೌಕವ – ರಂಗೋಲೆ ತುಂಬಿ
ನಮ್ಮ ಮುಕ್ಕಣ್ಣಯ್ನ ರೂಪ ರಚಿಸಿದರು
ಎದ್ದವೊ ರಂಗೋಲೆ ಎದ್ದವೊ ಶಿವಕಳಸ
ರುದ್ರನಾ ಕಳೆಯ ನಿಲುಭಾರ

ಕಸವನ್ನು ತೆಗುದಾರು ಹೊಸ ಮಂದಲಿಗೆ ಹರವಿದರು
ತಮ್ಮ ಗುರುಮಠಕಾದರೆ ತೆರಳಿದರು

ಸುವ್ವಿ ಹೇಳಮ್ಮ ದೇವರ ದೇವ ಸುವ್ವಿ
ಸುವ್ವಿ ಬಾ ಚನ್ನಬಸವಯ್ಯ ಸುವ್ವಿ

ತಮ್ಮ ಗುರುಮಠಕೆ ಬಂದರು ನಾಗಮ್ಮನವರು
ಬಂದು ಮಂಚದ ಮೇಲೆ ಕುಳಿತರು

ಅವರತ್ತಿಗೆ ನೀಲಮ್ಮ ತಕ್ಷಣಕೆ ಬಂದರು
ಗಂಧದಾರತಿ ಎತ್ತಿ ಬೆಳಗಿದರು

೪

ಅತ್ತಲಾಗಿ ನಾಗಮ್ಮ ಹೋದ ಯಾಳ್ಯದ ಒಳಗೆ
ಗುರುಮೂರ್ತಿ ಬಸವಯ್ಯ ಬರುತಾರೆ

ಶಿವಶಿವ ಎಂದು ಗದ್ದುಗೆಯ ಇಳಿದರು
ತಮ್ಮ ತಾನದ ಅರಮನೆ ಬಿಟ್ಟು ಬರುತಾರೆ

ಕಕ್ಕಯ್ಯ ಚಿಕ್ಕಯ್ಯ ಹೊತ್ತಿನಲ್ಲಿ ಪುಟ್ಟಬಸಪ್ಪ
ಕಿಡಿಗಾರ ಒಡೆಯ ಹಂಪಣ್ಣ – ಶರಣ ಸಲುವಾಗಿ
ಬಚ್ಚಿಟ್ಟಿದ್ದ ಪರಸಾದವ ಬಳಿಹೋಗಿ – ಬಸವಣ್ಣನವರು
ತಮ್ಮ ಪಟ್ಟೆ ವಸ್ತ್ರದ ಗಂಟ ಅರಸಿದರು

ಬಹಳ ಶ್ರಮದಿಂದ ಪರಸಾದವ ಪಡೆದಿದ್ದೆ
ಎತ್ತಗಾರೋಯ್ತೊ ನಿಧನವು

ಹರಳಯ್ಯನವರ ಮಠದ ಅರಳಿದ ಪರಸಾದ
ಅದು ಎತ್ತಾಗಾರೋಯ್ತೊ ಗುರುಕರುಣ – ನಿಧಾನದ ಪರಸಾದ
ಅವರು ನಂದಿ ಮಂಚನೆಲ್ಲ ಅರಸಿದರು

ಮಾಳಿಗೆ ಗುರುಮಠಕೆ ಯಾರು ಬತ್ತಿರಲಿಲ್ಲ
ನಮ್ಮ ತಂಗಿ ನಾಗಮ್ಮ ಬರುತಿದ್ದಳು

ರಜವ ಬೆಳಗುವಾಗ ಏನಾಯ್ತೊ ಎಂತಾಯ್ತೊ
ಇದು ಯತ್ತಗಾರೋಯ್ತೊ ನಿಧಾನವು – ಎನುತೇಳಿ
ನಿಂದ ಗ್ವಾಪದಲಿ ತಂಗಿ ಕರೆದರು

ಬಾರಮ್ಮ ನಾಗಮ್ಮ ಬಾರಮ್ಮ ಘನಶರಣೆ
ಎಂದು ಗ್ವಾಪದಲಿ ತಂಗಿ ಕರೆದರು

ಅಣ್ಣಯ್ಯ ಕರೆದ ಮಾತ ಕೇಳಿದರು ನಾಗಮ್ಮನವರು
ನಂದಿ ಗುರುಮಠಕೆ ಬರುತಾರೆ – ನಾಗಮ್ಮನವರು
ಬಾಗಿ ಪಾದಕ್ಕೆ ಶರಣೆಂದ

ಬಂದ ನಾಗಮ್ಮನ ಕಂಡರು ಬಸವಣ್ಣನವರು
ಗುರುಮೂರ್ತಿ ಬಸವಯ್ಯ ಏನ ನುಡಿದರು

ಮಾಳಿಗೆ ಗುರುಮಠಕೆ ಬಂದಿದ್ದವರು ಯಾರಮ್ಮ
ನಮ್ಮ ಮಾಯದ ಪರಸಾದ ಏನಾಯ್ತು

ಶಿವಪೂಜೆ ಗುರುಮಠಕೆ ಬಂದಿದ್ದವರ‍್ಯಾರಮ್ಮ
ನಮ್ಮ ಪಟ್ಟೆ ವಸ್ರದ ಗಂಟ ಕಂಡವರು – ಯಾರೆಂದು
ನಿಂದ ಕ್ವಾಪದಲಿ ತಂಗಿ ಕೇಳಿದರು

ಅಣ್ಣಯ್ಯ ಪಾದಕೆ ಸುಳ್ಳು ಹೇಳಬಾರದೆಂದು
ಸತ್ಯದ ನುಡಿಯ ನುಡಿದರು

ಮಾಳಿಗೆ ಗುರುಮಠಕೆ ಬಂದಿದ್ದೋರು ನಾವಣ್ಣ
ನಿಮ್ಮ ಪಟ್ಟೆ ಮಂಚದ ರಜವನ್ನೆ – ಬೆಳೆಗೊದಕೆ
ನಾನಾದರೆ ಬಂದಿದ್ದೊ ಅಣ್ಣಯ್ಯ

ನಂದಿ ಮಂಚದ ಮೇಲೆ ಹೋಗಿ ಕೂತೆನು ಅಣ್ಣಯ್ಯ
ಕಂಡೆನು ಚೋಜಿಗದ ಹೊಸ ಗಂಟ

ಅಣ್ಣಯ್ಯ ಕಟ್ಟಿದ ಗಂಟು ಇಪರೀತ ಎನುತೇಳಿ
ನಾ ಬಿಟ್ಟಿ ನೋಡಿದೆ ಹತ್ತು ಬೆರಳಲ್ಲಿ – ಪರಸಾದವ

ಕಂಡೆನು ಚೋಜಿಗದ ಹೊಸಗಂಟ

ಸ್ವಾಮಕ್ಕಿ ಪರಸಾದ ನಾ ಕಂಡೇನು ಅಣ್ಣಯ್ಯ
ಒತ್ತಿಗಂಡೇನು ನಯನಕ್ಕೆ

ಕಂಡಂಥ ಪರಸಾದ ಬಿಡುಬಾರದು ಎನುತೇಳಿ
ಲಿಂಗ ಜಂಗಮರು ಶರಣರು – ಪಾದ ನೆನೆದು
ನಾ ಲಿಂಗಕರ್ಪಣೆ ಮಾಡಿ ಸಲಿಸಿದೆ ಎನುತೇಳಿ
ಸತ್ಯದ ನುಡಿಯ ನುಡಿದರು

ಶೋಕಾವಳಿ

ಬಾನದ ಪರಸಾದ ಎನುತೇಳಿ ನೀನೀಗ
ಬಾಳ ಗ್ಯಾನದಿಂದ ಸಲಿಸಿದೆ ತಾಯಿ – ನಾಗಮ್ಮ
ಅದರ ಮಾಯವ ನೀನು ತಿಳಿದಿಲ್ಲ

ಅನ್ನದ ಪರಸಾದ ಅಂತೇಳಿ ನೀನೀಗ
ಬಾಳ ಆಸೆಯಿಂದ ಸಲಿಸಿದೆಯ – ನಾಗಮ್ಮ
ಅದರ ಕುಂದಕವ ನೀನು ತಿಳಿದಿಲ್ಲ

ಅದರ ಕುಂದಕವ ನೀನು ತಿಳಿಯದೆ ಹೋದೆ ನಾಗಮ್ಮ
ನಿನ್ನ ಹೊಟ್ಟೆಯಲಿ ಕೇಳೆ ನನತಂಗಿ – ಈಗಾದ್ರೆ
ಬಂದು ಚನ್ನಣ್ಣನವರು ಬೆಳದವರೆ

ಗಂಡನಿಲ್ಲದ ಬಾಲೆ ಬಸಿರಾಗವಳೆ ಎನುತೇಳಿ
ಕೊಂಡುಗರು ಚಾಡಿ ನುಡಿಯುವರು – ಬಿಜ್ಜಳನು
ನಮ್ಮನಾದರೆ ಅವನು ಕರೆಸುವನು – ನಾಗಮ್ಮ
ಮಂದದ ಕಟ್ಟೆ ಒಳಗೆ ನಿಲ್ಲಿಸುವನು
ನ್ಯಾಯದ ಸಭೆಯಲ್ಲಿ ಹೋಗಿ ನಿಲಬೇಕು ಎನುತೇಳಿ
ಬಸವಣ್ಣನವರು ಆಗ ನುಡಿದರು

ಅಣ್ಣನ ಮಾತನ್ನ ಕೇಳಿದರು ನಾಗಮ್ಮ
ಶಿವಶರಣೆ ಏನಂದು ನುಡಿದರು
ಅಣ್ಣಾಜಿ ಮುಖವ ಅಂತು ನೋಡಿ ನಾಗಮ್ಮ
ಶಿವಶರಣೆ ಏನೆಂದು ನುಡಿದರು

ನಾ ಒಡಹುಟ್ಟು ಅಂದರೆ ಮರಿ ಜವಳಿ ಕಡ್ಡಿಯಲ್ಲೊ
ಒಡಹುಟ್ಟು ದೂರಿಗೆ ಬರಬಹುದೆ – ಭೂಮಿತಾಯಿ
ನೀನಾದರು ಬಾಯಿ ತೆರೆಯಮ್ಮ

ಶರಣೆ ಆಡಿದ ಮಾತ ಕೇಳಿದಳು ಭೂಮಿತಾಯಿ
ಬಗ್ಗನೆರಡು ಪಾಲಾಗಿ ಬಾಯಿ ಬಿಡುತಾಳೆ

ಬಗ್ಗನೆರಡು ಪಾಲಾಗಿ ಬಾಯನ್ನು ಬಿರಿಯಲು
ಭೂಮಿಗೆ ನಾಗಮ್ಮ ಇಳಿದರು

ಒಡಹುಟ್ಟಿದ ತಂಗಿ ಧರಣಿಗೆ ಇಳಿದರೆ
ನಾ ಒಡಹುಟ್ಟಿನ ಮುಖವ ಕಾಣಲು – ಇಲ್ಲವೆಂದು
ಎದಾರ ಪಟ್ಟು ಎಡೆಯಲ್ಲಿ – ತಂಗೇಯ
ಎತ್ತಿದರು ಅಣ್ಣ ಬಸವಣ್ಣ

ತಂಗೆಯನಾದರೆ ಎತ್ತಿ ನಿಂತುಕಂಡು
ತಂಗಿಗೆ ಧೀರ್ಯವ ಕೊಡುತಾರೆ

ನಮ್ಮ ಅಂದಾರು ಎನುತೇಳಿ ನೀ ಅಂಜಬೇಡ ನಾಗಮ್ಮ
ಹಾಗಂದರು ನಮ್ಮ ಶರಣರು ಕೈಲಾಸದಲಿ
ನಂದಿ ಈಶ್ವರನ ಕೃಪೆಯುಂಟು

ಆಡಿದರು ಎನುತೇಳಿ ನೀ ನಡುಗಬೇಡ ನಾಗಮ್ಮ
ಆಡಿದರು ನಮ್ಮ ಶರಣರು – ಕೈಲಾಸದಲಿ
ಪಡವಿಗೀಶ್ವರನ ಕೃಪೆಯುಂಟು

ತಂಗಿಗೆ ಧೀರ್ಯವ ಕೊಟ್ಟರು ಬಸವಣ್ಣನವರು
ಕೈಲಾಸಕೆ ಹಸ್ತ ನೀಡಿದರು

ಎರಡು ಒಡವೆ ಪೆಟ್ಟಿಗೆ ಕೈಲಾಸದಿಂದ ಬರುತದೆ
ಆ ನವರತ್ನ ಖಚಿತ ಒಡವೆಯ – ಪೆಟ್ಟಿಗೆಯ
ಬೀಗವನಾದರೆ ತೆಗುದಾರು – ಬಸವಣ್ಣನವರು
ತಂಗಿಗೆ ಉಡುಗೊರೆಯ ಕೊಡುತಾರೆ

ಹಸ್ತ ಕಡಗನ ಕೊಟ್ರು ಕಸ್ತೂರಿ ಬಳೆಗಳ ಕೊಟ್ರು
ಮುತ್ತಿನ ಬಟ್ಟು ಹರಳೋಲೆ – ಭುಜಕೀರ್ತಿಯ

ತಮ್ಮ ತಂಗಿ ನಾಗಮ್ಮನಿಗೆ ಉಡುಗೊರೆಯ

ಕಾಲ ಕಡಗವ ಕೊಟ್ರು ಮೇಲಾದ ಚಿಂತಾಕವ ಕೊಟ್ರು
ಸಾವಿರ ವರದ ತೊಡುಗೆಯ – ಹೊನ್ನು ಬಂಗಾರವ
ತಮ್ಮ ತಂಗಿ ನಾಗಮ್ಮಗೆ ಉಡುಗೊರೆಯ

ಕಾಲ ಕಡಗವ ಕೊಟ್ರು ಮೇಲಾದ ಚಿಂತಾಕವ ಕೊಟ್ರು
ಸಾವಿರ ವರದ ತೊಡುಗೆಯ – ಹೊನ್ನು ಬಂಗಾರದ
ತಮ್ಮ ತಂಗಿ ನಾಗಮ್ಮಗೆ ಉಡುಗೊರೆಯ

ರಾಗ ರತ್ನದ ಪದಕವು ಮ್ಯಾಲೆರಡು ಒಡ್ಯಾಣ
ಚಂದ್ರ ಸೂರ್ಯರು ಉರುದಾಗೆ

ಚಂದ್ರ ಸೂರ್ಯರು ಉರುದಂಥ ಬಂಗಾರದ
ನವರತ್ನದ ನಾಗರ ಒಡ್ಯಾಣವ – ಅವರ ತಂಗೀಗೆ
ಬಸವಣ್ಣನವರಾಗ ಕೊಡುತಾರೆ

ದಿಕ್ಕೆಂಟು ಆಳುವಂಥ ನೀಲ ಮುತ್ತಿನಹಾರ
ವಜ್ರದ ಭುಜಕೀರ್ತಿ ಹರಳೋಲೆ – ಬಸವಣ್ಣನವರು
ಅವರ ತಂಗಿ ನಾಗಮ್ಮನವರಿಗೆ ಧರಿಸಿದರು

ಒಂದು ಲಕ್ಷದ ವರದ ವಡವೆಯ ಕೊಟ್ಟರು
ಒಡಹುಟ್ಟ ಈಗ ಸಂತ್ರಿಟ್ಟು
ಉಡುಗೊರೆಯ ಕೊಟ್ಟರು ಒಡಹುಟ್ಟು ಸಂತ್ರಿಟ್ಟು
ಒಡನೆ ದಾದಿಯರ ಸಯಿವಾಗಿ – ನಾಗಮ್ಮನ
ಬಿಡದಿ ಅರಮನೆಗೆ ಕಳುಹಿದರು

ನವಮಾಸ ಒಂಬತ್ತು ತಿಂಗಳ ತುಂಬಿ ನಿನ್ನ ಹೊಟ್ಟೆ ಒಳಗೆ
ಜರಣ ಆಗುವ ಪರಿಯಂತ – ನಾಗಮ್ಮ
ಶಿವಪೂಜೆ ಗುರುಮಠಕೆ ಬರಬೇಡ – ನನತಂಗಿ
ನೀ ಬ್ಯಾರೊಂದು ಬಿಡದೀಲಿ ಇರುತಾಯಿ

ಬಂದು ನಿಂದ ತಾವಿಗೆ ನಿಂತು ಗದ್ದುಗೆ ಮಾಡಿ
ಗೊಂಬೆ ಹೆಚ್ಚಳದ ತೆರೆ ಸಾಲು – ಗೋಸದ ಮರೆಯಲ್ಲಿ
ನಮ್ಮಕ್ಕ ನಾಗಮ್ಮನವರ ಕಳುವಿದರು

ಬಂದಂಥ ನಾಗಮ್ನ ಕಂಡರು ನೀಲಮ್ಮನವರು
ಪಾದಕಗ್ಗಣಿ ತಂದು ಎರದರು – ನೀಲಮ್ಮನವರು
ಸಾಂಬ್ರಾಣಿ ಬೆಳಗಿ ಶರಣೆಂದ್ರು

ಚಿನ್ನದ ಕುರ್ಚಿಯ ಮೇಲೆ ಕುಳಿತರು ನಾಗಮ್ಮ
ಮಲ್ಲಗೆ ಹಾರವ ಧರಿಸ್ಯವರೆ – ನೀಲಮ್ಮನವರು
ಗಂಧದಾರತಿ ತಂದು ಬೆಳಗ್ಯವರೆ

ಗಂಧದಾರತಿಯ ಬೆಳಗಿದರು ನೀಲಮ್ಮ
ಸಾಂಭ್ರಾಣಿ ಬೆಳಗಿ ಶರಣೆಂದ್ರು – ನಾಗಮ್ಮನಿಗೆ
ಕಲ್ಯಾಣಮ್ಮ ಬಂದು ಬಚಿತ ಧರಿಸ್ಯವರೆ

ಜಯ ಜಯ ಅನ್ನೋದಾಗಿ ತಂಗ್ಯಮ್ನನಾಗಲೆ
ಹರಸಿ ಆಶೀರ್ವಾದವ ಕೊಡುತಾರೆ

ನಾಗಮ್ಮನನಾದರೆ ಬಿಡದಿ ಅರಮನೆಗೆ ಕಳುವಿ
ಒಂದೆಂಬ ತಿಂಗಳ ಬಟುವಾಯ್ತು

ಒಂದೆಂಬ ತಿಂಗಳಾದೊ ಎರಡೆಂಬೊ ತಿಂಗಳಾದೊ
ಐದೆಂಬೊ ತಿಂಗಳು ತುಂಬಿ ಬಟುವಾಯ್ತು
ಏಳೆಂಬೊ ತಿಂಗಳು ತಾಯಿಗೆ ಬಟುವಾದೊ
ಏಳು ತಿಂಗಳಾದ್ರೆ ತುಂಬುವ ಕಾಲದಲಿ – ಕೈಲಾಸದ
ಒಡವೆಯ ನಾದಿನಿಗೆ ಧರಿಸ್ಯವರೆ

ಮಡಿಯ ಮಾಡಿಸಿ ಚಿನ್ನದ ಮಣೆಮೇಲೆ
ಕರೆತಂದು ಅವರ ಕೂರಿಸಿ – ನಾದಿನಿಗೆ
ನೀಲಮ್ಮ ಒಡವೆ ಧರಿಸ್ಯವರೆ

ಹಸ್ತ ಕಡಗ ಧರಿಸಿದಳು ಕಸ್ತೂರಿ ಬಳೆಗಳು
ಮುತ್ತಿನ ಬಟ್ಟು ಹರಳೋಲೆ – ಭುಜಕೀರ್ತಿಯ
ಅವರು ನಾದಿನಿ ನಾಗಮ್ಮನಿಗೆ ಧರಿಸಿದರು

ಕಾಲ ಕಡಗ ಇಕ್ಕಿದರು ಮೇಲಾದ ಚಿಂತಾಕ ಇಟ್ಟರು
ಒಂದು ಲಕ್ಷ ವರಹದ ತೊಡುಗೆಯ – ಹೊನ್ನುಬಂಗಾರವ
ತಮ್ಮ ನಾದಿನಿ ನಾಗಮ್ಮನಿಗೆ ಧರಿಸಿದರು

ಕೆಂಪವರ ಮೈಬಣ್ಣ ಚಂದಾವರೆ ಹೊಳದಂಗೆ
ಕಡೆಗಣ್ಣ ಕೆಂಪು ನಯನ ಬೆಳಕು

ಹಸಿ ಅವರ ಮೈಬಣ್ಣ ದಸುನಿ ಮುತ್ತು ಹೊಳೆದ್ಹಾಗೆ
ನಸುಗಣ್ಣ ಕೆಂಪು ನಯನ ಬೆಳಕು – ನಾಗಮ್ಮ
ಅವರು ಸುರಲೋಕದ ಭವತಾರ ಧರಿಸಿದರು

ಬಸುರಿ ಸುಂಗಾರ ಮಾಡುವ ನೀಲಮ್ಮನವರು
ಸಾಂಬ್ರಾಣಿ ಬೆಳಗಿ ಶರಣೆಂದ್ರು – ನೀಲಮ್ಮನವರು
ತಂದು ಗದ್ದುಗೆ ಮೇಲೆ ಕುಂಡ್ರಿಸಿದರು

ಲಕ್ಷದ ಮೇಲೆ ತೊಂಬತ್ತಾರು ಸಾವಿರ ಗಣಂಗಳು
ತಾಯಿಗೆ ಒಂದೊಂದು ಉಳಿಗವ ಮಾಡುತ್ತಾರೆ

೫

ಒಂದೊಂದು ಉಳಿಗವ ಮಾಡಿದ ಯಾಳ್ಯದವಳಿಗೆ
ಕೊಂಡುಕಾರ ಮಂಚಣ್ಣ ಸುಳಿದಾಡುತಾನೆ

ಏಳುತಿಂಗಳಿಗೆ ಒಡವೆಯ ಧರಿಸಿರಲು
ಕೊಂಡುಕಾರ ಮಂಚಣ್ಣ ಕಂಡುಕೊಂಡು – ಆಕ್ಷಣದೊಳಗೆ
ನಡೆದ ಬಿಜ್ಜಳನ ಅರಮನೆಗೆ

ದೊರೆಯ ಒಂದಿಗೆ ಚಾಡಿಯ ನುಡಿಯುವನು
ಕಲ್ಯಾಣಪಟ್ಟಣವ ನೀ ಬಿಡದೆ – ಆಳುವ ರಾಜ
ಹೊರಗಲ ಸುದ್ದಿ ನೀ ಅರಿಯಲ್ಲೊ

ಸುತ್ತ ಕಲ್ಯಾಣವ ನೀ ಒಪ್ಪಿ ಆಳುವ ರಾಜ
ಎತ್ತಲ ಸುದ್ದಿಯ ಅರಿಯಲ್ಲೊ – ಬಸವಣ್ಣನ ತಂಗೆ
ಬಿಮ್ಮನಸೆ ಆದ ಬಗೆ ಹೇಗೆ

ಪುಂಡು ಜಂಗಮರ ತಂದು ಮಂಟಪವ ಕೂಡಿಕೊಂಡು
ಚಂದಾಯ್ತು ಬಸವಯ್ನ ಹೊಸ ಭಕ್ತಿ – ನಾಗಮ್ಮನವರು
ಪುಂಡು ಜಂಗಮನಿಗೆ ಬಸುರಾಗಿ

ಬೋಳು ಜಂಗಮರ ತಂದು ಮಠವ ಸೇರಿಸಿಕೊಂಡು
ಚಂದಾಯ್ತು ಬಸವಣ್ಣನವರ ಹೊಸಭಕ್ತಿ – ನಾಗಮ್ಮ

ಬೋಳು ಜಂಗಮರಿಗೆ ಬಸುರಾದ

ಗಂಡನಿಲ್ಲದ ಬಾಲೆ ಬಸುರಾಗವಳೆ ಎನುತೇಳಿ
ಸುತ್ತ ಕಲ್ಯಾಣವೆಲ್ಲ ಹೊಸಸುದ್ದಿ – ಹುಟ್ಟಿದೆ
ಇದ ಇಚಾರಣೆ ಮಾಡುವ ದೊರೆಯಿಲ್ಲ – ಬಸವಣ್ಣನವರ
ಹೊಡೆದು ಎಳೆತರುವ ದೊರೆಯಿಲ್ಲ

ಹೊಡೆದು ಎಳೆತಂದು ದಂಡ ತಕ್ಕಳುವಂಥ
ಅರಸಿಲ್ಲ ಕಲ್ಯಾಣ ನಗರೀಲಿ – ಎನುತೇಳಿ
ದೊರೆಯ ಒಂದಿಗೆ ಚಾಡಿ ನುಡಿದನು

ಚಾಡಿಯ ಮಾತ ಕೇಳಿದನು ದೊರೆ ಆಗ
ನಿಂದಕ ಬಿಜ್ಜಳ ಏನ ನುಡಿದನು

ಶೋಕಾವಳಿ

ಬಿಡು ಬಿಡೊ ಮಂಚಣ್ಣ ನುಡಿಯಬ್ಯಾಡ ಕೇಡುಗವ
ಬಡದೊರೆಯ ಕಂಡರೆ ಸದರವೇನೊ – ಮಂಚಣ್ಣ
ಬಿಡದೆ ಹೋದೆ ಅನ್ಯಾಯದ ನುಡಿಗಳ

ಗುರುಮಠದ ಮಾತು ತಂದು ನಮ್ಮ ಅರಮಲ್ಲಿ ಹೇಳುವೆ
ಅರಮನೆಯ ಮಾತ ಗುರುಮಠದಲ್ಲಿ – ಹೇಳುವೆ
ಬಿಡದೆಹೋದೆ ಅನ್ಯಾಯದ ನುಡಿಗಳ

ಚಾಡಿಯ ಮಾತನ್ನ ಹೇಳಬೇಡ ಎನ್ನುತ
ಧೀರ ಬಿಜ್ಜಳನು ನುಡಿದನು – ಆವಾಗ
ಕೊಂಡಕಾರ ಮಂಚಣ್ಣ ಸತ್ಯಕೆ ನಿಲ್ಲುತಾನೆ

ಗುರುವೆ ಹುಸಿಯಲ್ಲ ಈ ಮಾತು ಇಸುಕಂಠ ತಾ ಬಲ್ಲ
ಶಿಶುವೆ ನಾಗಮ್ಮ ಗರ್ಭಿಣಿಯಾದ
ಗಂಡನಿಲ್ಲದ ಬಾಲೆ ಬಸುರಾಗವಳೆ ಎನುತೇಳಿ
ಅಂಗಡಿ ಬೀದ್ಯೆಲ್ಲ ಹೊಸಸುದ್ದಿ

ಸುತ್ತ ಕಲ್ಯಾಣದಲಿ ಹೊಸ ಸುದ್ದಿ ಹುಟ್ಯದೆ
ಬಸವಣ್ಣನ ಕಟ್ಟಿ ಎಳೆತಂದು –ಈಗಾದ್ರೆ
ದಂಡ ತಕ್ಕಳ್ಳುವಂಥ ದೊರೆಇಲ್ಲ

ಜಾಡಿಯ ಮಾತ ಕೇಳಿದನು ಬಿಜ್ಜಳನು
ತನ್ನ ಪಾಳು ಬುದ್ಧಿಯ ಯೋಚಿಸಿದ

ಕರೆಯಿರೊ ಮಲ್ಲರ ಕರೆಯಿರೊ ಗೊಲ್ಲಣ್ಣನವರ
ಭರದಿಂದ ಬಸವಣ್ಣನವರ ಈಗಲೆ – ನೀವಾದ್ರೆ
ಹೊಡೆದು ಇಲ್ಲಿಗೆ ಎಳೆತನ್ನಿ

ಬಂದರೆ ಕರೆತನ್ನಿ ಬರಲಾರೆ ಎಂದರೆ
ಅಲ್ಲಿಡಿದ ಗುದ್ದ ಇಲ್ಲಿ ಬಿಡಿರಯ್ಯ– ಎನುತೇಳಿ
ಬರೆದೋಲೆ ಕೊಟ್ಟು ಅಪ್ಪಣೆ ಇಟ್ಟ

ಹರಳು ಕಡ್ಡಿಯಂದದಲಿ ಕಡೆದರು ದೊಣ್ಣೆಯವರು
ಹಳದಿ ದೇವಾಂಗ ತಗೆದುಟ್ಟು – ಗೊಲ್ಲರು
ಅರವತ್ತು ಸಾವಿರ ಕಡೆದೀತು

ಬೆರಳಿ ಕಟ್ಟಿಗೆಯವರು ಒಂದತ್ತೆಂಟು ಸಾವಿರ
ಪಟ್ಟೆ ದೇವಾಂಗ ತೆಗುದುಟ್ಟು – ಗೊಲ್ಲರು
ಹತ್ತೆಂಟು ಸಾವಿರ ಬರುತಾರೆ

ಕೆರೆಯ ಏರಿಯ ಮ್ಯಾಲೆ ಇರುವೆ ಸಾಲಿಟ್ಟಾಗೆ
ಬಸವಣ್ಣನವರ ಗುರುಮಠಕೆ ಆಗಲೆ – ಗೊಲ್ಲರು
ಸಾಗಿ ಬರುತಾರೆ ಅಲ್ಲಿಗೆ

ದೊರೆಯ ಅಪ್ಪಣೆಯ ಮೇಲೆ ಬಂದ ಊಳಿಗ ಜನದ
ಕಣ್ಣಿಗೆ ಮರೆಯಾಯ್ತು ಬಸವಯ್ನ – ಗುರುಮಠವು
ಸುತ್ತ ಕಲ್ಯಾಣವೆಲ್ಲ ತಿರುಗಿದರು

ಕಲ್ಯಾಣ ಪಟ್ಟಣ ನೂರ ಅರವತ್ತುಯೋಜಣ
ಅಪ್ಪ ಬಸವಣ್ಣನವರ ಮಠದ ನೆಪ್ಪಾದರೆ –ಸಿಕ್ಕಾದೆ
ಅಲ್ಲಿ ಸಂದಿಗೊಂದಿಯನೆಲ್ಲ ತಡಕಿದರು

ಅಪ್ಪಾಜಿ ಬಸವಣ್ಣನವರ ಮಠದ ನೆಪ್ಪ ಅರಿಯದೆ
ಸಂದಿಗೊಂದಿನೆಲ್ಲ ಹುಡುಕಿದರು
ಸಂದಿಗೊಂದಿನೆಲ್ಲ ಹುಡುಕಿ ಸಿಕ್ಕದೆ ಆಗ
ದೊರೆಗೋಗಿ ಸುದ್ದಿಯ ಕೊಡುತಾರೆ

ಅಪ್ಪಾಜಿ ಬಸವಣ್ಣನವರ ಸುತ್ತು ಕಲ್ಯಾಣದ ಒಳಗೆ
ಮಠದ ನೆಪ್ಪು ನೆಲೆಯೆ ಇಲ್ಲವಲ್ಲ

ಸೀದವಾಗಿ ಹೋಗಿರಯ್ಯ ರೂಢಿ ಹೆಬ್ಬಾಗಿಲೊಳಗೆ
ಕಡೆಯ ಬಾಗಿಲ ಶರಣ ಸಿಕ್ಕುತಾನೆ – ನಿಮಗಾದ್ರೆ
ಮಠದ ನೆಪ್ಪುನೆಲೆಯ ಉಸುರುವನು

ಬಸವಣ್ಣನವರ ಮಠದ ನೆಪ್ಪು ಕೇಳಿ ನೀವೀಗ
ಕೆರೆಯ ಏರಿಯ ಮೇಲೆ – ಬಸವಯ್ನ
ನನ್ನ ಕಟ್ಟಿಗೆ ಬಂಟರೆ ಎಲೆತನ್ನಿ

ಕರ್ತೃ ಬಸವಣ್ಣನ ಮಠಕಾದರೆ ಬರುತಾರೆ
ಕಡೆಯ ಬಾಗಿಲ ಒಳಗೆ ಅವಾಗ – ಗುರುಮಠದ
ಆದಿ ಶರಣನು ಹೋಯ್ತಿದ್ದ

ಅಪ್ಪ ರಾಜಸಾಲೆ ಎಲ್ಲಿ ರಾಜೇಂದ್ರನ ಪ್ರತಿಮೆ ಎಲ್ಲಿ
ರಾಜ ಮುದ್ರಿಕೆ ಬೆರಳಿನ – ಉಂಗುರದವರು
ಸಂಬ್ರಮನಾಳುವ ಗುರುಮಠವೆಲ್ಲಿ

ಹಡಪದ ಅಪ್ಪಣ್ಣನ ಕೇಳಿದರು ಗೊಲ್ಲರು
ಅವನಿಗೆ ಕೂಡೆರಡು ಕರವ ನಮಿಸವರೆ

ನಿಂದಕದ ಜಾನದಲಿ ಬಂದಿರಿ ಊಳಿಗದವರೆ
ಮರೆಯಾಯ್ತು ಬಸವಯ್ನ ಗುರುಮಠ – ನೀವೀಗ
ನಿಂದಕದ ಜಾನವ ಹಿಂದಕೆ ಬಿಡರಯ್ಯ

ನಿಂದಕದ ಜಾನವ ಹಿಂದಕೆ ಬಿಟ್ಟು ನೀವು
ತಂದೆ ಬಸವಣ್ಣನವರೆ ಗತಿ ಎನ್ನಿ

ತಂದೆ ಬಸವಣ್ಣನವರೆ ನಿಮ್ಮ ಶ್ರೀಪಾದ ಗತಿ ಎಂದು
ಕೂಡೆರಡು ಕರವ ನೀವು ಮುಗಿರಯ್ಯ
ಕೂಡೆರಡು ಕರವ ನೀವು ಮುಗಿದರೆ ಕೇಳಿ
ತೆರೆಯ ತೆರದಂಗೆ ಮನದಲ್ಲಿ

ಓಂನಮೋಶಿವ ಎನ್ನುವ ರೂಢಿ ಬೆಬ್ಬಾಗಲಲಿ
ನಾಲಿಗೆ ಇಲ್ಲದ ಗಂಟೆ ಕಟ್ಟದೆ – ಹೆಬ್ಬಾಗಲಲ್ಲಿ
ವಾಲೈಸಿ ಸಪ್ತ ಆಗುವುದಯ್ಯ

ಪಂಚಾಕ್ಷರಿ ಎಂಬುವ ಪದುಮದ ಹೆಬ್ಬಾಗುಲಲಿ
ಹಂತಹಂತಕೆ ಶಿವನಾದ ಶಿವಯೋಗ – ಆಗ
ನಮ್ಮ ಜ್ಞಾನಿ ಬಸವಯ್ಯನ ಮಠದಲ್ಲಿ

ಬಾಗುಬಾಗುಲ ಒಳಗೆ ಹೂಡಿದೆ ಹೊಂಗಳಸ
ಹೂಡಿದೆ ಅಲ್ಲಿ ನಂದಿ ಶಿವ ಕಳಸ

ಬಾಗು ಬಾಗಿಲ ಒಳಗೆ ಶಿವಕಳಸ ಶಿವನಾದ
ನಮ್ಮ ಸಂಗನಬಸವಯ್ನು ಮಠದಲ್ಲಿ

ಬಸವಣ್ಣನವರ ಮಠಕೆ ಚಿನ್ನದ ಗೋಡೆಯು
ರನ್ನ ಮಾಣಿಕದ ತೊಲೆ ಮರ

ಬೆಳ್ಳಿಯ ಗುಜ್ಜು ಬೆಳ್ಳಿಯ ಒಳಸರ
ಬೆಳ್ಳಿಯ ಜಂತೆ ಇರುವೋದು – ಕೇಳಿರಯ್ಯ
ನಮ್ಮ ಕರ್ತೃ ಬಸವಣ್ಣನವರ ಗುರುಮಠಕೆ

ಬೆಳ್ಳಿಯ ಕರಿಯ ಕಬ್ಬಿನ ಜಲ್ಲೆಗಳ
ಹಬ್ಬಿಸ್ಯದೆ ಬಸವಣ್ಣನವರ ಗುರುಮಠಕೆ

ಚಿನ್ನದ ಮಡಿವಾಳದ ಬೇರ ಹಂಜರ ಬಿಗುಸದೆ
ಅಣ್ಣ ಬಸವಣ್ಣನವರ ಗುರುಮಠಕೆ – ಕೇಳಿರಯ್ಯ
ಹೇಮ ಹಂಚಿನ ಹೊದಿಕೆ ಹೊದಿಸ್ಯವರೆ

ಈಭೂತಿ ಕೋಟೆ ಈಭೂತಿ ಆಳ್ವೇರಿ
ಈಭೂತಿ ಒಳಗೆ ತಂದೆ ಬಸವಯ್ಯ

ರುದ್ರಾಕ್ಷಿ ಕೋಟೆ ರುದ್ರಾಕ್ಷಿ ಆಳ್ವೇರಿ
ಅಚ್ಚ ರುದ್ರಾಕ್ಷಿ ಮೇಲ್ಕಟ್ಟು – ಕಟ್ಯಾದೆ
ಸಣ್ಣ ರುದ್ರಾಕ್ಷಿ ಸರಿದದೆ – ಗುರುಮಠಕೆ
ಅಂಥ ಉರಿಯ ಗುದ್ದುಗೆ ನಮ್ಮ ಗುರುವಿಗೆ

ಚಂದ್ರ ಸೂರ್ಯರು ಇಳಿವ ದ್ವಾರಗಳು ಇರುತವೆ
ಲಿಂಗದ ಕೊಠಡಿ ಅಲ್ಲಿ ಇರುತಾವೆ – ಎಡ ಬಲಕೆ
ಜಂಗಮರು ಇರುವ ಕೊಠಡಿಗಳು

ತಾನದ ಗುಂಡು ಇರುತಾದೆ ಕಾಣಿರಯ್ಯ
ಮೂರು ಅಗ್ಗಣಿ ಬಾಪಿ ಇರುತಾವೆ

ಕಡೆಯ ಬಾಕ್ಲಲ್ಲಿ ನಿಂತುಕೊಂಡು ನೀವೆಲ್ಲ
ನಿಂದಕದ ಗ್ಯಾನವ ನೀವು ಮರೆತು
ಭಕ್ತಿ ಮೂಲದಿಂದ ಕರವೆತ್ತಿ ಮುಗಿರಯ್ಯ
ತೆರೆಯ ತೆಗುದಂಗಾಯ್ತುದೆ ನಿಮ್ಮ ಮನದಲ್ಲಿ

ತನ್ನ ಗುರುಮಠಕೆ ಅಪ್ಪಣ್ಣ ಹೋದನಂತೆ
ಆದಿ ಶರಣನ ಮಾತ ಕೇಳಿದರು

ನಿಂದಕದ ಗ್ಯಾನವ ಹಿಂದಕೆ ಬಿಟ್ಟರು
ಗುರುತಂದೆ ಬಸವಣ್ಣನವರೆ ಗತಿ ಎಂದು
ಗುರುತಂದೆ ಬಸವಣ್ಣನವರ ಶ್ರೀಪಾದ ಗತಿ ಎಂದು
ಅವರಾಗ ಕರವೆತ್ತಿ ಕೈಯ ಮುಗಿದರು

ಕರವೆತ್ತಿ ಕೈಯ ಮುಗಿವ ಕಾಲದ ಒಳಗೆ
ತೆರೆಯ ತಗದಂಗಾಯ್ತು ಮನದಲ್ಲಿ
ಓಂನಮಶಿವ ಎನುವ ರೂಢಿ ಹೆಬ್ಬಾಗಲಲಿ
ನಾಲಿಗಿಲ್ಲದ ಗಂಟೆ ಸಪ್ತವಾಯ್ತು

ನಲವತ್ತೆಂಟು ಬಾಗಲ ಈಚೆಗೆ ನಿಂತು ಗಂಡು
ಬಸವಣ್ಣನವರ ಪಾದ ಹೊಗಳವರೆ

ದೇವರೆ ಬಿಜುಮಾಡಿ ದೇವಸಾಲೆ ಬಿಜುಮಾಡಿ
ಪಾವನ್ನಮೂರ್ತಿ ಬಸವಯ್ಯ - ನ್ಯಾಯಕ್ಕೆ
ಗುರುಮೂರ್ತಿ ಮುಂದಕ್ಕೆ ದಯಮಾಡಿ

ಬಂದರೆ ಕರೆತರ ಹೇಳವರೆ ಬರಲಾರೆ ಎಂದರ
ಇಲ್ಲಿಡಿದ ಗುದ್ದ ಅಲ್ಲಿ ಬಿಡಹೇಳಿ - ಗುರುಮೂರ್ತಿ
ದೊರೆಯ ಅಪ್ಪಣೆಯು ಆಗ್ಯದೆ - ಬಸವಯ್ಯ
ಗುರುಮಠವ ಬಿಟ್ಟು ದಯಮಾಡಿ

ಅಣ್ಣ ಬಸವಣ್ಣನವರ ಗೊಲ್ಲರು ಕರೆವಾಗ
ಸ್ನಾನ ಶಿವಪೂಜೆ ಒಳಗೆ ಇರುತಾರೆ

ಒಡಲಲಿ ತೀರ್ಥವು ಕೊರಳಲ್ಲಿ ಶಿವಗಂಟಿ
ಹೊಳೆವ ಡಿಮ್ಮಿಯ ಒಳಗೆ ಜಪಮಂತ್ರ – ಮಂತ್ರಿಸಿದರೆ
ಈಚೆ ಕರೆವರ ಮಾತು ಅರಿವಿಲ್ಲ

ಕಡೆಯ ತೊಟ್ಟಿಯ ಒಳಗೆ ನಾಗಮ್ಮನವರು ನಿಂತರು
ಅವರ ಗಿಣಿಗಳ ಬೇಗ ಕಳುಹಿದರು

ಬಂದವು ರಾಮಯ್ಯ ನಿಂದವು ಘನಶಾಲೆಯಲಿ
ಬಂದು ಪಾದಕ್ಕೆ ಶರಣಂದೊ – ಗಿಣಿಗೊಳು
ಬಸವಣ್ಣನವರ ಪಾದ ಹೊಗಳುತಾವೆ

ದೊರೆ ಮನೆ ಊಳಿಗದವರು ಇಲ್ಲಿಗಾದ್ರೆ ಬಂದ್ರು
ಬಹಳ ಹೊತ್ತಿನಿಂದ ನಿಮ್ಮ ಪಾದ ಹೊಗಳುತ – ನಿಂತವರೆ
ಭಾಳಲೋಚಣನೆ ಅರಿವಿಲ್ವೆ – ಎನುತೇಳಿ
ಎತ್ತಿ ಕರಂಗಳ ಗಿಣಿ ಮುಗಿದವು

ಗಿಣಿಗಳ ಮಾತ ಕೇಳಿದರು ಬಸವಣ್ಣನವರು
ಗಿಣಿಗಳ ಹೊಂದಿಗೆ ಹೇಳಿ ಕಳಿವ್ಯವರೆ

ಧೀರನ ಹಜಾರ ಕೋಲಿನ ಮೇಲೆ ಗಿಣಿಗಳಿರ
ಗಳಿಗೆಚ್ಚ ಗಳಿಗೆ ತಡವಾಗಿ – ಹೋಗುತದೆ
ನಾವು ಹೊಂದಿಗೋಗುವನ ಇರಹೇಳಿ

ಲಕ್ಷದ ಮೇಲೆ ತೊಂಬತ್ತಾರು ಸಾವಿರ ಶರಣರಿಗೆ
ಸ್ನಾನ ಮಡಿಯಾದರೆ ಆಗಲಿ – ಊಟದ
ಭೋಗವು ಅವರಿಗೆ ಆಗಲಿ

ಬಂದಿರುವಂಥ ಗೊಲ್ಲರಿಗೆ ಊಟ ಭೋಜನ ಆಗಲಿ
ನಾವು ಹೊಂದಿಗೋಗುವ ಇರಹೇಳಿ

ಬಸವಣ್ಣನವರ ಮಾತ ಕೇಳಿದವು ಗಿಣಿಗಳು
ಊಳಿಗದವರ ಕೂಟೆ ಸಾರಿ ಹೇಳುತಾವೆ

ಹೊಂದಿಗೋಗುವ ಇರಹೇಳಿ ಎಂದು ಅಪ್ಪಣೆ ಆಗ್ಯದೆ
ಹಾಗೆಂದು ಗಿಣಿಗಳು ನುಡಿದವು

ಗಿಣಿಗಳ ಕಳುವಿದರು ಬಸವಣ್ಣವರು ಆಗ
ಶಿವಪೂಜೆಗೆ ತಾವು ಕುಳಿತವರೆ – ಬಸವಣ್ಣನವರು
ಸಾಂಬ್ರಾಣಿ ಬೆಳಗಿ ಶರಣೆಂದ್ರು

ಲಿಂಗಪೂಜೆಯ ಮಾಡಿ ನಮ್ಮ ಹಿರಿಯ ಬಸವಣ್ಣನವರು
ಬಂದು ಮಂಚದ ಮೇಲೆ ಕುಳಿತವರೆ

ಬಂದು ಮಂಚದ ಮೇಲೆ ಕೂತ ಬಸವಣ್ಣನವರಿಗೆ
ಮಡದಿ ನೀಲಮ್ಮನವರು ಆಗಲೆ – ಒಡೆಯನಿಗೆ
ಒಪ್ಪದಿಂದೆಡೆಯ ಪಡಿಸ್ಯವರೆ

ನೂರೆಂಟು ಪದಾರ್ಥ ಎಡೆಮಾಡಿ ನೀಲಮ್ಮ
ಸಾಂಬ್ರಾಣಿ ಬೆಳಗಿ ಶರಣೆಂದು – ನೀಲಮ್ಮನವರು
ಪಾವನ್ನ ಮೂರ್ತಿ ಸಲಿಸಯ್ಯ

ಹಿಂದೆ ಬಸವಣ್ಣನವರು ಮುಂದಕೋಯ್ತರೆ ಎಂದು
ಅಲ್ಲಿ ಸತ್ಯಶರಣ ಕಡೆದರು

ಸುವ್ವಿ ಹೇಳಮ್ಮ ದೇವರ ದೇವ ಸುವ್ವಿ
ಸುವ್ವ ಬಾ ಚನ್ನಬಸವಯ್ಯ ಸುವ್ವಿ

ಕಂಬಳಿಯವರು ಎಂಭತ್ತು ಸಾವಿರ
ಕಂತೆಯವರು ಎಂಭತ್ತು ಸಾವಿರ – ಗಣಗಳು
ಒಂದೊಂದು ರುದ್ರಾಕ್ಷಿ ಸರದವರು

ಹತ್ತೆಂಟು ಕೋಟಿ ಕಡೆದರು ಆಗಲೆ
ಜೋಡಿ ಜೋಡಿ ರುದ್ರಾಕ್ಷಿ ಶರಣರು

ಕಾವಿಯವರು ಕಂತೆಯವರು ನಲವತ್ತು ಸಾವಿರ
ಜೋಡಿ ಜೋಡಿ ರುದ್ರಾಕ್ಷಿ ಶರಣರು – ಆಗಲೆ
ಋಷಿಗಳು ಬೇಗ ಕಡೆದರು

ಬೆಟ್ಟುಗುರು ಧರಗೆ ಇಳಿದಂಥ ಶರಣುರು
ಮೂಗಿನಲಿ ಜೇನು ಕಟ್ಟಿದವರು

ಎಕ್ಕತ್ತಿನ ಮೇಲೆ ಮತ್ತಿ ಮರ ಹುಟ್ಟಿದವರು
ಬೆಟ್ಟವನು ಹೊತ್ತ ಶರಣರು – ಆಗಲೆ
ಗಟ್ಟವನು ಹೊತ್ತ ಶರಣರು

ನಡುನಾಲಿಗೆ ಒಳಗೆ ಚಿಕ್ಕ ಗಿಡ ಹುಟ್ಟಿದವರು
ಒಂದು ಲಕ್ಷ ಶರಣರು ಕಡೆದರು

ಕಿವಿ ಉರುಳಲ್ಲಿ ಸಿಬುಲಕ್ಕಿ ಮರಿ ಮಾಡಿದವರು
ಗಡ್ಡ ಗಡ್ಡದೊಳಗೆ ಗೀಜುಗವು – ಮರಿ ಮಾಡಿದವರು
ಎಮೆಯೊಳಗೆ ಮರಿ ಮಾಡಿ ಇರುವಂಥ – ಶರಣರು
ಒಂದು ಕೋಟಿ ಆಗ ಕಡೆದರು

ಕಣ್ಣಿನ ರೆಪ್ಪೆ ಒಳಗೆ ಹೆಗ್ಗಡಜ ಮರಿ ಮಾಡಿದವರು
ಅಂಗೈಯ ಮೇಲೆ ಅರಳಿಯ – ಮರ ಹುಟ್ಟಿದವರು
ನೆತ್ತಿಯ ಮೇಲೆ ಹೊತ್ತುಟ್ಟಿ – ಶರಣರು
ಅದು ಒಂದು ಕೋಟಿ ಕಡೆದರು

ಹೊಡೆವ ನಗಾರಿಯು ಹಿಡಿವ ಕೊಂಬಿನ ಕಾಳೆ
ಸಿಡಿಬೊಬ್ಬೆ ಗುಟ್ಟೊ ಜಾಗಟೆ – ಸಯಿವಾಗಿ
ನೂರೊಂದು ಗುರುಮಠ ಬಿಟ್ಟು ತೆರಳಿದರು

ಬಲದಲಿ ಬಸವನ ಪ್ರಭೆಯು ಎಡದಲಿ ನಂದಿ ತಾಳ
ಮಲಿಗೆ ಹಾರ ಕೊರಳೊಳಗೆ – ಬಸವಣ್ಣನವರು
ಮೆಲ್ಲ ಮೆಲ್ಲಗೆ ಗುರುಮಠವ ಬಿಟ್ಟು ತೆರಳಿದರು

ಬೆರಳಿಯ ನಗಾರಿ ಚಿನ್ನದ ಕೈಕುಡ
ಬೋರು ಗುಟ್ಟಿತು ಕಲ್ಯಾಣ

ಚಿನ್ನದ ನಗಾರಿ ಬೆರಳಿಯ ಕೈಕುಡ
ಸಿಡಿಗೊಬ್ಬೆಗುಟ್ಟೊ ಹೆಗ್ಗಾಳೆ – ಸಯಿವಾಗಿ
ಬೋರುಗುಟ್ಟಿದೆ ಕಲ್ಯಾಣ

ತಾನ ತಾನಕೆ ಭಚಿತ ತೋಳಲ್ಲಿ ರುದ್ರಾಕ್ಷಿ
ನೋಡಿದವರಿಗೆ ಪಾಪ ಪರಿಹಾರ – ರುದ್ರಾಕ್ಷಿಯ
ಭೂಷಣದೊಳಗೆ ಧರಿಸ್ಯವರೆ

ನಂದಿಯ ಸತ್ತಿಗೆ ನಂದಿಯ ಆಭರಣ
ತಾಂಬ್ರದ ಪಂಜರದಲ್ಲಿ ಗಿಣಿರಾಮ –ಸಯಿವಾಗಿ
ಬೋರೆಂದು ಕಲ್ಯಾಣದಿಂದ ತೆರಳಿದರು

ಮಡಿವಾಳ ಮಾಚಯ್ಯ ನಡೆಮುಡಿಯ ಬಿಡುತಾನೆ
ಮಲ್ಲಿಗೆ ಮಾದೇವಿ ಪಂಚದೀವಟಿಗೆ – ಹಿಡಿದವರೆ
ನಡೆಮುಡಿಯ ಮೇಲೆ ಮಠವ ಬಿಡುತಾರೆ

ನಡೆಮುಡಿಯ ಮೇಲೆ ಮಠವನ್ನೆ ಬಿಡುವಾಗ
ಮುಂದೆ ಮುಂದೆ ಭಟ್ಟರು ಹೊಗಳುತಾರೆ

ಕನಕದಮ್ಮಟೆ ಕೈತಾಳ ಮ್ಯಾಗೆ ಸೂಳೇರ ಮ್ಯಾಳ
ಕೆಂಪಿನ ಸುರಪಾನಿ ಎಡಬಲಕೆ

ಕೆಂಪಿನ ಸುರಪಾನಿ ನಂದಿ ಶಿವದಾಳವು
ಮಲ್ಲಿಗೆ ಹಾರ ಅವರ ಕೊರಳೊಳಗೆ – ಬಸವಣ್ಣವನರು
ಶಿವದಂಡ ಕರಕೊಂಡು ಬರುತಾರೆ

ಗುರುಮಠವ ಬಿಟ್ಟು ಬಂದು ಬಸವಣ್ಣನವರು
ಅಂಗಡಿಯ ಬೀದಿಗಾಣೆ ಬರುತಾರೆ

ದಾಳಿಯ ಉಟ್ಟರೊ ಧೂಳ ಮುಸುಗಿಟ್ಟಾರೊ
ಈಚಲ ಮದ್ದಿನ ಇಳಲಿಕ್ಕಿ – ನಿಂದಕನ
ಅಂಗಡಿ ಬೀದಿಗಾಣೆ ಬರುತಾರೆ

ಸಂಜೆಯ ಉಟ್ಟರೊ ಇಂಜಾಮ ಮುಸುಗಿಟ್ಟರೊ
ಇಂದೇಳು ಮಧ್ಯಾಹ್ನ ಇಳಲಿಕ್ಕಿ – ನಿಂದಕನ
ಅಂಗಡಿ ಬೀದಿಗಾಣೆ ಬರುತಾರೆ

ಬಂದಂಥ ಬಸವಣ್ಣವರ ಕಂಡನು ಬಿಜ್ಜಳದೊರೆಯು
ಆ ನಿಂದಕ ತಾ ನೋಡಿ ಹೆದರಿದನು

ಸುವ್ವಿ ಹೇಳಮ್ಮ ದೇವರ ದೇವ ಸುವ್ವಿ
ಸುವ್ವ ಬಾ ಚನ್ನಬಸವಯ್ಯೊ ಸುವ್ವಿ

ಎಳ್ಳಟ್ಟು ಮಾತೇಳಿ ಬಸವಣ್ಣವರ ಮಠಕೆ ಕಳಿಸಿದೆ
ಆರಣ್ಯ ಬಂದು ಇಳುದದೆ – ಎನುತೇಳಿ
ಮಾರಾಜ ಗದ್ದುಗೆ ಬಿಟ್ಟು ಸರ್ರನೆದ್ದ – ಬಿಜ್ಜಳನು
ಗುಳುಗುಳನೆ ಓಡಿಬಂದು ಪಾದಕೆ ಶರಣೆಂದ

ಬಂದರಿಯ ಎನುತೇಳಿ ಸಡಗರದಿಂದ ನಸುನಗುತ
ಕರವೆತ್ತಿ ಕೈಯ ಮುಗಿದನು – ಬಿಜ್ಜಳರಾಜ
ಕರ್ತೃ ಬಸವಣ್ಣ ಏನ ನುಡಿದರೋ

ಅವರು ಮನದಲ್ಲಿ ಯೋಚನೆಯ ಪಡುತಾರೆ
ತಾನು ಕೈಮುಗುದರೆ ಅವನೀಗ ಬಿಜ್ಜಳನು
ಬೆಂದು ಹೋಗುವನು ಅನುತೇಳಿ

ಬಂದೊ ದೊರೆಯೆ ಎಂದು ನಮ್ಮ ನಂದಿ ಬಸವಣ್ಣನವರು
ನಂದಿ ಉಂಗುರದ ಐಮಕ್ಕೆ – ತಿರುಗಿಸಿಕೊಂಡು
ನಂದಿ ಉಂಗುರಕ್ಕೆ ನಮಿಸಿದರು
ನಂದಿ ಉಂಗುರಕೆ ನಮಿಸಿದರು ಬಸವಣ್ಣ
ಗದ್ದುಗೆಯ ಮ್ಯಾಲೆ ಹೋಗಿ ಕುಳಿತರು

ಬಸವಣ್ಣನವರ ಬಲಚಾರಿ ಚಿನ್ನದ ಗದ್ದುಗೆ ಮ್ಯಾಲೆ
ನಿಂದಕ ಬಿಜ್ಜಳನು ಕುಳಿತವನೆ

ಸತ್ಯ ಶರಣರು ಬಂದು ಬಹಳ ಹೊತ್ತಾಯಿತು
ಈ ಸುಳ್ಳು ಭಕ್ತರಿಗೆಲ್ಲ ನಿಜಗುರುವು – ಬಸವಣ್ಣನವರೆ
ನೀವು ಕಂಡ ಮಾತೇಳಿ ಬಸವಯ್ಯೋ

ಒಣ ಮರಕೆ ಶಾಪವ ಕೊಟ್ಟರೆ ಚಿಗುರುವುದು
ಹಸಿ ಮರಕೆ ಶಾಪವ ಕೊಟ್ಟರೆ – ಆಗಲೆ
ಅದು ಬೇಗ ಒಣಗಿಹೋಗುವುದು

ಅಂತ ಸತ್ಯದ ಗುರುವೆ ಲೋಕಕೆ ದೊಡ್ಡೋರೆ
ನೀವು ಕಂಡ ಮಾತೇಳಿ ಕರ್ತೃ ಬಸವಯ್ಯೋ

ಗಂಡನಿಲ್ಲದ ಬಾಲೆ ಬಸುರಾಗವಳೆ ಎನುತೇಳಿ
ನಿನ್ನ ಕಲ್ಯಾಣವೆಲ್ಲ ಹೊಸ ಸುದ್ದಿ – ಹುಟ್ಯದೆ
ಈಗ ಚಂದಾಯ್ತು ಬಸವಯ್ಯ ನಿನ್ನ ಹೊಸಭಕ್ತಿ

ಬಾಳ ಬಾಳ ಜಂಗಮರ ತಂದು ನೀವಾದರೆ
ಪಾಳು ತೊಟ್ಟಿಯಲಿ ಕೂಡಿಕೊಂಡು – ಬಸವಯ್ಯೋ

ಹಾಳಾಯ್ತು ನಿನ್ನ ಹೊಸಭಕ್ತಿ – ನಿನತಂಗೆ
ಬೋಳು ಜಂಗಮನಿಗೆ ಬಸುರಾದ

ಲಂಡ ಪುಂಡ ಜಂಗಮರ ತಂದು ಮಠವ ಸೇರಿಸಿಕೊಂಡೆ
ಚಂದಾಯ್ತು ಬಿಸವಯ್ಯ ಹೊಸಭಕ್ತಿ – ನಾಗಮ್ಮನವರು
ಲಂಡ ಪುಂಡ ಜಂಗಮರಿಗೆ ಬಸುರಾದ

ಗಂಡನಿಲ್ಲದ ಬಾಲೆ ಬಸುರಾಗವಳೆ ಎನುತೇಳಿ
ಈ ಸುತ್ತಾ ಕಲ್ಯಾಣವೆಲ್ಲ ಹೊಸಸುದ್ದಿ – ನಿನತಂಗೆ
ಬಿಮ್ಮನಸಿ ಆದ ಬಗೆ ಹೇಗೆ

ಚಿಕ್ಕ ಚಿಕ್ಕ ಜಂಗಮರಿಗೆ ನಾಗಮ್ಮ ಅಕ್ಕತಂಗಿ
ಕೆಟ್ಟ ನಿಂದಕವ ನುಡಿಬ್ಯಾಡ

ಬಾಳು ಬಾಳೊ ಜಂಗಮರಿಗೆ ನಾಗಮ್ಮ ತಾಯಿಕಾಣೊ
ಹಾಳು ನಿಂದಕವ ನುಡಿಬ್ಯಾಡ – ಬಿಜ್ಜಳನೆ
ನೀ ಹಾಳಾಗುವಂಥ ಫಲಬಂತು

ಯಾರೇನು ಮಾಡ್ಯಾರೊ ಶಿವನಿಟ್ಟ ಕುರುವಾಕ್ಕೆ
ಹರಳಯ್ಯನೆಂಬೊ ಶರಣರ ಮಠದ ಪರಸಾದಕ್ಕೆ
ನನ್ನ ತಂಗಿ ನಾಗಮ್ಮ ಬಸುರಾದ – ಎನುತೇಳೆ
ಸತ್ಯದ ನುಡಿಯ ಗುರುವು ನುಡಿದರು

ಕೇಳಿದರೇನಯ್ಯ ನಮ್ಮ ದೇವ ಸಭೆಯವರೆಲ್ಲ
ಬಸವಣ್ಣನವರಾಡಿದ ವಾಕ್ಯವ – ನೀವೀಗ
ಬಾನದ ಪ್ರಸಾದಕ್ಕೆ ಬಸುರಾಗೋದು – ನಿಜವೇನ್ರೊ
ಸಭೆಜನರೆ ನೀವು ತಿಳಿದ್ಹೇಳಿ

ಸತ್ಯವೆಂದೆ ಗುರುವೆ ನೀವು ಕರ್ತೃ ಬಸವಣ್ಣನವರೆ
ನಮ್ಮ ಏಳುನೂರು ಹೆಣ್ಣುಗಳು ಅರಮಲ್ಲಿ – ಇರುತಾರೆ
ಹರಳಯ್ಯನವರ ಮಠಕ್ಕೆ ಹೋಗಿರಯ್ಯ – ಬಸವಯ್ಯ
ಒಂದಿಡಿ ಪರಸಾದವ ನೀವು ತರಿಸರಯ್ಯ

ನಮ್ಮ ಏಳುನೂರು ಹೆಣ್ಣುಗಳ ಸಾಲಾಗಿ ನಿಲಿಸಯ್ಯ
ಅವರಿಗೆ ಪರಸಾದ ಕೊಡಿಸರಯ್ಯ

ಏಳುನೂರು ಹೆಣ್ಣುಗಳು ಬಿಮ್ಮನಸೆರಾದರೆ
ಸತ್ಯವಂತ ಹೌದು ಬಸವಯ್ಯ

ನಿಂದಕ ಬಿಜ್ಜಳನ ಮಾತ ಕೇಳಿದರು ಬಸವಣ್ಣ
ಚಿಂತೆಪಟ್ಟರು ತಮ್ಮ ಮನದಲ್ಲಿ

ಚಿಂತೆ ಪಡುತಾರೆ ಮನದಲ್ಲಿ ಬಸವಣ್ಣನವರು
ಕಿಡಿಗಣ್ಣಲ್ಲಿ ಅಗ್ಗಣಿಯ ಕೆಡವಿದರು

ಬಸವಣ್ಣನವರ ಕಣ್ಣಲ್ಲಿ ಅಗ್ಗಣಿ ತುಂಬುವುದನು
ಈ ಕೊಂಡಕಾರ ಮಂಚಣ್ಣ ಕಂಡುಕಂಡು

ದೊರೆಯೆ ಬಸವಣ್ಣನವರಂದರೆ ಎಳ್ಳಟ್ಟು ತಪ್ಪಿಲ್ಲ
ಅವರ ತಂಗಿಯ ನಾಗಮ್ಮನವರ ಬರಮಾಡಿ

ನ್ಯಾಯದ ಪತಿಗೆ ಸಭೆ ಮರೆಮಾಡಯ್ಯ
ಏಳು ಜೊತೆ ಚಬ್ಬೆಕೊಂಡ ತರಿಸಯ್ಯ – ನೀನೀಗ
ಅವಳ ಹೆಜ್ಜೇಲಿ ರಕ್ತ ಇಳಿಸಯ್ಯ

ಅವಳ ಹೆಜ್ಜೇಲಿ ರಕ್ತ ಇಳಿಸಿದರೆ ಬಿಜ್ಜಳನೆ
ಅವಳು ಬಸರಾದ ತರನ ಉಸುರುವಳು

ಕೊಲ್ಲು ಕೊಲ್ಲು ಅಂದರೆ ಹ್ಯಾಗಯ್ಯ ಕೊಲ್ಲುವುದು
ಏಳು ವರ್ಷದ ಹಸುಳೆಯ ನಾಗಮ್ಮನ – ಅವಳ
ಸತ್ವವ ನಾವು ಕೇಳಬೇಕು

ಏನಯ್ಯ ಬಸವಯ್ಯ ಸೀಮೆಗೆ ದೊಡ್ಡವರೆ
ಈ ಸುಳ್ಳು ಭಕ್ತರಿಗೆಲ್ಲ ನಿಜಗುರುವೆ – ಬಸವಣ್ಣನವರೆ
ನಿನ್ನ ಶಿಶುವ ಮೂದಲಿಸಿ ಕರೆದೀಯ

ಹೊಟ್ಟೇಲಿ ಇರುವ ಮಗುವ ಎತ್ತಿಮಾತಾಡಿಸಿದರೆ
ನೀ ಸತ್ಯವಂತ ಅಹುದು ಬಸವಯ್ಯೋ

ಹೊಟ್ಟೆಯ ಒಳಗಲ ಮಗುವ ಎತ್ತಿ ಮಾತಾಡಿಸುವ
ನಮ್ಮಕ್ಕ ನಾಗಮ್ಮನ ಬರಮಾಡಿ

ನಮ್ಮ ಗೊಲ್ಲರು ಹೋದ್ರೆ ಬರುವುದಿಲ್ಲ ನಾಗಮ್ಮ
ನಿಮ್ಮ ಶರಣರು ಕಳುಪಿ ಬರಮಾಡಿ

ಬಸವಣ್ಣನವರು ತಮ್ಮ ಶರಣರ ಕರೆದವರೆ
ಒಕ್ಕಲಿಗರ ಮುದ್ದಯ್ಯ ನೀವು ಬನ್ನಿ – ಜೊತೆಯಲ್ಲಿ
ಕುರಬರ ಬೀರಯ್ಯ ನೀವು ಬನ್ನಿ – ಈಗೋಗಿ
ಅಕ್ಕನಾಗಮ್ಮನವರ ಕರೆತನ್ನಿ

ಹೊಲೆಯರ ಹೊನ್ನಯ್ಯ ಬನ್ನಿ ಮಾದರ ಚನ್ನಯ್ಯ ಬನ್ನಿ
ಮಡಿವಾಳ ಮಾಚಯ್ಯ ನೀವು ಬನ್ನಿ – ಈಗೋಗಿ
ನಮ್ಮಕ್ಕ ನಾಗಮ್ಮನ ಕರೆತನ್ನಿ

ಬೇಡರ ಕಣ್ಣಯ್ಯ ಬನ್ನಿ ಕುಂಬಾರ ಗುಂಡಯ್ಯ ಬನ್ನಿ
ತುರುಕರ ಪೀರಯ್ಯ ನೀವು ಬನ್ನಿ – ಬೇಗೋಗಿ
ನಮ್ಮಕ್ಕ ನಾಗಮ್ಮನವರ ಕರೆತನ್ನಿ

ಕುಲಕೊಬ್ಬ ಭಕ್ತರಿಗೆ ಬರೆದು ವಾಲೆಯಕೊಟ್ಟು
ಬಸವಣ್ಣ ಅಪ್ಪಣೆಯ ಇಟ್ಟಾರು

ಈ ಭೂಮಿಗೆ ಹಿರಿಯವರು ಕರೆದರೆ ಬಸವಣ್ಣನವರು
ಈ ಚನ್ನ ಜಾಂಬುವರು ಎದ್ದು ಬರುತಾರೆ

ಕೆರೆಯ ಏರಿಯಮೇಲೆ ಇರುವೆ ಸಾಲಿಟ್ಟಂಗೆ
ಬರುತಾರೆ ಬಸವಣ್ಣನವರ ಗುರುಮಠಕೆ

ನಂದಿಯ ಕಳಸವು ನಂದಿಯ ಆಭರಣ
ನಂದಿಯ ಮುತ್ತು ಹೂಡ್ಯವೆ – ಮಠದಲ್ಲಿ
ಬಾಗು ಬಾಗುಲ ಒಳಗೆ ಶಿವನಾದ – ಶಿವಯೋಗ
ದೇವರು ಬಸವಣ್ಣನವರ ಮಠದಲ್ಲಿ

ನಲವತ್ತೆಂಟು ಬಾಗಿಲು ಈಚೆಗೆ ನಿಂತರು
ಶರಣ ಮಾತ್ಮರು ಕರೆದರು – ನಾಗಮ್ಮನವರಿಗೆ
ಕರವೆತ್ತಿ ಕೈಯ ಮುಗಿದರು

ದೇವರೆ ಬಿಜಮಾಡಿ ದೇವಬಾಲ ಬಿಜಮಾಡಿ
ಪಾವನ್ನ ಮೂರ್ತಿ ನಾಗಮ್ಮ

ಪಾವನ್ನ ಮೂರ್ತಿ ಗುರುಮೂರ್ತಿ ನಾಗಮ್ಮ
ಕರ್ತೃ ಬಸವಣ್ಣನವರ ಬರಹೇಳಿ

ಕರ್ತೃ ಬಸವಣ್ಣನವರಿಂದ ಅಪ್ಪಣೆ ಆಗ್ಯದೆ
ನೀವು ದೇವರೆ ಮುಂದಕೆ ದಯಮಾಡಿ

ಶರಣನಾಡಿದ ಮಾತ ಕೇಳಿದರು ನೀಲಮ್ಮನವರು
ನಾದಿನಿಗೆ ಸುಂಗಾರ ಮಾಡುತಾರೆ

ಕೆಂಡಸಂಪಿಗೆ ಎಣ್ಣಿ ಮಂಡಿಗೆ ಬೆವರುಮಾಡಿ
ಸಿಂಗರದ ಬಾಚಣಿಗೇಲಿ ತಲೆಬಾಚಿ – ನಾದಿನಿಗೆ
ಸಣ್ಣಗೆ ಜಡೆಯ ಹೆಣೆದರು

ಶುಕ್ರನ ಪ್ರಮೆಯಂದದಲಿ ಇಟ್ಟರೆ ಮೂಗುತಿಯ
ಬಟ್ಟಿಟ್ಟರು ಕಾಮ ಕಸ್ತೂರಿ ತಿಲಕವ – ನಾಗಮ್ಮ
ಸೂರ್ಯದೇವರು ಉರಿದಾಗೆ

ಕೈಲಾಸದೊಡವೆಯ ತಂದರು ನೀಲಮ್ಮ
ಅವರು ನಾಗಮ್ಮನಿಗೆ ಧರಿಸಿದರು

ಅಟ್ಟು ಆಭರಣದ ಒಡವೆಯ ಧರಿಸಿದರು
ನಾಗಮ್ಮನಿಗೆ ಸಾಂಬ್ರಾಣಿ ಬೆಳಗಿದರು

ಯಾವ ಭವಬಂಧನ ಬಂದ ಕಾಲಕ್ಕೆ
ನಿಮ್ಮಣ್ಣಯ್ಯನವರ ಪಾದಕ್ಕಲ್ಲದೆ – ನಾಗಮ್ಮ
ನಿನಗಲ್ಲ ತಾಯಿ ಎಂದರಾಗ

ನಾದಿನಿ ನಾಗಮ್ಮನಿಗೆ ಧೀರ್‍ಯವ ಕೊಟ್ಟ ನೀಲಮ್ಮನವರು
ಕೈಲಾಸಕೆ ಓಲೆ ಬರೆದರು
ಕೈಲಾಸದಿಂದಲಿ ಪರಶಿವ ಬರಲಿ ಎಂದು
ನೀಲಮ್ಮ ವಾಲೆ ಬರೆದರು

ಬಂದಂಥ ವಾಲೆಯನೆ ನೋಡಿದ ಪರಶಿವನು
ನಿಲ್ಲದೆ ದುಃಖ ಪಡುತಾರೆ

ಅರಸ ಬಿಜ್ಜಳನಿಗು ಪರಧಾನಿ ಮಂಚಣ್ಣನಿಗು
ದೊರೆತನ ಕೆಡುವ ದಿನವಾಯ್ತು – ಎನುತೇಳಿ
ಅವರು ನಂದಿ ಸುಂಗರಿಸಿ ಕಳುವ್ಯಾರು

ಇಂದು ನಾಗಮ್ಮನವರು ಮುಂದಕ್ಕೋಯ್ತರೆ ಅಂತ
ನಂದಗೋಕುಲಕ್ವಾಲೆ ಬರೆದರು

ನಂದಗೋಕುಲದಿಂದ ಕೃಷ್ಣದೇವರು ಬರಲಂತ
ನೀಲಮ್ಮ ವಾಲೆ ಬರೆದರು

ಬಂದಂಥ ವಾಲೆಯ ನೋಡಿದರು ಶ್ರೀ ಕೃಷ್ಣ
ನಿಲ್ಲದೆ ದುಃಖ ಪಡುತಾರೆ

ಅರಸ ಬಿಜ್ಜಳನಿಗು ಕೊಂಡಕಾರ ಮಂಜಣ್ಣನಿಗು
ದೊರೆತನ ಕೆಡುವ ದಿನವಾಯ್ತು – ಎನುತೇಳಿ
ಅವರು ಗರುಡನ ಸುಂಗರಿಸಿ ಕಳುವಿದರು

ಇಂದು ನಾಗಮ್ಮನವರು ಮುಂದಕ್ಕೋಯ್ತರೆ ಅಂತ
ದೇವಲೋಕದಿಂದ ದೇವೀಂದ್ರ – ಬರಲಂತ
ನೀಲಮ್ಮ ವಾಲೆ ಬರೆದರು

ಬಂದಂಥ ವಾಲೆಯ ನಿಂದು ನೋಡಿ ದೇವೀಂದ್ರ
ನಿಲ್ಲದೆ ದುಃಖ ಪಡುತಾನೆ

ಅರಸ ಬಿಜ್ಜಳನಿಗು ಕೊಂಡಕಾರ ಮಂಚಣ್ಣನಿಗು
ದೊರೆತನ ಕೆಡುವ ದಿನವಾಯ್ತು – ಎನುತೇಳಿ
ಬಿಳಿಯಾನೆ ಸಿಂಗರಿಸಿ ಕಳುವಿದರು

ಇಂದು ನಾಗಮ್ಮನವರು ಮುಂದಕೋಯ್ತರೆ ಅಂತ
ವೃಂದಾವನವೆಲ್ಲ ಕೆರಳಿದವು
ಕಣಿಗಲೆ ವನಗಳಿರೆ ಕಣಿಗಲೆ ಮೊಗ್ಗುಗಳಿರೆ
ಗಣಗಣನೆ ಓದೊ ಗಿಣಿಗಳಿರೆ – ಹೋಗುವ ಬನ್ನಿ
ಹರದಿ ನಾಗಮ್ಮನ ಹೊನಗೂಡಿ

ಸಂಪಿಗೆ ವನಗಳಿರೆ ಸಂಪಿಗೆ ಮೊಗ್ಗುಗಳಿರೆ
ತಂಪತ್ತಲ್ಲೋದೊ ಗಿಣಿಗಳಿರೆ – ಹೋಗುಂಬನ್ನಿ
ಸಂಪನ್ನೆ ನಾಗಮ್ಮ ಹೊನ್ನಗೂಡಿ

ಜಾಜಿಯ ವನಗಳಿರೆ ಜಾಜಿಯ ಮೊಗ್ಗುಗಳಿರೆ
ಜಾಮದಲ್ಲೋದೊ ಗಿಣಿಗಳಿರೆ – ಹೋಗುಂಬನ್ನಿ
ಜಾಣೆ ನಾಗಮ್ಮ ಹೊನುಗೂಡಿ

ಇಂಬಿಯ ವನಗಳಿರೆ ಇಂಜಿಯ ಮೊಗ್ಗುಗಳಿರೆ
ಇಂಬತ್ತಿಲೋದೊ ಗಿಣಿಗಳಿರೆ – ಹೋಗುಂಬನ್ನಿ
ರಂಬೆ ನಾಗಮ್ಮನ ಹೊನುಗೂಡಿ

ಕಿತ್ತಲಿಯ ವನಗಳಿರೆ ಕಿತ್ತಲಿಯ ಮೊಗ್ಗುಗಳಿರೆ
ಚಿತ್ರದಿಂದೋದೊ ಗಿಣಿಗಳಿರೆ – ಹೋಗುಂಬನ್ನಿ
ನಿಸ್ತ್ರನಾಗಮ್ಮನ ಹೊನುಗೂಡಿ

ದಾಳಿಂಬೆ ವನಗಳೆ ದಾಳಿಂಬೆ ಮೊಗ್ಗುಗಳೆ
ಜಾವದಲ್ಲೋದೊ ಗಿಣಿಗಳಿರೆ – ಹೋಗುಂಬನ್ನಿ
ಜಾಣೆ ನಾಗಮ್ಮನ ಹೊನುಗೂಡಿ

ತೆಂಗಿನ ವನಗಳಿರೆ ತೆಂಗಿನ ಮೊಗ್ಗುಗಳಿರೆ
ತೆಂಗೊತ್ತಲೋದೊ ಗಿಣಿಗಳಿರೆ – ಹೋಗುಂಬನ್ನಿ
ತಂಗೆ ನಾಗಮ್ನ ಹೊನುಗೂಡಿ

ಇಂದು ನಾಗಮ್ಮನವರು ಮುಂದಕ್ಕೋಯ್ತರೆ ಅಂತ
ವೃಂದಾವನವೆಲ್ಲ ತೆರಳಿದವು – ಆಕ್ಷಣದ ಒಳಗೆ
ಸತ್ಯ ಶರಣರು ಬರುತಾರೆ

ಕಾವಿಯವರು ಕಂತೆಯವರು ನಲವತ್ತು ಸಾವಿರ
ಜೋಡಿ ಜೋಡಿ ರುದ್ರಾಕ್ಷಿ ಸರದವರು – ಗಣಂಗಳು
ಅದು ಒಂದು ಕೋಡಿ ನವಕೋಟಿ

ಕಂಬಳಿಯವರು ಕಂತೆಯವರು ಎಂಭತ್ತು ಸಾವಿರ
ಕತ್ತು ತುಂಬ ರುದ್ರಾಕ್ಷಿ ಸರದವರು – ಗಣಂಗಳು
ಅದು ಒಂದು ಕೋಟಿ ನವಕೋಟಿ

ಅವರು ಲಕ್ಷದಮೇಲ ತೊಂಬತ್ತಾರು ಸಾವಿರ ಶರಣರು
ಅರವತ್ತಾರು ಮಂದಿ ಪುರಾತನರು

ಮೂಗಿನಲ್ಲಿ ಜೇನಿಕ್ಕಿದ ಮುನಿಗಳು ಪಾಶುಪತಗಳು
ಅದು ಒಂದು ಕೋಟಿ ನವಕೋಟಿ – ಸಯಿವಾಗಿ
ಬೋರುಗುಟ್ಟದೆ ಕಲ್ಯಾಣವೆಲ್ಲ

ಇಂದು ನಾಗಮ್ಮನವರು ಮುಂದಕ್ಕೋಯ್ತಾರೆ ಎಂದು
ವಾಸುದೇವರು ರಜವ ಬೆಳಗ್ಯವರೆ – ಆಗಲೆ
ಕ್ಯಾಣ ಸುದ್ದಿಯ ಮಾಡುತವನೆ

ಸಾಲಿಗೆ ಸತ್ತಿಗೆ ನಿಂದೊ ಮೇಲಾದ ಚಾಮರನಿಂದೊ
ಬಾಲಗರ್ಭಿಣಿಯು ನಾಗಮ್ಮ – ಸಯಿವಾಗಿ
ಬೋರಂದು ಗುರುಮಠ ಬಿಟ್ಟು ಕಡೆದವರೆ

ಸಂದ ಸತ್ತಿಗೆ ನಿಂದೊ ನಂದಿ ಕಂಬೆತ್ತಿಮೆರೆದೊ
ದಂಡೆಗೊಪ್ಪುವ ನುಡಿಜಂಗು – ಕೊಂಡಾಡುತ್ತ
ದಂಡಿಟ್ಟು ಗುರುಮಠ ಬಿಟ್ಟು ಬರುತಾರೆ

ಸಾಲು ಸತ್ತಿಗೆ ನಿಂದೊ ಮೇಲಾದ ಚಾಮರನಿಂದೊ
ಬಾಲ ಗರ್ಭಿಣಿಯು ನಾಗಮ್ಮ – ಸಯಿವಾಗಿ
ಹಸಿರು ಸತ್ತಿಗೆ ಒಳಗೆ ನಿಲುತಾರೆ

ಹಸಿರು ಸತ್ತಿಗೆ ನೆರಳಲ್ಲಿ ನಾಗಮ್ಮ ನಿಂತಾರೆ
ತಾಮ್ರದ ಪಂಜರದಲ್ಲಿ ಗಿಣಿರಾಮ
ತಾಮ್ರದ ಪಂಜರದಲ್ಲಿ ಮಾತಾಡೊ ಗಿಣಿರಾಮ
ಬೋರಂದು ಗುರುಮಠ ಬಿಟ್ಟು ಬರುತಾರೆ

ಹೊಡೆವ ನಗಾರಿಯು ಹಿಡಿವ ಕೊಂಬಿನ ಕಾಳೆ
ಭೋರುಗುಟ್ಟದೆ ಕಲ್ಯಾಣವೆಲ್ಲ

ಅವರು ಕನಕದಮ್ಮಟೆ ಕೈತಾಳೆ ಮ್ಯಾಗೆ
ಸೂಳೇರ ಮ್ಯಾಳ ಮುಂದೆ ಮುಂದೆ – ನಾಗಮ್ಮನವರ
ಬಟ್ಟರು ಹೊಗಳುತ ಆಗಲೆ ಅವರಾದ್ರೆ
ಗುರುಮಠವ ಬಿಟ್ಟು ಕಡೆದವರೆ

ತಾನ ತಾನಕೆ ಬಚಿತ ತೋಳಲ್ಲಿ ರುದ್ರಾಕ್ಷಿ
ನೋಡಿದವರಿಗೆ ಪಾಪ ಪರಿಹಾರ – ರುದ್ರಾಕ್ಷಿಯ
ಭೂಷಣದೊಳಗೆ ಧರಿಸ್ಯವರೆ – ನಾಗಮ್ಮನವರು
ನಿಂದಕನ ಅರಮನೆಗೆ ಪಯಣಾದ್ರು

೭

ಬುಗು ಬೋರು ಅನ್ನೂತ ಮೆರವಣಿಗೆ ಆಗುತ
ಕಲ್ಯಾಣ ಪಟ್ಟಣದ ರಾಜ ಬೀದಿಯಲ್ಲಿ – ಆವಾಗ
ತಾಯಿ ನಾಗಮ್ಮ ಸಾಗಿಬರುತಾಳೆ

ಸತ್ಯವಂತ ನಾಗಮ್ಮ ಬರುವ ಮಾರ್ಗದಲಿ
ಒಂದು ಎರವು ಸತ್ತೋಗಿ ಮನಗ್ಯದೆ

ಮುತ್ತಿನ ಪಲ್ಲಕ್ಕಿ ಇಳಿಸಿದರು ನಾಗಮ್ಮನವರು
ಅವರ ಪಾದದ ಬಚಿತವ ಧರಿಸಿದರು

ಭಸಿತವ ಧರಿಸಿ ಇರುವಿನ ಪ್ರಾಣವ ಪಡೆದು
ನಿನ್ನ ಗೂಡಿಗೋಗೆಂದು ಕಳುವಿದರು

ಸತ್ಯವಂತೆ ನಾಗಮ್ಮ ಬರುವ ಮಾರ್ಗದ ಒಳಗೆ
ಒಂದು ಸರ್ಪ ಸತ್ತೋಗಿ ಮನಗ್ಯದೆ

ಒಂದು ಸರ್ಪ ಸತ್ತೋಗಿ ಮನಗಿರುವುದ ಕಂಡರು
ನಾಗ ಬೆತ್ತದ ಒಳಗೆ ಮಂತ್ರಿಸಿದರು

ನಾಗ ಬೆತ್ತದ ಒಳಗೆ ಮಂತ್ರಿಸಿ ಸರ್ಪನ ಪಡೆದು
ನಿನ್ನ ಹುತ್ತಕೋಗಂತ ಕಳುವಿದರು

ಕಟ್ಟಾಣಿ ನಾಗಮ್ಮ ಬರುವ ಮಾರ್ಗದ ಒಳಗೆ
ಒಬ್ಬ ನರಮನುಷ ಸತ್ತು ಇರುತಾನೆ

ಒಬ್ಬ ನರಮನುಷ ಸತ್ತು ಇರುವುದ ಆಗ ಕಂಡು
ನಾಗ ಬೆತ್ತದ ಒಳಗೆ ಮಂತ್ರಿಸಿದರು

ನಾಗ ಬೆತ್ತದ ಒಳಗೆ ಮಂತ್ರಿಸಿ ಮನುಷನ ಪಡೆದು
ನಿನ್ನ ಊರಿಗೋಗಂದು ಕಳುವಿದರು

ಇಂತಿಂತ ಪಾವಡ ನಾಗಮ್ಮನಿಗೆ ಒಂದೊಂದು ಜಿನಕೆ
ಮುನ್ನೂರರವತ್ತು ಪವಾಡವಂತೆ

ಆ ವೊತ್ತು ಬಿಜ್ಜಳನ ಅರಮನೆಗೆ ಬರುವುದಕೆ ಸಲುವಾಗಿ
ಮೂರೆ ಪಾವಾಡಕೆ ಮುದ್ರೆಯಂತೆ

ಮೂರೆ ಪವಾಡಕ್ಕೆ ಮುದ್ರೆಮಾಡುತ ನಾಗಮ್ಮ
ಬಿಜ್ಜಳನ ಅರಮನೆಗೆ ಸಾಗಿ ಬರುತಾರೆ

ಗಾಳಿಯ ಉಟ್ಟರು ಧೂಳ ಮುಸುಗಿಟ್ಟರು
ಈಚಳು ಮದ್ದಿನ ಇಳುಲಿಕ್ಕಿ – ನಿಂದಕನ
ಅಂಗಡಿ ಬೀದಿಗಣಿ ತೆರಳಿದರು

ಸಂದೆಯ ಉಟ್ಟರು ಇಂಜಾವದ ಮುಸುಗಿಟ್ಟರು
ಇಂದೇಳು ಮದ್ದಿನ ಇಳಲಿಕ್ಕಿ – ನಿಂದಕನ
ನಂದಿ ಹಜಾರದ ಕಡೆ ತೆರಳಿದರು

ಬಂದಂಥ ನಾಗಮ್ಮನ ಕಂಡನು ಬಿಜ್ಜಳನು
ಆ ನಿಂದಕ ತಾ ನೋಡಿ ಹೆದರಿದನು

ಎಳ್ಳಷ್ಟು ಮಾತೇಳಿ ಗುರುಮತಕೆ ಕಳುಹಿದರೆ
ಈ ಅರಣ್ಯ ಎದ್ದು ಬರುತದೆ – ಎನುತೇಳಿ
ಅವನು ಚಿನ್ನದ ಗದ್ದುಗೆಯ ಬಿಟ್ಟು ಸರನೆದ್ದ

ಗುಡುಗುಡನೆ ಓಡೋಗಿ ಗಾಜಿನ ಕಂಬಕೆ ಮರೆಯಾಗಿ
ಬಿಜ್ಜಳ ಆಗ ನಿಂತುಗಂಡ

ನಮ್ಮ ಕರ್ತೃ ಬಸವಣ್ಣನವರು ಮಂಚವ ಮಡಗಿಸಿದರು
ಮಂಡೆಗೆ ಮುಡಿವಳದ ತಲೆದಿಂಬು

ಹಾಸಿಗೆ ಸುಪ್ಪತ್ತಿಗೆ ತಯಾರು ಮಾಡಿದರು
ತಾವು ಬಂದು ಪಲ್ಲಕ್ಕಿ ಇಳಿಸಿದರು

ಅಂದಲ ಅಳುಕುತ ಭೂಮಂಡಲ ತುಳುಕುತ
ಬಂದು ಮಂಚದ ಮೇಲೆ ಕುಳಿತಳು

ಈ ಹುಟ್ಟು ನಿಂದಕರು ನಮ್ಮಕ್ಕನ ಕಂಡಾರು ಎನುತೇಳಿ
ಉರುಗನ ಸೆಡೆಯ ಮರೆಮಾಡಿ

ಕೂಳ ನಿಂದಕರು ನಮ್ಮಕ್ಕನ ಕಂಡಾರು ಎನುತೇಳಿ
ಕಾಳಿಂಗನ ಸೆಡೆಯ ತಂದು ಮರೆಮಾಡಿ – ಬಸವಣ್ಣನವರು
ತಾವು ಒಂದು ಗದ್ದುಗೆ ಮೇಲೆ ಕುಳಿತರು

ಒಂದು ಗದ್ದುಗೆ ಮ್ಯಾಲೆ ಕುಳಿತ ಯಾಳ್ಯದ ಮೇಲೆ
ಆ ನಿಂದಕ ಏನಂದು ನುಡಿದನು

ಸತ್ಯ ಶರಣರು ಬಂದು ಬಹಳ ಹೊತ್ತಾಯಿತು
ಶಿಶುವ ಮೂದಲಿಸಿ ನೀನೀಗ–ಬಸವಯ್ಯೋ
ಕಂಡಮಾತ ಕೇಳೊ ಘನಶರಣ

ಕಂಡಮಾತ ಕೇಳೊ ಘನಶರಣ ನಿನ ತಂಗೆ
ಬಾಳಿಲ್ದೆ ಬಸುರಾಗೊ ತೆರನ್ಯಾಗೆ

ಭೂಮಿ ಇಲ್ಲದೆ ಬೆಳೆ ಹೆಂಗೆ ಬೆಳೆಯುವುದು
ಮೇಘವಿಲ್ಲದೆ ಮಳೆಯು ಉಯ್ಯುವುದೆ

ಭೂಮುಂಟು ಬೆಳೆಯಾಗುವುದು ಬಸವಯ್ಯ
ಬಾಳುಂಟು ಬಸುರುಂಟು ಧರೆಯಲ್ಲಿ – ನಿನ ತಂಗೆ
ಬಾಳಿಲ್ದೆ ಬಸುರಾಗಿರುವ ತೆರನೆಂಗೆ

ಚಾಡಿಯ ಮಾತ ಕೇಳಬೇಡ ಬಿಜ್ಜಳನೆ
ಕೋಳಿ ಕೂಗಿದರೆ ರವರತ್ನ – ಸುರಿದೀತೆ
ಕೇಳುವರಿಗೆ ಇದರಿಂದ ಕೇಡುಂಟು – ಬಿಜ್ಜಳನೆ
ನೀ ಆಳಾಗುವಂಥ ಫಲಬಂತು

ಬಸವಣ್ಣನವರ ಮಾತ ಕೇಳಿದನು ಮಂಚಣ್ಣ
ಆ ನಿಂದಕ ಏನಂತ ನುಡಿದನು

ಬಸವಣ್ಣನವರು ಅಂದರೆ ಏಳ್ಕೋಟು ತಪ್ಪಿಲ್ಲ
ನಾಗಮ್ಮನವರ ಕರೆತನ್ನಿ ಈಗಲೆ – ಅವರನ್ನೆ
ಬನ್ನಿ ಹಜಾರದ ಎದುರಿಗೆ

ಏಳು ಚಜ್ಜೆ ಕೊರಡ ತರಿರಯ್ಯ ನಾಗಮ್ಮನಿಗೆ
ಹೆಜ್ಜೇಲಿ ರಕ್ತ ಇಳಸಯ್ಯ – ಬಿಜ್ಜಳನೆ
ಬಸುರಾದ ತೆರವ ಉಸುರುವಳು – ಎನುತೇಳಿ
ಕೊಂಡಕಾರ ಮಂಚಣ್ಣ ನುಡಿದನು

ಕೊಂಡಕಾರ ಮಂಚಣ್ಣನ ಮಾತ ಕೇಳಿದರು ನಾಗಮ್ಮ
ಸತ್ಯದ ನುಡಿಯ ನುಡಿದರು

ಕೇಳಯ್ಯ ಬಿಜ್ಜಳನೆ ಕೇಳಯ್ಯ ದೊರೆರಾಯ
ಸತ್ಯವಾಕ್ಯಕೆ ತಪ್ಪಿ ನಡೆದರೆ – ಬಿಜ್ಜಳನೆ
ಕೆತ್ತಿರೋ ಶೂಲ ನನಗಯ್ಯ

ಹತ್ತು ಕೊಪ್ಪರಿಕೆ ಒಳಗೆ ಎತ್ತಿಕಾಯಿಸೋ ಎಣ್ಣೆಯ
ಈಜಾಡುವೆ ನನ್ನ ನಿಜದಿಂದ

ಆರು ಕೊಪ್ಪರಿಕೆ ಒಳಗೆ ಸೇರಿ ಕಾಯಸೋ ಸುಣ್ಣವ
ಪೊಕ್ಕಾಡುವೆ ನನ್ನ ನಿಜದಿಂದೆ – ದೊರೆರಾಯ
ಈ ಮಾಯದ ಸಾದ್ರೂಟ ಕಂಡವಳಲ್ಲ

ಶರಣರ ಮನೆಯ ಪರಸಾದಕಾದರೆ
ನನ್ನ ಗರ್ಭವು ತುಂಬಿದೆ – ಬಿಜ್ಜಳನೆ
ಮತ್ತೊಂದು ಮಾಯವ ನಾ ಅರಿಯೇನು – ಎನುತೇಳಿ
ಸತ್ಯವಂತೆ ನಾಗಮ್ಮ ನುಡಿದರು

ನಾಗಮ್ಮನವರ ಮಾತ ಕೇಳಿದನು ಮಂಚಣ್ಣ
ಉಕ್ಕಳಿಸಿ ಕ್ವಾಪ ಉದುರೂತ

ಕದ್ದಂತ ಕಳ್ಳೀಗೆ ತೆರೆಮರೆಯ ಮುಸುಗ್ಯಾಕೆ
ಕರೆತನ್ನಿ ಹಜಾರದ ಎದುರಿಗೆ – ಎನುತೇಳಿ
ಕಾಳಿಂಗ್ನ ಹೆಡೆ ತೆಗೆದು ಈಡಾಡಿದರು

ಕಾಳಿಂಗ್ನ ಹೆಡೆ ತೆಗೆದು ಎಳೆತಂದರು ಹಜಾರದೆದುರಿಗೆ
ಏಳು ಜೊತೆ ಚಬ್ಬೆ ಕೊರಡ ತರಿಸಿದನು - ಬಿಜ್ಜಳನು
ಚಬ್ಬೆ ಕೊರಡಲ್ಲಿ ಹೊಡೆಸಿದನು

ಚಬ್ಬೆ ಕೊರಡಲ್ಲಿ ಹೊಡೆಸಿದರೆ ನಾಗಮ್ಮನವರು
ಮತ್ತೇನು ಮಾಯನ ಅರಿಯೆನಯ್ಯೋ

ಹತ್ತು ಕೊಪ್ಪರಿಕೆ ಎಣ್ಣೆ ಎತ್ತಿ ಕಾದಿರುವಾಗ
ಅವರು ಈಜಾಡಿದರು ತಮ್ಮ ನಿಜದಿಂದ

ಆರು ಕೊಪ್ಪರಿಗೆ ಒಳಗೆ ಸೇರಿ ಕಾದಿದೆ ತುಪ್ಪವು
ಈಜಾಡಿದರು ತಮ್ಮ ನಿಜದಿಂದ

ಕಾದಾರೆ ತಂದು ಎದುರಿಗೆ ನಿಂತವು
ತಬ್ಬಿದರು ತಮ್ಮ ನಿಜದಿಂದ

ಕೆತ್ತೊರೋ ಶೂಲಕೆ ಹಾಕಿದರು ನಾಗಮ್ಮನವರ
ಶೂಲದ ಮಣೆಮ್ಯಾಲೆ ಹೋಗಿ ನಿಲುತಾರೆ - ನಾಗಮ್ಮನವರು
ತಂದೆ ಬಸವಣ್ಣ ನೀನೆ ಗತಿ ಎಂದು

ಶೂಲಕ್ಕೆ ತಾಯಿ ತಗಲೊ ಕಾಲದ ಒಳಗೆ
ಶೂಲ ಮೂರು ತುಂಡಿಗೆ ಮಾರಿದೀತು

ಎಲ್ಲಾ ಸತ್ಯನು ನಾವು ಮಾಡಿದೊ ಕಾಣಯ್ಯ
ಒಂದು ಸತ್ಯದೊಳಗೆ ಹುಸಿಯಿಲ್ಲ - ನಾಗಮ್ಮನವರ
ಹೊಟ್ಟೆಯ ಮಗುವೆ ಮಾತಾಡಲಿ

ಮದ್ದು ಮಾಯಿಕಾರ ಬಸವಣ್ಣ ನೀ ಕೇಳೋ
ಸಿದ್ದು ವಿದ್ಯಕಾರ ನೀನಾದ್ರೆ - ನಿನ ತಂಗಿಯ
ದಂಡೀಲಿ ನೀನು ನಿಲಬೇಡ

ಮೂರು ಹರದಾರಿಯ ಹೋಗಿನಿಂತುಕೊ ಅಯ್ಯ
ಶಿಶುವ ಮೂದಲಿಸಿ ಕರೆಯಯ್ಯ

ಮೂರು ಹರದಾರಿ ಒಳಗೆ ನಿಂತರು ಬಸವಣ್ಣನವರು
ಅವರ ಅಳಿಯನ ಮೂದಲಿಸಿ ಕರೆದರು

ಪಾದ ಪರುಷವೆ ಬನ್ನಿ ಪುರುಷನಿಧಿಯೆ ಬನ್ನಿ
ದಿನಾಲ್ಕು ಲೋಕವ ಸಲುವವನೆ – ಚನ್ನಣ್ಣ
ನೀನಾದರೀಗ ದನಿದೋರೋ

ಅವರಿಗೆ ಕೊರಳಲ್ಲಿ ತೀರ್ಥವು ಕೊರಳಲ್ಲಿ ಶಿವಗಂಟೆ
ಹೊಳೆವ ದಿಮ್ಮಿಯ ಒಳಗೆ ಜಪಸರ

ಹತ್ತು ಬೆರಳ ಒಳಗೆ ಜಪವನ್ನೆ ಜಪಿಸುತ್ತ
ತಾಯಿ ಹೊಟ್ಟೆಯ ಒಳಗೆ ಕೂತವನೆ

ಆ ಕೈಲಿ ವಾಲೆಯು ಈ ಕೈಲಿ ಜಪಸರ
ಹೊಳೆವ ದಿಮ್ಮಿಯ ಓಳಗೆ ಜಪಮಂತ್ರ – ಮಂತ್ರಿಸಿದರೆ
ಈತ ಕರದ ಮಾತು ಅರಿವಿಲ್ಲ

ಮಾಮಯ್ಯ ಕರೆದ ಮಾತಿಗೆ ಓ ಎನ್ನದೆ ಹೋದಿರಲ್ಲೊ
ಅವರ ತಾಯಮ್ಮ ಬುದ್ಧಿ ಹೇಳುತಾಳೆ

ಅಂತಃಕರಣವೆ ಬಾರೋ ಕಾಲಾಂತಕ ನಿಧಿಯೆ ಬಾರೊ
ಚೆಂತೇಳು ಲೋಕವ ಸಲುವುವನೆ

ಸುವ್ವ ಬಾ ಚೆನ್ನಬಸವಯ್ಯ – ಚನ್ನಣ್ಣನವರೆ
ನಿಮ್ಮ ಮಾವಯ್ಯ ಕರೆತವರೆ ಓ ಎನ್ನೊ

ಓ ಎನ್ನೊ ಅವರ ಪಟ್ಟದ ಅಳಿಯನೆ
ಕಿಡಿಗಣ್ಣ ರುದ್ರ ಚನ್ನಣ್ಣ – ಎನುತೇಳಿ
ಮಗನಿಗೆ ಬುದ್ಧಿಯ ಹೇಳುತಾಳೆ

ತಾಯಮ್ಮ ಈಗ ಕರೆದ ಮಾತಾದರೆ
ಚನ್ನಬಸವಣ್ಣನಿಗೆ ಅರಿವಾಯ್ತು

ತಾಯಮ್ಮ ಆಡಿದ ಮಾತ ಕೇಳಿದ ಚನ್ನಬಸವ
ತಾಯಿ ಹೊಟ್ಟೆ ಒಳಗೆ ಮಾತಾಡುತವನೆ

ಸಾಸವ ಮಾಡಿದವನ ಮೀಸೆಯ ಕೀಳುತೀನಿ ಮಾವ
ಸೂಸಲಾಡುವೆ ತಲೆಗೋಳ – ಮಾವಯ್ಯ
ನಿನ್ನ ಜೀವಕೆ ಭಯ ಬೇಡ

ನಿಂದಕವನಾಡಿದವನ ಮುಂದಲೆಯ ಕಡಿತೀನಿ
ಚಂಡಾಡುವೆನವನ ತಲೆಗೋಳ – ಮಾವಯ್ಯ
ನಿನ್ನ ಜೀವನಕ್ಕೆ ಭಯ ಬೇಡ

ನನ್ನ ಪಟ್ಟಕೆ ನಾನು ಬತ್ತೀನಿ ಮಾವಯ್ಯ
ಇನ್ನು ಅವನ ಪ್ರಾಣ ಮಡಗಲ್ಲ
ಹೊಟ್ಟೆಯ ಒಳಗೆ ಚನ್ನಣ್ಣನಾದರೆ
ಎತ್ತಿ ಮೂರು ಮಾತನಾಡಿದನು – ಬಿಜ್ಜಳನ
ಹೆತ್ತಯ್ಯನ ಕಾಲದ ಮುತ್ತಿನ – ಗದ್ದುಗೆಯು
ಚನ್ನಣ್ಣನಾಡಿದ ಮಾತಿಗೆ – ಪಟ್ಟನೆ
ಎರಡು ಪಾಲಾಗಿ ಹೊಡೆದೋಯ್ತು

ಅದುರಿತು ಆಕಾಶ ಉದುರಿತು ನಕ್ಷತ್ರ
ಗದಗಾಪರಿಸಿಗೊಂಡು ಶಿವನೆದ್ದ – ರವಪೀಠಕೆ
ಗಗನ ಮಂಡಲವೆ ನಡುಗೋಯ್ತು

ತಾಯಿ ಹೊಟ್ಟೆಯ ಒಳಗೆ ಮೂರು ಮಾತ ಆಡಿಬಿಟ್ಟು
ಮನದಲ್ಲಿ ಯೋಚನೆಯ ಮಾಡುತಾನೆ

ತೆರೆಮರೆಯ ಒಳಗೆ ಒಂದು ಬೊಂಬೆಯ ತಂದು
ಮಾತಾಡಿಸಿದ ಕರ್ತೃ ಬಸವಣ್ಣ – ಎನುತೇಳಿ
ಆ ನಿಂದಕ ಏನಂದು ನುಡಿವನೊ

ತನ್ನ ನಿಜರೂಪವ ಇಲ್ಲಿ ತೋರಬೇಕು ಎಂದು
ತಾ ಬರುವಂಥ ಮಾರ್ಗ ಅರಸಿದ

ಕಣ್ಣಲ್ಲಿ ಜನಿಸಿದರೆ ಕಣ್ಣರಜ ಎನ್ನುವರು
ಎಲ್ಲಾಣೆ ಬರಲಿ ನನ ತಾಯಿ

ಕಿವಿಯಲ್ಲಿ ಜನಿಸಿದರೆ ಕರ್ಣಮೂಲ ಎನ್ನುವರು
ಇನ್ನೆಲ್ಲಿ ಜನಿಸಿದರೆ ಸೂತಕವಿಲ್ಲ – ನಾಗಮ್ಮನವರೆ
ಎಲ್ಲಾಣೆ ಬರಲೆ ನನ ತಾಯಿ

ಮೂಗಲ್ಲಿ ಜನಿಸಿದರೆ ಮೂಗುಸಿವುಡು ಎನ್ನುವರು
ಇನ್ನೆಲ್ಲಿ ಜನಿಸಿದರೆ ಸೂತಕವಿಲ್ಲ – ನಾಗಮ್ಮನವರೆ
ಇನ್ನೆಲ್ಲಾಣೆ ಬರಲೆ ನನತಾಯಿ

ಬಾಯಲ್ಲಿ ಜನಿಸಿದರೆ ಬಾಯೆಂಜಲೆಂಬುವಳು
ಇನ್ನೆಲ್ಲಿ ಜನಿಸಿದರೆ ಸೂತಕವಿಲ್ಲ – ಎನುತೇಳಿ
ಇನ್ನೆಲ್ಲಾಣೆ ಬರಲಿ ನನತಾಯಿ

ತಾಯಿ ಗರ್ಭದ ಒಳಗೆ ಕೂತವನೆ ಚನ್ನಬಸವ
ನಾಕು ದಿಕ್ಕನೆ ನೋಡುತಾನೆ – ಚನ್ನ ಬಸವ
ಯಾವಲ್ಲಿ ಬರುವುದಕು ಎಡೆ ಇಲ್ಲ

ಯಾವಲ್ಲಿ ಬರುವುದಕು ಎಡೆ ಇಲ್ಲದ ಕಾಲದಲಿ
ತಾಯಿ ಹೃದಯದೊಳಗೆ ಕಿಡಿಗಣ್ಣ – ಆಗ
ರುದ್ರ ತೋರುತಾನೆ ಚನ್ನಬಸವಣ್ಣ

ಎಡಚಾರಿ ಕಿರುಬೆಳ್ಳ ಉಗುರಲ್ಲಿ ಚನ್ನಣ್ಣ
ತಾಯಿಯ ಬೆನ್ನಿನ ಮಚ್ಚೆಯ – ಸೀಳಿಕೊಂಡು
ಸ್ವಾಮಿ ಇಳಿದಾನು ಸೋಮವಾರ

ವರ್ಷಕ್ಕುಂಟಾದ ಮೊದಲ ಸೋಮವಾರ ದಿನವೆ
ನಮ್ಮ ಸ್ವಾಮಿಯಾದರೆ ಹುಟ್ಟವನೆ

ಸೋಮವಾರದ ದಿನ ಸ್ವಾಮಿ ಹುಟ್ಟಿದ ಸುದ್ದಿ
ಸುರಲೋಕಕ್ಕಾದರೆ ಹೋದೀತು – ಆಗಲೆ
ಹೂವಿನ ಮಳೆಯು ಸುರಿದೀತು

ದೇವರುಟ್ಟಿಧ ಸುದ್ದಿ ದೇವಲೋಕಕೆ ಹೋಯ್ತು
ಹದಿನೆಂಟು ಧಾನ್ಯದ ಬೀಜ ಕರೆದೀತು

ಮೂರು ವರ್ಷದಲಿ ಹುಟ್ಟಿದ ಬಾಲನ ಯಾಸ ತಾಳಿಕೊಂಡು
ಬಿಜ್ಜಳ ದೊರೆಯ ಎದುರಾಗಿ – ಆಗಲೆ
ಚನ್ನಬಸವಣ್ಣ ಬರುತಾನೆ – ಬಿಜ್ಜಳನ
ಅವನ ಕೊಂಬಿನಿಂದ ಅಂಬಾರಕೆ ಎತ್ತಿ ಎಸೆದನು

ಅಂಬಾರಕ್ಕೆ ಎತ್ತಿ ಎಸೆಯಲು ಬಿಜ್ಜಳನು
ಅವರ ಮಾವಾಜಿಯವರ ಹೋಗಿ ಮರೆಬಿದ್ದ – ಕಾಲದಲಿ
ಕರ್ತೃ ಬಸವಯ್ಯ ಏನ ನುಡಿದರು

ಮರೆ ಹೊಕ್ಕವನ ಬಿಡಬಾರ್ದು ಅಪ್ಪ ಕದ್ದವನ ಕೊಡಬಾರ್ದು
ನೀ ಕೋಪವನೆ ಬಿಟ್ಟು ಶಾಂತಿಯ – ತಾಳಿಕೊ
ಎನ್ನುತ ಅಳಿಯನಿಗೆ ಹೇಳುತಾನೆ

ಮುನ್ನೂರರವತ್ತು ಪವಾಡ ಆಗಬೇಕು ಬಿಜ್ಜಳನಿಂದ
ಇವ ಕೊಟ್ಟ ಪವಾಡ ನಾವು ಗೆಲಬೇಕು – ಅಳಿಯನೆ
ಇನ್ನೆರಡು ಹಗಲು ಇರಬೇಕು – ಚನ್ನಣ್ಣನವರೆ ದೊರೆಯಿಂದ
ನೀ ಕ್ವಾಪವ ಬಿಟ್ಟು ಶಾಂತಿಯಾಗು

ಮಾವಯ್ಯನವರ ಮಾತ ಕೇಳಿ ಚನ್ನಬಸವಣ್ಣ
ಕಲ್ಯಾಣ ಪಟ್ಟಣವ ಆಗಲೆ – ಅವನಾದ್ರೆ
ಕೆಂಗಣ್ಣ ಬಿಟ್ಟು ನೋಡುತಾನೆ

ಅರ್ಧ ಕಲ್ಯಾಣವೆಲ್ಲ ಮಂಜುವೆ ಕವಿದಂಗೆ
ಉರಿಯಾದರೆದ್ದಿತು ಆಗಲೆ

ಕಲ್ಯಾಣವೆಲ್ಲ ಉರಿ ಎದ್ದ ಕಾಲದಲಿ
ಶರಣರು ಎಲ್ಲ ಗೋಳುಗುಟ್ಟರು

ಶರಣರ ದುಃಖವ ನೋಡಿದ ಬಸವಣ್ಣನವರು
ಅರ್ಧ ಕಲ್ಯಾಣದ ದುಃಖವನೆ – ನೋಡಿಬಿಟ್ಟು
ತೀರ್ಥ ಪರಸಾದವ ಪಡೆದರು

ತೀರ್ಥ ಪ್ರಸಾದವ ಪಡೆದು ಬಸವಣ್ಣನವರು
ಅರ್ಥ್ ಕಲ್ಯಾಣಕೆಲ್ಲ ಎಸೆದರು – ಆಗಲೆ
ಅರ್ಧ ಕಲ್ಯಾಣವೆಲ್ಲ ಪಡೆದರು

ಮಾವಯ್ಯನವರೆ ಮಾತ ಕೇಳಿದರು ಚನ್ನಬಸವಣ್ಣ
ಮೂರು ಗಳಿಗೇಲಿ ಹುಟ್ಟಿದ ಬಾಲನಾಗಿ – ಅವನೀಗ
ಯಾಸವನಾದರೆ ತಾಳಿದನು

ಯಾಸವನಾದರೆ ತಾಳಿಕೊಂಡು ಚನ್ನಣ್ಣ
ತಾಯಿಯ ತೊಡೆಮೇಲೆ ಕುಂತವನೆ
ಕಣ್ಣಿಗೆ ಕಪ್ಪ ಇಟ್ಟು ಬೆನ್ನಿಗೆ ಅರಿಸಿಣ ತುಂಬಿ
ನೀ ಇನ್ನೊಂದು ಉರಿತ ಉರಿಯಯ್ಯ

ತಂದೆ ಇಲ್ಲದ ಮಗನೆ ಬಾಂಧವರು ನಿನಗ್ಯಾರೊ
ಕಂದಯ್ಯ ನಿನ್ನೆಂಗೆ ಸಲುವಾನೆ – ನನಕಂದ
ನೀ ಇನ್ನೊಂದು ಉರುತ ಉರಿಯಯ್ಯ – ನನ್ನಬಾಲ
ಮುಕ್ಕಣ್ಣಯ್ಯನವರಿಗೆ ಯಾರು ಎಣೆ ಇಲ್ಲ

ನಾಗಮ್ಮನವರ ಮಾತ ಕೇಳಿದರು ದೊಡ್ಡ ಬಸವಣ್ಣ
ತಂಗಿಗೆ ಬುದ್ಧಿ ಹೇಳುತಾರೆ

ಅವರ ಸಲಹುವ ಚಿಂತೆ ನಿನಗ್ಯಾಕೆ ನನತಂಗಿ
ಏಳು ಲೋಕವ ಸಲುವುದಕೆ – ಚನ್ನಬಸವ
ತಾ ಹುಟ್ಟಿ ಬಂದವರೆ ತಿಳಿಯಮ್ಮ – ನಾಗಮ್ಮ
ಸುಮ್ಮನೆ ಎದೆಹಾಲ ಕೊಡು ತಾಯೆ

ಅಣ್ಣಯ್ಯನವರ ಮಾತ ಕೇಳಿದರು ನಾಗಮ್ಮ
ಸತ್ಯವಂತೆ ಏನ ನುಡಿದವಳೆ

ನನ್ನ ನಿಜರೂಪವ ಇಲ್ಲಿ ತೋರಬೇಕು ಎಂದು
ಕಂಕಳಲ್ಲಿ ಕಂದನ ಎತ್ತಿಕೊಂಡು – ನಾಗಮ್ಮನವರು
ದೊರೆಯ ವೃಂದಾವನಕೆ ಬರುತಾರೆ

ಬಾಳೆಯ ಮರದಡಿಗೆ ಬಾಲೆ ತೊಟ್ಟಿಲ ಕಟ್ಟಿ
ಜೋಪಾಲಕ ಚನ್ನಬಸವಣ್ಣನ – ಆಗಲೆ
ತೊಟ್ಟಿಲಲ್ಲಿ ಮಲಗಿಸಿ ತೂಗುತಾಳೆ

ಆಕೆ ನಾಗಮ್ಮ ತೂಗುತ ಬಾಗುತ
ಕಂದನಿಗೆ ಪಾಲ್ಬೆಣ್ಣೆ ಎರೆಯುತ – ನಾಗಮ್ಮ
ಏನೆಂದು ಅವಳು ಪಾಡುತಾಳೆ

ಕಂದನಿಲ್ಲದವರಿಗೆ ನೀನು ಕಂದನಾಗಿ ಬಂದ್ಯಲ್ಲೊ
ಜೋ ಜೋ ಎನ್ನೀರಿ ಬಾಲನ
ಜೋ ಜೋ ಚನ್ನಯ್ಯ ಜೋ ಜೋ ಕಂದಯ್ಯ
ಜೋ ಜೋ ಕಲ್ಯಾಣದ ಬಸವಯ್ಯ

ಸಂಪಿಗೆ ಮರದಡಿಗೆ ಕೆಂಪೇರು ತೊಟ್ಟಿಲ ಕಟ್ಟಿ
ಚನ್ನ ಬಾಲಕ ಚನ್ನಬಸವಣ್ಣನ – ಅವರೀಗ
ತೊಟ್ಟಿಲಲ್ಲವನ ಮಲಗಿಸಿ

ಆಕಾಶ ಹಗ್ಗ ಮಾಡಿ ಭೂಮಿ ತೊಟ್ಟಿಲ ಕಟ್ಟಿ
ಈ ಭೂಪಾಲಕ ಚನ್ನಬಸವಣ್ಣನವರ – ಅವರೀಗ
ತೊಟ್ಟಿಲಲ್ಲಾದರೆ ಮಲಗಿಸಿ

ಮಕ್ಕಳಿಲ್ಲದವರಿಗೆ ನೀ ಮಗನಾಗಿ ಬಂದ್ಯಲ್ಲೋ
ಜೋ ಜೋ ಜೋ ಅಂದಾರು

ಜೋ ಜೋ ಎನ್ನಯ್ಯನೆ ಜೋ ಜೋ ಕಂದಯ್ಯನೆ
ಜೋ ಜೋ ಕಲ್ಯಾಣದ ಬಸವಯ್ಯ – ಕಿಡಿಗಣ್ಣರುದ್ರ
ಜೋ ಜೋ ಜೋ ಎನ್ನಿರಿ

ಕಂದನ ಜೋಗುಳವ ಹಾಡುವುದ ಕಂಡನು
ಆ ನಿಂದಕ ತಾ ನೋಡಿ ಹೆದರಿದನು

ಆ ನಿಂದಕ ತಾ ನೋಡಿ ಹೆದರಿ ಹೆಪ್ಪಳಿಸಿದನು
ಐದು ಜನ ಸತಿಯರ ಕರೆದನು

ಅರಮಲ್ಲಿ ಇರುವೋರೆ ಐದು ಜನ ಸತಿಯೋರೆ
ಹವಳದ ಆರತಿಯ ಹದಮಾಡಿ

ಐದು ಜನ ಮಡದಿರು ಸ್ನಾನ ಮಡಿಮಾಡಿಕೊಂಡು
ಎಂಭತ್ತು ವರದ ಗುಂಡಿ ಹರಿವಾಣದಲಿ – ಅವರಾದ್ರೆ
ತಂದು ಕಾಣಿಕೆಯ ಮಡಗಿದರು

ಅಂಜಿದೆ ದಮ್ಮಯ್ಯ ನಾ ದೂರದಲಿದ್ದೆನು
ಅಂಜಿದೆ ದಮ್ಮಯ್ಯ ಪ್ರಾಣ ಉಳಿಸಮ್ಮ
ಅರಮಲ್ಲಿ ಇರುವಂಥ ಐದು ಜನ ಸತಿಯರಲ್ಲದೆ
ಮಿಕ್ಕಸಾಲೆ ಬಂಗಾರವೆಲ್ಲ ನಿಮ್ಮದಮ್ಮ – ನಾಗಮ್ಮನವರೆ
ಅಂಜಿದೆ ನನ್ನ ಪ್ರಾಣ ಉಳಿಸಮ್ಮ

ಹಿಂದಕೊಂದ ಮಾತಾಡಿ ಏನ ಕಂಡೆ ಬಿಜ್ಜಳನೆ
ನಂದಿ ಉಂಗುರಕೆ ನಮಿಸಿದೆ – ಪಂಜಿನ ರವೆಯಲ್ಲಿ
ಬೆಂದೋದ್ದ ಸಿಕ್ಕ ನೀ ಮರತೋದ್ಯೊ

ಚಾಡಿಯ ಮಾತ ಕೇಳಿದಲ್ಲೋ ಬಿಜ್ಜಳನೆ
ನೀವೊಂದು ದೊಡ್ಡ ಮರದ ಕೂಟ – ನಾನಾದರೆ

ಒಂದು ಸಣ್ಣ ಗರಗಸವು ಕೇಳಯ್ಯ

ಸಣ್ಣ ಗರಗಸದ ಕೂಟೆ ಹೋರಿದರೆ ಬಿಜ್ಜಳನೆ
ನಿನ್ನ ನ್ಯಾಯವು ಗೆಲಬಲ್ಲೆ

ತಾಯಿ ಸಂತೆಗೆ ಕದವುಂಟೆ ಚಿಂತಾಯಕ ಎರಡುಂಟೆ
ಸಂತೇಲಿ ಶೆಟ್ಟರಿಗೆ ಮನೆ ಉಂಟೆ – ಗುರುಮೂರ್ತಿ
ನಿಮ್ಮ ವಚನಕೆ ಹುಸಿ ಉಂಟೆ

ಬೆಟ್ಟದ ತಾವರೆಗೆ ತೊಟ್ಟಲ್ಲಿ ಮುಳ್ಳುಂಟೆ
ಈ ಬೆಟ್ಟ ತೂಗುದಕೆ ತರಸುಂಟೆ – ನಾಗಮ್ಮನವರೆ
ದೇವರೆ ನಿಮ್ಮ ವಚನ ಹುಸಿ ಉಂಟೆ

ನೀರಿನಲ್ಲಿರೋ ತಾವರೆಗೆ ಬೇರಲ್ಲಿ ಮುಳ್ಳುಂಟೆ
ಈ ಭೂಮಿ ತೂಗುದಕೆ ತರಸುಂಟೆ – ಗುರುಮೂರ್ತಿ
ನಿಮ್ಮ ವಚನವಾದರೆ ಹುಸಿ ಉಂಟೆ

ನಿಮ್ಮ ಸತ್ಯವು ನಮಗೆ ಒಪ್ಪಾಯ್ತು ನಾಗಮ್ಮನವರೆ
ದಯಮಾಡಿ ತಾಯಮ್ಮ ನಿಮ್ಮ ಗುರುಮಠಕೆ

ಬಾಗಿ ಪಾದಕೆ ಶರಣು ಮಾಡಿದ ದೊರೆಯ
ಕಾಣಿಕೆ ತಂದು ಮಡಗಿದರು

೮

ಧೀರನ ಹಜಾರದಲ್ಲಿ ಮಗನ ಪವಾಡಗೆದ್ದು
ಆಗ ನಾಗಮ್ಮನವರು ಪಲ್ಲಕ್ಕಿಯಲಿ ಆಗಲೆ
ಬಂದು ಕುಳಿತವರೆ ಗುರುಮೂರ್ತಿ

ಕರ್ತೃ ಬಸವಣ್ಣನವರು ಅಳಿಯನ ಪವಾಡಗೆದ್ದು
ಗುರುಮಠಕೆ ತಾವು ಹೊರಟಾರು

ಕೆರೆಯ ಏರಿಯಮೇಲೆ ಇರುವೆ ಸಾಲಿಟ್ಟಂಗೆ
ಬರುತಾರೆ ಶರಣರು ಗುರುಮಠಕೆ

ಬಸವಣ್ಣನವರು ಬಂದು ಭಸಿತವ ಧರಿಸಿದರು

ಕಲ್ಯಾಣಮ್ಮ ಬಂದು ಆರತಿಯ ಎತ್ತಿದರು
ನೀಲಮ್ಮ ತಾ ಬಂದು ಅಳಿಯನಿಗೆ ಹೆಸರಿಟ್ರು

ನೀಲದುಂಗರವೆ ನಿಧನವೆ ಅಳಿಯನೆ
ಚನ್ನಬಸವಣ್ಣನವರೆ ಎಂದು ಕರೆದರು

ಅಳಿಯನ ಎತ್ತಿಕೊಂಡು ಮುತ್ತಿಟ್ಟು ಮುದ್ದಾಡಿ
ನಂದಿ ಮಂಚದ ಮೇಲೆ ತಂದು ಬಿಡುತಾರೆ

ಶರಣ ಮಹಾತ್ಮರಿಗೆಲ್ಲ ಅಡುಗೆ ಪದಾರ್ಥವನೆ
ಬೇಗ ಮಾಡುತಾರೆ ನೀಲಮ್ಮ

ಒಕ್ಕಳು ಅಕ್ಕಿಯ ಹಾಕಿ ಒಂದೇ ಬದನೆಕಾಯಿ
ಒಂದೇ ಮಾನ ಬೇಳೆಯ ಕಾಳನ್ನೆ – ನೀಲಮ್ಮ
ಹದಮಾಡಿಕೊಂಡರು ಆಗಲೆ

ಲಕ್ಷದ ಮೇಲೆ ತೊಂಬತ್ತಾರು ಸಾವಿರ
ಗಣಂಗಳಿದಾದರೆ ಊಟವ – ನೀಡಬೇಕು
ಸಾರ್ಕೊಂಡು ಬಾರೋಗೋ ನನ್ನ ಅಳಿಯನೆ

ಏನಂತ ನಾನು ಸಾರಲಿ ಅನುತೇಳಿ
ಮಾವಯ್ನ ಪಾದಕೆ ಹೋಗಿ ಶರಣನ್ನ
ಹಸುಮಕ್ಕಳಗೆ ಮೂರೂಟ ದೊಡ್ಡೋರಿಗೆ ಎರಡೂಟ
ಎಂದು ಸಾರಿಕೊಂಡು ಬಾರಪ್ಪ

ಮಾವಯ್ಯನೋರ ಮಾತ ಕೇಳಿದ ಅಳಿಯಾನು
ಕಲ್ಯಾಣ ಪಟ್ಟಣದ ರಾಜ ಬೀದಿಯಲಿ ಬರುತಾನೆ

ದೊಡ್ಡೋರಿಗೆ ಎರಡೂಟ ಹೇಳಿದರು ಮಾವಯ್ಯನವರು
ಇವನು ಮೂರೂಟ ಸಾರುತಾನೆ

ಹಸುಮಕ್ಕಳಿಗೆ ಸಂಜೆವರೆಗೆ ಉಂಡರು
ದಣಿಯಲ್ಲ ಎಂದು ಅವನೀಗ – ಚನ್ನಬಸವ
ಲೆಕ್ಕವಿಲ್ಲದ ಊಟ ಸಾರುತಾನೆ

ಕರ್ತೃ ಬಸವಣ್ಣನವರಿಗೆ ಅರಿವಾಗೊ ಕಾಲದಲಿ
ಅವರು ಶಿವಶಿವ ಅನುತೇಳಿ ಕುಳಿತವರೆ

ಏನಪ್ಪ ನನ್ನ ಅಳಿಯ ಚನ್ನಬಸವಣ್ಣನವರೆ
ನೀನು ಲೆಕ್ಕವಿಲ್ಲದ ಊಟ ಸಾರಬೌದೆ – ನನ್ನಳಿಯ
ನೀನೆ ಸಲವಪ್ಪ ಈ ಮರ್ತ್ಯವ ಅಂದಾರೆ
ಆಗಲಿ ಎಂದನು ಚನ್ನಬಸವಣ್ಣ

ಲಕ್ಷದ ಮೇಲೆ ತೊಂಬತ್ತಾರು ಸಾವಿರ ಶರಣಮಾತ್ಮರ
ಕರೆದರು ಕರ್ತೃ ಬಸವಣ್ಣನವರು

ನಮ್ಮ ಅಳಿಯನಲ್ಲಿಗ್ಯೆದು ಹದಿನೆಂಟು ಜಾತಿಗೆಲ್ಲ
ಅನ್ನ ಹಾಕುವರ್‍ಯಾರಪ್ಪ ಎನುತೇಳಿ – ಆಗಲೆ
ನಮ್ಮ ಕರ್ತೃ ಬಸವಣ್ಣನವರು ಕೇಳುತಾರೆ

ಹದಿನೆಂಟು ಜಾತಿಯು ಮಾತನಾಡಲೇ ಇಲ್ಲ
ಒಕ್ಕಲಿಗರ ಮುದ್ದಯ್ಯ ಬಾಗಿ ಶರಣನ್ನ

ನಾನು ಇವನೂ ಗೇದು ಅನ್ನವ ಹಾಕುತೀವಿ
ಎನುತೇಳಿ ಮುಂದಾಗಿ ನಿಲುತಾನೆ
ಕಾಗೆಗೂಗೆಯು ಇರುವೆಂಭತ್ತೇಳು ಪಕ್ಷಿಗೆಲ್ಲ
ಒಪ್ಪಿಕೊಂಡು ಒಕ್ಕಲಿಗರ ಮುದ್ದಯ್ಯ

ಅಯ್ಯ ನೀನು ಬೆಳದೂದು ಒಕ್ಕಲಿಗರ ಮುದ್ದಯ್ಯ
ನಿನಗೆ ಒಂದು ಭಾಗ ಸಲ್ಲುವುದು – ಮುದ್ದಯ್ಯ
ನಿನ್ನ ರಾಜನಿಗೆ ಒಂದು ಭಾಗ ಸಲ್ಲುವುದು – ಅಲ್ಲಾದೆ
ದಾನಕ್ಕೆ ಒಂದು ಭಾಗ ಸಲ್ಲುವುದು

ಅರಿತು ಅರಿನಾರ್ದೆ ಎನ್ನುವಂತ ಪ್ರಜೆಗಳಿಗೆಲ್ಲ
ಮೇಟಿಯ ಮಣ್ಣು ಮೂರು ಭಾಗ

ಆಗಲಿ ನನ್ನ ಸ್ವಾಮಿ ಚನ್ನಬಸವನು ಈಗ
ನನ್ನ ಮಾತ ಇವನು ಕೇಳುವನೆ – ನಿನ್ನಳಿಯ
ಎಂದು ಮುದ್ದಯ್ಯ ನುಡಿಯಲು

ಆಗಲಪ್ಪ ಮುದ್ದಯ್ಯ ತಕ್ಷಣಕ್ಕೆ ನಾನಾದರೆ
ಅವನ ಮೂಗು ಬಾಯಿಯ ಮಾಡುತೀನಿ – ಎನ್ನುತ
ನರಮಾನವರ ಕೈಲಿ ಕೊಟ್ಟುಬಿಟ್ಟ

ನರಮಾನವನ ಕೈಲಿ ಕೊಟ್ಟುಬಿಟ್ಟು ನನ್ನನ್ನೆ
ಇವನ ಶಿಕ್ಷೆಯ ನಾನು ತಡೆಯಬಹುದೆ

ಮಕ್ಕಳಲ್ಲಿ ಬುದ್ಧಿ ತಪ್ಪಾದರೆ ಕೇಳಯ್ಯ
ಎರಡೇಟ ಅವರು ಹೊಡೆಯುವರು – ನಿನಾದ್ರೆ
ಕಷ್ಟವ ಮಾಡಿ ಗೆಲ್ಲಬೇಕು

ಹೊತ್ತಿನಂತೆ ಎದ್ದು ಹೊಡೆದಂಥ ಮೂರೇಟು
ನಿನ್ನ ಪಾಲಿಗೆ ಸಲ್ಲುವವು

ಸಂದೇಯ ಗಂಟ ಹೊಡದೇಟು ಬಸವಣ್ಣನವರ
ಬೆನ್ನ ಮೇಲಾದರೆ ಸಲ್ಲುವವು

ಇವನ ಸುಂಗಾರ ಮಾಡಿ ನನಗೆ ಕಳಿಸಲು ಬೇಕು
ಎಂದು ಮುದ್ದಯ್ಯ ಕೇಳುತಾನೆ

ಇಸುಬ್ರಹ್ಮನ ಬೇಗ ಕರೆಸಿದರು ಬಸವಣ್ಣ
ಬೇಗ ಸುಂಗಾರ ಮಾಡಿಸುತಾರೆ

ಕೊಂಬಿಗೆ ಕಟ್ಟಿದರು ಎಂಭತ್ತು ವರದ ಕೊಂಬಣಸು
ಚಿನ್ನದ ಮುಖರಂಭ ಹಾಕ್ಯವರೆ – ನಾಗಸರ
ಚಿನ್ನದ ಹುರಿಗೆಜ್ಜೆ ಧರಿಸಿದರು

ಚಿನ್ನದ ಕಾಲ್ಕಡಗ ರನ್ನದ ಕೌದಿಯು
ಬಸವನ ಈಗ ಸುಂಗಾರ ಮಾಡಿದರು

ಮೂಗು ದಾರವ ಬಸವನಿಗೆ ಹಾಕದಿದ್ರೆ
ಮಾತ ಕೇಳಲ್ಲ ಅನುತೇಳಿ – ಇಸುಬ್ರಹ್ಮ
ಸನ್ನೆಯ ಮಾತ ಹೇಳುತಾನೆ

ಸನ್ನೇಯ ಮಾತನೆ ಆಡಿದನು ಇಸುಬ್ರಹ್ಮ
ಇನ್ನೊಂದು ವಡವೆಯ ಧರಿಸುತೀನಿ – ಎನ್ನುತ
ಉಕ್ಕಿನ ದಬ್ಬಳವ ತೆಗೆದನು ಆಗಲೆ – ಇಸುಬ್ರಹ್ಮ
ಮೂಗುದಾರವ ಹಾಕಿದ

ಉಕ್ಕಿನ ಮೂಗುದಾರ ಚುಚ್ಚಿ ಎಳೆದುಬಿಟ್ಟು
ಉಕ್ಕಿನ ಹಗ್ಗ ಹಾಕಿ ಆಗಲೆ – ಬಸವನ
ಒಕ್ಕಲಿಗರ ಮುದ್ದಯ್ನ ಕೈಗೆ ಕೊಡುತಾನೆ

ನನಗೆ ಅರಿವಿಲ್ಲದೆಯೆ ಮೂಗುದಾರ ಹಾಕಿದೆ
ಇಸುಬ್ರಹ್ಮಚಾರಿ ನೀ ಕೇಳೋ – ನಿನಗಾದರೆ
ಹ್ಯಾಗೆ ಅನ್ನೋದು ತಪ್ಪಬೇಡ ಎನುತೇಳಿ
ಕರ್ತೃ ಚನ್ನಬಸವಯ್ಯ ನುಡಿದವನೆ

ಅಕ್ಕನಾಗಮ್ಮನ ಮಗನು ಚಿಕ್ಕವನು ಚನ್ನಬಸವಣ್ಣ
ಕಡತ ಬಾಣವನು ಹಿಡಿದು ಲೆಕ್ಕಕ್ಕೆ – ಬುರುವುತಾನೆ ಚನ್ನಬಸವ
ಇದ್ದೇಳು ಲೋಕವ ಸಲವುತಾನೆ
ಬಸವ ಬಸವಣ್ಣ ಅನ್ನೀರಿ
ಇದ್ದೇಳು ಲೋಕವ ಮತ್ಯಾಗೆ ಸಲವುವನಂತೆ
ಮುಂದ್ಯಾಗೆ ಸಲವುವನಂತೆ

ಏರುವರೆ ಬೆನ್ನ ಕೊಟ್ಟ ಉಳುವರೆ ಹೆಗಲ ಕೊಟ್ಟ
ಕರೆದುಣ್ಣೋ ಹಸುಗಳಾದ
ಈರೇಳು ಲೋಕವ ಈ ತೆರದಲಿ ಸಲುವುತಾನೆ

ಬಸವ ಬಸವಣ್ಣ ಅನ್ನಿರಿ
ಕಲ್ಯಾಣ ಲೋಕದ ಬಸವಣ್ಣ ದೊಡ್ಡೋನೆ ಅನ್ನೀರಿ
ಸುತ್ತೇಳು ಲೋಕವ ಮತ್ಯಾಗೆ ಸಲಹುವನಂತೆ
ಮುಂದ್ಯಾಗೆ ಸಲಹುವನಂತೆ

ಅಟ್ಟರೆ ಅಡುಗೆಯಾದೆ ಸುಟ್ಟರೆ ಈಭೂತಿಯಾದೆ
ಹೊಡೆವರೆ ಬಾರ್ಕೋಲ್ ಆದೆ – ಈಡಿಗರಿಗೆ
ತತ್ತಿಗಳಾದೆ ವಾಜನಿಗೆ ತಿದಿಗಳಾದೆ

ಆತಾಳ ಪಾತಾಳದ ಗಡಿಗೆ ಯಾತಾದ ಗಡಿಗೆ ತಾವಾದರು
ಬಸವ ಬಸವಣ್ಣ ಅನ್ನಿರೋ

ಕಲ್ಯಾಣ ಪಟ್ಣಕ್ಕೆ ಬಸವಯ್ಯ ದೊಡ್ಡೊನು ಅನ್ನಿರೋ

ಸುತ್ತೇಳು ಲೋಕವ ಈ ತೆರದಲಿ ಸಲಹುವನಂತೆ
ಉಳುವರೆ ಮಿಣಿಗಳಾದ ಧರಮರ ಪಾದರಕ್ಷೆಯಾದ
ಬಸವ ಬಸವಣ್ಣ ಎನ್ನಿರೊ

ಬಸವಣ್ಣನವರ ಮೇಲೆ ಮೂರು ವಚನವ ಹೇಳಿ
ನರಮಾನವರ ಕೈಲಿ ನನ್ನ ಕೊಟ್ಟೆ – ಮಾವಯ್ಯ
ಹೊತ್ತು ಸಂದೆಗು ಉಳುವಂಥ – ಶಿಕ್ಷೆಯ
ನಾನಾದರೆ ಹ್ಯಾಗೆ ಪಡೆಯಲಿ

ನೀನು ಗೇದರೆ ಉಂಟು ಅನ್ನವು ಲೋಕಕ್ಕೆ
ನಿಚ್ಚಲು ಗೇಯಬೇಕು – ಚನ್ನಬಸವ

ಸೋಮುವಾರದ ದಿವಸ ಹುಟ್ಟಿದೆ ನನ್ನಳಿಯ
ಆ ದಿವಸ ಕೊರಳಿಗೆ ನೊಗವನ್ನೆ – ಬಿಗಿದರೆ
ಮೃತ್ಯು ಬರುತದೆ ಜಗಕೆಲ್ಲ – ಎನುತೇಳಿ
ಉತ್ರಾಣಿ ತಂದು ನಡುತಾರೆ

ಕೂಡೆರಡು ಕರವ ನಮಿಸಿದನು ಮುದ್ದಯ್ಯ
ಇವರಿಗೆ ಮೂಗುಬಾಯ ಮಾಡಿ ಅಂದನು

ಆಗಲಿ ಕಾಣಯ್ಯ ಒಕ್ಕಲಿಗ ಮುದ್ದಯ್ಯ
ಮೂಗುಬಾಯಿ ನಾವು ಮಾಡುತೀವಿ

ಸ್ವರ್ಗ ಲೋಕಕೆ ನೀವು ಹೋಗುತೀರಿ ಮಾವಯ್ಯ
ನೀವು ಬರುವುದು ಯಾವ ಕಾಲಕ್ಕೆ

ನಾವು ಬರಬೇಕಾದರೆ ನಮ್ಮಳಿಯ ಚನ್ನಬಸವಣ್ಣ
ಆನಂದ ಸಂವತ್ಸರಕ್ಕೆ ಬರುತೀವಿ

ಯಾವ ಆನಂದ ಎನುತೇಳಿ ಚನ್ನಬಸವಣ್ಣ
ಬದಲಾಗಿ ಮಾವನ ಕೇಳುತಾರೆ

ಮರ್ತ್ಯ ಲೋಕದ ಒಳಗೆ ನೂರೊಂದು ಆನಂದವು ಕಾಣೊ

ಆವೆಲ್ಲ ಆನಂದವಲ್ಲ ನಿನಗೆ
ನಾನು ಬಂದಾಗಲೆ ಆನಂದ ಕಾಣಪ್ಪ
ನೀ ಕೇಳೊ ಚನ್ನಬಸವಣ್ಣ

ಆನೆಗೊಂದಿಯ ಒಳಗೆ ನಿನಗೆ ಪಟ್ಟಾವು ಕಾಣಯ್ಯ
ಎಂದು ಭಾಷೆಯ ಕೊಡುತಾರೆ ಅವರು

ಅಳಿಯ ಚನ್ನಬಸವಣ್ಣನಿಗೆ ಆಗಲೆ
ಮೂಗುಬಾಯಿಯ ಮಾಡಿದರು ಅವರು
ಮೂಗುಬಾಯಿ ಮಾಡಿ ದೊಡ್ಡ ಬಸವಣ್ಣನವರು
ಸ್ವರ್ಗ ಲೋಕಕೆ ತಾವು ಹೋಗುತಾರೆ

ಒಕ್ಕಲಿಗರ ಮುದ್ದಯ್ಯ ಮರ್ತ್ಯಲೋಕಕೆ ಆಗ
ಚನ್ನಬಸವನ ತಾನು ಹಿಡಿದುಕೊಂಡು – ಆಗಲೆ
ಲೋಕವ ಸಲುವುದಕೆ ಬರುತಾನೆ

ತೆಂಗು ಫಲವಾಗಲಿ ಘನಲಿಂಗಯ್ಯ ಪಟ್ಟ ಆಳಲಿ
ತಿಂಗಳಿಗೆ ಎರಡು ಮಳೆ ಹುಯ್ಯಲಿ – ಗುರುವಚನ
ತುಂಬಿದಂಗೆ ಇರಲಿ ನಮ್ಮ ಹೃದಯದಲಿ

ಹಲಸು ಫಲವಾಗಲಿ ಅರಸು ಪಟ್ಟವ ಅಳಲಿ
ವರ್ಷಕ್ಕೆ ಇಪ್ಪತ್ತನಾಲ್ಕು ಮಳೆ ಹುಯ್ಯಲಿ – ಗುರುವಚನ
ಬಳಸಿ ಬರಲಿ ನನ್ನ ಹೃದಯಕ್ಕೆ

ಹೇಳಿದವರಿಗೆ ಹತ್ತುಕೋಟಿ ಕೇಳಿದವರಿಗೆ ಹನ್ನೊಂದು ಕೋಟಿ
ಸೊಲ್ಲು ಸೊಲ್ಲಿಗೆ ಪಾಪ ಪರಿಹಾರ

ಬಸವಣ್ಣನವರ ವಚನ ಹೇಳಿಸಿದವರಿಗೆ ಬೆಳ್ಳಿತೊಳೆದಂತೆ
ಪಾಪ ಪರಿಹಾರ

ಅಲ್ಲಿಗೆ ಹರಹರ ಇಲ್ಲಿಗೆ ಶಿವಶಿವ
ಪಲ್ಲೇಶ್ವರ ಮಠದಲ್ಲಿ ಪ್ರಭುಲಿಂಗ

ಕರ್ತೃ ಬಸವಣ್ಣನವರ ವಚನ ಇಲ್ಲಿಗೆ ಶರಣು ಶರಣಾರ್ತಿ
ಇಲ್ಲಿಗೆ ಮುದ್ರೆ ಶರಣೆಂದು – ನಾವೀಗ
ಕೂಡೆರಡು ಕರವ ನಮಿಸಿದೆವು

ಮಂಗಳಾರತಿಯ ತಂದೆತ್ತಿರಿ
ನಮ್ಮ ಸಂಗನ ಬಸವೇಶ್ವರನ ಗುರುಲಿಂಗಾಂಗಿಗೆ
ಚನ್ನನೆ ಬಸವಗೆ ಚಿನ್ಮಯ ರೂಪಗೆ ಕನ್ನೆ ನಾಗಮ್ಮನ ಪುತ್ರಗೆ

ಉಳುವೆಯಿಂದ ನಡೆತಂದ ದೊರೆ ಪಟ್ಟದರಸಿಗೆ
ತರಳೆ ಕನ್ನಿಕೆಯ ಆರತಿ ಎತ್ತಿರಿ

ಧರ್ಮವ ಹಿಡಿಯುತ ದೊರೆಪಟ್ಟ ಆಳುತ
ಚೆಲ್ವ ರೂಪಿನ ಚನ್ನಬಸವನಿಗೆ

ಪಟ್ಟದ ಒಡೆಯಗೆ ಪಾಲಿಸುವ ದೇವಗೆ
ಸೂಕ್ಷ್ಮಕನ್ನಿಕೆರು ಆರತಿ ಎತ್ತಿರೆ

ಇಲ್ಲಿಂದ ಹೋದರೆ ಅಲ್ಲಿ ನಿನಗಾರುಂಟು
ಚೆಲ್ವ ಗಂಗಳ ಸವಿ ತಿಳಿದೋಳಿರೆ – ಚನ್ನಬಸವಗೆ
ಮಂಗಳಾರತಿಯ ತಂದೆತ್ತಿರೆ

ಕೃತಿ – ಕನ್ನಡ ವೃತ್ತಿಗಾಯಕ ಕಾವ್ಯಗಳು

***

ಅಕ್ಕನಾಗಮ್ಮನ ಹಾಡು

ಇದ್ದೂರಾಗ ಇರುವ ಬಿಜಲೋಟ ಸವ್ಕಾರ
ಪುತ್ರ ಹುಟ್ಯಾನೆ ದಸಿವಂತ ದೇವ ।
ಪುತ್ರ ಹುಟ್ಟನೆ ದಸಿವಂತ ಸವ್ಕಾರಮಗ
ಸಾಲಿಕಲಿಸ್ಯಾರೆ ಶಮರಂತ ದೇವ ।
ಸಾಲಿ ಕಲಿಸ್ಯಾರೆ ಶಮರಂತ ಸವ್ಕಾರ ಮಗ
ಇದ್ಯಾ ಕಲತಾನೆ ಬುದ್ಧಿವಂತ ದೇವ ।
ಇದ್ಯಾ ಕಲತಾನೆ ಬುದ್ಧಿವಂತ ಸವ್ಕಾರ ಮಗ
ಇದ್ದೂರಾನ ಹೆಣ್ಣ ತಗಿಬೇಕ ದೇವ ।
ಇದ್ದೂರಾನ ಹೆಣ್ಣ ತಗಿಬೇಕ ಸವ್ಕಾರ ಮಗ
ನಾಕಮಂದೀನ ನೆರಸ್ಯಾರ ದೇವ ।
ಇದ್ದೂರಾನ ಬೀಗರು ಹೆಂತ ಬುದ್ಧಿವಂತರು ।
ಹೆಣ್ಣ ಕುಡಬೇಕೆಂಬೊ ಮನಸಾಗಿ ದೇವ ।

ಹೆಣ್ಣ ಕುಡಬೇಕೆಂಬೊ ಮನಸಾಗಿ ಬೀಗರು
ತಾನೆ ಹೋಗ್ಯಾರ ಮನಿತಾನ ದೇವ ।
ದೊಡ್ಡ ದೊಡ್ಡವರ ಕೂಡಿ ದೊಡ್ಡ ಜಮಖಾನಿ ಹಾಸಿ
ಮನವಿಚ್ಚದ ಮಾತ ಆಡ್ಯಾರೇ ದೇವ ।
ಆರ ಸಾವಿರ ಹುಂಡ ಆರ ತೊಲಿ ಬಂಗಾರ
ಅರಗಿಲಲದ ಖಡ್ಯಾ ಅಳಿಯಾಗ ದೇವ ।
ಅರಗನಿಲ್ಲದ ಖಡ್ಯಾ ಅಳಿಯಾಗ ಇಡಬೇಕಂದು
ನಿಚ್ಚಯ ಮಾಡ್ಯಾರ ನಾಗಮ್ಮನ ದೇವ ।
ನಿಚ್ಚಯ ಮಾಡ್ಯಾರ ನಾಗಮ್ಮಗ ಸವ್ಕಾರ ಮಗ
ಉಂಗರಿಟ್ಟಾರ ನಾಗಮ್ಮಗ ದೇವ ।
ಮನಿಮಾರ ಸಾರಸ್ಯಾರಿ ಸುಣ್ಣ ಬಣ್ಣ ಹಚ್ಯಾರಿ
ಮನಿಯಾಗ ಲಗ್ಗಣ ತಯ್ಯಾರಾಗಿ ದೇವ ।
ಮನಿಯಾಗ ಲಗ್ಗಣ ತಯಾರಾಗಿ ಸವ್ಕಾರಮಗ
ಆಯ್ತಾರದಿನ ಕೂಕಮ ಹಚ್ಚಿ ದೇವ ।
ಆಯ್ತಾರದಿನ ಕೂಕಮ ಹಚ್ಚಿ ಸಾವ್ಕಾರ ಮಗ
ಸ್ವಾಮಾರದಿನ ಕರದೊಯ್ದ ದೇವ ।
ಸ್ವಾಮಾರ ದಿನ ಕರದೊಯ್ದು ನಾಗಮ್ಮನ
ಮಂಗಳಾರ ದಿನ ನಂದಿಮಕ ದೇವ ।
ಮಂಗಳಾರ ದಿನ ನಂದಿಮಕ ಸವ್ಕಾರ ಮಗ
ಬುಧವಾರ ದಿನ ಅಕ್ಕಿಕಾಳ ದೇವ ।
ಭುಧವಾರ ದಿನ ಅಕ್ಕಿಕಾಳ ನಾಗಮ್ಮನ
ಸೀರಿ ಮನಸೀಗಿ ಬರಲಿಲ್ಲ ದೇವ ।
ಬೀಗರು ಬೀಗರು ಹೆಂತ ಬುದ್ಧಿವಂತರು
ಕದನ ಹೂಡ್ಯಾರೆ ಕೆಡಗಾಲ ದೇವ ।
ಕದನ ಹೂಡ್ಯಾರೆ ಬೀಗರು ಅಕ್ಕನಾಗಮ್ಮ
ತಾಯಿ ಹೊಟ್ಟಿ ಸೀರಿ ಮನಸಿಗಿಲ್ಲ ದೇವ ।
ರೊಕ್ಕ ಕೊಟ್ಟೀದನಂತ ಸೊಕ್ಕಿ ಮಾತಾಡಲಿ ಬ್ಯಾಡ
ಹಿಂತವೇಸ ರೊಕ್ಕ ತರಲೆಂದ ದೇವ ।
ಹೆಣ್ಣ ಕೊಟ್ಟಿದನಂತ ಹಮ್ಮಿಲಿ ಮಾತಾಡಬ್ಯಾಡ
ಹಿಂತವೇಸ ಹೆಣ್ಣ ತರಲೆಂದ ದೇವ ।
ಹಿಂತವೇಸ ಹೆಣ್ಣ ತರಲೆಂದ ಸವ್ಕಾರ
ಇದ್ದಾಳು ಮಗಳು ಮನಿಯಾಗ ದೇವ ।
ಹತ್ತು ಮಂದಿ ದೈವ ನೆರದೆಲ್ಲ ಕುಂತಿರಿ ನೀವು

ಕಟ್ಟಿದ ಕರಿಮಣಿ ಕಡಿಯಿರಿ ದೇವ ।
ಕಟ್ಟಿದ ಕರಿಮಣಿ ಕಡಿಯರೆಂದರ ಸವ್ಕಾರ
ಹಚ್ಚಿದ ಅರಿಷಿಣ ತೊಳಿರೆಂದ ದೇವ
ಹಚ್ಚಿದ ಅರಿಷಿಣ ತೊಳಿರೆಂದ ಸಾವ್ಕಾರ
ಗಪ್ಪಂತೆ ಜನರು ಬಾಯಿ ಮುಚ್ಚಿ ದೇವ ।
ಇಷ್ಟು ವಿದ್ಯವ ಕಲಿಸಿ ಇಷ್ಟು ಬುದ್ಧಿಯ ಬಂತ
ಮಡದೆಂಬ ಶಬ್ದ ಮರಿ ಮಗನೆ ದೇವ
ಆರಸಾವಿರ ಕೊಟ್ಟು ಆರತೊಲಿ ಬಂಗಾರಿಟ್ಟು
ಪುರುಷೆಂಬ ಶಬ್ದ ಮರಿಮಗಳೆ ದೇವ ।
ಪುರುಷೆಂಬ ಶಬ್ದ ಮರಿ ಮಗಳೆ ನಾಗಮ್ಮನ
ತಮ್ಮ ತವರೀನ ಕರದೊಯ್ದು ದೇವ ।

ನಾಗಮ್ಮನ ಮನಿಯಾಗ ಏಳಮಂದಿ ಅತ್ತಿಗಿದೇರು
ಅತ್ತಿಗಿದೇರ ಕಾಟ ಹೆಚ್ಚನಾಗಿ ದೇವ ।
ಅತ್ತಿಗಿದೇರ ಕಾಟ ಹೆಚ್ಚನಾಗಿ ಅಕ್ಕನಾಗಮ್ಮ
ಚಿಂತಿ ಮಾಡ್ಯಾಳ ಮನದಾಗ ದೇವ ।
ಚಿಂತಿನೆ ಮಾಡ್ಯಾಳ ಮನದಾಗ ಅಕ್ಕನಾಗಮ್ಮ
ಅಳುತ ಮ್ಯಾಳಿಗಿ ಏರ್‍ಯಾಳ ದೇವ ।
ಅಳುತ ಮ್ಯಾಳಿಗಿ ಏರ್‍ಯಾಳ ಅಕ್ಕನಾಗಮ್ಮ ।
ನಮ್ಮ ಪುರುಷ ನಮಗ್ಯಾಂಗ ದೊರದಾನ ದೇವ ।
ಶೆಟ್ಟಿ ಸಾವ್ಕಾರ ಮಗ ಬಾವಿ ನೀರಿಗೆ ಬಂದು
ಮಡದಳುವ ಶಬುದ ಕೇಳ್ಯಾರಲ್ಲ ದೇವ ।
ನನ್ನ ಮದವಿಯ ಆಗಿ ಹನ್ನೆರಡು ವರುಷನಾಯ್ತು
ಇಂದ್ಯಾಕ ಸತಿಯಳ ನನ್ನ ನೆನಪ ದೇವ ।
ಇಂದ್ಯಾಕ ಸತಿಯಳ ನನ್ನ ನೆನಪ ಕೇಳಿದರ
ಬಂದೋಗರಿ ನಮ್ಮ ಮನಿಗರ ದೇವ ।
ಬಂದಾನೆ ಹೋಗರೆಂತ ಮನಿಗಾರೆ ಹೇಳಿದಾಳೆ
ತಂದೀಗ ಕೇಳ ಮನಿಯಾಗ ದೇವ ।
ತಂದೀಗ ಕೇಳ ಮನಿಯಾಗ ಸವ್ಕಾರ ಮಗ
ಬರತೀನಂತವರು ಹೇಳಿದಾರ ದೇವ ।

ಪುರುಷಾಡೋ ನುಡಿಯವ ಕೇಳಿ ಮನಸಿಗಿ ಹರುಷವ ತಾಳಿ
ನಗುತ ಮ್ಯಾಳಿಗಿ ಇಳದಾಳ ದೇವ

ನಗುತಾನೆ ಮ್ಯಾಳಿಗಿ ಇಳದಾಳ ನಾಗಮ್ಮ
ಹೊರಗಿರ ತಂದೀನ ಕರದಾಳ ದೇವ ।
ತಾಯಿ ತಂದೀನ ಕರದು ಹೇಳುತಾಳಕ್ಕನಾಗಮ್ಮ
ಕದ್ದುಡಿ ತುಂಬಿ ಕುಡರೆಂದ ದೇವ
ಸೋಬಾನ ಕಾರಣ ಮಾಡರಿ ದೇವ ।
ಮಗಳಾಡ ನುಡಿಯವ ಕೇಳಿ ತಂದಿ ಗಾಬರ್ಯಾಗಿ
ಹಿಂತ ಮಾತ್ಯಾಕೆ ಎನ್ನ ಮಗಳೆ ದೇವ ।
ಹಿಂತ ಮತ್ಯಾಕೆ ಎನ್ನ ಮಗಳೆ ಅಕ್ಕನಾಗಮ್ಮ
ಅವಮಾನಾಯ್ತಲ್ಲೆ ಜನದಾಗೆ ದೇವ ।
ಕದ್ದನೆ ಉಡಿ ತುಂಬಿ ಕುಡರೆಂತ ಹೇಳಿದಾಳೆ
ಯಾಕಾಗಲಂತ ಹೇಳಿದಾರ ದೇವ ।
ಎರಡ ಬಾಗಿಲ ಮುಚ್ಚಿ ನಾಲ್ಕು ಕಿಡಕಿ ಮುಚ್ಚಿ
ಕದ್ದುಡಿ ತುಂಬಿ ಕೊಟ್ಟಿದಾರ ದೇವ ।
ಕದ್ದುಡಿ ತುಂಬಿ ಕೊಟ್ಟಿದಾರ ನಾಗಮ್ಮನ
ನಡುಮನಿ ಸೆಳಮಂಚ ಎಳದಾರ ದೇವ ।

ಮುಟ್ಟಾದ ಮೂರ ತಿಂಗಳಿಗಿ ಮಾರಿಲಿಟ್ಟಾವರಿ ಹಸರ
ಹೋಗ್ಯಾಳ ತಮ್ಮ ಮನಿಗರ ದೇವ ।
ತನ್ನನೆ ಮನಿಗ ಹೋಗ್ಯಾಳ ನಾಗಮ್ಮ
ಅತ್ತಿ ಪಾದಕ್ಕೆ ಶರಣಂದ ದೇವ ।
ಅತ್ತೀನೆ ಪಾದಕ ಶರಣಂದ ನಾಗಮ್ಮ
ಮಾವನ ಪಾದಕ ವಂದನೆ ದೇವ ।
ಮಾರಿ ಆಗ್ಯಾದ ಹಸರ ಯಾರಿಗಾಗಿದೆ ಬಸರ
ಖರೆ ಹೇಳಿ ಬಾರೆ ಮನಿಯಾಗ ದೇವ ।
ಯಾರ ಮಾಡಿದ ಬಸರ ಯಾರ ಹೆಸರ ಹೇಳತಿ
ಹೆಸರ್ಹೇಳಿ ದುಡ್ಡ ತಗಿನಡಿಯೇ ದೇವ ।
ಗಂಡ ಮಾಡಿದ ಬಸರ ನನಗ್ಯಾತರ ನಾಚಿಕಿ
ಹೆಸರ್ಹೇಳಿ ದುಡ್ಡ ತಗಿತೀನೆ ದೇವ ।
ಒಲಿಮ್ಯಾಲ ಹಂಚಿಟ್ಟು ಅದರಾಗ ಎಣ್ಣಿ ಹಾಕಿ
ಎಣ್ಯಾನ ದುಡ್ಡ ತಗಿ ನಡಿಯ ದೇವ ।
ಗಂಡ ಮಾಡಿದ ಪಾಪ ಇಂದಿಗಿ ಹೊರಗಾಯ್ತು
ಇರಬಾರದು ನಾನು ಮರ್ತ್ಯದೊಳಗ ದೇವ ।
ಇರಬಾರದು ನಾನು ಮರ್ತ್ಯದೊಳಗ ಜನರೆ

ಗಂಡನ ಹೊರತ ಬೇರಿಲ್ಲ ದೇವ ।
ಗಂಡನ ಹೊರತ ಬೇರಿಲ್ಲ ಜನರೆಂದು
ಶಿವ ಶಿವ ಅಂದು ಕೈ ಹಾಕಿ ದೇವ ।
ಕೈಹಾಕಿ ದುಡ್ಡ ತಗುದಾಳ ಅಕ್ಕನಾಗಮ್ಮ
ಮುತ್ತೈದಿ ಬೆರಳ ಸುಡಲಿಲ್ಲ ದೇವ ।

ಬಸುರ್ಹಣತಿ ನಾಗಮ್ಮ ಉಸುರೆಂದೆನು ಜನದಾಗ
ಉಸುರೆಂದೆನು ಬಾಲಿ ಜನದಾಗ ದೇವ ।
ಉಸುರೆಂದೆನು ಬಾಲಿ ಜನದಾಗ ಅಕ್ಕನಾಗಮ್ಮ
ನಿಂದೆ ಆಡಿದವರ ಮನಿ ಸುಟ್ಟು ದೇವ ।
ನಿಂದೆನ ಆಡಿದವರ ಮನಿಸುಟ್ಟು ಅಕ್ಕನಾಗಮ್ಮ
ಹಿಂದೆ ಆಡಿದವರ ಮನಸುಟ್ಟು ದೇವ ।
ಕಟ್ಟಿ ಮ್ಯಾಲ ಕುಂತ ಸೆಟ್ಟೀನೆ ಸವ್ಕಾರ
ಎದ್ದು ಬಂದು ಸೊಸಿಯ ಕೈಯ ಮುಗದು ದೇವ ।
ಎದ್ದುನೆ ಬಂದು ಸವ್ಕಾರ ಸೊಸಿಗೆ ಕೈಯ ಮುಗದು
ಶಲ್ಯಾ ಮರಿಮಾಡಿ ಕರದೊಯ್ದು ದೇವ ।
ಶಲ್ಯಾ ಮರಿಮಾಡಿ ಕರದೊಯ್ದು ಸವ್ಕಾರ
ತೂಗ ಮಂಚದಲಿ ಇಟ್ಟಾರೊ ದೇವ ।
ಒಳಗಿದ್ದ ಸವ್ಕಾರ ಮಗ ಎದ್ದು ಹೊರೆಯಾಕೆ ಬಂದು
ಮಡದೀಗಿ ನೋಡಿ ದುಃಖ ಮಾಡಿ ದೇವ ।
ಮಡದೀಗಿ ನೋಡಿ ದುಃಖ ಮಾಡಿ ಸವ್ಕಾರ ಮಗ
ಉಸರೆಂದೆನು ಬಾಲಿ ಪುರುಷಗ ದೇವ ।
ಉಸರೆಂದನು ಬಾಲಿ ಪುರುಷಗ ಸತಿಯಳ
ಕಳಕಳಂದೇನ ಜನರೀಗಿ ದೇವ ।
ಮಗ ಅಳುವ ಶಬ್ದವ ಕೇಳಿ ತಂದಿಯು ಒಳಿಯಕೆ ಬಂದು
ದುಃಖ ಯಾತಕ್ಕೆ ಎನ್ನ ಬಾಲ ದೇವ ।
ದುಃಖ ಯಾತಕ್ಕೆ ಎನ್ನ ಬಾಲ ನಿಮ್ಮಗ
ಕಂದನ ಕಾಣೋ ದೊರಿಮಗನೆ ದೇವ ।

– ಶ್ರೀಮತಿ ಸರೂಬಾಯಿ ಶಾಬಾದಿ

***

ಚನ್ನಬಸವಣ್ಣನ ಕಥೆಯ ಕೇಳರೆಂದು

ಅಣ್ಣ ಬಸವಣ್ಣನ ಕಥೆಯ ಕೇಳರೆಂದು
ಬಾಗಿಲದಾಗೆ ಬಂದು ನಿಲನಿಂತೆ ಕೋಲೆ
ಬಾಗಿಲದಾಗೇನ ಬಂದು ನಿಲನಿಂತೆ ಅವ್ವಗೊಳಿರೆ
ಬಾವಲಿ ಜಲಮಾಕ ಜಯ ಜಯ ಕೋಲೆ ॥ ೧ ॥

ಅಣ್ಣ ಬಸವಣ್ಣನ ಕಥೆಯ ಕೇಳರೆಂದು
ಅಂಗಳದಾಗೆ ಬಂದು ನಿಲನಿಂತೆ ಕೋಲೆ
ಅಂಗಳದಾಗಣ್ಣ ಬಂದು ನಿಲನಿಂತ ಅವ್ವಗೊಳಿರೆ
ಬಾವಲಿ ಜಲಮಾಕ ಜಯ ಜಯ ಕೋಲೆ ॥ ೨ ॥

ಅಣ್ಣ ಬಸವಣ್ಣಗ ಮಕ್ಕಳ ಫಲವಿಲ್ಲೇಂದು
ಮತ್ತಾ ಹನ್ನೆರಡು ವರುಷ ತಪಸ್ಯೇಯ ಕೋಲೆ
ಮತ್ತಾನೇ ಹನ್ನೇಡೋರುಷ ತಪಸ್ಯೇಯ ಮಾಡಿದರ
ಬಾಲನ ಸಂತಾನ ನಿಮಗಿಲ್ಲ ಕೋಲೆ ॥ ೩ ॥

ಅಣ್ಣ ಬಸವಣ್ಣಗ ಮಕ್ಕಳ ಫಲವಿಲ್ಲೆಂದು
ಮತ್ತಾ ಇಪ್ಪತ್ತೊರುಷ ತಪಸ್ಯೇಯ ಕೋಲೆ
ಮತ್ತಾನೋ ಇಪ್ಪತ್ತೋರುಷ ತಪಸ್ಯೇಯ ಮಾಡಿದರಾ
ಪುತ್ರನ ಸಂತಾನ ನಿಮಗಿಲ್ಲ ಕೋಲೆ ॥ ೪ ॥

ಕೆರೆಯ ಪಾಳ್ಯಾದು ಮ್ಯಾಲ ಇರುವಿನ ಸಾಲು ಹತ್ತಿ
ಇರುವಿಗೆ ಸಕ್ಕರಿ ಧರಸ್ಯಾರೇ ಕೋಲೆ
ಇರುವಿಗಿ ಸಕ್ಕರಿ ಧರಿಸ್ಯಾರೇ ಸರಸರ
ಶೆಲ್ಯಾದ ಪದರಲ್ಲಿ ಕಟ್ಟಿಕೊಂಡೆ ಕೋಲೆ ॥ ೫ ॥

ಅಂಗಿ ಮುಂಡಸಿ ತೆಗೆದು ತಂಗಿ ಕೈಯಲ್ಲಿ ಕೊಟ್ಟು
ಮಡದಿಗೆ ನೀರ ಬೆರಸಂದ ಕೋಲೆ
ಹಣ್ಣು ತಂದೀದಣ್ಣಲ್ಲ ಚಿನ್ನ ತಂದೀದಣ್ಣಲ್ಲ
ಇದು ಏನಾ ತಂದಾರೆ ಬಸವಣ್ಣ ಕೋಲೆ ॥ ೬ ॥

ಅಂಗುಳದಾಗ ನಿಂತಾಳೆ ಅಂಗ್ಯೆಯಾಗ ಹಾಕೊಂಡಾಳೇ

ಲಿಂಗಕ ಪೂಜೆ ಮಾಡಿ ಸಲ್ಲಸ್ಯಾಳೆ ಕೋಲೆ
ಲಿಂಗಕಪೂಜೆ ಮಾಡಿ ಸಲ್ಲುಸಿದ ಕಾರಣದಿಂದ
ನಾಗಮ್ಮಗ ಗರ್ಭ ಮೂಡಿದಾವೆ ಕೋಲೆ ॥ ೭ ॥

ಒಂದೆಂಬ ದಿನದಲ್ಲಿ ಒಂದೇ ತಿಂಗಳನಾಗಿ
ಒಂದರಗೇನ ಬಗಸ್ಯಾಳೇ ಕೋಲೆ
ಒಂದರಗೇನ ಬಗುಸ್ಯಾಳೇ ನಾಗಮ್ಮ
ಒಂದೆಲೆ ಒಡಿಯ ಎಳೆಯ ಮಾಯಿ ಕೋಲೆ ॥ ೮ ॥
ಒಂದೇ ಎಲೆ ಒಡಿಯ ಎಳಿಯಮಾಯಿ ತಿನ್ನಬೇಕಂತ
ಅಣ್ಣ ನನ್ನ ಜೀವ ಬಗುಸ್ಯಾವೆ ಕೋಲೆ ॥ ೯ ॥

ಎರಡೆಂಬ ದಿನದಲ್ಲಿ ಎರಡೇ ತಿಂಗಳಾಗಿ
ಎಡ್ಡರಾಗೇನ ಬಗುಸ್ಯಾಳೆ ಕೋಲೆ
ಎರಡರಾಗೇನ ಬಗುಸ್ಯಾಳೇ ನಾಗಮ್ಮ
ಕಡ್ಡಿಯ ಬಳಿಯ ಕೈಯಾ ತುಂಬ ಕೋಲೆ ॥ ೧೦ ॥

ಕಡ್ಡಿಯ ಬಳಿಯ ಕೈಯಾ ತುಂಬ ಇಡಬೇಕಂತ
ಅಣ್ಣ ನನ್ನ ಜೀವ ಬಗುಸ್ಯಾವೋ ಕೋಲೆ
ಅಣ್ಣನೇ ನನ್ನ ಜೀವ ಬಗುಸ್ಯಾವೋ ಬಸವಣ್ಣ
ಉಣವಲ್ದೇ ಮೊದಲ ತರ ಹೋಗೋ ಕೋಲೆ ॥ ೧೧ ॥

ಮೂರೆಂಬ ದಿನದಲ್ಲಿ ಮೂರೇ ತಿಂಗಳನಾಗಿ
ಮುರರಾಗೇನ ಬಗುಸ್ಯಾಳೇ ಕೋಲೆ
ಮುರರಾಗೇನ ಬಗುಸ್ಯಾಳೇ ನಾಗಮ್ಮ
ಮೂಡಲ ಹರಿಯ ತಿಳಿಯ ನೀರ ಕೋಲೆ ॥ ೧೨ ॥

ಮೂಡಲ ಹರಿಯ ತಿಳಿ ನೀರ ಕುಡಿಬೇಕಂತ
ಅಣ್ಣ ನನ್ನ ಜೀವ ಬಗುಸ್ಯಾವೋ ಕೋಲೆ
ಅಣ್ಣನೇ ನನ್ನ ಜೀವ ಬಗುಸ್ಯಾವೋ ಬಸವಣ್ಣ
ಉಣವಲ್ದೇ ಮೊದಲ ತರ ಹೋಗೋ ಕೋಲೆ ॥ ೧೩ ॥

ನಾಕೆಂಬ ದಿನದಲ್ಲಿ ನಾಕೇ ತಿಂಗಳಾಗಿ
ನಾರಾಗೇಗೀನ ಬಗಸ್ಯಾಳೇ ಕೋಲೆ
ನಾಕರಾಗೇನ ಏನ ಬಗಸ್ಯಾಳೇ ನಾಗಮ್ಮ

ಕಕ್ಕೇನ ಹಣ್ಣಾ ಕೈಯಾ ತುಂಬ ಕೋಲೆ ॥ ೧೪ ॥

ಕಕ್ಕೇನ ಹಣ್ಣಾ ಎನ್ನಾ ಕೈಯ ತುಂಬ ಮುಡಿಬೇಕಂತ
ಅಣ್ಣ ನನ್ನ ಜೀವ ಬಗುಸ್ಯಾವೋ ಕೋಲೆ
ಅಣ್ಣನೇ ನನ್ನ ಜೀವ ಬಗುಸ್ಯಾವೋ ಬಸವಣ್ಣ
ಉಣವಲ್ದೇ ಮೊದಲ ತರ ಹೋಗೋ ಕೋಲೆ ॥ ೧೫ ॥

ಐದೆಂಬ ದಿನದಲ್ಲಿ ಐದೇ ತಿಂಗಳಾಗಿ
ಐದರಾಗೇನ ಬಗುಸ್ಯಾಳೇ ಕೋಲೆ
ಐದರಾಗೇನ ಏನ ಬಗುಸ್ಯಾಳೇ ನಾಗಮ್ಮ
ಕೊಯ್ದು ಮಲ್ಲಿಗಿ ನೆನದಂಡಿ ಕೋಲೆ ॥ ೧೬ ॥

ಕೊಯ್ದಿನೆ ಮಲ್ಲಿಗಿ ನೆನದಂಡಿ ಮುಡಿಬೇಕಂತ
ಅಣ್ಣ ನನ್ನ ಜೀವ ಬಗುಸ್ಯಾವೋ ಕೋಲೆ
ಅಣ್ಣನೇ ನನ್ನ ಜೀವ ಬಗುಸ್ಯಾವೋ ಬಸವಣ್ಣ
ಉಣವಲ್ದೇ ಮೊದಲ ತರ ಹೋಗೊ ಕೋಲೆ ॥ ೧೭ ॥

ಆರೆಂಬ ದಿನದಲ್ಲಿ ಆರೇ ತಿಂಗಳಾಗಿ
ಆರರಾಗೇನ ಬಗುಸ್ಯಾಳೇ ಕೋಲೆ
ಆರರಾಗೇನ ಬಗುಸ್ಯಾಳೇ ನಾಗಮ್ಮ
ಹಾರಕ್ಕಿನ ಬಾನ ಕನೆ ಮೊಸರೇ ಕೋಲೆ ॥ ೧೮ ॥

ಹಾರಕ್ಕಿನ ಬಾನಾ ಕೆನಿ ಮೊಸರಾ ಉಣಬೇಕಂತ
ಅಣ್ಣ ನನ್ನ ಜೀವ ಬಗುಸ್ಯಾವೋ ಕೋಲೆ
ಅಣ್ಣನೇ ನನ್ನ ಜೀವ ಬಗುಸ್ಯಾವೋ ಬಸವಣ್ಣ
ಉಣವಲ್ದೇ ಮೊದಲು ತರ ಹೋಗೋ ಕೋಲೆ ॥ ೧೯ ॥

ಏಳೆಂಬ ದಿನದಲ್ಲಿ ಏಳೇ ತಿಂಗಳಾಗಿ
ಏಳರಾಗೇನ ಬಗುಸ್ಯಾಳೆ ಕೋಲೆ
ಏಳರಾಗೇನ ಏನ ಬಗುಸ್ಯಾಳೆ ನಾಗಮ್ಮ
ಹೇಳಕಿ ಪತ್ತಳ ನೆನದಂಡಿ ಕೋಲೆ ॥ ೨೦ ॥

ಹೇಳಕಿ ಪತ್ತಳ ನೆನದಂಡಿ ಮುಡಿಬೇಕಂತ

ಅಣ್ಣ ನನ್ನ ಜೀವ ಬಗುಸ್ಯಾವೋ ಕೋಲೆ
ಅಣ್ಣ ನನ್ನ ಜೀವ ಬಗುಸ್ಯಾವೋ ಬಸವಣ್ಣ
ಉಣವಲ್ದೆ ಮೊದಲ ತರ ಹೋಗೋ ಕೋಲೆ ॥ ೨೧ ॥

ಎಂಟೆಂಬ ದಿನದಲ್ಲಿ ಎಂಟೇ ತಿಮಗಳಾಗಿ
ಎಂಟರಗೀನ ಬಗಸ್ಯಾಳೇ ಕೋಲೆ
ಎಂಟರಾಗೇನ ಬಗಸ್ಯಾಳೇ ನಾಗಮ್ಮ
ಕಂಟಿಲ್ಹೇರಕ್ಕಿ ಕೊಡ ತುಪ್ಪ ಕೋಲೆ ॥ ೨೨ ॥

ಕಂಟಲ ಹೇರಕ್ಕಿ ಕೊಡ ತುಪ್ಪ ಉಣಬೇಕಂತ
ಅಣ್ಣ ನನ್ನ ಜೀವ ಬಗುಸ್ಯಾವೋ ಕೋಲೆ
ಅಣ್ಣನೇ ನನ್ನ ಜೀವ ಬಗಸ್ಯಾವೋ ಬಸವಣ್ಣ
ಉಣವಲ್ದೆ ಮೊದಲ ತರ ಹೊಗೋ ಕೋಲೆ ॥ ೨೩ ॥

ದೊಡ್ಡ ಪಡಸಾಲಿದಾಗ ದೊಡ್ಡದೊಂದು ಕಲ್ಹಾಕಿ
ಅತ್ತಿಗಿದೇರು ಮದ್ದಾ ಅರದಾರೆ ಕೋಲೆ
ಅತ್ತೀಗಿದೇರು ಮದ್ದಾ ಅರಿಯುತಾ ಏನಂತಾರೆ
ಕೈ ಮೇಲೆ ಕೈ ಹುಡದೇ ನಗುತಾರೆ ಕೋಲೆ ॥ ೨೪ ॥

ಸಣ್ಣ ಪಡಸಾಲಿದಾಗ ಸಣ್ಣಾದೊಂದು ಕಲ್ಹಾಕಿ
ಅತ್ತೀಗಿದೇರೆ ಮದ್ದಾ ಅರದಾರೆ ಕೋಲೆ
ಅತ್ತೀಗಿದೇರು ಮದ್ದಾ ಅರಿಯುತಾ ಏನಂತಾರೆ
ತಂಗೀ ನಾಗಮ್ಮ ಬಸುರಾಗಿ ಕೋಲೆ ॥ ೨೫ ॥

ಅತ್ತಿಗಿದೇರು ಮದ್ದ ಅರದಾರ ನೆವ ಮಾಡಿ
ಅಕ್ಕನಾಗಮ್ಮನ ಕುಡಿಸಾರೆ । ಕೋಲೆ
ಮದ್ದು ಹಾಕುರ ಸಾಯವೊಳ್ಳು ಮರಿಹಾಕುರ ಸಾಯವೊಳ್ಳು
ಪುಟುವ ಕೊಟ್ಟಾಂಗ ಮೈ ಬಣ್ಣ । ಕೋಲೆ ॥ ೨೬ ॥

ಕೇರ್ಯಾಗಿನವದೇರೆ ಕೇರ್ಯಾಗಿನಕ್ಕದೇರೆ
ಕೇಳಿರಿ ನಮ್ಮನಿ ಹಗರಣ ಕೋಲೆ
ಕೇಳಿರಿ ನಮ್ಮನಿ ಹಗರಣ ಅವ್ವದೇರೆ
ತಂಗಿ ನಾಗಮ್ಮ ಬಸರಾಗಿ ಕೋಲೆ ॥ ೨೭ ॥

ಒಬ್ಬರು ಹೋಗಂದರ ಇಬ್ಬರು ಹೋಗ್ಯಾರೆ
ತಂದಾರ ಬಸವಣ್ಣಗ ಸಭೆದಾಗೆ ಕೋಲೆ
ತಂದಾರೆ ಬಸವಣ್ಣಗ ಸಭೆದಾಗ ಕೇಳುತಾರೆ
ತಂಗ್ಗಿ ಬಸರಾದ ಬಗಿ ಹೇಳೊ ಕೋಲೆ ॥ ೨೮ ॥

ಇಬ್ಬರು ಹೋಗಂದಾರ ನಾಕಮಂದಿ ಹೋಗ್ಯಾರೆ
ತಂದಾರ ನಾಗಮ್ಮಗ ಸಭೆದಾದ ಕೋಲೆ
ತಂದಾರ ನಾಗಮ್ಮಗ ಸಭೆದಾಗ ಕೇಳುತಾರ
ನೀನೆ ಬಸರಾದ ಬಗಿ ಹೇಳೆ ಕೋಲೆ ॥ ೨೯ ॥

ಅನ್ಯಾದಾಗಾನ್ನಿಲ್ಲ ಪುನ್ಯದಾಗಾನಿಲ್ಲ
ಲಿಂಗಕ್ಕ ಪೂಜೆ ಮಾಡಿ ನಾನೇ ಬಸರೆ ಕೋಲೆ ॥ ೩೦ ॥

ಕಡಾಯಿ ತಂದಾರೆ ಎಣ್ಯಾರ ಬರುಕ್ಯಾರೆ
ಅದುರಾಗ ಬಸವಣ್ಣಗ ನಿಲವಸಿ ಕೋಲೆ
ಅದುರಾಗ ಬಸವಣ್ಣಗ ನಿಲವಸಿ ಏನಂತಾರೆ
ನಿಂತ ರೈತುರದೆಲ್ಲಾ ತೆಲಿ ಉರಿಲಿ ಕೋಲೆ ॥ ೩೧ ॥

ಕಡಾಯಿ ತಂದಾರೆ ಎಣ್ಣಿಯ ಬರುಕ್ಯಾರೆ
ಅದುರಾಗ ನಾಗಮ್ಮಗ ನಿಲವಸಿ ಕೋಲೆ
ಅದುರಾಗ ನಾಗಮ್ಮಗ ನಿಲ್ಲಿಸಿ ಕೇಳುತ್ತಾರೆ
ನಿಂತ ನಾರೆರದೆಲ್ಲಾ ನಿಲಿ ಉರಿಲಿ ಕೋಲೆ ॥ ೩೨ ॥

ಬಾಯಿಲಿ ಬಂದಾರ ಬಾಯ್ಬಡಕಾನೆಂದಾರು
ಮತ್ತೇಲ್ಲಿಂದ ಬರುಲೆ ಹಡೆದಮ್ಮ ಕೋಲೆ
ಬೆನ್ನಿಲಿ ಬಂದಾರ ಬೆನ್ನ ಬಡಕನೆಂದಾರು
ಮತ್ತೇಲ್ಲಿಂದ ಬರುಲೆ ಹಡೆದಮ್ಮ ಕೋಲೆ ॥ ೩೩ ॥

ಕಿವಿಲಿ ಬಂದುರಾ ಕಿವುಡನಂದಾರು
ಮತ್ತೇಲ್ಲಿಂದ ಬರಲಿ ಹಡೆದಮ್ಮ ಕೋಲೆ
ಮತ್ತೇಲ್ಲಿಂದ ಬರಲಿ ಹಡೆದಮ್ಮನಂದರ
ಬಲಭುಜದಲಿಂದ ಭಿಡಿದು ಬಾರೋ ಕೋಲೆ ॥ ೩೪ ॥

ಸಂದುಕುದಾಗಿರುವವು ಬಿಳಿಯ ಪಟ್ಟಳಿ ಸೀರಿ
ಅವು ನಾಗಮ್ಮಗ ಉಡ ಕುಡರಿ ಕೋಲೆ ॥ ೩೫ ॥

ಹಸ್ಸೀರಿ ವೈಯಲಿ ಹಾದ್ಯಾಗ ಹರುವಲಿ
ಚಿಕ್ಕ ಚನ್ನಬಸವಣ್ಣ ಬದಕಿರಲಿ ಕೋಲೆ
ಚಿಕ್ಕನೇ ಚನ್ನಬಸವಣ್ಣ ಬದುಕಿದ್ದ ಕಾಲಕ್ಕ
ಇಂಥ ಏಸೋ ಸೀರಿ ಉಡುವೇನೆ ಕೋಲೆ ॥ ೩೬ ॥

ಡೆಬ್ಯಾಗ ಇರುವವು ಖೆಂಡಾದಂಥ ವಸ್ತ್ರ
ಅವು ನಾಗಮ್ಮಗ ಉಡ ಕುಡರಿ ಕೋಲೆ
ಅವೋಸ್ಟು ವೈಯಾಲಿ ಬೆಂಕ್ಯಾಗ ಭೀಟಲಿ
ಚಿಕ್ಕ ಚನ್ನಬಸವಣ್ಣ ಬದಕಿರಲಿ ಕೋಲೆ ॥ ೨೭ ॥

ಚಿಕ್ಕನೆ ಚನ್ನಬಸವಣ್ಣ ಬದಕಿದ್ದ ಕಾಲಕ್ಕ
ಇಂಥ ಏಟೋ ವಸ್ತ್ರ ಉಡವೇನೆ ಕೋಲೆ
ಕಲ್ಯಾಣನೆಂಬುದು ಕಟುಗೇರಿನಾಗಲಿ
ನಡಿ ಹೋಗರಿ ಮಗನೇ ಮಠಮಾನ್ಯ ಕೋಲೆ ॥ ೨೮ ॥

ಹಾಡಿದವ್ವನಕಿನ್ನ ಕೇಳಿದವ್ವಗೆ ಪುಣ್ಯಾ
ಧ್ವನಿ ಕೊಟ್ಟ ಅವ್ವಾಗ ಭಾಳ ಪುಣ್ಯ ಕೋಲೆ ॥ ೨೯ ॥

– ಶ್ರೀಮತಿ ಇಠಾಬಾಯಿ ಭೀಮಣ್ಣ ಹುಚ್ಚೇನೂರ
– ಶ್ರೀಮತಿ ತಂಗೆಮ್ಮ ಶರಣಪ್ಪ ವಾಡಿ,

***

ಕೆರಿಯ ಪಾಳ್ಯಾದ ಮ್ಯಾಲ

ಕೆರಿಯ ಪಾಳ್ಯಾದ ಮ್ಯಾಲ ಇರವಿನ ಸಾಲ್ಹತ್ತಿತ್ತ
ಕರಿಕೊಟ್ಟ ಪ್ರಸಾದ ಕಟ್ಟಿಕೊಂಡರ ಶಿವಾ .....
ಸಕ್ಕರಿ ಕೊಟ್ಟ ಪ್ರಸಾದ ಕಟ್ಟಿಕೊಂಡರ । ॥ ಪ ॥

ಅಂಗಿ ಮುಂಡಸಿ ತೆಗೆದು ತಂಗಿ ಕೈಯಲ್ಲಿ ಕೊಟ್ಟಾ
ಮಡದಿಗಿ ನೀರು ಬೆರಸಂದರ ಶಿವಾ ..... ।
ಕಾಯಿ ತಂದರ ನನ ಕೈಲಿ ಕಬ್ಬ ತಂದರ ನನಕೈಲಿ
ಇದು ಯಾಕ ನನ ಕೈಲಿ ಕುಡಂಗಿಲ್ಲ ಶಿವಾ ..... । ॥ ೧ ॥

ಮುಂಜಾನೆಳಿ ಎದ್ದಾಳ ಮಕಮಾರ್ಜನ ಮಾಡ್ಯಾಳ
ಲಿಂಗಕ್ಕ ತೋರಿ ಸಲಸ್ಯಾಳ ಶಿವಾ ..... ।
ಲಿಂಗಕ್ಕ ತೋರಿ ಸಲಸ್ಯಾಳ ಅಕ್ಕನಾಗಮ್ಮ
ಚನ್ನಬಸವಣ್ಣ ಮೂಡಿದಾರ ಶಿವಾ ..... । ॥ ೨ ॥

ಒಂದಿನನುವದು ಒಂದಾ ತಿಂಗಳನಾಗಿ
ಒಂದೇಲಿ ಒಡಿಯೇ ಏಳಿಮಾಯಿ ಶಿವಾ ..... ।
ಒಂದೇಲಿ ಒಡಿಯೇ ಎಳಿಮಾಯಿ ತಿನಬೇಕಂತ
ಅಕ್ಕನಾಗಮ್ಮ ಬಗಸ್ಯಾಳ ಶಿವಾ ..... । ॥ ೩ ॥

ಎಡದಿನನುವದು ಎರಡಾ ತಿಂಗಳನಾಗಿ
ಎರಡ್ಯಾಲಿ ಒಡಿಯೇ ಎಳ ಹುಣಚಿ ಶಿವಾ ..... ।
ಎರಡೆಲಿ ಒಡಿಯೇ ಎಳ ಹುಣಚಿ ತಿನಬೇಕಂತ
ಅಕ್ಕನಾಗಮ್ಮ ಬಗಸ್ಯಾಳ ಶಿವಾ ..... । ॥ ೪ ॥

ಮೂರ ದಿನನುವದು ಮೂರ ತಿಂಗಳನಾಗಿ
ಮೂಡಲಗರಿಯ ತಿಳಿನೀರ ಶಿವಾ ..... ।
ಮೂಡಲಗ ಹರಿಯ ತಿಳಿನೀರ ಮುಗಿಬೇಕಂತ
ಅಕ್ಕನಾಗಮ್ಮ ಬಗಸ್ಯಾಳ ಶಿವಾ ..... । ॥ ೫ ॥

ನಾಕದಿನನುವದು ನಾಕ ತಿಂಗಳನಾಗಿ
ಕಾಕಿಯ ಹಣ್ಣು ಕೈಯ ತುಂಬ ಶಿವಾ ..... ।
ಕಾಕಿಯ ಹಣ್ಣ ಕೈಯ ತುಂಬ ತಿನಬೇಕಂತ
ಅಕ್ಕ ನಾಗಮ್ಮ ಬಗಸ್ಯಾಳ ಶಿವಾ ..... । ॥ ೬ ॥

ಐದ ದಿನನುವದು ಐದ ತಿಂಗಳನಾಗಿ
ಕೊಯಿದ ಮಲ್ಲಿಗಿ ನೆನಿ ದಂಡಿ ಶಿವಾ ..... ।
ಕೊಯಿದನೀ ಮಲ್ಲಿಗಿ ನೆನಿದಂಡಿ ಮುಡಿಬೇಕಂತ
ಅಕ್ಕ ನಾಗಮ್ಮ ಬಗಸ್ಯಾಳ ಶಿವಾ ..... । ॥ ೭ ॥

ಆರ ದಿನನುವದು ಆರ ತಿಂಗಳನಾಗಿ
ಹಾರಕ್ಕಿನ ಬಾನ ಕೆನಿ ಮೊಸರ ಶಿವಾ ..... ।
ಹಾರಕ್ಕಿನ ಬಾನ ಕೆನಿ ಮೊಸರ ಉಣಬೇಕಂತ
ಅಕ್ಕನಾಗಮ್ಮ ಬಗಸ್ಯಾಳ ಶಿವಾ ..... । ॥ ೮ ॥

ಏಳ ದಿನನುವದು ಏಳ ತಿಂಗಳನಾಗಿ
ಎಳ ನೀರ ಕೈಯ ತುಂಬ ಶಿವಾ .... ।
ಎಳ ನೀರ ಕೈಯ ತುಂಬ ಕುಡಿಬೇಕಂತ
ಅಕ್ಕ ನಾಗಮ್ಮ ಬಗಸ್ಯಾಳ ಶಿವಾ ..... । ॥ ೯ ॥

ಎಂಟ ದಿನನುವದು ಎಂಟ ತಿಂಗಳನಾಗಿ
ಕಂಟಲದಕ್ಕಿ ಕೊಡ ತುಪ್ಪ ಶಿವಾ ..... ।
ಕಂಟಲದಕ್ಕಿ ಕೊಡ ತುಪ್ಪ ಉಣಬೇಕಂತ
ಅಕ್ಕನಾಗಮ್ಮ ಬಗಸ್ಯಾಳ ಶಿವಾ .... । ॥ ೧೦ ॥

ಒಂಬದಿನನುವದು ಒಂಬತ ತಿಂಗಳನಾಗಿ
ಬಾಣತಿಗ ಆಗಾವು ದಿನಗೋಳು ಶಿವಾ ..... । ॥ ೧೧ ॥

ಮ್ಯಾಲ ಕಡಿಂದ ಗಲ್ಲ್ಯಾಗ ಏಳ ಮಂದಿ ಜಂಗಮರು
ದೊಡ್ಡ ಮುಂಡಸಿ ಕಟತೀರೀ
ಶಿವಾ ದೊಡ್ಡ ಮಾತ ಹೇಳತೀರೀ
ನಿಮ ತಂಗಿ ಬಸುರಾದ ಬಗೀ ಹೇಳರಿ ಶಿವಾ .... ॥ ॥ ೧೨ ॥

ಮ್ಯಾಲ ಕಡಿಂದ ಗಲ್ಲ್ಯಾಗ ಏಳ ಮಂದಿ ಜಂಗಮರು
ಯಾರಿಗಿ ಬಸರಾದೆ ಎಲಾ ನಾಗ ಶಿವಾ ..... ।
ಹುಣಚಿಯ ಪಕ್ಕದೋಳು ಏಸೋರಿ ತಂದಾರ
ತಂದ ಬಿಚ್ಯಾರ ಕಟ್ಟಿ ಕಥೇರಿ ಮ್ಯಾಲ ಶಿವಾ .... । ॥ ೧೩ ॥

ಬಾಯಿಲಿ ಬಂದಾರ ಬಾಯಿ ಬಡಕನಂದಾರೆ
ಯಾಕಡಿಂದೇ ಬರಲಿ ಹಡದಮ್ಮ ಶಿವಾ .... ।
ಬೆನ್ನಿಲಿ ಬಂದಾರ ಬೆನ್ನ ಬಡಕೇನಂದಾರೆ
ಯಾಕಡಿಂದೇ ಬರಲಿ ಹಡದಮ್ಮ ಶಿವಾ ॥ ॥ ೧೪ ॥

ಎಡಗೈ ಜೋಳಿಗಿ ಬಲಗೈಯಾಗ ದಿಂಡಿಕೋಲ
ಬಲಭುಜದಿಂದೇ ಧಿಡಧೇ ನಿಂತಾರ ಶಿವಾ ... ।
ಕಲ್ಯಾಣನೆನುವದು ಕಟಗೇರಿ ನಾಗಾಲೋ
ನಡಿ ಹೋಗರಿ ಮಗನೇ ಮಠ ಮಾನ್ಯ ಶಿವಾ .... । ॥ ೧೫ ॥

– ಶ್ರೀಮತಿ ಪ್ರೇಮಾ ಕುಲಕರ್ಣಿ ಲಾಧಾ

***

ಅಣ್ಣ ಬಸವಣ್ಣನ ತಂಗಿ

ಅಣ್ಣ ಬಸವಣ್ಣ ತಂಗಿ ಅಕ್ಕನಾಗಮ್ಮ
ಚಿಕ್ಕ ಚನ್ನಬಸವನ ಹಡಿದು ಕೀರ್ತಿ ಪಡದಳಮ್ಮ ॥ ೧ ॥

ಸಂತ್ರ ಆರ್ಶಿವಾದಲಿಂದೇ ಬಂಜೇತನ ಹೋಯಿತಮ್ಮ
ಭಾಗ್ಯದ ಬಾನವನುಂಡು ಬಾಣಂತನ ವಾಯಿತಮ್ಮ ॥ ೨ ॥

ತೆತ್ತಿನ ಕೋಟಿ ದೇವತ್ರು ಬಂದು ನಿನ್ನ ತೊಟ್ಟಿಲ ತೂಗಿದರೆಮ್ಮ
ಚಿಕ್ಕ ಚನ್ನಬಸವನ ಹಡಿದು ಕೀರ್ತಿ ಪಡದಳಮ್ಮ ॥ ೩ ॥

ಅಂದು ಇಂದು ಹಿಂದಿನ ಮಾತ ಮುಂದ ಕೇಳರೆಮ್ಮ
ಓಂ ಶಿವ ಎಂಬೋ ಶಬ್ದ ತಿದ್ದಿ ತೀಡರೆಮ್ಮ ॥ ೪ ॥

ಓಂ ನಮಃ ಶಿವಾಯ ಎಂಬೋ ಮಂತ್ರವು ಕಲಿರೆಮ್ಮ
ಅಕ್ಕನಾಗಮ್ಮ ತಂಗಿ ಇದೇ ಪಾಠ ಕಲ್ತಾಳಮ್ಮ ॥ ೫ ॥

ಭಕ್ತ ಭವಿಗಿ ಸಿದ್ದಿ ಸಾಧನ ಯಾತಕ ಬೇಕಮ್ಮ
ಚಿಕ್ಕಚನ್ನಬಸವನ ಹಡಿದು ಕೀರ್ತಿ ಪಡದಳಮ್ಮ ॥ ೬ ॥

ಕೊಂಡೆಣ್ಣ ಮಿಂಚಣ್ಣ ಇಬ್ರೂ ಇದ್ರೋ ದುರ್ಜನ
ಬಿಜ್ಜಳಗ ಚಾಡಿ ಹೇಳಿ ಬೆಳಸ್ಯಾರ ಕಲಾಪನ ॥ ೭ ॥

ಗಂಡ ಇಲ್ದೇ ಗರ್ಭಿಣಿ ಆಗ್ಯಾಳ ಅಕ್ಕನಾಗಮ್ಮ
ನಿಮ್ಮ ರಾಜದೊಳಗ ಇದೇ ನ್ಯಾಯ ಏನರೆಮ್ಮ ॥ ೮ ॥

ಕೇಳಿ ಬಿಜ್ಜಳ ಅರಸ ಬೆಂಕಿ ಕೆಂಡಾ ಆಗ್ಯಾರಮ್ಮ
ಚಿಕ್ಕ ಚನ್ನಬಸವನ ಹಡಿದು ಕೀರ್ತಿ ಪಡದಳಮ್ಮ ॥ ೯ ॥

ಶಬ್ದ ಕೇಳಿ ಬಿಜ್ಜಳ ಅರಸ ಬಾ ಅಂದ ಬಸವಣ್ಣನ
ಅಕ್ಕ ನಾಗಮ್ಮನ ಗೋಳ ಕೇಳಿದಾರೋ ತಾನ ॥ ೧೦ ॥

ಬಸವೇಸೂರಂಗ ಅಂತಾರೋ ತಾನ ಯಾಕ್ರೀ ಅನುಮಾನ
ಪಾಪ ಮಾಡಿದವರಿಗೆ ಶಿಕ್ಷಾ ಆದ ನಮ್ಮ ಕಾನೂನ ॥ ೧೧ ॥

ಕರಸಿ ಕೇಳ್ರಿ ಅಂದ ತಂಗಿ ಅಕ್ಕನಾಗಮ್ಮನ
ಚಿಕ್ಕ ಚನ್ನಬಸವನ ಹಡಿದು ಕೀರ್ತಿ ಪಡದಳಮ್ಮ ॥ ೧೨ ॥

ಬಿಜ್ಜಳ ಅರಸ ಕರಸಿದಾನೋ ಅಕ್ಕ ನಾಗಮ್ಮನ
ಯಾರ ಗರ್ಭ ಹೇಳವ್ವ ನೀನು ಮಾಡಲ್ದೆ ಅನುಮಾನ ॥ ೧೩ ॥

ಅಕ್ಕ ನಾಗಮ್ಮ ಅಂತಾಳೋ ತಾನ ಬಿಜ್ಜಳರ ನೀ ಹೀನ
ಆದವನಿಗಿ ಕೇಳೋ ಆಗಿದು ನನಗೇನು ಖೂನಾ ॥ ೧೪ ॥

ಸತ್ಯ ಶರಣರ ವಾಣಿ ವಚನ ಕೇಳಿ ಬಿಜ್ಜಳ ತಾನ
ಚಿಕ್ಕ ಚನ್ನಬಸವನ ಹಡಿದು ಕೀರ್ತಿ ಪಡದಳಮ್ಮ ॥ ೧೫ ॥

ಹೊಟ್ಯಾನ ಕೂಸ ಮಾತಾಡಿ ಅಂತಾದ ಬಿಜ್ಜಳನ
ನಿನ್ನ ಸಲುವಾಗಿ ಮೂಡಿ ಬಂದೀನ ನಾನು ॥ ೧೬ ॥

ನಿನ್ನ ವಧ ಮಾಡೋವದಕ ಹುಟ್ಟೀನಿ ನಾನು
ಇಂದು ಇಲ್ಲ ನಾಳೇ ತಿಳಿದು ಬಿಡು ನನ್ನ ತಾಯಿನ ॥ ೧೭ ॥

ಸತ್ಯ ಶರಣರ ವಾಣಿ ವಚನ ಕೇಳಿ ಬಿಜ್ಜಳ ತಾನ
ಚಿಕ್ಕ ಚನ್ನ ಬಸವನ ಹಡೆದು ಕೀರ್ತಿ ಪಡದಳಮ್ಮ ॥ ೧೮ ॥

ಅಕ್ಕ ನಾಗಮ್ಮ ತಾಯಿ ಹಡದಾಳ ಇಂಥ ಮಗನ
ಹಿಂಥ ಮಗನ ಹಡಿದು ನೀವು ಪುಣ್ಯ ಪಡಿರೆಮ್ಮ ॥ ೧೯ ॥

ಅಕ್ಕ ತಂಗಿದೇರೆ ತಿಳೀರಿ ಭಕ್ತಿ ಬಸವಣ್ಣ
ಭಕ್ತಿ ವತ್ಸಲ ಹಾನ ಪರಶಿವ ಬಸವಣ್ಣ ॥ ೨೦ ॥

ಮುಡಬಿವೀಶ ಬಸವನ ದಾಸ ಆನಂದಯ್ಯ ತಾನ
ಚಿಕ್ಕ ಚನ್ನಬಸವನ ಹಡಿದು ಕೀರ್ತಿ ಪಡದಳಮ್ಮ ॥ ೨೧ ॥

– ಶ್ರೀ ಅಣ್ಣಾರಾವ ಮುಡಬಿ

***

ಚನ್ನಬಸವಣ್ಣನ ಜನನ

ಹನ್ನು ಹನ್ನೆಡ್ಡ ವರುಷ ತಪಶರಾ ಶರಣರು
ಇರವಿಗಿ ಸಕ್ಕರಿ ಮೆಯಶಾರ ಕೋಲ್ಯೆ
ಇರವಿಗಿ ಸಕ್ಕರಿ ಮೆಯಶಾರ ಶರಣರು
ಹೆಚ್ಚಾದ ಸಕ್ಕರಿ ಪದರಲ್ಲಿ ಕಟಕೊಂಡು
ಬಂದಾರ ಶರಣರು ಅರಮನಿಗಿ ಕೋಲ್ಯೆ ॥ ೧ ॥

ಹಣ್ಣತರಲಾರದಣ್ಣ ಚಿನ್ನ ತರಲಾರದಣ್ಣ
ಏನ ತಂದಾನ ನಮ್ಮಣ್ಣ ಕೋಲ್ಯೆ
ಏನೇನ ತಂದಾನ ನಮ್ಮಣ್ಣ ನಾಗಮ್ಮ
ಲಿಂಗದ ಸಕ್ಕರಿ ಸಲಶ್ಯಾಳ ಕೋಲ್ಯೆ
ಲಿಂಗದ ಸಕ್ಕರಿ ಸಲಶ್ಯಾಳ ನಾಗಮ್ಮ
ತಂಗಿ ನಾಗಮ್ಮ ಬಸುರಾಗೆ ಕೋಲ್ಯೆ ॥ ೨ ॥

ಓಣ್ಯಾನ ಅವ್ವಗೊಳರೆ ಓಣ್ಯಾನ ಅಕ್ಕಗೊಳರೆ
ಕೇಳರಿ ನಮ್ಮ ಮನೆಯ ಹೊಸಸುದ್ದಿ ನಾಗಮ್ಮ
ತಂಗಿ ನಾಗಮ್ಮ ಬಸುರಾಗಿ ಕೋಲ್ಯೆ ॥ ೩ ॥

ಕಟ್ಟಿಗಿ ಕರುಶ್ಯಾರಾ ನಾಕಮಂದಿ ನೆರದಾರ
ಯಾರಿಗಿ ಬಸುರಾದೆ ನಾಗಮ್ಮ
ಅನ್ನೆದಾಗಿಲ್ಲ ಶಿವನೆ ಪುನ್ನೆದಾಗಿಲ್ಲ ಶಿವನೆ
ಕೈಲಾಸದ ಬಸುವ ತಾ ತಂದ ಕೋಲ್ಯೆ ॥ ೪ ॥

ಕಡಾಯಿ ಇಟ್ಟಾರ ಕಾಯ್ದೆಣ್ಣಿ ಬರಕ್ಯಾರ
ಅದರಾಗ ನಾಗಮ್ಮನ ನಿಲಿವ್ಯಾರ
ಅದರಾಗ ನಾಗಮ್ಮನ ನಿಲವುತ ಕೇಳ್ಯಾರ
ಯಾರಿಗಿ ಬಸುರಾದೆ ನಾಗಮ್ಮ ಕೋಲ್ಯೆ
ಅನ್ನೆದಾಗಿಲ್ಲ ಶಿವನೆ ಪುನ್ನೆದಾಗಿಲ್ಲ ಶಿವನೆ
ಕೈಲಾಸದ ಬಸುವ ತಾತಂದ ಕೋಲ್ಯೆ ॥ ೫ ॥

ಹೊಟ್ಟೀಲೆ ಬಂದಾರ ಹೊಟ್ಟಿ ಬಡಕನಂದಾರ
ಹ್ಯಾಂಗಿದೆ ಬರಲೆ ಹಡದವ್ವ ಕೋಲ್ಯೆ

ಬೆನ್ನೀಲೆ ಬಂದಾರ ಬೆನ್ನ ಬಡಕನಂದಾರ
ಹ್ಯಾಂಗಿದೆ ಬರಲೆ ಹಡದವ್ವ ಕೋಲ್ಯೆ ॥ ೬ ॥

ಮುಂಗೈ ಜೋಳಗಿ ಹಾಕಿ ಬಲಗೈ ಬೆತ್ತವ ಹಿಡಿದು
ಸಿಟ್ಟಿಗೇರಿ ಚನ್ನಬಸವ ಸಿಡಿದಬಿದ್ದ ಕೋಲೆನ್ನ ಕೋಲ್ಯೆ
ಮುಂದ ಮುಂದ ಶರಣರು ಹಿಂದಿಂದ ನಾಗಮ್ಮ
ನಟ್ಟ ನಡಬರಕ ಚನ್ನಬಸವ
ನಟ್ಟ ನಡಬರಕ ಚನ್ನಬಸವ ಕರಕೊಂಡು
ಬಂದಾರ ಶರಣರು ಅರಮನೆಗೆ ಕೋಲ್ಯೆ
ಬಂದಾರ ಶರಣರು ಅರಮನಿ ಕಲ್ಯಾಣ
ಮಠಕಟ್ಟಿ ಮಾನೆ ಗಳಸ್ಯಾರ ಕೋಲ್ಯೆ ॥ ೭ ॥

–ಕೃತಿ: ಜಾನಪದ ಪರಿಮಳ

***

ಅಕ್ಕನಾಗಮ್ಮನ ಹಾಡು

ಅಪ್ಪ ಶರಣರಿಗಿ ಮಕ್ಕಳಿಲ್ಲ ಅಂತ ಕೋಲು ಕೋಲೆ
ಇಪ್ಪತ್ತೊಂದೊರುಸ ಪ್ರಭು ಜಯ । ಕೋಲೆ ॥ ॥ ೧ ॥

ಇಪ್ಪತ್ತೊಂದು ವರುಷ ಪ್ರಭುಜಯ ಮಾಡಿದರೆ ಕೋಲು ಕೋಲೆ
ಮಕ್ಕಳ ಸಂತಾನ ಜಯಜಯ ಕೋಲೆ ॥ ॥ ೨ ॥

ಮಕ್ಕಳು ಸಂತಾನ ಜಯಜಯ ಶರಣರೆ ಕೋಲು ಕೋಲೆ
ಇರವಿಗಿ ಸಕ್ಕರಿ ಸಲುಸ್ಯಾರೆ ಕೋಲೆ ॥ ॥ ೩ ॥

ಇರವೀಗಿ ಸಕ್ಕರಿ ಸಲುಸ್ಯಾರೆ ಶರಣರು ಕೋಲು ಕೋಲೆ
ಎಚ್ಚದ ಸಕ್ಕರೀ ಸೆಲ್ಲ್ಯಾ ಸೆರಗಿಗಿ ಕೋಲೆ ॥ ॥ ೪ ॥

ಎಚ್ಚದ ಸಕ್ಕರಿ ಸೆಲ್ಲ್ಯಾಸೆರಗಿಗಿ ಕಟಿಗೊಂಡು ಕೋಲು ಕೋಲೆ
ಬಂದರು ಶರಣರು ಅರಮನಿಗೆ ಕೋಲೆ ॥ ॥ ೫ ॥

ಈ ಸಕ್ಕರ್ಹಿಡಿಯಮ್ಮ ಮನೆಮಾರು ಸಾರುಸಮ್ಮ ಕೋಲು ಕೋಲೆ
ನಾಕೊಟ್ಟ ಸಕ್ಕರಿ ಸಲಸಮ್ಮ ಕೋಲೆ ॥ ॥ ೬ ॥

ಒಂದ ದಿನಂಬದು ಒಂದ ತಿಂಗಳಾನಾಗಿ ಕೋಲು ಕೋಲೆ
ಓಣ್ಯಾಗಳ ಮಂದ್ಯಾ ಗುಜುಗುಜು ಮಾತಾಡೆ ಕೋಲೆ ।
ಕೇರ್‍ಯಾಗಳ ಮಂದ್ಯಾ ಗುಜುಗುಜು ಮಾತಾಡೆ ಕೋಲೆ ॥ ॥ ೭ ॥

ನೀಲದುಂಗರಿಡತಿದ್ದಿ ನೀತಿನ್ಯಾಯ ಹೇಳತಿದ್ದಿ ಕೋಲು ಕೋಲೆ
ನಿಮ ತಂಗ್ಯಾರೀಗೆ ಬಸುರಾಗಿ ಕೋಲೆ ॥ ॥ ೮ ॥

ಡಬ್ಬೆಣ್ಣಿ ತರುಸ್ಯಾರೆ ಅಂಗಳಕ ಇಡುಸ್ಯಾನೆ ಕೋಲು ಕೋಲೆ
ಅಂಗುಳ ಕಡಾಯಿ ಹಚ್ಚುಸ್ಯಾನೆ ಕೋಲೆ ॥ ॥ ೯ ॥

ಅಂಗುಳ ಕಡಾಯಿ ಹಚ್ಚುಸ್ಯಾರೆ ಶರಣರು ಕೋಲು ಕೋಲೆ
ಅದುರಾಗ್ ಅಕುನಾಗುವ ನಿಂದ್ರುಸ್ಯಾರೆ ಕೋಲೆ ॥ ॥ ೧೦ ॥

ಅದುರಾಗ ಅಕುನಾಗ್ನ ನಿಂದ್ರುಸ್ಯಾರೆ ಶರಣರು ಕೋಲುಕೋಲೆ
ಸಿಡದು ಎಗುರ್‍ಯಾನೇ ಚೆನುಬಸವ ಕೋಲೆ ॥ ॥ ೧೧ ॥

ಹಿಂದಾಮುಂದಾಡವ್ನಿಗಿ ಇಂಬಾಡ ತುಳುದೇನೆ ಕೋಲು ಕೋಲೆ
ಮುಖದ ಮ್ಯಾಗಳ ಮೀಸೆ ತೆಗುಶ್ಯಾನೆ ಕೋಲೆ ॥ ॥ ೧೨ ॥

ಹಿಂದಾಮುಂದಾಡವ್ರಿಗಿ ಇಂಬಾಡ ತುಳುದೇನೆ ಕೋಲು ಕೋಲೆ
ಹಿಂದಾಲ ಸೆರಗ ಹಿಡುದೇನೆ ಕೋಲೆ ॥ ॥ ೧೩ ॥

– ಶ್ರೀಮತಿ ಪಾರ್ವತಿ ಸಿದ್ಧಪ್ಪ ಗುರ್ಜಲ್

***

ಚನ್ನಬಸವಣ್ಣ ಜೋಗುಳಪದ

ಜೋ ಜೋ ಶರಣ ಸತಿಯರು ಕೂಡಿ
ಜೋ ಎಂದು ಪಾಡಿರಿ ನಲಿನಲಿದಾಡಿ
ಶರಣೆ ನಾಗಮ್ಮನ ಮಗನ ಮುದ್ದಾಡಿ ॥ ಹೀಂಗ ॥
ಜೋಯೆಂದು ಪಾಡಿರಿ ಚೆನ್ನಬಸವನ ಕೊಂಡಾಡಿ ಜೋ ಜೋ ॥ ಪ ॥

ಶರಣ ಕಕ್ಕಯ್ಯನವರ ಪ್ರಸಾದವನು
ಎರಡಾರು ವರುಷ ಕಾಯ್ದುಕೊಂಡಿಹನೂ
ದೊರಕಲು ಮನದೊಳು ಹರುಷ ತಾಳಿದನೋ ॥ ಹೀಂಗ ॥
ಭರದಿಂದ ಕೈಕೊಂಡು ಬಂದ ಬಸವನೂ ಜೋ ಜೋ ॥ ೧ ॥

ಮಿಕ್ಕಾದ ಪ್ರಸಾದ ಬಸವಣ್ಣ ತಂದೂ
ಅಕ್ಕನಾಗಮ್ಮಗೆ ಕೊಟ್ಟಾನು ಬಂದೂ
ಪ್ರಾಸಾದ ಕಾಣುತ ಶಿವಶಿವ ಎಂದೂ ॥ ನಮ್ಮ ॥
ಮುಕ್ಕಣ್ಣ ಗತಿಯೆಂದು ಸಲಿಸಿದಳಂದೂ ಜೋ ಜೋ ॥ ೨ ॥

ಪ್ರಸಾದ ಸಲಿಸಲು ನಾಗಲಾಂಬಿಕೆಗೆ
ಸೂಸಲಾ ನಿಂತಿತು ಮಡಲೊಳಗಾಗೆ
ಆಸರಕೆ ಬ್ಯಾಸರಕೆ ಮನದೊಳುಗಾಗೆ ॥ ಹೀಂಗ ॥
ಮಾಸ ಮಾಸಕೆ ದೇಹ ಪಲ್ಲಟವಾಗೆ ಜೋ ಜೋ ॥ ೩ ॥

ಮಾಸ ಮಾಸಕೆ ಬಾಯಿ ಹೇಸಿಗಿ ದೋರಿ
ಒಂದು ಮತ್ತೊಂದಕ್ಕೆ ಮಾರಿ ಬಿಳಪೇರಿ
ಒಂದಂಬು ಮೂರಕ್ಕೆ ಎದೆಯು ಹಸರೇರಿ ॥ ಮುಂದೆ ॥
ಒಂದಂಬು ನಾಲ್ಕಕ್ಕೆ ಕಣ್ಣು ಒಳಸೇರಿ ಜೋ ಜೋ ॥ ೪ ॥

ಬಿಡದೈದು ಆರೇಳು ಮಾಸವೆಂಟಾಗಿ
ತೊಡೆ ತೋಳು ತುಂಬಂತ ಕುಚ ಕರ್ರಗಾಗಿ
ಒಡಲೆದ್ದು ನಾಭಿಯು ನಡೆಮಂದವಾಗೀ ॥ ನಮ್ಮಾ ॥
ಶರಣಿ ನಾಗಮ್ಮನ ನಡ ದೊಡ್ಡದಾಗೀ ಜೋ ಜೋ ॥ ೫ ॥

ಗಂಡನಿಲ್ಲದ ಬಾಲೆ ಬಸುರಾದಳೆಂದು
ಕೊಂಡಿ ಮಂಚಣ್ಣ ತಾ ಭರದಿಂದ ಬಂದೂ
ಬಿಜ್ಜಳರಾಯಾಗ್ಹೇಳಿದನಂದೂ ॥ ಕೇಳಿ ॥
ಒಡೆಯಾ ಬಿಜ್ಜಳ ಬೆಂಕಿ ಕಾರಿದನಂದೂ ಜೋ ಜೋ ॥ ೬ ॥

ನವಮಾಸ ತುಂಬಿತು ಬಿಜ್ಜಳರಾಯಾ
ತವಕಾದಿ ಕರಸಾರಿ ಅಕ್ಕನಾಗಾಯಿಯಾ
ಹವಣಿಸಿ ನೋಡಿರಿ ಇದೇನುಪಾಯ ॥ ಈಗ ॥
ಸವರಿಸಿ ಹೊಡಿಸಾರಿ ಕಿವಿ ಮೂಗು ಬಾಯಿ ಜೋ ಜೋ ॥ ೭ ॥

ಒಡೆಯಾ ಬಿಜ್ಜಳರಾಯನ ಸದರೀಗೆ ಬಂದೂ
ಅಕ್ಕನಾಗಾಯಿಯ ಮೂರ್ತ ಮಾಡಿದಳಂದೂ
ಒಡೆಯಾ ಬಿಜ್ಜಳರಾಯಾ ಕೇಳಿದನಂದೂ ॥ ನಿನ್ನ ॥
ಗರ್ಭದ ವಿವರವ ಪೇಳೆನ್ನ ಮುಂದ ಜೋ ಜೋ ॥ ೮ ॥

ಕನ್ಯೆ ನಾಗಾಯಿ ತನ್ನರಮನಿಗೆ ಬಂದೂ
ಲಿಂಗಯ್ಯ ಗತಿಯೆಂದು ಸ್ತುತಿಸೀದಳಂದೂ

ಸಂಗನ ಬಸವಯ್ಯಾ ಬೆಸನಾಗೋ ಬಂದೂ ॥ ನಮ್ಮ ॥
ಕಂದ ಚನ್ನಯ್ಯನು ಮಾತಾಡ್ಯಾನಂದೂ ಜೋ ಜೋ ॥ ೯ ॥

ಮಾನ್ಯ ಬಿಜ್ಜಳರಾಯಾ ಬಿಡು ನಿನ್ನ ಸಿಟ್ಟ
ಕನ್ಯೆಯ ಕರೆತಂದು ನಿಲಿಸುವುದು ಕೆಟ್ಟ
ಮನ್ನಿಸಿ ಕಳವೋ ನೀ ಸುಮ್ಮನೆ ಭ್ರಷ್ಟಾ ॥ ನಾನು ॥
ಬೆನ್ನೀಲೆ ಹುಟ್ಟೂವೆ ನೋಡಿನ್ನ ದುಷ್ಟಾ ಜೋ ಜೋ ॥ ೧೦ ॥

ಆಗ ಕೈ ಮುಗಿದಾನು ನಾಗಲಾಂಬಿಕೆಗೇ
ಬ್ಯಾಗನೆ ಉಡುಗರಿ ಕೊಳ್ಳುವೆ ನಿಮಗೆ
ತಡವ್ಯಾಕೆ ನಡೆಯಿರಿ ಮೊದಲಿದ್ದ ಬಳಿಗೆ ॥ ಆಗ ॥
ಸಾಗಿ ಹೋದಳೂ ತಾಯಿ ತಮ್ಮ ಅರಮನೆಗೆ ಜೋ ಜೋ ॥ ೧೧ ॥

ಪನ್ನೀರು ಜಳಕವಾ ಮಾಡಿಸಿದರಾಗ
ಪಟ್ಟವಳಿಯ ಸೀರಿ ಉಡಿಸೀದರಾಗ
ಪಟ್ಟಮಂಚಗಳನ್ನು ಹಾಕೀದರಾಗ ॥ ನಮ್ಮ ॥
ಅಕ್ಕನಾಗಾಯಿ ಮೂರ್ತ ಮಾಡಿದಳಾಗ ಜೋ ಜೋ ॥ ೧೨ ॥

ಕಸ್ತೂರಿ ಗಂಧೆಣ್ಣಿ ಪೂಸೀದರಾಗ
ಮುತ್ತೀನ ದಂಡೀಯಾ ಧರಿಸಿದರಾಗ
ಉತ್ತತ್ತಿ ಉಡಿಗಳಾ ತುಂಬೀದರಾಗಾ ॥ ನಮ್ಮ ॥
ಅಕ್ಕನಾಗಾಯಿಗ್ಹೂವ ಮುಡಿಸೀದರಾಗ ಜೋ ಜೋ ॥ ೧೩ ॥

ದಿನ ತುಂಬಿ ಹೊತ್ತು ಹೊತ್ತಿಗೆ ಬ್ಯಾನಿ ಬರುತಾ ।
ಮನಿಯನ್ನ ವನಿತೇರು ನಡಕೆ ಕೈ ಕೊಡುತಾ
ಘನವಾದ ಕರಗಳ ಬಾಯೋಳಗಿಡುತಾ ॥ ಆಗ ॥
ವಾರೀಗಿ ಗೆಳತೇರು ಕೈಹೊಡೆದು ನಗುತ ಜೋ ಜೋ ॥ ೧೪ ॥

ಆಲಸ್ಯವಿಲ್ಲೆಂದು ಬಾಲೇರ ನುಡಿಗೆ
ಬಾಲೆ ನೀ ಶೂಲಬಾರೆ ಬೆನ್ನಿಲೆ ಹಡಿಯೇ
ಸೂಲಗಿತ್ತಿಯೆ ನೀನು ಹೊರೆಯಕ್ಕೆ ನಡೆಯೇ ॥ ಬ್ಯಾಗ ॥
ಬಾಲೆಯ ಕಣ್ಣೀಗೆ ಪನ್ನೀರು ತೊಡಿಯೇ ಜೋ ಜೋ ॥ ೧೫ ॥

ಅಕ್ಕಯ್ಯಾ ಹಿಡಿಮಾರು ಕುಡುಗೋಲು ತನ್ನೇ
ಹೊಕ್ಕಳಾ ಹುರಿಗಳ ಕೊಯ್ಯೋನು ಬನ್ನೆ
ತಪ್ಪದಲೆ ಕದರು ಬೇವಿನ ಸೊಪ್ಪು ತನ್ನೇ ॥ ನಮ್ಮ ॥
ಚಿಕ್ಕ ಕಂದನ ಮೈತೊಳವೂನು ಬನ್ನೆ ಜೋ ಜೋ ॥ ೧೬ ॥

ನಾರಿಗೆ ಸಂಪಿಗಿ ಎಣ್ಣೆಯ ಪೂಸೀ
ನೀರನೆರೆದು ಪಟ್ಟಮಂಚವನ್ನಾಕೀ
ವಾರೀಗಿ ಗೆಳತೇರು ಬೆಂಕೀಯ ಕಾಸೀ ॥ ನಮ್ಮ ॥
ಧೀರ ಕಂದಯ್ಯನ ಮಗ್ಗಲೋಳಿರಿಸೀ ಜೋ ಜೋ ॥ ೧೭ ॥

ಜಂಗಮ ಕೂಡಲ ಸಂಗಮ ಬಂದೂ
ಮಂಕಳಾತ್ಮಗ ಲಿಂಗ ಧರಿಸಿದನಂದೂ
ಅಂಗದಿ ಭಸ್ಮ ರುದ್ರಾಕ್ಷಿಯ ತಂದೂ ॥ ನಮ್ಮ ॥
ಕೂಡಲ ಸಂಗಮಾ ತ್ವರದಿ ತಾ ಬಂದೂ ಜೋ ಜೋ ॥ ೧೮ ॥

ಪಶುಪತಿ ಶಿಶುವಿಗೆ ಹಸ್ತಾವನಿಟ್ಟು
ಮುದ್ದಾಡಿ ಆಗ ಚುಂಬನವ ಕೊಟ್ಟು
ಸತ್ಯವಾ ನಡೆಸೆಂದು ವರವನು ಕೊಟ್ಟು ॥ ನಮ್ಮ ॥
ಶಿವತಾನು ನಡಿದಾನು ಕಲ್ಯಾಣ ಬಿಟ್ಟು ಜೋ ಜೋ ॥ ೧೯ ॥

ಹಿಪ್ಪಲಿ ಕೊಬ್ಬರಿ ಲಾವಂಗ ಮೋಡಿ
ಒಪ್ಪುಳ್ಳ ಬಜೆಗಳ ಹೂಕಾಯಿ ಕೊಡಿ
ತಪ್ಪದಲೆ ಕಾಯಿ ಪತ್ತರಿ ಹದ ಮಾಡಿ ॥ ಆಗ ॥
ತುಪ್ಪದೊಳಗೆ ಕಾರಾ ಕೊಳ್ಳೆಂದು ನೀಡಿ ಜೋ ಜೋ ॥ ೨೦ ॥

ಚಿಕ್ಕ ಚೆನ್ನಬಸವಾ ಹುಟ್ಟೀದನೆಂದೂ
ಲೆಕ್ಕವಿಲ್ಲದ ಕಾಳೆ ಸಾರಿದಾವಂದೂ
ಅಕ್ಕರದಿಂದಲೇ ಶಿವಶರಣೇರುಬಂದೂ ॥ ಅವರು ॥
ಹೊಕ್ಕರು ಬಸವನ ಮಂದಿರಕಂದು ಜೋ ಜೋ ॥ ೨೧ ॥

ಕೋಳೂರು ಕೊಡಗೂಸು ದ್ವಾಸಿ ಪಿಡ್ಡವ್ವಾ
ಸೂಳಿ ಬಮ್ಮನದೇವಿ ಬಾಲೆ ನಿಂಬೆವ್ವಾ
ಚೋಳಕ್ಕ ಮಲುಹಾಣಿ ಮಾಯಿದೇವಕ್ಕಾ ॥ ಅವರು ॥
ಮೇಲಾದ ಶರಣೇರು ಬಂದರು ಬಾಗಿನಕ ಜೋ ಜೋ ॥ ೨೨ ॥

ಸತ್ಯಕ್ಕಾ ಜಂಗುಳಿ ಕದಿರ ರೆಮ್ಮೆವ್ವಾ
ಉತ್ತುಮ ಶಿವಯೋಗಿ ವೀರಸಂಗವ್ವಾ
ಸತ್ತ ಗಂಡನ ಪ್ರಾಣ ಪಡೆದ ಚೆನ್ನವ್ವಾ ॥ ಅವರು ॥
ಮುತ್ತೈದೆ ಶರಣೇರು ಬಂದರು ಬಾಗಿನಕ ಜೋ ಜೋ ॥ ೨೩ ॥

ಬಣ್ಣಾದ ತೊಟ್ಟಿಲಿಗೆ ರನ್ನದ ಹಗ್ಗಾ
ಸಣ್ಣ ಬಣ್ಣಗಳೆಲ್ಲ ಅಸಿಮೇಲಗಾಗೀ
ಕನ್ಯೆ ಮುತ್ತೈದೇರು ಕೈ ಬೀಸಿ ತೂಗಿ ॥ ನಮ್ಮ ॥
ಚೆನ್ನಬಸವ ಎಂದು ಹೆಸರಿಟ್ಟು ತೂಗಿ ಜೋ ಜೋ ॥ ೨೪ ॥

ಹೆಸರಿಟ್ಟು ಬಾಲೇರು ತೆರಳಿದರಾಗ
ಬಸವಣ್ಣ ನೀಲಮ್ಮ ಮಠದೊಳಗಾಗ
ಶಿಶುವಿನ ಸಲುವಂಥಾ ನಾಗಮ್ಮನೀಗ ॥ ಅವರೂ ॥
ಶಶಿಧರ ಗತಿಯೆಂದು ಇರುತಿರ್ದರಾಗ ಜೋ ಜೋ ॥ ೨೫ ॥

ಗುರು ಚೆನ್ನಬಸವೇಶನ ಜೋಗುಳ ಪದವಾ
ಚೆನ್ನಾಗಿ ಹರುಷದಿ ಕಿವಿಗೊಟ್ಟು ಕೇಳವ್ವಾ
ಜನರಿಗೆ ಕೊಡುವನು ಮಕ್ಕಳ ಫಲವಾ ॥ ನಮ್ಮ ॥
ಚೆನ್ನ ತುರುಬಿ ಗುಡ್ಡದ ಶಿವಲಿಂಗದೇವಾ ಜೋ ಜೋ ॥ ೨೫ ॥

– ಶ್ರೀಮತಿ ಸುಮಿತ್ರಾದೇವಿ ಅಂಗಡಿ,
– ಶ್ರೀ ಮಲ್ಲಪ್ಪ ಬಸಮ್ಮಪ್ಪ ಹುಲಿಮನಿ
– ಶ್ರೀಮತಿ ಮೋರಿಗೇರಿ ಪತ್ರೇವ್ವ

ಇದರ ಪ್ರತಿ: ಫ್ಲೀಟರು ಸಂಗ್ರಹಿಸಿದ ಲಾವಣಿಗಳು, ಪು.೯೧-೯೪

***

ಚೆನ್ನಬಸವಣ್ಣನ ಹಾಡು

ಯಾಳಿ ಯಾಳಿಗಿ ಬ್ಯಾನಿ ಭಾಳಾಗ್ಯಾವಂದ
ತಾಯಮ್ಮ ಈ ಬ್ಯಾನಿ ತಾಳಲಾರೆಂದು
ಹಡದ ತಾಯಿ ಮುಂದ ಹೇಳತಾಳ ಬಂದು
ಯವ್ವಾ। ಐದ್ಮಂದಿ ಗೆಳದೇವ್ರಿಗಿ ಹೇಳಿ ಬಾರಂದ ಜೋ ಜೋ ॥ ೧ ॥

ಐದ್ಮಂದಿ ಗೆಳದೇವ್ರು ಎಡಬಲ ಬಂದ
ಸಂದ್ಹಿಡದು ಹೋಗು ಬಸವ ಮುಂದಾಗಿಲ್ಲಂದ
ಪಿಡ್ಡವ್ವನ ಮನಿದಾರಿ ತೋರುಸುರಂದ
ಯವ್ವಾ । ಪಿಡ್ಡವ್ವನಂದಾ ಕರುದಾನ ನಿಂತ ಜೋ ಜೋ ॥ ೨ ॥

ಒಳಗಿದ್ದ ಪಿಡ್ಡವ್ವ ಹೊರಿಯಾಕ ಬಂದ
ಏನಪ್ಪ ಮೊಮ್ಮಗನೆ ನೀ ಬಂದಿದ್ದಂದು
ಎಳಿ ಬಾಳಿ ಸುಳಿಹಾಂಗೆ ಮರಿಬಾಡ್ಯಾವಂದ
ಹಿಂತಾ । ಕಷ್ಟೇಳು ಮೊಮ್ಮಗನಿಗ ನಾಗೆರುತೆನಂದ ಜೋ ಜೋ ॥ ३ ॥

ಯಾಳಿ ಯಾಳಿಗಿ ಬ್ಯಾನಿ ಭಾಳಾಗ್ಯಾವಂದ
ತಾಯಮ್ಮ ಈ ಬ್ಯಾನಿ ತಾಳಲಾರೆಂದು
ಹಡದ ತಾಯಿ ಮುಂದ ಹೇಳತಾಳ ಬಂದ
ಯವ್ವಾ । ಹತ್ತ್ಮಂದಿ ಗೆಳದೇವ್ರಿಗಿ ಹೇಳಿ ಬಾರಂದ ಜೋ ಜೋ ॥ ೪ ॥

ಹತ್ತಮಂದಿ ಗೆಳದೇವ್ರು ಎಡಬಲ ಬಂದ
ಸಂದ್ಹಿಡದು ಹೋಗು ಬಸವ ಮುಂದಾಗಿಲ್ಲಂದ
ಪಿಡ್ಡವ್ವನ ಮನಿದಾರಿ ತೋರುಸುರಂದ
ಯವ್ವಾ । ಪಿಡ್ಡವ್ವನಂದಾ ಕುರುದಾನ ನಿಂತ ಜೋ ಜೋ ॥ ೫ ॥

ಒಳಗಿದ್ದ ಪಿಡ್ಡವ್ವ ಹೊರಿಯಾಕ ಬಂದ
ಏನಪ್ಪ ಬಸ್ವರಾಜ ನೀ ಬಂದಿದ್ದಂದು
ಎಳಿ ಬಾಳಿ ಸುಳಿಹಂಗೆ ಮರಿ ಬಾಡ್ಯಾವಂದ
ಹಿಂತ ಕಷ್ಟೇಳು ಮೊಮ್ಮಗನಿಗ ನಾನೆರುತೆನಂದ ಜೋ ಜೋ ॥ ೬ ॥

ಮುಪ್ಪಿನ ಕಾಲಕ್ಕ ಬರದಿಲ್ಹೊಗಂಥ
ಎರ್ತದಿಂದಲೆ ಕಣ್ಣು ಕಾಣದಿಲ್ಲೆಂದು
ಮ್ಯಾಣಿಪನಾದುರೆ ಬರುತಿನೇಳಂದ
ಬಸುವಗ ಪಿಡ್ಡವ್ವ ಭಾಷಿ ಕೊಟ್ಟಾಳ ಜೋ ಜೋ
ಆಕೀ ಬಸುವಾಗ ಪಿಡ್ಡವ್ವ ಭಾಷಿ ಕೊಟ್ಟಾಳ ಜೋ ಜೋ ॥ ೭ ॥

ಹತ್ತಮಂದಿ ಗೆಳದೇವ್ರು ಮ್ಯಾಣ್ಯಾ ಹೊತಂದ
ಅದುರಾಗ ಡುಳ್ಳಿಪಿಡ್ಡವ್ವ ಕುಂತ
ನೆರಮನಿ ನಾಗವ್ವ ಎಡಬಲ ಬಂದ
ಯವ್ವಾ । ಅವರಿಬ್ಬರ್ಹೊಂಟರ ಬಸುವನ ಬಾಗುಣಕ ಜೋ ಜೋ ॥ ೮ ॥

ಹೊರಗಿದ್ದ ಪಿಡ್ಡವ್ವ ಒಳಿಯಾಕ ಹೋಗಿ
ಬ್ಯಾನೆ ನಿಲಂಕಾರ ನಿಂತ ನೋಡ್ಯಾಳ
ನೆರುಮನೆಗೆ ನಾಗವ್ವ ನೀ ನೋಡಂದಾಳ
ಯವ್ವಾ ! ನಮಗೇನ ಟಾವಿಕ ಇಂತ ಬ್ಯಾನಿಗಳ ಜೋ ಜೋ ॥ ೯ ॥

ಇಬ್ಬರ ಕೂಡಿ ನೆಡವಿ ಹೀಡೆಂದಳ
ಕಿರಿ ಜೆಡಿಗೋಳು ಬಾಯ್ ಒಳಗ ಕೊಡುರಂದಳು
ಐದ ಬೆರಳೀಗ್ಯೆದು ಹಾಕೆಂಡು ಕುಂತಳೊ
ಯಾವಾ ! ಹುಟ್ಟಿಬಂದಾನ ಚೆನ್ನಬಸವಣ್ಣ ಜೋ ಜೋ ॥ ೧೦ ॥

ಹಂಥಾದ್ದೇನು ಮಾಡಿದ್ದೆ ನಾನು
ಹಿಂಥಾ ಬ್ಯಾನ್ಯಾ ಹಾಕಿದ್ದೆ ನೀನು
ಮಕ್ಕಳು ಫಲಸಂತಾನ ಯಾರಿಗಿ ಬೇಕಂದು
ಯವಾ ! ಸರ್ವುರೊಳಗ ಬಂಜ್ಯಾಗಿರುತಿನೇಳಂದು ಜೋ ಜೋ ॥ ೧೧ ॥

ಕೊಡ್ಲಾರ್ದ ಶಿವನಾ ಕೊಟ್ಟಿದ್ದೇಳಂದಾ
ಕೊಟ್ಟಂತ ಪರಮಾತ್ಮ ಕಣತೆರ್ದನೋಡಂದ
ಕಡಿಗೆದರ ನಿನ್ನ್ಹೆಸರ ಇಡತಿನೇಳಂದ
ಯವಾ ! ಹಾಡಿ ಹೆಸರಿಟ್ಟಾಳ ಚೆನ್ನಬಸವಣ್ಣ ಜೋ ಜೋ ॥ ೧೨ ॥

– ಶ್ರೀಮತಿ ಗಂಗಮ್ಮ ಮೇತ್ರಿ ಹರಿಜನ

***

ಜೋಗುಳ ಹಾಡು

ಕಕ್ಕಯ್ಯನ ಮನಿಯಾಗ । ಮಿಕ್ಕುಂಡ ಪರಸಾದ ।
ಐದು ತಿಂಗಳ ನಾನು ಪಾಲಿಸಿದ ।
ಬಸರ ಆದುನಿಲ್ಲದ । ಸೆರಗ ಭೇದಿಸಿ ಮರಿ ಮಾಡಿ ।
ಆಗ ಸಲ್ಲಸ್ಯಾಳ ಅಕ್ಕನಾಗಮ್ಮ । ಜೋ ಜೋ ॥ ೧ ॥

ಕಕ್ಕಯ್ಯ ಮನಿಯಾಗ । ಮಿಕ್ಕುಂಡು ಪರಸಾದ ।
ಒಂಬತ್ತು ತಿಂಗಳ ನಾನು ಪಾಲಿಸಿದ ।
ಬಸರ ಆದುನಿಲ್ಲದ । ಸೆರಗ ಭೇದುಸಿ ಮರಿ ಮಾಡಿ ।
ಆಗ ಸಲ್ಲಿಸ್ಯಾಳ ತಾಯಿ ನಾಗಮ್ಮ ॥ ಜೋ ಜೋ ॥ ೨ ॥

ಎಲ್ಲರು ಒಂದಾಗಿ ದಂಡ ಕೂಚಾಗಿ ।
ದಂಡ ಆಳವನ ತಂಗಿ ಬಸರಾಗಿ ।
ಭವ ಮಂಡಲದೊಳು ಈ ಸುದ್ದಿ ।
ಗಂಡನಿಲ್ಲದ ಬಾಲಿ ಬಸರ್ಹಾಳನೆಂದೇ । ಜೋ ಜೋ ॥ ೩ ॥

ಬ್ಯಾನಿ ಎದ್ದಾದೆಂದು ನಾರಿ ತಾ ಕೂಗಿ ।
ಕೂಗಿ ಬೇಗದಲಿ ಕುಡಗೀಲ ತರಸಿ ।
ಕೂಗ ನಾರಿನೆಂಬೋ ಸೂಲಗಿತ್ತಿ ಕರಸಿ ।
ಚಂದ್ರಾಮನಂಥ ಕಂದ ಹಡದಾಳೆ । ಜೋ ಜೋ ॥ ೪ ॥

ದಾಸೀಗಿ ತಾ ಕರಿಸಿ । ಪಂಚಾಂಗವ ತೆಗೆಸಿ ।
ತುಂಬಿ ಇಟ್ಟಾರವ್ವ ಠಾಣ್ಯಾದೀವಿಗಿ ।
ಮಂದಿ ಮಕ್ಕಳ ಕರಿಸಿ । ಬಂದು ಬಳಗವ ಕರಿಸಿ ।
ಚಂದ್ರಾಮ ಹುಟ್ಟಿದ ದಿನಗಳು ತೆಗಸಿ । ಜೋ ಜೋ ॥ ೫ ॥

ಅಣ್ಣ ಕೊಟ್ಟಾನವ್ವ ಬಣ್ಣದ ತೊಟ್ಟಿಲ
ಸರಣಿ ಸುವ್ವಾರದಾಗ ಮೇಲ ।
ಹಾಸಿಗಿಯ ಮಾಡಿ ।
ತಂದು ಮಲಗಸ್ಯಾರ ತಂದಿ ಬಸವಗ । ಜೋ ಜೋ ॥ ೬ ॥

– ಶ್ರೀಮತಿ ಚೆನ್ನಮ್ಮ ಖಪಾಟೆ

***

ಕೇರಿ ಕೇರಿಗೊಂಟ ಏರಿತೋ ಮಟಗೇರಿ

ಕೇರಿ ಕೇರಿಗೊಂಟ ಏರಿತೋ ಮಟಗೇರಿ
ಸಾರಿ ನಾಗಾರಿ ಶಂಕರರಾಯ ಜೋ ಜೋ ।

ಕಕ್ಕೈನ ಮನಿದೋಳಾ ಮಿಕ್ಕುಂಡು ಪ್ರಸಾದ
ಅಕ್ಕನಾಗಮ್ಮ ಸಲಾಸ್ಯಾಳೇ ಜೋ ಜೋ ।

ಕೊಂಡಿಯ ಮಂಚಣ್ಣ ಕಡಿಯಾಗಿ ಬರುವಾಗ
ಗಂಡನಿಲ್ಲದ ಬಾಲೆ ಗರಭಾಳೇ ಜೋ ಜೋ ।

ಹತ್ತು ಮಂದ್ಯಾಗ ಕೂಡವರು ಹತ್ತ ಮಾತನ್ಹೇಳುವರು
ಏನಿದು ಬಸವಣ್ಣ ಹೊಸ ಸುದ್ದಿ ಜೋ ಜೋ ।

ಏನಿದು ಬಸವಣ್ಣ ಹೊಸ ಸುದ್ದಿ ನಾಗಮ್ಮ
ಹಾದರಕ್ಕಾಗೆ ಗರಭಾಳೇ ಜೋ ಜೋ ।

ಕುಂತ್ತಿದ್ದ ಬಸವಣ್ಣ ಎದ್ದು ಒಳಯಕೆ ಬಂದ
ನಾಗಮ್ಮ ಇರುವದು ಸಲವಲ್ಲೇ ಜೋ ಜೋ ।

ಮೋಳಿಗಿ ಮಾರಯ್ಯ ಸಿಂಧು ಬಲ್ಲಾಳ ರಾಜ
ತೊಟ್ಟಿಲ ಬಾಗಿಣಕ ಬರಬೇಕೆ ಜೋ ಜೋ ।

ಬಂಗಾರ ಮನಿಯವರು ಬೆಳ್ಳಿ ಪಟ್ಟಣದವರು
ತೊಟ್ಟಿಲ ಬಾಗಿಣಕ ಬರಬೇಕೆ ಜೋ ಜೋ ।

ಕಪ್ಪುತ್ತೆ ಕಾಡಿಗಿ ಒಪ್ಪವೇ ಬಾಣತಿ
ಬಾಲನ ಹೆಸರು ಏನಿಡುಬೇಕೆ ಜೋ ಜೋ ।

ಬಾಲನ ಹೆಸರು ನಾ ಏನ ಹೇಳಲಿ
ಕರಡಿ ಬಸಪ್ಪನ ಬ್ಯಾಸಗಳೇ ಜೋ ಜೋ ।

ಕಲ್ಯಾಣ ಊರಾಗ ಬಸವ ರಾಜೇಂದ್ರ
ಬಸವಣ್ಣ ಹೇಳಿದು ಸಾಕ್ಷತ ಮಂತ್ರ ಜೋ ಜೋ ।

– ಶ್ರೀಮತಿ ಲಲಿತಾ ಲಾಧಾ

***

ಅಕ್ಕನಾಗಮ್ಮ

ಸುವ್ವಿಯೋ ನಮ್ಮ ದ್ಯಾವಾರು ದ್ಯಾವೋ ಸುವ್ವಿ ॥ಪ॥

ಬಸವಪ್ಪನೆಡತಿ ನೀಲ ಓಚಣಿತಾಯಿ
ಅಳ್ದೇಲುಟ್ಹೋದು ಅಲದೇಲೋ ಸುವ್ವಿ
ಅಳುದಲ್ಬೆಳುವ ಕೆಸುಂದಂಟನೆ ತಂದಿ
ತಾಳ್ದಾ ಮಾಡೀ ತಾಯಿ ಇರುಸಾಳೊ ಸುವ್ವಿ

ಮುಸುಗೆಲ್ಲುಟ್ಟೋದು ಮುಸುಗೆಲ್ಲಿ ಬೆಳಿಯೋದು
ಮುಸುಗಲ್ಲಿ ಬೆಳವ ಬದ್ನೆಕಾಯೋ ಸುವ್ವಿ
ಮುಸುಗಲ್ಲಿ ಬೆಳುವ ಬದ್ನೆಕಾಯನೆ ತಂದಿ
ತಾಳ್ದಾವ ಮಾಡಿ ತಾಯಿ ಇರುಸಾಳೋ ಸುವ್ವಿ

ಅಡ್ಡೇಲುಟ್ಟೋದು ಅಡ್ಡಲ್ಲಿ ಬೆಳೆಯೋದು
ಅಡ್ಡೇಲಿ ಇರುವ ಪಡ್ಡುಲುಕಾಯೊ ಸುವ್ವಿ
ಅಡ್ಡಲ್ಲಿ ಬೆಳುವ ಪಡ್ಡಲುಕಾಯನೆ ತಂದಿ
ತಾಳ್ದಾವ ಮಾಡಿ ತಾಯಿ ಇರುಸಾಳೊ ಸುವ್ವಿ

ಒಂದೆ ಕೊಲಗಕ್ಕಿ ಆಕಾಳೊ ನೀಲೋಚಣಿ
ಅಡುಗೇನೆ ಅವಳು ದುಡಿದಾಳೊ ಸುವ್ವಿ
ಒಂದಚ್ಚು ಬೆಲ್ಲ ತಂದಾಳೊ ನೀಲೋಚಣಿ
ಪಯ್ಸಾನೆ ಮಾಡಿ ಇರುಸಾಳೊ ಸುವ್ವಿ

ಪಯ್ಸಾನೆ ಮಾಡಿ ಇರುಸೀ ನೀಲೋಚಾಣಿ
ಅನ್ನೆರಡು ಕೋಟೀಯ ಸರಣಾರೊ ಸುವ್ವಿ

ಅನ್ನೆರಡು ಕೋಟಿ ಸರಣರಿಗೆ ನೀಲೋಚ್ಣಿ
ಊಟಾ ಬೋಜಣಿಯ ನೀಡುತಾಳೊ ಸುವ್ವಿ
ಊಟಾ ಬೋಜಣಿಯ ನೀಡಾಳೊ ನೀಲೋಚ್ಣಿ
ಅನ್ನೆರಡು ಕೋಟೀಯ ಸರಣರಿಗೆ ಸುವ್ವಿ

ಅರಳಯ್ಯನೆಡತಿ ಕಲ್ಲಾಣಮ್ಮನೆಂದು
ಅನ್ನೆರಡು ಕೋಟೀಯ ಸರಣರಿಗೆ ಸುವ್ವಿ
ಅನ್ನೆರಡು ಕೋಟೀಯ ಸರಣರಿಗೆ ಮಾಸ್ವಾಮಿ
ನಾವ್ ಊಟಾ ಬೋಜಣಿಯ ನೀಡಬೇಕು ಸುವ್ವಿ

ತಾಯಿ ನೀಲೋಚಣಿ ಬಗುತಿಯು ಬರುಬರುತ
ಸರಣರಿಗೆ ಊಟಾವ ನೀಡೀಯೇನೆ ಸುವ್ವಿ
ನಾವು ಪರ್ಪಂಚೇಕೆ ಬಂದುದಕೆ ಮಾಸ್ವಾಮಿ
ಊಟಾವ ಸರಣರಿಗೆ ನೀಡಬೇಕೋ ಸುವ್ವಿ

ಮುಸುಗೆಲ್ಲುಟ್ಟೋದು ಮುಸುಗೆಲ್ಲಿ ಬೆಳಿಯೋದು
ಮುಸುಗೆಲ್ಲಿ ಬೆಳುವಾ ಪಡ್ಡುಲಕಾಯಿ ಸುವ್ವಿ

ಮುಸುಗೆಲ್ಲಿ ಬೆಳುವಾ ಪಡ್ಡುಲಕಾಯನೆ ತಂದಿ
ಸುಂಗಾರ ಮಾಡಿ ತಾಯಿ ಇರುಸಾಳೊ ಸುವ್ವಿ

ಒಂದೆ ಕೊಳಗಕ್ಕಿ ಆಕಾಳೊ ಕಲ್ಲಾಣಮ್ಮ
ಅಡುಗೇಯ ದುಡುದೀ ಮಡಾಳೊ ಸುವ್ವಿ
ಒಂದೆ ಅಚ್ಚು ಬೆಲ್ಲ ತಂದಾಳೊ ಕಲ್ಲಾಣಮ್ಮ
ಪಯ್ಸಾನೆ ಮಾಡಿ ಅವ್ವ ಇರುಸಾಳೊ ಸುವ್ವಿ

ಅಳ್ದಲ್ಲುಟ್ಟೋದು ಅಳ್ದಲ್ಲಿ ಬೆಳಿಯೋದು
ಅಳ್ದಲ್ಲಿ ಬೆಳುವಾ ಕೆಸುಂದಂಟೊ ಸುವ್ವಿ
ಅಳ್ದಲ್ಲಿ ಬೆಳುವಾ ಕೆಸುಂದಂಟನೆ ತಂದಿ
ತಾಳ್ದಾನೆ ಮಾಡಿ ತಾಯಿ ಇರುಸಾಳೊ ಸುವ್ವಿ

ಅಡ್ಡಲ್ಲುಟ್ಟೋದು ಅಡ್ಡಲ್ಲಿ ಬೆಳಿಯೋದು
ಅಡ್ಡಲ್ಲಿ ಬೆಳುವಾ ಪಡ್ಡುಲಕಾಯೊ ಸುವ್ವಿ
ತಾಳ್ದಾವ ಮಾಡಿ ಇರುಸಾಳು ಕಲ್ಯಾಣಮ್ಮ
ಸರಣಾರ ಅವಳು ನೊಡುತಾಳೊ ಸುವ್ವಿ

ಅನ್ನೆಯ್ಡಂಕುಣುಕೆ ಸರಿಯಾಗಿ ಸರಣಾರು
ಆರಾ ಅಂಕುಣಕೆ ಸರಿಯಾಗೊ ಸುವ್ವಿ
ಆರಾ ಅಂಕುಣಕೆ ಸರಿಯದುರು ಸರಣಾರು
ಆರು ಅಂಕುಣವೆ ಕಾಲಿಯಲ್ಲೊ ಸುವ್ವಿ

ಅಂಗಂತನವರು ಏಚಾಣೆ ಮಡುಕಂಡು
ಗಾಜುನ್ಕಂಬ ತೊಟ್ಟಿ ಅವ್ರು ಏಚಣೆಯೊ ಸುವ್ವಿ
ಗಾಜೀನ ಕಂಬ ತೊಟ್ಟಿ ಏಚಾಣೆ ಮಡುವಾಗ
ದೊಡ್ಡ ಬಸುವಪ್ಪ ಬರುತಾರೆ ಸುವ್ವಿ

ದೊಡ್ಡ ಬಸುವಪ್ಪ ಬಂದಿ ಏನಂತಾರೆ
ನೀಲೋಚ್ಚಿ ತಾಯಿ ಬಗ್ತಿ ಬಂದಾದೇನೆ ಸುವ್ವಿ
ನೀಲೋಚ್ಚಿ ತಾಯಿ ಬಗ್ತೀಯು ಬಂದಾದ
ಆರೂ ಅಂಕಾಣವು ಕಾಲಿಯಲ್ಲೇ ಸುವ್ವಿ

ಮುಂಗೈಯ ಗಾತ್ರ ಬುತ್ತೀಯ ಕಟ್ಟಮ್ಮ
ತಾಯೀ ಕಲ್ಲಾಣಮ್ಗ ಎಳುತಾರೆ ಸುವ್ವಿ

ಮುಂಗೈಯ ಗಾತ್ರಾ ಬುತ್ತೀಯ ಕಟ್ಟಿಸ್ಗಂಡು
ಅವ್ರು ನೀರಂಜಿ ಪುರಾಕೆ ಒರುಟಾರೊ ಸುವ್ವಿ

ನೀರಂಜಿ ಪುರುಕೆ ಒಂಟಾರೊ ಸರಣಾರು
ನೀರಂಜಿ ಪುರುಕೆ ಬಾಕಲಿಲ್ಲೊ ಸುವ್ವಿ
ತೂಕಾವ ಮಾಡಿ ನೀರಂಜಿಪುರ್ಕೆ ಬುಡುತಾರೆ
ಬಾಕ್ಲಲ್ಲಿ ತೂಕಾವ ಮಾಡುತಾರೆ ಸುವ್ವಿ

ಅಸ್ವೆ ಚೀಲವು ಸಯ್ವಾಗಿ ಸರಣಾರು
ತಕ್ಡೀಗಿ ಅವರು ಕುಂತೆಗಂಡಾರೊ ಸುವ್ವಿ
ತಕ್ಡೀಗೆ ಅವರು ಕುಂತುಗಂಡು ಸರಣಾರು
ಏಳ್ದುಡ್ಡ ಆಕಿ ತೂಕ ಮಾಡುತಾರೆ ಸುವ್ವಿ

ಏಳ್ದುಡ್ಡ ಆಕಿ ತೂಕಾನೆ ಮಾಡಿ ಅವ್ರು
ಕಳವಿಲ್ಲ ಇವರಲ್ಲಿ ಬುಡಿರಯ್ಯ ಸುವ್ವಿ
ಕಳವಿಲ್ಲವ್ರಲ್ಲಿ ಬುಡುರಯ್ಯ ಅನ್ನುತುಲೆ
ನೀರಂಜಿ ಪುರಕೆ ಒರುಟಾರು ಸುವ್ವಿ

ನೀರಂಜಿ ಪುರುಕೆ ಒಂಟಾರು ಸರಣಾರು
ಬೀದೀ ಬೀದಿಲ್ಲಿ ಸಾರುತಾರೆ ಸುವ್ವಿ
ಬೀದೀ ಬೀದಿಲ್ಲಿ ಏನಂತ ಸಾರ್ತಾರೆ
ಅರ್ಷ್ಣ ಮೆಂತೇವ ಕೊಡುತೇವೊ ಸುವ್ವಿ

ಅರ್ಷ್ಣ ಮೆಂತೆವ ಕೊಡುತೀನಿ ನಾನೆಂದೊ
ಒಡುಕ್ಲೊ ಪಡುಕ್ಲೊ ಕೊಡುರಮ್ಮ ಸುವ್ವಿ
ಒಡುಕ್ಲು ಪಡುಕ್ಲ ಕೊಡುರಮ್ಮ ನೀವು ಎಂದು
ಅರುಷ್ಣಾ ಪರುಷ್ಣಾವ ಕೊಡುತೀವೊ ಸುವ್ವಿ

ಒಡುಕ್ಲು ಪಡುಕಾಲ ತಕ್ಕಂಡೀಚುಗ್ಗರುವತ್ಗೆ
ಅಚೇ ಬೀದೀಲಿ ಸಾರುತಾರೆ ಸುವ್ವಿ
ಆಚೇ ಬೀದೀಲಿ ಸಾರ್ಕಂಡಿ ಸರಣಾರು
ಅವ್ರು ಕಂಚೂನ್ ಕ್ವಾಟೀ ತಾಕೆ ಓಗುತಾರೆ ಸುವ್ವಿ

ಕಂಚೂನ್ ಕ್ವಾಟೀ ತಾಕೆ ಓಗೆಂದು ಸರಣಾರು
ಏನಂತ ಅವರು ಸಾರುತಾರೆ ಸುವ್ವಿ

ಏನಂತ ಅವರು ಬೀದಿಲ್ಲಿ ಸಾರ್ತಾರೆ
ನಮ್ಮ ಒಂದಾಗೆ ಬಂದೋರಿಗೆ ಸುವ್ವಿ

ನಮ್ಮ ಒಂದೀಗೆ ಬಂದೋರ್ಗೆ ಎಂದು
ಮಾಚಾಮು ಕೊಡುವೆ ಮಜುಮ್ ಕೊಡುವೆ ಸುವ್ವಿ
ಮಾಜತ್ ಕೊಡುವೆ ಮಾಜೀಮು ನಾ ಕೊಡುವೆ
ಅಲವಾನೆ ಕೊಡುವೆ ಒಂದುಗ್ಬಂದೋರ್ಗೆ ಸುವ್ವಿ

ಕಂಚುನ್ ಕ್ವಾಟೀವಳ್ಗೆ ಇದ್ದೀವಿ ಮಾಸ್ವಾಮಿ
ಯಂಗೇ ಈಚೂಗೆ ಬರುವೋದು ಸುವ್ವಿ
ಅಸ್ವೆ ಚೀಲಾವು ಸಯ್ವಾಗಿ ಸರಣಾರು
ಅಬ್ಬೊಗಂಡೀವಳಗೆ ನುಗ್ಗುತಾರೆ ಸುವ್ವಿ

ಅನ್ನೆರ್ಡು ಕೋಟಿ ಜಂಗುಮ್ರು ಸೇದೊ ಚಿಲ್ಮೇಯ
ಅನ್ನೇರಡು ಕೋಟಿ ಜಂಗಮೂರು ಸುವ್ವಿ
ಅನ್ನೆರಡು ಕೋಟಿ ಜಂಗುಮುರೂಟಾ ಮಾಡುವ
ತಪ್ರೇ ಬಟ್ಟಾಲು ಸಯುವಾಗೊ ಸುವ್ವಿ

ಅಸ್ವೆ ಚೀಲಾವು ಸಯ್ನಾಗಿ ಸರಣಾರು
ಅವ್ರಬ್ಬೊಗಂಡೀಲಿ ನುಗ್ಗುತಾರೆ ಸುವ್ವಿ
ಅವ್ರಬ್ಬೊಗಂಡೀಲಿ ನುಗ್ಗಾರು ಸರಣಾರು
ಅನ್ನೆಯ್ದು ಕೋಟೀಯ ಸರಣಾರು ಸುವ್ವಿ

ಅನ್ನೆಯ್ದು ಕೋಟೀಯ ಸರಣಾರು ಅವರು
ಅಸ್ವೇ ಚೀಲಕ್ಕೆ ಅವ್ರು ಆಕಿಕಂಡರು ಸುವ್ವಿ
ಅಸ್ವೇ ಚೀಲಕ್ಕೆ ಆಕ್ಕಂಡಿ ಬಸುವಪ್ಪ
ತೂಕಾಮಾಡೊ ಬಾಕ್ಲುಗೆ ಬರುತಾನೆ ಸುವ್ವಿ

ತೂಕಾಮಾಡೊ ಬಾಕ್ಲುಗೆ ಬರುತಾರೆ ಬಸುವಪ್ಪ
ತೂಕಾಮಾಡಾಚಗೆ ಬುಡಬೇಕು ಸುವ್ವಿ
ತೂಕಾವ ನೀವು ಮಾಡೀ ಮಾಸ್ವಾಮಿ
ಕಳವಿಲ್ಲ ನಮ್ಮಲ್ಲಿ ಎಳುತಾರೆ ಸುವ್ವಿ

ಕಳವಿಲ್ಲ ನಮ್ಮಲ್ಲಿ ಬಂದೋರು ಬಸುವಪ್ಪ
ಎಳ್ದುಡ್ಡ ತಕುಡ್ಡಾಕಿ ಕುಂಡುರ್‍ಯಾರೊ ಸುವ್ವಿ

ಎಳ್ದುಡ್ಡ ತಕುಡ್ಗಾಕಿ ಕುಂಡುರುಸಿ
ಎಳ್ದುಡ್ಡುನ ತೂಕ ಸ್ವಾಮಿ ಸರಿಯಾದಾರೊ ಸುವ್ವಿ

ಎಳ್ದುಡ್ಡುನ ತೂಕ ಸರಿಯಾದ್ರೊ ಸರಣಾರೊ
ಕಳವಿಲ್ಲ ಅಂತ ಈಚುಗ್ಬುಡುತಾರೆ ಸುವ್ವಿ
ಈಚೂಗೆನವರು ಬರುತಾರೆ ಸರಣಾರು
ರನ್ನಾದ ಏರಿ ಚಿನ್ನಾದ ತೂಬೊ ಸುವ್ವಿ

ಚಿನ್ನಾದ ತೂಬು ನೀರೆಲ್ಲ ಪನ್ನೀರು
ಅಸ್ವೇ ಚೀಲಾವವ್ರು ಒದುರಾರೊ ಸುವ್ವಿ
ಅಸ್ವೇ ಚೀಲಾವ ಒದುರುತ್ಲೆ ಸರಣಾರು
ಅಂತ ಅಂತಾಕೆ ಅವ್ರು ಸ್ತಾನ ಮಾಡೀತ ಸುವ್ವಿ

ಅಂದsಚಂದಾಕೆ ಸ್ತಾನವಾ ಮಾಡೂತ
ಅನ್ನೆರಡು ಕೋಟೀಯ ಸರಣಾರು ಸುವ್ವಿ
ಸಾನ ಮಾಡುಕೊಂಡು ಸರಣಾರು ಅವರೆಂದು
ಊಟಾ ಬೋಜಣಿಕೆ ಕುಂತಿಗಂಡರೊ ಸುವ್ವಿ

ತಾಯಿ ನೀಲೋಚಣಿ ಕಟ್ಟೀದ ಬುತ್ತೀಯ
ಅನ್ನೆರಡು ಕೋಟೀಯ ಸರಣರಿಗೆ ಸುವ್ವಿ
ಮಸುರು ಅನ್ನಾವು ಮನುಸ್ನಲ್ಲಿ ಬೇಕಾದ್ದು
ಮಸುರೂ ಅನ್ನಾವೆ ಅಗಲುಗ್ಬೀಳುತಾದೆ ಸುವ್ವಿ

ಆಲೂ ಅನ್ನಾವು ಮನುಸ್ನಲ್ಲಿ ಬೇಕಾದ್ದು
ಆಲೂ ಅನ್ನಾವೆ ಅಗಲೀಗೆ ಸುವ್ವಿ
ಆಲೂ ಅನ್ನಾವೆ ಆಗಲೀಗೆ ಬಿಳುತಾದೆ
ಅನ್ನೆರಡಾ ಕೋಟೀಯ ಸರಣಾರೊ ಸುವ್ವಿ

ಅನ್ನೆರಡಾ ಕೋಟೀಯ ಸರಣಾರು ಬಂದಾರು
ಅರುಳಯ್ಯನಾ ಮನೆಗೆ ಬರುತಾರೆ ಸುವ್ವಿ
ಅರುಳಯ್ನ ಮನೆಗೆ ಬಂದಾರು ಸರಣಾರು
ಅವ್ರನ್ನೆಯ್ದುಂಕುಣುಕೆ ಸರಿಯಾದರೊ ಸುವ್ವಿ

ಅವ್ರನ್ನೆಯ್ದುಂಕುಣುಕೆ ಸರಿಯಾದರು ಸರಣಾರು
ಅವ್ರೂಟಾ ಬೋಜಣಿಕೆ ನೀಡುತಾಳೆ ಸುವ್ವಿ

ಊಟಾ ಬೋಜಣೆಯ ನೀಡೀತೇನಂತಾಳೆ
ಒಂದೇ ಅಗಳ ಅನ್ನವೆಂದೊ ಸುವ್ವಿ

ಒಂದಗುಳು ಅನ್ನ ಕೆಳುಕ್ಕೆ ಬಿಳುಸ್ದಂತ
ತಪ್ರೆ ಬಚ್ಚಲ ಅಡಿಯ ಬಿಳುದಂತ ಸುವ್ವಿ
ತಪ್ರೆ ಬಟ್ಟಡಿಯ ಬಿಳುದಂತ ನೀವು
ಉಟಾನೆ ನೀವು ಮಾಡಾಬೇಕೊ ಸುವ್ವಿ

ದೊಡ್ಡ ಬಸುವಣ್ಣ ಐದ್ಬಾಕ್ಲ ತಽಟಾದಿ
ದೊಡ್ಡೋರ ಮನೆಯ ಪರುಸಾದ ಸುವ್ವಿ
ದೊಡ್ಡೋರ ಮನೆಯ ಪರುಸಾದ ಸಿಕುಬೇಕು
ಅಕ್ಕಯ್ನ ಮನೆಯ ಮಿಕ್ಕ ಪರ್ಸಾದ ಸುವ್ವಿ

ಸಿಕ್ಕಯ್ನ ಮನೆಯ ಮಿಕ್ಕ ಪರ್ಸಾದಾಕೆ
ಐದ್ಬಾಕುಲ್ತಟಾದಿ ಕುಂತೆ ಅವರೆ ಸುವ್ವಿ
ಬ್ರಮ್ಮ ದೇವಾರು ನತ್ತೀರುವಾಗೋಗಿ
ಐದ್ಬಾಕ್ಲು ತಽಟಾದಿ ಎತ್ತೆಗೊಂಡೊ ಸುವ್ವಿ

ಬ್ರಮ್ಮಾನು ಓಗಿ ನತ್ತೀರುವಾಗೋಗಿ
ತಪರೆ ಬಟ್ಟಾಲ ಕೆಡದಿದ್ದರೊ ಸುವ್ವಿ
ತಪ್ರೆ ಬಟ್ಟಡಿಯ ಒಂದು ಅಗುಳು ಅನ್ನ
ಜ್ವಾಳಾದ ಕಾಳ್ನಂಗೆ ಬಿದ್ದೀತಲ್ಲೊ ಸುವ್ವಿ

ಬಾಯಽಲ್ಲಿ ಅಽದು ಇರುವೆಂದು ಎತುಗಂಡಿ
ಐದ್ಬಾಕ್ಲು ತಽಟಾದಿ ಈಽಚುಗ್ಬರುತಾದೊ ಸುವ್ವಿ
ಈಚೀಗೆ ಅದು ಬರುವಾಗ ಇರುವೆಂದು
ಬಾಯ್ನಿಂದ ಕಿತ್ತಽರೆ ದೋಸವಲ್ಲೊ ಸುವ್ವಿ

ಈರುನ್ಗೂಡೀಗೆ ನಾರೊಳಿಗೋಳು
ಸಕ್ರೇ ಏರಾನೆ ಬುಡುತಾರೆ ಸುವ್ವಿ
ಸಕ್ರೇ ಏರಾನೆ ಬುಡುತಾರೆ ನಾರೂಳ
ಬಾಯ್ನಿಂದ ಕಿತ್ತರೆ ದೋಸವೆಂದೊ ಸುವ್ವಿ

ನಾರೂಳಿಗೋಳು ನುಚ್ಚುಕ್ಕಿ ಏರಾನೆ
ಈರೀನ ಗೂಡೀಗೆ ಬುಡುತಾರೆ ಸುವ್ವಿ

ಸಕ್ರೇ ಏರಾನೆ ಬುಟ್ಟಾರೊ ಬಸವಪ್ಪ
ದೊಡ್ಡೋರ ಮನೆಯ ಪರುಸಾದವ ಸುವ್ವಿ

ದೊಡ್ಡೋರ ಮನೆಯ ಪರುಸಾದವ ಬುಟ್ಟಿ
ಸಕ್ರೇ ಏರುನ್ಯಾಲೆ ಒಂಟೋಯ್ತೊ ಸುವ್ವಿ
ಆಗs ಅsವsರು ಬಸುವಪ್ಪನೋರು
ಚಿಳ್ಳಾ ಉಗsರಲ್ಲಿ ಎತ್ತುಗಂಡರೊ ಸುವ್ವಿ

ಚಿಳ್ಳು ಉಗುರಲ್ಲಿ ಎತುಗಂಡಿ ಪರುಸಾದ
ವಸಬಟ್ಟೆ ಗಂಟsನೆ ಊಡುತಾರೆ ಸುವ್ವಿ
ವಸಬಟ್ಟೆ ಗಂಟಾ ಉಟುಕಂಡಿ ಬಸುವಪ್ಪ
ತಮ್ಮಾ ಅರುಮಲ್ಲಿ ಮಡುಗಾರೊ ಸುವ್ವಿ

ಅರಮಲ್ಲಿ ಅವರು ಮಡುಗ್ಬುಟ್ಟಿ ಬಸುವಪ್ಪ
ಅಕ್ಕಾನಾಗಮ್ಮನ ಕೂಗುತಾರೆ ಸುವ್ವಿ
ಅಕ್ಕುನಾಗಮನ ಕೂಗಿ ಏನಂತಾರೆ
ಏಳಾ ವರುಸಾದ ಎಳನಾಗಿ ಸುವ್ವಿ

ಏಳು ವರುಸಾದ ಎಳನಾಗಿ ಬಾರಮ್ಮ
ಈರೊಂಬತ್ಕೋಟಿ ಇಲ್ಲುದ್ದಾಗ್ದಲ್ಲಿ ಸುವ್ವಿ
ಈರೊಂಬತ್ಕೋಟಿ ಇಲ್ಲೂದ ಜಾಗ್ದಲ್ಲಿ
ಸ್ತಾನಾವ ಮಾಡಿ ಬರುತೀನಿ ಸುವ್ವಿ

ಸ್ತಾನಾವ ಮಾಡಿ ಬರೂವತ್ಗೆ ನೀನು
ಮsನೆsಯ ಸ್ತಣ್ಣುಗ್ ಮಾಡಮ್ಮ ಸುವ್ವಿ
ಅಂಗಂತನವರು ಎಳಬುಟ್ಟಿ ಬಸುವಪ್ಪನೋರು
ವಸ್ಮಡ್ಕೇಲಿ ನೀರ ತಂದು ಮಡುಗಮ್ಮ ಸುವ್ವಿ

ಅಂಗಂತನವರು ಎಳಬುಟ್ಟಿ ಬಸುವಪ್ಪ
ಸ್ತಾನಾ ಮಾಡೀಕೆ ಒರುಟಾರೊ ಸುವ್ವಿ

ತಾಯಿ ನಾಗಮ್ಮ ಏಳೊರ್ಸ್ದ ಎಳನಾಗಿ
ಸಿವ್ದಾ ತಡಕೀಕೆ ಒಯ್ತಾಳೆ ಸುವ್ವಿ
ಸಿವ್ನ ತಡಕೀಕೆ ಒಯ್ತಾಳೆ ನಾಗಮ್ಮ
ವಸಬಟ್ಟೆ ಗಂಟು ಕೈಗೆ ಸಿಕ್ಕೀತಲ್ಲೊ ಸುವ್ವಿ

ವಸಬಟ್ಟೆ ಗಂಟು ಕೈಯಿೀಗೆ ಸಿಕ್ಕುತ್ಲೆ
ಬಿಜ್ಜೀ ನಾಗಮ್ಮ ನೋಡತಾಳೆ ಸುವ್ವಿ
ಅಕ್ಕಯ್ನ ಮನೆಯ ಮಿಕ್ಕಾ ಪರುಸಾದಾವ
ನಮ್ಮಣ್ಣ ಉಂಡು ಮಿಕ್ಕ ಪರ್ಸಾದ ಸುವ್ವಿ

ನಮ್ಮಣ್ಣ ಉಂಡಿ ಮಿಕ್ಕಾ ಪರುಸಾದಾವ
ವಾಡುಽಟ್ಟಿಗವರು ತಂದೆ ಅವರೆ ಸುವ್ವಿ
ವಾಡೂಟ್ಟಿಗವರು ತಂದೆ ಅವರೆ ಅಂತೇಳಿ
ತಾಯಿ ನಾಗಮ್ಮ ಸಲ್ಸೆಗಂಡಾಳೊ ಸುವ್ವಿ

ಅಂಗಂತನೇಳಿ ಸ್ತಾನಾವ ಮಡುಕೊಂಡು
ಸ್ವಾಮಿ ಬಸುವಪ್ಪ ಬರುತವರೆ ಸುವ್ವಿ
ಬಸುವಪ್ಪನೋರು ಬಂದೋರು ಅವರೆಂದು
ವಸಬಟ್ಟೆ ಗಂಟ ಉಡುಕುತವರೆ ಸುವ್ವಿ

ಏಳು ವರುಸಾದ ಎಳನಾಗಿ ಬಾರಮ್ಮ
ವಸಬಟ್ಟೆ ಗಂಟು ಎಲ್ಲೆ ಐತೆ ಸುವ್ವಿ
ಅಕ್ಕಯ್ನ ಮನೆಯ ಮಿಕ್ಕಾ ಪರುಸಾದಾವ
ವಾಡುಟ್ಟುಗು ತಂದಿ ಮಡುಗವರೆ ಸುವ್ವಿ

ವಾಡುಟ್ಟುಗು ತಂದಿ ಮಡುಗವರೆ ಅಂತೇಳಿ
ಸಲ್ಲುಸ್ಗಂಡೆ ನಾನುಕಾನೊ ಅಣ್ಣಯ್ಯ ಸುವ್ವಿ
ಏಳೂ ವರುಸಾದ ಎಳನಾಗಿ ಕೆಟ್ಟಲ್ಲಿ
ಚಾವ್ಡೀಯ ತಗದು ಇಡುದವರೆ ಸುವ್ವಿ

ಚಾವ್ಡೀಯ ತಗದು ಇಡುಕಂಡಿ ಅವರೆಂದು
ಗಡಗಡಾನೆ ನಡುಗೂತ ನಿಂತೆ ಅವಳೆ ಸುವ್ವಿ
ಗಡಗಡನಡಗೀತ ನಿಂತೆ ಅವ್ಳೆ ನಾಗಮ್ಮ
ಏಳೇ ವರುಸಾದ ಎಳನಾಗಿ ಸುವ್ವಿ

ಬಿಜ್ಜಳ್ರಾಯಾನು ಪಟ್ಟುಣ್ದಲ್ಲವನು
ದೊರುತಾನ ಅವನು ಆಳುತಾನೆ ಸುವ್ವಿ
ಬಾರೊ ಬಿಜ್ಜುಳರಾಯ ಕರೆದಾನು ಮಂಚಣ್ಣ
ಕೊಂಡುಕಾರು ಮಂಚಣ್ಣ ಕರೆದಾನು ಸುವ್ವಿ

ಕರೆದಿ ಏನಂತ ಏಳಾನು ಮಂಚಣ್ಣ
ನಿನ್ನುಡುಗುನ್ಗೆ ದೊರ್ತಾನ ಕೊಟ್ಟೋರ್‍ಯಾರೊ ಸುವ್ವಿ
ಉಡುಗುನ್ಗೆ ದೊರೆತಾನ ಕೊಟ್ಟೋರು ಯಾರಯ್ಯ
ಪಟ್ಟಣ್ದಲ್ಲಾಗೂವ ಕಾಲುಮೇಯ ಸುವ್ವಿ

ಅಂಗಂದ ಮಾತ ಕೇಳಾನು ಬಿಜ್ಜಳರಾಯ
ಕೊಂಡಽಕಾರ್‌ಮಂಚಣ್ನ ಮಾತ ಕೇಳಾನು ಸುವ್ವಿ
ಮಾತಾನೆ ಅವ್ನ ಕೇಳಾನು ಬಿಜ್ಜಳರಾಯ
ಕೊಂಡುಕಾರ್ಮಂಚಯ್ಯ ಚಾಡಿ ಎಳುತಾನೆ ಸುವ್ವಿ

ಬಸುವಪ್ಪನ ತಂಗೆ ನಾಗಮ್ಮನವಳು
ಏಳಾ ವರುಸಾದ ಎಳನಾಗು ಸುವ್ವಿ
ಏಳೂ ವರುಸಾದ ಎಳನಾಗಿಯವಳು
ಬಸುವಪ್ನ ತಂಗೆ ಏಳುತಿಂಗಳೊ ಸುವ್ವಿ

ಏಳೂ ತಿಂಗಾಳ ಬಿಮ್ಮಾನಸೆಲ್ಲೊ
ಉಡುಗುನ್ಗೆ ದೊರುತನ ಕೊಡಬೋದೋ ಸುವ್ವಿ
ಉಡುಗುನ್ಗೆ ದೊರುತನ ಕೊಟ್ಟೋರು ಯಾರಯ್ಯ
ಮೂರು ಸತ್ಯೇವ ಮಾಡುಸ್ಬೇಕು ಸುವ್ವಿ

ಮೂರು ಸತ್ಯೇವ ಮಾಡುಸ್ಬೇಕು ಏಳ್ತಾನೆ
ಬಿಜ್ಜಳ್ರಾಯಾನು ಕರುಸ್ತಾನೆ ಸುವ್ವಿ
ಬಿಜ್ಜಳ್ರಾಯಾನು ನಾಗಮ್ನ ಕರುಸ್ತಾನೆ
ನಾಗಮ್ಮ ಬಸುವಪ್ಪ ಬರುತಾರೆ ಸುವ್ವಿ

ಅಳುದಲ್ಲುಟ್ಟೋದು ಅಳುದಲ್ಲಿ ಬೆಳಿಯೋದು
ಅಳುದಲ್ಲಿ ಬೆಳುವ ಕಣುಗ್ಲೆ ಗಿಡುವ್ರೊ ಸುವ್ವಿ
ಅಳುದಲ್ಲಿ ಬೆಳುವ ಕಣುಗಾಲೆ ಗಿಡವೆಂದು
ತಾಯಿ ನಾಗಮ್ಮನಕುಟ್ಟೆ ಬರುವ್ರೋದು ಸುವ್ವಿ

ಇಪ್ಪತ್ನಾಕ್ಜಾತಿ ಗಿಡುಗೋಳು ಆಗೆಂದು
ನಾಗಮ್ಮನಕುಟ್ಟೆ ಬರುತಾವೆ ಸುವ್ವಿ
ಅಳುದಲ್ಲುಟ್ಟೋದು ಅಳುದಲ್ಲಿ ಬೆಳಿಯೋದು
ತಾಳೇ ಗಿಡಾವ್ರು ಬರನಿಲ್ಲ ಸುವ್ವಿ

ತಿಪ್ಪೆ ಅಳುದಲಿ ಉಟ್ಟೋದ್ಮತ್ತಕ್ಕನ ಗಿsಡ
ತಾಯಿ ನಾಗಮ್ಮನಕುಟ್ಟೆ ಬರನಿಲ್ಲ ಸುವ್ವಿ
ಉತ್ತ ಒಲುದಲ್ಲಿ ಇರುವ ದತ್ತುರಿ ಗಿಡ
ತಾಯಿ ನಾಗಮ್ಮನಕುಟ್ಟಿ ಬರನಿಲ್ಲ ಸುವ್ವಿ

ತಾಯಿ ನಾಗಮ್ಮನಕುಟ್ಟೆ ಬರ್ದೇನೆ ಓಗೊತುಗೆ
ಅವ್ವೇನಂತ ಸಾಪಾವ ಕೊಡುತಾಳೆ ಸುವ್ವಿ
ಉತ್ತ ಒಲುದಲ್ಲಿ ಬಿದ್ದೀರು ಅಂತಾವ
ಸಾಪಾ ದತ್ತುರಿಗಿಡಕೆ ಕೊಡುತಾಳೆ ಸುವ್ವಿ

ತಿಪ್ಪೇ ಗುಂಡಿಲ್ಲಿ ಬಿದ್ದೀರು ಅಂತೇಳಿ
ಉಮ್ಮತ್ತಕ್ಕುನ ಗಿಡಕೆ ಸಾಪ ಕೊಟ್ಟಾಳೊ ಸುವ್ವಿ
ಅಳ್ಳಾದಲ್ಲಿ ನೀನು ಬೆಳಕಂಡಿ ಬಿದ್ದೀರಂತ
ತಾಳೇಯ ಗಿಡಕೆ ಸಾಪ ಕೊಡ್ತಾಳೆ ಸುವ್ವಿ

ತಾಯಿ ನಾಗಮ್ಮ ಯಾವದೇವುರುಗಾರ
ನನ್ನಾ ನೀನೆಂದು ಸಲ್ಲುಸ್ಬೇಕು ಸುವ್ವಿ
ಇಷ್ಟಾನೆ ಬೇಡಿ ಕೇಳುಕಂಡಮ್ಯಾಕೆ
ಊರ್ಮಂದುಲ ಮಾರಮ್ಮನ ಸೇರ್ಕೊ ಓಗು ಸುವ್ವಿ

ಅಂಗಂತನವಳು ಎಳಬುಟ್ಟಿ ನಾಗಮ್ಮ
ಅವ್ವ ಮುತ್ತುನ್ ಚಳೇವನೆ ಇಡಕೊಂಡು ಸುವ್ವಿ
ಮುತ್ತೂನ್ ಚಳೇವ ಇಡುಕೊಂಡು ನಾಗಮ್ಮ
ಅವ್ವಾಲಂಕಾರ್ದಲ್ಲಿ ಓಗುತಾಳೆ ಸುವ್ವಿ

ಕೊಂಡುಕರ ಮಂಚಣ್ಣ ಓಡೋಡಿ ಬರುತಾನೆ
ಅದೂರ್ಗಿತ್ತೀ ಬರೂ ಅಲವ ನೋಡ್ಬಾರೊ ಸುವ್ವಿ
ಅಂಗಂತನವನು ಕೂಗ್ತಾನೆ ಮಂಚಣ್ಣ
ಬಿಜ್ಜಳ್ರಾಯಾನು ನೋಡುತಾನೆ ಸುವ್ವಿ

ಬಿಜ್ಜಳ್ರಾಯಾನು ನೋಡಿ ಏನಂತಾನೆ
ಏನಂತ ಅವನು ಸತ್ಯೆವಾನೆ ಸುವ್ವಿ
ಸತ್ಯೇವ ಅವನು ಕೇಳ್ತನೆ ಬಿಜ್ಜಳರಾಯ
ಏನಂತ ನಾಗಮ್ಮ ಏಳುತಾಳೆ ಸುವ್ವಿ

ದೊಡ್ಡೋರ ಮನೆಯ ಪರಸಾದಕ್ಕೆ ನಾನು
ಬಿಮ್ಮನ್ನೆ ಆಗಿವ್ನಿ ಎಳುತಾಳೆ ಸುವ್ವಿ
ಅನ್ನುಕ್ಕೆ ಬಸುರಿ ಆಗೋದು ಉಂಟೇನೊ
ಊಡಯ್ಯ ಒಲೆಯ ಮಡುಗಯ್ಯ ಸುವ್ವಿ

ಊಡಯ್ಯ ಒಲೆಯ ಮಡುಗಯ್ಯ ತಪ್ಲೇಯ
ಆಕಯ್ಯ ಅಕ್ಕೀಯ ಒಲೆಮ್ಯಾಲೆ ಸುವ್ವಿ
ಆಕಯ್ಯ ಅಕ್ಕೀಯ ಒಲೆಮ್ಯಾಲೆ ಬಿಜ್ಜಳರಾಯ
ಮೂರ್ಜನ ಎಣ್ಮಕ್ಕಳ ಕರದಿಕ್ಕೊ ಸುವ್ವಿ

ಎಣ್ಮುಮಕ್ಕುಃಳಿಗೆ ಕರದಿಕ್ಕೊ ಬಿಜ್ಜಳರಾಯ
ಅನ್ನುಕು ಬಸುರಾಗೋದು ಉಂಟೇನೊ ಸುವ್ವಿ
ಅಣನಲ್ ತಂತೂತವಣಿ ತಂಗೆಲ್ ತಂತೂತವಣಿ
ತಂತೂವಣೀಗೆ ನೀನು ಎದುರ್ದೇನೊ ಸುವ್ವಿ

ಬಾರೊ ಬಿಜ್ಜಳರಾಯ ನಿನುಗ್ದೊರುತನ ಕೊಟ್ಟೋರ್‍ಯಾರು
ಮುರೂ ಸತ್ಯೇವ ಮಾಡ್ನುಬೇಕೊ ಸುವ್ವಿ
ಕೊಪ್ಪುರ್ಕೇಲೆಣ್ಣೆ ಕಾಯ್ಸನು ಬಿಜ್ಜಳರಾಯ
ಎಣ್ಣೇವಳಿಕೆ ಕಬ್ಬುಣುದ್ ಗುಂಡನೇಯೊ ಸುವ್ವಿ

ಕಬ್ಬುಣುದ ಗುಂಡ ಕಾಯ್ಸಾನೊ ಬಿಜ್ಜಳರಾಯ
ಮೂರ್ಮಳುಕ ಮುಳುಕಿ ನೀನು ಏಳಬೇಕೊ ಸುವ್ವಿ
ಮೂರೂ ಮಲಿಗೆ ಊವ ತಗುದಾಳೊ ನಾಗಮ್ಮ
ಕಾದಾ ಎಣ್ಣೇವಳಿಕೆ ಮಡುಗುತಾಳೊ ಸುವ್ವಿ

ಕಾದಾ ಎಣ್ಣೆಲ್ಲಿ ಮಡುಗಾಳೊ ನಾಗಮ್ಮ
ಪೂರಿ ಅಳ್ದಂಗೆ ಅಳ್ಳುಕಂಡೊ ಸುವ್ವಿ
ಪೂರಿ ಅಳ್ದಂಗೆ ಅಳುಕತುಲೆ ನಾಗಮ್ಮ
ತಗದೀ ಮಂಡೇಗವ್ಳು ಮುಡುದಾಳೊ ಸುವ್ವಿ

ಮಂಡೇಗೆ ಅವ್ಳು ಮುಡ್ಕಂಡಿ ನಾಗಮ್ಮ
ಮೂರೂ ಮುಳುಕೆಣ್ಣೆ ಮುಳುಕಾಳೊ ಸುವ್ವಿ
ಮೂರೂ ಮುಳುಕೆಣ್ಣೆ ಮುಳುಕ್ಬುಟ್ಟಿ ನಾಗಮ್ಮ
ಕಬ್ಬುಣದ್ಗುಂಡಾ ತಗ್ದಿ ಮುಡುಗುತಾಳೆ ಸುವ್ವಿ

ಕಬ್ಬುಣ್ದ ಗುಂಡಾ ತಗ್ದಾಳೊ ನಾಗಮ್ಮ
ಬಿಜ್ಜಳ್ರಾಯ್ನ ದಂಡುನ್ಯಾಲೆ ಇಡುತಾಳೆ ಸುವ್ವಿ
ಬಿಜ್ಜಳ್ರಾಯಾನ ದಂಡೆಲ್ಲ ಅವರು
ಗಡುಗಡಾನೆ ಅವರು ನಡುಗುತಾರೆ ಸುವ್ವಿ

ಗುಂಡುಽ ಬಿಽದ್ದಽ ಜಾಗಾದ ವಳಽಗೆ
ನೆಲಽವೆ ಕತ್ಕಂಡಿ ಉರಿತಾದೆ ಸುವ್ವಿ
ತಂತೂತವಣೇಗೆ ಎದುರ್ದಲ್ಲೊ ಬಿಜ್ಜಳರಾಯ
ಮಂಕೂ ಮಾಯಾಕ್ಕೆ ಎದುರ್ಬ್ಯಾಡ ಸುವ್ವಿ

ಮಂಕೂ ಮಾಯಾಕ್ಕೆ ಎದುರ್ಬ್ಯಾಡ್ ಬಿಜ್ಜಳರಾಯ
ಇನ್ನೆರಡು ಸತ್ಯೇವ ಮಾಡ್ಸಬೇಕು ಸುವ್ವಿ
ಚನ್ನಬಸವಣ್ಣ ಅವ್ನ ವಟ್ಟೆಲ್ಲಿ ಇದ್ದಽರೆ
ಗುಟ್ರ ವಡ್ಕಂಡಿ ಮಾತಾಡ್ಬೇಕು ಸುವ್ವಿ

ಏನು ಕಂದಣ್ಣ ಏಳು ತಿಂಗಳ ಮಗುನೆ
ಯಾವಾ ತರ್ದಲ್ಲಿ ಮಾತುನಾಡಿಯಪ್ಪ ಸುವ್ವಿ
ಅಂಗಂತನವಳು ಏಳೊರ್ಸ್ದ ಎಳುನಾಗಿ
ದುಕ್ಕಾವ ಮಾಡೂತ ಕುಂತೆ ಅವಳೆ ಸುವ್ವಿ

ಒಂದು ಗುಟರೀಯ ವಡೆದಾನೊ ಬಸುವಪ್ಪ
ಗಡಗಡಾನೆ ದಂಡು ನಡುಗುತಾದೆ ಸುವ್ವಿ
ತಂತೂತವಣೇಗೆ ಎದುರ್ದಲ್ಲೊ ಬಿಜ್ಜಳರಾಯ
ಮಂಕೂ ಮಾಯಾಕ್ಕೆ ಎದುರ್ಬ್ಯಾಡ ಸುವ್ವಿ

ಅಷ್ಟುಕ್ಕೆ ನೀನು ಎದುರ್ಬ್ಯಾಡ್ ಬಿಜ್ಜಳರಾಯ
ಉಡುಗುನ್ಗೆ ದೊರುತನ ಕೊಟ್ಟೊರ್ಯಾರೊ ಸುವ್ವಿ
ಚನ್ನು ಬಸುವಣ್ಣ ಅವಳೊಟ್ಟೆಲ್ಲಿ ಇದ್ದಽರೆ
ಈಚುಗ್ಬಂದಿ ಅವ್ನ ಮಾತಾಡ್ಬೇಕು ಸುವ್ವಿ

ತಾಯಿ ನಾಗಮ್ಮ ಕುಂತುಗಂಡೇನಂತಾಳೆ
ಎಂಗೆ ಬಂದಿ ನೀನು ಮಾತಾಡಿಯೊ ಕಂದ ಸುವ್ವಿ
ತಾಯಿ ನಾಗಮ್ಮ ಯಂಗಮ್ಮ ಬರುವ್ರೋದು
ಮೂಗಲ್ಲಿ ಬಂದಾರೆ ಮುಸುರೆಯಲ್ಲೆ ಸುವ್ವಿ

ಮೂಗಲ್ಲಿ ಬಂದುರೆ ಮುಸುರೆಲ್ಲೆ ತಾಯಮ್ಮ
ಗರುಬ್ಣೇಲಿ ಬಂದರೆ ಸೂತುಕವಲ್ಲೆ ಸುವ್ವಿ
ಬಾಯಲ್ಲಿ ಬಂದ್ರೆ ಜಲ್ಲಲ್ಲೆ ತಾಯಮ್ಮ
ಕೀವಿಲ್ಲಿ ಬಂದಽರೆ ಗುಗ್ಗೆಯಲ್ಲೆ ಸುವ್ವಿ

ಕೀವಿಲ್ಲಿ ಬಂದಾರೆ ಗುಗ್ಗೆಲ್ಲೆ ತಾಯಮ್ಮ
ಯಾವಾ ತರಾದಲ್ಲಿ ಬರಲಮ್ಮ ಸುವ್ವಿ
ಅಯ್ಯೊ ಕಂದಣ್ಣ ಚನ್ನ ಬಸುವಣ್ಣ
ಯಾವಾ ತರುದಲ್ಲಿ ನೀನು ಬಂದೀಯಣ್ಣ ಸುವ್ವಿ

ಬೆನ್ನು ಕರಣಾದಲ್ಲಿ ಚಳ್ಳುಗರ ಮಸುಗಂಡಿ
ಬೆನ್ನುಽ ಕಽರಽಣದಲ್ಲಿ ಬರುತಾನೆ ಸುವ್ವಿ .
ಬೆನ್ನೂ ಕಾರಾಣದಲ್ಲಿ ಬರುತಾನೆ ಬಸುವಣ್ಣ
ಒಂದೇ ಗುಟ್ರಿಯ ಅವ್ನು ಆಕುತಾನೆ ಸುವ್ವಿ

ಒಂದೇ ಗುಟ್ರಿಯ ಅವ್ನು ಆಕುತುಲೆ ಬಸವಣ್ಣ
ಬಿಜ್ಜಳ್ರಾಯನ ದಂಡು ಉರಿತಾದೆ ಸುವ್ವಿ
ಕತುಗಂಡಿ ಅಽದು ಉರುವಾಗ ದಂಡು
ಕೊಂಡುಕಾರ್ಮಂಚಣ್ಣ ಏರಿಮ್ಯಾಲೆ ಸುವ್ವಿ

ಕರಿಯ ಕಂಬ್ಳೀಯ ಅಕ್ಕಂಡಿ ಮಂಚಣ್ಣ
ಮಕ್ಕಾಡೆ ಏರೀಮ್ಯಾಲೆ ಮನಗವನೆ ಸುವ್ವಿ
ಮಕ್ಕಾಡೆ ಅವ್ನು ಮನಿಕಂಡಿ ಮಂಚಣ್ಣ
ಏಳ್ದೋನು ನಾನು ಎಳುದ್ನಲ್ಲ ಸುವ್ವಿ

ಏಳ್ದೋನು ನಾನು ಏಳುದ್ನಲ್ಲ ಬಿಜ್ಜಳರಾಯ
ಕೇಳ್ದೋನು ನೀನು ದದ್ದೊರೆಯೊ ಸುವ್ವಿ
ಆಗ ದೊಡ್ಡಬಸುವಣ್ಣ ಓಡೋಡಿ ಬಂದವ್ನು
ನಿಮ್ಮಾವ್ನ ಪಟ್ಣವ ನೀನು ಬೆಯ್ಸಿಯೇನೊ ಸುವ್ವಿ

ಅಯ್ಯೊ ಮಾವಯ್ಯ ನನಗೆಂದು ಗೊತ್ತಿಲ್ಲ
ಬೆಯ್ತಿದ್ದ ಪಟ್ಣುವ ತಣ್ಣುಗ್ಮಾಡೀದ ಸುವ್ವಿ
ಬಾರಪ್ಪ ಚನ್ನ ಬಸುವಣ್ಣ ಎಳುತೀನಿ
ಬಾರೊ ಅಳಿಂದ್ರ ಎಳುತೀನಿ ಸುವ್ವಿ

ಬಾರೊ ಅಳಿಂದ್ರ ಎಳುತೀನಿ ನಾನೆಂದು
ನೀನು ನರಲೋಕಕ್ಕೆ ಬಂದುವುದುಕೆ ಸುವ್ವಿ
ನರಲೋಕ್ಕೆ ನೀನು ಬಂದುತುಕೆ ಎಸುರೇನೊ
ನಾನೇಳಿದ ಮಾತ ನೀನು ಕೇಳಯ್ಯ ಸುವ್ವಿ

ಒಕ್ಕಲರ ಮುದ್ದಣ್ಣ ಕರಿಸಾರೊ ಬಸುವಣನೋರು
ಏನಂತ ಅವರು ಎಳುತಾರೊ ಸುವ್ವಿ
ಮಕ್ಕೆ ಮಕುರಂಬ ದರುಸಾರೊ ಅವರೆಂದು
ಕೊಂಬೀಗೆ ಕಳುಸಾವ ದರಿಸಾರೊ ಸುವ್ವಿ

ಕೊಂಬೀಗೆ ಕಳುಸಾವ ದರುಸಾರೊ ಮುದ್ದಣ್ಣ
ಮಕ್ಕೇ ಮಕುರಂಬ ದರುಸಾರೊ ಸುವ್ವಿ
ಮಕ್ಕೇ ಮಕುರಂಬ ದರಸಿ ಏನಂದಾರೊ
ಇನ್ನೊಂದ ವಡಬೆ ನಿಮಗೆ ಇಕ್ಕಽದಽರೆ ಸುವ್ವಿ

ಇನ್ನೊಂದು ವಡಬೆ ಇಕ್ಕುದ್ರೆ ಚನಬಸುವಣ್ಣ
ಬಾಳಾ ಲಕ್ಷುಣವಾಗಿ ನೀನು ಕಾಣುತೀಯೆ ಸುವ್ವಿ
ಇಷ್ಟು ವಡಬೇಯ ಇಕ್ಕಂಡಿ ಮಾವಯ್ಯ
ಇನ್ನೊಂದು ವಡಬೆ ನಂಗೆ ದರ್ಸೆಬುಽಡೊ ಸುವ್ವಿ

ಬ್ರಮ್ಮದೇವಾರ ಕರಿಸಾರೊ ಬಸುವಪ್ಪ
ಉಕ್ಕುನು ಮೂಗುದಾರ ಮಾಡಿಸಾರೊ ಸುವ್ವಿ
ಉಕ್ಕುನು ಮೂಗುದಾರ ಮಾಡಿಸಾರೊ ಬಸುವಪ್ಪ
ಬ್ರಮ್ಮಾನು ಮೂಗ ಅವ್ನು ಚುಚ್ಚುತಾನೆ ಸುವ್ವಿ

ಉಕ್ಕುನು ಮೂಗ್ದಾರ ಚುಚ್ಚಾನೊ ಬ್ರಮ್ಮಾನು
ಸಾವ್ರಾ ತಂದ್ರೂವೆ ಸಂದೆವೊತುಗೊ ಸುವ್ವಿ
ಸಾವ್ರಾ ತಂದ್ರೂವೆ ಸಂದೆವೊತ್ತಿಲ್ದಂಗಾಗ್ಲೀಂತ
ಸಾಪಾ ಕೊಡುತಾನೆ ಚನ್ನಬಸುವಣ್ಣ ಸುವ್ವಿ

ನರಲೋಕ್ಕೆ ಬಂದುತುಕೆ ಅಳಿಽಂದ್ರ ನೀನು
ಕೇರೀಕೇರೀಲಿ ಸಾರುವೋಗೊ ಸುವ್ವಿ
ನಾನೇಳೀದ ಮಾತ ಕೇಳ್ದೇನೊ ಅಳೀಂದ್ರ
ಕೇರೀ ಕೇರೀಲಿ ನೀನು ಸಾರಿಬಾರೊ ಸುವ್ವಿ

ಕೇರೀಕೇರಿಲ್ಲಿ ಏನಂತ ಸರುಬೇಕು
ಅಣ್ಣಾಗಿ ಅವರು ಬಿಳಲೆಂದು ಸುವ್ವಿ
ಅಂಗಂದ ಮಾತ ಕೆಳಕಂಡ ಚನಬಸುವಣ್ಣ
ಊರೂ ಕೇರೀಲಿ ಬರುತಾನೆ ಸುವ್ವಿ

ಊರೂ ಕೇರೀಮ್ಯಾಲೆ ಬಂದು ಚನಬಸುವಣ್ಣ
ಅಣ್ಣೂನ್ ಮರುತ್ತಾವು ನಿಲುತಾನೆ ಸುವ್ವಿ
ಅಣ್ಣೂನ್ ಮರುತ್ತಾವು ನಿಂತ್ಗಂಡ್ ಚನಬಸುವಣ್ಣ
ಅಣ್ಣೇ ನೀ ಬೀಳು ಅನುಽತಾನೆ ಸುವ್ವಿ

ಕಲ್ಲು ವಡಿದೇನೊ ಗುಂಡಾನೆ ವಡಿದೇನೊ
ಸುಮ್ಮಽನೆ ಅಣ್ಣು ಬಿದ್ದಽದೇನೊ ಸುವ್ವಿ
ಅಂಗತನವನು ಆದಿಲ್ಲಿ ಒಯ್ತಿದ್ದೋನು
ಬೆನ್ನುನ್ಮೇಲೆ ಎರಡೇಟ ವಡಿದಾನೊ ಸುವ್ವಿ

ಎಯ್ದೇಟೂಯೆಂದು ಬೆನ್ಮೇಲೆ ಬೀಳೂತ್ಲೆ
ಮಾವಯ್ನ ಮಾತ ಬಸವ ಮರ್ತೆಬುಟ್ಟು ಸುವ್ವಿ
ಮಾವ ಏಳಿದ ಮಾತ ಮರುತ್ನಲ್ಲೊ ಅಂತೇಳಿ
ಬುದ್ದೀ ಬಂದಂಗೆ ಈಗ ಸಾರುಬುಡೋದ ಸುವ್ವಿ

ಬೀದೀಬೀದಿಲ್ಲಿ ಏನಂತ ಸಾರ್‍ತಾನೆ
ತಾಯಿ ಮುಂದೂಗಡೆ ಮಗನೆ ಸಾಯ್ಲೊ ಸುವ್ವಿ
ತಾಯೀ ಮುಂದುಗಡೆ ಮಽಗಽನೆ ಸಾಯಽಲಿ
ಮಗನಾ ಮುಂದೂಗಡೆ ತಾಯೆ ಸಾಯ್ಲೊ ಸುವ್ವಿ

ಗಂಡಾನ ಮುಂದುಗಡೆ ಎಡ್ತೀನೆ ಸಾಯಾಲಿ
ಎಡ್ತೀ ಮುಂದೂಗಡೆ ಗಂಡ ಸಾಯ್ಲೊ ಸುವ್ವಿ
ದೊಡ್ಡೊರುಗ್ನಾ ಕೂಟ ಮಕ್ಕಳುಗ್ಲೆಕ್ಕಿಲ್ಲೂಟ
ಬೀದೀಬೀದಿಲ್ಲಿ ಸಾರಿ ಬರುತಾನೆ ಸುವ್ವಿ

ಬೀದೀಬೀದಿಲ್ಲಿ ಸರುಽಕೊಂಡವನು
ಚನ್ನಬಸವಣ್ಣ ಅವ್ರು ಬರುತಾರೆ ಸುವ್ವಿ
ದೊಡ್ಡ ಬಸುವಣ್ಣತ್ರ ಬರುತಲೆ ಚನಬಸುವಣ್ಣ
ಬಾರೋ ಅಳೀಂದ್ರ ಇಲ್ಲಿ ಕರಿತಾರೆ ಸುವ್ವಿ

ಏನಂತ ನೀನು ಸಾರ್ಬಂದೆ ಏಳಪ್ಪ
ಬಾರೋ ಅಳಿಂದ್ರ ಎಂದು ಕರಿತಾರೆ ಸುವ್ವಿ
ನೀನೇಳಿದ ಮಾತ ಮರತೇನು ಮಾವಯ್ಯ
ನನ ಮನಸೀಗೆ ಬಂದಂಗೆ ಸಾರಿಬಂದೆ ಸುವ್ವಿ

ಮನಸೀಗೆ ಬಂದಂಗೆ ಏನೇನು ಸಾರೀದೆ
ಏಳೋ ಅಳಿಂದ್ರ ಎಂದು ಕೆಳುತಾರೆ ಸುವ್ವಿ
ಮರದಡಿಯ ಓಗಿ ನಿಂತುಗಂಡೆ ಮಾವಯ್ಯ
ಅಣ್ಣೊ ಬೀಳಂತ ನಿಂತೀದ್ದೆ ಸುವ್ವಿ

ಅಣ್ಣೊ ಬೀಳಂತ ನಿಂತೀದ್ದೆ ಮಾವಯ್ಯ
ಆದಿಲ್ಲಿ ಒಬ್ಬಽನು ಓಗುತಿದ್ದ ಸುವ್ವಿ
ಆದಿಲ್ಲಿ ಒಬ್ಬಾನು ಒಯ್ತಿದ್ದ ಮಾವಯ್ಯ
ಕಲ್ಲೊಡಿದೆ ಅಣ್ಣು ಬಿದ್ದದೇನೊ ಸುವ್ವಿ

ಬೆನ್ನೀನ ಮ್ಯಾಲೆ ಏಟಾನೆ ನಡೆದಾನು
ನೀವಾಡೀದ ಮಾತ ನಾನು ಮರ್ತೆನಯ್ಯ ಸುವ್ವಿ
ನೀವಾಡೀದ ಮಾತ ಮರ್ತೇನು ಮಾವಯ್ಯ
ನನ ಮನಸೀಗೆ ಬಂದಂಗೆ ಸಾರಿಬಂದೆ ಸುವ್ವಿ

ಬಾರೊ ಅಳಿಂದ್ರ ಬಾರಯ್ಯ ಬಸುವಣ್ಣ
ಏನಂತ ಸಾರ್ದೆ ನಂಗೆ ಏಳಬೇಕೊ ಸುವ್ವಿ
ತಾಯೀ ಮುಂದೂಗಾಡೆ ಮಽಗಽನೆ ಸಾಯ್ಲೆಂದು
ಮಗನಾ ಮುಂದೂಗಾಡೆ ತಾಯೀಯೊ ಸುವ್ವಿ

ಗಂಡುನ್ಮುಂದುಗಡೆ ಎಡುತೀನೆ ಸಾಯ್ಲಿ
ಎಡ್ತೀ ಮುಂದೂಗಡೆ ಗಂಡಾನೇಯೊ ಸುವ್ವಿ
ದೊಡ್ಡೊರುಗ್ನಾಕೂಟ ಮಕ್ಕುಳುಗ್ಲೆಕ್ಕಿಲ್ದೂಟ
ಬೀದೀಬೀದಿಲ್ಲಿ ನಾನು ಸಾರಿಬಂದೆ ಸುವ್ವಿ

ಬಾರೊ ಅಳಿಂದ್ರ ಎಳುತೀನಿ ಬಾರಪ್ಪ
ಅವ್ರುರ್ಗೆಲ್ಲಾ ಗೇದೀ ಇಕ್ಕೋರ್‍ಯಾರಪ್ಪ ಸುವ್ವಿ
ಒಕ್ಕಲರ್ಮುದ್ದಣ್ಣ ಕರುಸಾರೊ ದೊಡಬಸುವಣ್ಣ
ಕೈಲಿಡ್ಡಿ ಚನ್‌ಬಸುನ ಕೊಡುತಾರೆ ಸುವ್ವಿ

ಸಂದೆಯ್ಯ ಗಂಟಾ ವಡಿತಾರೆ ಮಾವಯ್ಯ
ನಾನ್ಯಾವಾ ತsರsದಲ್ಲಿ ತಡಿಯಾಲಿ ಸುವ್ವಿ
ಗೊಂತಲಿಡುಕಳುವಾಗ ಮುರೇಟ ವಡಿತಾರೆ
ಯಂಗಾರ ಮಾಡಿ ನೀನು ತಡುಕಳಯ ಸುವ್ವಿ

ಯಂಗಾರ ಮಾಡಿ ತಡಕಯ್ಯ ಅಳಿಂದ್ರ
ಸಂದೇಗಂಟ ವಡಿಯೋದು ನನಗಿರಲಿ ಸುವ್ವಿ

– ಐದು ಜನಪದ ಕಥನಗೀತೆಗಳು
– ಸಂಪಾದಕ : ಕ್ಯಾತನಹಳ್ಳಿ ರಾಮಣ್ಣ

***

೧೨. ನೀಲಲೋಚನೆಯ ಹಾಡುಗಳು

ಬಸವ ಹೊಂಟರೌ ಧರಣೀ ಮ್ಯಾಲೆ

ಬಸವ ಹೊಂಟರೌ ಧರಣೀ ಮ್ಯಾಲೆ
ಮಾದೇವರ ಕಂಡರ ಗುರುತದಿಂದ
ಬಸವ ನಿಮ್ಮ ಭಕ್ತಿ ಭಾಳೈತಂದ
ಬಿನ್ನಕು ಬರತೀವಿ ಸ್ವಾಮಿ ನಿಮ್ಮನಿಗಂದ
ಮಾದೇವರ ಬಂದರೇನ ಕೇಡೇನಂದ
ಸತ್ಯರ್ಹೊಂಟರೌ ಅವಸರದಿಂದ
ಲಿಂಗಪೂಜೆ ಮಾಡತಿದ್ದಳ
ನಿಜಭಕ್ತಿ ನೀಲಾ ಲಿಂಗಪೂಜಿ ಮಾಡುತ್ತಿದ್ದಳ ॥ ೧ ॥

ಬಸವ ಹೇಳತಾನ । ಮಡದಿಗಿ ಬಂದು ।
ಅಡಿಗಾಗಲಿ ಬಹು ದಿಡಗದಿಂದ ।
ಯಾಕಾಲ್ದ ಸ್ವಾಮಿ । ಮಾಡತೀನಂದಳು
ಹಂಡೆ ಇಡಂದ । ಖಂಡಿಗಿದ್ಯಾಣ
ಚಟಗಿ ಇರುವುದೊಂದು ಕಲ್ಪದಿಂದ
ಮುಚ್ಚಳಿಲ್ಲ ಸ್ವಾಮಿ । ಮನಿಯಾಗೊಂದ ।
ತಂಬಿಗಿ ತಾಂಬಂಡಿರುವುದು ಒಂದು
ತೊಂಭತ್ತೇಳು ಸಾವಿರ ಗಣಂಗಳವರು
ತಂಬಿಗಿ ಬೇಡ್ಯಾರವರು ಮನಷ್ಯಾಗೊಂದೊಂದ
ಲಿಂಗಪೂಜೆ ಮಾಡುತಿದ್ದಳ
ನಿಜಭಕ್ತಿ ನೀಲಾ ಲಿಂಗಪೂಜಿ ಮಾಡುತಿದ್ದಳ ॥ ೨ ॥

ಬಸವ ಹೇಳತಾನ । ಮಡದಿಗಿ ಬಂದು
ಅಡಿಗಾಗಲಿ ಬಹುದಿಡಗದಿಂದ
ಯಾಕಲ್ದ ಸ್ವಾಮಿ ಮಾಡತೀನಂದಳು

ಸೆರಿ ಹಾಲಿನೊಳು । ಹಿಡಿ ಅಕ್ಕಿವನ್ಹಾಕಿ ।
ಉಕ್ಕುದರೊಳಗ ಹಸ್ತವ ತಿರುವಿ ।
ಒತ್ತಿ ಇಟ್ಟಳೌ ಹಸ್ತವ ಹಚ್ಚಿ ।
ಪರಸ ಮಾಡ್ಯಾರವರು ಬಹು ಆನಂದದಿಂದ
ಲಿಂಗಪೂಜಿ ಮಾಡುತಿದ್ದಳ
ನಿಜಭಕ್ತಿ ನೀಲಾ ಲಿಂಗಪೂಜಿ ಮಾಡತಿದ್ದಳ ॥ ೩ ॥

ತೊಂಭತ್ತೇಳು ಸಾವಿರ ಗಣಂಗಳೊಳಗ ।
ಖುಲ್ಲ ಜಂಗಮ ಕಡಿದಾಡಿ ಎದ್ದ
ಬಲ್ಲಿದ ನೀಲಾ ಬಾಯಾಕಂದಳು
ಕರಕಿಪತ್ತುರಿ । ಕಣಗಲದ್ಹೂವ
ತಂದು ಇಟ್ಟಳ ಲಿಂಗದ ಮುಂದ
ಸಾಷ್ಟಾಂಗ್ಹಾಕ್ಯಾಳ ಪಂಕ್ತಿಯ ಮುಂದ
ಸಲ್ಲಸರಿ ಸ್ವಾಮಿ ನಮ್ಮ ಗಂಡ ಬಡವರೆಂದ
ಲಿಂಗಪೂಜಿ ಮಾಡತಿದ್ದಳ
ನಿಜಭಕ್ತಿ ನೀಲ ಲಿಂಗಪೂಜಿ ಮಾಡತಿದ್ದಳ ॥ ೪ ॥

ಭೈಠಕು ಸ್ವಾಮಿ । ಏಳಿರೆಂದಳು
ತೊಂತುಳ ದ್ವಾಸೆವಾದರಾಗ್ಯಾವಂದಳು
ಹಿಡಿದು ನೀಡ್ಯಾಳೌ ಎಡಿಗೊಂದೊಂದ
ತೊಂತುಳನೀಡಾಳೌ ತಂಬಿಗಿ ತಂದ ।
ಸಾಷ್ಟಾಂಗ್ಹಾಕ್ಯಾಳೌ ಪಂಕ್ತಿಯ ಮುಂದ
ಸಲ್ಲಸರಿ ಸ್ವಾಮಿ ನಮ್ಮ ಗಂಡ ಬಡವರೆಂದ
ಲಿಂಗಪೂಜಿ ಮಾಡತಿದ್ದಳ
ನಿಜಭಕ್ತಿ ನೀಲ ಲಿಂಗಪೂಜಿ ಮಾಡತಿದ್ದಳ ॥ ೫ ॥

ತೊಂಭತ್ತೇಳು ಸಾವಿರ ಗಣಂಗಳೊಳಗ
ಖುಲ್ಲ ಜಂಗಮ ಕಡಿದಾಡಿ ಎದ್ದ
ಬಲ್ಲಿದ ನೀಲಾ ಬಾಯಾಕೆಂದಳು ।
ತೊಂತುಳ ದ್ವಾಸೆವೇನ ಪಾವನಂದ ।
ಹೋಳಿಗಿ ತುಪ್ಪಾದ್ರ ಉಂಡೇವಂದ ।
ಯಾಕಾಲ್ದ ಸ್ವಾಮಿ ಮಾಡತೀನಂದಳು
ಹಾ ನಿನ್ನ ಗಂಡ ಹಾನ್ಯಗಾದನೆಂದ

ಲಿಂಗಪೂಜೆ ಮಾಡತಿದ್ದಳ
ನಿಜಭಕ್ತಿನೀಲ ಲಿಂಗಪೂಜಿ ಮಾಡತಿದ್ದಳ ॥ ೬ ॥

ಭ್ಯೆತಕು ಸ್ವಾಮಿ ಏಳಿರೆಂದಳು
ಹೋಳಿಗಿ ತುಪ್ಪಾದ್ರಾಗ್ಯಾವೆಂದಳೂ
ಹಿಡಿದು ನೀಡ್ಯಾಳೌ ಎಡಿಗೊಂದೊಂದು
ತುಪ್ಪ ನೀಡ್ಯಾಳೌ ತಂಬಿಗಿ ತಂದು
ಸಾಷ್ಟಾಂಗ್ಹಾಕ್ಯಾಳೌ ಪಂಕ್ತಿಯ ಮುಂದ
ಸಲ್ಲಸರಿ ಸ್ವಾಮಿ ನಮಗಂಡ ಬಡವರೆಂದ
ಲಿಂಗಪೂಜಿ ಮಾಡತಿದ್ದಳ
ನಿಜಭಕ್ತಿ ನೀಲ ಲಿಂಗಪೂಜಿ ಮಾಡತಿದ್ದಳ ॥ ೭ ॥

ತೊಂಭತ್ತೇಳು ಸಾವಿರ ಗಣಂಗಳೊಳಗ
ಖುಲ್ಲ ಜಂಗಮ ಕಡಿದಾಡಿ ಎದ್ದ
ಬಲ್ಲಿದ ನೀಲಾ ಬಾಯಾಕೆಂದಳು
ಹೋಳಿಗೆ ತುಪ್ಪೇನ್ ಪಾವನಂದ
ಮಾವಿನ್ಕಾಯ್ ಶೀಕರ್ಣ್ಯಾದ್ರ ಉಂಡೇವಂದ
ಯಾಕಾಲ್ದ ಸ್ವಾಮಿ ಮಾಡತೀನಂದಳು
ಹಾ ನಿನ್ನ ಗಂಡ ಹಾನ್ಯನಾದನಂದ
ಲಿಂಗಪೂಜಿ ಮಾಡತಿದ್ದಳ
ನಿಜಭಕ್ತಿನೀಲಾ ಲಿಂಗಪೂಜಿ ಮಾಡತಿದ್ದಳ ॥ ೮ ॥

ಭ್ಯೆತಕು ಸ್ವಾಮಿ ಏಳಿರೆಂದಳು
ಮಾವಿನ್ಕಾಯ್ ಶೀಕರ್ಣ್ಯಾದ್ರಾಗ್ಯಾವೆಂದಳು
ರಸ ನೀಡ್ಯಾಳೌ ತಂಬಿಗಿ ತಂದು
ಸಾಷ್ಟಾಂಗ ಹಾಕ್ಯಾಳೌ ಪಂಕ್ತಿಯ ಮುಂದ
ಸಲ್ಲಸರಿ ಸ್ವಾಮಿ ನಮ ಗಂಡ ಬಡವರೆಂದ
ಲಿಂಗಪೂಜಿ ಮಾಡತಿದ್ದಳ
ನಿಜಭಕ್ತಿನೀಲ ಲಿಂಗಪೂಜಿ ಮಾಡತಿದ್ದಳ ॥ ೯ ॥

ತೊಂಭತ್ತೇಳು ಸಾವಿರ ಗಣಂಗಳೊಳಗ
ಖುಲ್ಲಜಂಗಮ ಕಡಿದಾಡಿ ಎದ್ದ
ಬಲ್ಲಿದ ನೀಲಾ ಬಾಯಾಕಂದಳು,
ಮಾವಿನ್ಕಾಯ್ ಶೀಕರ್ಣ್ಯೇನ್ ಪಾವನಂದ
ಸುರುಳಿ ಹೋಳಿಗಿ ಕರ್ಚಿಕಾಯ್ ಆದ್ರ ಉಂಡೇನಂದ
ಯಾಕಲ್ದ ಸ್ವಾಮಿ ಮಾಡತೀನಂದಳು

ಹಾ ನಿನ್ನ ಗಂಡ ಹಾನ್ಯನಾದನಂದ
ಲಿಂಗಪೂಜಿ ಮಾಡತಿದ್ದಳ
ನಿಜಭಕ್ತಿ ನೀಲ ಲಿಂಗಪೂಜಿ ಮಾಡತಿದ್ದಳ ॥ ೧೦ ॥

ಭ್ಯೆತಕು ಸ್ವಾಮಿ ಏಳಿರೆಂದಳು
ಸುರಳಿ ಹೋಳಿಗಿ ಕರ್ಚಿಕಾಯಾದ್ರಾಗ್ಯಾವೆಂದಳು
ಹಿಡಿದು ನೀಡ್ಯಾಳೌ ಎಡಿಗೊಂದೊಂದು
ತುಪ್ಪ ನೀಡ್ಯಾಳೌ ಚಿಟ್ಟಿಯ ತಂದು
ಸಾಷ್ಟಾಂಗ್ಹಾಕ್ಯಾಳೌ ಪಂಕ್ತಿಯ ಮುಂದ
ಸಲ್ಲಸರಿ ಸ್ವಾಮಿ ನಮಗಂಡ ಬಡವರೆಂದ
ಲಿಂಗಪೂಜಿ ಮಾಡತಿದ್ದಳ
ನಿಜಭಕ್ತಿ ನೀಲ ಲಿಂಗಪೂಜಿ ಮಾಡತಿದ್ದಳ ॥ ೧೧ ॥

ತೊಂಭತ್ತೇಳು ಸಾವಿರ ಗಣಂಗಳೊಳಗ
ಖುಲ್ಲಜಂಗಮ ಕಡಿದಾಡಿ ಎದ್ದ
ಬಲ್ಲಿದ ನೀಲ ಬಾಯಾಕಂದಳು
ಸುರಳಿ ಹೋಳಿಗಿ ಕರ್ಚಿಕಾಯೇನ್ ಪಾವನಂದ
ಬುಂದೆ ಬೇಸನ್ ಆದ್ರ ಉಂಡೇವೆಂದ
ಯಾಕಾಲ್ದ ಸ್ವಾಮಿ ಮಾಡ್ತೀನಂದಳು
ಹಾ ನಿನ್ನ ಗಂಡ ಹಾನ್ಯನಾದನಂದ
ಲಿಂಗಪೂಜಿ ಮಾಡತಿದ್ದಳ
ನಿಜಭಕ್ತಿ ನೀಲ ಲಿಂಗಪೂಜಿ ಮಾಡತಿದ್ದಳ ॥ ೧೨ ॥

ಬ್ಯೆತಕು ಸ್ವಾಮಿ ಏಳಿರೆಂದಳು
ಬುಂದೆ ಬೇಸನ್ ಆದ್ರ ಆಗ್ಯಾವೆಂದಳು
ಹಿಡಿದು ನೀಡ್ಯಾಳೌ ಎಡಿಗೊಂದೊಂದ
ಮಟ್ಟ ನೀಡ್ಯಾಳೌ ತಂಬಿಗಿ ತಂದು
ಸಾಷ್ಟಾಂಗ್ಹಾಕ್ಯಾಳೌ ಪಂಕ್ತಿಯ ಮುಂದ
ಸಲ್ಲಿಸರಿ ಸ್ವಾಮಿ ನಮಗಂಡ ಬಡವರೆಂದ
ಲಿಂಗಪೂಜಿ ಮಾಡತ್ತಿದ್ದಳ
ನಿಜಭಕ್ತಿ ನೀಲ ಲಿಂಗಪೂಜಿ ಮಾಡತಿದ್ದಳ ॥ ೧೩ ॥

ಛತ್ತೀಸ ಕೋಟಿ ಜಂಗಮರವರು
ಜೋಳಿಗಿ ಇಟ್ಟರ ಗುಪ್ತದಿಂದ
ಬಂದು ನಿಂತರ ಬಾಗಿಲ ಮುಂದ

ಪರಸಿ ಪಾದಗಳ ತೊಳೆಯಿರೆಂದರು
ತೀರ್ಥ ಮಜ್ಜನ ಮಾಡಿರೆಂದರು
ಎಲ್ಲ ಹೂವ ಚೆಲ್ಲಾಡೆಂದರು ಬಿಲ್ವ ಪತ್ರಿಗಳೇರಿಸೆಂದಾರು
ಕಡ್ಡಿ ಬತ್ತಿ ಕರ್ಪೂರಾರತಿ ನಿಲ್ಲಿಸಿ ಅವರು ಬೆಳಗೆಂದಾರು
ಖಡಿಸಕ್ರಿ ನೈವೇದ್ಯ ಹಿಡಿಯೆಂದಾರು
ನಿಜಭಕ್ತಿ ನೀಲ ಲಿಂಗಪೂಜಿ ಮಾಡುತ್ತಿದ್ದಳ ॥ ೧೪ ॥

ಮಲಿಯ ಮಲಿಯ ಮಂಜಾನಗೋಳ
ಕೂಗಿ ಮಲ್ಲಯ್ನ ಕರದಿದ್ದಾರು
ಇಲ್ಲೆ ಇದ್ದ ಬಾಯೆಂದಾನು ಚೌರಂಪಳ್ಳಿ ಹೊಕ್ಕಿದ್ದಾರು
ಮಲ್ಲಯ್ನ ಪಾದ ಹಿಡಿದಿದ್ದಾರು
ಕಲ್ಯಾಣ ಪುರದೊಳಗ ಬಸವ ರಾಜೇಂದ್ರನ ಭಕ್ತಿ
ನೀಲಮ್ಮನ ಅಕ್ಕನಾಗಮ್ಮನ ಚಿಕ್ಕಚೋಳಮ್ಮನ ಕಂಡಿದ್ದಾರು
ಅವರು ಎಲ್ಲಾರೂ ಕೂಡಿಕೊಂಡು ನಡೆದಿದ್ದಾರು
ಕಾಶಿಕಪ್ಪಡಕವರು ಹೊಂಟಿದ್ದಾರು
ಅಲ್ಲಿ ಸಂಗಮ ಗತಿಯೆಂದು ನೆನೆದಿದ್ದಾರು
ನಿಜಭಕ್ತಿ ನೀಲ ಲಿಂಗಪೂಜಿ ಮಾಡುತ್ತಿದ್ದಳ ॥ ೧೪ ॥

– ಶ್ರೀಮತಿ ಸುಮಿತ್ರಾದೇವಿ ಅಂಗಡಿ

***

ನಿಜ ಬಕ್ತಿ ನೀಲಮ್ಮ

ಬಸವ ಬಂದಾನವರೋಣಿ ಮುಂದ
ಮಾದೇವ ಕಂಡಾರ ಗುಪ್ತಲಿಂದ
ಬಿನ್ನಕ ಬರುವೆನು ನಿಮ್ಮನಿಗಂದ
ಸ್ವಾಮಿ ಬಂದರೆ ಕೆಡಕಿಲ್ಲಂದ
ಬಸವೆಳ್ಳಾನ ಮಡದಿ ಮುಂದ
ಗುರುವಿನ ಬಿನ್ನ ಇಡದೆನಂದ
ಜಂಗ್ಮರು ಬಂದ ಮಾಡತಾರ ಬಂಡ
ಅದರ ಚಿಂತಿ ನಿನಗ್ಯಾಕಂದ
ಮಾಡತಿನಿ ಸ್ವಾಮಿ ನಿನ್ನ ದಯಾದಿಂದ
ಲಿಂಗ ಪೂಜಿ ಮಾಡತಿದ್ದಾಳ ॥ ೧ ॥

ಮಟಮಾನ್ಯವ ಇಡಿವರು ಬಂದು
ಬಚ್ಚಿಟ್ಟಾರ ಗುಪ್ತಲಿಂದ
ಓಗಿ ನಿಂತಾರ ಬಾಗಿಲ ಮುಂದ
ನೀರ ಕೊಡು ನನ್ನ ನೀಲಾ ಓತಿನಂದ
ಲಿಂಗ ಪೂಜಿ ಮಾಡತಿದ್ದಾಳ ॥ ೨ ॥

ತೊಂಬತ್ತಾರು ತೆಂಬಿಗಿ ತರಸಿ
ವಂದಿಸಿ ಕೊಟ್ಟಾಳವ್ವ ಮನಿಸ್ಯಾಗೊಂದ
ಜಂಗ್ಮರ ಬಂದು ಮಾಡತಾರ ಜಳಕ
ಮಡಿಗಳನ್ನುಟ್ಟರು ಮೆಲಕಸದಿಂದ
ಊವ ಪತ್ತರಿ ಆಗಮನದಿಂದ
ಲೋಬಾನದೊಗಿ ಇಡದ ಸುಗಂದ
ಲಿಂಗ ಪೂಜಿ ಮಾಡತಿದ್ದಳು
ನಿಜ ಭಕ್ತಿ ನೀಲ ಲಿಂಗ ಪೂಜಿ ಮಾಡತಿದ್ದಳು ॥ ೩ ॥

ಗುರುವಿನ ಪಾಲಿಗೆ ಕಸ್ಟವನಿಟ್ಟು
ಓಳಿಗಿ ಮಾಡ್ಯಾಳವ್ವ ದಿಡಗಲಿಂದ
ಓಳಿಗಿ ನೀಡ್ಯಾಳ ತಬಕಲೆ ತಂದ
ತುಪ್ಪವನಾಕ್ಯಾಳವ್ವ ಗಿಂಡಿಲೆ ತಂದ
ಸಾಶ್ಟಾಂಗಾಕ್ಯಾಳವ್ವ ಪಂತಿ ಮುಂದ
ಸಲ್ಲಸರಿ ಬಡವಿ ಗಂಡೆಂದ
ಲಿಂಗ ಪೂಜಿ ಮಾಡತಿದ್ದಳು
ನಿಜ ಬಕ್ತೆ ನೀಲ ಲಿಂಗ ಪೂಜಿ ಮಾಡತಿದ್ದಳು ॥ ೪ ॥

ಎಲ್ಲಾ ಜಂಗಮರು ಉಂಬಾತಿಗೆ
ಬಲ್ಲ ಜಂಗಮ ಬಡದಾಡಿ ಬಂದ
ಬಲ್ಲಿದ ನೀಲ ಬಾ ಇಲ್ಲೆಂದ
ಓಳಿಗಿ ತುಪ್ಪನಾದ್ರ ವಲ್ಲೆನಂದ
ಉಗ್ಗಿತುಪ್ಪಾನಾದರ ಉಣತೇನಂದ
ಮಾಡಿ ನೀಡದಿದ್ದರ
ಅರವಟ್ಟಿಗಿ ಆಣಿ ಆಗತದ ಬಡವಿ ಗಂಡೆಂದ
ಲಿಂಗ ಪೂಜಿ ಮಾಡತಿದ್ದಳ
ನಿಜ ಬಕ್ತ ನೀಲ ಲಿಂಗಪೂಜಿ ಮಾಡತಿದ್ದಳ ॥ ೫ ॥

ಬೈತಾರ ಸ್ವಾಮಿ ಓಗಬಾಡದಂದು
ನನ್ನ ಗಂಡನ ನೆದರ ಕೆಟ್ಟಿತೆಂದು

ಗುರುವಿನ ಪರಿ ಕಸ್ಟವನಿಟ್ಟು
ಉಗ್ಗಿ ಮಾಡ್ಯಾಳವ್ವ ದಿಡಗಲಿಂದ
ಉಗ್ಗಿ ನೀಡ್ಯಾಳವ್ವ ತಬಕಲೆ ತಂದ
ತುಪ್ಪ ನೀಡ್ಯಾಳವ್ವ ಗಿಂಡಿಲಿ ತಂದ
ಸಾಶ್ಟಾಂಗಾಕ್ಯಾಳ ಪಂತಿ ಮುಂದ
ಸಲ್ಲಸರಿ ಬಡವಿ ಗಂಡೆಂದ
ಲಿಂಗ ಪೂಜಿ ಮಾಡತಿದ್ದಳ
ನಿಜ ಬಕ್ತ ನೀಲ ಲಿಂಗ ಪೂಜಿ ಮಾಡತಿದ್ದಳ ॥ ೬ ॥

ಎಲ್ಲಾ ಜಂಗಮ ಉಂಬಾತಿಗೆ
ಬಲ್ಲ ಜಂಗಮ ಬಡದಾಡಿ ಬಂದ
ಬಲ್ಲಿದ ನೀಲ ಬಾ ಇಲ್ಲೆಂದ
ಉಗ್ಗಿ ತುಪ್ಪಾನಾದರ ವಲ್ಲೆನಂದ
ದ್ವಾಸಿ ಪಾನಕಾದರ ಉಣತೇನಂದ
ಮಾಡಿ ನೀಡದಿದ್ದರ
ಅರವಟ್ಟಿಗೆ ಆಣಿ ಆಗತದ ಬಡವಿ ಗಂಡೆಂದ
ಲಿಂಗ ಪೂಜಿ ಮಾಡತಿದ್ದಳ
ನಿಜ ಬಕ್ತ ನೀಲ ಲಿಂಗ ಪೂಜಿ ಮಾಡತಿದ್ದಳ ॥ ೭ ॥

ಬೈತಾರ ಸ್ವಾಮಿ ಓಗಬಾಡದಂದು
ನನ್ನ ಗಂಡನ ನೆದರ ಕೆಟ್ಟಿತೆಂದ
ಗುರುವಿನ ಪರಿ ಕಶ್ಟವನಿಟ್ಟು
ದ್ವಾಸಿ ಮಾಡ್ಯಾಳವ್ವ ದಿಡಗಲಿಂದ
ದ್ವಾಸಿ ನಿಡ್ಯಾಳವ್ವ ತಬಕಲೆ ತಂದ
ಪಾನಕ ಆಕ್ಯಾಳ ಗಿಂಡಿಲಿ ತಂದ
ಸಾಶ್ಟಾಂಗಾಕ್ಯಾಳವ್ವ ಪಂತಿ ಮುಂದ
ಸಲ್ಲಸರಿ ಬಡವಿ ಗಂಡೆಂದ
ಲಿಂಗ ಪೂಜಿ ಮಾಡತಿದ್ದಳ
ನಿಜ ಬಕ್ತ ನೀಲ ಲಿಂಗ ಪೂಜಿ ಮಾಡತಿದ್ದಳ ॥ ೮ ॥

ಎಲ್ಲ ಜಂಗಮ ಉಂಬಾತಿಗೆ
ಬಲ್ಲ ಜಂಗಮ ಬಡದಾಡಿ ಬಂದ
ಬಲ್ಲಿದ ನೀಲ ಬಾ ಇಲ್ಲೆಂದ
ದ್ವಾಸಿ ಪಾನಕಾದರ ವಲ್ಲೆನಂದ
ಶೀರಣ್ಯಾದರ ಉಣತೆನಂದ
ಮಾಡಿ ನೀಡದಿದ್ದರೆ

ಅರವಟ್ಟಿಗೆ ಆನಿ ಆಗತದ ಬಡಪಿ ಗಂಡೆಂದ
ನಿಂಗ ಪೂಜಿ ಮಾಡತಿದ್ದಳ
ನಿಜ ಬಕ್ತ ನೀಲ ಲಿಂಗ ಪೂಜಿ ಮಾಡತಿದ್ದಳ ॥ ೯ ॥

ಬೈತಾರ ಸ್ವಾಮಿ ಓಗಬಾಡದಂದು
ನನ್ನ ಗಂಡನ ನೆದರ ಕೆಟ್ಟಿತೆಂದ
ಗುರುವಿನ ಪರಿ ಕಶ್ಟವನಿಟ್ಟು
ಚಪಾತಿ ಮಾಡ್ಯಾಳ ದಿಡಗಲಿಂದ
ಚಪಾತಿ ನಿಡ್ಯಾಳವ್ವ ತಬಕಲಿ ತಂದ
ಶೀಕರಣೆ ಆಕ್ಯಾಳ ಗಿಂಡಿಲಿ ತಂದ
ಸಾಶ್ಟಾಂಗಾಕ್ಯಾಳವ್ವ ಪಂತಿ ಮುಂದ
ಸಲ್ಲಸರಿ ಬಡವಿ ಗಂಡೆಂದ
ಲಿಂಗ ಪೂಜಿ ಮಾಡತಿದ್ದಳ
ನಿಜ ಬಕ್ತ ನೀಲ ಲಿಂಗ ಪೂಜಿ ಮಾಡತಿದ್ದಳ ॥ ೧೦ ॥

ಬೇಡಿದ್ದ ನೀಡತಾಳ ನೀಲಮ್ಮ ತಾಯಿ
ದಾರ‍್ಯಾಗೇಸ ಮಂದಿ ಅದಿಯಾರೆಂದ
ಬಗ್ಗಿ ನೋಡತಾಳ ಉಗ್ರಾಣ ಕೋಣಿ
ಕೋಣ್ಯಾಗಿರುವುದು ಗಂಗಾಳೊಂದು ತೆಂಬಿಗೊಂದು
ಬಾಳ ನೆಡಿತದ ಬಸವ ನಿಂದಂದ
ಲಿಂಗ ಪೂಜಿ ಮಾಡತಿದ್ದಳ
ನಿಜ ಬಕ್ತ ನೀಲ ಲಿಂಗ ಪೂಜಿ ಮಾಡತಿದ್ದಳ ॥ ೧೧ ॥

– ಕೃತಿ: ನಮ್ಮ ಕನ್ನಡ ಪ್ರೇಮದ ಜೋತಿ

***

ನಿಜ ಭಕ್ತಿ ನೀಲಮ್ಮ

ನಿಜ ಭಕ್ತಿ ನೀಲಮ್ಮ
ಲಿಂಗ ಪೂಜಿ ಮಾಡತ್ತಿದ್ದಳು ॥ ಪ ॥
ಬಸವಣ್ಣ ಬಂದ ಮಡದಿಗಂದ
ಅಡಗಿ ಮಾಡರಿ ಭಕ್ತಿದಿಂದ
ಪಾದಕ ಭಿನ್ನ ಹೇಳರೆಂದ
ಹೂವ ಪತ್ತರಿ ಆನಂದ ಗಿರಿಯೇ
ಲಿಂಗ ಪೂಜಿ ಮಾಡತ್ತಿದ್ದಳು ॥ ೧ ॥

ಹಾಂಡ್ಯಾ ಭಾಂಡ್ಯಾ ಥೆಂಬಿಗಿಗೋಳು
ಒತ್ತಲೆಂಬದು ಒಲಿಯ ಹೂಡಿ
ಹುಗ್ಗಿ ಪಾಲಿಶೊಂದಡುಗಿಯ ಮಾಡಿ
ಹುಗ್ಗಿ ನೀಡ್ಯಾಳ ಬುಟ್ಟಿಲಿ ತಂದು
ತುಪ್ಪ ನೀಡ್ಯಾಳ ಗಿಂಡಿಲಿ ತಂದು
ಸಾಷ್ಟಾಂಗ ಹಾಕ್ಯಾಳೆ ಪಂಗತಿ ಮುಂದು
ಸಲ್ಲಸ್ರಿ ಸ್ವಾಮಿ ಬಡವ ಗಂಡನೆಂದು
ಲಿಂಗ ಪೂಜಿ ಮಾಡತ್ತಿದ್ದಳು ॥ ೨ ॥

ಹುಗ್ಗಿ ಊಟ ಉಂಬದರೊಳಗ
ಹುಗ್ಗ ಜಂಗಮು ಕಡುಬೇಗ ಎದ್ದ
ಹುಗ್ಗಿನಾದರ ಭಾಗ್ಯನಂದ
ಹೋಳಗ್ಯಾದರ ಊಣತಿನೆಂದ
ಇಲ್ಲದಿದ್ದರ ಹೋಗತಿನೆಂದ
ಅನ್ಯವಾಯಿತ್ರಿ ಸ್ವಾಮಿ ಬಡವ ಗಂಡನೆಂದು
ಲಿಂಗ ಪೂಜಿ ಮಾಡತ್ತಿದ್ದಳು ॥ ೩ ॥

ಹುಗ್ಗಿನಾದರಾಗ್ಯಾದಂದು
ಹುಗ್ಗಿ ನೀಡ್ಯಾಳೆ ಬುಟ್ಟಿಲಿ ತಂದು
ತುಪ್ಪ ನೀಡ್ಯಾಳೆ ಗಿಂಡಿಲಿ ತಂದು
ಸಾಷ್ಟಾಂಗ ಹಾಕ್ಯಾಳೆ ಪಂಗತಿ ಮುಂದ
ಸಲ್ಲಸ್ರಿ ಸ್ವಾಮಿ ಬಡವ ಗಂಡನೆಂದು
ಲಿಂಗ ಪೂಜಿ ಮಾಡತ್ತಿದ್ದಳು ॥ ೪ ॥

ಹೋಳಿಗ್ಯಾದರಆಗ್ಯಾವೆಂದು
ಹೋಳಿಗಿ ನೀಡ್ಯಾಳೆ ಬುಟ್ಟಿಲಿ ತಂದು
ತುಪ್ಪ ನೀಡ್ಯಾಳೆ ಗಿಂಡಿಲಿ ತಂದು
ಸಾಷ್ಟಾಂಗ ಹಾಕ್ಯಾಳ ಪಂಗತಿ ಮುಂದ
ಸಲ್ಲಸ್ರಿ ಸ್ವಾಮಿ ಬಡವ ಗಂಡನೆಂದು
ಲಿಂಗ ಪೂಜಿ ಮಾಡತ್ತಿದ್ದಳು ॥ ೫ ॥

ಹೋಳಿಗೂಟ ಉಂಬದೊರೊಳಗ
ಹೋಳ ಜಂಗಮ ಕಡುಬೇಗ ಎದ್ದ
ಹೋಳಗ್ಯಾದರ ಭಾಗ್ಯನಂದ
ದೋಸ್ಯಾನಾದರ ಉಣತಿನಂದ

ಇಲ್ಲದಿದ್ದರ ಹೋಗತಿನಂದ
ಅನ್ಯವಾಯಿತ್ರಿ ಸ್ವಾಮಿ ಬಡವ ಗಂಡನೆಂದು
ಲಿಂಗ ಪೂಜಿ ಮಾಡತ್ತಿದ್ದಳು ॥ ೬ ॥

ದೋಸನಾಗ್ಯಾವಾದರೆಂದು
ದೋಸ್ಯಾ ನೀಡ್ಯಾಳೆ ಬುಟ್ಟಿಲಿ ತಂದು
ತುಪ್ಪ ನೀಡ್ಯಾಳೆ ಗಿಂಡಲಿ ತಂದು
ಸಾಷ್ಟಾಂಗ ಹಾಕ್ಯಾಳೆ ಪಂಗತಿ ಮುಂದ
ಸಲ್ಲಿಸ್ರಿ ಸ್ವಾಮಿ ಬಡವ ಗಂಡನೆಂದು
ಲಿಂಗ ಪೂಜಿ ಮಾಡತ್ತಿದ್ದಳು ॥ ೭ ॥

ದೋಸ್ಯನಾದರ ಉಂಬದರೊಳಗ
ದೋಸ್ಯಾ ಜಂಗಮ ಕಡುಬೇಗ ಎದ್ದ
ದೋಸ್ಯನಾದರ ಭಾಗ್ಯನೆಂದ
ಪೂರಿನಾದರ ಊಣತಿನೆಂದ
ಇಲ್ಲದಿದ್ದರ ಹೋಗತಿನೆಂದ
ಅನ್ಯವಾಯಿತ್ರಿ ಸ್ವಾಮಿ ಬಡವ ಗಂಡನೆಂದು
ಲಿಂಗ ಪೂಜಿ ಮಾಡತ್ತಿದ್ದಳು ॥ ೮ ॥

ಪೂರಿನಾದರ ಆಗ್ಯಾವ ಎಂದು
ಪೂರಿ ನೀಡ್ಯಾಳೆ ಬುಟ್ಟಿಲಿ ತಂದು
ತುಪ್ಪ ನೀಡ್ಯಾಳ ಗಿಂಡಿಲಿ ತಂದು
ಸಾಷ್ಟಾಂಗ ಹಾಕ್ಯಾಳೆ ಪಂಗತಿ ಮುಂದ
ಸಲ್ಲಿಸ್ರಿ ಸ್ವಾಮಿ ಬಡವ ಗಂಡನೆಂದು
ಲಿಂಗ ಪೂಜಿ ಮಾಡತ್ತಿದ್ದಳು ॥ ೯ ॥

ಪೂರಿನೂಟ ಉಂಬದರೊಳಗ
ಪೂರ ಜಂಗಮ ಕಡು ಬೇಗ ಎದ್ದ
ಪೂರಿನಾದರ ಭಾಗ್ಯನಂದ
ಬೊಂದ್ಯಾನಾದರ ಊಣತಿನೆಂದ
ಇಲ್ಲದಿದ್ದರ ಹೋಗತಿನಂದ
ಅನ್ಯವಾಯಿತ್ರಿ ಸ್ವಾಮಿ ಬಡವ ಗಂಡನೆಂದು
ಲಿಂಗ ಪೂಜಿ ಮಾಡತ್ತಿದ್ದಳು ॥ ೧೦ ॥

ಬೊಂದ್ಯಾನಾದರಾಗ್ಯಾವೆಂದು
ಬೊಂದ್ಯಾ ನೀಡ್ಯಾಳೆ ಬುಟ್ಟಿಲಿ ತಂದು
ತುಪ್ಪ ನೀಡ್ಯಾಳೆ ಗಿಂಡಿಲಿ ತಂದು
ಸಾಷ್ಟಾಂಗ ಹಾಕ್ಯಾಳೆ ಪಂಗತಿ ಮುಂದ
ಸಲ್ಲಸ್ರಿ ಸ್ವಾಮಿ ಬಡವ ಗಂಡನೆಂದು
ಲಿಂಗ ಪೂಜಿ ಮಾಡತ್ತಿದ್ದಳು ॥ ೧೧ ॥

– ಶ್ರೀಮತಿ ಶರಣಮ್ಮ ಎಳಗುಂಡಿ

***

ನಿಜಭಕ್ತಿ ನೀಲಮ್ಮ

ನಿಜಭಕ್ತಿ ನೀಲಮ್ಮ
ಲಿಂಗಪೂಜಿ ಮಾಡುತ್ತಿದ್ದಾಳ ॥ ಪ ॥
ಶಿವನು ಬಂದಾರೋಣಿಯ ಮುಂದ
ಬಿನ್ನಕ ಬರುವೆನು ನಿಮ್ಮನಿಗೆಂದ
ಸದರ ಮೂರುತಿ ಗುಣಗಳಲಿಂದ
ನೀಲಮ್ಮ ಇದ್ದಲ್ಲಿ ಕೇಡಿಲ್ಲೆಂದ
ತೊಂಭತ್ತಾರು ಸಾವಿರ ಜಂಗಮರು ಬಂದು
ಜೋಳಿಗಿ ಇಟ್ಟಾರ ಸುಪ್ಪತ್ತಿಗಿಯಿಂದ
ಮಠಮಾನ್ಯ ಸರಿಹೋಗಲವಂದ
ತಂದಿಟ್ಟಾರ ದಂಡೀಕೋಲ ಜೋಳಗಿ
ನೀಲಮ್ಮನ ಮುಂದ ॥ ೧ ॥

ಜಳಕ ಜಾಪತ್ರಿ ಮಾಡ್ಯಾಳಾಗ
ನಿಲುಕುಸಿ ಮಡಿಗೋಳ ಉಟ್ಟಾಳಾಗ
ಹೂವ ತಂದಾಳ ಸರಿ ರಾತ್ರ್ಯಾಗ
ಮಾಡತೇವ ಸ್ವಾಮಿ ನಿಮ್ಮ ಪಾದವಲಿಂದ
ಮಾಡವ ಚಿಂತಿ ನಿಮಗ್ಯಾಕೆಂದಾ ॥ ೨ ॥

ಒಲಿಯ ಸಾರಸ್ಯಾಳಾ ನೇಕಿಲಿಂದಾ
ಚರಗಿಯಿಟ್ಟಾಳ ಒಲಿಯ ಮ್ಯಾಲ
ಅನ್ನವ ಮಾಡ್ಯಾಳ ಬಹುಪಸಂದ

ಅಗಲಕೊಟ್ಟಾಳ ಮನುಷ್ಯಗೊಂದ
ಅನ್ನ ನೀಡ್ಯಾಳೆ ಹಿಡಕೀಲಿ ತಂದ
ಹಾಲ ನೀಡ್ಯಾಳ ಚರಗೀಲಿ ತಂದ
ತುಪ್ಪ ನೀಡ್ಯಾಳ ಹೂಜಿಲಿ ತಂದ
ಸಕ್ಕರಿ ನೀಡ್ಯಾಳ ಬೊಗಸಿಲಿ ತಂದ
ಸಾಷ್ಠಾಂಗ ಹಾಕ್ಯಾಳ ಸರಪಂಕ್ತಿಯ ಮುಂದ
ಸಲಿಸಿರಿ ಎನ್ನ ಬಡವ ಗಂಡನದೆಂದ ॥ ೩ ॥

ಎಲ್ಲಾ ಜಂಗಮರ ಉಂಬೋದರೊಳಗ
ಖಿಲ್ಲ ಜಂಗಮ ಜಗಳವ ತೆಗೆದ
ಬಲ್ಲಿದ ನೀಲಾ ಬಾಯೆಂದು ಕರೆದ
ಅನ್ನಯೇನು ಭಾಗ್ಯ ಮಾಡಿದೆಂದ
ಅನ್ನ ನಾನು ಉಣ್ಣೋದಿಲ್ಲೆಂದ
ಹೋಳಿಗಿ ಮಾಡಿದರ ಉಣ್ಣುತ್ತಿನೆಂದ
ಮಾಡಲ್ಲದರ ಬಿಡು ಹೋಗುತಿನೆಂದ ॥ ೪ ॥

ಹೋಗಬ್ಯಾಡ್ರಿ ಸ್ವಾಮಿ ಹೊರೆಯಾಕೆಂದು
ಹೋಳಿಗಿ ಏನು ಭಾಗ್ಯ ಮಾಡುತಿನೆಂದು
ಅಗಲಕೊಟ್ಟಾಳ ಜಂಗಮರಿಗೊಂದು
ಹೋಳಿಗಿ ನೀಡ್ಯಾಳ ಎಡಿಗಿ ಎರಡೆರೆಡು
ಹಾಲ ನೀಡ್ಯಾಳ ಚರಗಿಲಿ ತಂದು
ತುಪ್ಪ ನೀಡ್ಯಾಳ ಹೂಜಿಲಿ ತಂದು
ಸಕ್ಕರಿ ನೀಡ್ಯಾಳ ಬೊಗಸಿಲಿಂದ
ಸಾಷ್ಠಾಂಗ ಹಾಕ್ಯಾಳ ಸರಪಂಕ್ತಿಯ ಮುಂದ
ಸಲಿಸಿರಿ ಎನ್ನ ಬಡಗಂಡನದೆಂದು ॥ ೫ ॥

ಮತ್ತ ಎಲ್ಲಾ ಜಂಗಮರು ಉಂಬದರೊಳಗ
ಮಾವಿನ ಹಣ್ಣ ತರಸೆಂದಾನ
ಆಯಿತು ತರಸ್ತಿನಿ ಅನತಾಳಾಕಿ
ಆಷಾಢ ಮಾಷ್ಯಾಡ ಹುಣ್ಣಿಮೆ ಮುಂದ
ಆಗಲೆಂದು ತರಸ್ಯಾಳ ಮಾವಿನ ಹಣ್ಣ
ತಂದು ನೀಡುತಾಳ ಎಡಿಗಡಿಗೊಮ್ಮೆ
ಸಕ್ಕರಿ ನೀಡುತಾಳ ಬುಟ್ಟಿಲಿಂದ
ತುಪ್ಪ ನೀಡುತಾಳ ಗಿಂಡಿಲಿ ತಂದು

ಸಾಷ್ಟಾಂಗ ಹಾಕ್ಯಾಳ ಸರಿಪಂಕ್ತಿ ಮುಂದ
ಸಲ್ಲಿಸಿರಿ ಬಡವ ಗಂಡನದೆಂದು ॥ ೬ ॥

ಹೋಳಿಗಿ ರಸವ ಉಣ್ಣುವದರೊಳಗ
ಖುಲ್ಲ ಜಂಗಮ ಜಗಳವ ತೆಗೆದ
ಹೋಳಿಗಿ ರಸವ ಉಣ್ಣೋದಿಲ್ಲೆಂದ
ದೋಸೆ ತಿಂತಣ ಉಣುತಿನೆಂದ
ನೀಡಲಿಲ್ಲೆಂದರ ನಿನ್ನ ಗಂಡಗ
ಧನ್ಯವಾದಯೆಂದ ॥ ೭ ॥

ಗಾಬರಿ ಆಗಿಲ್ಲ ನೀಲಮ್ಮ ಆಗ
ಗಂಡನಾ ನಾಮ ನುಡಿಯುತ್ತಾ ನೇಮ
ದೋಸೆ ತಿಂತಣ್ಣ ಮಾಡ್ಯಾಳ ಧೂಮ
ಪಂಕ್ತಿಗಿ ಬಡಸ್ಯಾಳ ಹಿಗ್ಗಿಲಿ ಆಗ ॥ ೮ ॥

ಏನು ನೇಮ ನೀಲಮ್ಮ ನಿಂದು
ಏನು ಭಕ್ತಿ ನೀಲಮ್ಮ ನಿಂದು
ತುಂಬಿದ ಗಂಗಾಳ ಬಸವಣ್ಣ
ತುಂಬಿದ ತಂಬಿಗಿ ನೀಲಮ್ಮಾ ॥ ೯ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

ಕುಂಕುಮ ಹಚ್ಚುವ ಹಾಡು

ಹಸಿಯ ಒಯ್ಯಲಿ ಕುಸುಮ ನಿನ ಕರಶ್ಯಾರೆ
ಬಸವಣ್ಣನ ಮಡದಿ ಶಿವಶರಣಿ । ಶಿವಶರಣಿ
ಬಸವಣ್ಣನ ಮಡದಿ ಶಿವಶರಣಿ ॥ ಪ ॥

ಬಸವಣ್ಣನ ಮಡದಿ ಶಿವಶರಣಿ ನೀಲಮ್ಮಗ
ಹಸಿಯ ಒಯ್ಯಲ್ಲಿ ಕರಶ್ಯಾರೆ । ಕರಶ್ಯಾರೆ
ಹಸಿಯ ಒಯ್ಯಲ್ಲಿ ಕರಶ್ಯಾರೆ । ॥ ೧ ॥

ರಂಗವಯ್ಯಲ್ಲಿ ತಂಗಿನ ಕರಶ್ಯಾರೆ

ಸಂಗಯ್ಯನ ಮಡದಿ ಶಿವಶರಣಿ । ಶಿವಶರಣಿ
ಸಂಗಯ್ಯನ ಮಡದಿ ಶಿವಶರಣಿ । ॥ ೨ ॥

ಸಂಗಯ್ಯನ ಮಡದಿ ಶಿವಶರಣಿ ನೀಲಮ್ಮಗ
ರಂಗ ಒಯ್ಯಲ್ಲಿ ಕರಶ್ಯಾರೆ । ಕರಶ್ಯಾರೆ
ರಂಗ ಒಯ್ಯಲ್ಲಿ ಕರಶ್ಯಾರೆ । ॥ ೩ ॥

ಅದ್ದುನಗ್ಯಾಗ ಉದ್ದ ಗುಜ್ಜಿ ತಕ ತಕೊಂಡು
ತಿದ್ದುತ ಹಸಿಯ ಬರದಾಳೆ । ಬರದಾಳೆ
ತಿದ್ದುತ ಹಸಿಯ ಬರದಾಳೆ । ॥ ೪ ॥

ತಿದ್ದೂತ ಹಸಿಯ ಬರದಾರೆ ನಾಕಮೂಲಿಗೀ
ಬರಿಯವ್ವ ಚೆನ್ನಬಸವಣ್ಣ । ಬಸವಣ್ಣ
ಬರಿಯವ್ವ ಚೆನ್ನಬಸವಣ್ಣ । ॥ ೫ ॥

ಸದ್ಯಾಗಿನ ಮೂಲವೆಲ್ಲ ತಕ ತಕ್ಕೊಂಡು
ಚೆಲ್ಲೂತ ಹಸಿಯ ಬರದಾಳೆ । ಬರದಾಳೆ
ಚೆಲ್ಲೂತಾ ಹಸಿಯ ಬರದಾಳೆ । ॥ ೬ ॥

ಚೆಲ್ಲುತ ಹಸೀಯ ಬರದಾಳ ನಾಕಮೂಲೀಗಿ
ಬರಿಯವ್ವ ಚೆನ್ನಬಸವನ । ಬಸವಣ್ಣ
ಬರಿಯವ್ವ ಚೆನ್ನಬಸವಣ್ಣ । ॥ ೭ ॥

– ಶ್ರೀಮತಿ ಭಾಗೀರಥಿ ಸ್ವಾಮಿ
– ಶ್ರೀಮತಿ ಉತ್ತಮಬಾಯಿ ಮಠಪತಿ

***

ಕುಂಕುಮ ಹಚ್ಚುವ ಪದ

ಹಸಿಯ ಹೊಯ್ಯಲಿ ಕುಸುಮ ಮಲ್ಲಿಗೆ ಕರಸ್ಯಾರೆ
ಬಸವಣ್ಣನ ಮಡದಿ ಶಿವಶರಣೆ । ಶಿವಶರಣೆ
ಬಸವಣ್ಣನ ಮಡದಿ ಶಿವಶರಣೆ
ಬಸವಣ್ಣs ಮಡದಿ ಶಿವಶರಣೆ ನೀಲಮ್ಮಗ
ಹಸಿಯ ಹೊಯ್ಯಲು ಕರಸ್ಯಾರ । ಕರಸ್ಯಾರ
ಹಸಿಯ ಹೊಯ್ಯಲು ಕರಸ್ಯಾರ ॥ ೧ ॥

ಅದ್ದನಗ್ಯಾನ ಮುತ್ತು ಗುಜ್ಜಿ ತಾ ತಕ್ಕೊಂಡು
ಚಲ್ಲುತಾ ಹಸಿಯ ಬರದಾಳ । ಬರದಾಳ
ಚಲ್ಲುತಾ ಹಸಿಯ ಬರದಾಳ
ಚಲ್ಲುತಾ ಹಸಿಯ ಬರದಾಳ ನಾಕ ಮೂಲಿಗಿ
ಬರಿರವ್ವ ಚನ್ನಬಸವಣ್ಣ ಬಸವಣ್ಣ ।
ಬರಿರವ್ವ ಚನ್ನಬಸವಣ್ಣ ॥ ೨ ॥

ಸೊಲ್ಲಾಗಿನ ಮುತ್ತು ನಲ್ಲಿ ತಾ ತಕ್ಕೊಂಡು
ಚಲ್ಲುತಾ ಹಸಿಯ ಬರದಾಳ । ಬರದಾಳ
ಚಲ್ಲುತಾ ಹಸಿಯ ಬರದಾಳ
ಚಲ್ಲುತಾ ಹಸಿಯ ಬರದಾಳ ನಾಕ ಮೂಲಿಗಿ
ಬರಿರವ್ವ ಲಿಂಗ ಬಸವಣ್ಣ । ಬಸವಣ್ಣ
ಬರಿರೆವ್ವ ಲಿಂಗ ಬಸವಣ್ಣ ॥ ೩ ॥

ಅತ್ತ ನೂರಂಗಡಿ ಇತ್ತ ನೂರಂಗಡಿ
ಚಿತ್ರದ ಅಂಗಡಿ ತುಳಜಾಪುರ । ಬಾಜರದಾಗ
ಕುಂಕುಮ ಬಂದಾವ ಮಗಳಿಗಿ
ಕುಂಕುಮ ಬಂದಾವ ಮಗಳ ಪೂಜಮ್ಮಗ
ಹಚ್ಚಿ ನೋಡ್ಯಾರೆ ಶುಭದಿಂದ ॥ ೪ ॥

ಅತ್ತ ನೂರಂಗಡಿ ಇತ್ತ ನೂರಂಗಡಿ
ಚಿತ್ರದ ಅಂಗಡಿ ಸೊಲ್ಲಾಪುರ । ಬಾಜರದಾಗ
ಸೀರಿ ಬಂದಾವ ಮಗಳಗಿ
ಸೀರಿ ಬಂದಾವ ಮಗಳ ಪೂಜಾಗ
ಉಡಿಸಿ ನೋಡ್ಯಾರೆ ಶುಭದಿಂದ ॥ ೫ ॥

ಅತ್ತ ನೂರಂಗಡಿ ಇತ್ತ ನೂರಂಗಡಿ
ಚಿತ್ರದ ಅಂಗಡಿ ಹುಮನಾಬಾದಿ ಬಾಜರದಾಗ
ದಂಡಿನೇ ಬಂದಾವ ಮಗಳ ಪೂಜಾಗ
ಕಟ್ಟಿನೋಡ್ಯಾರೆ ಶುಭದಿಂದ ॥ ೬ ॥

–ಶ್ರೀಮತಿ ಕಾಡಾದಿ ಗೌರವ್ವ

***

ಹಸಿಯವ ಬರೆಯಲಿ

ಹಸಿಯವ ಬರಿಯಲಿ ಕುಸುಮಲ್ಲಿನ ಕರೆಸ್ಯಾರೆ
ಬಸವಣ್ಣನ ಮಡದಿ ಶಿವಶರಣೆ
ಶಿವಶರಣೆ ಬಸವಣ್ಣನ ಮಡದಿ ಶಿವಶರಣೆ
ಬಸವಣ್ಣನ ಮಡದಿ ಶಿವಶರಣೆ ನೀಲಮ್ಮ
ಕೂಕಮ್ಮಚ್ಚಲ್ಲಿ ಕರಸ್ಯಾರೆ
ಕರಸ್ಯಾರೆ ಕೂಕಮ್ಮಚ್ಚಲ್ಲಿ ಕರಸ್ಯಾರೆ ॥ ೧ ॥

ಹಸಿಯವ ಬರೆಯಲಿ ಕುಸುಮಲ್ಲಿನ ಕರೆಸ್ಯಾರೆ
ಬಸವಣ್ಣನ ಮಡದಿ ಶಿವಶರಣೆ
ಶಿವಶರಣೆ ಬಸವಣ್ಣನ ಮಡದಿ ಶಿವಶರಣೆ
ಬಸವಣ್ಣನ ಮಡದಿ ಶಿವಶರಣೆ ನೀಲಮ್ಮ
ಸೀರಿ ಉಡಸಲ್ಲಿ ಕರಸ್ಯಾರೆ
ಕರಸ್ಯಾರೆ ಸೀರಿ ಉಡಸಲ್ಲಿ ಕರಸ್ಯಾರೆ ॥ ೨ ॥

ಹಸಿಯವ ಬರಿಯಲಿ ಕುಸುಮಲ್ಲಿನ ಕರೆಸ್ಯಾರೆ
ಬಸವಣ್ಣನ ಮಡದಿ ಶಿವಶರಣೆ
ಶಿವಶರಣೆ ಬಸವಣ್ಣನ ಮಡದಿ ಶಿವಶರಣೆ
ಬಸವಣ್ಣನ ಮಡದಿ ಶಿವಶರಣೆ ನೀಲಮ್ಮ
ಕುಬುಸ ಉಡಸಲ್ಲಿ ಕರಸ್ಯಾರೆ
ಕರಸ್ಯಾರೆ ಕುಬುಸ ಉಡಸಲ್ಲಿ ಕರಸ್ಯಾರೆ ॥ ೩ ॥

ಹಸಿಯವ ಬರಿಯಲಿ ಕುಸುಮಲ್ಲಿನ ಕರೆಸ್ಯಾರೆ
ಬಸವಣ್ಣನ ಮಡದಿ ಶಿವಶರಣೆ
ಶಿವಶರಣೆ ಬಸವಣ್ಣನ ಮಡದಿ ಶಿವಶರಣೆ
ಬಸವಣ್ಣನ ಮಡದಿ ಶಿವಶರಣೆ ನೀಲಮ್ಮ
ದಂಡಿ ಕಟ್ಟಲ್ಲಿ ಕರಸ್ಯಾರೆ
ಕರಸ್ಯಾರೆ ದಂಡಿ ಕಟ್ಟಲ್ಲಿ ಕರಸ್ಯಾರೆ ॥ ೪ ॥

ಹಸಿಯವ ಬರಿಯಲಿ ಕುಸುಮಲ್ಲಿನ ಕರೆಸ್ಯಾರೆ
ಬಸವಣ್ಣನ ಮಡದಿ ಶಿವಾಶರಣೆ
ಶಿವಶರಣೆ ಬಸವಣ್ಣನ ಮಡದಿ ಶಿವಶರಣೆ
ಬಸವಣ್ಣನ ಮಡದಿ ಶಿವಶರಣೆ ನೀಲಮ್ಮ
ಉಡಿಯ ತುಂಬಲ್ಲಿ ಕರಸ್ಯಾರೆ
ಕರಸ್ಯಾರೆ ಉಡಿಯ ತುಂಬಲ್ಲಿ ಕರಸ್ಯಾರೆ ॥ ೫ ॥

– ಶ್ರೀಮತಿ ಮಹಾನಂದಾ ವೀರಪ್ಪ ಸಂಬಾಜಿ

***

ನೋಡು ನೋಡು ಲಿಂಗವೆ

ನೋಡೋ ನೋಡೋ ನೋಡೋ ನೋಡೋ ನೋಡೋ ಲಿಂಗವೇ ।
ನೋಡೋ ಬಸವಯ್ಯನವರು ಮಾಡಿದಾಟವೇ ॥ ಪ ॥

ನುಡಿಯ ಲಾಲಿಸು ಬೇಗ ಕೆಡುವುದು ಕಲ್ಯಾಣ
ಒಡಿಯ ಸಂಗಮನೋಳು ಐಕ್ಯಾದರಂತೆ
ತಡ ಮಾಡಬ್ಯಾಡಿರಿ ಮಡದಿಗರುಹಿರೆಂದು
ಅರಸು ಬಸವರಾಜ ಹೇಳ್ದರಂತೆ ನೋಡೋ ನೋಡೋ ॥ ೧ ॥

ಹರಳಯ್ಯ ಮಧುವಯ್ಯ ಅವರಿಗಿ ಎಳಿಹೊಟಿ
ದರುಳ ಬಿಜ್ಜಳನು ಕಟ್ಟಿದನೆಂದರೇ
ಇರಬಾರದಿಲ್ಲಿನ್ನು ಶರಣರಿಗರುವೆಂದು
ಅರಸು ಬಸವರಾಜ ಪೇಳ್ದರಂತೇ ॥ ೨ ॥

ಅಲ್ಲಿಗಿ ಎಮ್ಮನು ಬರಹೇಳಿದರಂತೇ
ಅಲ್ಲಿದ್ದ ಸಂಗಮ ಇಲ್ಲಿಲ್ಲವೇ
ಅಲ್ಲಿ ಇಲ್ಲಿ ಎಂಬ ಉಭಯ ಸಂದೇಹು
ಬಲ್ಲಮಹಾತ್ಮರಿಗಿದು ಗುಣವೆ ॥ ೩ ॥

ಅಪ್ಪಣ್ಣಗಳು ಎನ್ನ ಕರೆಯ ಬಂದಿಹರು
ಕಪ್ಪಡಿ ಸಂಗಮನಾಥ ಕೇಳೋ
ಪುಷ್ಪಕ್ಕೆ ಪರಿಮಳ ಬೆರಸಿದಂತಾಯಿತು
ಎನ್ನಪ್ಪಿದ ಲಿಂಗವೇ ಮಾತಾನಾಡೋ ॥ ೪ ॥

ಸಂಗನ ಬಸವ ನೀ ರೂಪವ ತಾಳುವೆ
ಹಿಂಗದಿ ಕರ ಎತ್ತಿ ನಮಿಸುತಲೀ
ಸಂಗಮನಾಥನೆ ಈತನೆಂದು
ಎನ್ನಂಗಯ್ಯ ಲಿಂಗವೇ ಮಾತನಾಡೋ ॥ ೫ ॥

– ಶ್ರೀಮತಿ ಸುಮಿತ್ರಾದೇವಿ ಅಂಗಡಿ
– ಶ್ರೀಮತಿ ಶಶಿಕಲಾ ಶರಣಪ್ಪ ಗಿರಿ
– ಶ್ರೀಮತಿ ಸರ್ವಮಂಗಳಾ ಜೋಗೂರ
– ಶ್ರೀಮತಿ ನೀಲಮ್ಮ ನೆಲೋಗಿ

***

ಲಿಂಗದಾ ಗುಟ್ಟ ತಿಳಸ್ಯಾರ

ನೀಲಮ್ಮ ನೀ ಬಾರ ನೀಲಲೋಚನೆ ಬಾರಾ
ನೀಲಿಗಣ್ಣಿನ ಚಲುವಿ ನೀ ಬಾರಾ
ನೀಲಿಗಣ್ಣಿನ ಚಲುವಿ ನೀ ಬಾರಾ ನೀಲಮ್ಮತಾಯಿ
ಲಿಂಗದಾ ನೆಲೆಯ ಕೊಡಬಾರಾ ॥ ೧ ॥

ಸಂಗಮದೇವರಿಗಿ ಲಿಂಗದೊಳಗ ಕಂಡಿದಿ
ಹಂಗಿನ ಗುಡಿಯಾ ಹೊರಗಿಟ್ಟಿ
ಹಂಗಿನಾ ಗುಡಿಯಾ ಹೊರಗಿಟ್ಟಿ ನೀಲಮ್ಮತಾಯಿ
ಅಂಗವಾ ಮಾಡಿದಿ ನೀ ಗುಡಿ ॥ ೨ ॥

ಹಡದಿದ ಮಗನಿಗಿ ಬಾಲಸಂಗಣ್ಣ ಎನುತಿದಿ
ಬಾಲಾನಾ ಒಳಗ ನೀ ಕಂಡಿ
ಬಾಲಾನಾ ಒಳಗೆಲ್ಲ ನೀಕಂಡಿ ಸಂಗಯ್ಯಗ
ಬಾಲನಾ ಆಟ ತೀರ‍್ಯಾದ ॥ ೩ ॥

ಬಾಲನಾ ಆಟವು ಮುಗಿಯಲು ಬಾಲ ಸಂಗಣ್ಣ
ಶಿವನಾ ಪಾದವ ಸೇರಿದ
ಶಿವಪಾದ ಸೇರ‍್ಯಾನ ನಿನಮಗ ಬಾಲಸಂಗಣ್ಣ
ಶರಣೇ ನಿನ ದುಃಖ ಶಿವಬಲ್ಲ ॥ ೪ ॥

ತಿಪುರಾಂತ ಕೆರಿಮ್ಯಾಲ ಇದು ಎಂತ ವಿಪರೀತ
ನೀಲಮ್ಮ ನಡಸ್ಯಾಳ ದಾಸೋಹ
ನೀಲಮ್ಮಾ ನಡಸ್ಯಾಳ ನಿಲ್ಲದ ದಾಸೋಹ
ಬಾನದ ಗಂಜಿ ಹರದಾದ ॥ ೫ ॥

ಬಾನದ ಗಂಜಿಯು ಹರದಾದ ಮನಿಮುಂದ
ಗಂಜಿ ಕೆರಿಯೆಂದು ಹೆಸರಾಗಿ ॥ ೬ ॥

ಶರಣಿ ಶರಣೀರು ಕೂಡಿ ಸೆರಗ್ಹಚ್ಚಿ ತಲಿಮ್ಯಾಲ
ಜ್ವಾಳವ ಥಳಸ್ಯಾರ ಭಕುತೀಲಿ
ಜ್ವಾಳರ ಥಳಸ್ಯಾರ ಭಕುತಿಲಿ ಶರಣೆಯರು
ಹುಳಿಬಾನ ಮಾಡಿ ಬಡಸ್ಯಾರ ॥ ೭ ॥

ಶರಣಿ ಶರಣೇರು ಕೂಡಿ ವಿಭೂತಿ ಹಣಿಗ್ಹಚ್ಚಿ
ಅಗಸಿಯ ಹುರಿದು ಕುಟ್ಯಾರ
ಅಗಸಿಯ ತಾಹುರಿದು ಕುಟ್ಯಾರ ಭಕುತಿಲಿ
ಅಗಸಿಯ ಹಿಂಡಿ ಪರಸಾದಕ ॥ ೮ ॥

ಶರಣಿ ಶರಣೇರು ಕೂಡಿ ಲಿಂಗಪೂಜೆ ತಾಮಾಡಿ
ಲಿಂಗದಾ ಮೂಲ ತಿಳಕೊಂಡು
ಲಿಂಗದಾ ಮೂಲವ ತಿಳಕೊಂಡು ಭಕುತಿಲಿ
ಲಿಂಗಕ್ಕ ಲಿಂಗತಾ ಮಾಡಿ ॥ ೯ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೇನ, ಮಹಾದೇವಿ ಕುಂಬಾರ

***

ನೀಲಮ್ಮ ಏರಿದ ಘನ ನಿಲುವ

ಚಿತ್ತಿಟ್ಟು ಕೇಳಿರಿ ಕುಂತಜನ ನೀವೆಲ್ಲ
ನೀಲಮ್ಮ ಏರಿದ ಘನ ನಿಲುವ ಕೋಲೆನ್ನ ಕೋಲೆ ॥ ೧ ॥

ಕಲ್ಯಾಣ ಬಿಟ್ಟಾರ ಸಂಗಮಕೆ ಹೊಂಟಾರ
ಹಡಪದ ಅಪ್ಪಣ್ಣ ಹಿಂದ ಹನ ಕೋಲೆನ್ನ ಕೋಲೆ ॥ ೨ ॥

ನಸುಕಿನ ವ್ಯಾಳ್ಯಾಕ ಸಂಗಮ ಮುಟ್ಯಾರ
ಖುಸಿಯೇಟು ಸಂಗಮದ ಜನರಿಗೆ ಕೋಲೆನ್ನ ಕೋಲೆ ॥ ೩ ॥

ಕಟ್ಟಿಯ ಕಲ್ಲದು ಕಟ್ಟಿಗಿ ಕುಂತೆಂದು
ಖುಸಿಪಟ್ಟಾರ ಸಂಗಮದ ಗುರುಗಳು ಕೋಲೆನ್ನ ಕೋಲೆ ॥ ೪ ॥

ಲಿಂಗಪೂಜೆಯ ಮಾಡುತ್ತಿರುವ ಬಸವಗ
ನಿಜಲಿಂಗಿ ನೀಲಮ್ಮ ಕಂಡಾಳ ಕೋಲೆನ್ನ ಕೋಲೆ ॥ ೫ ॥

ಅರುಹಿನ ಲಿಂಗದಾಗ ಮಡದಿಯು ಹೊಳಿತಾಳ
ಬಾಗ್ಯಾರ ಬಸವಣ್ಣ ಅವಳ ನಿಲುವಿಗಿ ಕೋಲೆನ್ನ ಕೋಲೆ ॥ ೬ ॥

ಮಡದಿಯ ನೆನಪರ ಮಾಡುತಾ ಬಸವಣ್ಣ
ಅಪ್ಪಣ್ಣಗ ಕರಿತಾರ ಆ ಗಳಗಿ ಕೋಲೆನ್ನ ಕೋಲೆ ॥ ೭ ॥

ಈ ಘಳಗಿ ಅಪ್ಪಣ ಕಲ್ಯಾಣಕ ಹೋಗಬೇಕು
ಮಡದಿ ನೀಲಮ್ಮಗ ಸಂದೇಶ ಕೊಡಬೇಕು ಕೋಲೆನ್ನ ಕೋಲೆ ॥ ೮ ॥

ಗಾಬರಿ ಆಗ್ಯಾರ ಅಪ್ಪಣ್ಣ ಆ ಗಳಗಿ
ಮಿಟಿಮಿಟಿ ಮಾರಿ ನೋಡ್ಯಾರ ಕೋಲೆನ್ನ ಕೋಲೆ ॥ ೯ ॥

ಬಸವಣ್ಣ ನಗತಾರ ಅಪ್ಪಣಗ ಅನತಾರ
ಅಂಗಲಿಂಗ ಮರ್ಮ ನೀಲಮ್ಮಗ ಗೊತ್ತ ಕೋಲೆನ್ನ ಕೋಲೆ ॥ ೧೦ ॥

ಅಂಗವು ಲಿಂಗದೊಳಗ ಕೂಡಲು ಮರ್ಮವು
ಮಡದಿ ನೀಲಮ್ಮಗ ತಿಳಿಹೇಳಬೇಕ ಕೋಲೆನ್ನ ಕೋಲೆ ॥ ೧೧ ॥

ಜಗದಾಟ ಆಗ್ಯಾದ ಧರಿಋಣ ಮುಗದಾದ
ಮಡದಿಗಿ ಕರಿಲಾಕ ಖಳುವ್ಯಾರ ಕೋಲೆನ್ನ ಕೋಲೆ ॥ ೧೨ ॥

ಕರಮುಗಿದು ಅಪ್ಪಣ್ಣ ಕರಿಲಾಕ ಹೊಂಟಾರ
ಕಲ್ಯಾಣದ ಅಗಸ್ಯಾಗ ನಿಂತಾರ ಕೋಲೆನ್ನ ಕೋಲೆ ॥ ೧೩ ॥

ಶರಣರಿಗಿ ಮುಟ್ಯಾದ ಈ ಸುದ್ದಿ ಬಲುಬೇಗ
ಅಪ್ಪಣಗ ಕರಕೊಂಡು ಅನುಭವ ಮಂಟಪಕ ಕೋಲೆನ್ನ ಕೋಲೆ ॥ ೧೪ ॥

ಶರಣರ ಬಳಗಕ ಕರಮುಗಿದು ಅಪ್ಪಣ್ಣ
ಬಸವಣ್ಣರ ಸಂದೇಶ ಕೊಡುತ್ತಾರ ಕೋಲೆನ್ನ ಕೋಲೆ ॥ ೧೫ ॥

ನೀಲಮ್ಮನ ಎದೆ ತುಂಬಿ ಕಣ್ಣಾಗ ನೀರ ತುಂಬಿ
ಬಸವನ ಭಾವಕ ಸೋತಾಳ ಕೋಲೆನ್ನ ಕೋಲೆ ॥ ೧೬ ॥

ಹಿರಿಯಕ್ಕಿ ನಾಗಮ್ಮ ದೊಡ್ಡಕ್ಕಿ ಗಂಗಮ್ಮ
ನೀಲಮ್ಮಗ ಹೋಗೆನ್ನುತಾರ ಕೋಲೆನ್ನ ಕೋಲೆ ॥ ೧೭ ॥

ನೀಲಮ್ಮ ಅನತಾಳ ಹಿಂಗ್ಯಾಕ ನುಡಿತಿರಿ
ಅಲ್ಲಿದ್ದ ಸಂಗಯ್ಯ ಇಲಿಲ್ಲವೇನು ಕೋಲೆನ್ನ ಕೋಲೆ ॥ ೧೮ ॥

ಅಲ್ಲಿ ಇಲ್ಲೆಂಬ ಭಾವ ಅವರಿಗ್ಯಾಕ ಅಪ್ಪಣ್ಣ
ಕಲ್ಯಾಣ ನನಗ ಕೈಲಾಸ ಕೋಲೆನ್ನ ಕೋಲೆ ॥ ೧೯ ॥

ಚಿಕ್ಕವರು ಚನ್ನಣ್ಣ ಎದ್ದು ತಾ ನಿಂತಾರ
ನೀಲಮ್ಮಗ ಕೈಯ ಮುಗಿತಾರ ಕೋಲೆನ್ನ ಕೋಲೆ ॥ ೨೦ ॥

ಬಸವರಸರ ಮಾತೆಂಬುದು ಹುಸಿಯೆಂದು ಆಗಲ್ಲ
ಅರ್ಥಿಟ್ಟು ಹೇಳ್ಯಾನ ನಿಮಗರ ಕೋಲೆನ್ನ ಕೋಲೆ ॥ ೨೧ ॥

ಸ್ವಾಮಾರ ನಸುಕಿಗಿ ಶರಣರು ಎದ್ದಾರ
ನೀಲಮ್ಮಗ ಖಳಲಾಕ ತಯ್ಯಾರಿ ಕೋಲೆನ್ನ ಕೋಲೆ ॥ ೨೨ ॥

ನೀಲಮ್ಮನ ಕೊನಿ ಜಳಕ ಕಲ್ಯಾಣ ಊರಾಗ
ಅರಿವಿನ ಮನೆಯಾಗ ಕೊನಿ ಪೂಜೆ ಕೋಲೆನ್ನ ಕೋಲೆ ॥ ೨೩ ॥

ಕೊನಿಪೂಜೆ ಮುಗಸ್ಯಾಳ ಶರಣರಿಗಿ ಬಾಗ್ಯಾಳ
ಮಾಮನಿಗಿ ನಮಿಸಿ ನಡದಾಳ ಕೋಲೆನ್ನ ಕೋಲೆ ॥ ೨೪ ॥

ಝುಟ್ಟಂತ ತಾ ತಿರುಗಿ ನೋಡ್ಯಾಳ ನೀಲಮ್ಮ
ಶರಣರ ಒಳಗಿನ ಲಿಂಗಮ್ಮನ ಕೋಲೆನ್ನ ಕೋಲೆ ॥ ೨೫ ॥

ಲಿಂಗಮ್ಮನ ಕೈಹಿಡಿದು ನಡಿ ಅಂತ ಅನತಾಳ
ಲಿಂಗಮ್ಮ ತಲಿಬಾಗಿಸಿ ನಿಂತಾಳ ಕೋಲೆನ್ನ ಕೋಲೆ ॥ ೨೬ ॥

ಬಸವಣ್ಣ ಹೇಳ್ಯಾರ ನೀವೊಬ್ಬರೆ ಬರಬೇಕು
ಲಿಂಗಮ್ಮ ಶರಣರ ಬಳಗದೊಳಗ ಕೋಲೆನ್ನ ಕೋಲೆ ॥ ೨೭ ॥

ಹಿರಿಯಕ್ಕ ನಾಗಮ್ಮನ ಚೊಚ್ಚಿಲ ಮಗಳಾಗಿ
ಕೊನಿತನ ಮಾಡ ನೀ ಸೇವ ಕೋಲೆನ್ನ ಕೋಲೆ ॥ ೨೮ ॥

ಹೀಗಂತ ಅಪ್ಪಣ್ಣ ಮಡದಿಗಿ ನುಡಿಯಲು
ಲಿಂಗಮ್ಮ ವಚನ ಕೊಡುತಾಳ ಗಂಡಗ ಕೋಲೆನ್ನ ಕೋಲೆ ॥ ೨೯ ॥

ನೀಲಮ್ಮ ಮುಂದ ಮುಂದ ಅಪ್ಪಣ್ಣ ಹಿಂದ ಹಿಂದ
ಸಂಗಮದ ದಂಡಿಗಿ ಬರತಾರ ಕೋಲೆನ್ನ ಕೋಲೆ ॥ ೩೦ ॥

ಹೊತ್ತಾರ ಹೋಗ್ಯಾದ ಕತ್ತಲು ಆಗ್ಯಾದ
ನಸುಕಿಗಿ ಹೋಗರಿ ಸಂಗಮದ ಊರಿಗಿ ಕೋಲೆನ್ನ ಕೋಲೆ ॥ ೩೧ ॥

ನಸುಕಿನ ನಾಲ್ಕಕ ಸಂಗಮದ ದಂಡಿಮ್ಯಾಲ
ನೀಲಮ್ಮನ ಪೂಜೆ ಭರದಿಂದ ನಡದದ ಕೋಲೆನ್ನ ಕೋಲೆ ॥ ೩೨ ॥

ಬೆಳಕ ಹರಿಯುಂಟ ಅಪ್ಪಣಗ ಕರಿತಾಳ
ಲಿಂಗಾಂಗ ಸಾಮರಸ್ಯ ಅರುತಾಳ ಕೋಲೆನ್ನ ಕೋಲೆ ॥ ೩೩ ॥

ಅಂಗಲಿಂಗ ಒಂದಾಗುವ ಮರ್ಮವ ತಿಳಿಸುತಾ
ಲಿಂಗದೊಳಗ ಆಗ್ಯಾಳ ನೀಲಮ್ಮ ಕೋಲೆನ್ನ ಕೋಲೆ ॥ ೩೪ ॥

ಗಾಬರಿ ಆಗ್ಯಾರ ಹಡಪದ ಅಪ್ಪಣ್ಣ
ಸುತ್ತ ಮುತ್ತ ಜನರಿಗಿ ಕರಿತಾರ ಕೋಲೆನ್ನ ಕೋಲೆ ॥ ೩೫ ॥

ಸುತ್ತಮುತ್ತ ಜನರೆಲ್ಲ ಓಡೋಡಿ ಬರತಾರೆ
ನೀಲಮ್ಮನ ದರುಶನ ಪಡಿತಾರ ಕೋಲೆನ್ನ ಕೋಲೆ ॥ ೩೬ ॥

ಹಡಪದ ಅಪ್ಪಣ ಬಿಕ್ಕಿ ಬಿಕ್ಕಿ ಅಳತಾರ
ಎಂತದೋ ದೇವರೆ ನಿನ್ನ ನ್ಯಾಯ ಕೋಲೆನ್ನ ಕೋಲೆ ॥ ೩೭ ॥

ಸುತ್ತಲ ಜನಬಂದು ಅಪ್ಪಣ್ಣಗ ಅನತಾರ
ತಾಯಿಯ ಸಂಸ್ಕಾರ ನಡಿಬೇಕ ಕೋಲೆನ್ನ ಕೋಲೆ ॥ ೩೮ ॥

ಪೂಜೆಗೆ ಕುಂತಂತ ಜಾಗವ ಅಗಿತಾರ
ತಾಯಿಯ ಸಂಸ್ಕಾರ ಮಾಡ್ಯಾರ ಕೋಲೆನ್ನ ಕೋಲೆ ॥ ೩೯ ॥

ತಾಯಿಯ ಕಳಕೊಂಡು ತಂದಿಯ ಬಳಿಬಂದು
ಅಪ್ಪಣ್ಣ ತಿಳಸ್ಯಾರ ನಡದಿದೆಲ್ಲವು ಕೋಲೆನ್ನ ಕೋಲೆ ॥ ೪೦ ॥

ಬಸವಣ್ಣ ಎದ್ದಾರ ಜಳಕವ ಮಾಡ್ಯಾರ
ಲಿಂಗದ ಪೂಜೆಗೆ ಕುಂತಾರ ಕೋಲೆನ್ನ ಕೋಲೆ ॥ ೪೧ ॥

ಅಪ್ಪಣ್ಣ ತಾ ಬಂದು ಬಸವನ ಬಳಿಕುಂತು
ನೀಲಮ್ಮ ತಿಳಸಿದ್ದು ಹೇಳ್ಯಾರ ಕೋಲೆನ್ನ ಕೋಲೆ ॥ ೪೨ ॥

ಹೇಳುತಾ ಹೇಳುತ ಅಪ್ಪಣ್ಣನ ದ್ಯಾಹವು
ಲಿಂಗದೊಳಗೊಂದು ಆಗ್ಯಾದ ಕೋಲೆನ್ನ ಕೋಲೆ ॥ ೪೩ ॥

ಅಂಗಲಿಂಗ ಸಾಮರಸ್ಯ ಅವನಿಂದ ಕೇಳುತಾ
ಬಸವನ ಪೂಜೆ ಭರದಿಂದ ಕೋಲೆನ್ನ ಕೋಲೆ ॥ ೪೪ ॥

ಪೂಜೆಯ ಮಾಡುತ ಮಾಡುತಾ ಬಸವಣ್ಣನ
ಲಿಂಗವು ಲಿಂಗದೊಳಗಗ್ಯಾದ ಆಗ ಕೋಲೆನ್ನ ಕೋಲೆ ॥ ೪೫ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

ಬಸವಣ್ಣನ್ಹೇಣತಿ

ಬಸವಣ್ಣನ್ಹೇಣತಿ ಬಿಳಿ ಬಣ್ಣದ ನೀಲಮ್ಮ
ಚಂದಿರ ಹೊಳದ್ಹಾಂಗ ಹೊಳಿತಾಳ ಸೋಬಾನವೆ ॥ ೧ ॥

ಚಂದಿರ ಹೊಳದ್ಹಾಂಗ ಹೊಳಿತಾಳ ನೀಲಮ್ಮ
ಚೊಚ್ಚಿಲ ಬಸರಿಗ ಒಪ್ಪ್ಯಾಳ ಸೋಬಾನವೆ ॥ ೨ ॥

ಚೊಚ್ಚಿಲ ಬಸರಿಗಿ ಬಪ್ಪ್ಯಾಳ ನೀಲಮ್ಮ
ಹಗಲು ಹನ್ನೆರಡು ತಾಸ ಶಿವಪೂಜೆ ಸೋಬಾನವೆ ॥ ೩ ॥

ಕಾಡಿಲ್ಲ ಬಂಕಿಯು ಬೇಡಿಲ್ಲ ಬಾಯಿರುಚಿ
ಗುರುಲಿಂಗ ಜಂಗಮರ ಪೂಜೆ ಸೋಬಾನವೆ ॥ ೪ ॥

ಗುರುಲಿಂಗ ಜಂಗಮರ ಪೂಜೆ ಸದಾಕಾಲ ಮಾಡ್ಯಾಳ
ಅರುಯಿಟ್ಟು ದಾಸೋಹ ನಡಸ್ಯಾಳ ಸೋಬಾನವೆ ॥ ೫ ॥

ಉಗಾದಿ ಉಳದಾದ ಎರಡದಿನ ಸನಿಯಾಕ
ನೀಲಮ್ಮನ ನಡ ನೋಯಿತಾದ ಸೋಬಾನವೆ ॥ ೬ ॥

ಉಗಾದಿ ಹಬ್ಬದಿನ ಹರಿಯ ಹೊತ್ತಲಿ ಎದ್ದು
ಮಗನಿಗಿ ಜನುಮ ಕೊಡುತ್ತಾಳೆ ಸೋಬಾನವೆ ॥ ೭ ॥

ಶರಣ ಶರಣರು ಕೂಡಿ ಹಿಗ್ಗಿಲಿ ಹೋಳಿಗೆ ಮಾಡಿ
ಕೂಸಿಗಿ ಕಟ್ಟ್ಯಾರ ಮಹಾಲಿಂಗ ಸೋಬಾನವೆ ॥ ೮ ॥

ಶರಣ ಶರಣರು ಕೂಡಿ ಹಿಗ್ಗಿಲಿ ಹೋಳಿಗೆ ಮಾಡಿ
ಕೂಸಿಗಿ ಹಾಕ್ಯಾರ ತೊಟ್ಟಿಲಿದೊಳಗೆ ಸೋಬಾನವೆ ॥ ೯ ॥

ಸ್ವಾದರತ್ತಿ ನಾಗಮ್ಮ ಹಿಗ್ಗಿಲಿ ತಾ ಬಂದು
ಬಾಲಸಂಗಣ್ಣನೆಂದು ಹೆಸರಿಟ್ಟು ಸೋಬಾನವೆ ॥ ೧೦ ॥

ಬಾಲಸಂಗಣ್ಣನೆಂದು ಕರಿತಾಳ ಅವರತ್ತಿ
ಶರಣರು ಕರಿತಾರ ಹಿಗ್ಗಿಲಿ ಸೋಬಾನವೆ ॥ ೧೧ ॥

– ಶ್ರೀಮತಿ ಗೌರವ್ವ ಕಾಡಾದಿ

***

ಕಲ್ಯಾಣ ಊರಾಗ ಬಸವನ ಮನಿಯಾಗ

ಕಲ್ಯಾಣ ಊರಾಗ ಬಸವನ ಮನಿಯಾಗ
ನೀಲಮ್ಮ ನಿಂತಾಳ ಝೋಕಿಲಿ
ಹಾಲನ್ನ ಬಡಸ್ಯಾಳ ಹಿಗ್ಗಿಲಿ ॥ ೧ ॥

ಅಲ್ಲದ ಜನರಿಗಿ ಇಲ್ಲದ ಜನರಿಗಿ
ಬೆಲ್ಲದಂತ ಮಾತ ಆಡ್ಯಾಳ
ಬೆಲ್ಲದಂತ ಮಾತ ಆಡ್ಯಾಳ ನೀಲಮ್ಮ
ಸೊಲ್ಲೆತ್ತಿ ಪದವ ಹಾಡ್ಯಾಳ ॥ ೨ ॥

ಜಂಗಮರ ಪಾದಕ ಹಸನಾದ ನೀರ ಕೊಟ್ಟು
ಅಂಗಕ ಪಾವಡ ಹಾಸ್ಯಾಳ
ಅಂಗಕ ಪಾವಡ ಹಾಡ್ಯಾಳ ನೀಲಮ್ಮ
ಲಿಂಗದ ಪೂಜೆಯು ತೋರ್ಯಾಳ ॥ ೩ ॥

ಲಿಂಗದ ಪೂಜೆಯು ಖಬರಿಲ್ಲದ ನಡಸ್ಯಾಳ
ಸಂಗನೇ ಬಂದ ನೋಡಲಾಕ
ಸಂಗನೇ ಬಂದ ನೋಡಲಾಕ ಮಹಾಪೂಜೆ
ದಂಗಾಗಿ ಹೋದ ಕೈಲಾಸಕ ಅದನೋಡಿ ॥ ೪ ॥

– ಶ್ರೀಮತಿ ಗೌರವ್ವ ಕಾಡಾದಿ

***

ಗಂಗಮ್ಮ ನೀಲಮ್ಮ ಅಕ್ಕತಂಗೇರು

ಗಂಗಮ್ಮ ನೀಲಮ್ಮ ಅಕ್ಕತಂಗೇರಿಬ್ಬರು
ಸಂಗಾಗಿ ಸಂಸಾರ ಮಾಡ್ಯಾರ ॥ ೧ ॥

ಮಂತ್ರಿಯ ಮಕ್ಕಳೆಂಬ ಸೊಕ್ಕಿಲ್ಲ ಅವರಿಗೆ
ಮಂತ್ರಿ ಮಡದೆಂಬ ಗರ್ವಿಕಿ ಜರಾಯಿಲ್ಲ ॥ ೨ ॥

ಬಂಗಾರ ಬೆಳ್ಳಿಯು ತೆಗದಾರ ಮೈಮ್ಯಾಲಿಂದು
ಅಂಗಕ್ಕ ರುದ್ರಾಕ್ಷಿ ಕೊರಳಾಗ ಲಿಂಗವು ॥ ೩ ॥

ಪೀತಾಂಬರ ಊಟ್ಟಿಲ್ಲ ಜರತಾರಿ ತೊಟ್ಟಿಲ್ಲ
ನೂಲಿನ ಸೀರೆಯ ಉಟ್ಟಾರ ಇಬ್ಬರು ॥ ೪ ॥

ಮಾತೆಂಬುದು ಮೊದಲಿಲ್ಲ ಮೌನವು ಆಗಿಲ್ಲ
ಸತ್ಯಕ್ಕೆ ಉತ್ತರ ಕೊಡತಾರ ಇಬ್ಬರು ॥ ೫ ॥

– ಶ್ರೀಮತಿ ಗೌರವ್ವ ಕಾಡಾದಿ

***

ಸಿದ್ಧರಸನ ಮಗಳೆ

ಸಿದ್ಧರಸರ ಮಗಳೆ ಪದ್ಮಳ ಕೂಸೆ
ಬಸವಣ್ಣನ ಮಡದಿ ನಿಜಭಕ್ತಿ ನೀನೆ ॥ ಪ ॥

ನಿನಗ್ಯಾರು ಸಾಟಿತಾಯಿ ನೀ ಬಹಳ ಗಟ್ಟಿ ತಾಯಿ
ನೀ ಹುಟ್ಟಿದಾ ನಾಡು ಧರಿಮ್ಯಾಲಿನ ಕೈಲಾಸ ॥ ೧ ॥

ಅಂಗವೆಂಬುದು ಗಟ್ಟಿ ಮಾಡಿ ಲಿಂಗವೆಂಬುದು ಮ್ಯಾಲಿಟ್ಟಿ
ಕಟ್ಟಕಡಿಯ ತನಕ ಬಿಟ್ಟು ಇರಲಿಲ್ಲ ನೀನು ॥ ೨ ॥

ಬಸವಗ ತಾಯ್ಹಾಂಗ ಜ್ವಾಪಾನ ಮಾಡಿದಿ
ಗುರುವೆಂದು ತಿಳಿದು ಜ್ಞಾನ ನೀ ಪಡಿದಿ ॥ ೩ ॥

ಬಸವಣ್ಣ ನೀಲಮ್ಮ ದ್ಯಾಹ ಎರಡು ಆಗಿತ್ತು
ಜೀವವೆಂಬುದು ಇಬ್ಬರದು ಒಂದೇ ಆಗಿತ್ತು ॥ ೪ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

ಸೊಲ್ಲೆತ್ತಿ ಪದವ ನೀಹಾಡ

ನೀಲಮ್ಮ ನೀ ಬಾರ ನೀಲಲೋಚನೆ ಬಾರ
ಕಲ್ಲಿಗಿ ಧನಿಯ ಕೊಡಬಾರ । ಇಬ್ಬರು
ಜ್ವಾಳ ಬೀಸರಿ ಹರುಷದಲ್ಲಿ ॥ ೧ ॥

ನೀಲಮ್ಮ ನೀ ಬಾರ ನೀಲಲೋಚನೆ ಬಾರ
ಸೊಲ್ಲೆತ್ತಿ ಪದವ ನೀ ಹಾಡ । ನಿನ್ನ ಹಾಡ
ಕಲ್ಯಾಣದ ಕತೆಯ ನುಡದಾವ ॥ ೨ ॥

ನೀಲಮ್ಮ ಗಂಗಮ್ಮ ಇಬ್ಬರೂ ಕೂಡ್ಯಾರ
ಕಲ್ಯಾಣ ಊರಾಗ ಕಲ್ಹಾಕಿ । ಇಬ್ಬರೂ
ಹಾಡುತ್ತಾ ಜ್ವಾಳ ಬೀಸ್ಯಾರ ॥ ೩ ॥

ಜ್ವಾಳವ ಬೀಸ್ಯಾರ ಹಿಟ್ಟ ತಾ ತುಂಬ್ಯಾರ
ಒಲಿಹಾಕಿ ಹಂಚಿಟ್ಟು ರೊಟ್ಟಿಯಾ । ಬಡಿಯುತಾ
ಗಟ್ಟಿಯ ವಚನ ನುಡದಾರ ॥ ೪ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

ನಿಜ ಲಿಂಗಿ ನೀಲಮ್ಮ

ಆದಾವ ಮುಕ್ಕಿಗಿ ನಾನ್ಯಾರ ಹಾಡಲಿ
ರಾಜ್ಯವ ಸಲುವ ಬಸವಣ್ಣ । ನೇಣ್ಣತಿ
ನೀಲಮ್ಮ ನಿನ ಹಾಡಿ ನಿಲಸೇನ ॥ ॥ ೧ ॥

ಬಂಗಾರ್ದ ಬಸವನ ಹೆಂಡತಿ ನೀಲಮ್ಮ
ರಂಗೋಲಿ ಮುತ್ತ ಹಿಡಕೊಂಡು । ಕೈಲಾಸದ
ಲಿಂಗಾಕ ಆರತಿ ಬೆಳಗ್ಯಾಳ ॥ ॥ ೨ ॥

ಬಸವನ ಮಡದಿಯು ಮಾಸತಿ ನೀಲಮ್ಮ
ಸಂಸಾರ ಮಾಡೋದ ಕಲಿಸ್ಯಾಳ । ಅದರಾಗ
ಕಾಣದ ಶಿವಗ ತೋರ್‍ಯಾಳ ॥ ॥ ೩ ॥

ನೀಲಮ್ಮ ಎಂಬಾಕಿ ಕಣ್ಣೀಲಿ ಚಲುವಾಕಿ
ಬಿಳಿಬಣ್ಣದಾಗ ಹೊಳದಾಕಿ । ಬಸವನ
ಬಾಳೆಲ್ಲ ಹೊನ್ನ ಮಾಡಿದಾಕಿ ॥ ॥ ೪ ॥

ಲಿಂಗವು ಕೊರಳಾಗ ಈಬತ್ತಿ ಹಣೆಮ್ಯಾಗ
ಜಂಗಮ ಮನಿಗಿ ಬರುವಾಗ । ನೀಲಮ್ಮ
ಸಂಗನೇ ಬಂದೆಂದು ತಿಳಿದಾಳ ॥ ೫ ॥

ಸ್ವಾಮಾರ ದಿನದಂದು ಶಿವನಿಗಿ ನೆನಿಬೇಕ
ಶ್ರೀಗುರು ಬಸವೆಂದು ನುಡಿಬೇಕ । ನೀಲಮ್ಮನ
ಸಿರಿವಾದಕ ಶರಣೆಂದು ನಡಿಬೇಕ ॥ ೬ ॥

ಕಲ್ಯಾಣ ಊರಾಗ ಬಲ್ಲ ಶರಣರ ನಡುವೆ
ನೀಲಮ್ಮ ಹ್ಯಾಂಗ ಹೊಳದಾಳ । ಕೈಯಾನ
ಲಿಂಗದ್ಹಾಂಗ ಹೊಳೆದು ಬೆಳಗ್ಯಾಳ ॥ ॥ ೭ ॥

ಆರೆತ್ತು ಕಟ್ಟ್ಯಾಳ ಮೂರೆತ್ತು ಮೀರ್‍ಯಾಳ
ಆರುಯಿಟ್ಟು ಲಿಂಗ ನೋಡ್ಯಾಳ । ನೀಲಮ್ಮ
ಕುರುಹಿಡಿದು ಶಿವನ ಕಂಡಾಳ ॥ ॥ ೮ ॥

ಲಕ್ಷದ ತೊಂಬತ್ತಾರು ಸಾವಿರ ಜಂಗಮರ
ಲಕ್ಷವಾ ಮಾಡ್ಯಾಳ ನೀಲಮ್ಮ । ಜಂಗಮರು
ಮೋಕ್ಷ ತಾ ಪಡಿದು ಅವಳಿಂದ ॥ ೯ ॥

ಬಸವಣ್ಣನ್ಹೇಣೂತಿ ಹಸುಮಗಳು ನೀಲಮ್ಮ
ಎಸಳದ ಯಾಲಕ್ಕಿ ತೊಳಸುತ । ಹರಸ್ಯಾಳ
ಬಸವಾ ನಿಮದಂಡು ಬೆಳಿಯಾಲಿ ॥ ॥ ೧೦ ॥

ಮೂರುಬಳ್ಳ ವಿಭೂತಿ ಮಾರಿಮ್ಯಾಲ ಹೊಳದಾದ
ಅರಿವಿನ ಲಿಂಗ ಎದಿಮ್ಯಾಲ । ನೀಲಮ್ಮನ
ಸೆರಗಿನ ಮ್ಯಾಲ ಶರಣರು ॥ ॥ ೧೧ ॥

ಆಚ್ಯಾಕ ಸಂಗಮ ಈಚ್ಯಾಕ ತಂಗಡಗಿ
ನಟ್ಟ ಬಡುಬರಕ ಗಂಗಿ ಹರಿದು । ಆ ನೀರ
ಸಲ್ಯಾವ ನೀಲಮ್ಮಳ ಪೂಜಾಕ ॥ ॥ ೧೨ ॥

ತಂಗಡಗಿ ನೀಲಮ್ಮ ನಿನ ತಂಗಿಗಿ ವರ ಕೊಡ
ಅಂಗಕ ಲಿಂಗ ನೀ ಕೊಡ । ನೀಲಮ್ಮ
ಲಿಂಗದಾ ಮರ್ಮ ನೀ ತಿಳಿಸ ॥ ೧೩ ॥

ದಾಸೋಹ ಮನಿಯಾಗ ನಿಂತು ಹಾಡಕಿಯಾರ
ಬಸವನ ಮಡದಿ ನೀಲಮ್ಮ । ಹಾಡ ಕೇಳಿ
ದಾಸೋಹ ಉಣ್ಣಕೆ ಶಿವಬಂದ ॥ ॥ ೧೪ ॥

ಶರಣು ಶರಣೆಂದೆವು ಸೆರಗ್ಹಚ್ಚಿ ತಲಿಮ್ಯಾಲ
ಕರುಣಿಸ ತಾಯಿ ನೀಲಮ್ಮ । ನಮ್ಮ ಜ್ವಾಳ
ಬೆಳೆಯಲಿ ದಾಸೋಹಕೆ ಸಲ್ಲಲಿ ॥ ॥ ೧೫ ॥

ನೀಲವ್ವ ನೀಬಾರ ನೀಲಲೋಚನೆ ಬಾರ
ನೀಯೆನ್ನ ಮನೆಗೆ ಇರಬಾರ । ಸ್ವಾಮಾರ
ಹಾಲಿಗಿ ಹೆಪ್ಪ ಕೊಡಬಾರ ॥ ॥ ೧೬ ॥

ಶರಣರು ಹಸಿದಾರ ಶರಣೆ ನೀ ಎಡಿಮಾಡ
ಸರಳಿ ಪಾಯಸ ತಿಳಿದುಪ್ಪ । ನೀಲಮ್ಮ
ಶರಣ ಜಂಗಮಕ ಎಡಿಮಾಡ ॥ ॥ ೧೭ ॥

ಹರನಿಗಿ ಹಾಡಿನಿ ಗುರುವಿಗಿ ನೆನದೀನಿ
ಬಸವಣ್ಣನ ಲಿಂಗ ಹಿಡದಿನಿ । ನಿರಂಕಾರ
ಕಲಿಸಿದ ನೀಲಮ್ಮಗ ನೆನದಿನಿ ॥ ॥ ೧೮ ॥

ಎಡಕ್ಹಳ ಗಂಗಮ್ಮ ಬಲಕ್ಹಳ ನೀಲಮ್ಮ
ನಡುಬರಕ ಕುಂತು ಬಸವಣ್ಣ । ಬರದಾರ
ಕಲ್ಯಾಣ ಊರಿನ ಕೊನಿ ಓಲೆ ॥ ॥ ೧೯ ॥

– ಶ್ರೀಮತಿ ಗೌರವ್ವ ಕಾಡಾದಿ

***

ಭಾಗ–೩

ಅಷ್ಟಾವರ್ಣದ ಹಾಡುಗಳು

೧೩. ಅಷ್ಟಾವರಣದ ಹಾಡುಗಳು

ಅಷ್ಟಾವರ್ಣದ ಮಹತ್ವ

ಗೆಳದಿ ನೀ ನೋಡಿ

ಗೆಳದಿ ನೀ ನೋಡಿ ಗಂಡನ ಮಾಡಿಕೊಂಡೆ
ಗಂಡನ ಮಾಡಿಕೊಂಡೇ ಘನ ಪದವಿ ಪಡಿಕೊಂಡೆ ॥ ಪ ॥

ಗುರುಲಿಂಗ ಜಂಗಮವೆಂಬ ಗುರುಕೀಲಿ ತಿಳಿಕೊಂಡೆ
ಅಂಗಲಿಂಗ ಸಮರಸವ ಲಗ್ನ ಮಾಡಿಕೊಂಡೆ
ಇಷ್ಟಲಿಂಗ ಮಂಗಳ ಸೂತ್ರ ಕೊರಳಲಿ ಕಟ್ಟಿಕೊಂಡೆ
ಗೆಳದಿ ನೀ ಕೇಳೆ ಗಂಡನ ಮಾಡಿಕೊಂಡೆ ॥ ೧ ॥

ಅಷ್ಟಾವರಣದ ಸೀರಿ ನಿಲಗಿ ಮಾಡಿ ಉಟ್ಟಿಕೊಂಡೆ
ಪಂಚಾವರಣದ ಕುಬುಸಾ ನಾ ತೊಟ್ಟಿಕೊಂಡೆ
ಶ್ರೇಷ್ಠ ಷಟಸ್ಥಲವೆಂಬ ಶರಗ ಹೊಚ್ಚಿಕೊಂಡೆ
ಗೆಳದಿ ನೀ ಕೇಳೇ ಗಂಡನ ಮಾಡಿಕೊಂಡೆ ॥ ೨ ॥

ಭಕ್ತಿಯೆಂಬ ಬಳೆಗಳು ಕೈಯಲ್ಲಿ ಇಟ್ಟಿಕೊಂಡೆ
ಮುಕ್ತಿಯೆಂಬ ಮೂಲ ಮೂಗತಿ ಮೂಗಿನಲಿ ಇಟ್ಟಿಕೊಂಡೆ
ಯುಕ್ತಿ ವಿರಕ್ತಳಾಗಿ ಪತಿಯ ಸುಖವ ನಾ ಕಂಡೆ
ಗೆಳದಿ ನೀ ಕೇಳೇ ಗಂಡನ ಮಾಡಿಕೊಂಡೆ ॥ ೩ ॥

ಭೋದ ಪಂಚಾಕ್ಷರಿ ಭಸ್ಮವ ಹಚ್ಚಕೊಂಡೆ
ಪಾದೋದಕ ಪ್ರಸಾದ ಸ್ವಿಕರಿಸಿಕೊಂಡೆ
ಆನಂದ ಬ್ರಹ್ಮನಲ್ಲಿನಡಗಿಕೊಂಡೆ
ಗೆಳದಿ ನೀ ಕೇಳೆ ಗಂಡನ ಮಾಡಿಕೊಂಡೆ ‖ ೪ ‖

ಕಾಲಿಲ್ಲಿ ಕಣ್ಣಿಲ್ಲ ಗೋಲಾಕಾರ ಗಂಡ
ರಂಗಿಲ್ಲ ರೂಪಿಲ್ಲ ಇರುತಾನೇ ಹ್ಯಾಂಗ
ಹಸಿವೇ ನೀರಡಿಕೆ ಇಲ್ಲದವ ನನ್ನ ಗಂಡ
ಗೆಳದಿ ನೀ ಕೇಳೇ ಗಂಡನ ಮಾಡಿಕೊಂಡೆ ‖ ೫ ‖

ಜನನ ಮರಣ ಜಯಸಿದಂಥ ಮಗ ಹುಟ್ಟಿದ ಪುಂಡ
ಜಲ್ಮ ಪತ್ರಿಕಾ ತೆಗಸಿದರ ಪಾಪಿಲ್ಲದ ಪಿಂಡ
ಜಗದ ಕರ್ತವ್ಯ ಚನ್ನಮಲ್ಲಿಕಾರ್ಜುನ ದಯಾ ಪಡೆದುಕೊಂಡೆ
ಗೆಳದಿ ನೀ ಕೇಳೇ ಗಂಡನ ಮಾಡಿಕೊಂಡೆ ‖ ೬ ‖

– ಶ್ರೀಮತಿ ಜಗದೇವಿ ಮುಚಳಂಬ

***

ತನುಮನ ನಡುವೆ ಲಿಂಗಪತಿ

ಜಳಜಿಗಳನು ಹುಡುಕುತ ಹೊಂಟ ಸಿಗಲಿಲ್ಲ ಊರ
ಮೂಲನ ಹರಿಯುತ ಬಂತು ಮುಖ ತೋಳಿಕೋ ಜರ ‖ ೧ ‖

ತನುಮನ ಎರಡರ ನಡುವೇ ಲಿಂಗಪತಿ ಹಾರ
ಚಿತ್ರಶಕ್ತಿ ಚಿನ್ಮಯದೊಳಗೆ ಕುಂತಳೋ ಬ್ಯಾರ ‖ ೨ ‖

ಇಚ್ಚಾಶಕ್ತಿ ವಿಚಾರ ಮಾಡುತ ನಡದಿದಾಳೋ ದೂರ
ಕಾಲನ ಕಾಲ ತಿರುಗುತ ಹೊಂಟಿ ಶಕ್ತಿಯವತಾರ ‖ ೩ ‖

ನಿರಂಕಾರದೊಳಗೇ ನಿನ್ನ ಜಳಜಿಗಳನ ಊರ
ಹುಡುಕುತ ನಡದಿದಿ ತಂಗಿ ದಿನ ಉಳದಾವ ಮೂರ ‖ ೪ ‖

ಘನ ಪದವಿ ಪಡಿಬೇಕಾದರೆ ಜ್ಞಾನ ಶಕ್ತಿ ಆದಾವ ಪೂರ
ಅಷ್ಟಾವರಣದ ಸೀರಿಯನ್ನುಟ್ಟು ಆದಿ ನೀ ಆಕಾರ ‖ ೫ ‖

ನಿಷ್ಟಿನಿಲ್ಲಿಸಿ ನೋಡವ ತಂಗಿ ನಿಜವಾಗಿ ನಿರಂಕಾರ
ಸೀರಿ ಬಣ್ಣ ನೀರಿನೊಳಗ ಹರದೋಯ್ತಿವ ಪೂರ ‖ ೬ ‖

ಜಳಜಿಗಳನ ಗೆಳತನ ಕಡಿತನ ಇರಬೇಕವ್ವ ಪೂರ
ಅಂಥವರ ಸಂಗ ಮಾಡಿ ಮಾಡ ಸಂಸಾರ ॥ ೭ ॥

ಧರಿಯೊಳು ಕೆಳದಿ ಶಿವಯೋಗಿ ಜಡಿಯಲ್ಲಿ ನೀರ
ಝುಳಕ ಮಾಡಿ ಜಲ್ದೀಯ ಪಾದ ಹಿಡಕೋ ತಂಗಿ ನೀರ ॥ ೮ ॥

ಪತಿವರತರೆದಲಕ ಬರಲಿಲ್ಲ ಗರತಿರಾಗಿರಿ ಎಲ್ಲವರ
ಲೋಕದೊಳಗ ನಿನ್ನ ಹೆಸರ ಗಂಗಿ ಅವತಾರ ॥ ೯ ॥

– ಶ್ರೀ ಲಕ್ಷ್ಮಣ ಭೀಮರಾಯ

***

ನೆಲ್ಲು ಕುಟ್ಟೋಣ

ನೆಲ್ಲು ಕುಟ್ಟೋಣ ಬಾರಮ್ಮ ಇಬ್ಬರು ಕೂಡಿ
ನೆಲ್ಲು ಕುಟ್ಟೋಣ ಬಾರಮ್ಮ ನೆಲ್ಲು ಕುಟ್ಟೋಣ ಬಾರೆನಿಲ್ಲದೆ
ಬೆನ್ನು ಹತ್ತಿ ಹನ್ನೆರಡು ಹದಿನಾರು ನಲ್ಲೆಯರುಕೂಡಿಕೊಂಡು
ನೆಲ್ಲು ಕುಟ್ಟೋಣ ಬಾರಮ್ಮ ॥ ಪ ॥

ತನುವೆಂಬ ಒಳ್ಳು ಮಾಡಿ ಪ್ರಣವ ಎಂಬ ಒನಕೆಲಿ ಹೇರಿಹಾಕಿ
ವಿವೇಕ ಎಂಬ ಅಕ್ಕಿ ಹಸನು ಮಾಡಿ
ಹಳ್ಳ ನೀ ತೆಗೆಯಮ್ಮ ಜ್ಞಾನ ದೃಷ್ಟೀಲಿ ನೋಡಿ
ನೆಲ್ಲು ಕುಟ್ಟೋಣ ಬಾರಮ್ಮ ॥ ೧ ॥

ವಾಸನೆ ತ್ರಯಗಳೆಂಬ ಒಲೆಗುಂಡು ಮಾಡಿ ಪ್ರಾರಬ್ಧಗಡಿಗೆ ಹೇರಿ
ಕಾಮಕ್ರೋಧವೆಂಬ ಕಟ್ಟಿಗೆ ಉರಿಮಾಡಿ
ಪ್ರಪಂಚ ಪರಮಾರ್ಥ ಒಳ ಹೊರಗ ನೋಡಿ
ನೆಲ್ಲು ಕುಟ್ಟೋಣ ಬಾರಮ್ಮ ॥ ೨ ॥

ಕುದಿಯುವ ಸಮಯದಲ್ಲಿ ಮರದುಕ್ಕು ನೀರು ಬರುತದಮ್ಮ
ಸತ್ಯ ಧೀರವೆಂಬ ಹುಟ್ಟಲಿ ಹೊಡೆದು
ನೆಟ್ಟಾಗೆ ಅಡಿಗೆಯ ದಿಟ್ಟಾಗಿ ಮಾಡಮ್ಮ
ನೆಲ್ಲುಕುಟ್ಟೋಣ ಬಾರಮ್ಮ ॥ ೩ ॥

ಪರಮಾನ್ನ ಪಾಯಸವು ಪ್ರಾರಬ್ಧದಿ ಪ್ರಾಪ್ತವಾದಿತು ಏಳಮ್ಮ
ಗುರುಲಿಂಗ ಜಂಗಮವ ಒಳಗವ ಕೂಡಿಕೊಂಡು

ಸ್ವಾನಂದ ಎಡಿ ಮಾಡಿ ಸವಿಯ ನೀ ನೋಡಮ್ಮ
ನೆಲ್ಲು ಕುಟ್ಟೋಣ ಬಾರಮ್ಮ ॥ ೪ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೇನ, ಮಹಾದೇವಿ ಕುಂಬಾರ

***

ಶಿವಧರ್ಮವೇ ಚಂದ

ಶಿವಧರ್ಮವೆ ಚಂದ ಶಿವಾಚಾರವೇ ಬಲುಚಂದ
ಕನ್ನಡ ನಾಡು ಬಲುಚಂದ ಶಿವಭಕ್ತರಿಗಾನಂದ ॥ ಪ ॥

ಶಿವಧರ್ಮ ಸ್ಥಾಪಕರ ಭುವಿಗವತರಿಸಿದರೆ ಶಿವ
ಪಂಚ ಮುಖದಿಂದ ಉತ್ಪತ್ತಿ ಅದರ ಪಂಚಾಚಾರ್ಯವರ ॥ ೧ ॥

ಶಿಷ್ಟ ಧರ್ಮ ದಾಸಕಳ ಅಷ್ಟಾವರಣ ತಂಗಿ ಕೇಳ
ನಿಷ್ಠೆಲಿ ನಡೆದು ನುಡಿಯೇಳು ಕಷ್ಟನಷ್ಟದ ಭಯವಿಲ್ಲ ॥ ೨ ॥

ಗುರುಲಿಂಗಾಚಾರ್ಯವ್ವ ತೀರ್ಥ ಪ್ರಸಾದವ್ವ
ವರಭಸೀತ ರುದ್ರಾಕ್ಷಿ ಮಂತ್ರವ್ವ ಇದೇ ಅಷ್ಟಾವರಣವ್ವ ॥ ೩ ॥

ಗುರುವಿಂದೆ ದೇವರವ್ವ ಗುರುವಿಂದೆ ಬಳಗವ್ವ
ಗುರುವಿಂದೆ ಪುಣ್ಯ ಜಗಕೆಲ್ಲ ನಾರಿಗುರುವಿಂದೆ ಮುಕ್ತಿಮೂಲ ॥ ೪ ॥

ಲಿಂಗಪೂಜ ಮಾಡಿದಡೇ ಲಿಂಗೈನ ಹಾಡಿ ಹರಿಸಿದಡೆ
ತಂಗಿ ಶಾಶ್ವತ ಶಿವಲೋಕವ್ವ ತನ್ನವಶವಾಗುವದವ್ವ ॥ ೫ ॥

ಪಾದತೀರ್ಥವ ಸಲಿಸೀ ಭೇದಾದಿಗಳಳಿಸಿ ಸಾಧಿಸು
ಪಂಚ ಪರಷವ್ವ ಗುರು ಚರಣ ಬಲದಿಂದ ॥ ೬ ॥

ಭಸಿತ ಮೂರಂಗಲವ್ವ ಹಸನಾಗಿ ಧರಿಸವ್ವ
ಕುಶಲದಿ ಶಮೆ ದಮೆ ಶಾಂತಿ ಆ ಕಳೆಯನು ತಿಳಿಯವ್ವ ॥ ೭ ॥

ಚಿದ್ರಗುಣಗಳು ಅಳಿದು ರುದ್ರಾಕ್ಷಿ ಧರಿಸವ್ವ
ಚಿದ್ರೂಪ ಚಿನ್ಮಯ ನಾಗವ್ವ ನಿಚುಲವಾಗಿ ಬಾಳವ್ವ ॥ ೮ ॥

ಪ್ರಾಣವೇ ಶಿವ ನಮ್ಮ ಪ್ರಾಣವೇ ಶಬ್ದಮ್ಮ
ಗುಣ ಮೂರು ಮುಚ್ಚದೆ ಶಿವಮಂತ್ರ ಮಾನಸ ಜಪಮಾಡಮ್ಮ॥ ೯ ॥

ಬಸವನ ನಮಿಸವ್ವ ಬಸವನ ಸ್ಮರಿಸವ್ವ
ಬಸವಾ ಬಸವಾ ಅನುತಲಿ ಭವಭಾದೆಯ ಕಳಿಯವ್ವ ॥ ೧೦ ॥

ನೀತಿಯ ನಡಿ ಚಂದ ಭಕ್ತಿಯ ನುಡಿಚಂದ
ಮುಕ್ತಿಯ ಮಾರ್ಗಕೆ ಇದೇ ಸಂದ ವಿರುಪಾಕ್ಷನಿಗಾನಂದ ॥ ೧೧ ॥

ಕನ್ನಡ ನುಡಿ ಚಂದ ಕನ್ನಡ ನೆಲಚಂದ
ಕನ್ನಡತಾಯಿಗೆ ನುಡಿನಮನ ಚಂದ ಶಿವಭಕ್ತರಿಗಾನಂದ ॥ ೧೨ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

ಅಷ್ಟಾವರಣದ ಮನಿಯಲಿ

ತನ್ನ ಪುರುಷರ ಜೋಡ ತನಗವ್ವ ತಂಗಿ
ಅನ್ಯ ಪುರುಷರ ಸಂಗ ಕೇಡವ್ವ ॥ ಪ ॥

ಅಷ್ಟಾವರ್ಣದ ಮನಿಯೇ ಆಳವ್ವ ತಂಗಿ
ನಿಷ್ಠೆಯಿಂದಲಿ ನೀನು ಇರುಯವ್ವ
ರಷ್ಟದಿಂದಲಿ ತನವ ಕಳಿಯವ್ವ ತಂಗಿ ॥ ೧ ॥

ಆರು ಚಕ್ರವನ್ನು ಅರಿಯವ್ವ ತಂಗಿ
ಮೀರಿದಿ ಬೆಳಕನ್ನು ಹಿಡಿಯವ್ವ ಗಟ್ಟಿ
ಆರುಗುಣ ಅರುಯಿಟ್ಟು ತಂಗಿ ॥ ೨ ॥

ಸೇರಿ ಶಿವನೋಳು ಬೆರಿಯವ್ವ ತಂಗಿ
ಆನಂದ ಗುರುವಿನ ಕೊಡಪ್ಪ
ಗುರುಲಿಂಗ ಜಂಗಮದೊಳು ನೀನಿರು ತಂಗಿ ॥ ೩ ॥

– ಶ್ರೀಮತಿ ಕಾಡಾದಿ ಗೌರವ್ವ

***

ಜಂಗಮ ಮೊದಲು ಬೇಕು

ಗುರುಬೇಕು ಲಿಂಗಬೇಕು
ಈ ಜಗಕ್ಕ ಜಂಗಮ ಬೇಕೇಬೇಕು ॥ ಪ ॥

ವಿಭೂತಿಬೇಕು ರುದ್ರಾಕ್ಷಿಬೇಕು ಪಾದೋದಕ ಪ್ರಸಾದಬೇಕು
ಈ ಬಾಯಿಯೊಳಗ ಮಂತ್ರವದು ಮೊದಲು ಬೇಕು ॥ ೧ ॥

ಮತವನ್ನು ಕಲಿಸುವಂತ ಮತಿವಂತ ಬೇಕು
ನೀತಿಯನ್ನು ಕಲಿಸುವಂತ ನೀತಿವಂತಬೇಕು ॥ ೨ ॥

ಇಷ್ಟಲಿಂಗ ಪೂಜಿಸಿ ಕಷ್ಟಪಡಬೇಕು
ಅಷ್ಟಾವರಣದಲ್ಲಿ ನಿಷ್ಠೆ ಇಡಬೇಕು ॥ ೩ ॥

ನಿತ್ಯದಿ ನೀತಿಯ ಮಾತಾಡಬೇಕು
ಸತ್ಯಕ್ಕೆ ಸಲ್ಲುವ ಕೃಪೆ ಇರಬೇಕು ॥ ೪ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೇನ, ಮಹಾದೇವಿ ಕುಂಬಾರ

***

ಜೋ ಜೋ ಎಂದು ಜಲ್ಮಕೆ ಬಂದು

ಜೋ ಜೋ ಎಂದು ಜಲ್ಮಕೆ ಬಂದು
ನಿತ್ಯ ನಿರಂಜನ ಪ್ರಭುದೇವರೆಂದು
ಸಾಜ ಹೇಳಿದ ಮಾತು ಮನಸ್ಸಿಗಿ ತಂದು
ನಮ್ಮ ಮೂಲ ಪ್ರಣವ ಮಂತ್ರ ಜಪಿಸುತ್ತಿರಲೆಂದು ಜೋ ಜೋ ॥ ೧ ॥

ಬಣ್ಣದ ತೊಟ್ಟಿಲು ಹೃದಯ ಕಮಲದೊಳಗೆ
ಹನ್ನೆರಡ ಎಸಳಿನ ಹಾಸಿಕಿ ಮ್ಯಾಲ
ಚಿನ್ಮಯ ಪ್ರಭುಲಿಂಗಗ ಮಲಗಿಸಿದ್ಹಾಂಗೆ
ನೀವು ಕನ್ನಿ ಮುತ್ತೈದೆರು ತೂಗೀರಿ ಹಿಂಗೇ ಜೋ ಜೋ ॥ ೨ ॥

ಸದ್ಗುರು ಎಂಬ ತಾಯಿ ಹಸ್ತದಲಿ
ಮೋಕ್ಷದ ಗುಗ್ಗರಿ ಹಂಚಿ ಕುಡುತಲ್ಲಿ

ಅಕ್ಷಾಂತಿ ಕಡಬು ಇಟ್ಟಾರುಡಿಯಲ್ಲಿ
ನಮ್ಮ ಸತ್ಯುಳ್ಳ ಶರಣರಿಗಿ ಕರುಸ್ಯಾರಿಲ್ಲಿಗಿ ಜೋ ಜೋ ॥ ೩ ॥

ಅಷ್ಟಾವರಣದ ಶಾಲಿಗಳನ್ನುಟ್ಟು
ನಿಷ್ಠ ಪಂಚಾಕ್ಷರಿ ಕುಬ್ಬಸ ತೊಟ್ಟು
ಶ್ರೇಷ್ಠ ಸಿರಸ್ಥಲ ವಸ್ತ್ರಗಳಿಟ್ಟು
ನಮ್ಮ ಇಷ್ಟ ಲಿಂಗಯ್ಯಗ ತೂಗೀರಿ ಇಟ್ಟು ಜೋ ಜೋ ॥ ೪ ॥

ಆರು ಮೂರರಾವ ರತ್ನದ ಮೂಲೆ
ಪರಶಿವನ ತತ್ವ ಪದಕ ಕೊರಳಲ್ಲಿ
ಧೀರ ಗಂಭೀರೆಂಬ ಖಡಗಾ ಬಿಂದಾಲಿ
ಹಿಂಗೇ ಇನ್ನೂರು ಹದನಾರು ಮುತ್ತಿನೆರಳಲಿ ಜೋ ಜೋ ॥ ೫ ॥

ಆರು ಮೂರು ಹತ್ತು ಹನ್ನೆರಡು
ಮೇಲಿನ ಕೇರೆವರು ಅವರು ಬರುವರು
ನಿಲ್ಲಿಸಿದಾರೆ ಕನ್ನಿ ಮುತ್ತೈದೇರು
ನೀವು ಮ್ಯಾಲಕೆ ಬನ್ನಿರಿ ಬಾಗಿಣದವರು ಜೋ ಜೋ ॥ ೬ ॥

ತಾನೇ ತೊಟ್ಟಿಲವಾಗಿ ತಾನೇ ತೂಗಿದ
ತಾನೇ ಮಲಗಿದ ನಿದ್ರಿಸ್ಥಾಗಿದ
ತಾನೇ ಎಚ್ಚರವಾಗಿ ಜೋಗಳ ಪಾಡಿದ
ನಮ್ಮ ಪ್ರಭು ನಿರಂಜನ ಲೀಲೆ ಲೋಲಾದ ಜೋ ಜೋ ॥ ೭ ॥

– ಶ್ರೀಮತಿ ಜಗದೇವಿ ಮುಚಳಂಬ

***

ಜೋ ಜೋ ಎಂದು ಜಲ್ಮಕೆ ಬಂದು

ಜೋ ಜೋ ಎಂದು ಜಲ್ಮಕೆ ಬಂದು
ನಿತ್ಯ ನಿರಂಜನ ಪ್ರಭುಲಿಂಗಂದು
ಸರ್ವರ್ಥೇಳಿದ ಮಾತು ಮನಸಿಗೆ ತಂದು
ನಿಡೋ ಬೀಜ ಮಂತ್ರಗೋಳು ಜೋಗುಳ ಪಾಡೆಂದು ಜೋ ಜೋ ॥೧॥

ನಾಲ್ಕಾರು ಮಂದಿ ಹತ್ತು ಹನ್ನೆರಡು
ನಮ ಕಡೆ ಉಳ್ಳವರು ಇವರಿಬ್ಬರು

ಮ್ಯಾಲಿನ ಕೇರೇರು ಹತ್ತು ಮುತ್ತೈದೇರು
ಅವರು ಮಲ್ಲಿಗೆ ಬರುತಾರ ಬಾಗಿಣದವರು ಜೋ ಜೋ ॥ ೨ ॥

ಅಷ್ಟಾವರಣದ ಸೀರಿ ಸಡಗರಲಿಂದುಟ್ಟು
ನಿಷ್ಠಿ ಪಂಚಾಕ್ಷರಿ ಕುಬ್ಬಸ ತೊಟ್ಟು
ಶ್ರೇಷ್ಠ ಷಡಕ್ಷರಿ ವಸ್ತ್ರಗಳುಟ್ಟು
ನಮ್ಮ ಇಷ್ಟ ಚನ್ನಬಸವನ ತೂಗಿರಿ ಮನಸಿಟ್ಟು ಜೋ ಜೋ ॥ ೩ ॥

ಮರವಾರ ಲಿಂಗಕ್ಕೆ ನವರತ್ನ ಮೂಲ
ಪರಸಿದ್ಧ ತತ್ವ ಫಲಕ ಕೊರಳಲ್ಲಿ
ದೇಹದ ಹಂದಿರ ಕಡಗ ಬಿಂದ್ಲೋಲಿ
ಮತ್ತ ಮುನ್ನೂರು ಅರವತ್ತು ಮುತ್ತಿನೆರಳೆಲಿ ಜೋ ಜೋ ॥ ೪ ॥

ಸಾಕ್ಷಾತ ಶ್ರೀಗುರು ತಾಯಿ ಗರಭದಲ್ಲಿ
ಮೋಕ್ಷವೆಂಬ ಗುಗ್ಗರಿ ಕೊಡತಿ ಮಂಚದಲಿ
ಅಕ್ಷಂತ್ರಿ ಇಳಿಯ ಉಡಿಯಲಿ ಕೊಡುಹುತಲಿ
ನಮ್ಮ ಅಕ್ಕ ಮಹಾದೇವಿಗಿ ತೂಗಿರಿ ಮನಸಿಟ್ಟು ಜೋ ಜೋ ॥ ೫ ॥

ತಾನೇ ತೊಟ್ಟಿಲ ಕಟ್ಟಿ ತಾನೇ ತೂಗಿದ
ತಾನೇ ತೊಟ್ಟಿಲದೊಳು ನಿದ್ರಿಗವದಿದ
ತಾನೇ ಎಚ್ಚರಾಗಿ ಎದ್ದು ಕುಂತಿದ
ನಮ್ಮ ಪ್ರಭು ನಿರಂಜನ ಲೀಲ ಹಿಂಗದ ಜೋ ಜೋ ॥ ೬ ॥

–ಶ್ರೀಮತಿ ನಾಗಮ್ಮ ಮಠಪತಿ

***

ಬ್ರಹ್ಮನು ಮಾಡ್ಯಾನ

ಬ್ರಹ್ಮನು ಮಾಡ್ಯಾನ ಈ ಮನಿ ಖುಷಿಯಿಂದ
ಒಂಭತ್ತು ಕಿಟಕಿ ಹಚ್ಯಾನ । ಶಿವಲಿಂಗ ಬನ್ನಿರೆ ॥ ೧ ॥

ಪಾಯವ ಹಾಕಿಲ್ಲ ಇಟ್ಟಂಗಿ ಇಟ್ಟಿಲ್ಲ
ಗಟ್ಯಾಗಿ ಮನಿಯ ಕಟ್ಯಾನ । ಶಿವಲಿಂಗ ಬನ್ನಿರೆ ॥ ೨ ॥

ಗಟ್ಯಾದ ಈ ಮನಿಯ ಹಾಳಕ ಯಾಕ ಮಾಡತಿ
ಮುಚ್ಚಬೇಕ ಅದರಿಂದ ಶಿವನೆಲ್ಲಿ । ಶಿವಲಿಂಗ ಬನ್ನಿರೆ ॥ ೩ ॥

ಆರು ಕಟ್ಟಬೇಕ ಮೂರೆಂಬುದು ಮೆಟ್ಟಬೇಕ
ನೆಟ್ಟಗ ಹಾದಿ ಸಿಕ್ಕಾತು । ಶಿವಲಿಂಗ ಬನ್ನಿರೆ ॥ ೪ ॥

ದ್ಯಾಹವ ಪಡದ ಮ್ಯಾಲ ಮೋಹವ ಬಿಡಬೇಕ
ಲಿಂಗದ ಪೂಜೆ ನಡಿಬೇಕ । ಶಿವಲಿಂಗ ಬನ್ನೀರೆ ॥ ೫ ॥

ಈಚಲ ಗಿಡದ್ಹಾಂಗ ಉದ್ದಕ ಹೋದರ್ಹ್ಯಾಂಗ
ವಿಚಾರ ಮಾಡಿ ನಡಿಬೇಕ । ಶಿವಲಿಂಗ ಬನ್ನಿರೆ ॥ ೬ ॥

ಮೂರಬಳ್ಳಿ ವಿಭೂತಿ ಹಣೆಗರ ಹಚ್ಚಬೇಕ
ಗುರುಲಿಂಗ ಜಂಗಮರ ನೆನಿಬೇಕ । ಶಿವಲಿಂಗ ಬನ್ನಿರೆ ॥ ೭ ॥

ಭಕ್ತಿಯ ಮಾಡುತಾ ತತ್ತ್ವವ ತಿಳಿಬೇಕ
ಮುಕ್ತಿಯ ಪಡಿಬೇಕ ಶಿವನಲ್ಲಿ । ಶಿವಲಿಂಗ ಬನ್ನಿರೆ ॥ ೮ ॥

– ಶ್ರೀಮತಿ ಕಾಡಾದಿ ಗೌರವ್ವ

***

ಅಷ್ಟಾವರಣ

ಪರಮ ಪಂಚಾಕ್ಷರಿ ಪರಶಿವನ ಗುರುವಿನ
ಮನದಲ್ಲಿ ನೆನೆಯಮ್ಮ ತಂಗಿ ಇದು
ಘನವೆಂದು ತಿಳಿ ಮಂಗಲಾಂಗಿ ॥ ಪ ॥

ಆವ ಕಾಲದಿ ಗುರು ದೇವನ ಚೆರಿಸು
ಭಾವದಲಿ ಭಜಿಸಮ್ಮಾ ತಂಗಿ ಇದು
ಕೇವಲ ನಿಜ ಮಂಗಲಾಂಗಿ ॥ ೧ ॥

ವೆಸನ ಚಿತ್ತದೊಳು ಎಸಿದು ಸದ್ಭಸಿತವ
ನೊಸಲೊಳು ಧರಿಸಮ್ಮ ತಂಗಿ ಧ್ಯಾನ
ಹೃದಯದೊಳು ಇರು ಮಂಗಲಾಂಗಿ ॥ ೨ ॥

ಛಿದ್ರ ಗುಣಗಳು ಛಿದ್ರಿಸಿ ಅನುಪಮ
ರುದ್ರಾಕ್ಷಿ ಧರಿಸಮ್ಮಾ ತಂಗಿ ಧ್ಯಾನ
ಮುದ್ರಿಯೊಳು ಇರು ಮಂಗಲಾಂಗಿ ॥ ೩ ॥

ಗುರು ತಂದಿ ಗುರು ತಾಯಿ ಗುರುಬಂದು ಬಳಗ
ಗುರು ಪರಮಾರ್ಥ ಕೇಳಮ್ಮ ತಂಗಿ ಗುರು
ಜ್ಞಾನದೊಳು ಇರು ಮಂಗಲಾಂಗಿ ॥ ೪ ॥

ಜಡದಿ ಮುಚ್ಚಿದ ಕೆಟ್ಟ ಜಡನೆಲ್ಲ ಕಡಿಗಿಟ್ಟು
ಕಡಿ ಮುತ್ತನೆ ಕೊಟ್ಟಾನ ತಂಗಿ ನೀನು
ಬಿಡಬ್ಯಾಡ ಧೃಡ ಮಂಗಲಾಂಗಿ ॥ ೫ ॥

ಗುರುವಿನ ಕರುಣವು ದೊರೆಯದಿದ್ದರೆ ಘೋರ
ನರಕ ತಪ್ಪದು ಕೇಡ ತಂಗಿ ನೀನು
ಶೀಲದೊಳು ಇರು ಸರ್ವಾಂಗಿ ॥ ೬ ॥

– ಶ್ರೀಮತಿ ಪಾರ್ವತಿ ಜೆಮಶೆಟ್ಟಿ
ಹಾಗೂ ಸರ್ವಮಂಗಳಾ ಜೋಗೂರು

***

೧. ಗುರುವಿನ ಮಹತ್ವ

ಎಂತಾತ ಗುರುನಾಥನೇ

ಎಂತಾತ ಗುರುನಾಥನೇ ಅವರು ಭಾಳಂತಃಕರುಣುಳ್ಳಾತನೇ ॥ ಪ ॥
ಕಾಂತೆ ನೀ ಬಾ ಎಂದು ಏಕಾಂತ ಕರೆದೆನ್ನ
ಎಂಥಾ ಮಾತ್ಹೇಳಿದುರೇ ಸದ್ಗುರುನಾಥ ಎಂಥಾ ಮಾತ್ಹೇಳಿದುರೇ
ಎಂಥಾ ಮಾತ್ಹೇಳಿದುರೇ ಸದ್ಗುರುನಾಥ ಎಂಥಾ ಮಾತ್ಹೇಳಿದುರೇ ॥ ೧ ॥

ಆರುಗುಣ ಅಳಿಯಂದುರೇ ಸದ್ಗುರುನಾಥ ಮೂರಗುಣ ತಿಳಿಯಂದುರೆ
ಆರು ಮೂರೊಂಬತ್ತು ಕಳಶಾವ ತುಂಬಿತ್ತು
ಗುರುವಿಗೆ ಬೆಳಗಂದುರೆ ಸದ್ಗುರುನಾಥ ಗುರುವಿಗಿ ಬೆಳಗಂದುರೆ ॥ ೨ ॥

ಶರಣರ ನೆನೆ ಎಂದಾರೆ ಸದ್ಗುರನಾಥ ಪಾದಕ ಎರಗಂದಾರೆ
ಸಾಧು ಸಜ್ಜನರ ಭೋದೆಯ ಕೇಳಿದರೆ ಭಾದೇ ನಿನಗಿಲ್ಲಂದುರೇ
ಸದ್ಗುರುನಾಥ ಭಾದೇ ನಿನಗಿಲ್ಲಂದುರೇ ॥ ೩ ॥

ಬಯಲಿಗಿ ಬಯಲಂದುರೇ ಸದ್ಗುರುನಾಥ ಬಯಲೊಳಗಾಡಂದುರೇ
ಬಯಲ ಕಲ್ಯಾಣಪುರ ಅನುಭವ ಮಂಟಪ
ಭಜನ್ಯಾಗ ಹಾಡಂದರೆ ಸದ್ಗುರುನಾಥ ಭಜನ್ಯಾಗ ಹಾಡಂದುರೇ ॥ ೪ ॥

– ಶ್ರೀಮತಿ ಜಗದೇವಿ
– ಶ್ರೀಮತಿ ವಿದ್ಯಾವತಿ ಮುಚಳಂಬ

***

ಒಳಗ ಹೊರಗ ತಾವೇ ನಿಂತು

ಒಳಗ ಹೊರಗ ತಾವೇ ನಿಂತು
ಛಾಯೆ ತೋರಿದರಮ್ಮ ಮಾಯನಾದರಮ್ಮ
ಅರವ ತೋರಿದ ಗುರುವಿನ
ಮರೆತ್ಹ್ಯಾಂಗಿರಲೆಮ್ಮ ತೋರಿ ಅಡಗ್ಯಾರೆಮ್ಮ ॥ ೧ ॥

ಜೀವರೊಳಗೆ ಶಿವ ರೂಪ
ಜಂಗಮಾದೇನಮ್ಮ ಸಂಗಮೇಶನಮ್ಮ
ಅರವ ತೋರಿದ ಗುರುವಿನ
ಮರೆತ್ಹ್ಯಾಂಗಿರಲೆಮ್ಮ ತೋರಿ ಅಡಗ್ಯಾರೆಮ್ಮ ॥ ೨ ॥

ಕನಸು ಮನಸು ನೆನಪಿನೊಳು
ನೀಲ ಕಡೆದನೆಮ್ಮ ನೀಲ ಕಂಠನಮ್ಮ
ಅರವ ತೋರಿದ ಗುರುವಿನ
ಮರೆತ್ಹಾಂಗಿರಲೆಮ್ಮ ತೋರಿ ಅಡಗ್ಯಾರಮ್ಮ ॥ ೩ ॥

ಚಿತ್ತಿನೊಳಗೆ ಚಿನ್ಮಯನಾಗಿ
ರೂಪ ತೋರಿದರಮ್ಮ ಚನ್ನಬಸವಣ್ಣಮ್ಮ
ಅರವ ತೋರಿದ ಗುರುವಿನ
ಮರೆತ್ಹಾಂಗಿರಲೆಮ್ಮ ತೋರಿ ಅಡಗ್ಯಾರೆಮ್ಮ ॥ ೪ ॥

ಋನಾ ಇಲ್ಲದಂಥ ವಸ್ತು
ಋನಾ ತೋರಿದರಮ್ಮ ಕೂಡಿ ಉಂಡೇವಮ್ಮ
ಅರವ ತೋರಿದ ಗುರುವಿನ
ಮರೆತ್ಹ್ಯಾಂಗಿರಲೆಮ್ಮ ತೋರಿ ಅಡಗ್ಯಾರೆಮ್ಮ ॥ ೫ ॥

ಆರು ಲಿಂಗದೊಳಗ ಇರುವ
ಅರುವ ತೋರಿದರಮ್ಮ ಸ್ಥಿರವು ಮಾಡಿದರಮ್ಮ
ಅರವು ತೋರಿದ ಗುರುವಿನ
ಮರೆತ್ಹ್ಯಾಂಗರಲೆಮ್ಮ ತೋರಿ ಅಡಗ್ಯಾರೆಮ್ಮ ॥ ೬ ॥

ಮನದ ಕೊನೆಯ ಮ್ಯಾಲ
ಒಲಿಯ ಕಟ್ಟಿ ತೂಗಿದರಮ್ಮ ಶರಣ ಮಾರ್ಗವಮ್ಮ
ಅರವ ತೋರಿದ ಗುರುವಿನ
ಮರೆತ್ಹ್ಯಾಂಗಿರಲೆಮ್ಮ ತೋರಿ ಅಡಗ್ಯಾರಮ್ಮ ॥ ೭ ॥

ಭದ್ರಗಿರಿ ಮ್ಯಾಲೆ ಉದಯಗಿರಿ
ಕ್ಷೇತ್ರನಮ್ಮ ಶಿಖರವೇರಿದರಮ್ಮ
ಸಿದ್ಧರಾಮನ ರಾಚೋಟೇಶನ
ಕೂಡಿಕೊಂಡೇವಮ್ಮ ಬಯಲಿಗಾದೇವಮ್ಮ ॥ ೮ ॥

– ಶ್ರೀಮತಿ ಜಗದೇವಿ ಹಾಗೂ ಶ್ರೀಮತಿ ವಿದ್ಯಾವತಿ

***

ಅರಿವೆ ಗುರು

ಶ್ರೀ ಗುರುವೇ ಅರಿವೆ ಶರಣಾಗಿ ಬರುವೆ
ಕರುಣೆಯನು ಕೋರಿ ಬರುವೆ
ಹುತ್ಪ್ರಕೃತಿ ತಂದ ಬಿಡಿಹೂಗಳನು
ಶ್ರೀ ಚರಣ ಕರೆಯುತಿರುವೆ ನಿನಚರಣ ಕರೆಯುತಿರುವೆ ॥ ಪ ॥

ಆಪಾದ ಪಾದ ಎದೆಗವಚಿ ಹಿಡಿದು
ನಡುನೆತ್ತಿ ಗೊತ್ತಿಕೊಂಬೇ
ಉಸಿರಿಂದಲದಕ ಬಲಗೊಂಬೆ
ನನ್ನ ಕಣ್ಗೊಂಬೆಗೊತ್ತಿಕೊಂಬೇ ಶ್ರೀಗುರುವೇ ॥ ೧ ॥

ಕಣ್ಣಿಂದ ನಿನ್ನ ನನ್ನನ್ನು ಸೇರಿ ಎದೆಯೊಳಗೆ
ಬೆಳಕನೊತ್ತಿ ತಿರುಮೂತಿ ಮಾಡು
ನನ್ನನ್ನು ನಿನ್ನ ಚಿನ್ಮೋದ ಬೋದ ಬಿತ್ತಿ
ಭವಭವಕೆ ನನ್ನ ಮೊಂದೆತ್ತಿ ಒತ್ತಿ ತಂದಂತೆ ॥ ೨ ॥

ತಂದೆ ನೀನೂ ಭಾವಕ್ಕೆ ಇಳಿದು
ಸದ್ಭಾವ ಬಯಸಿ ಬರುವಂತೆ ಮಾಡು
ಅಂತರ್ಯದೊಂದು ಚೈತನ್ಯ ನಿನ್ನ ಕೈಂಕರ್ಯ
ಕೃತವಾಗಿ ಚಿತಾಗ್ನಿ ಚಿತೋಕ್ಯನಾಗಿ ಮಧು ಬೋಧ ಮೋದ ॥ ೩ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

ಗುರುಸ್ತೋತ್ರ

ಶ್ರೀ ಗುರುವೆ ಸತ್ಕ್ರಿಯದಾಗರವೇ ಸುಜ್ಞಾನ ಸಾಗರವೇ
ಎನ್ನ ಮತಿಗೆ ಮಂಗಳವಿತ್ತು ರಾಗದಿಂ ಬೇಗ ಕೃಪೆಯಾಗು ॥ ಪ ॥

ಗುರುವೆ ಭಕ್ತರ ಕಲ್ಪತರುವೆ ಸಜ್ಜನ ಮನೋಹರವೇ
ಜ್ಞಾನ ವೈರಾಗ್ಯಮಂದಿರವೇ ಮದ್ಗುರುವೆ ಕೃಪೆಯಾಗು ॥ ೧ ॥

ದೇಶಿಕನೆ ಅನುಭಾವೊಲ್ಲಾಸಕನೆ ಸಂಕಲ್ಪನಾಶಕನೆ
ಅಣವಾದಿ ತ್ರೈಮಲದೋಳ್ ನೀರಾಸಕನೆ ಎನಗೆ ಕೃಪೆಯಾಗು॥ ೨ ॥

ಕಾರ್ಯಕಾರಣ ಭಕ್ತಿ ತೂರ್ಯತಾಮಸದ ಚಿತಸೂರ್ಯ
ಎಡರಿಂಗೆ ಧೈರ್ಯವಾಗಿಹ ಗುರುವರ್ಯ ನೀನೆನಗೆ ಕೃಪೆಯಾಗು ॥ ೩ ॥

ಸಾಧ್ಯಸಧಭಕ್ತರಿಗೆ ವೇದ್ಯ ಲಿಂಗೈಕ್ಯರ್ಗೆ ಬೈದ್ಯಸತ್ ಪ್ರಮಥ
ಗಣನಿಕರವೆಲ್ಲಕಾರಾಧ್ಯ ನೀ ನನಗೆ ಕೃಪೆಯಾಗು ॥ ೪ ॥

ನಗುರೋರಧಿಕವೆಂದು ಜಗದಲ್ಲಿ ಸಾರುತಿಹ ನಿಗಮ ಶೃತಿಗೇಳಿ
ಗುರುವೆ ನಾನಿಮ್ಮ ಪದಯುಗವ ಬಣ್ಣಿಪೆನು ಕೃಪೆಯಾಗು ॥ ೫ ॥

ಹರನಿಂದಲಧಿಕ ಸದ್ಗುರುವೆಂಬುದನು ಕೇಳಿ ಗುರುವೆ
ನಾ ನಿಮ್ಮ ಚರಣವನು ನುತಿಸುವೆನು ಕರಣದಿಂದೆನಗೆ ಕೃಪೆಯಾಗು ॥ ೬ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

ಗುರುವಿಗಿ ನೆನಿಯಿರಿ

ಗುರುವಿಗಿ ನೆನಿಯಿರಿ ಲಿಂಗಕ್ಕೆ ನೆನೆಯಿರಿ
ಅರುವಿನ ಮಾರ್ಗ ಪಡೆಯಿರಿ ಶಿವಲಿಂಗ ಬನ್ನಿರೆ ॥ ೧ ॥

ಮಣ್ಣಿನಾ ಕಾಯವ ಮಣ್ಣಿಗಿ ಹೋದಾತು
ಹಿಡಿಮಣ್ಣಿಗ್ಯಾಕ ಹೊಡೆದಾಟ ಶಿವಲಿಂಗ ಬನ್ನಿರೆ ॥ ೨ ॥

ಮಾಯದ ಕೈಯಾಗ ಕಾಯವ ಸಿಕ್ಕಾದ
ಹಾಯಾಗಿ ಸುಸ್ತು ಮಲಗ್ಯಾದ ಶಿವಲಿಂಗ ಬನ್ನಿರೆ ॥ ೩ ॥

ಹಾಯಾಗಿ ತಾ ಸುಸ್ತ ಮಲಗ್ಯಾದ ಈ ಕಾಯ
ಬಡೆದೆಬ್ಬಿಸು ಗುರುಕೊಟ್ಟ ಜ್ಞಾನಿಂದ ಶಿವಲಿಂಗ ಬನ್ನಿರೆ ॥ ೪ ॥

ಹರಟೆಯ ಹೊಡಿಲಾಕ ಜಲದಿ ಬರತಾದ
ಹರಣ ನೆನಿಲಾಕ ವ್ಯಾಳಿಲ್ಲ ಶಿವಲಿಂಗ ಬನ್ನಿರೆ ॥ ೫ ॥

ಕೆಟ್ಟ ಹರಟ್ಯಾಗ ಏನು ಫಲ ಸಿಕ್ಕಾತು
ನಿಷ್ಠವಂತರ ಸಂಗ ನೀ ಮಾಡು ಶಿವಲಿಂಗ ಬನ್ನಿರೆ ॥ ೬ ॥

ಸ್ಥಿರವಲ್ಲ ಈ ದ್ಯಾಹ ನನ್ನದ್ಯಾಕ ನೀ ಅಂತಿ
ಈ ದ್ಯಾಹ ಬಿಟ್ಟಾಗ ಏನಂತಿ ಶಿವಲಿಂಗ ಬನ್ನಿರೆ ॥ ೭ ॥

ಸೊಕ್ಕಿದ ಈ ದ್ಯಾಹ ಕರಗಲ್ಲ ಬಲುಬೇಗ
ಗುರುವಿನ ಕೈಯಾಗ ಕೊಡಬೇಕ ಶಿವಲಿಂಗ ಬನ್ನಿರೆ ॥ ೮ ॥

ಗುದ್ದಲಿ ಹಚ್ಚಲ್ಲ ಸುತ್ತಿಗಿಲಿ ಬಡಿಯಲ್ಲ
ಬಲ್ಲಂತ ಜ್ಞಾನ ಸಿಕ್ಕಾತು ಶಿವಲಿಂಗ ಬನ್ನಿರೆ ॥ ೯ ॥

ಗುರುಕೊಟ್ಟ ಜ್ಞಾನಿಂದ ಈ ಸೊಕ್ಕ ಇಳಿದಾತು
ಶಿವನ ಮಾರ್ಗ ಸಿಕ್ಕಾತು ಶಿವಲಿಂಗ ಬನ್ನಿರೆ ॥ ೧೦ ॥

– ಶ್ರೀಮತಿ ಗೌರವ್ವ ಕಾಡಾದಿ

***

ಯಪ್ಪಾ ಬಂದೇವರಿ ಕಂದಗೂಳ ತಳಕ

ಯಪ್ಪ ಬಂದೇವರಿ ಕಂದಗೂಳ ತಳಕ
ಶಿವಲಿಂಗ ಸ್ವಾಮಿಯ ದೇವರ ಮಠಕ ॥ ೧ ॥

ಶುದ್ಧ ಶರಣಾಮೃತ ಸವಿಸುದಕ
ತನು ಮುಕ್ತಿಯ ನೀಡೆನ್ನ ಜೀವಕ ॥ ೨ ॥

ಗುರುವಿನ ಗುರುತ ಗುರುತಾಗೋ ತನಕ
ಸ್ಥಿರವಿಲ್ಲೋ ಮನಕ ಈ ಜೀವಕ ॥ ೩ ॥

ದುಡಿದು ದುಡಿದು ಬಂದೇವ್ರಿ ನಿಮ್ಮ ತಳಕ
ಶಿವಲಿಂಗ ಸ್ವಾಮಿಯೇ ದೇವರ ಮಠಕ ॥ ೪ ॥

ಶುದ್ಧ ಶರಣಾಮೃತ ಸೇವಿಸುದಕ
ತನು ಮುಕ್ತಿಯ ನೀಡೆನ್ನ ಜೀವಕ ॥ ೫ ॥

ಸಂಸಾರ ಚಿಂತಿ ಮಾಯಾದ ಬ್ರಾಂತಿ
ತಿಳಿದು ನೊಡಿದರ ಭಾಳಾ ನಿಚ್ಚಿಂತಿ ॥ ೬ ॥

ದುಡಿದು – ದುಡಿದು ಬಂದ್ರೇವಿ ನಿಮ್ಮ ತಳಕ
ಶಿವಲಿಂಗ ಶರಣಾಮೃತ ಸೇವಿಸುದಕ ॥ ೭ ॥

ಶುದ್ಧ ಶರಣಾಮೃತ ಸೇವಿಸುದಕ
ತನು ಮುಕ್ತಿಯ ನೀಡೆನ್ನ ಜೀವಕ ॥ ೮ ॥

ಕೊಂಡೆಣ್ಣ ಮಿಂಚೆಣ್ಣ ಇಬ್ಬರು ಜೋಡಿ
ಬಿಜ್ಜಳಂಕಗ ಹೇಳ್ತಾರೋ ಇಲ್ದೊಂದೇ ಚಾಡಿ ॥ ೯ ॥

ಕೆಲಸ ಕೊಟ್ಟಾರೋ ಬಸವಣ್ಣನ ಕೈಲಿ
ಕೆಲಸ ಮಾಡಿ ಬಿಟ್ಟಾರ ಬಹಳ ಹೊಲಸ ॥ ೧೦ ॥

ಕೆಲಸ ಹೋದಮ್ಯಾಲ ಉಳಿಯೋಣಿಲ್ಲೋ ದಿನಸ
ತನು ಮುಕ್ತಿಯ ನೀಡೆನ್ನ ಜೀವಕ ॥ ೧೧ ॥

ದೇಶದೊಳಗ ನಮ್ಮ ನಾರಂಜಿ ತಳಕ
ದೇವಿದಾಸ ಹೇಳ್ಯಾರ ಹೋಗಿ ಬಾರೋ ಮಠಕ ॥ ೧೨ ॥

ಅಲ್ಲಿ ಆದಪ್ಪ ಶರಣರ ಬೆಳಕ
ದಾರಿ ತೋರಿಸೋ ಅನುಭವ ಮಠಕ ॥ ೧೩ ॥

ದಾರಿ ಹೋಯಿತಪ್ಪ ಸರದು ಲೋಕಕ
ತನು ಮುಕ್ತಿಯ ನೀಡೆನ್ನ ಜೀವಕ ॥ ೧೪ ॥

– ಶ್ರೀ ಕೃಷ್ಣಪ್ಪ ದರ್ಗೆ

***

ಗುರುಮುಟ್ಟಿ ಗುರುತಾಗಿ ಗುರುವಿನೋಳ್ ಅರುವಾಗಿ

ಗುರುಮುಟ್ಟಿ ಗುರುತಾಗಿ ಗುರುವಿನೋಳ್ ಅರುವಾಗಿ
ಬೆರದ ನಾದ ಬಿಂದು ಕಲಾ ಭರಿತಳಾಗೆ ತಂಗೆಮ್ಮ ॥ ೧ ॥

ಆದರ ಸೋಧಿಸಿ ಆರು ಚಕ್ರ ಬಂಧಿಸಿ
ಆರು ಬಣ್ಣದ ಅಕ್ಷರವ ತಿಳಿಯಬೇಕೆ ತಂಗೆಮ್ಮ ॥ ೨ ॥

ಗುರು ಬಂದಾರ ಮನೀಗಿ ಗುರುತ್ಹಿಡಿಯೇ ತಂಗೆಮ್ಮ
ನೀಲಗದ್ದಿಗ್ಹಾಕೆ ನಡುಮನೆಯ ತಂಗೆಮ್ಮ ॥ ೩ ॥

ನೀಲಗದ್ದಿಗಿ ಮ್ಯಾಲ ಗುರುವಿನ ಕುಂಡರಿಸಿ
ಶರಣೆಂದು ಪಾದ ಹಿಡಿದಾಳೆ ತಂಗೆಮ್ಮ ॥ ೪ ॥

ದೇಶದೋಳಗೆ ನಮ್ಮ ವಾಸು ಕಲ್ಯಾಣಪುರ
ಈಶ ಬಸವೇಶನ ಪಾದ ಹಿಡಿಯೇ ತಂಗೆಮ್ಮ ॥ ೫ ॥

– ಶ್ರೀಮತಿ ರುಕ್ಮೀಣಿಬಾಯಿ ಫೋಡವಾಡಿ

***

ನೀ ಕೇಳೋ ಶ್ರೀ ಗುರುವೆ ಚನ್ನಬಸವಣ್ಣ

ನೀ ಕೇಳೋ ಶ್ರೀ ಗುರುವೆ ಚನ್ನಬಸವಣ್ಣ
ಭಿನ್ನ ಭೇದವು ಬ್ಯಾಡರಣ್ಣ ॥ ಪ ॥

ಕಟ್ಟಿದ ಕೆರಿ ಭಾವಿ ಕಂಡವರೆ ಕಾಲೆದ್ದಿ
ಉಂಡಿ ಮಾಂಡಿಗಳು ಅದರಾಗೇಳಣ್ಣ
ಭಿನ್ನ ಭೇದವು ಬ್ಯಾಡರೆಣ್ಣ ॥ ೧ ॥

ಹಾರುವ ಒಳ್ಳೇಯವನೆಂದು ಬೇರಿ ಝಳಕಾವು ಮಾಡಿ
ಆಚೇರಿ ಕುಲಗಳು ನೀಚಾಗ್ಯಾವಣ್ಣ
ಭಿನ್ನ ಭೇದವು ಬ್ಯಾಡರಣ್ಣ ॥ ೨ ॥

ಸತ್ತ ಎತ್ತಿನ ತೊಗಲು ಬಡದು ಬುದ್ದಲಿ ಮಾಡಿ
ಕಸ್ತೂರಿ ಗಂಧೆಣ್ಣಿ ಅದರಾಗೇಳಣ್ಣ
ಭಿನ್ನ ಭೇದವು ಬ್ಯಾಡರಣ್ಣ ॥ ೩ ॥

ನಾಡಾದೆಂಜಲ ತಂದು ಜಾಡ ಮಗ್ಗನೆ ಹೂಡಿ
ಖೋಡಿನಾಲಳಿಗಳೋ ಅದರಾಗೇಳಣ್ಣಾ
ಭಿನ್ನ ಭೇದವು ಬ್ಯಾಡರೆಣ್ಣ ॥ ೪ ॥

ಸತ್ತವೆತ್ತಿನ ತೊಗಲು ಜತ್ತಿಗಿ ಮಣ್ಣ ಮಾಡಿ
ಹೊತ್ತೊಯ್ದಿರಿ ತಮ್ಮಾ ನಿಮ್ಮ ಹೊಲದಾಗೇಳಣ್ಣ
ಭಿನ್ನ ಭೇದವು ಬ್ಯಾಡರಣ್ಣ ॥ ೫ ॥

ಉತ್ತಾರಿ ಮಳಿ ಬಂದು ಸುತ್ತಿ ಸುತ್ತಿ ಬಡಿವಾಗ
ಜತ್ತಾ ಕಲ್ಯಾಣ ನೀರು ನಿಮ್ಮ ಬುದ್ಯಾಗೇಳಣ್ಣ
ಭಿನ್ನ ಭೇದವು ಬ್ಯಾಡರಣ್ಣ ॥ ೬ ॥

ಓರಿ ಹೊಳಿ ದಂಡೀಲಿ ಕಣ್ಣಮಟ್ಟ ಬಬಲಾದಿ
ವಾಕ್ಯ ಸುಳ್ಳಂದರೆ ಮೇಕಾ ಮುಂಗಲಿ ಆಕತಿ
ನೆರದಾ ಚಿಕ್ಕಯ್ಯಸ್ವಾಮಿ ಭಿನ್ನ ಭೇದವು ಬ್ಯಾಡರಣ್ಣ ॥ ೭ ॥

– ಶ್ರೀ ಕೃಷ್ಣಪ್ಪ ದರ್ಗೆ

***

ಗುರುನಾಮ ನುಡಿ

ಬಾಲ ಯೌವನದಲ್ಲಿ
ಲೀಲತನದಲಿ ಹೋದಿ
ಪ್ರಿಯಕ್ಕೆ ಮದನಾದಿ
ಅದರೊಳಗೆ ನೀನೆ ಹೋದಿ
ಶಿವಧ್ಯಾನವನು ನೀನು
ಗುರುನಾಮವನು ನೀನು
ಮಾಡೋದು ಯಾವಾಗೊ
ಮುಕ್ತಿ ಬೇಡೋದು ಯಾವಾಗೊ ॥ ೧ ॥

ವಾರದಪ ಕಾಲದಲ್ಲಿ
ಹೆಣ್ಣಿನ ಮೋಹದೊಳಗಿದ್ದಿ
ಅದರ ಒಳಗ ನೀನು ಹೋದಿ
ಶಿವಧ್ಯಾನವನು ನೀನು
ಗುರುನಾಮವನು ನೀನು
ಮಾಡೋದು ಯಾವಾಗ ಮುಕ್ತಿ ಬೇಡೋದು ಯಾವಾಗ ॥ ೨ ॥

ವಾರದಪ ಕಾಲದಲ್ಲಿ
ರೋಗ ರೋಗಾದಿಗಳು
ಒಳಗ ನೀನು ಹೊರಳಾಡಿದಿ
ರೋಗ ಬಂದು ಕಾಡಿ ಪೀಡಿಸಿದರೂ
ಶಿವ ಧ್ಯಾನವನು ನೀನು
ಗುರುನಾಮವನು ನೀನು
ಮಾಡೋದು ಯಾವಾಗ ಮುಕ್ತಿ ಪಡೆಯೋದು ಯಾವಾಗ ॥ ೩ ॥

– ಶ್ರೀಮತಿ ಕಾಡಾದಿ ಗೌರವ್ವ

***

ಗುರುಬೇಕ ತಂಗಿ ಗುರುಬೇಕ

ಗುರುಬೇಕ ತಂಗಿ ಗುರುಬೇಕ
ಶಿರದ ಮ್ಯಾಲ ಕರವಿಟ್ಟು
ಕರೆದು ಬೋಧಿಸುವಂತಹ ಗುರುಬೇಕ ॥ ಪ ॥

ಗುರುವಿನ ಪಾದಕ ಶಿರಹಚ್ಚಿ ಬಾಗಿ ನೀ
ಮರೆತು ಮಾಡಿದಾ ತಪ್ಪ ಬೋಧಿಸುವಂತ ॥ ೧ ॥

ಹಡೆದವರ ಮರೆಸುತ್ತಾ ನಡೆನುಡಿ ಕಲಿಸುತಾ
ಓಡಿದು ಜ್ವಾಕಿಯ ಮಾಡಿ
ಹರಜ್ಞಾನ ಕೊಡುವಂತ ಗುರುಬೇಕ ॥ ೨ ॥

ಪರದೇಶಿ ಮಗಳಂತ ಮರ ಮರ ಮರಗುತ
ಪಿಡಿದು ಜ್ವಾಕಿಯ ಮಾಡಿ
ಗುರು ಮಂತ್ರ ಕಲಿಸಾಕ ಗುರುಬೇಕ ॥ ೩ ॥

ತಂಗೆಮ್ಮ ನೀ ಕೇಳೆ ಅಂಗದ ಮ್ಯಾಲಿರುವ
ಲಿಂಗದಾ ಪೂಜೆಯ
ಗುಂಗ ಹಿಡಿಸುವಂತ ಗುರುಬೇಕ ॥ ೪ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

ನೀರಿನಮೇಲಿನ ಗುಳ್ಳೆ ನಿಜವಿಲ್ಲ

ಯಾರಿಗಿ ಯಾರಿಲ್ಲ ಎರವಿನ ಸಂಸಾರ
ನೀರ ಮೇಲಿನ ಗುಳ್ಳೆ ನಿಜವಿಲ್ಲ ಗುರುವೆ ॥ ಪ ॥

ತಾಯಿಯ ಇಲ್ಲ ತಂದೆಯು ಇಲ್ಲ
ಬಂಧು ಬಳಗವು ಎನಗಿಲ್ಲ ಗುರುವೆ
ನೀನೇ ಸರ್ವವೆನೆಗೆ ಗುರುವೆ ॥ ೧ ॥

ಬಿಸಿಲು ಬಡಿತಾದಂತ ಗಿಡದ ನೆರಳಿಗೆ ಹೋದೆ
ಗಿಡ ಮುರಿದು ಬಯಲಾಯಿತು ಗುರುವೆ ॥ ೨ ॥

ಬೇಸಿಗೆ ಬಿಸಿಲೊಳು ನೀರಡಸಿ ನಾ ಹೋದೆ
ಬಾವಿಯಲ್ಲಿಯ ನೀರು ಒಣಗಿ ಹೋಗ್ಯಾವ ಗುರುವೆ ॥ ೩ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

ಗುರುವಿನ ಗುರುತ ಹಿಡಿಯಿರಿ

ಧ್ಯಾನವ ಮಾಡರಿ ಬಾನಮ್ಮ ತಂಗಿದೇರೆ
ಬಯಲಿಗೆ ನಾವು ನಿಂತು
ಭವದ ಭೀತಿ ಮರೆತು
ಗುರುವಿನ ದಯ ನಮಗಾಯಿತು ॥ ಪ ॥

ಒಂಭತ್ತು ಸ್ಥಳದ ಲಿಂಗದ ಜಳಕ
ಭಕ್ತಿಯ ಜಲದಿಂ ಮಾಡಿ
ತ್ರಿಕೂಟ ಸಂಗಮಕ ನಡಿರಿ
ಕುಂಡಲೆತ್ತಿ ನೋಡಿರಿ ಗುರುವೆ ॥ ೧ ॥

ಸಹಸ್ತದೊಳಗಿನ ವಿಚಾರ ತಿಳಿದು
ಆಸನವನ್ನು ಬಲಿಸುವಂತ
ಸೋಸಿ ತುಂಬಿ ಗುರುವಿನ ಗುರುತ
ಹಿಡಿದವನ ನಂಬಿರಿ ॥ ೨ ॥

ಶಿವನೇ ಬಸವಾ ಬಸವ ಶಿವನೇ
ಶಿವನಾಮವನ್ನು ನುಡಿಯಿರಿ
ಗುರುವಿನ ಗುರುತ ಹಿಡಿಯಿರಿ
ಅವನ ಪಾದಕ ಮುಕ್ತಿ ಪಡೆಯಿತಿ ॥ ೩ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

ಪೂರ್ವ ಜನ್ಮದ ಪುಣ್ಯವೊ

ಸದ್ಗುರು ದೊರಕುವದೊ ಹರಗುರು ದೊರಕುವದೊ
ಅದು ಪೂರ್ವಜನ್ಮದ ಪುಣ್ಯವೊ ॥ ಪ ॥

ಆದಿ ಅನಾದಿ ತಿಳಿದು ಇದು ಸಾಧಿಸಿ ಬಂದು
ಶುದ್ಧ ಶರಣರ ಕೂಡೋದು
ಶೋಧ ಮಾಡಿ ಆತ್ಮ ಭೇದವ ತಿಳಿದರೆ
ವೇದಮೂರ್ತಿ ಗುರು ದೊರಕುವನೊ ॥ ೧ ॥

ಆರು ಚಕ್ರವನೇರುತ ಗುರು ಕರುಣದಿಂದ
ಮೂರು ಚಕ್ರವ ಮೀರುತ್ತ
ಆರು ಮೂರು ಒಂಭತ್ತು ಛೇದಿಸಿ
ಸಾರ ಶಿವಾನುಭವ ತಿಳಿಯಲು ಗುರುಬೇಕು ॥ ೨ ॥

ಪಂಚ ತತ್ವಗಳ ಛೇದಿಸಿ ಪಂಚೇಂದ್ರಿಯಗಳ ಬಿಡಿಸಿ
ಪಂಚಾಕ್ಷರಿ ಮಂತ್ರವ ಜಪಿಸಿ
ಮಿಂಚಲಗಿರಿ ಮ್ಯಾಲ ಮಂಚಲ ದೀವಿಗೆ ಹಚ್ಚಿ
ಬ್ರಹ್ಮ ತಾನಾಗಬೇಕಾದರೆ ಗುರುಬೇಕು ॥ ೩ ॥

ವೀರಶೈವ ಶಿವದೀಕ್ಷೆಯ ಪಡೆದು
ನರನು ಹೋಗಿ ಹರನಾಗಬೇಕಾದರೆ
ಭವಿಹೋಗಿ ಭಕ್ತನಾಗಬೇಕಾದರೆ
ಕರಮ ಕಳೆಯುವ ಗುರುಬೇಕೆಬೇಕು ॥ ೪ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

ಶ್ರೀ ಗುರುವೆ ನಿನ್ನಿಂದ ಈ ಲೋಕವೆಲ್ಲ

ನೀನೆ ಎಲ್ಲಾ ರೂಪ ತಾಳಿರುವೆ
ಶ್ರೀಗುರುವೆ ನಿನ್ನಿಂದ ಈ ಲೋಕವೆಲ್ಲ
ನೀನೆ ಕ್ಷಿತಿಜ ಅನಲ ಮಾರುತ
ನೀನೆ ನಭರವಿ ಚಂದ್ರ ಆತ್ಮನು
ನೀನೆ ಸುರನರ ಪಶು ಮೃಗ ಧ್ವಜ
ನೀನೆ ಕ್ರಮಿತ್ರಣ ಕಾಷ್ಟ ಸಲುನೆ ನೀನೆ ಎಲ್ಲಾ ॥ ಪ ॥

ಪುಣ್ಯಪಾಪ ನ್ಯಾಯದಾ ಮಾತು
ನಿನ್ನಿಂದ ಹುಟ್ಟಿತು ನಿನ್ನ ಹೊರತು ಮುನ್ನ ಎಲ್ಲಿತ್ತು
ನಾನು ನೀನು ಅನುವಂತ ಭಿನ್ನಭೇದಗಳನ್ನು
ನೀನೆ ಪರಿಹರಿಸುವನಾದೆ
ಸುಜ್ಞಾನವಂತ ನೀನೆ ಎಲ್ಲಾ ರೂಪ ॥ ೧ ॥

ಕಾಡು ಬೇಡುಣ್ಣುವನು ನೀನಿರುವಿ
ಬೇಡಿದ್ದು ಅಡಗಿ ಮಾಡಿ
ನೀಡಿ ಉಣಿಸುವವನು ನೀನಿರುವಿ
ನೀಡಿ ಹಂಗಿಸುವವನು ನೀನು

ಬೇಡಿ ಅಪಮಾನಾಗುವವನು ನೀನು
ಕೇಡುತರುವಂತಹವ ನೀನು
ಕೇಡಿಗೇಡಾದವನು ನೀನು ॥ ೨ ॥

ಚನ್ನಕವಿ ಹೆಸರಾಕ್ಷರವ ಕೂಡಿ
ಬಾವನ್ನ ಬೀಜಾಕ್ಷರಗಳಲ್ಲಿ ನೀನಿರುತ್ತಿರುವಿ
ಇನ್ನು ಗೈಯುತ ಅಕ್ಷರಗಳಿವೆ
ನಿನ್ನ ಸ್ತುತಿಗೈಯುವ ಅಕ್ಷರಗಳಿವೆ
ಸನ್ನೂತಾತ್ಮಕ ಮಲ್ಲಿಕಾರ್ಜುನ
ನಿನ್ನೊಳು ವಿಷಯವು ಉದಿಸಿದೆ ॥ ೩ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

ಜ್ಞಾನದ ಬೆಳಕಿನಲ್ಲಿ

ಸದ್ಗುರುವಿನ ಪಾದಕಮಲದಲ್ಲಿ ಬೆರೆತೆನು
ಓಂಕಾರ ಮಂತ್ರದಿಂ ಹಗಲಿರುಳು ಮಾಡುವೆ ನಮನ
ಜ್ಞಾನದ ಬೆಳಕಿನಲ್ಲಿ ನೂಕಿ ತುಳುಕಿ
ತುಳುಕಿ ತೋರೋ ಚಂದ್ರನು ನೀನು ॥ ಪ ॥

ಪಂಚತತ್ತ್ವ ಹಾವಿದನ ತೊಳೆದು ತೊಳೆದು
ಮಾಡಿದಿ ನೀ ಹಸನ
ಈ ಪಂಚ ಪಕ್ವಾನ್ನ ಅಡಗೀಯ ಮಾಡಿ
ಉಣಿಸುವೆ ನಿಮಗೆ ಸದ್ಗುರುವೆ ॥ ೧ ॥

ಮನಸ್ಸೆಂಬುದು ಮಾಲಿಶ ಮಾಡಿ
ನಿನಗೆ ಕೊಟ್ಟು ಮದುವೆಯ ಮಾಡಿ
ನಿರ್ಗುಣವೆಂಬ ಭಾವಿಯಿಂದ ನೀರು ತಂದು
ತೊಳೆಯುವೆ ನಿಮ್ಮ ಚರಣ ಸದ್ಗುರುವೆ ॥ ೨ ॥

ಗುರುವಿನಾ ಅಡಿಯಲ್ಲಿ ಲಿಂಗದಾ ಪೂಜೆಯಲಿ
ಬೆರೆತೆನು ಜ್ಞಾನದಿಂ ಒಂದಾದೆನು ॥ ೩ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

ಸೆರಗನೊಡ್ಡಿ ಬೇಡಿಕೊಂಬುವೆ

ಬೇಡಿಕೊಂಬುವೆನು ಸದ್ಗುರುವೆ
ನಿಮ್ಮನ್ನು ಮರೆಯಲಾರೆನು
ಮಹಾಗುರುವೆ ನಿಮ್ಮನ್ನು ‖ ಪ ‖

ಬೇಡಿಕೊಂಬುವೆನಯ್ಯ ನಿಮಗೆ
ಗಾಢ ಪದವಿ ನೀಡು ಎನಗೆ
ರೂಢಿಯೊಳು ಗುರುವೆ ಮಹಾ ದಯಾಳನೆಂದು
ಸೆರಗನೊಡ್ಡಿ ಬೇಡಿಕೊಂಬುವೆ ‖ ೧ ‖

ಮೊದಲೇ ಎನ್ನನ್ನು ಬದಿಯಲ್ಲಿ
ಕರೆದು ಮದುವೆ ಮಾಡಿನ್ನು
ಉದಯದಲ್ಲಿ ನಿಮ್ಮ ಮಧುರ ಪ್ರಣಯ
ಹೃದಯಕಮದಲ್ಲಿ ನೆಲಸಿ
ಸದುಮಲ ಸಂತೋಷದಿಂದ
ಸಾಕು ಎನಗೆ ಸಾಂಭ ಶಿವನು ‖ ೨ ‖

ಆರು ಪುರಗಳು ಮೇಲಿರುವ ಮಧ್ಯ ಮೂರು ಸ್ಥಳಗಳು
ಆ ಮೂಲ ಪೀಠಕ್ಕ ಏರಿ ನೋಡೋದು
ಸೂರ್ಯಚಂದ್ರ ಒಡನೆ ಬ್ರಹ್ಮ
ಆಂದ್ರದಲ್ಲಿ ಸುಳಿಯತೀರ್ಪ
ಜಂಗಮಯ್ಯ ನಿಮ್ಮ ರೂಪ
ಜಾಗ್ರದಿಂದ ತೋರಿಸೆನಗೆ ‖ ೩ ‖

ಗಂಗೆಯಮನೆಯೊಳು ನಡುಮಧ್ಯ
ತುಂಗ ಭದ್ರಿಯೊಳು
ಕಾಳಿಂಗ ಮಡವು ಹರಣಿ ದಾಟಲು
ಅಂಬುರಾಗ್ರಜ ನಿಮ್ಮ
ಸಾಂಭ ನಿಮ್ಮಯ್ಯ ದಿವ್ಯಚರಣ
ಸಾಂಭ ನಿಮ್ಮ ದಿವ್ಯಚರಣ
ನಂಬಿಗಿಯಿಂದ ನಂಬಿರುವೆ ‖ ೪ ‖

ಅಂಬುರಾಗ್ರಜ ತುಂಬಿರುವ ಮಧ್ಯ
ಅಕ್ಷೋಣಿ ಮಧ್ಯದಿ
ಏರಿತೂಗುವಂತೆ ಸರ್ವನಾದ ಸಂಪು ಕೇಳುತ್ತಿರಲು
ಧೀರೆ ಎನ್ನೊಳು ಮೂರು ದೃಷ್ಟಿ
ತಾರ ಕಂಗಳಲ್ಲಿ ತೋರು ॥ ೫ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

ಗುರುತಂದೆ ಗುರುತಾಯಿ

ಪರಮ ಪಂಚಾಕ್ಷರಿ ಪರಶಿವ ಗುರುವಿನ
ಮನದಲ್ಲಿ ನೆನಿಯಮ್ಮ ತಂಗಿ
ಇದು ಘನವೆಂದು ತಿಳಿ ಮಂಗಲಾಂಗಿ ॥ ಪ ॥

ಆವ ಕಾಲದಲೂ ಗುರುದೇವಾ ಚರಿಸುವ
ಭಾವದಲ್ಲಿ ಭಜಿಸಮ್ಮ ತಂಗಿ
ಇದು ಸತ್ಯವೆಂದು ತಿಳಿ ಮಂಗಲಾಂಗಿ ॥ ೧ ॥

ವ್ಯಸನ ಚಿತ್ತದೊಳುಬೆಸೆದು ಸದ್ಭಸಿತವು
ನೊಸಲೋಳು ಧರಿಸಮ್ಮ ತಂಗಿ
ಜ್ಞಾನ ಹೃದಯದೊಳಿರು ಮಂಗಲಾಂಗಿ ॥ ೨ ॥

ಛಿದ್ರ ಗುಣಗಳು ಛಿದ್ರಿಸಿ ಅನುಪಮ
ರುದ್ರಾಕ್ಷಿ ಧರಿಸಮ್ಮ ತಂಗಿ
ಜ್ಞಾನ ಮುದ್ರೆಯೊಳಿರು ಮಂಗಲಾಂಗಿ ॥ ೩ ॥

ಗುರುತಂದೆ ಗುರುತಾಯಿ ಗುರು ಬಂಧುಬಳಗ
ಗುರು ಪರಮಾತ್ಮ ಕೇಳಮ್ಮಾ ತಂಗಿ
ಗುರು ಜ್ಞಾನದೊಳಿರು ಮಂಗಲಾಂಗಿ ॥ ೪ ॥
ಜಡದಿ ಮುಚ್ಚಿದ ಕೆಟ್ಟ ಜಡವೆಲ್ಲ ಕಡೆಗಿಟ್ಟು
ಕಡಿ ಮುಕ್ತಿ ಕೊಟ್ಟಾನ ತಂಗಿ
ನೀನು ಬಿಡುಬ್ಯಾಡ ದೃಢ ಮಂಗಲಾಂಗಿ ॥ ೫ ॥

ಗುರುವಿನ ಕರುಣೆಯ ದೊರೆಯದಿದ್ದರೆ
ಘೋರ ನರಕ ಸನಿ ಅದ ತಂಗಿ
ನೀ ಶೀಲದೊಳಿರು ಸರ್ವಾಂಗಿ ॥ ೬ ॥

***

ಹಾವು ಹಿಡಿತು ಕಾಲು

ಹಿಂದೆ ಕತ್ತಲು ಗಾಢ ಕತ್ತಲು
ಮುಂದೆ ಹೆಜ್ಜೆಯಿಡಲು ಹಾವು ಹಿಡಿತು ಕಾಲು ॥ ಪ ॥

ಏನೊಂದು ಅರಿಯದ ಎಡ್ಡ ಮನುಜ ನಾನು
ಅಳಿಮನದಾ ಹೊಂಬ ಮನುಜ ನಾನು
ಪ್ರಪಂಚ ಕಳಿಲಿಲ್ಲ ಪಾರಮಾರ್ಥ ಸಿಗಲಿಲ್ಲ
ಪಂಚೇಂದ್ರಿಯ ಒಳಗ ಸಿಕ್ಕು ಕಾಲತಿಕ್ಕಿ ॥ ೧ ॥

ಹೆಂಡತಿ ನನ್ನವಳು ಮಕ್ಕಳು ನನ್ನವರು
ಎಂಬ ಭ್ರಾಂತಿ ಒಳಗೆ ಸಿಕ್ಕು ಸುಣ್ಣನಾದೆ
ಗಳಿಸಿಟ್ಟ ಹಣವೆಲ್ಲ ಕಟ್ಟಿಟ್ಟ ಮನೆಯಲ್ಲಿ
ಮೆಚ್ಚಿ ಬದುಕ ನಡೆಸಿ ಹುಚ್ಚನಾದೆ ನಾನು ॥ ೨ ॥

ಮಾಡಿದ ಕರ್ಮಕ ನಮಗ್ಯಾಂಗ ಸಿಕ್ಕಾನು ಗುರು
ನಡಿಯಬೇಕು ಬೆಳಗಿನಲಿ ಪಡೆಯಬೇಕು ಗುರುವಿನಲಿ
ಭವಪಾಶ ಹರದಾನು ಶಿವಮಾರ್ಗ ಕೊಟ್ಟಾನು
ಪರಮ ಗುರುವಿನ ಸ್ಮರಣೆ ಮಾಡಮ್ಮ ॥ ೩ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

ಗುರುವಿನ ಹಾಡು

ನಾನೇಕೆ ಬಡವಳಯ್ಯಾ
ನೀನಿರುವತನಕ ಗುರುವೆ ॥ ಪ ॥

ನೀ ಕಾಮಧೇನುವಾಗಿ
ನೀ ಕಲ್ಪವೃಕ್ಷವಾಗಿ

ಅನುದಿನದಿ ಕರುಣಿಸಲ್ಕೆ
ತವಸೇವೆಗೈಯುತಿರುವೆ
ನಾನೇಕೆ ಬಡವಳಯ್ಯಾ ॥ ೧ ॥

ಅನುಮಿಷ ಬಂಧುವಾಗಿ
ಘನವಾದ ಪ್ರೇಮದಿಂದ
ಅನುದಿನದಿ ಕರುಣಿಸಲ್ಕೆ
ತವಸೇವೆಗೈಯ್ಯುತಿರುವೆ
ನಾನೇಕೆ ಬಡವಳಯ್ಯಾ ॥ ೨ ॥

ಶಿವರೂಪದಿಂದ ಜಗವ
ಪೊರೆವೀವ ಯೋಗಿವರನೆ
ಶಿವಯೋಗಿ ಹರೀಶ್ವರನೆ
ಸುಖವೀವ ಸುಖದ ನಿಧಿಯೆ
ನಾನೇಕೆ ಬಡವಳಯ್ಯಾ ॥ ೩ ॥

– ಶ್ರೀಮತಿ ಸುಮಿತ್ರಾದೇವಿ ಅಂಗಡಿ

***

ಮಂಗಳಾರತಿ ಹಾಡು

ಶ್ರೀಗುರುವೆ ಮಹಾಗುರುವೆ ಶಾಂತಿ ಕಳಾಗುರುವೆ
ಶಿವಾತ್ಮ ವಿದ್ಯಾಗುರುವೆ ಮಠಾಗುರುವೆ ವಿಶ್ವಜಗದ್ಗುರು
ವಿಶುದ್ಧ ಚೇಷ್ಟಾಗುರುವೆ, ಸುಧೀಗುರುವೆ, ಭಕ್ತಿಯಶೋ ಗುರುವೆ
ಪ್ರಸಾದ ತೇಜೋ ಗುರುವೆ, ಕೃಪಾಗುರುವೆ ಮದ್ಗುರುವೆ
ಗುರುವೆ, ಶಿವಾಧಾವಾ ॥ ೧ ॥

ಜಯ ಬಸವೇಶ ಭಕ್ತಜನ ಭಾಗ್ಯ ಶುಭೋದಯ
ಲಿಂಗಾಯತ ನಿರ್ಣಯ, ಪರಮಾವತಾರ,
ಶರಣಾಗತ ರಕ್ಷಕ ಚಿದ್ಘನ ಪ್ರಭಾಮಯ
ಜಗದಾ ..... ದೇಶಕ ಮರೋದ್ಧಾರ ಪುಂಗವ
ಶಾಂಭವ್ಯೆ ಪುರಾಶ್ರಯ ಜಯ ಸೋಮನಾಥ
ಜಯದೇವ ಜಯಾ ವಿರತಂ ಶಿವಾಧವಾ ॥ ೨ ॥

ಶಿವ ಶಿವ ಎನ್ನುವುದೆ ಚಂದಂ ಶಿವನಿಲ್ಲದೆ ಅನ್ಯದೈವವಿಲ್ಲಂ
ಈ ಭವಕೆ ಭಾರದಿರ್ಪುದೆ ಚಂದಂ

ಭವಗಿರಿ ಭದ್ರಪ್ಪ ಲಿಂಗಂ
ಜಯ ಜಯ ಮಂಗಲಂ
ಪಾರ್ವತಿ ಪತಿ ಹರ ಹರ ಮಹಾದೇವಂ ॥ ೩ ॥

– ಶ್ರೀಮತಿ ಸುಮಿತ್ರಾದೇವಿ ಅಂಗಡಿ

***

ಗುರುವಿನ ಹಾಡು

ಪತಿವ್ರತ ಬಾಲೆಗೆ ಪತಿ ಗುರು ದೈವವು
ಸತಿಯಳಿಗೆ ಸೌಭಾಗ್ಯ ಮಾತೆ ಕೇಳವ್ವ ॥ ಪ ॥

ಅತ್ತಿ ಮಾವರ ಸೇವೆ ಮತ್ತೆ ಮರಿಯಲಿಬ್ಯಾಡ
ಪತಿಪಾದಗಳಲಿ ದಣಿಯವ್ವ ಮಾತಕೇಳವ್ವ ॥ ೧ ॥

ಅರಸನ ಹೆಂಡತಿ ಅರಸಿ ನೀ ಆದರೆ
ಬಿರಸ ಗುಡಿಯಲಿ ಬ್ಯಾಡವ್ವ ಮಾತಕೇಳವ್ವ ॥ ೨ ॥

ದೊರೆತನ ಭೋಗಿಸಿ ಬಡತನ ಬಂದರ
ಒಡಹುಟ್ಟಿದ ಅಣ್ಣನ ಮನಿಯಾಸೆ ಮಾಡದಿರವ್ವ ಮಾತಕೇಳವ್ವ॥ ೩ ॥

ಜನಕಜಾನಂದನ ಜಾನಕಿ ದೇವಿಗೆ
ಮನದನ್ನ ಸಾವಿತ್ರಿ ಸ್ಮರಣೆ ಮಾಡವ್ವ ॥ ೪ ॥

***

೨. ಲಿಂಗದ ಮಹತ್ವ

ಲಿಂಗಪೂಜೆ ಹಾಡು

ಲಿಂಗಪೂಜೆಯ ಮಾಡಿರೊ
ನಿಮ್ಮೊಳು ಪ್ರಾಣಲಿಂಗಪೂಜೆಯ ಮಾಡಿರೊ
ಕೃಷ್ಣೆ ಮಲಪ್ರಭೆ ಸಂಗಮದೊಳ್ ಮಿಂದು
ಶೃಂಗಾರಪರಿಯ ರಂಗಮಂಟಪದೊಳು ॥ ೧ ॥

ಪರಭಕ್ತಿ ಜಲವ ನೀಡಿ ಮಜ್ಜನಗೈದು
ವಿರತಿ ಗಂಧವನೆ ತೀಡಿ
ಕರಣೇಂದ್ರಿಯಗಳೆಂಬ ಮಿನುಗು ಅಕ್ಷತೆ ಇಟ್ಟು
ಅರುವೆಂಬ ನಿರ್ಮಲ ಸರಸ ಪುಷ್ಪವ ಸೂಡಿ ॥ ೨ ॥

ಹರುಷವೆಂಬುವ ಧೂಪವ ಸಮರ್ಪಿಸಿ
ಅರಿವು ಕಣ್ತೆರೆವ ನೋಟವೆ ಅರ್ಪಿಸಿ
ಪರಿಪೂರ್ಣ ಪರಿಣಾಮವೆಂಬ ನೈವೇದ್ಯವರ್ಪಿಸಿ
ಹೃದಯ ಕಮಲದಲ್ಲಿ ನೆಲಿಸಿ ॥ ೩ ॥

ಮೊರೆವ ತ್ರಿಗುಣವೆಂಬ ವರತಾಂಬೂಲವ ಕೊಟ್ಟು
ಕರವಿಷ್ಟಲಿಂಗದ ಅಂಗದಲಿ
ಹೊರಒಳಗೆರಡೆನದಲಿ ಮೀರಿ ಬೆಳಗುತಲಿ
ಇರಲಿ ಪ್ರಾಣಲಿಂಗಪೂಜೆ ನಿರಂತರ ನಡಯಲಿ ॥ ೪ ॥

– ಶ್ರೀಮತಿ ಸುಮಿತ್ರಾದೇವಿ ಅಂಗಡಿ
– ಶ್ರೀಮತಿ ಗೌರವ್ವ ಕಾಡಾದಿ
– ಶ್ರೀಮತಿ ಸರ್ವಮಂಗಳಾ ಜೋಗೂರ

***

ಲಿಂಗಪೂಜಿ ಆಗುತಾದಣ್ಣ

ಲಿಂಗಪೂಜಿ ಆಗುತಾದಣ್ಣ ಯಾವಾಗ ನೋಡಲು
ಲಿಂಪೂಜಿ ಆಗುತಾದಣ್ಣ ॥ ಪ ॥

ಲಿಂಗಪೂಜಿ ಆಗುತ್ತೈತಿ ಅಂಗವೆಂಬ ಗುಡಿಯೊಳಗೆ
ಲಿಂಗವೆಂಬ ಅರಹು ತನ್ನ ಕಂಗಳಿಗೆ ತೋರುತ್ತಾದೆ ॥ ೧ ॥

ಆರು ಮೂರು ಕಟ್ಟಬೇಕಣ್ಣ ಈ ಲಿಂಗಪೂಜೆಗೆ
ಆರು ಮೂರು ಕೆಡಿಸಬೇಕಣ್ಣ
ಆರು ಮನೆಯ ದಾಟಬೇಕು ಮೂರು ಮನೆಯ ನಟ್ಟನಡುವೆ
ಏರಿ ಶಿಖರದಲ್ಲಿ ಕುಳಿತು ಘೋರ ಗುಡ್ಡ ಕೂಗತೈತಿ ॥ ೨ ॥

ನಾಲ್ಕು ದಾರಿ ನಡುವಿಗೈತಣ್ಣ ಈ ಲಿಂಗಪೂಜಿ
ಮೇಲಕ್ಕೇರಿ ನಿಲ್ಲಬೇಕಣ್ಣ
ಕಾಕಬುದ್ಧಿಯ ಕಳೆಯಬೇಕು ನೂಕಬೇಕು ಮದಗಳೆಂಟು
ಜೋಕೆಯಿಂದಲಿ ನೋಡಿದರೆ ನೇರಬೆಳಕು ಕಾಣತೈತಿ ॥ ೩ ॥

ಯೋಗಿ ಉನ್ಮಿ ನಿವಾಸ ಕಾಣಣ್ಣ ನಿಜ ನಂಬಿದವರೀಗೆ
ಆಗ ಚಿನ್ಮಯ ರೂಪ ತೋರಣ್ಣ
ಆಗ ಈಗ ಎನ್ನದೆ ಈ ಲಿಂಗಪೂಜೆ ಮಾಡುತ್ತಿರುವಿ
ಹೋಗುವಾಗ ಗಂಗಾಧರನ ಬೇಗದಿಂದಲಿ ಪಾಲಿಸಯ್ಯಾ ॥ ೪ ॥

– ಶ್ರೀಮತಿ ಪಾರ್ವತಿ ಜೇಮಶೆಟ್ಟಿ
ಹಾಗೂ ಸರ್ವಮಂಗಳಾ ಜೋಗೂರ

***

ಲಿಂಗಯ್ಯನ ಮದುವೆ

ಮದುವಿಯ ಮಾಡಿದರು । ಲಿಂಗಯ್ಯನಾ
ಮದುವಿಯ ಮಾಡಿದರು ॥ ಪ ॥

ಮದುವಿಯ ಮಾಡಿದರು ಭುವನ ಕೈಲಾಸದೋಳು
ಅಮರ ಗಣಂಗಳು ಸಂಭ್ರಮದಿಂದಲಿ ॥ ೧ ॥

ಬಸವಯ್ಯಾ ಬಂಡಿ ಹೂಡಿ ನಾವು ನಿಬ್ಬಣದವರು
ಸಂಗಯ್ಯಾ ಮದುಮಗ ಶಿವಶರಣ ಮುತ್ತೈದೆಯರು ॥ ೨ ॥

ಪಚ್ಚೆಯ ಮಾಲಿನೊಳೂ ಪವಳದ ಮೇಲ್ಕಟ್ಟು
ಮುತ್ತಿನ ತಾಳಿಯನಿಟ್ಟು ಮದುವಿಯ ಮಾಡಿದರು ॥ ೩ ॥

ಕರಕೆ ಕಂಕಣ ಶಿರಕೆ ಶ್ಯಾಶಿಯನಿಟ್ಟು
ಧೃಢವುಳ್ಳ ಎನ್ನ ಚೆನ್ನಮಲ್ಲಿಕಾರ್ಜುನನ ಮದುವಿಯ ಮಾಡಿದರು ॥ ೪ ॥

– ಶ್ರೀಮತಿ ಪಾರ್ವತಿ ಜೆಮಶೆಟ್ಟಿ ಹಾಗೂ
ಸರ್ವಮಂಗಳಾ ಜೋಗೂರ

***

ಧೂಪ ಸಮರ್ಪಿಸುವೆ

ಧೂಪ ಸಮರ್ಪಿಸುವೆ ಲಿಂಗಯ್ಯಗೆ
ಧೂಪ ಸಮರ್ಪಿಸುವೆ ॥ ಪ ॥

ಧೂಪ ಸಮರ್ಪಿಸು ಪಾಪ ವಿನಾಸಾತು
ತ್ರಿಪತಿ ಪೂಜಿತ ರೂಪ ಲಿಂಗಯ್ಯಗೆ
ಧೂಪ ಸಮರ್ಪಿಸುವೆ ॥ ೧ ॥

ರಾಳ ಗುಗ್ಗಳ ಕಚೂರ ದೇವತರ ಹಾಲ ಮಾಡಿ ಕರ್ಪೂರ
ಲೋಲನಾಗರ ಮುತ್ತಿ ಅಗಲಿಸಿ ಧೂಪಧೀರ ಲಿಂಗಯ್ಯಗೆ
ಧೂಪ ಸಮರ್ಪಿಸುವೆ ॥ ೨ ॥

ಮಾಯ ರಹಿತ ದೇವಗೆ ಸದ್ಭಕ್ತರಿಗೆ ಕಾಯಂತ ಪ್ರಭು ದೇವಗೆ
ಕಾಯಕ ವಾಚರಾಯ ಶ್ರೀ ಗುರು ಬಸವಲಿಂಗಯ್ಯಗೆ
ಧೂಪ ಸಮರ್ಪಿಸುವೆ ॥ ೩ ॥

– ಶ್ರೀಮತಿ ನೀಲಮ್ಮಾ ಲಾಧಾ

***

ಮಾಡು ತಂಗೆಮ್ಮಾ

ಗುರು ಮುಟ್ಟಿ ಗುರು ಆಗಿ
ಅರಿವಿನೊಳು ಅರುವಾಗಿ
ಪರಮ ನಾದ ಬಿಂದು ಕಲಾಭರಿತಾಳಾದೆ ತಂಗೆಮ್ಮಾ ॥ ಪ ॥

ತನುವು ಇಷ್ಟಲಿಂಗಕ್ಕೆ
ವಚನ ಪ್ರಾಣಲಿಂಗಕ್ಕೆ
ಮನವು ಭಾವಲಿಂಗಕ್ಕೆ
ನೀ ಇವು ಮಾಡು ತಂಗೆಮ್ಮಾ ॥ ೧ ॥

ಟಕ್ಕಿನೊಳು ಚರಲಿಂಗ
ಜಿಹ್ವೆದೊಳು ಗುರುಲಿಂಗ
ಮಿಕ್ಕಿ ಭ್ರೂಮಧ್ಯದಿ ಮಾಲಿಂಗ
ನೋಡ ತಂಗೆಮ್ಮಾ ॥ ೨ ॥

ಶಿರೋತ್ರದೊಳು ಪ್ರಸಾದಲಿಂಗ
ನೇತ್ರದೊಳು ಶಿವಲಿಂಗ
ನಾಸಿಕದೊಳು ಆಚಾರಲಿಂಗ
ವಿಚಾರ ಮಾಡು ತಂಗೆಮ್ಮಾ ॥ ೩ ॥

ಕಂಗಳ ಮಧ್ಯದಿ ಕಾಶಿಯೊಳು ಇರುವದು
ತುಂಗೇಶ್ವರನಾಥ ಎಂಬ ಲಿಂಗವ
ಮನದೊಳು ನೀ ತಿಳಿದು
ಹೆಜ್ಜೆಯಿಟ್ಟು ನೀನಡಿ ತಂಗೆಮ್ಮಾ ॥ ೪ ॥

ಘೂಳಿಯ ಮುಂದಿರುವ
ಹೇಳಿದ ವಚನ ಕೇಳಿ
ಮನಸ್ಸಿನೊಳು ಮಾರ್ಗವ ತಿಳಿದು
ಹರುಷಿತಳಾಗು ತಂಗೆಮ್ಮಾ ॥ ೫ ॥

ಗಾಳಿಯ ಮುಂದಿರುವ
ಹೇಳಿದ ವಚನ ಕೇಳಿ
ಮನಸ್ಸಿನೊಳು ಮಾರ್ಗವ ತಿಳಿದು
ಹರುಷಿತಳಾಗು ತಂಗೆಮ್ಮಾ ॥ ೬ ॥

ಲಿಂಗವಂತರಾಗಿ ಬಂದು
ಸಾರ ಪರಮತರಾಚರಣೆಯ
ಆಚಾರ ಲಿಂಗವ ಹಿಡಿದು
ಸೂರ್ಯನ ಉದಯವ ಮಾಡು ತಂಗೆಮ್ಮಾ ॥ ೭ ॥

ಹನ್ನೆರೆಡು ಅಕ್ಷರ ಮಂತ್ರ
ಒಂಭತ್ತಾಳ್ಯಾವ ಜಪ್ಪಿಸಿ
ಭಿನ್ನವಿಲ್ಲದೆ ನೂರಾ ಎಂಟು
ಜಪವ ಮಾಡು ತಂಗೆಮ್ಮಾ ॥ ೮ ॥

ಮೇಲು ಮಂಟಪದೊಳು
ಅಲ್ಲೆರೆಡು ನಿಲ್ಲಿಸಿ
ಕಾಲಹರಣ ಸರಿಸಿ
ಪ್ರಾಣ ಮೇಲಕ್ಕೆಳಿಯೆ ತಂಗೆಮ್ಮಾ ॥ ೯ ॥

– ಶ್ರೀಮತಿ ಗೌರವ್ವ ಕಾಡಾದಿ

***

ಲಿಂಗ ನೀರಂತ ಹೋದ

ಲಿಂಗ ನೀರಂತ ಹೋದ ನೀರ ದಂಡಿಗಿ ನಿಂತ
ಅಂಗೈದೊಳಗಿರುವ ಲಿಂಗಸೇವೆ । ಹೆಣ್ಣಿಂದ್ಯಾತರ ನ್ಯಾಯಾ ॥ ಪ ॥

ಊರ ಸುತ್ತಲಿಂಗ ಕೇರಿಸುತ್ತಲಿಂಗ
ಬಾಜಾರ ಸುತ್ತ ಏ ಬಸವಣ್ಣ । ಹೆಣ್ಣಿಂದ್ಯಾತರ ನ್ಯಾಯಾ

ಬಾಜಾರ ಸುತ್ತ ಬಸವಣ್ಣ
ಸೊಲ್ಲಾಪುರದ ಸಿದ್ಧರಾಮನ ಸುತ್ತ ಶ್ರೀಗಂಗಿ । ಹೆಣ್ಣಿಂದ್ಯಾತರ ನ್ಯಾಯಾ ॥೧॥

ವೇಳೆಯ ಬಂದರ ಯಾರಿಗಿ ನೆನಯಲಿ .
ಕಲ್ಯಾಣದಾಗರ ಶರಣರೆ । ಹೆಣ್ಣಿಂದ್ಯಾತರ ನ್ಯಾಯಾ
ಕಲ್ಯಾಣದಾಗ್ಗರ ಶರಣರ ನೆನೆದರ
ಬಂದ ಸಂಕಷ್ಟ ಬಯಲಾಗಿ । ಹೆಣ್ಣಿಂದ್ಯಾತರ ನ್ಯಾಯಾ ॥ ೨ ॥

ತಿಪರ್ಥಾಂತ ಕರಿಮ್ಯಾಲ ವಿಪರೀತ ಕಂಡೆಯ
ಲಿಪಿಯ ಓದ್ಯಾರ ಶರಣರ । ಹೆಣ್ಣಿಂದ್ಯಾತರ ನ್ಯಾಯಾ
ಲಿಪಿಯ ಓದ್ಯಾರ ಶರಣರ
ಕಲ್ಯಾಣದ ಅರ್ಥ ಕೇಳ್ಯಾರ ಬಸವಣ್ಣ । ಹೆಣ್ಣಿಂದ್ಯಾತರ ನ್ಯಾಯಾ ॥ ೩ ॥

ಅಕ್ಕನ ಕಲ್ಯಾಣ ಹೊಕ್ಕಿ ನೋಡಿದೆವು
ಗಲ್ಲಿ ಗಲ್ಲೆಲ್ಲ ಶರಣರ । ಹೆಣ್ಣಿಂದ್ಯಾತರ ನ್ಯಾಯಾ ॥ ೪ ॥

ಬಸವ ಒಳ್ಳೆಯವನಂತ ಹೆಸರಿಟ್ಟಾಳವರವ್ವ
ಬಸಳೆಲಿದಾಗ ಬಿಳಿಮುತ್ತ । ಹೆಣ್ಣಿಂದ್ಯಾತರ ನ್ಯಾಯಾ
ಬಸಳೆಲಿದಾಗ ಬಿಳಿಯ ಮುತ್ತನಿದ್ದಾರ
ಬಸವನ ದೃಷ್ಟಿ ತೆಗೆದಾಳ । ಹೆಣ್ಣಿಂದ್ಯಾತರ ನ್ಯಾಯಾ ॥ ೫ ॥

ನನ್ನ ಹಂಬಲ ನಿನಗಾಗಿ ನಿನ್ನ ಹಂಬಲ ನನಗಾಗಿ
ಕಣ್ಣಿಗಿ ನಿದ್ದಿ ಬರುವಲ್ಲದು । ಹೆಣ್ಣಿಂದ್ಯಾತರ ನ್ಯಾಯಾ
ಕಣ್ಣಿಗಿ ನಿದ್ದಿ ಬರುವಲದು ಬಸವಣ್ಣ
ಕಣ್ಣ ಮುಂದಿದ್ದ ಬೆಳಗಾನ । ಹೆಣ್ಣಿಂದ್ಯಾತರ ನ್ಯಾಯಾ ॥ ೬ ॥

ಕಣ್ಣಿಲಿ ಕಾಮಿನಿ ಹುಬ್ಬಳ್ಳಿ ರುಕಮಿನಿ
ಮನಿಯಾಗ ಪ್ರತೀಮಾ ಪದಮಿನಿ । ಹೆಣ್ಣಿಂದ್ಯಾತರ ನ್ಯಾಯಾ

ಮನಿಯಾಗ ಪ್ರತಿಮಾ ಪದಮಿನಿ ಹಾಳಂತ
ಯಾವ ರಾಯರಿಗಿ ಕೂಡತಿ । ಹೆಣ್ಣಿಂದ್ಯಾತರ ನ್ಯಾಯಾ ॥ ೭ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

ಮದವಿಯ ಮಾಡಿದರೋ

ಮದವಿಯ ಮಾಡಿದರೋ ಪಂಚ ಪ್ರಣಾಮದವರು
ಪಂಚ ಕಳಶವ ಸುರಗಿ ಸುತ್ತಿ ಸೋಬಾನವೇ ॥ ೧ ॥

ಆಧಾರ ಸ್ಥಲದಲ್ಲಿ ನಾಲ್ಕು ದಳದ ಚೌಕಿ
ಮದಿಮಗನ ಕರೆದು ಕೂಡುಸ್ಯಾರೇ ಸೋಬಾನವೆ ॥ ೨ ॥

ಆಚಾರ ಲಿಂಗದ ವಿಚಾರ ಮಾಡ್ಯಾರೇ
ಮಂದಿರ ಮನಿಯ ತೊಳದ್ಯಾರೇ ಸೋಬಾನವೇ ॥ ೩ ॥

ಸ್ವಾದಿಷ್ಟ ಸ್ಥಲದಲ್ಲಿ ಆರು ದಳಗಳುಂಟು
ಗುರುಲಿಂಗದ ಮದವಿ ಮುಗಸ್ಯಾರೇ ಸೋಬಾನವೇ ॥ ೪ ॥

ಮಣಿಪುರ ಸ್ಥಲದಲ್ಲಿ ಹತ್ತು ದಳಗಳುಂಟು
ಶಿವಲಿಂಗದ ಮದವಿ ಮುಗುಸ್ಯಾರೇ ಸೋಬಾನವೇ ॥ ೫ ॥

ಅನಾಹತ ಸ್ಥಲದಲ್ಲಿ ಹನ್ನೊಂದು ದಳ ತಂಗಿ
ಜಂಗಮ ಲಿಂಗನ ಮದಿವಿ ಮಾಡೇ ಸೋಬಾನವೇ ॥ ೬ ॥

ಇಸುದ್ಧೀಯ ಸ್ಥಲದಲ್ಲಿ ಹದಿನಾರು ದಳಗಳುಂಟು
ಪ್ರಸಾದ ಲಿಂಗನ ಮದವಿ ಮಾಡೇ ಸೋಬಾನವೇ ॥ ೭ ॥

ಅಗ್ನಿಯ ಸ್ಥಲದಲ್ಲಿ ಎರಡು ದಳಗಳುಂಟು
ಮಹಾಲಿಂಗ ಜಂಗಮ ಜಪಿಸವ್ವ ಸೋಬಾನವೇ ॥ ೮ ॥

ಬಳಕಿಯ ದಳಗಳು ದೇವ ದಾನವರು ತಿಳಿದು
ಅಕ್ಷಾಂತಿ ಹಾಕಿ ಹರಸ್ಯಾರೇ ಸೋಬಾನವೇ ॥ ೯ ॥

ಮುಡಬಿಯ ಮಠದೊಳು ನಡುವಿನ ಮಂಟಪದೊಳು
ಆಶ್ರಮ ಬ್ರಹ್ಮ ಆನಂದಯ್ಯ ಸೋಬಾನವೇ ॥ ೧೦ ॥

– ಶ್ರೀ ಅಣ್ಣಾರಾವ ಮುಡಬಿ

***

ಮಾತಾಡು ಮಾತಾಡು ಲಿಂಗವೆ

ಮಾತಾಡು ಮಾತಾಡು ಲಿಂಗವೆ
ನೀ ಮಾತಾಡಲೇಕಯ್ಯ ಲಿಂಗವೆ
ಮಾತಾಡದಿದ್ದರೆ ನಾ ತಾಳಲಾರೆನು
ಮಾತಾಡು ಉಳವಿಯ ಲಿಂಗವೆ
ಮಾತಾಡು ಕಾಶಿಯ ಲಿಂಗವೆ
ಮಾತಾಡು ಗೋಕರ್ಣ ಲಿಂಗವೆ ॥ ೧ ॥

ಕೋಳಿ ಕೂಗದ ಮುನ್ನ ಏಳುವೆ
ನದಿ ಸ್ನಾನ ಮಾಡಿ ಬರುವೆ ಲಿಂಗವೆ
ತುಪ್ಪಾದ ದೀಪ ಹಚ್ಚಿ ನಾ ಬೆಳಗುವೆ
ಮಾತಾಡು ಕಾಶೀಯ ಲಿಂಗವೆ ॥ ೨ ॥

ತನುವು ನಿನ್ನದಯ್ಯ ಲಿಂಗವೆ
ಎನ್ನ ಮನವು ನಿನ್ನದಯ್ಯ ಲಿಂಗವೆ
ಮನದೊಳಗಿರುವ ಗೊನೆಯ ಹೊಂಬಾಳೆಯ
ನಿನಗೆ ಅರ್ಪಿಸುವೆ ಲಿಂಗವೆ
ಮಾತಾಡು ಶ್ರೀಶೈಲ ಲಿಂಗವೆ ॥ ೩ ॥

ಹೊತ್ತು ಹೋಯಿತಲ್ಲ ಲಿಂಗವೆ
ಭಾಳ ಕತ್ತಲಾಯಿತಲ್ಲ ಲಿಂಗವೆ
ಅಪ್ಪ ಅಣ್ಣನ ಗುಡಿಗೆ ತಪ್ಪಾದೆ ನಾ ಬರುವೆ
ಅಪ್ಪಿಕೊಳ್ಳಯ್ಯ ಎನ್ನ ಲಿಂಗವೆ
ಮಾತಾಡು ಉಳವಿಯ ಲಿಂಗವೆ ॥ ೪ ॥

ಎಡಗೈಲಿ ಶಿವಪೂಜೆ ಲಿಂಗವೆ
ಬಲಗೈಲಿ ಶಿವಘಂಟಿ ಲಿಂಗವೆ
ಆರು ಮೂರೊಂಬತ್ತು ಪುಷ್ಪಾದ ಹಾರವ
ತಂದಿರುವೆ ಮಾತಾಡು ಲಿಂಗವೆ
ಮಾತಾಡು ಗೋಕರ್ಣ ಲಿಂಗವೆ ॥ ೫ ॥

ಕರುಣಿ ಬಂದರೆ ಕಾಯೊ ಲಿಂಗವೆ
ಮರಣ ಬಂದರೆ ಒಯ್ಯೊ ಲಿಂಗವೆ
ಹುಟ್ಟಿದ ಮಗನೀಗೆ ಶಿವನೆಂದು ಕರೆಯುವೆ
ಮಾತಾಡು ಶ್ರೀ ಕಾಶಿಯ ಲಿಂಗವೆ ॥ ೬ ॥

ಉದಯ ಕಾಲದಿ ಎದ್ದು ಲಿಂಗವೆ
ನದಿ ಸ್ನಾನ ಮಾಡಿ ಬರುವೆ ಲಿಂಗವೆ
ಏಳುತಲೇ ಎದ್ದು ಶಿವಪೂಜೆ ಮಾಡುವಂತ
ಭಕ್ತನಾಗಿಸಯ್ಯ ಲಿಂಗವೆ ॥ ೭ ॥

ಎನ್ನ ತಂದಿ ತಾಯಿಯು ನೀನೆ ಲಿಂಗವೆ
ಎನ್ನ ಬಂಧು ಬಳಗವು ನೀನೆ ಲಿಂಗವೆ
ಬಂದಂತ ಪಾಪ ಪರಿಹಾರ ಮಾಡುವಂತ
ಚಂದ್ರಶೇಖರ ನೀನೇ ಲಿಂಗವೆ ॥ ೮ ॥

– ಶ್ರೀಮತಿ ಪಾರ್ವತಿ ಜೇಮಶೆಟ್ಟಿ
– ಶ್ರೀಮತಿ ವಿಮಲಬಾಯಿ ಕಾಶಪ್ಪ

***

ಯಾಗಿಗೆ ಯಾರಿಲ್ಲ ಲಿಂಗವೇ

ಯಾರಿಗೆ ಯಾರಿಲ್ಲ ಲಿಂಗವೇ
ನಮಗೆ ಯಾರಿದ್ದರೇನು ಲಿಂಗವೇ
ಮಾರಹರನ ಕರುಣ ತಪ್ಪಿದ ಬಳಿಕ
ದೂರದೃಷ್ಟಿಳಾದ ಲಿಂಗವೇ ॥ ಪ ॥

ಸ್ನಾನ ಮಾಡೋ ಸ್ನಾನ ಮಾಡೋ ಲಿಂಗವೆ
ನೀವು ಸ್ನಾನ ಯಾಕ ಒಲ್ಲಿರಿ ಲಿಂಗವೆ
ಶ್ರದ್ಧೆಯಲಿ ನೀರ ನಾ ಕಾಸಿಟ್ಟೆ
ಸ್ನಾನ ಮಾಡೋ ಶಂಭುಲಿಂಗವೆ ॥ ೧ ॥

ಪೂಜಿಸು ಪೂಜಿಸು ಲಿಂಗವೆ
ನೀವು ಪೂಜೆಯು ಒಲ್ಯಾಕ ಲಿಂಗವೆ
ಭಕ್ತಿಲೀ ಗಿಡದಿಂದ ಪುಷ್ಪವ ಕಡದಿಟ್ಟೆ
ಪೂಜಿಸೋ ಮಹಾಲಿಂಗ ಲಿಂಗವೆ ॥ ೨ ॥

ಉಣು ಏಳು ಉಣು ಎಳು ಲಿಂಗವೆ
ನೀವು ಉಣ್ಣುವದು ಯಾಕ ಒಲ್ಲೆ ಲಿಂಗವೆ
ನಿಜವಾಗಿ ದೃಢದಿಂದ ಅಡಗಿಯ ಮಾಡಿನಿ
ಉಣು ಏಳೋ ಉಳವಿ ಲಿಂಗವೆ ॥ ೩ ॥

ಮಳಿ ಬಂತು ಮಳಿ ಬಂತು ಲಿಂಗವೆ
ಮಳಿ ಹಿಂದ ಝುಡಿ ಬಂದು ಲಿಂಗವೆ
ನಡು ಸಮುದ್ರದೊಳು ಕೆರೆ ಒಡಿದು ಹೋಗುತಿದೆ
ದಡಕಚ್ಚೋ ಶ್ರೀಶೈಲ ಲಿಂಗವೇ ॥ ೪ ॥

– ಶ್ರೀಮತಿ ಕಾಡಾದಿ ಗೌರವ್ವ

***

ಮಾತಾಡೋ ಲಿಂಗವೇ

ಮಾತಾಡೋ ಮಾತಾಡೋ ಲಿಂಗವೇ
ನೀನು ಮಾತಾಡಲೊಲ್ಲ್ಯಾಕ ಲಿಂಗವೇ
ಏಕನಿಷ್ಠೆಲಿಂದ ಜಾತ್ರಿಗಿ ನಾ ಬಂದೆ
ಮಾತಾಡೊ ಕಲ್ಯಾಣ ಲಿಂಗವೆ ॥ ೧ ॥

ಹಿಡಿಲಾಕ ರಂಬೆಯಿಲ್ಲ ಲಿಂಗವೆ
ಪಿಡಿಲಾಕ ಟೊಂಗೆಯಿಲ್ಲ ಲಿಂಗವೆ
ಬ್ರಹ್ಮಾಂಡ ತುಂಬಿ ನೀ ನಿಂತಿದ ಲಿಂಗವೆ
ಹಿಡಿಯಲಿ ಹ್ಯಾಂಗ ಲಿಂಗವೇ ॥ ೨ ॥

ಮನವು ಮಜ್ಜನಶಾಲಿ ಲಿಂಗವೆ
ತನವು ಕರ್ಪೂರದೀಪ ಲಿಂಗವೆ
ನಿಜವಾಗಿ ಇರುವಂತ ಆತ್ಮನಾ ತಂದಿನಿ
ಮೋಕ್ಷವ ಕೊಡು ನೀ ಮಾಲಿಂಗವೆ ॥ ೩ ॥

– ಶ್ರೀಮತಿ ಗೌರವ್ವ ಕಾಡಾದಿ

***

ಮುಣದಿದಿ ಏನು ಲಿಂಗವೆ

ಮಾತಾಡು ಮಾತಾಡು ಲಿಂಗವೆ
ಮುಣದಿದಿ ಏನೊ ಲಿಂಗವೆ
ನೀ ಮುಣದರ ನಾ ಹ್ಯಾಂಗ ದಡ ಮುಟ್ಟಬೇಕು
ಮಾತಾಡು ಮಾತಾಡು ಲಿಂಗವೇ ॥ ಪ ॥

ತೊರೆ ನೀರಿಗಿ ನಾಹೋದೆ ಲಿಂಗವೆ
ಕೊಡ ತುಂಬುತ್ತಿದ್ದೆ ಲಿಂಗವೆ

ಭರದಿಂದ ಸೆಳೆ ಬಂದು ಕೊಡ ಮುಂದಕ್ಕ ಹೋಯಿತು
ನೀರ್ಹ್ಯಾಂಗ ಮಾಡಲಿ ಲಿಂಗವೇ ॥ ೧ ॥

ಅಟ್ಟಡವಿಗಿ ನಾಹೋದೆ ಲಿಂಗವೆ
ಹೂವ ಕಡಿತ್ತಿದ್ದೆ ಲಿಂಗವೆ
ಗಿಡದಾ ಘಂಟಿ ಬಂದು ತಲೆಮ್ಯಾಲ ಬಿದ್ದಿತು
ಹೂವ್ಹ್ಯಾಂಗ ಮಾಡಲಿ ಲಿಂಗವೇ ॥ ೨ ॥

ಮಠಕ್ಕ ನಾ ಹೋದೆ ಲಿಂಗವೆ
ವಿಭೂತಿ ಬೇಕೆಂದು ಲಿಂಗವೆ
ಮಾಯದ ಸರ್ಪ ಬಂದು ಕಾಲಿಗಿ ಕಡಿದಿತು
ವಿಭೂತಿ ಹ್ಯಾಂಗ ಮಾಡಲಿ ಲಿಂಗವೇ ॥ ೩ ॥

ಮನಸ್ಸೆಂಬದು ಜಲ ಮಾಡಿ ಲಿಂಗವೆ
ಷಟ್‌ಸ್ಥಲ ಮಂತ್ರ ಹೂವ ಲಿಂಗವೆ
ಬಸವನ ನಾಮ ವಿಭೂತಿ ನಾ ಮಾಡಿ
ಪೂಜೆಯ ಮಾಡಿದೆ ಲಿಂಗವೇ ॥ ೪ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

ಮಾತಾಡು ಲಿಂಗವೇ

ಅಡವಿ ಅರಣ್ಯದಲ್ಲಿ ಲಿಂಗವೇ
ಎಣ್ಣೆ ಮಜ್ಜನ ಬಾವಿ ಲಿಂಗವೇ
ಅತ್ತೆಂಟು ಶರಣರು ಶಿವಪೂಜೆ ಮಾಡುವಾಗ
ವೊತ್ತೇ ಬಾಗೀತಯ್ಯ ಲಿಂಗವೇ ॥ ೧ ॥

ಅಣ್ಣ ಅವಸರಕಿಲ್ಲ ಲಿಂಗವೇ
ತಮ್ಮ ಏಳ್ಯವಕಿಲ್ಲ ಲಿಂಗವೇ
ತಾ ಪಡೆದ ಮಕ್ಕಳು ತಮಗೆ ಇಲ್ಲದ ಮ್ಯಾಲೆ
ಮೊಮ್ಮಕ್ಕಳ್ಯಾರಿಗೋ ಲಿಂಗವೇ ? ॥ ೨ ॥

ಮಾತಾಡು ಮಾತಾಡು ಲಿಂಗವೇ
ಮಾತಾಡುಬೇಕಯ್ಯ ಲಿಂಗವೇ

ಮಾತಾಡದಿದ್ದರೆ ನಾ ತಾಳಲಾರೆನೊ
ಮಾತಾಡು ಮಾತಾಡು ಲಿಂಗವೇ ॥ ೩ ॥

ಆಸಿಗೆ ಆಸಿದ್ದೆ ಲಿಂಗವೇ
ಪರಂಜ್ಯೋತಿ ಅಚ್ಚಿದ್ದೆ ಲಿಂಗವೇ
ಆಸೀಗ್ಗೆ ತಕ್ಕಾದ ಪುರುಷ ಇಲ್ಲದ ಮ್ಯಾಲೆ
ನಾ ಪರದೇಸ್ಯಾದೆ ಲಿಂಗವೇ ॥ ೪ ॥

ಅಡವೀಯ ಮನೆಮಾಡಿ ಲಿಂಗವೇ
ಗಿಡಕೆ ತೊಟ್ಟಲು ಕಟ್ಟಿ ಲಿಂಗವೇ
ತೊಟ್ಟಲಲ್ಲಿ ಇದ್ದ ಕೂಸು ಮಾಯ್ವಾಗಿ ಪೋಯಿತಯ್ಯ
ಯಾರಿದ್ದರೇನಯ್ಯ ಲಿಂಗವೇ ॥ ೫ ॥

ಮರ ವೊಳ್ಳೇದೆಂದು ಲಿಂಗವೇ
ಮರದ ನೆರಳಿಗೆ ವೋದೆ ಲಿಂಗವೇ
ಮರದ ಕೊನಿಯೇ ಬಾಗಿ ಶಿರದ ಮ್ಯಾಲೊರಗೀತು
ಯಾರಿದ್ದರೇನಯ್ಯ ಲಿಂಗವೇ ॥ ೬ ॥

ಮಾರಹರನೇ ನಿನ್ನ ಕರುಣ ತಪ್ಪಿದ ಮ್ಯಾಲೆ
ದೂರಿನ್ನ ನಾನಾದೆ ಲಿಂಗವೇ ॥ ೭ ॥

–ಕೃತಿ: ಮಾತಾಡು ಲಿಂಗವೇ

***

ಲಿಂಗಪೂಜೆಯ ಪದ

ಯಾರಿಗೆ ಯಾರಿಲ್ಲ ಲಿಂಗವೆ
ನಮಗ್ಯಾರಾದರೇನಯ್ಯ ಲಿಂಗವೇ
ಮಾರ ಹರ ನಮ್ಮ ಕರುಣ ತಪ್ಪಿದ ಮೇಲೆ
ದಾರಿ ದೂರಾದಿತು ಲಿಂಗವೇ ॥ ೧ ॥

ಕೋಳಿ ಕೂಗದ ಮುನ್ನ ಲಿಂಗವೇ
ಭಾಳವ್ಯಾಳ್ಯೆ ಆಗದ ಮುನ್ನ ಲಿಂಗವೇ
ಏಳೆಂಟು ವ್ಯಾಳ್ಯೆವು ಶಿವಪೂಜೆ ಮಾಡುವರು
ಆಳ ನೀ ಧರಿಸಯ್ಯ ಲಿಂಗವೇ ॥ ೨ ॥

ಮನವೆ ಮಜ್ಜನಸಾಲ ಲಿಂಗವೇ
ಒಳ್ಳೆ ತನವು ದೂಪದಾರ್ತಿ ಲಿಂಗವೆ
ವನದೊಳಗಿರುವಂಥ ಗೊನಿಯ ಬಾಳಿಯ ಹಣ್ಣು
ತಂದರ್ಪಿಸುವೆನು ಲಿಂಗವೇ ॥ ೩ ॥

ಕೊಟ್ಟು ಹುಟ್ಟಿಲಿಲ್ಲ ಲಿಂಗವೇ
ನಾನು ಹುಟ್ಟಿ ಪಡೆಯಲಿಲ್ಲ ಲಿಂಗವೇ
ಸಿಟ್ಟಿಲೆ ನಮ್ಮನ್ನ ಬೈದರೆ ಪಾಪ
ಬಿಟ್ಟಿತೇನಯ್ಯ ಲಿಂಗವೇ ॥ ೪ ॥

– ಶ್ರೀಮತಿ ಉತ್ತಂಗಿ ಕೊಟ್ರಬಸಮ್ಮ

***

ಯಾರಿಗಿ ಯಾರಿಲ್ಲ ಲಿಂಗವೇ

ಯಾರಿಗಿ ಯಾರಿಲ್ಲ ಲಿಂಗವೇ
ನಿಮಗ್ಯಾರಿದ್ದರೇನಯ್ಯ ಲಿಂಗವೇ
ಮಾರಾಯರು ತಪ್ಪಿದ ಮ್ಯಾಲ
ಕರುಣ ಇರಬಾರದೇನು ಲಿಂಗವೇ ॥ ೧ ॥

ಸ್ನಾನವು ಮಾಡೇಳು ಲಿಂಗವೇ
ನೀ ಸ್ನಾನವು ಒಲ್ಲೇಕೆ ಲಿಂಗವೇ
ಸಿಂಧು–ಗಂಗಾ ನದಿಯ ನೀರನ್ನು ತಂದಿರುವೇ
ಸ್ನಾನವು ಮಾಡೇಳು ಲಿಂಗವೇ ॥ ೨ ॥

ಪೂಜೆಗೊಳ್ಳೊ ನೀ ಲಿಂಗವೇ
ನೀ ಪೂಜೆಗೊಳ್ಳರಾರೇಕೆ ಲಿಂಗವೇ
ಸುತ್ತೇಳು ಸಮುದ್ರದ ದಂಡೆಯಲಿ ಇರುವ
ಪುಷ್ಪವ ತಂದಿರುವೆ ಲಿಂಗವೇ ॥ ೩ ॥

ಉಣ್ಣೇಲೊ ಉಣ್ಣೇಲೊ ಲಿಂಗವೇ
ನೀ ಉಣ್ಣಲಾರೇಕೆ ಲಿಂಗವೇ
ನಿಜ ಹಿಡ್ದು ಧೃಡದಿಂದ ಅಡಗೀ ನಾ ಮಾಡೀನಿ
ಉಣ್ಣೇಳು ವಡವಿಯ ಲಿಂಗವೇ ॥ ೪ ॥

ಮಾತಾಡೋ ಮಾತಾಡೋ ಲಿಂಗವೇ
ನೀ ಮಾತಾಡಲೊಲ್ಲೇಕೆ ಲಿಂಗವೇ
ಏಕ ಮಾನಸದಿಂದ ಜಾತ್ರಿಗಿ ನಾ ಬಂದೆ
ಮಾತಾಡು ಮಾಗೋಡಿ ಲಿಂಗವೇ ॥ ೫ ॥

ಕಾಳೆಂಬ ಕತ್ತಲಿ ಲಿಂಗವೇ
ಮೇಲೆ ಧಾಳೆಂಬ ಜಡಿಮಳಿ ಲಿಂಗವೇ
ಅಟ್ಟ ಆರ‍್ಯಾಣದಾಗ ನಾರಿ ಒಬ್ಬಳೆ ನಾ
ದಾರಿ ತೋರಿಸೇಳು ಲಿಂಗವೇ ॥ ೬ ॥

– ಶ್ರೀಮತಿ ಕಸ್ತೂರಿ ಶ್ಯಾಮರಾವ ಪಾಟೀಲ

***

ಲಗ್ನ ತೀರಿದ ಮ್ಯಾಲ ಇಗ್ನ ಬರದು ತಂಗಿ

ಲಗ್ನ ತೀರಿದ ಮ್ಯಾಲ ಇಗ್ನ ಬರದು ತಂಗಿ
ಸುಜ್ಞಾನಿ ಎನ್ನ ಪತಿ ಮರುಷ ಸೌಭಾಗ್ಯ
ಈ ಶುಭಲಗ್ನ ಅಜ್ಞಾನಿಗಳಿಗೆ ಅರಿಯಲದವ್ವಾ ಸೌಬಾಗ್ಯ ॥ ಪ ॥

ಆದರ ಸಸಿಗಟ್ಟಿ ಯೌಗ ಚೌಕೀಯ ಮೆಟ್ಟಿ
ನಾದ ಮೂರುತಿ ಕಿವಿಯ ಶಕ್ತಿ ಸೌಭಾಗ್ಯ
ಈ ಅಚ್ಚರಿ ಲಿಂಗ ಗಜಪತಿಗೆ ಎನಗ ಶುಭಲಗ್ನ ಸೌಭಾಗ್ಯ ॥ ೧ ॥

ಶುದ್ಧಿಷ್ಟ ದೇವರ ಜಗಲಿ ಸುಡುವಾದ ಮೇದು ನೀ
ಅನುಭಾವದ ಭೂಮಕ ಕೂಡಾನು ಬಾರೇ ಸೌಭಾಗ್ಯ
ಈ ಶಿವಲಿಂಗ ವಿಷ್ಣುಗ ಎನಗ ಉಡಿಯ ತುಂಬಿ ಸೌಭಾಗ್ಯ ॥ ೨ ॥

ಮಣಿಪೂರ ಮಂಟಪದೊಳು ಗುಣಪೂರಾ ಇಚ್ಛಾಶಕ್ತಿ
ಏಣಕಿ ದೆಸೆವಾದೆ ಮುತ್ತಿನ ದಂಡಿ ಸೌಭಾಗ್ಯ
ಈ ಗುರುಲಿಂಗ ಬ್ರಹ್ಮಗ ಎನಗ ಬೀರುಣುಗಿ ಸೌಭಾಗ್ಯ ॥ ೩ ॥

ಅನುವತ್ತಾ ಆದಿಶಕ್ತಿ ಎನುಪಿಗೆ ಬಸರು ಬಂಕಿ
ವರ್ಣಾದೆಶವಾದೆ ಖಳಿಯ ಚಿನ್ನ ಸೌಭಾಗ್ಯ
ಈ ಜಂಗಮ ಲಿಂಗ ಈಶ್ವರಗ ಎನಗ ಮಲ್ಲಿಗೆ ಮುಡಿಸಿ ಸೌಭಾಗ್ಯ ॥ ೪ ॥

ಈ ಸುದ್ದಿ ಪರಶಕ್ತಿ ಪರಿಪೂರ್ಣ ಗರ್ಭಣಿ ತುಂಬಿ
ಸಡಕ ಧರಿಸ್ಯಾರ ಶಲ್ಯಾ ಸೌಭಾಗ್ಯ
ಈ ಪ್ರಾಸದ ಲಿಂಗ ಪರಮ ಪುರುಷಗ ಪಟ್ಟಗಟ್ಟಿ ಸೌಭಾಗ್ಯ ॥ ೫ ॥

ಅಗ್ನಿಗಿ ಚಿತ್ತ ಶಕ್ತಿ ಸುಜ್ಞಾನಿಗಿ ನವಮಾಸ ತುಂಬಿ
ಜ್ಞಾನಿಗಿ ಮತಿವಂತ ಮಗ ಜನಿಸಿ ಸೌಭಾಗ್ಯ
ಈ ಸೂರ್ಯ ಚಂದ್ರ ತಾರಾ ಮಂಡಲ ದಸವಾಗ್ಗಿ ಸೌಭಾಗ್ಯ ॥ ೬ ॥

ಸಹಸ್ರದೊಳಗ ಹಳಪೀಡಿದು ಶಂಕ್ರ್ಯಾ ಸಿಕ್ಕಾವ ಕಡಿದು
ಸುರುವಾರಮೃತ ಸೇವಿಸುವೆ ಸೌಭಾಗ್ಯ
ಈ ನಿಷ್ಕಲಿ ಲಿಂಗ ಪರಶಿವಗ ಎನಗ ಹೂವಿನ ಶೆಲ್ಯಾ ಸೌಭಾಗ್ಯ ॥ ೭ ॥

ಎತ್ತ ನೊಡಿದರ ತಂಗಿ ಸುತ್ತೆಲ್ಲಾ ಮುತ್ತಿನ ಮಾಲಾ
ಛತ್ತೀಸ ಕೋಟಿ ಗಣತರ ತೆನಿಯೇ ಸೌಭಾಗ್ಯ
ಈ ಸತ್ಯ ಲೋಕ ಮುತ್ತಿನ ಮಾಲ ಏರಿದರವ್ವ ಸೌಭಾಗ್ಯ ॥ ೮ ॥

ನಾನಾ ಜನ್ಮವ ತಿರುಗಿ ಖೂನ ಅರಿಯದೇ ಬಂದೇನ ತಂಗಿ
ಮೌನಾದಿ ಮನಾ ಸೋತೇನಾ ಸೌಭಾಗ್ಯ
ಈ ಮುನಿಪತಿ ತಾನು ತನ್ನಂತೆ ಮಾಡಿಕೊಂಡ ಸೌಭಾಗ್ಯ ॥ ೯ ॥

ಲಕ್ಷದೊಳಗೋಳ ಪಿಡಿದು ಮೋಕ್ಷಕ ತೊಟ್ಟಿಲ ಕಟ್ಟಿ
ಸಾಕ್ಷಾತ ಸಂಗಯ್ಯನ ಹೆಸರಿಟ್ಟೆ ಸೌಭಾಗ್ಯ
ಈ ಸತ್ಯ ಲೋಕದ ಶರಣರು ಬಂದಾರೇ ಬಾಗಿಲಕ ಸೌಭಾಗ್ಯ ॥ ೧೦ ॥

ಧರಿಯೋಳು ಮೆರಿವದು ಯೋಗಿ ವಾಸ ಸಂಗಯ್ಯನ
ಜ್ಞಾನ ಮೂರ್ತಿಗಳ ಸಂಗ ಸೌಭಾಗ್ಯ
ಈ ಮುನಿಪತಿ ತಾನೇ ವರ ನೋಡಿ ಲಗ್ನವಾದ ಸೌಭಾಗ್ಯ ॥ ೧೧ ॥

– ಶ್ರೀಮತಿ ಲಕ್ಷ್ಮೀಬಾಯಿ ಕೃಷ್ಣಪ್ಪ

***

ಅಂಗೈದೊಳಗೆ ನೀ ತಿಳಿ

ಹತ್ತು ಲಿಂಗದೊಳಗೆ ಹೊಲಬುಗೆಡಬೇಡ
ಸಲೆ ನಿನ ಅಂಗೈಯದೊಳಗೆ ನೀ ತಿಳಿ ॥ ಪ ॥

ನಿತ್ಯ ನಿತ್ಯ ನೀ ಭಜಿಸಲು ಬೇಕು
ಸತ್ಯ ತತ್ತ್ವ ನೀ ತಿಳಿಯಲು ಬೇಕು

ಸನ್ನುತ ಲಿಂಗ ಪೂಜಿಸಿ ನೀ
ಉನ್ನತ ಪದವಿ ಪಡಿಯ ನೀ ॥ ೧ ॥

ಜ್ಯೋತಿಯಿರಲು ಜ್ಯೋತಿ ಯಾಕ ಹುಡುಕುತಿ
ಕ್ಯಾತಲಿಂಗವಿರೆ ಬೇರೋಂದು ಯಾಕ ಅಂತಿ
ಎಲ್ಲಾ ಕ್ಷೇತ್ರ ನಿನ್ನೊಳಗವ
ಎಲ್ಲಾ ತೀರ್ಥ ನಿನ್ನಲೆ ಅವ ॥ ೨ ॥

ಲಿಂಗವಿಲ್ಲದೆ ನೀ ಇರಲಿಬ್ಯಾಡ
ಲಿಂಗಕ್ಕಲ್ಲದೆ ನೀ ಭೋಗಿಸಬ್ಯಾಡ
ಲಿಂಗವಿಲ್ಲದೆ ನೆರೆಯಿರಬ್ಯಾಡ
ಲಿಂಗವೆ ನೀನಾಗಿ ಮಂಗಳ ಆಗ ॥ ೩ ॥

– ಶ್ರೀಮತಿ ಗೌರವ್ವ ಕಾಡಾದಿ

***

ಜಯ ಲಿಂಗ ಜಯ ಲಿಂಗ

ಜಯಲಿಂಗ ಜಯಲಿಂಗ
ಜಯ ಮಂಗಲ ಚಿಲ್ಲಿಂಗ
ಜಯ ಪರತರ ಶಿವಲಿಂಗ ॥ ಪ ॥

ಕರದಿ ಪಾಲಿಪ ಲಿಂಗ
ವರಬಿಂದು ಘೃಣಿಲಿಂಗ
ಸುರಚಿರ ಶಿವರುಚಿಲಿಂಗ ॥ ೧ ॥

ಭೂವನಮಯ ಪತಿಲಿಂಗ
ಭಾವಕ ಮಹಾದ್ಗುರುಲಿಂಗ
ಭಾವಕನವ ಮಹಾಲಿಂಗ ॥ ೨ ॥

ಶಿವಯೋಗಿಷ್ಟದಲಿಂಗ
ಶಿವಹೃದಯ ಪ್ರಭುಲಿಂಗ
ಶಿವಯೋಗಾಲಯ ಲಿಂಗ ॥ ೩ ॥

– ಶ್ರೀಮತಿ ಸುಮಿತ್ರಾದೇವಿ ಅಂಗಡಿ

***

ಲಿಂಗದ ಮೇಲೆ ನಿಜವಿರಬೇಕು

ಲಿಂಗದ ಮೇಲೆ ನಿಜವಿರಬೇಕು
ಅಂಗದೊಳಾರುಗುಣ ಅಳಿಬೇಕ ॥ ಪಲ್ಲ ॥

ಬಡತನಬಂದಾಗ ಶಾಂತಿ ಇರಬೇಕ
ಗುರುಕೊಟ್ಟ ಕಾಲಕ ಗುರು ಅಳಿಬೇಕ
ಲಿಂಗದ ಮೇಲ ನಿಜ ಇರಬೇಕ
ಅಂಗದೊಳಾರ್ಗುಣ ಅಳಿಬೇಕ ॥ ೧ ॥

ವೈರಿಬಂದಾಗ ವಾರ್‍ಯಾಗಬೇಕ
ಧ್ಯಾನಿಯು ಬಂದಾಗ ತೆಲಿಬಾಗಬೇಕ
ನಿಂಗದ ಮೇಲ ನಿಜವಿರಬೇಕ
ಅಂಗದೊಳಾರ್ಗುಣ ಅಳಿಬೇಕ ॥ ೨ ॥

ದೇವರಕಂಡಲ್ಲಿ ಕೈಮುಗಿಬೇಕ
ಗುರುಗೊಳು ಬಂದಲ್ಲಿ ಸಾಮಾಡಬೇಕ
ನಿಂಗದ ಮೇಲ ನಿಜವಿರಬೇಕ
ಅಂಗದೊಳಾರ್ಗುಣ ಅಳಿಬೇಕ ॥ ೩ ॥

ಮಳ್ಳ ಮಾತಿನತಿಳಿಗೇಡಿ ಮಗಳಮೇಲೆ
ಮನಸಿಟ್ಟು ಮಲ್ಲಯ್ಯಗ ಹೋದಲ್ಲಿ ಏನೈತಂದ
ನಿಂಗದ ಮೇಲ ನಿಜವಿರಬೇಕ
ಅಂಗದೊಳಾರ್ಗುಣ ಅಳಿಬೇಕ ॥ ೪ ॥

ಇಸ ಏರಿದವರಿಗಿ ಹಾಲೆರಿಬೇಕ
ನಿಂಗದ ಮೇಲ ನಿಜವಿರಬೇಕ
ಅಂಗದೊಳಾರ್ಗುಣ ಅಳಿಬೇಕ ॥ ೫ ॥

– ಕೃತಿ: ಜನಪದ ಪರಿಮಳ

***

ಬಾರೊ ಲಿಂಗ ಕರದ ಕಮಲಕೆ

ಬಾರೊ ಬಾರೊ ಲಿಂಗ ಕರದ ಕಮಲಕೆ
ಹೃದಯ ತಣಿಯೆ ಪೂಜಿಸುವೆ ನಿನ್ನಯ ಮೂರುತಿಯ ॥ ೧ ॥

ಭಕ್ತಿರಸದ ಉದಕವೆರೆದು ಕಾಮನುರುಹಿದ ಭಸ್ಮಹೂಸಿ
ವಿರತಿ ಎಂಬ ಗಂಧವಿಟ್ಟು ನಾನು ತಣಿವೆನು ॥ ೨ ॥

ಸದ್ಭಾವ ಕುಸುಮಗಳ ಪದತಲದಿ ಅರ್ಪಿಸುತ
ಅರಿವಿನಾರತಿಯ ಬೆಳಗಬಯಸುವೆ ॥ ೩ ॥

ಭಾವಶುದ್ಧತೆಯ ಧೂಪದ್ಹೊಗೆಯ ನಾನ್ಹಾಕಿ
ತನುಮನ ಅರ್ಪಣಾ ನೈವೇದ್ಯವಗೈದು ॥ ೪ ॥

ಅಂಗೈಯ್ಯ ತೊಟ್ಟಿಲಲಿ ಲಿಂಗಯ್ಯ ನಿನ್ನ ಮಲಗಿಸಿ
ಸಂಗೀತ ಹಾಡುವೆ ಲಾಲಿ ಹೇಳಿ ಮಲಗಿಸುವೆ ॥ ೫ ॥

ಅಡಿಪಾಡಿ ನಲಿದಾಡಿ ಮಿತಿಮೀರಿ ತಣಿದಾಡಿ
ನೋಡಿ ಸವಿವೆ ಕಂಗಳಲ್ಲಿ ಸಚ್ಚಿದಾನಂದ ರೂಪನಾ ॥ ೬ ॥

– ಶ್ರೀಮತಿ ಸುಮಿತ್ರಾದೇವಿ ಅಂಗಡಿ

***

ಮುಂಜಾನೆ ಏಳೂತ

ಮುಂಜಾನೆ ಏಳೂತ ತಂಬಿಗಿ ತಗೊಂಡು
ಹೋಗ್ಯಾಳ ಹರಿವ ಜಲಧಿಗೆ ನೀ ಬಾ ಲಿಂಗದ ಪೂಜೆಗೆ
ಹೋಗ್ಯಾಳ ಹರಿವ ಜಲಧಿಗೆ ಮೀನ ಮೊಸಳ್ಯಾಡಿ
ನೀರೆಂಜಲಾಗ್ಯಾವ ಹ್ಯಾಂಗ ಮಾಡೂನು ಲಿಂಗಕ ॥ ಪ ॥

ಕುಂಬಿ ಮ್ಯಾಲ ಇರುವುದು ಬಿಂದಿಗಿ ನೀರ ಕುಡಿಯುವುದು
ಕಂಡ ಕಂಡವರ ನಗಿಸುವುದು ಕಂಡಕಂಡವರ ನಗಿಸುವ
ಚಂಡಿನ್ಹೂವ ನೀ ಬಾ ಲಿಂಗದ ಪೂಜಿಗೆ ॥ ೧ ॥

ಬೇಲಿ ಮ್ಯಾಲಿರುವುದು ನಾಲಿಗಿ ಚಾಚುವುದು
ಹೋಗವರ ಸೆರಗ್ಹಿಡಿದು ಎಳಿಯುವುದು
ಹೋಗವರ ಸೆರಗ್ಹಿಡಿದು ಎಳೆಯು ಉತ್ರಾಣಿಕಡ್ಡಿ
ನೀ ಬಾ ಲಿಂಗದ ಪೂಜಿಗೆ ॥ ೨ ॥

ಅಡವ್ಯಾಗ ಇರುವುದು ಕಡದಾಡಿ ಬರುವುದು
ಕಡದರ ಬಡಿಗೇರ ಮನಿಗೆ ಬರುವುದು
ಕಡದರ ಬಿಡಿಗೇರ ಮನಿಗೆ ಬರವು ಕಾಲಡ್ಡಣಗಿ
ನೀ ಬಾ ಲಿಂಗದ ಪೂಜಿಗೆ ॥ ೩ ॥

ಹಳದಾಗ ಇರುವುದು ಹರಿದಾಡಿ ಮೇಯುವುದು
ಬಸವನ ಬಾಯಿಗೆ ಅಮರುವುದು
ಬಸವನ ಬಾಯಿಗೆ ಅಮರು ಕರಕಿಪತ್ರಿ
ನೀ ಬಾ ಲಿಂಗದ ಪೂಜಿಗೆ ॥ ೪ ॥

– ಶ್ರೀಮತಿ ಸುಮಿತ್ರಾದೇವಿ ಅಂಗಡಿ

***

ಸವಿಯೊ ಲಿಂಗವೆ

ಸವಿಯೊ ಸವಿಯೊ ಸವಿಯೊ ಸವಿಯೊ ಸವಿಯೊ ಲಿಂಗವೆ
ಹೃದಯದೊಲವ್ಹಿನಾಲ ನೀನು ಸವಿಯೊ ಲಿಂಗವೆ ॥ ೧ ॥

ಕಾಮಧೇನು ನೀನಾಗಿ ಲೋಕವೆಲ್ಲ ಸಲುಹುತಿರಲು
ಭಕ್ತಿದೇನು ನಾನಾಗಿ ನಿನಗೆ ಹಾಲನೀವೆನು ॥ ೨ ॥

ಕಲ್ಪತರು ನೀನಾಗಿ ಲೋಕಕಾಶ್ರಯ ಕೊಡಲು ನೀನು
ಮಹೇಶನಾಗಿ ನಾ ನಿನಗೆ ಹಾಲನೀವೆನು ॥ ೩ ॥

ದಾನಿ ನೀನು ಲೋಕಕೆಲ್ಲ ದೀನೆ ನಾನು ಲೋಕದಲ್ಲಿ
ದಾಸೋಹ ಮನದ ಒಲವಿನ್ಹಾಲ ಅರ್ಪಿಸಿಟ್ಟಿಹೆ ॥ ೪ ॥

ಬಾರೊ ಬಾರೊ ಬಾರೊ ಬಾರೊ ಬಾರೊ ಲಿಂಗವೆ
ಸವಿಯೊ ಸವಿಯೊ ಒಲವ ಸಚ್ಚಿದಾನಂದ ಲಿಂಗವೆ ॥ ೫ ॥

– ಶ್ರೀಮತಿ ಸುಮಿತ್ರಾದೇವಿ ಅಂಗಡಿ

***

ಲಿಂಗಯ್ಯ ಮಾತನಾಡೊ

ಲಿಂಗಯ್ಯ ಮಾತನಾಡೋ ತೋಂಟದ
ಸಿದ್ದಲಿಂಗಯ್ಯ ಮಾತನಾಡೋ ॥ ಪ ॥
ಸಂಗನ ಶರಣರ ಅಂಗೈಯೊಳಗಿರುವಂತ
ಲಿಂಗಯ್ಯ ಮಾತನಾಡೋ ॥ ಅ.ಪ ॥

ಹರನೇ ನೀ ಮಾತನಾಡೋ
ಭವನೆಂಬ ಸುರನೇ ನೀ ಮಾತನಾಡೋ
ಸುರತದೇವರ್ಕಳ ಭರತರೊಳಗೆ ನೀ
ಮರಿಯದೇ ಟೀ ಮಾತನಾಡೋ ॥ ೧ ॥

ಅಕ್ಷಯ ಮಾತನಾಡೋ ಅಭವನೆಂಬ
ಪಕ್ಷಿಯ ಮಾತನಾಡೋ
ಪಕ್ಷಿಯೊಳಗೆ ತ್ರೈಲೋಕವ ಸಲಹುವಾತ
ರಕ್ಷೀಪ ಮಾತನಾಡೋ ॥ ೨ ॥

ಜಂಗಮ ರೂಪಿನಿಂದ ಜಗವನೋಡ ಬಂಧಂಥ
ತಂದೆ ನೀ ಮಾತನಾಡೋ
ಎಡೆಮೂರ ದೈವರ ಭಕ್ತರೊಡೆಯ ನೀ
ಕರುಣಿಸಿ ಮಾತನಾಡೋ ॥ ೩ ॥

– ಶ್ರೀಮತಿ ಸರ್ವಮಂಗಳ ಜೋಗೂರ
ಹಾಗೂ ಪಾರ್ವತಿ ಜೆಮಶೆಟ್ಟಿ

***

ಲಿಂಗ ಸಿಗಲಿಲ್ಲ ನಮಗ

ಹಿಂಡುವ ಎಮ್ಮೆ ಬಿಟ್ಟು
ಕಂದಗ ಉಣನೀಡದ ಬಿಟ್ಟು
ತಂದಿಯ ಬೆನ್ನಹತ್ತಿ ನಾ ಬಂದೆ
ಲಿಂಗ ಸಿಗಿಲಿಲ್ಲ ನಮಗ
ಕಂಡಿರೆ ಅಡವಿ ಸ್ವಾಮಿನಾ ॥ ಪ ॥

ಪತ್ತರಿಬನಕ ಪೋಗಿದ್ದೆ
ಮುತ್ತು ಮಾಡಿ ನೋಡಿದೆ
ಹುತ್ತಿನೊಳಗ ಕೈ ಇಟ್ಟಿದೆ
ಜೀವದಾ ಆಶೆ ಬಿಟ್ಟಿದೆ
ಲಿಂಗ ಸಿಗಲಿಲ್ಲ ನಮಗ
ಕಂಡಿರೆ ಅಡವಿ ಸ್ವಾಮಿನಾ ॥ ೧ ॥

ಹಂಪಿಯ ಕ್ಷೇತ್ರಕ ಪೋಗಿದ್ದೆ
ತಂಪನಾಗಿ ನಾ ನಿಂತಿದ್ದೆ
ಲೆಕ್ಕ ವಿಲ್ಲದ ಲಿಂಗ ಎಣಿಸಿದೆ
ಹುಚ್ಚನಾಗಿ ನಿಂತಿದೆ
ಲಿಂಗ ಸಿಗಲಿಲ್ಲ ನಮಗ
ಕಂಡಿರೆ ಅಡವಿಸ್ವಾಮಿನಾ ॥ ೨ ॥

ಬಾರವ್ವ ಎನ ಮಗಳೆ ದಣಿಕೊಂಡೆ
ಕಲ್ಲ ಮುಳ್ಳ ತುಳಕೊಂಡೆ
ಪರಮಾತ್ಮನ ಪುಣ್ಯ ಪಡಕೊಂಡೆ
ಲಿಂಗ ಸಿಗಲಿಲ್ಲ ನಮಗ
ಕಂಡಿರೆ ಅಡವಿ ಸ್ವಾಮಿನಾ ॥ ೩ ॥

ಪರುವತ ಕ್ಷೇತ್ರಕ ಪೋಗಿದ್ದೆ
ಕಡಿಯ ಬಾಗಿಲಹಳ್ಳಿ ಕಂಡೆ
ಕೇರಿಯ ಕೇಳುತ ನಾ ಬಂದೆ
ವಾರಿಯ ಬಲ್ಲ ಮುದ್ದುಬಲ್ಲ
.... ಎಂಬ ನಮಗ ॥ ೪ ॥

– ಶ್ರೀಮತಿ ಗೌರವ್ವ ಕಾಡಾದಿ

***

ಲಿಂಗ ನೀರ ಮುಗದಾವ

ಲಿಂಗನೀರ ಮುಗದಾವ ಅಂಗನೀರ ಮುಗದಾವ
ಸಂಗನೀರ ಮುಗದಾವ ಲಿಂಗನೀರ ಮುಗದಾವ ॥ ಪ ॥

ಬೆಳಗಾಗಿ ನೀ ಏಳ ಬಿಲ್ವ ಪತ್ತರಿ ತಾರ
ಹೊಳೆಗ್ಹೋಗಿ ತಾರಾ ಹೊಸ ನೀರ ತಂಗೆಮ್ಮ
ಲಿಂಗ ನೀರ ಮುಗದಾವ ॥ ೧ ॥

ಹೊಳೆಗ್ಹೋಗಿ ತಾರ ಹೊಸನೀರ ಮಡಿಲಿಂದ
ಬಸವನ ಲಿಂಗ ಪೂಜೆ ಮಾಡ ತಂಗೆಮ್ಮ
ಲಿಂಗ ನೀರ ಮುಗದಾವ ॥ ೨ ॥

ಬಸವಣ್ಣ ನಿಮ್ಮ ಧ್ಯಾನ ಖುಸಿಲಿಂದ ಮಾಡೀನಿ
ಹುಸಿಮಾತ ಕೇಳದೆ ಮರತೀನಿ ತಂಗೆಮ್ಮ
ಲಿಂಗ ನೀರ ಮುಗದಾವ ॥ ೩ ॥

ತನುವೆಂಬ ಒಳ್ಳಾಗ ಕಾಮಕ್ರೋಧ ಭತ್ತಹಾಕಿ
ಲಿಂಗವೆಂಬ ಒನಕಿಲಿ ಕುಟ್ಟಿನಿ ತಂಗೆಮ್ಮ
ಲಿಂಗ ನೀರ ಮುಗದಾವ ॥ ೪ ॥

ಲಿಂಗವೆಂಬ ಒನಕೀಲಿ ಬಸವಾ ಎನ್ನುತಾ ಕುಟ್ಟಿನಿ
ತೌಡೆಲ್ಲ ಕಳೆದು ಹಸನಾದ ಅಕ್ಕಿಯು ತಂಗೆಮ್ಮ
ಲಿಂಗ ನೀರ ಮುಗದಾವ ॥ ೫ ॥

ಹಸನಾದ ಅಕ್ಕಿಯು ತೊಳೆದು ಬಾನಾ ಮಾಡಿನಿ
ಬಸವಗ ಎಡೆಯ ಮಾಡಿನಿ ತಂಗೆಮ್ಮ
ಲಿಂಗ ನೀರ ಮುಗದಾವ ॥ ೬ ॥

ತ್ರಿಪುರಾಂತ ಕೆರಿಮ್ಯಾಲ ಬಸವಣ್ಣನ ಮನಿಯಾಗ
ಲಕ್ಷದಾ ಮ್ಯಾಲ ತೊಂಭತ್ತಾರ ಸಾವಿರ ಜಂಗಮರು
ಲಿಂಗ ನೀರ ಮುಗದಾವ ॥ ೭ ॥

ಲಕ್ಷದಾ ಮ್ಯಾಲ ತೊಂಭತ್ತಾರು ಸಾವಿರದಾ
ಜಂಗಮರ ಪೂಜೆ ನಡದಾದ ತಂಗೆಮ್ಮ
ಲಿಂಗ ನೀರ ಮುಗದಾವ ॥ ೮ ॥

ರೊಟ್ಟಿ ಪುಂಡಿಪಲ್ಲೆ ಹುಳಿ ಅನ್ನ ಅಂಬಲಿ
ಶರಣರ ಪ್ರಸಾದ ನಡದಾದ ತಂಗೆಮ್ಮ
ಲಿಂಗನೀರ ಮುಗದಾವ ॥ ೯ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

ಇಷ್ಟಲಿಂಗ ಗಟ್ಟಿ ಉಳಿತು

ಕಲ್ಲಲಿಂಗ ಕಷ್ಟ ತಂತು
ಮಣ್ಣಲಿಂಗ ಮಣ್ಣಾಗ ಹಾಕಿತು
ಮರದಲಿಂಗ ಗೋಣ ಮುರಿತು
ಸತ್ಯದ ಹಾದಿ ಇಷ್ಟಲಿಂಗ ತೋರಿತು ಶಿವಶಿವಾ ॥ ಪ ॥

ಕಲ್ಲಲಿಂಗ ಒಡೆದು ಹೋಯಿತು
ಮಣ್ಣಲಿಂಗ ನೆನೆದು ಹೋಯಿತು
ಮರದಲಿಂಗ ಮುರಿದು ಬಿತ್ತು
ಇಷ್ಟಲಿಂಗ ಗಟ್ಟಿ ಉಳಿತು ಶಿವಶಿವಾ ॥ ೧ ॥

ನೆಟ್ಟದೃಷ್ಟಿ ಲಿಂಗಕ್ಕಿಟ್ಟು
ಕೆಟ್ಟಗುಣವ ಮೊದಲಬಿಟ್ಟು
ಸತ್ಯವೆಂಬ ಉದಕದಿಂದ
ನಿತ್ಯ ನಿರ್ಮಲ ಲಿಂಗಪೂಜಿಸು ಶಿವಶಿವ ॥ ೨ ॥

ಮನವೆಂಬುದು ಮಜ್ಜನ ಮಾಡಿ
ನಿರಂಹಕಾರಿ ವಿಭೂತಿ ಹಚ್ಚಿ
ಶೃದ್ಧೆಯೆಂಬ ಹೂವಯಿಟ್ಟು
ನಿತ್ಯಲಿಂಗ ಪೂಜೆ ಸತ್ಯ ಸತ್ಯ ತೋರಿಸು ಶಿವಶಿವಾ ॥ ೩ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

ಅಂತರಂಗದ ಅರಿವು ಪಡೆದುಕೊ

ಇಷ್ಟಲಿಂಗ ಪೂಜೆ ನೀ ಮಾಡೋ
ಎಲೆ ಮನುಜಾ
ಅಂತರಂಗದ ಅರಿವು ಪಡೆದುಕೊ ॥ ಪ ॥

ದುಷ್ಟತನವ ಅಳಿವಂತಹ
ಕಷ್ಟತನವ ಬಿಡಿಸುವಂತಹ
ಗಟ್ಟಿಲಿಂಗ ಪೂಜೆ ನೀ ಮಾಡಿ
ನೆಟ್ಟಕ್ಕೆ ಹೋಗೋ ಶಿವನ ಬಳಿಗಿ ॥ ೧ ॥

ಜೊಳ್ಳ ದೇವರ ಬೆನ್ನ ನೀ ಹತ್ತಿ
ಸುಳ್ಳ ಜೀವನ ನೀನು ನಡೆಸಿದಿ
ಸತ್ಯವೆಂಬ ಲಿಂಗ ಮರೆತು
ನರಕವೆಂಬುದಕ ಗುರಿಯು ಆದಿ ॥ ೨ ॥

ನಿನ್ನ ಕುರುಹು ನಿನ್ನ ಎದೆಯ ಲಿಂಗವೊ
ಅದರ ಒಳಗ ನಿನ್ನ ತಿಳಿದುಕೊಳ್ಳು
ತಿಳಿದುಕೊಳ್ಳು ಅಪ್ಪಿಕೊಳ್ಳೊ
ಪರಶಿವನ ಒಳಗ ಒಂದು ಆಗು ॥ ೩ ॥

– ಶ್ರೀಮತಿ ಗೌರವ್ವ ಕಾಡಾದಿ

***

ಮೂರ್ಹೊತ್ತು ನಡೆಯಬೇಕು

ಗುರುಕೊಟ್ಟ ಲಿಂಗವ ಎದಿ ಮ್ಯಾಲ ಇಡಬೇಕು
ನಿತ್ಯ ನಿತ್ಯ ಪೂಜೆ ಮೂರ್ಹೊತ್ತು ನಡೆಯಬೇಕು ॥ ಪ ॥

ಯಾವ ಯೋಗ ಮಾಡಿದರೇನು
ಯಾವ ಪೂಜೆ ಮಾಡಿದರೇನು
ಲಿಂಗದ ಮರ್ಮವಾ ಚೆನ್ನಾಗಿ ತಿಳಿಬೇಕು
ನಡೆ – ನುಡಿ ಒಂದು ಮಾಡಬೇಕು ॥ ೧ ॥

ಹೊತ್ತಾರೆ ಏಳಬೇಕು ಹೊತ್ತು ನೀರ ತರಬೇಕು
ಸುತ್ತಗಿಡದಾ ಹೂಪತ್ತರಿ ನೀನೇ ಕಡಿಬೇಕು
ಹೊತ್ತು ಹೋಗ ಮೊದಲು ಭಕ್ತಿಲೀ ಮಾಡಬೇಕು
ಹೊತ್ತ ಹೋದ ಬಳಿಕ ಲಿಂಗ್ಯಾರು ನೀ ಯಾರು ॥ ೨ ॥

ಹರಿಯಾ ಹೊತ್ತಿನಲ್ಲಿ ಕಟ್ಟಿದಾ ಲಿಂಗವ ನೆನಿಬೇಕು
ಶರಣೆಂದು ಅದಕ ಮನಸಿಟ್ಟು ಕೇಳಬೇಕು
ಮನಸಿಟ್ಟು ಕೇಳಿದರೆ ಖುಸಿಯಿಂದ ಕೊಟ್ಟಾತು
ನಂಬಬೇಕು ನಂಬಿ ನಡೆಯಲೇಬೇಕು ॥ ೩ ॥

ಕಾಮ ಬಿಡಬೆಕು ಕ್ರೋಧ ದೂರ ಇಡಬೇಕು
ಮಾಯ ಮೋಹ ಮದಗಳೆಲ್ಲಾ ಸರಿಸಬೇಕು

ಲಿಂಗವೆ ದೇವರೆಂದು ಆತ್ಮವೇ ಪರಮೆಂದು
ಅಂಗಲಿಂಗ ಒಂದು ಮಾಡಿ ಆನಂದ ಹೊಂದಬೇಕು ॥ ೪ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೇನ, ಮಹಾದೇವಿ ಕುಂಬಾರ

***

ಲಿಂಗೇಶಗೆ

ಜಯಮಂಗಲಂ ನಿತ್ಯ ಶುಭ ಮಂಗಲಂ
ಜಯತು ಜಯ ಶಿಶು ಮಹಂತೇಶ ಲಿಂಗೇಶಗೆ ॥ ಪ ॥

ಧರೆಯ ಭಕ್ತರ ಮಾಹೇಶ್ವರುಗಳ ಪುತ್ರಗೆ
ಶರಣು ಬಸವಾದಿ ಪ್ರಮಥರ ಕಂದಗೆ
ಪರುಶಿವನ ಪಾರ್ವತಿಯ ತೊಡೆಯ ಮೇಲಾಡುತಲಿ
ಹರುಷಾಬ್ಧಿ ಹೆಚ್ಚಿಸುವ ಗುರುಪುತ್ರಗೆ ॥ ೧ ॥

ಆಕಾಶವನು ಮೋಡ ಮುಸುಗಿದರೆ ಕೆಡದಂತೆ
ಏಕಾಗ್ರ ಚಿತ್ತದಲಿ ಮನವನುಡಗಿ
ಬೇಕು ಬೇಡೆಂಬೆರಡು ಭವಬೀಜಗಳ ಹರಿದು
ಲೋಕದೊಳಗಿದ್ದು ಇಲ್ಲದ ಮಹಿಮೆಗೆ ॥ ೨ ॥

ಹ್ಯಾಗೆ ಮಾಳ್ಪರು ಹಾಗೆ ಸಕಲ ಉಪಚಾರಗಳ
ಮಂಗಲ ಶಿಶುವಾಗಿ ಕೈಕೊಳ್ಳುತಲಿ ಭಂಗಾರ
ಕಬ್ಬಿಣವು ಹಿರಿಕಿರಿದು ಸಮಗಂಡ ಲಿಂಗ
ಮಹೇಶ ಜಗತ್ಪುತ್ರಗೆ ॥ ೩ ॥

– ಕೃತಿ: ಮುತ್ತು ಮುತ್ತಿನ ತ್ವಾಟ

***

ಇಷ್ಟಲಿಂಗ ಶ್ರೇಷ್ಠಲಿಂಗ

ಇಷ್ಟಲಿಂಗವೇ ಶ್ರೇಷ್ಠ ಲಿಂಗಯ್ಯ
ನಿಷ್ಠಾವಂತರ ಆತ್ಮ ಲಿಂಗಯ್ಯ ॥ ಪ ॥

ಅಂಗೈ ಪೀಠದಲ್ಲಿ ಮೆರೆವ ಲಿಂಗಯ್ಯ
ಕಂಗಳ ಕೊನೆಯಲ್ಲಿ ಕಾಣೋ ಲಿಂಗಯ್ಯ
ಗಂಗೆಯ ಯಮುನೆಯೊಳು ಸ್ನಾನವ
ಮಾಡಿಸಿದಂತ ಸಂಗಯ್ಯ ನನ್ನಾತ್ಮ ನೀನೇ ಲಿಂಗಯ್ಯ ॥ ೧ ॥

ನವಲಿಂಗಕ್ಕಾಧಾರ ನೀನೇ ಲಿಂಗಯ್ಯ
ನವಚಕ್ರದೊಳಗೆ ನೀನೇ ಲಿಂಗಯ್ಯ
ನವಶಕ್ತಿ ನವಭಕ್ತಿ ನವರಂಗದಲ್ಲಿ ನವ ಪ್ರಾಣ
ನನ್ನಾತ್ಮ ನೀನೇ ಲಿಂಗಯ್ಯ ॥ ೨ ॥

ಗುರುಲಿಂಗ ಜಂಗಮ ನೀನೇ ಲಿಂಗಯ್ಯ
ಚರಣಜಲ ಶೇಖರ ನೀನೆ ಲಿಂಗಯ್ಯ
ಹರನಾಕ್ಷಿ ಮಂತ್ರವ ಮನನ ಮಾಡಿಸಿದಂತೆ
ಪರಮಗುರು ನನ್ನಾತ್ಮ ನೀನೆ ಲಿಂಗಯ್ಯ ॥ ೩ ॥

ಆರಾರು ಆರು ನೀನೇ ಲಿಂಗಯ್ಯ
ಮೂರಾರು ದಳದೆಲಿ ಪರಮ ಲಿಂಗಯ್ಯ
ಆರು ಭೇದಗಳು ಸರಿಯಾಗಿ ತಿಲಿಸಿದಂತ
ಶರೀರದಲ್ಲಿ ನನ್ನಾತ್ಮ ನೀನೆ ಲಿಂಗಯ್ಯ ॥ ೪ ॥

ಪಂಚಲಿಂಗ ತತ್ತ್ವಕ್ಕೆ ನೀನೇ ಲಿಂಗಯ್ಯ
ಪಂಚಾಚಾರದಲ್ಲಿ ಪರಮ ಲಿಂಗಯ್ಯ
ಸಂಚೀತ ಕರ್ಮದ ಅಂತ ನೀ ತಿಳಿಸಿದಂತ
ನನ್ನಾತ್ಮ ನನ್ನ ಮಹಾಲಿಂಗಯ್ಯ ॥ ೫ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

ಖಬರಿಲ್ಲ ಒಬ್ಬರಿಗ

ಸತ್ಯ ಸತ್ಯ ಲಿಂಗದಾ ಪೂಜೆ ನಿತ್ಯ ಕಲ್ಯಾಣದಾಗ
ಗುಡಿಯಾನ ಲಿಂಗ ಮರತೆ ಹೋಯ್ತು
ಖಬರಿಲ್ಲ ಒಬ್ಬರಿಗ ॥ ಪ ॥

ಗುಡಿಯಾನ ಲಿಂಗೆಲ್ಲ ಬಸವನ ಬಳಿಬಂದು
ನಮ್ಮ ಪೂಜೆ ಹ್ಯಾಂಗ ಎನತಾವ
ಆ ಮಾತ ಕೇಳಿ ಬಸವಣ್ಣ ನಗತಾರ
ಕೈಸನ್ನೆ ಮಾಡತಾರ
ಶರಣರ ಪೂಜಾಕ ನೀವ್ಯಾಕ ಬೇಕ
ಮಾಡತಾರ ನಿಮ್ಮ ಪೂಜೆ ಶ್ರದ್ಧೆಯಿಲ್ಲದವರು ॥ ೧ ॥

ಮಾರಿಯ ಸಣ್ಣ ಮಾಡಿ ಗುಡಿಯಾಗ ಹೊಕ್ಕಾವ
ಚಿಂತೆಯು ಮಾಡ್ಯಾವ
ಪೂಜಾರಣ್ಣ ಬಂದಾಗ ಮಾರಿಯು ತಿರುಗಿಸಿ
ಮಾಡಬ್ಯಾಡ ಎನತಾವ
ಗುಡಿಯಾನ ಶಿವಲಿಂಗ ಇಲ್ಲೆಂದು ತಿಳಿಯಿರಿ
ನಡೆದೇವು ಮಾಮನಿಗೆ ಬಸವನ ಬಳಿಗಿ ॥ ೨ ॥

ಮಹಾಮನಿ ಹೊಕ್ಕ್ಯಾವ ಮಾಲಿಂಗೆಲ್ಲ
ಮೂಲ್ಯಾಗ ಕುಂತಾವ
ಶರಣರ ಪೂಜೆ ಭರದಾಗ ನಡದಾದ
ಖಬರಿಲ್ಲ ಅವರಿಗ
ನಿಜಲಿಂಗ ನೀಲಮ್ಮ ಲಿಂಗಕ್ಕೆ ನೋಡ್ಯಾಳ
ಕೈಸನ್ನೆ ಮಾಡ್ಯಾಳ ಕೂಡಲಾಕ ತಿಳಿಸ್ಯಾಳ ॥ ೩ ॥

ನೀಲಮ್ಮಗ ಕೈಮುಗಿದು ಪಂಕ್ತ್ಯಾಗ ಕುಂತಾವ
ಪ್ರೇಮದಿ ನೋಡ್ಯಾರ
ಶರಣರ ಪೂಜೆ ಕಂಡು ದಂಗರ ಆಗ್ಯಾವ
ಬಾಗಿ ಬಾಗಿ ನಮಿಸ್ಯಾವ
ಗುಡಿಯರ ಒಲ್ಲೆಂದು ಶರಣರ ಲಿಂಗದಾಗ
ಒಂದರ ಆಗ್ಯಾವ ಧನ್ಯತೆ ಪಡೆದಾವ ॥ ೪ ॥

– ಶ್ರೀಮತಿ ಗೌರವ್ವ ಕಾಡಾದಿ

***

ಹೊತ್ತೇ ಹೋಯಿತು ಲಿಂಗವೇ

ಅಟ್ಟಡವಿದಾಗ ಲಿಂಗವೇ
ಹಿಡಹೂವ ತಂದಿನಿ ಲಿಂಗವೇ
ಕರದಾಗ ಕುರುಹಿಟ್ಟು ಪೂಜೆಯ ಮಾಡಾಗ
ಹೊತ್ತೇ ಹೋಯಿತು ಲಿಂಗವೇ ॥ ಪ ॥

ಹೊತ್ತ ಹೋಯಿತು ಹೊತ್ತ ಹೋಯಿತು ಲಿಂಗವೇ
ತಿಳದಿಲ್ಲ ಹಾದಿ ಲಿಂಗವೇ
ತಿಳಿಯಬೇಕೆಂದು ನಾ ಅಡವಿಗಿ ಬಂದರೆ
ಹೊತ್ತೇ ಹೋಯಿತು ಲಿಂಗವೇ ॥ ೧ ॥

ಒಳವ್ಯೆರಿ ಹಾಸಿನಿ ಲಿಂಗವೇ
ಅದರ ಮ್ಯಾಲ ಕುಂತಿನಿ ಲಿಂಗವೇ
ಕೈಯೊಳಗೆ ನಿನಗ್ಹಿಡಿದು ಶಿವಮಂತ್ರ ನುಡಿವಾಗ
ಹೊತ್ತೇ ಬಾಗಿತ್ತು ಲಿಂಗವೇ ॥ ೨ ॥

ಅಷ್ಟಾವರಣ ದ್ಯಾಹ ಲಿಂಗವೇ
ಪಂಚಾಚಾರ ಪಂಚೇಂದ್ರಿ ಲಿಂಗವೇ
ಷಟ್‌ಸ್ಥಲ ಮಾರ್ಗಹಿಡಿದು ಪೂಜೆ ನಾ ಮಾಡಿನಿ
ಹೊತ್ತೇ ಬಾಗಿತ್ತು ಲಿಂಗವೇ ॥ ೩ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

ಮಹಾಗುರು ಬಸವನ ಕೂಡಿ

ಗುರು ಕೊಟ್ಟ ಲಿಂಗವ
ಅರುಯಿಟ್ಟು ಪೂಜಿಸಿ
ಗುರುತಿನ ಹಾದಿಯು ತಿಳಕೋ ನೀ
ಮಹಾಗುರು ಬಸವನ ಕೂಡಿಕೋ ನೀ ॥ ಪ ॥

ಮೈಲಿಗಿ ಅದಕ್ಕಿಲ್ಲ
ಮುಡುಚಟ್ಟ ಅದಕ್ಕಿಲ್ಲ
ಮಾಟಮಂತ್ರದ ಭಯವು ಅದಕಿಲ್ಲ ತಿಳಕೊ ನೀ
ಮಹಾಗುರು ಬಸವನ ಕೂಡಿಕೋ ನೀ ॥ ೧ ॥

ಕ್ರೋಧವು ಅದಕ್ಕಿಲ್ಲ
ಮತ್ಸರ ಅದಕ್ಕಿಲ್ಲ
ದೃಢಚಿತ್ತ ಮನವು ಅದಕೆ ಕೊಡು ನೀ
ಮಹಾಗುರು ಬಸವನ ಕೂಡಿಕೋ ನೀ ॥ ೨ ॥

ಕರದಾಗ ಕುರುಯಿಟ್ಟು
ಅರುಯೆಂಬುದು ಅದಕ್ಕಿಟ್ಟು
ಮರ್ಮವಾ ಭೇದಿಸಿ ನಡಿ ನೀ
ಮಹಾಗುರು ಬಸವನ ಕೂಡಿಕೋ ನೀ ॥ ೩ ॥

– ಶ್ರೀಮತಿ ಗೌರವ್ವ ಕಾಡಾದಿ

***

ನನ್ನನೆತ್ತು ಲಿಂಗವೆ

ಒಂದುದಳದ ಕಮಲದಲ್ಲಿ
ಒದಗಿ ಬಂದ ಲಿಂಗವೆ
ಸತ್ಯ ಶಾಂತಿ ಲಿಂಗವೆ ಮಧ್ಯಪ್ರಾಣ ಲಿಂಗವೆ ॥ ಪ ॥

ಎರಡು ದಳದ ಕಮಲದಲ್ಲಿ
ಮೂಡಿಬಂದ ಲಿಂಗವೆ
ನಿತ್ಯ ಸತ್ಯ ಲಿಂಗವೆ ಸುಪ್ರಕಾಶ ಲಿಂಗವೆ ॥ ೧ ॥

ಮೂರುದಳದ ಕಮಲದಲ್ಲಿ
ಮೂಡಿಬಂದ ಲಿಂಗವೆ
ಚೈತನ್ಯ ಲಿಂಗವೆ ಮಹಾನುಭಾವ ಲಿಂಗವೆ ॥ ೨ ॥

ನಾಲ್ಕುದಳದ ಕಮಲದಲ್ಲಿ
ನಾದ ಜ್ಯೋತಿ ಲಿಂಗವೆ
ಸುಗುಣಭಾವ ಲಿಂಗವೆ ಮಹಾಪ್ರಾಣ ಲಿಂಗವೆ ॥ ೩ ॥

ಐದುದಳದ ಕಮಲದಲ್ಲಿ
ಐಕ್ಯವಾದ ಲಿಂಗವೆ
ಆನಂದ ಲಿಂಗವೆ ಚಿದಾನಂದ ಲಿಂಗವೆ ॥ ೪ ॥

ಆರುದಳದ ಕಮಲದಲ್ಲಿ
ಏರಿ ಮೆರೆದ ಲಿಂಗವೆ
ಮೇರು ಗಿರಿಯ ಲಿಂಗವೆ ಕರುಣೆ ತೋರೋ ಲಿಂಗವೆ ॥ ೫ ॥

ಏಳುದಳದ ಕಮದಲ್ಲಿ
ಹೊಳೆಯುತಿರುವ ಲಿಂಗವೆ
ಚಂದನದ ಲಿಂಗವೆ ಅಂದ ತೋರೊ ಲಿಂಗವೆ ॥ ೬ ॥

ಎಂಟುದಳದ ಕಮಲದಲ್ಲಿ
ಗಂಟೇನಾದ ಲಿಂಗವೆ
ಕಂಟಕ ಕಳೆವ ಲಿಂಗವೆ ಅಂಟಿಕೊಂಡೆ ಅಂಗವೆ ॥ ೭ ॥

ಒಂಬತ್ತುದಳದ ಕಮಲದಲ್ಲಿ
ತುಂಬಿಬಂದ ಲಿಂಗವೆ
ನಂಬಿದವರಿಗೆ ಲಿಂಗವೆ ಸಾಂಬನೊಲುಮೆ ಲಿಂಗವೆ ॥ ೮ ॥

ಹತ್ತುದಳದ ಕಮಲದಲ್ಲಿ
ಒತ್ತಿ ಬಂದ ಲಿಂಗವೆ
ನನ್ನನೆತ್ತು ಲಿಂಗವೆ ಮಹಾ ಇಷ್ಟ ಲಿಂಗವೆ ॥ ೯ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

ಲಿಂಗವೇ ಸತ್ಯ

ಎಲೇ ಮಾನವಾ ಲಿಂಗ ಪೂಜೆಯ ಮಾಡೊ
ಮಾಡುತ ಕೂಡಲಸಂಗನ ಕೂಡೋ ॥ ಪ ॥

ಚಂಚಲ ಮನವಾ ಹರಿಗೊಡದಂತೆ
ಪಂಚಾಕ್ಷರಿಯಾ ಮರೆಗೊಡದಂತೆ
ಗೊಂಚಲಗುಣವ ಮರಿಗೊಡದಂತೆ
ದೇವರ ದೇವಲಿಂಗಪೂಜೆ ಮಾಡೋ ॥ ೧ ॥

ನಿನ್ನಯದೇಹ ಲಿಂಗಾಧೀನ
ನಿನ್ನಯ ಜೀವ ಲಿಂಗಾಧೀನ
ನಿನ್ನಯ ಭಾವ ಲಿಂಗಾಧೀನ
ಲಿಂಗತ್ರಯವ ನೆನೆದು ಬಯಲಾಗೋ ॥ ೨ ॥

ಲಿಂಗವೇ ಸರ್ವ ಕಷ್ಟ ನಿವಾರಕ
ಲಿಂಗವೇ ಸತ್ಯಶಾಂತಿದಾಯಕ
ಲಿಂಗವೇ ಮಾನವ ಧರ್ಮಬೋಧಕ
ಲಿಂಗದಾ ನೆಲೆಯ ನೀ ತಿಳಿದು ಜ್ಞಾನಿಯಾಗೋ ॥ ೩ ॥

ಕಾಯಕ ಜನರ ಕೂಡುವ ಲಿಂಗ
ಕಪಟಿಯ ಕೈಗೆ ಬಾರದ ಲಿಂಗ
ಕೆಟ್ಟ ಕಣ್ಣಿಗೆ ಕಾಣದ ಲಿಂಗ
ಅರಿಗುಣಬಿಟ್ಟು ತಿಳಿದು ನೋಡೊ ನೀ ಲಿಂಗ ॥ ೪ ॥

ಕುಲದ ಕೋಟಲೆಗೆ ಸಿಲುಕದ ಲಿಂಗ
ಅಂಗಭೇದವ ಕಾಣದ ಲಿಂಗ
ಸರ್ವರೊಳು ಸಮತೆಯ ಸಾರುವ ಲಿಂಗ
ಮಾನವ ಪ್ರೇಮವ ಬೆಳಗಿಸುವ ಲಿಂಗ ॥ ೫ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

ಎನ್ನೊಳಗೆ ನೀನು ಲಿಂಗಯ್ಯ

ಎನ್ನೊಳಗೆ ನೀನು ಲಿಂಗಯ್ಯ
ನಿನ್ನೊಳಗೆ ನಾನು ಲಿಂಗಯ್ಯ
ಭಿನ್ನ ಭೇದಗಳೆಲ್ಲ ವಿವರಿಸಿ ಕೇಳಲು
ಪನ್ನಗಭೂಷಣ ಆದವನ್ಯಾರು ॥ ಪ ॥

ಜೀವಿಯೆಂಬುವರ್ಯಾರೊ ಲಿಂಗಯ್ಯ
ನಿರ್ಜೀವಯೆಂಬುವರ್ಯಾರೊ ಲಿಂಗಯ್ಯ
ನಿರ್ಜೀವಯೆಂಬುವರ್ಯಾರೊ ಲಿಂಗಯ್ಯ
ಜೀವಭಾವದ ಭೇದ ವಿವರಿಸಿ ಕೇಳಲು
ಪನ್ನಗ ಮೂರುತಿ ಆದವನಾರೊ ಲಿಂಗಯ್ಯ ॥ ೧ ॥

ಮಾತು ಹೇಳುವರ್ಯಾರೊ ಲಿಂಗಯ್ಯ
ಮಾತು ಕೇಳುವರ್ಯಾರೊ ಲಿಂಗಯ್ಯ
ಮಾತು ಕೇಳುವರ್ಯಾರೊ ಲಿಂಗಯ್ಯ
ಭೂತ ಪಂಚಕ ಶಬ್ದ ಧಾತು ಪಂಜರದೊಳು
ಜ್ಯೋತಿ ಸ್ವರೂಪಿ ನಾದವನರೊ ಲಿಂಗಯ್ಯ ॥ ೨ ॥

ಅಪ್ಪನು ನೀ ಎನಗೆ ಲಿಂಗಯ್ಯ
ಒಪ್ಪುವ ಮಗ ನಾನು ನಿನಗೆ ಲಿಂಗಯ್ಯ
ಒಪ್ಪುವ ಮಗ ನಾನು ನಿನಗೆ ಲಿಂಗಯ್ಯ
ಇಪ್ಪತ್ತೇಳು ಮರದ ಉಪ್ಪರಿಗೆ ಮ್ಯಾಲ
ಕರ್ಪೂರ ನಿಜಧಾತ್ರನಾದವನಾರೊ ಲಿಂಗಯ್ಯ ॥ ೩ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

ಆನಂದ ಪಡೆಯುವೆನಾ

ಲಿಂಗಪೂಜೆ ಮಾಡಿನಾ ಆನಂದ ಪಡೆಯುವೆ
ಆನಂದ ಹೊಂದುವೆ ಶಿವ ನಿಮ್ಮ ಕುರುಹುದಲಿ
ಅಂಗ ಕರದಲ್ಲಿ ಲಿಂಗ ಪೂಜೆಯ ಮಾಡಿ ॥ ಪ ॥

ಆತಾಳ ಪಾತಾಳ ಎಡದಲ್ಲಿ ಕೆರಿಭಾವಿ
ಸೀತಾಳ ತಂದಿದೆ ಶಿವ ನಿಮ್ಮ ಪೂಜಾ ಆನಂದ ॥ ೧ ॥

ಗಂಧವ ತೆಗೆದಿಟ್ಟೆ ಪತ್ತುರಿ ಸೋಸಿಟ್ಟೆ
ಭಕುತಿಲಿ ಏರಿಸಿದೆ ಸದಾ ಮಲ್ಲಿಗೆ ಹೂವ ॥ ೨ ॥

ಧೂಪವ ಹಾಕಿದೆ ದೀಪವ ಬೆಳಗಿದೆ
ಆನಂದದಿಂದ ದ್ಯಾಹವ ಅರ್ಪಿಸಿದೆ ॥ ೩ ॥

ಅವರ್‍ಯಾರು ಇವರ್‍ಯಾರು ಹೆಂಡತಿ ಮಕ್ಕಳ್ಯಾರು
ನನ್ನವನೆಂದರೆ ನೀನು ಒಬ್ಬನೇ ಆನಂದ ॥ ೪ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

ನೀಡಿರಿ ಪುಷ್ಪಾಂಜಲಿ

ನೀಡಿರಿ ಪುಷ್ಪಾಂಜಲಿ ಲಿಂಗೈಯನಿಗೆ
ನಿತ್ಯದಿ ಕರಮುಗಿದು
ನೀಡಿರಿ ಪುಷ್ಪಾಂಜಲಿ ಲಿಂಗೈಯನಿಗೆ ॥ ಪ ॥

ಪರಮೇಶ್ವರ ಪಾವನ ರುಚಿ ಘಾತ್ರನಿಗೆ
ಪಾವಕ ನೇತ್ರನಿಗೆ
ಪರಮಾತ್ಮ ಪರಿಭವ ನಿಧಿ ನೇತ್ರನಿಗೆ ॥ ೧ ॥

ಪರತರ ಮಹಿಮ ಪರಾತ್ಪರ ಮೂರುತಿ
ಶರಣ ಹೃದಯಕ್ಕೆ
ಸಂಚಾರ ನೀವ ಜಗಪಾಲ ನಿಧಿಗೆ ॥ ೨ ॥

ಮಲ್ಲಿಗೆ ಸುರಹೊನ್ನೆಯ ಸಲ್ಲುವ ರಾಜಿ
ಮಂದಾರವ ಜಾಜಿ
ಮಲ್ಲಿಗೆ ಮರಗಿಣವ ಪಲ್ಲುಕ ಜಾಜಿ ॥ ೩ ॥

ಮಲ್ಲಿಗೆ ದುಂಡಿನ ಮಲ್ಲಿಗೆ ಪುಷ್ಪವ
ಎಲ್ಲವ ಪಿಡಿದು
ಜಗವೆಲ್ಲ ತುಂಬಿನಿಂತ ಲಿಂಗಾಂಘ್ರಿಗೆ ॥ ೪ ॥

ಇರುವಂತಿಗೆ ಶಾವಂತಿಗೆ ಮುಡಿವಳ
ಸುರಗಿಯ ಪಾರಿಜಾತ
ಕರಿವೀರ ಕಮಂಗ ದಾಸವಾಳವೆಲ್ಲು ॥ ೫ ॥

ಕೇತಕೆ ಕೆಂದುರಿಯ ಪೊನ್ನುಂಗ
ಜಾಜಿಯ ಹೊನ್ನಂಗ
ಉತ್ಪಲ ಪರಸಂಗವಳಿದ ॥ ೬ ॥

ಶಾಂತ ಕುಂಭವಿದು ದ್ವೈತ್ಯ ಪುಷ್ಪಕ
ಪ್ರೀತಿಲೆ ಶ್ರೀಮಹಾಲಿಂಗಕ್ಕೆ ॥ ೭ ॥

ನಿಗಮಕ್ಕೆ ನಿಲುಕದ ಮಹಾಕಾರ್ಯನಿಗೆ
ಅರವಿಟ್ಟ ಚರಿತನಿಗೆ
ಜಗತಂತಾರೆ ಗುರುಶಾಂತನಿಗೆ ॥ ೮ ॥
ನಗರ ಹೊಂದಿತು ನಾಗರಿಕ ಸೇವಿಗೆ
ಆದರದ ಶ್ರೀ ಹಲಸೂರ ಆಗಂತಕನಿಗೆ ॥ ೯ ॥

– ಶ್ರೀಮತಿ ಗೌರವ್ವ ಕಾಡಾದಿ

***

ಲಿಂಗಪೂಜೆ ಆಗುತ್ತದಣ್ಣ

ಲಿಂಗಪೂಜೆ ಆಗುತ್ತಾದಣ್ಣ
ಯಾವಾಗ ನೋಡಲು
ಲಿಂಗಪೂಜೆ ಆಗುತ್ತಾದಣ್ಣ ॥ ಪ ॥

ಲಿಂಗಪೂಜೆ ಆಗುತೈತಿ
ಅಂಗವೆಂಬ ಗುಡಿಯೊಳಗೆ
ಲಿಂಗವೆಂಬ ಅರಹು ತನ್ನ ಕಂಗಳಿಗೆ ತೋರುತ್ತಾದೆ ॥ ೧ ॥

ಆರು ಮೂರು ಕಟ್ಟಬೇಕಣ್ಣ
ಈ ಲಿಂಗಪೂಜೆಗೆ ಆರುಮೂರು ಕೆಡಿಸಬೇಕಣ್ಣ
ಆರುಮನೆಯ ದಾಟಬೇಕು
ಮೂರು ಮನೆಯ ನಟ್ಟ ನಡುವೆ
ಉರಿ ಶಿಖರದಲ್ಲಿ ಕುಳಿತು
ಘೋರ ಗುಟ್ಟ ಕೂಗತೈತೆ ॥ ೨ ॥

ನಾಲ್ಕು ದಾರಿ ನಡುವಿಗೈತಣ್ಣ
ಈ ಲಿಂಗಪೂಜೆ ಮೇಲಕೇರಿ ನಿಲ್ಲಬೇಕಣ್ಣ
ಕಾಕ ಬುದ್ಧಿ ಕಳೆಯಬೇಕು
ನೂಕಬೇಕು ಮದಗಳೆಂಟು
ಜೊತೆಯಿಂದಲಿ ನೋಡಿದರೆ
ನೇರ ಬೆಳಕು ಕಾಣತೈತಿ ॥ ೩ ॥

ಯೋಗಿ ಉನ್ಮಿ ನಿವಾಸ ಕಾಣಣ್ಣ
ನಿಜ ನಂಬಿದವರಿಗೆ ಆಗ ಚಿನ್ಮಯ ರೂಪ ತೋರಣ್ಣ
ಆಗ ಈಗ ಎನ್ನದೆ ಈ ಲಿಂಗಪೂಜೆ ಮಾಡುತ್ತಿರುವಿ
ಹೋಗುವಾಗ ಗಂಗಾಧರನ
ಬೇಗದಿಹಲಿ ಪಾಲಿಸಯ್ಯ ॥ ೪ ॥

– ಗೌರವ್ವ ಕಾಡಾದಿ

***

ಕರದ ಲಿಂಗ ಮರೆಯದೆ ಪೂಜಿಸೋ

ಕರದ ಲಿಂಗ ಮರೆಯದೆ ಪೂಜಿಸಿ
ಪರಮನೊಳು ಒಂದಾಗಬೇಕರಿ
ಸುಮ್ಮನೆ ದಿನವ್ಯಾಳೆ ಗಳಿಯಬೇಡೆರಿ ॥ ಪ ॥

ಮೂರು ಲೋಕವು ಅಡಗ್ಯಾವ ಅದರಲ್ಲಿ
ಮೂರು ಲೋಕಕೂರ ಧೀರನಾದ
ಪರಶಿವನ ರೂಪವು ಅದರ ಒಳಗ ॥ ೧ ॥

ನಾನು ನನ್ನದೆಂಬುದು ಬಿಡಬೇಕರಿ
ನಿನ್ನದೆಂದು ತಿಳಿದು ಅದಕ ನಡಿಯಬೇಕರಿ
ದೃಢಚಿತ್ತದ ಭಕ್ತಿಲಿಂಗ ಪೂಜಿಸಬೇಕರಿ ॥ ೨ ॥

– ಶ್ರೀಮತಿ ಗೌರವ್ವ ಕಾಡಾದಿ

***

ಕಾಶಿಲಿಂಗ

ಎಲ್ಲಿ ಹುಟ್ಟಿ ಎಲ್ಲಿ ಚಾಚ್ಯದೋ ಕಾಶಿಲಿಂಗ
ಒಗಟಿನರ್ಥ ನಿನಗ ಹೊಳದಾದೋ ॥ ಪ ॥

ಗಿರಿಯ ಮ್ಯಾಲ ಮರವ ಹುಟ್ಯಾದೋ । ಆ ಮರದ ಮ್ಯಾಲ
ಹಕ್ಕಿ ಒಂದು ಗೂಡ ಕಟ್ಯಾದೋ । ಆಗೂಡಿನ್ಯಾಗ
ಆರು ಬಣ್ಣ ಸೇರಿ ಹೋಗ್ಯಾದೊ । ಮೈಲಾರಲಿಂಗ
ಒಗಟಿನರ್ಥ ನಿನಗ ಹೇಳದಾದೋ ॥ ೧ ॥

ರಾಟಿ ಮ್ಯಾಲ ಹಾವು ಸುತ್ಯಾದೋ । ಆ ಹಾವು
ನುಂಗಿ ಪುಂಗಿನಾದ ಮಟ ಮಾಡ್ಯಾದೋ । ಆ ಮಾಟದಾಗ
ಆರು ಹಣ್ಣ ಹಂಪಿಲಿಕ್ಯಾದೋ । ಏ ಹಂಪಿಲಿಂಗ
ಬೀಜಮಾತ ನಿನಗ ಹೊಳದಾದೋ ॥ ೨ ॥

ಸಮುದ್ರ ಮ್ಯಾಲ ಸಿಂಪಿ ತೇಲ್ಯಾದೋ । ಆ ಸಿಂಪಿ ಒಳಗ
ಹನಿಯ ಹೊಕ್ಕು ಮುತ್ತನಾಗ್ಯಾದೋ । ಆ ಮುತ್ತಿನಾಗ
ಮೂರುಲೋಕ ಸೇರಿ ಹೋಗ್ಯಾದೊ । ಮಹಾಕೋಟಿಲಿಂಗ
ಒಗಟಿನರ್ಥ ನಿನಗ ಹೇಳದಾದೋ ॥ ೩ ॥

ಮುಗುಲ ಮ್ಯಾಗ ಹಗಲ ಮೂಡ್ಯಾದೊ । ಆ ಹಗಲಿನಾಗ
ಹದ್ದು ಒಂದ ನಿದ್ದಿ ಮಾಡ್ಯಾದೊ । ಆನಿದ್ದಿ ನುಂಗಿ
ಸಿದ್ದ ರೂಪ ಎದ್ದು ಬಂದಾದೋ । ಏ ಸಿದ್ದಲಿಂಗ
ಬೀಜಮಾತ ನಿನಗ ಹೊಳದಾದೋ ॥ ೪ ॥

ಬಯಲಮ್ಯಾಗ ಬಯಲ ನಿಂದಾದೋ । ಅ ಬಯಲ ತುಂಬಾ
ಮೌನದಾ ತಂಬೂರಿ ತೂಗ್ಯಾದೋ । ತಂಬೂರಿ ನುಂಗಿ
ಹಂಸ ಬಂದು ಹಾರಿ ಹೋಗ್ಯಾದೋ । ಏ ಹಂಸಲಿಂಗ
ಹಂಸನೂರಾ ನಿನಗ ತಿಳಿದಾದೋ ॥ ೫ ॥

– ಪಾರ್ವತಿ ಜೆಮಶೆಟ್ಟಿ
– ಸರ್ವಮಂಗಳಾ ಜೋಗೂರ
– ಶಶಿಕಲಾ ಪಾಟೀಲ ಹಾಗೂ ಗುರುಬಾಯಿ

***

ಲಿಂಗತತ್ವ

ಕಲ್ಲ ಪೂಜೆಯ ಮಾಡಿ ಕಲ್ಲಿನಂತಾಗುವರು ಕೇಳೆ ಕಲ್ಲೇ
ಕಲ್ಲು ನೀನಲ್ಲೇಳು ಅಲ್ಲಮಪ್ರಭುದೇವ ಕೇಳೆ ಕಲ್ಲೇ ॥ ೧ ॥

ಬೆಲ್ಲದ ಪಾವಿಸ ಎಡೆಮಾಡಿ ಒಂದಿಷ್ಟೆ ಕೇಳೆ ಕಲ್ಲೇ
ಕೈಯಾದ್ರ ಚಾಚಲಿಲ್ಲ ಬಾಯಾದ್ರ ಬಿಚಲಿಲ್ಲ ಕೇಳೆಕಲ್ಲೇ ॥ ೨ ॥

ಮಾತಾಡ ದೇವರಿಗೆ ಮನವ್ಯೆದು ಮುಂದಿಟ್ಟೆ ಕೇಳೆ ಕಲ್ಲೇ
ಮಾತು ನಿಮ್ಮಲ್ಲಿಲ್ಲ ಪ್ರೀತಿಯು ಉಳಿಯಲಿಲ್ಲ ಕೇಳೆ ಕಲ್ಲೇ ॥ ೩ ॥

ಅಡ್ಡಡ್ಡ ಬಿದ್ದೆನ್ನ ಗಡ್ಡೆಲ್ಲ ಮಣ್ಣಾಯ್ತು ಕೇಳೆ ಕಲ್ಲೇ
ಏಳೆಂಬ ಶಬ್ದವು ನಿನಬಾಯ್ಲಿ ಬರಲಿಲ್ಲ ಕೇಳೆ ಕಲ್ಲೇ ॥ ೪ ॥

ಧರಣಿಮ್ಯಾಲೆ ಇರುವ ಶಿಲೆಯೆಲ್ಲ ಲಿಂಗವು ಕೇಳೆ ಕಲ್ಲೇ
ಅರಿಯದ ಮೂರ್ಖರಿಗೆ ಕುರುಹು ಮಾಡಿಟ್ಟಂತ ಕೇಳೆಕಲ್ಲೇ ॥ ೫ ॥

ಭಕ್ತನು ಭವಿಯೆಂದು ಭವನಿಂದೆ ಆಡಿದೆ ಕೇಳೆ ಕಲ್ಲೇ
ಭಕ್ತನು ಭವಿಯಲ್ಲ ತನ್ನ ತಾ ತಿಳಿದಾತ ಕೇಳೆ ಕಲ್ಲೇ ॥ ೬ ॥

ಸಾಧು ಸತ್ಪುರುಷರು ದರುಶನ ನಿಮಗಿಲ್ಲ ಕೇಳೆ ಕಲ್ಲೇ
ತಾ ದೇವನಾದಾತಾ ಕೂಡಲೂರೇಶನ ಕೂಡ ಕಲ್ಲೇ ॥ ೭ ॥

–ಶ್ರೀಮತಿ ಮಹಾನಂದಿ ಪೂಜಾರಿ

***

ಶರಣರ ನಾಮ ನೆನಿಯಮ್ಮ

ಪೂಜೆಯ ಮಾಡಮ್ಮಾ ತಂಗಿ
ಪೂಜೆಯ ಮಾಡಮ್ಮಾ
ಗುರುಕೊಟ್ಟು ಲಿಂಗವ ಪಿಡಿದು
ಶರಣರ ನಾಮ ನೆನಿಯಮ್ಮ ॥ ಪ ॥

ಕಾಮ ಕ್ರೋಧದ ಕಟ್ಟಿಗಿ ಮುರಿಯಮ್ಮ
ಕಿಡಕಿ ಒಂಭತ್ತು ಬಾಗಿಲ ಗುಂಡಾರ ತೆಗಿಯಮ್ಮ
ಶರಣರ ಧ್ಯಾನ ಮಾಡಮ್ಮ ॥ ೧ ॥

ಆರುಗುಣ ಅಳಿಯಮ್ಮಾ ತಂಗಿ
ಮೂರುಗುಣ ತಿಳಿಯಮ್ಮ
ಆರುಮೂರು ಒಂಭತ್ತು ಸುಟ್ಟು
ಬೂದಿಯ ಮಾಡಮ್ಮಾ ಶರಣರ ಧ್ಯಾನ ಮಾಡಮ್ಮ ॥ ೨ ॥

ಅಹಂಕಾರ ಅಳಿಯಮ್ಮಾ ಓಂಕಾರ ತಿಳಿಯಮ್ಮಾ
ಶಿವಶಿವಾ ಅನ್ನತಲಿ ಶಿವಧ್ಯಾನ ಮಾಡಮ್ಮ
ಶರಣರ ಧ್ಯಾನ ಮಾಡಮ್ಮಾ ॥ ೩ ॥

ಆಸೆಯು ಅಳಿಯಮ್ಮಾ ಮನದಾ ಹೇಸಿಕೆ ತೊಳಿಯಮ್ಮ
ಆಶಾರಹಿತನಾದ ಶಿವನಿಗೆ ನೆನಿಯಮ್ಮ
ಶರಣರ ಧ್ಯಾನ ಮಾಡಮ್ಮಾ ॥ ೪ ॥

ಧ್ಯಾನವ ಮಾಡಮ್ಮಾ ತಂಗಿ
ಆ ಮೌನದೊಳು ನೆನಿಯಮ್ಮ
ಮಾನವಂತಳಾಗಿ ಬದುಕ ಹಸನ ಮಾಡಮ್ಮಾ ॥ ೫ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೇನ, ಮಹಾದೇವಿ ಕುಂಬಾರ

***

ಶರಣರ ಧ್ಯಾನವ ಮಾಡಮ್ಮಾ

ಧ್ಯಾನವ ಮಾಡಮ್ಮಾ ತಂಗಿ
ಧ್ಯಾನವ ಮಾಡಮ್ಮಾ
ಲಿಂಗವೆಂಬುದು ಕೈಯೊಳು ಹಿಡಿದು
ಶರಣರ ಧ್ಯಾನವ ಮಾಡಮ್ಮಾ ॥ ಪ ॥

ಕಾಮ ಕ್ರೋಧವ ಕಟ್ಟಿಗೆ ಮುರಿಯಮ್ಮ
ಒಂಭತ್ತು ಬಾಗಿಲ ಗುಂಟರ ತೆಗೆಯಮ್ಮ
ಆರುಗುಣ ಅಳಿಯಮ್ಮ ತಂಗಿ
ಮೂರುಗುಣ ತಿಳಿಯಮ್ಮ
ಆರು ಮೂರು ಒಂಭತ್ತು ಸುಟ್ಟು ಬೂದಿಯ ಮಾಡಮ್ಮಾ ॥ ೧ ॥

ಅಹಂಕಾರ ಮಮಕಾರ ಮೋಹ ಅಳಿಯಮ್ಮ
ನಿರಹಂಕಾರದ ಅರ್ಥ ನೀ ತಿಳಿಯಮ್ಮ
ಷಟ್‌ಸ್ಥಲ ತಿಳಿಯಮ್ಮ ತಂಗಿ
ಪಂಚಾಚಾರ ಅರಿಯಮ್ಮ
ಷಟ್‌ಸ್ಥಲ ಪಂಚಾಚಾರ ಹನ್ನೊಂದರ ಅರ್ಥ ಮಾಡಮ್ಮಾ ॥ ೨ ॥

ಆಶಾ ಅಳಿಯಮ್ಮ ತಂಗಿ ಹೇಸಿಕೆ ತೊಳಿಯಮ್ಮ
ಕಾಸಿನಾ ಆಸೆ ಬಡಿಬೇಕಮ್ಮ
ಕಾಸು ಮಾಡಿತ್ತು ಬಲುಘಾತ ತಂಗಿ
ಕಾಸು ಮರೆತು ಖಾಸನಾಗಿ
ಶಿವನ ಧ್ಯಾನವ ಮಾಡಾಮ್ಮಾ ಶಿವನೊಳು ಒಂದಾಗಮ್ಮಾ ॥ ೩ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

೩. ಜಂಗಮ ಮಹತ್ವ

ಜಂಗಮನೆಂಬೋ ಜಗಭರಿತ

ಜಂಗಮ ನೆಂಬೋ ಜಗಭರಿತ ಹಾ
ಜಂಗಮ ನೆಂಬೋ ಜಗಭರಿತ ಹಾ ॥ ಪ ॥

ನಿತ್ಯ ನಿರಂಜನ ಜಂಗಮರ ನೇಮ
ಐದು ಮಂದಿ ಮುತ್ತೈದೇರ ನೇಮ
ಅಪ್ಪ ರ‍್ಯಾವಪ್ಪಯ್ಯ ನಡುಸ್ಯಾರೋ ಧರ್ಮ ॥ ೧ ॥

ಲಕ್ಷದ ಮ್ಯಾಲ ತೊಂಬುತ್ತಾರು ಸಾವಿರ
ಜಂಗಂಬ ಪ್ರಾಣಿ ಬಸವೇಸೂರ
ಕಲ್ಯಾಣನೆಂಬುದು ಕೈಲಾಸಪುರ
ಮೆಟ್ಟಿ ಬಂದಾರೋ ಪ್ರಭುದೇವರ ॥ ೨ ॥

ಗರ್ವ ಬಂದು ಬ್ರಾಮನಶಿರ ಧರಿಸಿ
ಧರ್ಮಕ ಫಲವ ಕರದಾಳ ಧರಸಿ
ಬಿಕ್ಷಾ ಬೇಡಿ ನಾರಾಯಣನಂದನಸಿ
ಮೋಕ್ಷ ಕೊಟ್ಟು ಮುಂದವರಿಗೆ ಉಣಸಿ ॥ ೩ ॥

ನಿತ್ಯ ಇಟ್ಟಾಳಾ ಜಂಗಮರ ನೇಮ
ಸತ್ಯ ಶರಣೆ ಹೇಮರೆಡ್ಡಿ ಮಲ್ಲಮ್ಮ
ಮುಕ್ತಿ ಪಡೆದಾಳ ಮುಂದೇಳು ಜಲ್ಮ
ಮರಿಲಾರೆ ಗುರು ಮಲ್ಲಿಕಾರ್ಜುನ ನಾಮ ॥ ೪ ॥

ಸತ್ಯಕ್ಷೇತ್ರನ ಒದಗಿದ ಗ್ರಾಮ
ಇಪ್ಪತ್ತೊಂದು ಜಂಗಮರ ನೇಮ
ಐದು ಮಂದಿ ಮುತ್ತೈದೇರ ನೇಮ
ಅಪ್ಪ ರ‍್ಯಾವಪ್ಪಯ್ಯ ನಡುಸ್ಯಾರ ಧರ್ಮ
ತಪ್ಪಲ್ದೇ ಭಜಿಸುವೆ ಸದ್ಗುರುವಿನ ನಾಮ ॥ ೫ ॥

– ಶ್ರೀಮತಿ ಶಾಂತಮ್ಮಾ ಹಿರೇಮಠ

***

೪. ಪಾದೋದಕ ಮಹಿಮೆ

ಪಾದೋದಕ

ಪಾದ ಪೂಜೆಯ ಮಾಡಿರೊ
ಪಾದ ಪೂಜೆಯ ಮಾಡಿರೊ
ಪರಬ್ರಹ್ಮ ಮೂರುತಿಗೆ ಪಾದ ಪೂಜೆಯ ಮಾಡಿರೊ ॥ ಪ ॥

ಭೋಗ ಷಡಕ್ಷರಿ ಆದಿ ಮಂತ್ರಗಳಿಂದ
ಸಾಧು ಜಂಗಮ ಲಿಂಗನ ಪಾದಕ್ಕೆರಗಿ ॥ ೧ ॥

ಧಾತ್ರಿಯಾ ಜ್ಞಾನದಿಂದ ದಶವಿಂಪ್ರಿಯ ತೆಗೆದು
ದಶಂಗವನು ಮಾಡಿರಿ
ದೋಷ ದುರ್ವಸನವೆಂಬ ದುರ್ವ್ಯಸನ ತೊಳೆದು
ದೈತ್ಯ ಜಂಗಮಲಿಂಗನ ಪಾದಕ್ಕೆರಗಿ ನೀವು ॥ ೨ ॥

ಅಂತರಂಗದ ಅಗ್ನಿಯೇ ಸಂತೋಷದಿ
ಸತ್ಪಾತ್ರದಲ್ಲಿ ಕೂಡಿದೆ
ಚಿಂತೆ ಮಾಡಲು ನಿಜಾಂತಕರುಣವ ಪಿಡಿದು
ಶಾಂತಿ ಜಂಗಮ ಲಿಂಗನ ಪಾದಕ್ಕೆರಗಿ ನೀವು ॥ ೩ ॥

ಅಷ್ಟ ಮದಗಳೆರಡು ಅಷ್ಟಂಗದಿ ಸುಟ್ಟು
ಭಸ್ಮವನ್ನೆ ತೀಡಿ
ನಿಷ್ಠೆಯಿಂದಲಿ ನಿಜೈಕ್ಯವಾಗಿರುತ್ತಿದೆ
ಶ್ರೇಷ್ಠ ಜಂಗಮ ಲಿಂಗನ ಪಾದಕ್ಕೆರಗಿ ನೀವು ॥ ೪ ॥

ಕತ್ತಲಾದಾ ಕಲೆಗಳನು ಬೆಳಗನೆ ಅರಿದು
ಕರ್ಪೂರವನು ಮಾಡಿದೆ
ಕರಚೆನ್ನವೀರ ದೇಶನ ಕರುಣೆ ಜ್ಯೋತಿಯ ತುಂಬಿ
ಕಾಂತಿ ಶ್ರೀ ಗುರುವಿನ ಪಾದಕ್ಕೆರಗಿ ನೀವು ॥ ೫ ॥

– ಶ್ರೀಮತಿ ಗೌರವ್ವ ಕಾಡಾದಿ

***

ಪಾದಪೂಜೆಯ ಹಾಡು

ಪಾದಪೂಜೆ ಮಾಡಬೇಕಣ್ಣ
ಶ್ರೀಗುರು ಬಸವೇಶ್ವರನ ॥ ಪ ॥

ಪಾದ ಪೂಜೆ ಮಾಡಬೇಕು
ವಚನಾಮೃತವ ಪಡೆಯಬೇಕು
ವೇದಗಳಿಗೆ ನಿಲುಕದಂಥ
ಬಸವಗುರುವ ಕೂಡಬೇಕು ॥ ೧ ॥

ಆರು ದೀಪಗಳೆಲ್ಲ ಬೇಕಣ್ಣ
ಈ ಪಾದ ಪೂಜೆಗೆ ಮೂರು ವೈರಿಯ ಕೊಲ್ಲಬೇಕಣ್ಣ
ಆರುಮೂರು ವೈರಿಗಳನು ಬರಿದೆ ನಾಶಮಾಡುವಂಥ
ಗುರುವಿನಿಂದ ಪಂಚಾಕ್ಷರಿಯ ಮಂತ್ರ ನಿತ್ಯಪಠಿಸಬೇಕು ॥ ೨ ॥

ಬರಿದೆ ಸ್ನಾನವು ವ್ಯರ್ಥಕಾಣಣ್ಣ
ಅಂತರಂಗದಿ ಇರುವಾ
ಮಲಿನ ಗುಣವ ತಿಳಿದು ನೋಡಣ್ಣ
ದೂರ ಮಾಡಿ ಮಲಿನ ಗುಣವ
ಜ್ಞಾನವೆಂಬ ಶರಧಿಯಲ್ಲಿ ನಿರುತ ಸ್ನಾನ ಮಾಡಿ
ಗುರು ಚರಣ ಪೂಜೆ ಮಾಡಬೇಕು ॥ ೩ ॥

ಎಳೆಯ ಪತ್ರಿಯ ಸೋಸಬೇಕಣ್ಣ
ಈ ಪಾದ ಪೂಜೆಗೆ ಕಳೆಯ ತರುವ
ಪುಷ್ಪ ಬೇಕಣ್ಣ ಎಳೆಯ ಪತ್ರಿ
ಪುಷ್ಪಕಾಗಿ ಹೃದಯವೆಂಬ ವನವ ತಿರುಗಿ.
ಫಳಿಲನೆ ಸುವಿಚಾರ ಮೇಲಿನ ಪಾದಪಜೆ ಮಾಡಬೇಕು
ಪಾದಪೂಜೆ ಮಾಡಬೇಕಣ್ಣ ॥ ೪ ॥

– ಶ್ರೀಮತಿ ಸುಮಿತ್ರಾದೇವಿ ಅಂಗಡಿ

***

ಪಾದಪೂಜೆಯ ಪದ

ಪಾದ ಪೂಜೆಯ ಮಾಡಿ ಮುಕ್ತಾದೆ ಗುರುಲಿಂಗ ಜಂಗಮ
ಪಾದಪೂಜೆಯ ಮಾಡಿ ಮುಕ್ತಾದೆ ॥ ಪ ॥

ಪಾದಪೂಜೆಯ ಮಾಡಿ ಮುಕ್ತಾದೆ ದಶವಿಧನಾದ ಘೋಷದಿ
ಪಾದ ಭೇದವನಳಿದು ಚಿದ್ಭವ ಬೋಧ ಮಂಟಪದಲ್ಲಿ ಕುಳಿತು ॥ ೧ ॥

ಕಾಯಾವಾಚಾ ಮನವು ಶುದ್ಧವಾಗಿ ಭಯವಿಲ್ಲದಾಂಗ
ಮಾಯ ಮೋಹ ಎರಡು ತಾ ನೀಗಿ ಕಾಯ ಕಾಶಿಕ್ಷೇತ್ರದಲಿ
ರಾಯ ವಿಶ್ವನಾಥ ತಾನು ತೋಯ ತೋಯ ಬೆರಸಿದಂತೆ
ನ್ಯಾಯ ಮಾಡುವೆ ಜಂಗಮನ ॥ ೨ ॥

ಇಡಾ ಪಿಂಗಳ ಜೋಡು ಗುಡಿಸಿ ನಡುನಾಡಗು
ದೊಂದುದೆಯ ಹಿಮನಾಸನದಿ ಹುದುಗಿಸಿ ಜಡಿದು
ಆಸನ ಬಲಿದು ಕುಳಿತು ಒಡನೆ ಪ್ರಾಣ ಪಾನವೆರಡುಹಿಡಿದು
ಎಬ್ಬಿಸಿ ನಡುವೆ ತ್ರಿಕೂಟದಿ ಉಡಗಿನಾಡವ ಜಂಗಮನ ॥ ೩ ॥

ಪಿಂಡ ಬ್ರಹ್ಮಾಂಡೆರಡು ಸಿರಸದಲಿ ಷಟಸ್ಥಲದ
ಮೇಲಿನ ಪುಂಡರೀಕ ಸಹಸ್ರದಳದಲ್ಲಿ ಕಂಡುತಾ ಸುಖಿಯಂದು
ಸುಖಿಯಾ ಬಂದ ಜ್ಯೋತಿಯ ಬಳಿ ಕಮಲದಲ್ಲಿ ಕಂಡು
ಪಶ್ಚಿಮ ತುದಿಯ ಬಯಲೊಳಗೆ ಮಂಡಿಸಿದ ಮಹಲಿಂಗಯೋಗಿ ॥ ೪ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೇನ, ಮಹಾದೇವಿ ಕುಂಬಾರ

***

೫. ಪ್ರಸಾದ ಮಹಿಮೆ

ಎಡೆ ಮಾಡಮ್ಮ

ಸ್ವಚ್ಛ ಮನದ ಶರಣರು ಕೂಡಿ
ನಿತ್ಯಧ್ಯಾನ ಮಾಡಿರಿ
ಬೇಡಿದ ವರವ ಕೊಡುವ ನಮ್ಮ
ಕಲ್ಯಾಣ ಬಸವಗ ನೆನೆಯಿರಿ ॥ ಪ ॥

ಚಂಚನಿಲ್ಲದ ಸಜ್ಜಕ ಒಡೆದು
ನಿಶ್ಚಿಂತಿಂದ ಉಂಡೆಯ ಕಟ್ಟಿ
ಹಂಚನಿಲ್ಲದೆ ಹೋಳಿಗೆ ಮಾಡಿ
ಕಲ್ಯಾಣ ಬಸವಗ ಎಡೆ ಮಾಡಮ್ಮ ॥ ೧ ॥

ಆಕಾಶದಿಂದ ಅಕ್ಕಿಯ ತರಸಿ
ಮನಪಾಕದಿಂದ ಆರಿಸಿಕೊಂಡು
ಅಸೆಮನ ಮುಟ್ಟಿ ನೇವದಿ ಮಾಡಿ
ಕಲ್ಯಾಣ ಬಸವಗ ಎಡೆ ಮಾಡಮ್ಮ ॥ ೨ ॥

ಕಲ್ಲನಿಲ್ಲದ ಗಂಗಳ ತೊಳೆದು
ಅಲ್ಪನಿಲ್ಲದ ಮಣಿಯವ ಹಾಕಿ
ನೀ ಮಾಡಿದ ಪಾಯಸ ಭಾಗ
ಕಲ್ಯಾಣ ಬಸವಗ ಎಡೆ ಮಾಡಮ್ಮ ॥ ೩ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

೬. ವಿಭೂತಿ ಮಹತ್ವ

ವಿಭೂತಿ ಧರಿಸಿದರೆ

ವಿಭೂತಿ ಧರಿಸಿದರೆ ಹೋಗುವುದು ಭವರೋಗ
ವಿಭೂತಿ ಚಿನ್ನ ಚಿನ್ನವಯ್ಯ ॥ ಪ ॥

ಹುರುಕು ಹುಣ್ಣು ಹತ್ತಿ ಹುಚ್ಚೆದ್ದು ತಿರುಗಿದರ
ನಿಚ್ಚಳ ಮಾಡುವುದು ವಿಭೂತಿ ॥ ೧ ॥

ಅಟ್ಟಂತ ಗಡಗಿಗೆ ಬೆಟ್ಟವನು ಧರಿಸಿದರೆ
ಅಮೃತವೆನಿಸುವುದು ವಿಭೂತಿ ॥ ೨ ॥

ತಂಬೀಗಿ ತಪ್ಪೇಲಿ ಎಂಜಲದ ಗಂಗಾಳ
ಮಡಿ ಮಾಡಿ ಬಿಡುವುದು ವಿಭೂತಿ ॥ ೩ ॥

***

ಹಣಿಮ್ಯಾಲ ವಿಭೂತಿ

ಬರುತಾರಂತ ಬರುತಾರಂತ
ಅಂದು ಇಂದು ಅನಬಾರದಂತ
ಸಂದು ನೋಡಿ ನಿರುತಾ
ಜನರ ಝಡತಿ ಕೇಳತ್ತಾರಂತ ॥ ಪ ॥

ಹಣಿಮ್ಯಾಲ ವಿಭೂತಿ ಧರಿಸಬೇಕಂತ
ಹಣೆ ಕೆತ್ತಿ ನೋಡತ್ತಾರಂತ
ವಿಭೂತಿಯಿದ್ದವರಿ ಬಯ್ಯಲ್ಲಂತ
ವಿಭೂತಿಯಿಲ್ಲದವರಿಗಿ ಬಯ್ಯತಾರಂತ ॥ ೧ ॥

ಆಚಾರ ವಿಚಾರ ಇರಬೇಕಂತ
ಇದ್ದವರಿಗಿ ಸವಿತ್ತಾರಂತ
ತಾಯಿ ತಂದಿ ಮಾತ ಮೀರಬಾರದಂತ
ಮಹಾದೇವಿ ಆಗುತಾರಂತ ॥ ೨ ॥

ಕೆಟ್ಟ ಕರ್ಮ ಮಾಡಬಾರದಂತ
ಮಾಡಿದವರಿಗಿ ಒಯ್ಯುತಾರಂತ
ಕುಚಲ ಗುಣ ಇರಬಾರದಂತ
ಕುರುಡನಾಗಿ ಹುಟ್ಟುತ್ತಾರಂತ ॥ ೩ ॥

ಖೊಟ್ಟಿ ಮಾಪಿಲಿ ಅಳಿಬಾರದಂತ
ಕೊಟ್ಟಿದ ಗಂಟ ಬರದಿಲ್ಲವಂತ
ಹಣ ಬಂದರ ಹಿಗ್ಗಬಾರದಂತ
ಬಡತನ ಬಂದರ ಅಳಬಾರದಂತೆ ॥ ೪ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

ವಿಭೂತಿಯ ಮಹಿಮಾ

ವೀರಶೈವ ಮತದವರಿಗೆ ವಿಚಾರ ಬರಲಿ ।
ವಿಭೂತಿಯ ಮಹಿಮೆ ಕೇಳಿರಿ ಜರಾ
ಇಹಪರಕ ಪಾತಾಳ ಲೋಕಕ
ಮೂರೂಕ ಮಾಡಿತು ಉದ್ಧಾರ ಜಿ॥ ಜಿ॥

ಭೂತನಾಥನಾದ ಶಿವನ ಕಣ್ಣಿನಿಂದ ರುದ್ರಾಕ್ಷಿ ಪುಟ್ಟಿವು
ಖಚಿತ ಭೂತಳಕ್ಕೆ ಶ್ರೇಷ್ಠಾದ ವಸ್ತುಯೆಂದು ದೇವತೆಗಳು
ಹೇಳಿದ ಮಾತ ಜಿ॥ ಜಿ॥

ಅಲ್ಲಮಹಾಪ್ರಭು ಬಿಲ್ಲ ಕೆಳಗ ಊರಿದರೆ ಪತ್ರಿವೃಕ್ಷ ಆಗಿವಂತ
ಚಿತಾಭಸ್ಮ ಚಿನ್ಮಯ ಧರಿಸಿದರಿಂದ ಭಸ್ಮ ಆಯಿತೆಂದು
ಬರೆದಿತ್ತು ಗ್ರಂಥ ಜಿ॥ ಜಿ॥

ಪರಮೇಶ್ವರನ ಪಂಚಮುಖದ ಹೆಸರ ಕಸರಿಲ್ಲದೆ ಹೇಳುವೆ ದೃಷ್ಟಾಂತ
ಸದ್ಯೋಜಾತ ಅಘೋರ ವಾಮ ದೇವ ತತ್ಪುರುಷ
ವಾಮದೇವ ಹಿಂಗತ ಜಿ॥ ಜಿ॥

ದುಮಾಲಿ:
ಪೃಥ್ವಿ ಆಪ ತೇಜ ವಾಯು ಆಕಾಶ ಪಂಚ ಭೂತಗಳು ಮಾಡಿಟ್ಟ ಈಶ ಜಿ॥ ಜಿ॥
ನೀವೃತಿ ಪ್ರತಿಷ್ಠೆ ವಿದ್ಯಾಶಾಂತಿ ಶಾಂತತೀತೆಂಬ
ಭೂಕೇಶ. ಕಪೀಲ ಶುಬ್ರ ರಕ್ತ ಕ್ರಿಷ್ಣ ಚಿತ್ರ ಪಂಚ ವರ್ಣ ಪ್ರಕಾಶ ಜಿ॥ ಜಿ॥

ನಂದಿ ಭದ್ರಿ ಸೂರಬಿ ಸುಸಲೇ ಸುಮನೆ ಪಂಚ ಆಕಳ
ಪರುಷಿ ಐದಾಕಳು ಪುಟ್ಟಿಸಿದ ಮಹೇಶ ಜಿ॥ ಜಿ॥

ಏರ:
ಗೌಪ್ಯದಿಂದ ಕ್ರಮವಾಗಿ ಕೇಳಿರಿ ವಿಭೂತಿ ಭಸಿತ ಭಸಾಕ್ಷರ
ಇಹಪರಕ ಪಾತಾಳ ಲೋಕಕ ಮೂರೂಕ ಮಾಡಿತು ಉದ್ಧಾರ ಜಿ॥ ಜಿ॥
॥ಚೌಕ ೧॥

ರಕ್ಷಕ ಪಂಚಭೂತ ವಿಭೂತಿ ಪುಟ್ಟಿವು ಶಂಕರನ ಹಣೆಯಾಗ
ಭವ ಜನರಿಗೆ ಇದರ ಸವಿಯೇನು ಗುರುತು ತಿಳಿದಿತ್ತು ಧರಿಸುವ ಶ್ಯಾಣ್ಯಾಗ ಜಿ॥ಜಿ॥
ವಿಭೂತಿ ಧರಿಸಿದರ ಐಶ್ವರ್ಯ ಪ್ರಾಪ್ತಿ ಹೆಚ್ಚುವದು
ಹಚ್ಚುವರ ಮನಿಯಾಗ ಭಸಿತ ಧರಿಸಿದರ ಸೂರ್ಯನಕ್ಕಿನ್ನ ಮಿಗಿಲಾದ ಕಾಂತಿ
ಯಾಗುವುದು ಅವಗ ಜಿ॥ ಜಿ॥

ಭಸ್ಮಲೋಚನನಾಗಿ ಭಸ್ಮಧರಿಸಿದರ ದೋಶನಾಶ ಒಂದು ಕ್ಷಣದಾಗ
ಭಸ್ಮ ಧರಿಸಿದರ ಮರಣ ಪರಿಹಾರ ಇಂತ ಮಹತ್ವ ಅದರ ಗುಣದಾಗ ಜಿ॥ ಜಿ॥

ದುಮಾಲಿ:
ವೈರಿಭೂತ ಅಪಶ್ವರ ಬ್ರಹ್ಮರಾಕ್ಷೇಸ ನಿವಾರಣ
ವಿಭೂತಿಯಲ್ಲಿ ಆಯಿತಿ ಇಂತ ಗುಣ ಜಿ॥ಜಿ॥
ಭಸಿತ ತ್ರಿಪುಂಡ್ರ ಶ್ರೇಷ್ಠೆಂದು ತಿಳಿದು ಧರಿಸಿದ ಬಸವಣ್ಣ
ಇದರ ಮೇಲ ಪುರಾತರ ಕಣ್ಣ ಜಿ॥ ಜಿ॥
ವಿಭೂತಿ ಮಹಿಮೆ ತಿಳಿದವ ಶಿವಶರಣ ಒಂದೆ ನಾಲಿಗಿಲೆ ವರ್ಣ ಜಿ॥ ಜಿ॥

ಏರ:
ಸೌಂದರ್ಯ ನಂಬೆಣ್ಣ ಸೊನ್ನಲಿಗಿ ಸಿದ್ದಣ್ಣ ಧರಿಸಿರು
ಸಿದ್ಧಸಾಧ್ಯರ ಇಹಪರರ ಪಾತಾಳ ಲೋಕಕ ಮೂರುಕ ಮಾಡಿತು ಉದ್ದರ ಜಿ॥ ಜಿ॥
॥ ಚೌಕ ೨ ॥

ಗರುಡ ಗಂಧರ್ವರು ವರಸುರ ನರರು ಇದರಿಂದ ಪಾವನ ಆಗ್ಯಾರ
ಜಮದಗ್ನಿ ಮುನಿಯು ಕಶಪ್ಪು ಋಷಿಯು
ವಿಭೂತಿ ಇಂದೇ ಸ್ವರ್ಗಕ ಹೋಗ್ಯಾರ ಜಿ॥ ಜಿ॥

ಅಗಸ್ತ್ಯಯತಿಯು ಅನಿಮಿಷಯ್ಯರು ಗೌತುಮ ಆಚಾರಿ
ಮೊದಲಾದವರ ಮಡದ ಪ್ರಾಣ ಪ್ರತಿಷ್ಠ ಮಾಡಿಕೊಂಡು ಮೂರು
ವೇಳೆ ಕೈಲಾಸಕ ಹೋಗ್ಯಾರ ಜಿ॥ ಜಿ॥

ವಿಶ್ವಾಮಿತ್ರ ವಶಿಷ್ಠ ನಾರದರು ಯಾವತ್ತು ತ್ರಿಪುಂಡ್ರ ಧರಿಸ್ಯಾರ
ಮೂರು ಲೋಕಕ ಮಿಗಿಲಾದ ಭಸ್ಮ ಮನ್ಮಮುನಾದಿಗಳು ಸ್ಮರಿಸ್ಯಾರ ಜಿ॥ ಜಿ॥

ದುಮಾಲಿ:
ವಿಭೂತಿ ಧಾರಣದಿಂದ ಹೆಚ್ಚುವದು ಶ್ರೀಮಂತಾನ
ವೃದ್ಧಿಯಾಗುವದು ಸಂತಾನ ಜಿ॥ ಜಿ॥
ಸದಾ ಭಸ್ಮ ಹಚ್ಚಿದರ ಹೆಚ್ಚಾಗುವದು ಮಾನ ಪಾನ
ಧರಿಸಲಾರದ ಗುಣಹೀನ ಜಿ॥ ಜಿ॥

ಪಾದೋದಕ ಪ್ರಸಾದದಲ್ಲಿ ಸದಾ ಮಹ್ಮದನ ಧಾಸ್ಯನ
ದಸ್ತಗಿರ ಹಿಡಿದೀದ ಅದೇ ಖೂನ ಜಿ॥ ಜಿ॥

ಏರ :
ಧರೆಯೊಳು ಅಧಿಕ ಮೆರೆಯುವ ಹಿರೇ ಸಾವಳಗಿ ಶ್ರೀಮನ್ ನಿರಂಜನ ಸಿದ್ದರ
ಇಹ ಪರಕ ಪಾತಾಳ ಲೋಕಕ ಮೂರೂಕ ಮಾಡಿತು ಉದ್ಧಾರ

ಚೌಕ–೩

– ಸಾವಳಗಿ ಮಹಮ್ಮದಸಾಬ

***

೭. ರುದ್ರಾಕ್ಷಿ ಮಹಿಮೆ

ರುದ್ರಾಕ್ಷಿ ಎಂಬುದು ತದ್ರೂಪು ಶಿವನದು
ಭದ್ರರು ನೀವು ಕೇಳಿರಿ । ರುದ್ರಾಕ್ಷಿ
ಸದೃಶದೌಷಧ ಜಲುಮಕ ॥ ೧ ॥

ಧರಿಸಿದರೆ ರುದ್ರಾಕ್ಷಿ ಹರಿಸುದು ಭವರೋಗ
ಸುರಿದರ ರಸ ತಾ ದೇಹದ । ಬಾಧೆಯ
ಪರಿಹರಿಸುದು ನಮ್ಮ ಜೀವಕ ॥ ೨ ॥

ಎಲ್ಲಕ್ಕು ಮದ್ದಹುದು ಇಲ್ಲಿದರ ಸರಿಸಾಟಿ
ಬಲ್ಲವರು ನೀವು ತಿಳಿದರ । ರುದ್ರಾಕ್ಷಿ
ಬಲ್ಲಿದ ರೋಗ ಕಳೆಯುದು ॥ ೩ ॥

ಕೃತಿ : ರುದ್ರಾಕ್ಷಿ

***

ರುದ್ರಾಕ್ಷಿ

ರುದ್ರಾಕ್ಷಿ ತತ್ವವ್ರು ಕ್ಷಿದ್ರಮಾಡಿ ಹೇಳತಿನಿ
ಶ್ರದ್ಧೆವಿಟ್ಟು ಕೇಳ್ರಿ ಜರ
ನಿದ್ರೀಲಿಂದ ಆಗರಿ ಎಚ್ಚರ
ತತ್ವಕೆ ಮಾಡಬಾರದು ತುಚ್ಛರ ॥ ಪ ॥

ರುದ್ರ ಮಾಡಿದ ತ್ರಿಪುರ ಸಂಹಾರ
ಮಿರಿದಾರು ಮೂರುಮಂದಿ ಧೈತ್ಯರ
ತಾರಕಾಸುರ ಧೈತ್ಯನ ಪುತ್ರರ
ತ್ರಿಶೂಲಧರನಿಗೆ ತಟ್ಟಿಸಿದ ವರ ॥ ೧ ॥

ರಥ ಆಗಿದಾನು ಅಗ್ನೇಶ್ವರ
ಸೂರ್ಯ ಚಂದ್ರ ಆ ರಥದ ಚಕ್ರ
ರಥದ ಸಾರಥಿ ಬ್ರಹ್ಮದೇವರ
ಸಾಯಕರಾಗಿ ದೇವತರಾ ॥ ೨ ॥

ಆದಿಶೇಷ ಧನುಷ್ಯ ಆಗಿದಾರ
ವಿಷ್ಣುಗ ತುದಿ ಹಚ್ಚಿ ಮಾಡಿದ ತೀರ
ದಿಟ್ಟಿಸಿ ನೋಡಿ ಉದರ್‍ಯಾವ ಕಣ್ಣೀರ
ರುದ್ರಾಶ್ರುಗಳಿಂದ ರುದ್ರಾಕ್ಷಿ ಅವತಾರ ॥ ೩ ॥

ದೈತ್ಯರಿಗ ಮಾಡಿದ ಸಂಹಾರ
ರುದ್ರಾಕ್ಷಿ ಧಾರಣ ಮಾಡಿ ದೇವತರ
ರುದ್ರನ ಚರಣದಿ ಸೇವಾ ತತ್ಪರ
ಸಿದ್ಧಾಂತ ಶಾಸ್ತ್ರ ಸಧ್ಯ ಕಮಲಾನಗರ ॥ ೪ ॥

ಕವಿ : ಶಿವರುದ್ರಪ್ಪ ಕಮಲಾನಗರ

***

೮. ಮಂತ್ರ ಮಹಿಮೆ

ಓಂಯೆಂದು ಕುಟ್ಟಿರಿ

ಓಂಯೆಂದು ಕುಟ್ಟಿರಿ ಸೋಂಯೆಂದು ಬೀಸಿರಿ
ಓಂ ಸೋಂ ಎರಡು ತಿಳಿಯಬೇಕ ನಾರಿ ಹಾಕವ್ವ ಹಾರಿ ॥ ೧ ॥

ಓಂ ಸೋಂ ಎರಡು ಅಕ್ಷರ ತಿಳಿದರ
ಗುರುಮನಿ ಕೀಲಿ ದೊರೆತೈತಿ ನಾರಿ ಹಾಕವ್ವ ಹಾರಿ ॥ ೨ ॥

ಗುರುಕೀಲಿ ದೊರೆತರ ಆರುಗುಣ ಅಳಿಬೇಕ
ಮಾಯಾ ಪರಪಂಚ ಬಿಡಬೇಕ ನಾರಿ ಹಾಕವ್ವ ಹಾರಿ ॥ ೩ ॥

ಪರಪಂಚನೆಂಬುದು ಕಳವಿ ಪರಮಾತ್ಮನೆಂಬುದು ಅಕ್ಕಿ
ಜ್ಞಾನದ ಒನಕೀಲಿ ಕುಟ್ಟಬೇಕನಾರಿ ಹಾಕವ್ವಾ ಹಾರಿ ॥ ೪ ॥

ಅಜ್ಞಾನೆಂಬ ಅಕ್ಕಿ ಥಳಿಸಿ ಸುಜ್ಞಾನೆಂಬ ಹಳ್ಳಹೊಡೆದು
ಗುರು ಮಂತ್ರದಡಿಗಿ ಮಾಡಬೇಕ ನಾರಿ ಹಾಕವ್ವ ಹಾರಿ ॥ ೫ ॥

ಹಮ್ಮ ದುಮ್ಮ ಸದಿಯ ತಂದು ಕಾಮ ಕ್ರೋಧ ಕಿಚ್ಚಿ ಮಾಡಿ
ಮೂರು ಗುಣದ ಗುಂಡ ಒಲಿ ಹೂಡಬೇಕ ನಾರಿ ಹಾಕವ್ವ ಹಾರಿ ॥ ೬ ॥

ಬಂಗಾರದ ಗಡಿಗಿ ತೊಳೆದು ಸಿಂಗಾರದ ಥಾಳಿ ಹಾಕಿ
ನಿಜವಾದ ನೀರು ಎಸರಿಡಬೇಕ ನಾರಿ ಹಾಕವ್ವ ಹಾರಿ ॥ ೭ ॥

ಹಮ್ಮನೆಂಬ ಬಾನಾ ಮಾಡಿ ಗಡಿಗಿ ತೂಕವ ನೋಡಿ
ಗುರುಮಂತ್ರದಡಗಿ ಮಾಡಬೇಕ ನಾರಿ ಹಾಕವ್ವಾ ಹಾರಿ ॥ ೮ ॥

ಜಂಗಮಕ್ಕೆ ಎಡೆಯ ಮಾಡಿ ಮಾಲಿಂಗಕ್ಕೆ ನೈವದ್ಯ ತೋರಿ
ಗುರುಹಸ್ತ ಪರಸಾದ ಮುಗಿಬೇಕ ನಾರಿ ಹಾಕಾವ್ವಾ ಹಾರಿ ॥ ೯ ॥

ಅಂಗೈಯೆಂಬ ಅಡಕಿ ಒಡೆದು ಸದ್ಗುರುವಿನ ಪಾದ ಪಿಡಿದು
ಸಾಧುಸಂತರ ಸಂಗ ಮಾಡಬೇಕ ನಾರಿ ಹಾಕವ್ವ ಹಾರಿ ॥ ೧೦ ॥

ದೇಶದೊಳು ಹುಲುಸೂರು ವಾಸಗುರುಬಸವ ಪಾದ
ಮಲ್ಲಿಕಾರ್ಜುನನ ನೆನಿಯಬೇಕು ನಾರಿ ಹಾಕವ್ವಾ ಹಾರಿ ॥ ೧೧ ॥

– ಶ್ರೀಮತಿ ಗೌರವ್ವ ಕಾಡಾದಿ

***

ಓಂ ನೆಂದು ಕುಟ್ಟರಿ ಬಾರೆ

ಓಮನೆಂದು ಕುಟ್ಟರಿ ಸೋಮನಂದು ಬೀಸರಿ
ಓಮಸೋಮ ಎರಡು ತಿಳಿಯಬೇಕೆ ನಾರಿ ಹಾಕವ್ವ ಯಾರಿ ॥ ಪ ॥

ಓಮ ಸೋಮ ಎರಡು ಅಕ್ಷರ ತಿಳಿದರೆ
ಗುರು ಕೀಲಿ ಆವಾಗ ದೊರದತ್ತೇ ನಾರಿ ಹಾಕವ್ವ ಯಾರಿ ॥ ಅ ಪ ॥

ಗುರುಕೀಲಿ ದೊರದರ ದುರ್ಗಣ ಅಳಿಬೇಕೆ
ಮಾಯಾ ಪರಪಂಚ ಸುಡಬೇಕೆ ನಾರಿ ಹಾಕವ್ವ ಯಾರಿ ॥ ೧ ॥

ಪರಪಂಚ ಎಂಬು ಕಳವೆ ಪರಮಾತ್ಮದಯಕ್ಕಿ
ಜ್ಞಾನದ ಒಣಕಿಲಿ ಕುಟ್ಟಬೇಕೆ ನಾರಿ ಹಾಕವ್ವ ಯಾರಿ ॥ ೨ ॥

ಅರುವನೆಂಬ ಅಕ್ಕಿ ಕುಟ್ಟಿ ನಿಷ್ಕಲಂಬ ಉಸುಕ ಆಯ್ದು
ನಿಜನುಳ್ಳ ನೀರ ಎಸರಿಡೇ ನಾರಿ ಹಾಕವ್ವ ಯಾರಿ ॥ ೩ ॥

ಅಂಗೈದೊಳು ಹದನ ಮಾಡಿ ಗಡಗಿ ತೊಳೆದು ತಿಳಿಯ ಮಾಡಿ
ಮೂರು ಕಲ್ಲಿನೊಲಿ ಹೂಡಿ ಎಸರಿಡೇ ನಾರಿ ಹಾಕವ್ವ ಯಾರಿ॥ ೪ ॥

ಕಾಮ ಕ್ರೋದ ಕಟಗಿ ತಂದು ದುರ್ಗುಣೆಂಬ ಹುಲ್ಲ ಹಾಕಿ
ಗುರು ಮಂತ್ರ ಬೆಂಕಿ ಹಚ್ಚಿ ಸುಡಬೇಕೆ ನಾರಿ ಹಾಕವ್ವ ಯಾರಿ ॥ ೫ ॥

ಅರುವನೆಂಬು ಅನ್ನ ಮಾಡಿ ಗರುವನೆಂಬು ಗಂಜಿ ಜಾನಿ
ಮಹಾಲಿಂಗಗೆಡಿಮಾಡಿ ಉಣುಸಬೇಕೇ ನಾರಿ ಹಾಕವ್ವ ಯಾರಿ॥ ೬ ॥

ಅನುಮಾನೆಂಬ ಅಣಕಿ ಹೊಡೆದು ಸದ್ಗುರವಿನ ಪಾದ ಪಿಡಿದು
ಸತ್ಯಲಿಂದೇ ಸಂತ್ರ ಸಂಗ ಮಾಡಬೇಕೇ ನಾರಿ ಹಾಕವ್ವಾ ಯಾರಿ ॥ ೭ ॥

ಧರಿಯೊಳು ಕಲ್ಯಾಣ ಹೊಸ ಬಸವಣ್ಣನಗ
ಗುರು ಬಸವಣ್ಣನಗ ನೆನಿಯಬೇಕೆ ನಾರಿ ಹಾಕವ್ವ ಯಾರಿ ॥ ೮ ॥

– ಶ್ರೀಮತಿ ಲಕ್ಷ್ಮೀಬಾಯಿ

***

ಓಂ ನಮಃ ಶಿವಾಯ

ಓಂ ಓಂ ಓಂ ಓಂ ನಮಃ ಶಿವಾಯ
ರೂಪ ಗುರುವೆ ಮಂಗಲಂ ಸದ್ಗುರುವೆ ಮಂಗಲಂ ॥ ಪ ॥

ಓಂ ಮಂಗಲಂ । ಓಂಕಾರ ಮಂಗಲಂ
ಓಂಕಾರ ರೂಪನಾದ ಗುರುವೆ ಮಂಗಲಂ ॥ ೧ ॥

ನಂ ಮಂಗಲಂ । ನಕಾರ ಮಂಗಲಂ
ನಾದ ಬಿಂದು ಕಾಲಾತೀತ ಗುರುವೆ ಮಂಗಲಂ ॥ ೨ ॥

ಮಂ ಮಂಗಲಂ । ಮಕಾರ ಮಂಗಲಂ
ಮಹಾ ವಾಕ್ಯ ಲಕ್ಷ್ಯನಾದ ಗುರುವೆ ಮಂಗಲಂ ॥ ೩ ॥

ಶಿಂ ಮಂಗಲಂ । ಶಿಕಾರ ಮಂಗಲಂ
ಸಿದ್ಧ ಬುದ್ಧ ಮುಕ್ತನಾದ ಗುರುವೆ ಮಂಗಲಂ ॥ ೪ ॥

ವಾಂ ಮಂಗಲಂ । ವಾಕಾರ ಮಂಗಲಂ
ವಾದ ಬೇಧ ರೂಪ ಮರೆತ ಗುರುವೆ ಮಂಗಲಂ ॥ ೫ ॥

ಯಂ ಮಂಗಲಂ । ಯಾಕಾರ ಮಂಗಲಂ
ಎಲ್ಲ ರೂಪ ಶಿವಾನಂದ ಗುರುವೆ ಮಂಗಲಂ ॥ ೬ ॥

– ಶ್ರೀಮತಿ ಪಾರ್ವತಿ ಜೆಮಶೆಟ್ಟಿ ಹಾಗೂ
ಸರ್ವಮಂಗಳಾ ಜೋಗೂರ, ಅನ್ನಪೂರ್ಣ ದೇವಣಿ

***

ಷಡಕ್ಷರಿ ಮಂತ್ರದ ಹಾಡು

ಓಂ ಮಂಗಲಂ ಓಂಕಾರ ಮಂಗಲಂ
ಓಂನಮಃ ಶಿವಾಯ ಮಂಗಲಂ
ಶಿವಾಯ ಮಂಗಲಂ ನಮಃ ಶಿವಾಯ ಮಂಗಲಂ ॥ ೧ ॥

ನ ಮಂಗಲಂ ನಕಾರ ಮಂಗಲಂ
ನಾದ ಬಿಂದು ಕಳಾತೀತ ಗುರುವೆ ಮಂಗಲಂ
ಸದ್ಗುರುವೆ ಮಂಗಲಂ ॥ ೨ ॥

ಮ ಮಂಗಲಂ ಮಕಾರ ಮಂಗಲಂ
ಮಹಾದೇವ ತಾನಾಗಿರು ಗುರುವೆ ಮಂಗಲಂ
ಸದ್ಗುರುವೆ ಮಂಗಲಂ ॥ ೩ ॥

ಶಿ ಮಂಗಲಂ ಶಿಕಾರ ಮಂಗಲಂ
ಸಿದ್ಧ ಬುದ್ಧ ಸ್ವರೂಪನಾದ ಗುರುವೆ ಮಂಗಲಂ
ಸದ್ಗುರುವೆ ಮಂಗಲಂ ॥ ೪ ॥

ವ ಮಂಗಲಂ ವಕಾರ ಮಂಗಲಂ
ವಾದ ಭೇದದಿಂದ ದೂರನಾದ ಗುರುವೆ ಮಂಗಲಂ
ಸದ್ಗುರುವೆ ಮಂಗಲಂ ॥ ೫ ॥

ಯ ಮಂಗಲಂ ಯಕಾರ ಮಂಗಲಂ
ಎಲ್ಲಾ ವಸ್ತು ತಾನಾಗಿರುವ ಗುರುವೆ ಮಂಗಲಂ
ಸದ್ಗುರುವೆ ಮಂಗಲಂ ॥ ೬ ॥

– ಶ್ರೀಮತಿ ಸುಮಿತ್ರಾದೇವಿ ಅಂಗಡಿ
– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

ಗಾಡಿ ಬಂತವ್ವ ಗಾಡಿ

ಗಾಡಿ ಬಂತವ್ವ ಗಾಡಿ
ಓಂ ನಮಃ ಶಿವಾಯೆಂಬ ಶಬ್ದನಾದ ಮಾಡುತಾ
ಗಾಡಿ ಬಂತವ್ವ ಗಾಡಿ ॥ ಪ ॥

ಬ್ರಹ್ಮ ಬಡಿಗ್ಯಾ ಮಾಡಿದ ಗಾಡಿ
ಐದು ತತ್ತ್ವ ಕೂಡಿದ ಗಾಡಿ
ಮೀರಿದ ಓಂನಾಮ ಹೇರಿದ ಗಾಡಿ ॥ ೧ ॥

ಆರುಗುಣಗಳು ಕೂಡಿದಂತ ಗಾಡಿ
ಮೂರು ಕೀಲವ ಜಡಿದಂತ ಗಾಡಿ
ಅರಿದೆ ಹೋಗುವದು ಬರಿದೆ ಗಾಡಿ ॥ ೨ ॥

ಶಿವಾನುಭವ ನೀಡುವಂತ ಗಾಡಿ
ಸಂಸಾರದ ಅರ್ಥ ಹೇಳುವ ಗಾಡಿ
ಮಾನವ ಜನುಮದ ಮಹಿಮೆ ನೀಡುವ ಗಾಡಿ ॥ ೩ ॥

ಯಮದೂತರು ಬಂದು ಎಳೆಯುವ ಗಾಡಿ
ಶಿವದೂತರು ಬಂದು ಬಿಡಿಸುವಂತ ಗಾಡಿ
ಮೋಕ್ಷದ ಮಾರ್ಗ ತೋರಿಸುವ ಗಾಡಿ ॥ ೪ ॥

ಆರುಗುರುಣಗಳು ಅಳಿದಂತ ಗಾಡಿ
ಮೂರು ಗುಣಗಳು ತಿಳಿದಂತ ಗಾಡಿ
ಅನುಭವ ತತ್ತ್ವ ಹಿಡಿದಂತ ಗಾಡಿ ॥ ೫ ॥

ಕೈಲಾಸ ಪುರದಲ್ಲಿ ಇರುವಂತ ಗಾಡಿ
ಸುಖ-ದುಃಖವೆರಡು ತಿಳಿದಂತ ಗಾಡಿ
ಪರಮಾತ್ಮ ಕಳುಹಿದ ಜ್ಞಾನದಾ ಗಾಡಿ ॥ ೬ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

ಓಂ ನಮಃ ಶಿವಾಯೆಂಬ ನಾಮ

ಓಂ ನಮಃ ಶಿವಾಯೆಂಬ ನಾಮದ ಬೀಜ
ನಾಲಿಗಿ ತುದಿಯಲ್ಲಿ ಬಿತ್ತಿರಯ್ಯ ॥ ಪ ॥

ಹೃದಯ ಹೊಲವ ಮಾಡಿ
ಮನದ ನೇಗಿಲ ಹೂಡಿ
ಶ್ವಾಸಕೋಶ ವೆಂಬೆರೆಡು
ಎತ್ತುಗಳ ಹೂಡಿರಯ್ಯ ॥ ೧ ॥

ಜ್ಞಾನೋದಯವೆಂಬ ಹಗ್ಗ ಕಣ್ಣಿ ಮಾಡಿ
ನಿರ್ಮಲಚಿತ್ತವೆಂಬ ಕುಂಟಿ ಹೊಡಿರಯ್ಯ
ಮದ ಮತ್ಸರವೆಂಬ ಮರಗಳ ಕಡಿದು
ಕಾಮಕ್ರೋಧವೆಂಬ ಕಳೆಯನ್ನು ಕಿತ್ತಿರಯ್ಯ ॥ ೨ ॥

ಪಂಚೇಂದ್ರಿಯಗಳ ಮರಿಚಿಕೆ ಹೂಡಿ
ಚಂಚಲವೆಂಬ ಪಕ್ಷಿಯ ಹೊಡಿರಯ್ಯ
ಉದಯಾಸ್ತಮಾನವೆಂಬ ಎರಡು ಕೊಳಗದಲ್ಲಿ
ಆಯ್ಯುಷ್ಯವೆಂಬ ರಾಶಿ ಅಳಿರಯ್ಯ ॥ ೩ ॥

ಓಂ ನಮಃ ಶಿವಾಯೆಂದು ದಿನ ದಿನ ಜಪಿಸಿದರೆ
ಹುಟ್ಟು ಸಾವು ಎಂಬುದಿಲ್ಲ ತಿಳಿರಯ್ಯ ॥ ೪ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

ಓಂನೆಂದು ಬೀಸುವ

ಓಮನೆಂದು ಬೀಸೊನು ಬಾರೆ
ಸೋಮನೆಂದು ಕುಟ್ಟನು ಬಾರೆ
ಓಮ ಸೋಮ ಎರಡೂ
ತಿಳಿಯಬೇಕೆ ನಾರಿ ಹಾಕವ್ವ ಯಾರಿ ॥ ಪ ॥

ಪರಪಂಚೆಂಬ ಕಳವಿ
ಪಾರಮಾರ್ಥೆಂಬೋ ಅಕ್ಕಿ
ಸುಜ್ಞಾನದ ಒಣಕೀಲಿ
ಕುಟ್ಟುಬೇಕೆ ನಾರಿ ಹಾಕವ್ವ ಯಾರೀ ॥ ೧ ॥

ಕಲ್ಪನೆಂಬೋ ಅಕ್ಕಿ ಆಯ್ದು
ಸೂಕ್ಷುಮೆಂಬೋ ಹಳ್ಳತೆಗೆದು
ನಿಜಗುಣದ ನೀರಿಲಿ
ಅಕ್ಕಿ ತೊಳಿಯೆ ನಾರಿ ಹಾಕವ್ವ ಯಾರಿ ॥ ೨ ॥

ಕಾಮ ಕ್ರೋಧ ಕಿಚ್ಚಮಾಡಿ
ಮಾಯ ಮಮತ ಸದಿಯ ಮುಚ್ಚಿ
ಗುರು ಮಂತ್ರಲಿಂದೆ ಒಲಿ ಪುಟು
ಮಾಡಬೇಕೆ ನಾರಿ ಹಾಕವ್ವ ಯಾರಿ ॥ ೩ ॥

ಅರುವು ಎಂಬೊ ಅನ್ನ ಮಾಡಿ
ಗರುವು ಎಂಬೊ ಗಂಜಿ ಜ್ಯಾನಿ
ನೀರ್ಮಳದಿಂದೇ ಅಡಗಿ
ಮಾಡುಬೇಕೆ ನಾರಿ ಹಾಕವ್ವ ಯಾರಿ ॥ ೪ ॥

ಜಂಗಮಗ ಎಡಿಯ ಮಾಡಿ
ಮಾನಿಂಗಗ ಎಡಿಯು ಸಾಗಿ
ಗುರುಪ್ರಸಾದ ಹಸ್ತಲಿಂದ
ಉಣುಸುಬೇಕೆ ನಾರಿ ಹಾಕವ್ವ ಯಾರಿ ॥ ೫ ॥

ಅನುಮಾನೆಂಬೊ ಅಡಕಿ ಒಡದು
ಘನಗುರುವೀನ ಪಾದ ಪಿಡಿದು
ಸತ್ಯಲಿಂದೆ ಸಂತರ ಸೇವೆ
ಮಾಡುಬೇಕ ನಾರಿ ಹಾಕವ್ವ ಯಾರಿ ॥ ೬ ॥

ಧರಿಯೋಳು ಚುಂಚೋಳಿ
ದಾಸೋಗ ಹಾರಕೂಡ
ಗುರುಚೆನ್ನ ಬಸವನ
ನೆನಸುತ ನಾರಿ ಹಾಕವ್ವ ಯಾರಿ ॥ ೭ ॥

– ಶ್ರೀಮತಿ ಸುವರ್ಣಬಾಯಿ ಖೇಳಗಿ

***

ಶಿವಾಯ ನಮಃ

ಶಿವಾಯ ನಮಃ ಓಂ ನಮಃ ಶಿವಾಯ
ಹರಾಯ ನಮಃ ಓಂ ನಮಃ ಶಿವಾಯ ॥ ಪ ॥

ಶಿವ ಶಿವ ಅನ್ನಲು ಬೇಕು ಶಿವನ ಸ್ಮರಣೆ ಮಾಡಬೇಕು
ಶಿವನಾಮ ನುಡಿಯಲು ಬೇಕು ಪುಣ್ಯವ ಪಡಿಯಲೇಬೇಕು
ಶಿವಾಯ ನಮಃ ಓಂ ನಮಃ ಶಿವಾಯ ॥ ೧ ॥

– ಶ್ರೀಮತಿ ಪಾರ್ವತಿ ಜೆಮಶೆಟ್ಟಿ ಹಾಗೂ
ಸರ್ವಮಂಗಳಾ ಜೋಗೂರ, ಅನ್ನಪೂರ್ಣಾ ದೇವಣಿ

***

ಶಿವ ಓಂ

ಶಿವನ ಪಂಚಾಕ್ಷರಿ ಮಂತ್ರವಿದೋ
ಶಿವನ ಪಂಚಾಕ್ಷರಿ ಮಂತ್ರವಿದೋ ॥ ಪ ॥

ವೇದಿನಿಯೊಳು ತಾ ತುಂಬಿಹುದೋ
ವೇದದ ಮೊದಲಿನ ಮೂಲವಿದೋ
ಶಿವ ಓಂ ಶಿವ ಓಂ ಶಿವ ಓಂ ॥ ೧ ॥

ಬ್ರಹ್ಮಾನಂದದ ಸಾರವಿದೋ
ತ್ವಮಸೀಮಾ ವಾಕ್ಯವಿದೋ
ದೇವಾನ್ ದೇವತೆಗಳು ಪಠಿಸುವುದೋ
ಶಿವ ಓಂ ಶಿವ ಓಂ ಶಿವ ಓಂ ॥ ೨ ॥

ಮನ ಮುನಿ ಋಷಿಗಳ ಪ್ರಾಣವಿದೋ
ರವಿ ಶಶಿಗಳಿಗಾಧರವಿದೋ
ಬ್ರಹ್ಮಂಡದೊಳು ದೊರೆಯುವುದೋ
ಶಿವ ಓಂ ಶಿವ ಓಂ ಶಿವ ಓಂ ॥ ೩ ॥

ಯೋಗಿಗಳಿಗೆ ಉನ್ಮನೆಯವಿದೋ
ಜ್ಞಾನಿಗಳಿಗೆ ಪರಬ್ರಹ್ಮವಿದೋ
ಹದಿನಾಲ್ಕು ಲೋಕದೊಳು ಕೂಗುವುದೋ
ಶಿವ ಓಂ ಶಿವ ಓಂ ಶಿವ ಓಂ ॥ ೪ ॥

ವೈಷ್ಣವರಿಗೆ ಹರಿನಾಮವಿದೋ
ಶೈವರಿಗೆ ಶಿವನಾಮ ವಿದೋ
ಸಾಧು ಸಂತರು ಸದಾ ಜಪಿಸುವುದೋ
ಶಿವ ಓಂ ಶಿವ ಓಂ ಶಿವ ಓಂ ॥ ೫ ॥

ಧರೆಯೊಳು ಹಿಪ್ಪರಾಗಿಪುರವಿದೋ
ಧರೆಯೊಳು ಹಿಪ್ಪರಗಿ ಪೂರವಿದೋ
ಶ್ರೀ ಗುರು ಮಡಿವಾಳನ ಮಂತ್ರವಿದೋ
ಶಿವಯೋಗಿ ಮಹಾಂತನ ಸ್ಮರಣೆಯಿದೋ
ಶಿವ ಓಂಃ ಶಿವ ಓಂಃ ಶಿವ ಓಂ ॥ ೬ ॥

– ಶ್ರೀಮತಿ ತುಳಸಮ್ಮ ಬ.ಹೂಗಾರ

***

ಪ್ರಣವ ಪಂಚಾಕ್ಷರಿ ಮಂತ್ರದ ಮಹಿಮೆ

ಪ್ರಣವ ಪಂಚಾಕ್ಷರಿ । ಪರಶಿವನ । ಗುರುವೀನ
ಮನದೊಳು ನೆನಿಯವ್ವ ತಂಗಿ ॥
ನೀ ಮನದೊಳು ನೆನಿಯವ್ವ ತಂಗೀ
ಇದು ಘನವೆಂದು ತಿಳಿ ಮಂಗಲಾಂಗೀ
ಇದು ನೀವೆಂದು ತಿಳಿ ಕೋಮಲಾಂಗಿ ॥ ಪ ॥

ಯಾವ ಕಾಲದಿ ನಿನ್ನ ದೇವರ ಬಜನೆಯಮ್ಮ
ನೇಮದಿ ಬಜಿಸಮ್ಮ ತಂಗೀ ॥
ನೀ ನೇಮದಿ ಬಜಿಸಮ್ಮ ತಂಗೀ
ಇದು ಘನವೆಂದು ತಿಳಿ ಮಂಗಲಾಂಗಿ
ಇದು ನಿಜವೆಂದು ತಿಳಿ ಕೋಮಲಾಂಗೀ ॥ ೧ ॥

ಕ್ಷುದ್ರ ಗುಣಗಳನ್ನೆಲ್ಲ ಚಿದ್ರಯಿಸಿ ಹೋಗಲಿ
ಮನ ರುದ್ರಾಕ್ಷಿ ಧರಿಸಮ್ಮ ತಂಗೀ
ನೀ ಮನ ರುದ್ರಾಕ್ಷಿ ಧರಿಸಮ್ಮ ತಂಗೀ
ಮನಾರ ಮುದ್ರದೋಳು ಇರು ಮಂಗಲಾಂಗೀ
ಇದು ನಿಜವೆಂದು ತಿಳಿ ಕೋಮಲಾಂಗೀ ॥ ೨ ॥

ಹಿಂದಿನ ಫಲದಿಂದ ಮುಂದೀನ ರಾಶೆವ್ವ ಅದು
ನಮಗಿಂದೀಗೆ ದೂರಕೀತ ತಂಗೀ
ಅದು ನಮಗಿಂದೀಗೆ ದೊರಕೀತ ತಂಗೀ
ಇದು ಘನವೆಂದು ತಿಳಿ ಮಾಂಗಲಾಂಗಿ
ಇದು ನಿಜವೆಂದು ತಿಳಿ ಕೋಮಲಾಂಗಿ ॥ ೩ ॥

ದೇಶದೊಳಗೇ ನಮ್ಮ ವಾಸುಳ್ಳ ಕಡಕೋಳ
ಈಶ ಮಡಿವಾಳನ ತಂಗೀ
ನಮ್ಮ ಈಶ ಮಡಿವಾಳನ ತಂಗೀ
ಅವರ ದ್ಯಾಸದೋಳು ಇರು ಮಂಗಲಾಂಗೀ
ಇದು ನಿಜವೆಂದು ತಿಳಿ ಕೋಮಲಾಂಗೀ ॥ ೪ ॥

ಪ್ರಣವ ಪಂಚಾಕ್ಷರಿ ಪರಶಿವನ ಗುರುವೀನ ಮನದೊಳು
ನೆನಿಯವ್ವ ತಂಗೀ
ನೀ ಮನದೊಳು ನೆನಿಯವ್ವ ತಂಗೀ
ಇದು ಘನವೆಂದು ತಿಳಿ ಮಂಗಲಾಂಗೀ
ಇದು ನಿಜವೆಂದು ತಿಳಿ ಕೋಮಲಾಂಗೀ ॥ ೫ ॥

– ಶ್ರೀಮತಿ ತುಳಸಮ್ಮ ಬ.ಹೂಗಾರ

***

ಶಿವನಾಮ ನುಡಿಯೊ ದಿನದಿನ

ಶಿವನಾಮ ನುಡಿಯೊ ದಿನದಿನ
ಬವದುಃಖದೂರ ಮಾನವಾ ॥ ಪ ॥

ತನು ನನ್ನದೆನಬೇಡ
ಧನ ನನ್ನದೆನಬೇಡ
ಮಡದಿ ಮಕ್ಕಳು ನನ್ನವರೆನ್ನದೆ
ಶಿವನಾಮ ನುಡಿಯೋ ದಿನದಿನ ॥ ೧ ॥

ರಸಸಂಸಾರ ಹುಡಿಯಾಗಿದೆಯೊ
ಒಂದಿನ ನಂಬಿಸಿ ಕೈಬಿಡುತ್ತಾದೊ
ಅದನಂಬಿ ನೀ ಕೆಡಬ್ಯಾಡೊ
ಶಿವನಾಮ ನುಡಿಯೋ ದಿನದಿನ ॥ ೨ ॥

ಓಡಿ ಶರಣರ ಮಾರ್ಗ ಬಲುಜಲದಿ
ಸಿಕ್ಕಾತು ಎಲ್ಲವು ನಿನಗಲ್ಲಿ
ಪಡೆದುಕೋ ನೀ ಮೋಕ್ಷ ಅದರಲ್ಲಿ ॥ ೩ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

ಓಂ ನಮ ಶಿವಾ ಎಂಬ ನಾಮದ ಬೀಜವ

ಓಂ ನಮ ಶಿವಾ ಎಂಬ ನಾಮದ ಬೀಜವ
ನಾಲಿಗೆ ತುದಿಯಲ್ಲಿ ಬಿತ್ತಿರಯ್ಯ
ಓಂ ನಮ ಶಿವಾ ಎಂಬ ನಾಮದ ಬೀಜವ ॥ ೧ ॥

ಹೃದಯ ಹೊಲವ ಮಾಡಿ ಮನದ ನೇಗಿಲಗೂಡಿ
ಶ್ವಾಸಕೋಸಗಳೆಂಬ ಎರಡೆತ್ತುಗಳ ಹೂಡಿ ॥ ೨ ॥

ಜ್ಞಾನವು ದಯಾವೆಂಬ ಹಗ್ಗ ಕಣ್ಣಿಯ ಮಾಡಿ
ನಿರ್ಮಲವೆಂಬ ಕುಂಟೆ ಹೊಡಿರಯ್ಯ ॥ ೩ ॥

ಮದಮಾಛರವೆಂಬ ಮರಗಳ ಕಡಿಯುತ
ಕಾಮ ಕ್ರೋಧಗಳೆಂಬ ಕಳೆಯನೇ ಕಿತ್ತು ॥ ೪ ॥

ಪಂಚೇಂದ್ರಿಯಗಳೆಂಬ ಮಂಚಿಕೆಯನ್ನು ಹೂಡಿ
ಚಂಚಲವೆಂಬ ಪಕ್ಷಿ ಹೊಡಿಯಿರಯ್ಯ ॥ ೫ ॥

ಉದಯಸ್ತಮಾನಯೆಂಬ ಎರಡು ಕೊಳಗದಲ್ಲಿ
ಆವಿಷವೆಂಬ ರಾಶಿ ಎಳೆಯುತ್ತಿದೆ ॥ ೬ ॥

ಸ್ವಾಮಿ ಶ್ರೀ ಕೂಡಲ ಸಂಗನ ನೆನದರೆ
ಹುಟ್ಟು ಸಾವು ಎಂಬುವದಿಲ್ಲವಯ್ಯ ॥ ೭ ॥

– ಶ್ರೀಮತಿ ಜಗದೇವಿ ಮುಚಳಂಬ

***

ಓಂ ನಮಃ ಶಿವಾಯ

ಓಂ ನಮಃ ಶಿವಾಯ ಹರ ನಾಮ ಶಿವಾಯ
ಓಂ ನಮಃ ಶಿವಾಯ ಶಿವಾಯ ಓಂ ನಮಃ ಶಿವಾಯ ॥ ೧ ॥

ಸಿದ್ದಪೂರ ಸಿದ್ದಯ್ಯಪ್ಪ ನಾಗಲೋಟಿ ಈರಣ್ಣ
ಓಂ ನಮಃ ಶಿವಾಯ ಶಿವಾಯ ಓಂ ನಮಃ ಶಿವಾಯ ॥ ೨ ॥

ನಾಗಲೋಟಿ ಈರಣ್ಣ ಗಂಗನಪಳ್ಳಿಯಣ್ಣ
ಓಂ ನಮಃ ಶಿವಾಯ ಶಿವಾಯ ಓಂ ನಮಃ ಶಿವಾಯ ॥ ೩ ॥

ಗಂಗಪಳ್ಳಿಯಣ್ಣ ಹಂಬಲಿ ಹಳ್ಳಿಯಣ್ಣ
ಓಂ ನಮಃ ಶಿವಾಯ ಶಿವಾಯ ಓಂ ನಮಃ ಶಿವಾಯ ॥ ೪ ॥

ಹಂಬಲಿಹಳ್ಳಯಣ್ಣ ಡೊಂಕಮನ ಬಾಯಣ್ಣ
ಓಂ ನಮಃ ಶಿವಾಯ ಶಿವಾಯ ಓಂ ನಮಃ ಶಿವಾಯ ॥ ೫ ॥

ಡೊಂಕಮನನ ಬಾಯಣ್ಣ ಭೀಮನ ಕೊಳ್ಳಯಣ್ಣ
ಓಂ ನಮಃ ಶಿವಾಯ ಶಿವಾಯ ಓಂ ನಮಃ ಶಿವಾಯ ॥ ೬ ॥

ಭೀಮನ ಕೊಳ್ಳಯಣ್ಣ ಕೈಲಾಸದ ಬಾಗಿಲಣ್ಣ
ಓಂ ನಮಃ ಶಿವಾಯ ಶಿವಾಯ ಓಂ ನಮಃ ಶಿವಾಯ ॥ ೭ ॥

ಕೈಲಾಸದ ಬಾಗಿಲಣ್ಣ ಅಡಕೇಸೂರ ನೋಡಣ್ಣ
ಓಂ ನಮಃ ಶಿವಾಯ ಶಿವಯ ಓಂ ನಮಃ ಶಿವಾಯ ॥ ೮ ॥

ಅಡಕೇಸೂರ ನೋಡಣ್ಣ ಸಿರೇಸೂರ ಗುಡ್ಡನೋಡ
ಓಂ ನಮಃ ಶಿವಾಯ ಶಿವಾಯ ಓಂ ನಮಃ ಶಿವಾಯ ॥ ೯ ॥

ಸಿಕ್ರೇಸೂರ ಗುಡ್ಡ ನೋಡು ಪಂಚಧಾರಿ ಪಲ್ಲಧಾರಿ
ಓಂ ನಮಃ ಶಿವಾಯ ಶಿವಾಯ ಓಂ ನಮಃ ಶಿವಾಯ ॥ ೧೦ ॥

ಪಂಚಧಾರಿ ಪಲ್ಲಧಾರಿ ಮಲ್ಲಯ್ಯನ ಗಿರಿ ನೋಡು
ಓಂ ನಮಃ ಶಿವಾಯ ಶಿವಾಯ ಓಂ ನಮಃ ಶಿವಾಯ ॥ ೧೧ ॥

ಪರ್ವತಗಿರಿ ನೋಡೋ ಸಾಕ್ಷಿ ಗಣಪತಿ ನೋಡೋ
ಓಂ ನಮಃ ಶಿವಾಯ ಶಿವಾಯ ಓಂ ನಮಃ ಶಿವಾಯ ॥ ೧೨ ॥

ಸಾಕ್ಷಿ ಗಣಪತಿ ನೋಡೋ ಬ್ಯಾಳಿ ಬಸವಣ್ಣ ನೋಡೋ
ಓಂ ನಮಃ ಶಿವಾಯ ಶಿವಾಯ ಓಂ ನಮಃ ಶಿವಾಯ ॥ ೧೩ ॥

ಬ್ಯಾಳಿ ಗಣಪತಿ ನೋಡೋ ಬ್ಯಾಳಿ ಬಸವಣ್ಣ ನೋಡೋ
ಓಂ ನಮಃ ಶಿವಾಯ ಓಂ ನಮಃ ಶಿವಾಯ ॥ ೧೪ ॥

ಮಲ್ಲಯ್ಯನ ಗಿರಿ ನೋಡು ಪಾತಾಳ ಗಂಗಿ ನೋಡೋ
ಓಂ ನಮಃ ಶಿವಾಯ ಶಿವಾಯ ಓಂ ನಮಃ ಶಿವಾಯ ॥ ೧೫ ॥

ಪಾತಾಳ ಗಂಗಿ ನೋಡೋ ಕದಳಿಯ ಬನ ನೋಡೋ
ಓಂ ನಮಃ ಶಿವಾಯ ಶಿವಾಯ ಓಂ ನಮಃ ಶಿವಾಯ ॥ ೧೬ ॥

ಕದಳಿಯ ಬನ ನೋಡೋ ಮಹಾದೇವಿ ಘಟ್ಟ ನೋಡೋ
ಓಂ ನಮಃ ಶಿವಾಯ ಶಿವಾಯ ಓಂ ನಮಃ ಶಿವಾಯ ॥ ೧೭ ॥

ಮಹಾದೇವಿ ಘಟ್ಟ ನೋಡೋ ಮಲ್ಲಮ್ಮನ ಕಾಡು ನೋಡೋ
ಓಂ ನಮಃ ಶಿವಾಯ ಶಿವಾಯ ಓಂ ನಮಃ ಶಿವಾಯ ॥ ೧೮ ॥

ಮಲ್ಲಮ್ಮನ ಕಾಡು ನೋಡೋ ಸಿದ್ಧರಾಮ ಕೊಳನೋಡೋ
ಓಂ ನಮಃ ಶಿವಾಯ ಶಿವಾಯ ಓಂ ನಮಃ ಶಿವಾಯ ॥ ೧೯ ॥

ಸಿದ್ಧರಾಮನ ಕೊಳ್ಳ ನೋಡೋ ಮಲ್ಲಯ್ಯನ ಗಿರಿನೋಡೋ
ಓಂ ನಮಃ ಶಿವಾಯ ಶಿವಾಯ ಓಂ ನಮಃ ಶಿವಾಯ ॥ ೧೭ ॥

ಮಲ್ಲಮನ ಗುಡಿ ನೋಡೋ ಬಂಗಾರ ಕಳಸಾ ನೋಡೋ
ಓಂ ನಮಃ ಶಿವಾಯ ಶಿವಾಯಣ್ಣ ಓಂ ನಮಃ ಶಿವಾಯ ॥ ೧೮ ॥

ಎಲ್ಲಾರು ಹೊಂಟಾರ ಶ್ರೀಶೈಲ ನೋಡದುಕ
ಮಲ್ಲಯ್ಯನ ದರುಶನ ಮಾಡುದುಕ ॥ ೧೯ ॥

ಪಾತಾಳ ಗಂಗ್ಯಾಗ ಮುಳುಗದುಕ
ಮಾಡಿದ ಪಾಪ ತೊಳಿಯದುಕ ॥ ೨೦ ॥

ಎಲ್ಲಾರು ಹೊಂಟಾರ ಶ್ರೀಶೈಲಕ
ಮಲ್ಲಯ್ಯನ ದರುಶನ ಮಾಡದುಕ
ಮೂಗತಿ ಹೊಂದದು ಬೇಡುದುಕ ॥ ೨೧ ॥

– ಶ್ರೀಮತಿ ನಾಗಮ್ಮ ಬಾಬುರಾವ ಬೋರಂಪಳ್ಳಿ

***

ಶಿವ ಶಿವ ಅನಬೇಕ್ರಿ ಶಿವಶರಣರೆಲ್ಲ

ಶಿವ ಶಿವ ಅನಬೇಕ್ರಿ ಶಿವಶರಣರೆಲ್ಲ
ಶಿವ ನಾಮ ನುಡಿದಾರ ಎಷ್ಟು ತಪ್ಪಿಲ್ಲ ಜೋ ಜೋ ॥ ಪ ॥

ಸರ್ವರಿಗಿ ಸಲುವವ ತಾನೇ ಕೇವಲ
ಬಸವನಂದು ತೂಗಣು ಬರಿ ಬಾಲನ ತೊಟ್ಟಿಲ ಜೋ ಜೋ॥ ೧ ॥

ಅರವೆಂಬ ಆರುಗುಣ ಹೊಸದಾರೋ ಸೋಲ
ಮರುವಿನ ಮನೆಯೋಳು ಕಟ್ಟಿ ತೊಟ್ಟಿಲ ಜೋ ಜೋ ॥ ೨ ॥

ಅಂತುರಕೆ ಕಟ್ಟ್ಯಾರೋ ಭೂಮಿ ಬಿಟ್ಟಿಲ್ಲ
ಝೋಲಿ ಹೊಡೆದು ತೂಗನು ಬರ್‍ರಿ ಬಾಲನ ತೊಟ್ಟಿಲ ಜೋ ಜೋ ॥೩ ॥

ಬಾರವ್ವ ಬಾಲೇರು ಮುತ್ತೈದೇರೆಲ್ಲ
ತಾರವ್ವ ಬಾಲೇರು ಬೆಳ್ಳಿ ಬಟ್ಟಲ ಜೋ ಜೋ ॥ ೪ ॥

ಅದರೊಳಗ ಹಾಕ್ಯಾರೋ ಸಕ್ಕುರಿ ಹಾಲ
ಬಸವನಂದು ತೂಗನು ಬರ್‍ರಿ ಬಾಲನ ತೊಟ್ಟಿಲ ಜೋ ಜೋ ॥ ೫ ॥

ಅದರೊಳಗ ಹಾಕ್ಯಾರ ಸಕ್ಕುರಿ ಹಾಲ
ರಸ ಹೊನ್ನು ರುಚಿ ಹೊನ್ನು ಕುಡುದು ಕೋಮಲ ಜೋ ಜೋ ॥ ೬ ॥

ತೊಟ್ಟಿಲದಾಗಾಡನು ಬೀಸಿ ಕೈ ಕಾಲ
ಬಸವನಂದು ತೂಗನು ಬರ್‍ರಿ ಬಾಲನ ತೊಟ್ಟಿಲ ಜೋ ಜೋ ॥ ೭ ॥

ಹೆಸರೇನು ಇಡಬೇಕ್ರಿ ಹಿರಿಯರ ಹೆಸರ
ಹಿರಿಯರ ಹೆಸರ ನಮಗ ಗುರುತಿಲ್ಲ ಜೋ ಜೋ ॥ ೮ ॥

ಚನ್ನಬಸವಣ್ಣ ಇನ್ನ ಹುಟ್ಟಿಲ್ಲ
ಹುಟ್ಟ್ಯಾನಂತ ಹೇಳುತಾರ ಇನ್ನ ಹುಟ್ಟಿಲ್ಲ ಜೋ ಜೋ ॥ ೮ ॥

ಮರ್ತ್ಯ ಲೋಕಕ ಸಲಹು ಹುಟ್ಟಿ ಬಂದಾರ
ವೀರಭದ್ರನಂತೆ ಅವತಾರ ತಾಳ್ಯಾರ ಜೋ ಜೋ ॥ ೯ ॥

ಚನ್ನಬಸವನಂತೆ ಓಂ ನುಡದಾರ
ಚನ್ನಬಸವಣ್ಣನಂದು ಹೆಸರಿಡರವ್ವ ಜೋ ಜೋ ॥ ೧೦ ॥

– ಶ್ರೀಮತಿ ಶರಣಮ್ಮ ಎಲಗುಂಡಿ

***

ಶಿವ ಶಿವ ಅನರವ್ವ ಶಿವ ಶರಣೆರೆಲ್ಲ

ಶಿವ ಶಿವ ಅನರೆವ್ವ ಶಿವ ಶರಣೆರೆಲ್ಲ
ಶಿವ ನಾಮ ನುಡಿಲಕ್ಕ ಏನು ತಪ್ಪಿಲ್ಲ
ಸರ್ವರಿಗು ಸಲಹುವನೇ ಶಿವನೇ ಕೇವಲ
ಬಸವನ ನಾಮೆಂದು ತೂಗಿರಿ ಬಾಲನ ತೊಟ್ಟಿಲ ಜೋ ಜೋ ॥ ೧ ॥

ತಾರೆವ್ವ ಕೂಸಿನ ಬೆಳ್ಳಿ ಬಟ್ಟಲ
ಅದರಾಗ ಹಾಕರಿ ಸಕ್ಕರಿ ಹಾಲ
ಸವಿನೆಂದು ಕುಡುಸಾರಿ ಕಂದ ಗೋಪಾಲ
ಕುಡಿದು ತೊಟ್ಟಿಲಿ ಆಡಲಿ ಬೀಸಿ ಕೈ ಕಾಲ ಜೋ ಜೋ ॥ ೨ ॥

ಪಂಚರು ಐವರು ತಂದೀರಿ ನೂಲ
ಆರು ಎಂಬ ಆರಗುಣ ವಸ್ತ್ರದ ಸೋಲ
ಅರವಿನ ಮನೆಯಲ್ಲಿ ಕಟ್ಟಿದ ತೊಟ್ಟಿಲ
ಜೋಲಿ ಹೊಡಿ ಹೊಡಿದು ಅನರೆವ್ವ ಬಾಯಿಲಿ ವಿಠ್ಠಲ ಜೋ ಜೋ ॥೩॥

ಕೂಸಿನ ಹೆಸರೇನು ಇಡಬೇಕರಿ ಮೊದಲ
ಹಿರಿಯರು ಹೇಳುತಾರೀ ಗುರುತೇಯಿಲ್ಲ
ಚನ್ನಬಸವೇಸೂರ ಇನ್ನು ಹುಟ್ಟಿಲ್ಲ
ಹಿಂಗೆ ಜನರು ಅಂತಾರ ಯಾರೂ ಕಂಡಿಲ್ಲ ಜೋ ಜೋ ॥ ೪ ॥

– ಶ್ರೀ ಫಾಳೆಪ್ಪ ಸಿದ್ದಪ್ಪಾ ಗೋರ್ಟಾ

***

೧೪. ತಾತ್ವಿಕ ಹಾಡುಗಳು

ಷಟ್‌ಸ್ಥಲ ಮಹತ್ವ

ಗುರುವಿನ ಕರುಣೆಯ ಜಲದಲಿ ಮಿಂದು
ಪುನೀತನಾದೆನು ನಾನಿಂದು
ಶರಣಸ್ಥಲದ ಪೂಜಾ ಮಂದಿರ
ಅರಸುತ ಹೊರಟಿಹೆ ನಾನಿಂದು ॥ ಗುರುವಿನ ॥ ॥ ೧ ॥

ಲೋಕದ ಸೇವಕನೆನಿಸುತಲೀ
ನೇಮವ ತಪ್ಪದೆ ಬಾಳುವೆ ನಾನು
ಭಕ್ತ ಮಹೇಶ ಪ್ರಸಾದಿಯಾದ
ಪ್ರಾಣಲಿಂಗಿಯು ನಾನಿಂದು ॥ ಗುರುವಿನ ॥ ॥ ೨ ॥

ಶರಣರ ಮಹಿಮೆಯ ಈ ಧರೆ ಪಾವನ
ಸದ್ಭಕ್ತಿಯದೆ ಐಕ್ಯಕೆ ಸಾಧನ
ಗುರುಲಿಂಗ ಜಂಗಮ ಮಂಗಲಧಾಮಾ
ಕೈಗೊಡಿತೆನಗೆ ಷಟ್‌ಸ್ಥಲ ನೇಮಾ ॥ ಗುರುವಿನ ॥ ॥ ೩ ॥

– ಶ್ರೀಮತಿ ಸುಮಿತ್ರಾದೇವಿ ಅಂಗಡಿ

***

ಭಕ್ತ

ಸದಾಶಿವನೆ ನಿನ್ನಧ್ಯಾನ ಎನ್ನ ಹೃದಯದೊಳು ವಾಸವಾಗಿ
ಹರನೆ ನಿಮ್ಮ ಸ್ಮರಣೆಯನ್ನು ಮರೆಯಲಾರೆನು ಗುರುವೆ ॥ ಪ ॥

ನಿನ್ನನಾಮ ಸಹಸ್ರ ನಿನ್ನ ರೂಪ ಅನಂತ
ಜಗವೆಲ್ಲ ತುಂಬಿರುವೆ ಜಗದೀಶ ನೀನೆ ॥ ೧ ॥

ಶರಣರ ರೂಪದಿ ಜಗದೊಳು ಅವತರಿಸುವೆ
ಭಕ್ತರನುದ್ಧರಿಸಲು ಜಾಣನುಡಿಯ ನುಡಿಯುವೆ ॥ ೨ ॥

ಬೇಡಿದ ಭಕ್ತರಿಗೆ ಬೇಡಿದ ವರಗಳ ಕೊಡುವೆ
ಬೋಳೆ ಶಂಕರನೆ ನೀನು ಬಹಳ ಅಂತಃ ಕರುಣಿಯೆ ॥ ೩ ॥

ಏನು ಒಲ್ಲೆವು ಶಿವನೆ ನಿನ್ನ ನಾಮ ಒಂದೆ ಸಾಕು
ನಿನ್ನ ನಾಮ ಒಂದೆ ಸಾಕು ಮುಕ್ತಿಮಾರ್ಗಕೆ ॥ ೪ ॥

ನಿನ್ನ ಧ್ಯಾನವನು ಅರಿತು ಮಾಡುವವರಿಗೆ
ಅರಿವಿನೊಳು ಅರವಾಗಿ ಶಿವ ನಿನ್ನೊಳು ಲಯವಾಗಿ ॥ ೫ ॥
ಶಿವಪುರದೊಳುವಾಸ ಶಿವನೆ ನಿನ್ನದೇಶ
ಬಯಲೊಳು ಬಯಲಾಗಿ ಇರುವೆ ಮೂರುಲೋಕದೊಡೆಯ ಸ್ವಾಮಿ ॥೬॥

– ಶ್ರೀಮತಿ ಸುಮಿತ್ರಾದೇವಿ ಅಂಗಡಿ

***

ಬಿಲ್ವಪತ್ತುರಿಯಾಗಬೇಕಮ್ಮಾ

ಬಿಲ್ವಪತ್ತುರಿಯಾಗಬೇಕಮ್ಮ
ಈ ಶಿವನ ಪೂಜೆಗಿನ್ನು
ಬಿಲ್ವಪತ್ತುರಿಯಾಗಬೇಕಮ್ಮಾ ॥ ಪ ॥

ಬಿಲ್ವಪತ್ತುರಿಯಾಗಬೇಕು
ಮಲ್ಲಿಕಾರ್ಜುನನ ಪೂಜೆಗಿನ್ನು
ಸಲ್ಲಿನೋಳು ಅಲ್ಲಿ ಶಿವನ
ಮೆಲ್ಲ ಮೆಲ್ಲನೆ ವೊಲಿಸಬೇಕು ॥ ೧ ॥

ಮೂರು ದಳದ ಬಿಲ್ವಪತ್ರಿಯು
ಅದನೇರಿ ನೋಡಲು
ಸಾರಿ ಶಿವನ ಕಳೆಯು ತೋರುವುದು
ವಾರಿಜೋದ್ಭವ ತಾನೆಯಾಗಿ ॥ ೨ ॥

ಘೋರ ಪಾತಕ ಮಾರನಾಗಿ
ಘೋರನೆಂಬ ನಾದದೊಳು
ಧೀರನಾಗಿ ನಿಲ್ಲಬೇಕು ॥ ೩ ॥

ಮತ್ತೆ ಸಾಸಿರ ದಳದ ಕಮಲವು
ಅದನೆತ್ತಿ ನೋಡಲು
ಸುತ್ತ ಮುತ್ತಲು ಬೆಳಕು
ಅಂದದಿ ತೋರುವುದು ॥ ೪ ॥

ಸತ್ಯ ಚಿತ್ಯಾನಂದವಾಗಿ
ಕರ್ತವೇದನೆನಿಸಿಕೊಂಡು
ಮರ್ತ್ಯಲೋಕದಲ್ಲಿ ಜನಿಸುವಂತ
ನಿತ್ಯ ನಿರ್ಮಲನಾಗಬೇಕು ॥ ೫ ॥

ಧರಿಯ ಭೋಗವು ಬಯಸಬೇಡಮ್ಮ
ನೀ ಮರೆಯದೆ ಗುರುವಿನಂಘ್ರಿಯ
ಭಜನೆ ಸೇವೆಯನು ಮಾಡಿ
ಕರುಣವನು ಪಡೆಯಬೇಕಮ್ಮ ॥ ೬ ॥

– ಕೃತಿ: ಮುತ್ತು ಮುತ್ತಿನ ತ್ವಾಟ

***

ಕಾಯಕವೇ ಕೈಲಾಸ ಪದ

ಬಡತನದ ಭೂತವನ್ನು ಹೊಡೆದು ಓಡಿಸಲಿಕ್ಕೆ
ದುಡಿಬೇಕ ಮನಮುಟ್ಟಿ ಎಡೆಬಿಡದೆ ।
ದುಡಿತವೇ ದುಡ್ಡಿನ ತಾಯಿ
ದುಡಿದವರು ಪಡೀತಾರ ಸಡಗರ ಸಂಪದಾ ॥ ಪ ॥

ಮಾನವನು ಪ್ರಾಣಪ್ರಿಯ ಪ್ರಾಣಬದುಕು ಬೇಕಾದರ
ಉಣಲಿಕ್ಕೆ ಅನ್ನ ಬೇಕ ಸಂಪೂರ್ಣ
ಅನ್ನಗತ ಪ್ರಾಣವಿದು ಅನ್ನದ ಸಂಗ್ರಹಕ್ಕಾಗಿ
ಚೆನ್ನಾಗಿ ದುಡಿ ದೊರೆಯುವದು ಅನ್ನಾ

ಹಿಡಿದ ಕಾಯಕವನು ಬಿಡಬಾರದ ನಿತ್ಯದಲ್ಲಿ
ದುಡಿಬೇಕ ಪಡಬೇಕ ಶ್ರಮವನ್ನು
ಶ್ರಮದಿಂದ ಸಂಪತ್ತು ಶ್ರಮದಿಂದ ಸೌಭಾಗ್ಯ
ಶ್ರಮದಿಂದ ನಡೆಯುವದು ಜಾಣತನ
ಕಾಯಕವೇ ಕೈಲಾಸಂತ ಪ್ರಿಯದಿಂದ ಹೇಳಿದನು
ಮಹಾನುಭಾವಿಯಾದ ಶ್ರೀ ಬಸವಣ್ಣ ॥

ಕಾಯಕದಿ ನಾಡಿನ ನಾಯಕನು ತಾನಪ್ಪ
ಕಾಯಕವೇ ಜೀವನದ ಸುಖಸಾಧನಾ
ಬಲುಕೋಪ ಆತುರವು ಆಲಸಿಕೆ ಅನಭ್ಯಾಸ
ಚಂಚಲಚಿತ್ತ ದೂರಮಾಡಬೇಕ ಪೂರ್ಣಾ
ಆಲಸ್ಯದ ಸಾಲಿಯಲ್ಲಿ ಖಾಲಿ ಹರಟೆಯನ್ನು ಹಾಕಿ
ಕಾಲಹರಣ ಗೈಯ್ಯುದೆಂಥಾ ಮೂರ್ಖತನ
ಅನ್ಯಾಯದ ಕಾಯಕ ಬಿಟ್ಟು ಚೆನ್ನಾಗಿ ಉದ್ಯೋಗಮಾಡಿ
ಉನ್ನತಿ ಹೊಂದ ಬೇಕ ಎಲ್ಲಾ ಜನಾ
ಕಾಯಕಿಲ್ಲದೆ ತಿರುಗಾಡುವ ಮೈಗಳ್ಳನ ಬಾಳು ಹಾಳು
ಕೈಕಟ್ಟ ಆಗಿ ಪಡತಾನ ವ್ಯಸನಾ ॥

ಚಾಲ:
ಪಶುಪಕ್ಷಿ ಕ್ರಿಮಿ ಕೀಟಾದಿಗಳು ಇಲ್ಲ ಜ್ಞಾನ
ಜ್ಞಾನಹೀನ ಪ್ರಾಣಿಗಳು ಸಹಿತ ದುಡಿಯುವವು ದಿನಾ
ಸುಜ್ಞಾನಿಯಾದವನು ಬಿಡಬೆಕು ಸೋಮಾರಿತನ
ಸೋಮರಿತನದಿಂದ ಸಮಾಜದೋಳು ಅಪಮಾನ
ದುಡಿತವೇ ಧೈರ್ಯದ ಬಂಧು ದೇಹ ರಕ್ಷಣಾ
ಆಳಾಗಿ ದುಡಿದು ಅರಸಾಗಿ ಮಾಡೋ ಭೋಜನಾ

ಪದ್ಯ:
ಕಾಯಕವೆಂದರೆ ಕೆಲಸ ಅರ್ಥಾತ್ ಉದ್ಯೋಗವು
ಉದ್ಯೋಗವೆಂದರೆ ದುಡಿಯುವುದು
ದುಡಿತವೇ ದೇಶೋನ್ನತಿಯ ಮಂತ್ರ
ದುಡಿತವೆ ಜೀವನದ ಯಂತ್ರ ಅಮೃತದ ಕೂಟ ।
ದುಡಿಯದಿರೆ ಊಟ । ಮಹಾಕಾಳಕೂಟ
ತತ್ಕಾರಣ ಕಾಯಕವನ್ನು ಕೈಕೊಳ್ಳಲೇ ಬೇಕು ॥

ಕಾಯಕದಿಂದಲೇ ಅಶನ । ಕಾಯಕದಿಂದಲೇ ವಸನ ।
ಕಾಯಕದಿಂದಲೇ ಭವನ ।
ಕಾಯಕದಿಂದಲೇ ಶಿಕ್ಷಣ । ಕಾಯಕದಿಂದಲೇ ಜ್ಞಾನ ।
ಕಾಯಕದಿಂದಲೇ ಮಾನ ।
ಕಾಯಕದಿಂದಲೇ ರಾಷ್ಟ್ರ । ಕಾಯಕದಿಂದಲೇ ಈಶ ।
ಕಾಯಕದಿಂದಲೇ ಶ್ರೇಷ್ಠ । ಕಾಯಕವೇ ಕೈಲಾಸ ॥

ಏರ:
ಕವಿ ಚಂದ್ರಶೇಖರನ (ಶಿವಲಿಂಗನ) ಸವಿಯಾದ ನುಡಿಕೇಳಿ
ತವಭಕ್ತಿಯಿಂದ ದುಡಿಯೋದು ಚಂದಾ ॥ ದುಡಿತ ॥

– ಹುಲಕುಂದ ಶಿವಲಿಂಗ ಕವಿ
ಕೃತಿ: ಕನ್ನಡ ಗೀ ಗೀ ಪದಗಳು

***

ತನ್ನೊಳು ತಾನು ಆಗಬೇಕು

ಬಸವನ ಮಾತು ತಿಳಿಯಬೇಕಣ್ಣ
ತಿಳಿದರೆ ಶರಣರಾಗಿ ಬಾಳಬೇಕಣ್ಣಾ ॥ ಪ ॥

ಜಾತಿಮತಿಗಳು ಅಳಿಯಬೇಕಣ್ಣ
ಮಾನವರೆಲ್ಲರು ಒಂದೆಂದು ತಿಳಿಯಬೇಕಣ್ಣ
ವಿಷಮ ದ್ವೇಷ ಅಳಿಯಬೇಕು
ಸಮತಾ ನಾಡು ಕಟ್ಟಬೇಕು
ಒಂದೇ ಧರ್ಮದಿ ನಡಿಯಬೆಕು
ನಾಡಾಗ ಶಾಂತಿ ಬಿತ್ತಬೇಕು ॥ ೧ ॥

ಒಬ್ಬ ದೇವನಿಗೆ ಹೊಂದಬೇಕಣ್ಣ
ತನ್ನೊಳಗ ದೇವರ ನೋಡಬೇಕಣ್ಣ
ತೀರ್ಥಕ್ಷೇತ್ರ ಮರೆಯಬೇಕಣ್ಣ
ತನ್ನ ತಾನು ತಿಳಿಯಬೇಕಣ್ಣ
ಭಿನ್ನಭಾವ ಮರೆಯಬೇಕು
ತನ್ನೊಳುತಾನು ಆಗಬೇಕು ॥ ೨ ॥

ಮೈಮುರಿದು ಕಾಯಕ ಮಾಡಬೇಕಣ್ಣ
ಅದರೊಳು ದಾಸೋಹ ನಡಿಸಬೇಕಣ್ಣ
ಕಾಮ ಕ್ರೋಧ ಕೊಳೆಯ ಕಳೆದು
ಲೋಭ ಮೋಹ ಮಲಿನ ತೊಳೆದು
ಮದ ಮತ್ಸರ ಮೊದಲು ಹರಿದು
ಮರವುವೆಂಬ ಮಂಕ ಕಿತ್ತೊಗೆಯಬೇಕಣ್ಣಾ ॥ ೩ ॥

ದಯವೇ ಧರ್ಮದ ಮೂಲ ನೋಡಣ್ಣಾ
ದಯವಿಲ್ಲದ ಧರ್ಮ ಇಲ್ಲವೆಂದ ಬಸವಣ್ಣ
ರಾಗದ್ವೇಷ ದಾರಿ ಮೀರಿ
ಸಕಲಜೀವಿಗೆ ಪ್ರೇಮ ತೋರಿ
ಸಂಸಾರೆಂಬ ಭ್ರಾಂತಿ ಮೀರಿ
ಬಸವಲಿಂಗ ಪಾದಸೇರಣ್ಣಾ ॥ ೪ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

ಪಂಚದ್ಯಾಹಕ ಎಣ್ಣೆ ಹಚ್ಚಿರಿ

ಕಂದನ ಸುರುಗಿ ಸುತ್ತಟಕೆ
ಛಂದದ ಬಿಸಿಲ ಬಂದು
ಕಂದನ ಎದಿಲಿಂಗ ಹೊಳದಾದೆ
ನೀವು ಲಿಂಗಕ್ಕ ಎಣ್ಣಿ ಹಚ್ಚಿರಿ ॥ ೧ ॥

ಪಂಚ ಕಳಶಗಳನು ಹೂಡಿ
ಪಂಚಭೂತಗಳು ಸಾಕ್ಷಿ ಮಾಡಿ
ಪಂಚೇಂದ್ರಿಯಗಳು ಕೈಯೊಳು ಹಿಡಿದು
ಪಂಚದ್ಯಾಹಕ ನೀವು ಎಣ್ಣೆ ಹಚ್ಚಿರಿ ॥ ೨ ॥

ಅಷ್ಟಾವರಣ ಮಣಿಯವ ಹಾಕಿ
ಷಟ್ ಸ್ಥಲದ ಗಣಿಕಿ ಹಿಡಿದು

ಪಂಚಾಚಾರದ ಮುತ್ತೈದೇರು ನೆರದು
ನೀವು ಹಚ್ಚಿರಿ ನೈಯಣ್ಣೆ ॥ ೩ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

ಭಾಗ–೪

೧೫. ಶರಣ ಸ್ಥಳಗಳು

ಕಲ್ಯಾಣದ ಹಾಡು

ಭುವನ ಕಲ್ಯಾಣ ಶಿವನ ಕಲ್ಯಾಣ
ಶಿವಶರಣರ ಅನುಭವದ ಕಲ್ಯಾಣ
ನೋಡಿರಿ ಬಸವನ ಭಕ್ತಿ ಕಲ್ಯಾಣ ॥ ಪ ॥

ಮಾದಾರ ಚನ್ನಯ್ಯ ಮೋಳಿಗಿ ಮಾರಯ್ಯ
ಇರುವ ಭುವನ ಕಲ್ಯಾಣ ಶಿವನ ಕಲ್ಯಾಣ ॥ ೧ ॥

ಸಮಗಾರ ಹರಳಯ್ಯ ಮಡಿವಾಳ ಮಾಚಯ್ಯ
ಇರುವ ಕಲ್ಯಾಣ ಭುವನ ಕಲ್ಯಾಣ ಶಿವನ ಕಲ್ಯಾಣ ॥ ೨ ॥

ಕುಂಬಾರ ಗುಂಡಯ್ಯ ಅಂಬಿಗರ ಚೌಡಯ್ಯ
ಇರುವ ಕಲ್ಯಾಣ ಭುವನ ಕಲ್ಯಾಣ ಶಿವನ ಕಲ್ಯಾಣ ॥ ೩ ॥

ಹಡಪದ ಅಪ್ಪಣ್ಣ ಹೊಡೆಹುಲ್ಲ ಬಂಕಣ್ಣ
ಇರುವ ಕಲ್ಯಾಣ ಭುವನ ಕಲ್ಯಾಣ ಶಿವನ ಕಲ್ಯಾಣ ॥ ೪ ॥

ಬೇಡರ ಕನ್ನಯ್ಯ ಕನ್ನದ ಮಾರಯ್ಯ
ಇರುವ ಕಲ್ಯಾಣ ಭುವನ ಕಲ್ಯಾಣ ಶಿವನ ಕಲ್ಯಾಣ ॥ ೫ ॥

ಕಿನ್ನರಿ ಬ್ರಹ್ಮಯ್ಯ ನುಲಿಯ ಚಂದಯ್ಯ
ಇರುವ ಕಲ್ಯಾಣ ಭುವನ ಕಲ್ಯಾಣ ಶಿವನ ಕಲ್ಯಾಣ ॥ ೬ ॥

ಅಕ್ಕನಾಗಮ್ಮ ಭಕ್ತಿನೀಲಮ್ಮ ಉಡುತಡಿಯ ಮಹಾದೇವಿ
ಇರುವ ಕಲ್ಯಾಣ ಭುವನ ಕಲ್ಯಾಣ ಶಿವನ ಕಲ್ಯಾಣ ॥ ೭ ॥

ಚಿಕ್ಕ ಚೆನ್ನಬಸವ ಸಿದ್ಧರಾಮೇಶ್ವರ ಅಲ್ಲಮಪ್ರಭುದೇವ
ಇರುವ ಕಲ್ಯಾಣ ಭುವನ ಕಲ್ಯಾಣ ಶಿವನ ಕಲ್ಯಾಣ ॥ ೮ ॥

– ಶ್ರೀಮತಿ ಸುಮಿತ್ರಾದೇವಿ ಅಂಗಡಿ
– ಶ್ರೀಮತಿ ಶಶಿಕಲಾ ಗಿರಿ
– ಶ್ರೀ ರಾಮಶೆಟ್ಟಿ ಖಾನಾಪುರೆ

***

ಶಿವನ ಕಲ್ಯಾಣ

ಶಿವನ ಕಲ್ಯಾಣ । ಭುವನ ಕಲ್ಯಾಣ ।
ಶಿವಶರಣರ ಅನುಭವದ ಕಲ್ಯಾಣ ॥ ಪ ॥

ಹರಭಕ್ತ ಹರಳಯ್ಯಾ । ಮಾದರ ಚೆನ್ನಯ್ಯಾ
ಅಂಬಿಗರ ಚೌಡಯ್ಯಾ ಮೆರೆದ ಕಲ್ಯಾಣ ॥ ೧ ॥

ಉಡುತಡಿ ಮಹಾದೇವಿ । ಮಡಿವಾಳ ಮಾಚಯ್ಯ ।
ಹಡಪದ ಅಪ್ಪಯ್ಯ ಮೆರೆದ ಕಲ್ಯಾಣ ॥ ೨ ॥

ಇಳೆಹಾಳ ಬೊಮ್ಮಯ್ಯಾ । ಸೊಡ್ಡಳ ಬಾಚಯ್ಯಾ ।
ಶಿವನಾಗಮಯ್ಯ ಮೆರೆದ ಕಲ್ಯಾಣ ॥ ೩ ॥

ನುಲಿಯ ಚಂದಯ್ಯ । ಡೋಹರ ಕಕ್ಕಯ್ಯ ।
ಮೇದಾರ ಕೇತಯ್ಯಾ ಮೆರೆದ ಕಲ್ಯಾಣ ॥ ೪ ॥

ಕಿನ್ನರಿ ಬ್ರಹ್ಮಯ್ಯಾ । ಕಲಿಕೇರಿ ಬ್ರಹ್ಮಯ್ಯ ।
ಹೂಗಾರ ಮಾದಯ್ಯ ಮೆರೆದ ಕಲ್ಯಾಣ ॥ ೫ ॥

ಗಂಗಮ್ಮಾ ನೀಲಮ್ಮ । ಮುಕ್ತಾಯಿ ಕಲ್ಯಾಣಮ್ಮ ।
ಆಯ್ದಕ್ಕಿ ಲಕ್ಕಮ್ಮ ಮೆರೆದ ಕಲ್ಯಾಣ ॥ ೬ ॥

ಅಲ್ಲಮ ಪ್ರಭುದೇವ ಶಿವಸಿದ್ಧರಾಮಯ್ಯ ।
ಜಂಗಮರೆಲ್ಲರು ಮೆರೆದ ಕಲ್ಯಾಣ ॥ ೭ ॥

– ಶ್ರೀಮತಿ ಪಾರ್ವತಿ ಜೇಮಶೆಟ್ಟಿ
– ಮಹಾರುದ್ರಪ್ಪ ಭೀಮಣ್ಣ, ಮರಕಲ್
– ಪಂಚಯ್ಯಸ್ವಾಮಿ, ಮದರಗಾಂವ
– ಶ್ರೀಮತಿ ರೇಖಾ ರಾಮಶೆಟ್ಟಿ ಕಾಡಾದಿ

***

ಏಳುನೂರೆಪ್ಪತ್ತು

ಬಸವನ ಬಳಗೆಲ್ಲ ಕಲ್ಯಾಣದೊಳಗಿಲ್ಲ
ಕಲ್ಯಾಣ ನಮಗ ದೂರಾಯ್ತು । ಎಲೆಶಿವ
ಬಸವನ ಕಳಿಸು ಧರೆಗೊಮ್ಮೆ ॥ ೧ ॥

ಬಳಗದ ಸಂಖ್ಯೆಯು ಏಳುನೂರೆಪ್ಪತ್ತು
ಉಳದಾರ ಕಲ್ಯಾಣ ಊರಾಗ । ಬಸವನ
ಬಳಿನಿಂತಾರ ಸುಳಿವ ಗಾಳಿಹಾಂಗ ॥ ೨ ॥

ಏಳುನೂರೆಪ್ಪತ್ತು ಅಮರಗಣಂಗಳೆಲ್ಲ
ಅಳದಾರ ವೈರಿಯು ಒಳಗಿನದು । ಅವರೆಲ್ಲ
ಹೊಳದಾರ ಭಕ್ತಿಗಿ ಹೆಸರಾಗಿ ॥ ೩ ॥

ಬಸವಣ್ಣ ಪ್ರಭುದೇವ ಚೆನ್ನಣ್ಣ ಸಿದ್ಧರಾಮ
ಹರಳಯ್ಯ ಚೆನ್ನಯ್ಯ ಕಕ್ಕಯ್ಯ । ಚಂದಯ್ಯ
ಮಾರಯ್ಯ ಬೊಮ್ಮಯ್ಯ ಅವರೆಲ್ಲ ॥ ೪ ॥

ಬಂಕಣ್ಣ ಲೆಂಗಣ್ಣ ಸಿಂಪಿಗ್ಯಾರ ಶಿವಣ್ಣ
ಚೌಡಯ್ಯ ಮಾಚಯ್ಯ ಮಾರಯ್ಯ । ಅವರೆಲ್ಲ
ಬಳ್ಳಿಯ ಕಾಯಾಗಿ ಬೆಳುಗ್ಯಾರ ॥ ೫ ॥

ಕಲ್ಯಾಣ ಊರಾಗ ಬಸವನೆಂಬ ಬಳ್ಳಿಯು
ಬಳ್ಳಿಗೆ ಏಳುನೂರೆಪ್ಪತ್ತು । ಭಾರಾಗಾದೆ
ಉಳಿದಾರ ಬಳ್ಳಿಗಿ ಅವರೆಲ್ಲ ॥ ೬ ॥

ನಾಗಮ್ಮ ನೀಲಮ್ಮ ಗಂಗಮ್ಮ ಕಾಳಮ್ಮ
ಮಾದೇವಿ ಮುಕ್ತಾಯಿ ಕಾಳಮ್ಮ । ದುಗ್ಗಳೆ
ಸತ್ಯಕ್ಕ ನಿಂಬೆಕ್ಕ ಅವರೆಲ್ಲ ॥ ೭ ॥

ಕಾಯಕ ಮಾಡ್ಯಾರ ದಾಸೋಹ ಮಾಡ್ಯಾರ
ಅನುಭವ ಮಂಟಪ ಸೇರ್‍ಯಾರ । ಗಣಂಗಳು
ಅನುಭವಕ ಬಂದದು ಬರಿತಾರ ॥ ೮ ॥

ನಡದ್ಹಾಂಗ ತಾ ನುಡಿದು ನುಡಿದ್ಹಾಂಗ ತಾನಡೆದು
ಎಡಿ ಆಗ್ಯಾರ ಶಿವನ ಪಾದಕ । ಗಣಂಗಳು
ಅಮರತಾ ಆಗಿ ನಾಡಿನಾಗ ॥ ೯ ॥

ಮನಿಯೆಂಬುದು ಕಟ್ಟಿಲ್ಲ ಮನವೆಂಬುದು ಕಟ್ಯಾರ
ಮನೆದಾಗ ಭಕುತಿ ಇಟ್ಟಾರ । ಗಣಂಗಳು
ಕಣ್ಣಾಗಿ ಧರಮ ತೋರ್‍ಯಾರ ॥ ೧೦ ॥

ಆನಿಯಾ ಕಾಲಿಗಿ ಶರಣರಿಗಿ ತಾ ಕಟ್ಟಿಸಿ
ಮನಬಂದ್ಹಾಂಗ ಬಿಜ್ಜಳ ಎಳಸ್ಯಾನ ಗಣಂಗಳ
ಮನವೆಂಬುದು ಆಗ ನೊಂದಾದ
ಅಮರಗಣಂಗಳು ಅಳದಾರ ಕಲ್ಯಾಣ ॥ ೧೧ ॥

– ಶ್ರೀಮತಿ ಗೌರವ್ವ ಕಾಡಾದಿ

***

ಧನ್ಯ ಕಲ್ಯಾಣವೋ

ಕಲ್ಯಾಣಕ ಕಳಶವು ಅನುಭವ ಮಂಟಪವು
ಅದರೊಳಗ ಬಸವಣ್ಣ ಮುಖ್ಯರೊ
ಪ್ರಭುದೇವ ಸ್ವಾಮಿಯು ಮೇಲಿದ್ದರೂ
ಚನ್ನಬಸವಣ್ಣ ಎಡಕ್ಕಿದ್ದರೊ
ಅಲ್ಲಿ ಸಿದ್ಧರಾಮ ಬಲಕ್ಕಿದ್ದರೊ
ಹೀಂಗ ಏಳುನೂರೆಪ್ಪತ್ತು ಅಮರಗಣಂಗಳು
ಲಕ್ಷದಾ ಮ್ಯಾಲ ತೊಂಭತ್ತಾರು ಸಾವಿರಾ ಜಂಗಮರೊ
ಧನ್ಯ ಕಲ್ಯಾಣವೋ ॥ ೧ ॥

ಗಲ್ಲಿಗಲ್ಲಿಯಲ್ಲಾ ಶರಣರು ಕಂಡಾರೊ
ಲಿಂಗ ವಿಭೂತಿ ಅನುಭವವೊ
ಕಾಯಕ ದಾಸೋಹವಲ್ಲಿ ಕಂಡಾದೊ
ಪುಂಡರ ಆಟ ನಡೆಲಿಲ್ಲವೊ
ಅಲ್ಲಿ ಹರಟೆಯ ಮಾತೆಲ್ಲ ನಿಂತಾದೊ
ಹೀಂಗ ಬಸವಣ್ಣನ ಹೆಜ್ಜ್ಯಾಗ ಹೆಜ್ಜೆಯಿಟ್ಟು ಶರಣರು
ಅರುಕೊಟ್ಟ ಗುರುಯೆಂದು ತಿಳದಾರೊ ಹಂಗ ನಡದಾರೊ
ಕಲ್ಯಾಣ ಧನ್ಯವೋ ॥ ೨ ॥

ಮಾದಾರ ಚನ್ನಯ್ಯ ಡೋಹರ ಕಕ್ಕಯ್ಯ
ಸಮಗಾರ ಹರಳಯ್ಯ ನುಲಿಯ ಚಂದಯ್ಯರೊ
ಅಲ್ಲಿ ಗಾಣದ ಕನ್ನಪ್ಪ ಘಟ್ಟಿವಾಳರೊ

ಮಡಿವಾಳ ಮಾಚಿದೇವ ಅಂಬಿಗರ ಚೌಡಯ್ಯ ಕಡಕಿದ್ದರೊ
ದಸರಯ್ಯ ನನ್ನಯ್ಯ ಚಿಕ್ಕಯ್ಯರೊ
ಸತ್ಯಣ್ಣ ಮಂಚಣ್ಣ ಭೋಗಣ್ಣರೊ
ಹೀಂಗಾ ಸುರಗಿ ಚೌಡಯ್ಯ ಮುಖ್ಯರೊ
ಕಲ್ಯಾಣ ಧನ್ಯವೋ ॥ ೩ ॥

ಅಗ್ಗವಣಿ ಹಂಪಯ್ಯ ಹೊನ್ನಯ ಅಜಗಣ್ಣರೊ
ನಾಚಯ್ಯ ಅಪ್ಪಯ್ಯ ಅಮುಗಿದೇವರೊ
ಉಗ್ಗಡಿ ಸೋಗಬ್ಬಿದೇವಾ ಉಪ್ಪರಗುಡಿ ಸೋವಿದೇವರೊ
ಅರಿವಿನ ಮಾರಯ್ಯ ಅವಸರದ ರೇಕಯ್ಯ
ಉರಿಲಿಂಗದೇವ, ಉರಿಲಿಂಗ ಪೆದ್ದಿಯೊ
ಹೀಂಗ ಚಿಕ್ಕಣ್ಣ ಚೆನ್ನಣ್ಣ ಚಲುವಾರೊ
ಕಲ್ಯಾಣ ಧನ್ಯವೋ ॥ ೪ ॥

ಕೋಲಶಾಂತಯ್ಯ ಗುಪ್ತ ಮಂಚಣ್ಣ ಒಕ್ಕಲಿಗ ಮುದ್ದಣ್ಣರೊ
ಗುಪ್ತಮಂಚಣ್ಣ ಗಜೇಶ ಮಸಣಯ್ಯರೊ
ಏಕಾಂತ ರಾಮಯ್ಯ ಕೇತಯ್ಯ ಶಾಂತಯ್ಯರೊ
ಕೀಲಾರ ಭೀಮಣ್ಣ ಕಲಕೇತಯ್ಯರೊ
ಗುರುಪುರದ ಮಲ್ಲಯ್ಯ ಪುರದ ನಾಗಣ್ಣಾ
ನಿಜಗುಣಯೋಗಿ ಗುರುಭಕ್ತಯ್ಯರೊ
ಕಲ್ಯಾಣ ಧನ್ಯವೋ ॥ ೫ ॥

ಕಂಬದ ಮಾರಯ್ಯ ಕನ್ನದ ಮಾರಯ್ಯ ಗಾವುದಿ ಮಾಚಯ್ಯರೊ
ತುರುಗಾಹಿ ರಾಮಣ್ಣ ತೆಲುಗೇಶ ಮಸಣರೊ
ಢಕ್ಕೆಯ ಬೊಮ್ಮಯ್ಯ ಚಂದಿಮರಸರೊ
ದಾಸೋಹದ ಸಂಗಣ್ಣ ದಶಗಣದ ಸಿಂಗಣ್ಣ ಮುಖ್ಯರೊ
ಬಾಹೂರ ಬೊಮ್ಮಣ್ಣ ಬಾಲಬೊಮ್ಮಣ್ಣ ಬಾಲಸಂಗಣ್ಣರೊ
ಬಹುರೂಪಿ ಚೌಡಯ್ಯ ಬಹು ಆಟ ಆಡಿದರೊ
ಕಲ್ಯಾಣ ಧನ್ಯವೋ ॥ ೬ ॥

ಬಂಡಿಹೋರಿ ಬ್ರಹ್ಮಯ್ಯ ಭಂಡಾರಿ ಶಾಂತಯ್ಯ
ಸುಜ್ಞಾನಿ ನನ್ನಿದೇವ ಹೂಗಾರ ಮಾದಣ್ಣರೊ
ಕಲಿಕಾಮ ಗುರುಲಿಂಗ ಕೂಲಿಯ ಮಾರಯ್ಯ
ನಾಗೂರ ಬೊಮ್ಮಯ್ಯ ಹಿಪ್ಪರಿಗಿ ಕಲ್ಲಯ್ಯ
ಕೊಪ್ಪಿದೇವ ಧರಣಿದೇವ ಮೌಳಿದೇವ ಮುಖ್ಯರೊ
ಶಿವಯೋಗಿ ದೇವಯ್ಯ ಗುರುಭಕ್ತಯ್ಯ ಶರಣರೊ
ಕಲ್ಯಾಣ ಧನ್ಯವೋ ॥ ೭ ॥

ಕವ್ರುಲೆಯ ಬ್ರಹ್ಮಯ್ಯ ಜಕ್ಕೇರ ಬೊಮ್ಮಯ್ಯ
ಲಿಂಗರಾಯಣ್ಣ ಸಿಂಗಬೊಪ್ಪಯ್ಯ ಜೀರಯ್ಯ
ಮುತ್ತಿನ ಮಾಯಣ್ಣ ಕಸ್ತೂರಿ ಉದ್ಘಟಯ್ಯ
ಕೋಠಾರ ಸೋಮೇಶ್ವರ ತಂಗಟೂರ ಮಾರಯ್ಯ
ಮೊರಟದ ಬಂಕಿದೇವ ಶಿವಕಿಂಕರಯ್ಯ
ಮಲ್ಲಿನಾಥ ಭೋಗಿದೇವ ಬಲ್ಲಹರಿದೇವ ಮುಖ್ಯರೊ
ಕಲ್ಯಾಣ ಧನ್ಯವ್ರೋ ॥ ೮ ॥

ರಾಚಮಲ್ಲಯ್ಯ ಜಕ್ಕಿಯಬೊಮ್ಮಯ್ಯ ಲಕ್ಕಿದೇವರಲ್ಲರೊ
ಶಿವರಾತ್ರಿ ಸಂಗಯ್ಯ ಶ್ರೀಗಿರಿಯಯ್ಯ ಗೋಡೆ ಮಲ್ಲಯ್ಯ
ಬಾಡಗಿಯ ದಾಸಯ್ಯ ಸಿಂಗಿಬೊಪ್ಪಯ್ಯ ಲಿಂಗದೇವ
ಮಹಾಕಾಳಿದೇವ ಧವಳದೇವ ಸಂಕಿದೇವ
ಮಹಾಬಲ ಚಾಡಿದೇವ ಗೋಡೆ ಮಲ್ಲಯ್ಯ
ಚವರದ ಚಕ್ಕಿದೇವ ಶೂಲದ ಬೊಮ್ಮಿದೇವ ಶೀಲವಂತರಯ್ಯ
ಕಲ್ಯಾಣ ಧನ್ಯವ್ರೋ ॥ ೯ ॥

ಹೆಮ್ಮೆ ಸಂಗಯ್ಯ ರಾಜನದ ಬೊಮ್ಮಿದೇವಾ
ನಿವಾಳದ ಬೊಮ್ಮಿದೇವ ಶೂಲದ ಬೊಮ್ಮಿದೇವಾ
ಚವರದ ಚಕ್ಕಿದೇವ ಜಕ್ಕಿಯರ ಬೊಮ್ಮಿದೇವಾ
ನೇಮದ ಬ್ರಹ್ಮಯ್ಯ ಶೂಲದ ಬ್ರಹ್ಮಯ್ಯ
ಧ್ಯಾನದ ಬ್ರಹ್ಮಯ್ಯ ಸಪ್ಪೆಯಲ್ಲಮ ದೇವಾ
ಆದಿಭಟ್ಟ ರೇಚಿತಂದೆ ರೇವಯ್ಯ ಹಾವಿನ ಹಾಳಕಲ್ಲಯ್ಯರೊ
ಕಲ್ಯಾಣ ಧನ್ಯವ್ರೋ ॥ ೧೦ ॥

ಉಗ್ರಾಣದ ರುದ್ರಯ್ಯ ಮುರಿಯ ಚಂದಯ್ಯ
ಬಾಲಲಿಂಗಣ್ಣ ಚಿಕ್ಕಮಾದಣ್ಣ ಕಲಿನಾಥಯ್ಯ
ಯೋಗಿದೇವ ಉತ್ತಮದೇವ ಮಾಯಿದೇವ ಸೋಮಿದೇವ
ಕಾಯಿದೇವ ವೀರದೇವ ಅಂಕದೇವಯ್ಯರೊ
ರೇವಣಸಿದ್ಧಯ್ಯ ಚಕ್ಕುಲಿ ನಾಗಯ್ಯ
ಕಂಕರಿ ಕಕ್ಕಯ್ಯ ಅರವಂಟಿಗೆಯ ಮಾರಯ್ಯ ಮೆರದಾರೊ
ಕಲ್ಯಾಣಧನ್ಯವ್ರೋ ॥ ೧೧ ॥

ತಂಗಟೂರ ಮಾರಯ್ಯ ಸತ್ತಿಗೆಯ ಮಾರಯ್ಯ
ನಗೆಯ ಮಾರಯ್ಯ ತಂಡೇಶ ಮಾರಯ್ಯ
ತೊಳಲಿ ಮಾರಯ್ಯ ಕೋಡಗದ ಮಾರಯ್ಯ
ಹೆಂಡದ ಮಾರಯ್ಯ ಗೋರಾಂಟ ಮಾರಯ್ಯ

ರಕ್ಕಸ ಮಾರಯ್ಯ ಕಡವೂರ ಕರಿಯಯ್ಯ
ಧರಣೀದೇವ ತುಪ್ಪದಯ್ಯದೇವ ದೇವರಾಗಿಹರೊ
ಕಲ್ಯಾಣ ಧನ್ಯವೋ ॥ ೧೨ ॥

ಸಂಗಮದೇವರು ಶಕ್ತಿ ಮುಕ್ತಿಯರು ಉತ್ತಣ್ಣ ಸಪ್ಪಣ್ಣ
ಹಡಪದ ಹಂಪಯ್ಯ ಕುರುಬರ ಬೀರಯ್ಯ
ಈಡಿಗರ ಗುರುವಯ್ಯ ತುರುಕರ ಪೀರಯ್ಯ
ಕಟ್ಟಿಗೆ ಸಂಗಯ್ಯ ಹೊಲೇರ ಹೊನ್ನಯ್ಯ
ಇಂಡೆಯ ಶಾಂತಯ್ಯ ಕೋಲ ಚಂಡೇಶಯ್ಯ
ಕಲಿಕಂಬ ಕಂಬಿಕಾರ ಹೊನ್ನಯ್ಯ ಹೊನ್ನಾಗಿಹರೊ
ಕಲ್ಯಾಣ ಧನ್ಯವೋ ॥ ೧೩ ॥

ಮೋಳಿಗೆಯ ಮಾರಯ್ಯ ಕನ್ನದ ಬ್ರಹ್ಮಯ್ಯ
ಢಕ್ಕೆಯ ಮಾರಿತಂದೆ ಸಕಲೇಶ ಮಾದರಸ
ಜೇಡರ ದಾಸಿಮಯ್ಯ ಶಂಕರ ದಾಸಿಮಯ್ಯ
ಮುಗ್ಧ ಸಂಗಯ್ಯ ಕುಂಬಾರ ಗುಂಡಯ್ಯ
ಗೊಗ್ಗಯ್ಯ ಬ್ರಹ್ಮಯ್ಯ ಶಿವನಾಗಯ್ಯ
ಮುಸುಟಿಯ ಚೌಡಯ್ಯ ಪ್ರಭುದೇವರು ಪ್ರಭುವಾಗಿಹರೊ
ಕಲ್ಯಾಣ ಧನ್ಯವೋ ॥ ೧೪ ॥

ಗಾಣದ ಕನ್ನಪ್ಪ ತೆಲುಗು ಬೊಮ್ಮಯ್ಯ
ಆದಯ್ಯ ಆನಂದಯ್ಯ ಪಂಡಿತಾರಾಧ್ಯರೊ
ಕಪ್ಪಡಿ ರೇವಪ್ಪ ಈಡಿಗರ ಕೊಂಡಯ್ಯ
ಕುರುಬರ ಮಾಕಯ್ಯ ವಡ್ಡರ ಸಂಗಪ್ಪ
ಒಡ್ಡರ ತಿಮ್ಮಯ್ಯ ಕುಟುಗ್ರ ಸಂಗಪ್ಪ
ಪ್ರಹರಿಯ ಮಾರಣ್ಣ ಶೆಟಗಾರ ಪುಟ್ಟಯ್ಯರೊ
ಕಲ್ಯಾಣ ಧನ್ಯವೋ ॥ ೧೫ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

ಕಲ್ಯಾಣ ಶರಣರು

ಕಲ್ಯಾಣ ಕರೆತಿದೆ ಕಲ್ಯಾಣ
ಗುರು ಬಸವಣ್ಣನ ಕಲ್ಯಾಣ
ಶರಣರಾಳಿದ ಕಲ್ಯಾಣ
ವಿಶ್ವಕೆ ಬಯಸುತ ಕಲ್ಯಾಣ ॥ ೧ ॥

ಭಾರತ ಮಾತೆಯ ಮುಕುಟ ಕಾಶ್ಮೀರ
ಪಾವನ ಪಾದವು ಕನ್ಯಾಕುಮಾರಿ
ದೇಶ ವಿದೇಶದ ಮೂಲಗಳಿಂದ
ಶರಣರ ಕರೆದಿದೆ ಕಲ್ಯಾಣ ॥ ೨ ॥

ಗುರು ಬಸವಣ್ಣನ ಪ್ರಭೆಯನು ಬೆಳಗಲು
ಪ್ರಣತೆಯಾಯಿತು ಕಲ್ಯಾಣ
ಸತ್ಯದ ಶೋಧಕ ಸಾಧಕರೆಲ್ಲರ
ಹರವಿನ ನೆಲೆಯಾಯ್ತು ಕಲ್ಯಾಣ ॥ ೩ ॥

ಕಾಯಕವೇ ಕೈಲಾಸವೆಂದು
ಸಂದೇಶ ಸಾರಿತು ಕಲ್ಯಾಣ
ದಯವೇ ಧರ್ಮದ ಮೂಲವೆಂದು
ಪ್ರೇಮವ ಮೆರೆದ ಕಲ್ಯಾಣ ॥ ೪ ॥

ನಾಡಬಲ್ಲಿದರೆಲ್ಲಾ ಕೂಡಿದರೆಂದು
ಸೂಡು ಕಟ್ಟಿದರು ವಚನಗಳಾ
ದೇವನೊಬ್ಬನೆ ತಂದೆ ಮನುಜರೆಲ್ಲರು ಒಂದೆ
ಸಮತೆಯ ಸಾರಿತು ಕಲ್ಯಾಣ ॥ ೫ ॥

ಅಲ್ಲಮ ಪ್ರಭುದೇವ ಅಕ್ಕಮಹಾದೇವಿ
ಚಿನ್ಮಯ ಜ್ಞಾನಿ ಚೆನ್ನಬಸವಣ್ಣ
ಸಿದ್ಧರಾಮೇಶ್ವರ ಮಡಿವಾಳ ಮಾಚಯ್ಯ
ಮಹಾಮನೆ ಒಂದಿದ್ದ ಕಲ್ಯಾಣ ॥ ೬ ॥

ಹರಳಯ್ಯ ಮಧುವಯ್ಯ
ಮೋಳಿಗೆ ಮಾರಯ್ಯ
ನೀಲಮ್ಮ ನಾಗಮ್ಮ ಶರಣೆಯರು
ಅಂಬಿಗರ ಚೌಡಯ್ಯ ಮೇದರ ಕೇತಯ್ಯ
ಒಕ್ಕಲಿಗ ಮುದ್ದಣ್ಣನ ಕಲ್ಯಾಣ ॥ ೭ ॥

ಅನುಭವ ಮಂಟಪ ರಚಿಸಿದರೆಂದು
ಅನುಭವ ಗೀತೆಯ ಹಾಡಲಿ ಎಂದು
ವಚನ ಪುಷ್ಪಗಳ ಬಂಡನು ಸವಿಯಲು
ಧಾವಿಸಿ ಬಂದಿತು ಶರಣರ ದಂಡು ॥ ೮ ॥

ಬನ್ನಿರಿ ಶರಣರೆ ಬಸವಕಲ್ಯಾಣಕ್ಕೆ
ಬಸವ ಮಹಾಮನೆ ಕಟ್ಟುವ ಬನ್ನಿ
ತನು ಮನ ಧನಗಳ ಧಾರೆಯನೆರೆದು
ನವಕಲ್ಯಾಣ ನಿರ್ಮಿಸ ಬನ್ನಿ ॥ ೯ ॥

ಕಲ್ಯಾಣ ಕರವಾದಿ ನಲಿಯುವ ಬನ್ನಿ
ಕ್ರಾಂತಿ ಗೀತೆಯ ಹಾಡುವ ಬನ್ನಿ
ಶರಣರ ಋಣವನ್ನು ತೀರಿಸ ಬನ್ನಿ
ಬಸವಾತ್ಮಜಯ ಚೆನ್ನಮಿದಿಯೋ ॥ ೧೦ ॥

– ಶ್ರೀಮತಿ ವೈಜನಾಥ ಎಸ್.ಹಲಬರ್ಗಿ

***

ಕಲ್ಯಾಣದ ಕತೆಯು

ಕಲ್ಯಾಣ ಊರಾಗಿನ ಹಕ್ಕಿಯು ಹಾರಿ
ಅನುಭವಮಂಟಪದ ಗ್ವಾಡಿ ಮ್ಯಾಲ ಕುಂತು
ಕಲ್ಯಾಣ ಕತೆಯು ಹಾಡ್ಯಾಡಿ ಹೇಳಿತು
ಹೀಂಗ ಚಿತ್ತಿಟ್ಟು ಕೇಳಿರಿ ಜನರೆಲ್ಲಾ ನೀವು ಜೋ ಜೋ ॥ ೧ ॥

ಹಕ್ಕಿಯ ಹಣಿಮ್ಯಾಲ ವಿಭೂತಿ ಧಾರಿ
ಹಕ್ಕಿಯ ಕೊರಳಾಗ ಲಿಂಗದ ಭಾರಿ
ಹಕ್ಕಿಯ ಬಾಯಾಗ ವಚನದ ಸಿರಿ
ಹೀಂಗಾ ಹಕ್ಕಿಯ ಹಾಡ್ಯಾದ ಸತ್ಯಶರಣರ ಕತೆಯು ಜೋ ಜೋ ॥ ೨ ॥

ಸಂಗಮನಾಥನ ಶಿಶುಮಗ ಬಂದು
ಕಲ್ಯಾಣ ಊರಿಗಿ ಪ್ರಧಾನಿ ಅಂದು
ಕಲ್ಯಾಣ ಕಟ್ಟ್ಯಾನ ಭಕ್ತೀಲಿ ಚಂದ
ಹಿಂಗಾ ಮುಂದಕ್ಕ ಏನಾಯ್ತು ಕೇಳಿರಿ ನೀವಾ ಜೋ ಜೋ ॥ ೩ ॥

ಕಲ್ಯಾಣ ಊರಾನ ಗಲ್ಲಿ ಗಲ್ಲ್ಯಾಗ
ಸಾಲ ಹತ್ತ್ಯಾವ ಶರಣರದು ಅಲ್ಲಿ
ಓಂ ನಮಃ ಶಿವಾಯೆಂದು ನುಡದಾರ ಅಲ್ಲಿ
ಶಿವನೇ ಬಂದು ಉಳದಾನ ಖುಷಿಯಿಂದ ಅಲ್ಲಿ ಜೋ ಜೋ ॥ ೪ ॥

ಬಂದವರು ಶರಣರು ಆಗ್ಯಾರ ಅಲ್ಲಿ
ಕೊರಳಾಗ ಲಿಂಗವು ಧರಸ್ಯಾರ ಭಕ್ತೀಲಿ
ಕಾಯಕ ನಡಸ್ಯಾರ ಧರುಮದಿಂದಲ್ಲಿ
ಹೀಂಗಾ ದಾಸೋಹ ನಡಸ್ಯಾರ ಮನವಿಟ್ಟು ಅಲ್ಲಿ ಜೋ ಜೋ ॥ ೫ ॥

ಸತ್ಯದ ಮಾತು ಆಡ್ಯಾರ ಅವರು
ಮಿಥ್ಯವೆಂಬುದು ದೂರಿಟ್ಟು ಅವರು
ಹರಟೆಯಂತು ಹೊಡಿಲಿಲ್ಲ ಅವರು
ಹೀಂಗಾ ಮಾತಾಡಿ ಮೌನಿ ಅನಸ್ಯಾರ ಅವರು ಜೋ ಜೋ ॥ ೬ ॥

ಅಷ್ಟಾವರಣ ದ್ಯಾಹವ ಮಾಡಿ
ಪಂಚಾಚಾರ ಪ್ರಾಣವ ಮಾಡಿ
ಷಟ್‌ಸ್ಥಲ ಆತ್ಮವ ಮಾಡಿ
ಹೀಂಗಾ ಶರಣರು ಆಗ್ಯಾರ ಶಿವಗಿಂತ ಹೆಚ್ಚು ಜೋ ಜೋ ॥ ೭ ॥

ತ್ರಿಪುರಾಂತ ಕೆರಿಮ್ಯಾಲ ಮಂಟಪ ಕಟ್ಟಿ
ಅನುಭವ ಮಂಟಪ ಎಂದದಕ ಹೆಸರಿಟ್ಟಿ
ಜಾತಿಮತ ಪಂಥ ಎಲ್ಲವೂ ದೂರಿಟ್ಟಿ
ಹೀಂಗ ಕುಂತವರು ಆಗ್ಯಾರ ಅನುಭಾವಿ ಗಟ್ಟಿ ಜೋ ಜೋ ॥ ೮ ॥

ಏಳು ನೂರೆಪ್ಪತ್ತು ಅಮರಗಣಗಳು
ಲಕ್ಷದ ತೊಂಬತ್ತಾರು ಸಾವಿರ ಜಂಗಮರು
ಹೀಂಗಾ ಮೋಕ್ಷವ ಪಡದಾರ ಕಲ್ಯಾಣ ಭೂಮ್ಯಾಗ ಜೋ ಜೋ ॥ ೯ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜಿಮಶೆಟ್ಟಿ,
ಶೀಲಾ ಕೋಣೇನ, ಮಹಾದೇವಿ ಕುಂಬಾರ

***

ಎರಡು ಕೈಗೋಳು ಜೋಡಿಸಿ

ಎರಡು ಕೈಗೋಳು ಜೋಡಿಸಿ ವಿನಯಲಿಂದೆ ಶಿರಬಾಗಿಸಿ
ಕಲ್ಯಾಣೆಂಬುದು ಕೈಲಾಸ ಆಲ್ಲಿ ಒಬ್ಬ ಶಿವನೇ ಬಸವೇಶ ॥ ೧ ॥

ಸಂಸಾರವೆಂಬದು ಸುಖವಿಲ್ಲ ಕಷ್ಟ ನಮಗೆ ದೊರಿತಿಲ್ಲ
ಶಿವ ಶಿವ ಎಂದರೆ ಭಯವಿಲ್ಲ ಹಸನ ಬಯಲಾಗಿ ಹೊಗಿತೋ ಬಡತನ
॥ ೨ ॥

ಲಿಂಗನೆಂಬುದು ಗೋತ್ತಿಲ್ಲ ಆತ್ಮಲಿಂಗ ಕಳೆದೆಲ್ಲಾ
ಮಾತ್ಮಾ ರಾಜರು ನಿಂತಿದರು ಕಲ್ಯಾಣೆಂಬುದು ಕಾಣುವುದು ॥ ೩ ॥

– ಶ್ರೀಮತಿ ವಿದ್ಯಾವತಿ ಲಾಧಾ

***

ಜಯ ಕಲ್ಯಾಣಕೆ

ಜಯ ಕಲ್ಯಾಣಕೆ ಜಯ ಕಲ್ಯಾಣಕೆ ಜಯ ಹೋ ॥ ಪ ॥

ಜಯಗೀತೆ ಹಾಡಿ ಜನರೆಲ್ಲ ಕೂಡಿ
ಶರಣರ ಹಾಡುಪಾಡಿ ಶಿವಶರಣರ ಹಾಡಪಾಡಿ ॥ ೧ ॥

ಜಯವಾಯಿತೋ ಕಲ್ಯಾಣ ನಮಗಾಯಿತೋ ಕಲ್ಯಾಣ
ಕಲ್ಯಾಣ ಪಟ್ಟಣವಾಯಿತೋ ॥ ೨ ॥

ಈ ಊರ ಅಲ್ಲಮ ಪ್ರಭುದೇವ ಮೆರದಂಥ ಕಲ್ಯಾಣ ನಾಡೋ
ಶಿವ ಮೆರದಂಥ ಕಲ್ಯಾಣ ನಾಡೋ ॥ ೩ ॥

ಮಧುವಯ್ಯ ಹರಳಯ್ಯ ಉಭಯರ ಕೂಡಿ ಜಾತ್ರಿಗಿ ಸಾವನ್ನ ಹೂಡಿ
ಶೀಲವರ ಒಟ್ಟಾಗಿ ಕೂಡಿ ತೋರಿಸಿದಾರೋ ಶರಣರ ಕಲ್ಯಾಣ ನಾಡೋ ॥ ೪ ॥

ಭಕ್ತಿಯ ಭಾಂಡರು ಬಸವಣ್ಣನಿದ್ದರೂ ಬರದಂಥ ಕಲ್ಯಾಣ ನಾಡೋ
ದೇವಾ ಮೆರದಂಥ ಕಲ್ಯಾಣ ನಾಡೋ ಶಿವ ಮೆರದಂಥ ಕಲ್ಯಾಣ ನಾಡೋ ॥೫ ॥

– ಶ್ರೀಮತಿ ಲಲಿತಾ ಹಾಗೂ ಶ್ರೀಮತಿ ನೀಲಮ್ಮಾ ಲಾಧಾ

***

ಕಲ್ಯಾಣ

ಖಾಯಾಪೂರ ಕಲ್ಯಾಣ ಆತ್ಮರಾಜ ಬಸವಣ್ಣ
ಇಲ್ಲಿ ಐತಿ ಹೋಗುನು ಬರತೀರೇನ
ಭಕ್ತಿ ಎಂಬು ಮಾರ್ಗ ಹೋಗೇತಿ ಮುಕ್ತಿ ಊರಾಗ
ಅಲ್ಲಿ ಆನಂದನೆಂಬು ಅಕ್ಕನಾಗಮ್ಮ
ಆಕಿನ ನೋಡಿ ಚಿತ್ತ ಆತ ಸುಮ್ಮ
ನಾದ ಕೇಳಹತ್ತಿತ ಓಂ ಬ್ರಹ್ಮ ಬಸವ ನಾಮ
ನಾದ ಬಿಂದು ಪಟ್ಟಣ ಕಾಣುತಾದ ಕಲ್ಯಾಣ ॥ ೧ ॥

ಎಂಟು ಆನಿ ಕಟ್ಯಾರಲ್ಲಿ
ಭಂಟ ಹುಲಿನ ಹಾಕ್ಯಾರ ಬಲಿ
ನೋಡಿ ನಾನು ಆದೇನು ಹುಚ್ಚ ಪ್ಯಾಲಿ
ಕಾಮಕ್ರೋಧ ಚೋರರನ್ನ ಹೊರಿಸ್ಯಾರ ಕಲ್ಲು ಮಣ್ಣ
ಪಂಚಭೂತ ಅವರ ಮನಿಯಾಗ ಕೇಳತಾವ
ಅವರು ಹೇಳಿದ್ಹಾಂಗ
ಯಾವತ್ತು ಅದಾನು ಸ್ವಯಂಭು ಲಿಂಗ ಅವರ ಮ್ಯಾಗ
ಸತ್ಯವಾದ ಶರಣರು ನಿತ್ಯ ಮಾಡತಾರ ಧ್ಯಾನ ॥ ೨ ॥

ಮನಾ ಎಂಬು ಶೇಷಣ ಹಾಕ್ಯಾರ ಮುಗುದಾಣ
ವಿಷದ ಹಲ್ಲ ತಗದು ಹಾಕ್ಯಾರ ಬಂಧಿಖಾನ
ಅವರ ಮ್ಯಾಲ ಕಾವಲದಾರ ಸದಾ ಗುರುಮಂತ್ರ
ಹಾಸಿಗಿ ಹಾಕ್ಯಾರ ಯೋಗಿ ಜನ
ಅದರ ಮ್ಯಾಲ ಮಲಗತಾರ ಶೇಷಣ
ನಾಮ ಪಡಿತಾರ ನಾಗಭೂಷಣ
ಯಾವತ್ತು ಜ್ಯೋತಿ ರತನ
ಅಲ್ಲಿಲ್ಲೊ ಕತ್ತಲಿ ಖೂನ ॥ ೩ ॥

ಏಳು ಸುತ್ತಿನ ಕೋಟಿ
ಖಾಯಾಪೂರ ಕಲ್ಯಾಣ ಪ್ಯಾಟಿ
ಒಂಭತ್ತು ಬಾಗಿಲ ಹತ್ತನೆ ಲಿಂಗಸ್ಥಾನ
ಸ್ಥೂಲ ದೇಹ ಸೂಕ್ಷ್ಮ ದೇಹ ಕಾರಣ ದೇಹ
ಮಹಾಕಾರಣ ದಾಟಿದರ
ಒಳಗೆ ಅಮೃತ ಕಾಮಧೇನು
ಕರೆವದು ಯಾವತ್ತ

ಗಂಗಾ–ಯಮುನಾ–ಸರಸ್ವತಿ
ಸಂಗಮನಾಥ ಅಲ್ಲಿ ತೀರ್ಥ
ಪಾತಾಳ ಗಂಗ್ಯಾಗ ಮಾಡೊ ಸ್ನಾನ
ಚೋಳಂಗ್ಯಾಗಿ ಹಿಡಿಯೋ ಚರಣ ॥ ೪ ॥

ಸೃಷ್ಟಿಯೊಳಗ ಸಿರಗುರ ಗ್ರಾಮ
ಇರುವುದು ಬಹು ಪ್ರೇಮ
ದೇವರಲ್ಲಿ ಸದ್ಗುರು ಪರಬ್ರಹ್ಮ
ಕಲ್ಮೇಶ ಜ್ಞಾನದಿಂದ ಹೇಳಿದಾರೊ ಇದರ ಭೇದ
ಅನುಭಾವಿಗಳಿಗೆ ಅಮೃತ ಹಾಲ
ಅಜ್ಞಾನಿಗಳಿಗೆ ತಿಳಿಯೋದಿಲ್ಲ
ಸುಜ್ಞಾನ ಮಾರ್ಗ ಇದರ ಹೊಲ್ಲಾ ಜ್ಞಾನ ಮೂಲ
ಮನಸಿಟ್ಟು ಮಾಡೋ ಧ್ಯಾನ
ಕಳಕೊಂಡಿ ಕಾಮಧೇನು ॥ ೫ ॥

***

ಅನುಭವ ಮಂಟಪ

ಇದೆ ಅನುಭವ ಮಂಟಪವ
ಇದು ಘನತರ ಮೋಕ್ಷ ಉನ್ಮನಿಯ ಸಾಧನವ ॥ ಪ ॥

ಓಂ ಇದೆ ಗುರುಸ್ಥಲ ಲಿಂಗ ಶೇಷವು
ಇದೆ ಕರಸ್ಥಲ ಇಚ್ಛೆ ಪ್ರಾಣವು
ಇದೆ ಷಡಕ್ಷರಿ ಬ್ರಹ್ಮ ಜ್ಞಾನವು
ಇದೆ ಪರಂಜ್ಯೋತಿ ಪ್ರಾಣ ಘೋಷವು
ಇದೆ ಅನುಭವ ಮಂಟಪವ ॥ ೧ ॥

ಓಂ ಗುರುತಾದ ಶರಣರನ ಕರೆಸಿ
ಅಲ್ಲಿ ಪರಮಾತ್ಮ ಗುಹದೋಳು ಮಂಟಪ ರಚಿಸಿ
ಗುರುತಾದ ಶರಣರನು ಕರೆಸಿ
ಓಂ ಕರಡಿ ಕೌಶಿಕ ಉರಿಯ ಜ್ಯೋತಿಯೋ
ಮೆರಿಯ ಜಾಗಟೆ ತಾಳ ಮದ್ದಲಿ
ಸೂರಗಾನದಿ ಆಡಿ ಪಾಡುವ ಮೆರಿವದ ಬಿಡಸಿ
ಘಂಟೆ ಘೋಷಿತ
ಇದೆ ಅನುಭವ ಮಂಟಪವ ॥ ೨ ॥

ಓಂ ಒಡಬಾಗ್ನಿ ಮಂಟಪದೊಳಗ
ಮೃಡ ಜಗದೊಳಗೊಲಿದನು ಅನುಭವಿತವಗ
ಪೊಡವಿಯೊಳ್ ಶರಣ ಸಂತತಿಗೆ
ಪ್ರಭು ಕೂಡಿ ಬಾ ಷಡಕ್ಷರಿ ಲಿಂಗ ಭಕ್ತರಿಗೆ
ಒಡಬಾಗ್ನಿ ಮಂಟಪದೊಳಗ
ಓಂ ಕಡಲ ಉಕ್ಕಿತು ಗಿರಿಯ ನಡುಗಿತು
ಷಟಸ್ಥಲಗಳು ತುಂಬಿ ತುಳಿಕಿತು
ಗುಡುಗುಡೆನಿಸಿತು ಸಿಡಲ ತೋರಿತು
ಮಿಡಿದ ಜ್ಞಾನವ ಜ್ಯೋತಿ ಉರಿಯಿತು
ಇದೆ ಅನುಭವ ಮಂಟಪವ ॥ ೩ ॥

ಓಂ ಬಸವನ ಶಿಖರದೋಳಲ್ಲೇ
ನಾಲ್ಕು ದೇಶದ ಭಕ್ತರು ಕೂಡಿಲಯ ಸತ್ಯದಲ್ಲಿ
ಭಸಿತ ರುದ್ರಾಕ್ಷಿ ಮಲೆಯಲ್ಲೇ
ಓಂ ವಿಜಯ ಪಾಣಿನೋಡ ಅಂಗ ಭಾವದಲಿ
ಬಸವನ ಶಿಖರದೋಳಲ್ಲೇ
ಓಂ ಹರ್ಸಿದ ಜಂಗಮ ಮನೆಗೆ ಬಾರಲು
ತೃಪ್ತಿ ಅಡಗಿತು ಸ್ವಯಂ ಮಧ್ಯದಿ
ಬಸವ ಸಂತತಿ ಆದ ಭಕ್ತರಿಗೆ
ವಸುಧೆಯೊಳಾಗಿ ಪಿಡಿಸಿಕೊಂಬರೊ
ಇದೆ ಅನುಭವ ಮಂಟಪವ ॥ ೪ ॥

ಓಂ ಮುನ್ನಾ ಕಲ್ಯಾಣ ಪಟ್ಟಣವ
ಚೆನ್ನಬಸವನಾ ನೋಡಲು ಬಾ ವಿಸ್ತರವ
ರನ್ನ ಕೆತ್ತಿಸಿದ ಸಿಂಹಾಸನವ
ಓಂ ರನ್ನ ಕರಗೀತು ಹೊನ್ನ ಅಡಗಿತು
ಇನ್ನ ಕಳಸವ ಮಣ್ಣುಗೂಡಿತು
ಧನ್ಯವಾಯಿತು ರನ್ನ ಇಳಿಯಿತು
ಚೆನ್ನಬಸವನ ಬಯಲ ನುಂಗಿತು
ಪೈಲು ಗಳಿದವರೆಲ್ಲ ಬೈಲೊ
ನಿರ್ಬೈಲೋಳು ಮತಕಟಿಸಿ ಪಿಡಿದರೆಮ್ಮವರು
ಸಾವು ಜಪವಿವುಳ್ಳವರೋ
ಇದರ ನ್ಯಾಯವ ಕೇಳುತಾರ ಸತ್ಯವುಳ್ಳವರು
ಪೈಲು ಅಳಿದವರೆಲ್ಲ ಬೈಲೋ
ಓಂ ಕಾಯ ಕಲ್ಪಿತ ಮಾಯಗಾರನು
ತೋರಿದರೇಷನ ದ್ಯಾಯಗಾರನು

ಭೇರತುರೇಶನು ಮಾಡಿದ ಕವಿಯೋ ಆಯಿತು ಆಯಿತು
ಅನುಭವ ನುಡಿಯ
ಇದೆ ಅನುಭವ ಮಂಟಪವ ॥ ೫ ॥

– ಶ್ರೀ ಬೀರಲಿಂಗ ಪೂಜಾರಿ

***

ಪರುಷ ಕಟ್ಟೆ

ಕಲ್ಯಾಣ ಊರಾಗ ಪರುಷಕಟ್ಟಿ ಪವಿತ್ರ
ಬಸವಣ್ಣ ಮೆರೆದಂತ ಜಾಗದು ಕೋಲೆನ್ನ ಕೋಲೆ ॥ ೧ ॥

ಬಸವಣ್ಣ ಕುಂತಾರ ಸುತ್ತೆಲ್ಲಾ ಭಕುತರು
ಕಷ್ಟಸುಖ ಬಸವಗ ಹೇಳ್ಯಾರ ಕೋಲೆನ್ನ ಕೋಲೆ ॥ ೨ ॥

ದರಬಾರಕ ನಡದಾರ ಧರಿಮಗ ಬಸವಣ್ಣ
ದಾರ್‍ಯಾಗ ಇಳಿದು ಕುಂತಾ ನೆಲ ಅದು ಕೋಲೆನ್ನ ಕೋಲೆ ॥ ೩ ॥

ಬೇಡಿದ ಜನರಿಗಿ ಬೇಡಿದ್ದು ಕೊಟ್ಟಾರಲ್ಲಿ
ಬೇಡ್ಯಾರ ಭಕುತರು ಬಸವಗ ಕೋಲೆನ್ನ ಕೋಲೆ ॥ ೪ ॥

ಬೇಡ್ಯಾರ ಭಕುತರು ಬಸವಗ ತಾವಾಗಿ
ಉಡಿತುಂಬಿ ಖಳುವ್ಯಾರ ಬಸವಣ್ಣ ಕೋಲೆನ್ನ ಕೋಲೆ ॥ ೫ ॥

ಹತ್ತು ಬಡಿಲಾಕ ದರಬಾರಕ ಹೊಂಟಾರ
ಒಂದ ಗಂಟಿ ಮೊದಲ ಇಲ್ಲಿ ತಾ ಕುಂತಾರ ಕೋಲೆನ್ನ ಕೋಲೆ ॥ ೬ ॥

ಒಂಭತ್ತು ಬಡಿಲಾಕ ಅಲ್ಲಿಗಿ ಬರತಾರ
ಇಲ್ಲವೆ ಕತೆಯ ಕೇಳ್ಯಾರ ಅಲ್ಲಿ ಕೋಲೆನ್ನ ಕೋಲೆ ॥ ೭ ॥

ಕಾಲಜ್ಞಾನ ಮಾತೆಲ್ಲ ಅಲ್ಲಿ ನಿಂತು ನುಡಿತಾರ
ಜನರೆಲ್ಲ ಕೇಳಿ ಕೈಯ ಮುಗಿತಾರ ಕೋಲೆನ್ನ ಕೋಲೆ ॥ ೮ ॥

ಬಸವನ ನುಡಿಯೆಂಬುದ ಹುಸಿಹ್ಯಾಂಗ ಆಗ್ಯಾತು
ಧರಣೀಯ ಮ್ಯಾಲ ನಡದಾದ ಸೋಜಿಗ ಕೋಲೆನ್ನ ಕೋಲೆ ॥ ೯ ॥

– ಶ್ರೀಮತಿ ಗೌರವ್ವ ಕಾಡಾದಿ

***

ಮಣ್ಣ ಕೆಂಪಗ ಆಗ್ಯಾದೊ

ರಕುತ ಹರದಾದೊ ಶರಣರ ಭಕುತಿ ರಕ್ತ ಹರದಾದೊ
ಕಲ್ಯಾಣ ಭೂಮಿಯ ಮಣ್ಣಾಗ ಸೇರ್ಯಾದೊ
ಮಣ್ಣ ಕೆಂಪಗ ಆಗ್ಯಾದೊ ॥ ಪ ॥

ಧರಿಮ್ಯಾಲಿನ ಮಣ್ಣ ಕೆಂಪಗ ಯಾಕಾದೊ
ಕಾವಿ ಉಟ್ಟ ಶರಣರ ರಕ್ತವ ಸೇರ್ಯಾದೊ
ಅದಕ್ಕದು ಕೆಂಪಗ ಆಗ್ಯಾದೊ ॥ ೧ ॥

ಆನಿಯ ತರಸ್ಯಾನೊ ಬಿಜ್ಜಳ ಎರಡಾನಿ ತರಸ್ಯಾನೊ
ಹರಳ ಮಧುವರಸರಿಗಿ ಆನಿಕಾಲಿಗಿ ಕಟ್ಟಿಸ್ಯಾನೊ
ಕಲ್ಯಾಣ ಬೀದ್ಯಾಗ ಎಳಸ್ಯಾನೊ ॥ ೨ ॥

ಸುತ್ತನಿಂತ ಖದಿಮರೊ ಅವರು ಖೊಳ್ಳೆಂದು ನಗುತಾರೊ
ತಿಳಿವಲ್ಲದೊ ಅವರಿಗಿ ಮುಂದಿನ ಹಣೆಬರವೊ
ತಿಳಿಹ್ಯಾಂಗಗೊಟ್ಟಾತೊ ॥ ೩ ॥

ಆನಿಯು ನಿಂತಾವೊ ಮುಂದಕ್ಕ ಹೋಗವಲ್ಲೊ
ಆನಿಯಾ ಕಣ್ಣಾಗ ಕಣ್ಣೀರ ಹರದಾದೊ
ನಮದೆಂತ ಪಾಪಿ ಜೀವನ ಎಂದಾವೊ ॥ ೪ ॥

ಅಂಕುಶ ತಿವಿದಾರೊ ಚಾಟಿಲಿ ಹೊಡದಾರೊ
ಏನು ಮಾಡಿದರ ಆನೆಗಳು ಮುಂದಕ ಹೋಗಲ್ಲೊ
ಶರಣರಿಗಿ ಸೊಂಡೆತ್ತಿ ನಮಿಸ್ಯಾವೊ ॥ ೫ ॥

ಬಸವಾ ಎನ್ನತಾ ಹರಳಯ್ಯಾ ಶರಣರೊ
ಮಧುವರಸರು ಬಸವಾ ಎನುತ್ತಾರೊ
ಅವರು ಖುಸಿಯಾಗಿ ನಗುತ್ತಾರೊ ॥ ೬ ॥

ಸತ್ತ್ಯುಳ್ಳ ಶರಣರು ಗಜಗಳಿಗೆ ಕೈಮುಗಿದೊ
ಮುಂದಕ್ಕ ನಡಿಯೆಂದು ಮನಮುಟ್ಟಿ ಬೇಡ್ಯಾರೊ
ಶರಣರು ಗಜಗಳಿಗೆ ಬೇಡ್ಯಾರೊ ॥ ೭ ॥

ಸುತ್ತೆಲ್ಲ ಶರಣರು ಒಬ್ಬರಿಗೊಬ್ಬರು ನೋಡ್ಯಾರೊ
ಒಬ್ಬರಿಗಿ ತಿಳಿವಲ್ದು ಮುಂದಕ ಹ್ಯಾಂಗೆಂದು
ಶರಣರಿಗಿ ಮುಂದಕ್ಕ ಹ್ಯಾಂಗೆಂದು ॥ ೮ ॥

ಕಲಿಯಾ ಆಟವೊ ಕಲ್ಯಾಣ ಊರಾಗೊ
ಮುಗಿಲರ ಮುಟ್ಯಾದೋ ಖಿಲ ಖಿಲ ನಗುತ್ತಾದೊ
ಕಲಿಯು ಖಿಲಖಿಲ ನಗುತಾದೊ ॥ ೯ ॥

ಜಗದೇವ ಮಲ್ಲಿಬೊಮ್ಮರೊ ವೀರಭದ್ರನ ಅವತಾರೊ
ಕಿಡಿಕಿಡಿ ಕಾರ್‍ಯಾರೊ ಶರಣರು ಅಬ್ಬರಸಿ ಅಳುತ್ತಾರೊ
ಶರಣರು ಅಬ್ಬರಿಸಿ ಅಳುತ್ತಾರೊ ॥ ೧೦ ॥

ಹಡದಮ್ಮ ಬಂದಾಳೊ ಮಕ್ಕಳ ಗೋಳ ಕಂಡಾಳೊ
ಗಂಡು ಮಕ್ಕಳ ಹಡದಿಲ್ಲ ಶಿಖಂಡಿ ಹಡದಿನಿ
ತಾಯಿ ಬಾಯಾಗ ನುಡಿತ್ತಾಳೊ ॥ ೧೧ ॥

ತಾಯಿ ಮಾತು ಕೇಳ್ಯಾರೊ ಝಾಡಿಸಿ ಎದ್ದು ನಿಂತಾರೊ
ಶರಣರ ರಕುತಕ ನಮ್ಮ ರಕ್ತ ಕೊಡುತ್ತೀವಿ
ತಾಯಿ ನಮ್ಮ ರಕ್ತ ಕೊಡುತ್ತಿವಿ ॥ ೧೨ ॥

ಕಲ್ಯಾಣ ಬೀದ್ಯಾಗೊ ಶರಣರ ಎಳಿಹೂಟೆ ನಡದಾದೊ
ತ್ಯಾಗದ ಭೂಮಿಯು ಯೋಗದ ಭೂಮಿಯು
ಅದು ಭೋಗದ ಭೂಮಿಯಾಯಿತೊ ॥ ೧೩ ॥

ಕೆಳಗ ರಕ್ತ ಹರದಾದೋ ಮ್ಯಾಲ ಹಕ್ಕಿ ಕೂಗ್ಯಾದು
ಕೂಗಿ ಕೂಗಿ ಸಾರಿ ಹೇಳ್ಯಾದೊ ಲೋಕದಾಗ
ಧರುಮದ ಕೊಲೆಯು ನಡದಾದೊ ॥ ೧೪ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***

ಇಂಗಳೇಶ್ವರ

ನೋಡ ಬನ್ನಿರಿ ನಮ್ಮದು ಊರ
ನಾಡಿನೊಳಗ ಮೆರೆದ ಇಂಗಳೇಶ್ವರ ॥ ಪ ॥

ರೇವಣಸಿದ್ಧ ನೆಲಸಿದ ಊರ
ನಂಬಿದ ಭಕ್ತರ ಮಾಡ್ಯಾರ ಉದ್ಧಾರ
ನೆನೆದವರ ಮನದಾಗ ಬಂದು ನೆಲೆಸ್ಯಾರ ॥ ೧ ॥

ಭದ್ರಗಿರಿಯೆನ್ನುದು ಮೊದಲಿನ ಹೆಸರ
ಬರುಬರುತ ಆಯಿತು ತಿಂಗಳೇಶ್ವರ
ಈಗ ಕರಿತಾರೆಲ್ಲರೂ ಇಂಗಳೇಶ್ವರ ॥ ೨ ॥

ಅಣ್ಣ ಬಸವಣ್ಣ ಹುಟ್ಟಿದ ಊರ ಇಂಗಳೇಶ್ವರ
ಅಕ್ಕ ನಾಗಮ್ಮನ ತಾಯಿ ತವರೂರ
ನಾಡಿದು ನಡೆದಾರೊ ವಚನದಸಾರ ॥ ३ ॥

ನಾರಾಯಣ ಸೋಮೇಶ್ವರ ಕಲ್ಮೇಶ್ವರ
ಇಲ್ಲಿ ಶಿಲಾಶಾಸನಗಳ ಅವತಾರ
ಗುಡಿಗಳು ತಿಳಿಸ್ತಾವ ಗತಕಾಲದ ಸಾರ ॥ ೪ ॥

ಸುತ್ತ ಮುತ್ತ ಬೆಟ್ಟಗಳು ಮುಗಿಲೆತ್ತರ
ಸೃಷ್ಟಿಕರ್ತನ ಕಲೆಯ ವಿಸ್ತಾರ
ನೋಡಿ ಧನ್ಯನಾಗುವನು ನಡಿ ತಮ್ಮ ಎಚ್ಚರ ॥ ೫ ॥

ದೇಶದೊಳಗ ಮೆರೆದ ಇಂಗಳೇಶ್ವರ
ಚೆನ್ನಬಸವಣ್ಣ ಹುಟ್ಟಿದ ಊರ
ಕವಿ ಕಲ್ಲಣ್ಣ ಹಾಡಿ ತಿಳಿಸ್ಯಾರ ॥ ೬ ॥

– ಶ್ರೀ ಗುರಯ್ಯಾ ಅಚನೂರ
– ಶ್ರೀ ಮಲ್ಲಯ್ಯಾ ಅತ್ತಾಲಟ್ಟಿ

***

ಗಬ್ಬೂರು (ಒಗಟು)

ಗಬ್ಬೂರು ತೇರ ನೋಡು
ತೇರ ಒಳಗ ನೀರ ನೋಡು
ನೀರ ತರ ಬಾಲಿ ನೋಡು
ಬಾಲಿ ಉಟ್ಟ ಸೀರಿ ನೋಡು
ಸೀರೆ ಮೇಲೆ ಸೆರಗ ನೋಡು
ಸೆರಗಿನ ಮ್ಯಾಲೆ ಸಿಂಬೆ ನೋಡು
ಸಿಂಬೆನ್ ಮ್ಯಾಲೆ ಕೊಡಾ ನೊಡು
ಕೊಡುದ್ ಮ್ಯಾಲೆ ಕೈಯಿ ನೋಡು
ಕೈನ್ ಮೇಲೆ ಹಚ್ಚೆ ನೋಡು
ಹಚ್ಚೆ ನೋಡಿ ಮೆಚ್ಚಿ ಬರ್‍ತಾನ
ಬೂದೆಪ್ಪ ಗೌಡ

– ಶ್ರೀಮತಿ ಸುಜಾತ ಬೋಳಗಂಡಿ

***

ಓಂ ಕೂಡಲ ಸಂಗಮ ದೇವನೆ

ಓಂ ಕೂಡಲ ಸಂಗಮ ದೇವನೆ
ನಾ ನಿನ್ನ ಧ್ಯಾನ ಮಾಡುವೆ
ಮೌನವು ನಿನಗೆ ಏತಕೆ?
ಕಣ್ಣು ತೆರೆದು ನೀ ನೋಡಬಾರದೇ? ॥ ಪ ॥

ಎನ್ನ ಬಾಳ್ವೆವು ಬೀಳಾಗಿ ನಿಂತಿದೆ
ಎನ್ನ ಜೀವನವು ಸಾಕಾಗಿ ಹೋಗಿದೆ
ಪಾಲಿಸೊ ಪರಮಾತ್ಮನೆ ನಾ ನಿನ್ನ ಧ್ಯಾನ ಮಾಡುವೆ ॥ ೧ ॥

ಎನ್ನ ಕಣ್ಣಿಗೆ ಮಾಯಾ ಮುಸುಕಿದೆ
ನಿನ್ನ ನಾಮದ ನೆನಹು ಮರೆತಿದೆ
ಅರುವನ್ನು ಬಿಟ್ಟು ಕುರುಹನ್ನು ತೋರಿ
ಕರುಣಿಸು ಸಂಗನೆ ನಾ ನಿನ್ನ ಧ್ಯಾನ ಮಾಡುವೆ ॥ ೨ ॥

ಎನ್ನ ತಪ್ಪು ಒಪ್ಪುಗಳೆಲ್ಲ ನಿನ್ನವು
ಎನ್ನ ಅಪ್ಪಿ ಕರೆಯುವವರಾರಿಲ್ಲವು
ಕರುಣಿಸು ಸಂಗನೆ ನಾ ನಿನ್ನ ಧ್ಯಾನ ಮಾಡುವೆ ॥ ೩ ॥

– ಶ್ರೀಮತಿ ಸುಮಿತ್ರಾದೇವಿ ಅಂಗಡಿ

***

ಅಂಗಜಾರಿ ಸಂಗಮೇಶ

ಅಂಗಜಾರಿ ಸಂಗಮೇಶ । ಲಿಂಗರೂಪ ಮಂಗಲಂ ॥ ಪ ॥

ಶೂಲಧಾರಿ ವ್ಯಾಲಮೂಲಾ । ನೀಲಕಂಠ ಪಾಲಿಸಯ್ಯ
ಕಾಲಕಾಲ ಸುಫಾಲಲೋಚನ । ಲಿಂಗರೂಪ ಮಂಗಲಂ ॥ ೧ ॥

ಚಂದ್ರಧಾರಿ ನಂದಿನಾಥ । ಇಂದ್ರ ನುತಪದ ದ್ವಂದ್ವಪಾಹಿ ।
ತಂದೆ ಮರೆಯದೆ । ಕಂದಳಂ ಪೊರೆ । ಲಿಂಗರೂಪ ಮಂಗಲಂ ॥ ೨ ॥

ರಾಮಲಿಂಗ ಸುಪುಣ್ಯನಾಮ । ಸೋಮ ಶಿವಕವಿ ಪ್ರೇಮಧಾಮ ।
ಭೀಮ ಭವಹರ ಪ್ರೇಮದಿಂ ಪೊರೆ । ಲಿಂಗರೂಪ ಮಂಗಲಂ ॥ ೩ ॥

– ಶ್ರೀಮತಿ ಸುಮಿತ್ರಾದೇವಿ ಅಂಗಡಿ

***

ಕೂಡಲ ಸಂಗ

ಗುರು ಸಂಗ ಸತ್ಯ ಶರಣರ ಸಂಗ
ವರಸಂಗ ಲಿಂಗ ಶರಣರು ಬಸವನ ಸಂಗ
ಕರುಣರಸ ನಿಧಿ ಘನ ತರಂಗ ಸಂಗಮ ದೇವಾ
ಗಿರಿಸುತೆಯ ಸಮ ಸುಖಾಲಿಂಗ ಸಂಗಮದೇವಾ
ಸುಕುಮಾರ ಶಶಿಕಲಾ ಚೂಡ ಕೂಡಲ ಸಂಗಮದೇವ
ನಿತ್ಯ ನಿರ್ಮಲನೆ ನಿಃಕಳನೆ ಕೂಡಲಸಂಗ
ನಿತ್ಯ ನಿರ್ಭಯನೆ ನಿರುಪಮನೆ ಕೂಡಲಸಂಗ
ಮೊಳಗುವ ವೇದಾಳಿಗತಿ ಗೂಢ ಕೂಡಲಸಂಗ
ಸೊಗಯಿಸುವ ಘನ ವೃಷಭಾರೂಢ ಕೂಡಲಸಂಗ
ಎನ್ನ ಮನದಕ್ಕರದೊಳು ಕೂಡ ಕೂಡಲಸಂಗ
ಎನ್ನ ಕಣ್ಣೊಳಗೆ ಪರಿದಾಡೊ ಕೂಡಲ ಸಂಗ

– ಶ್ರೀಮತಿ ಸುಮಿತ್ರಾದೇವಿ ಅಂಗಡಿ

***

ನೋಡಿರಿ ಶ್ರೀಶೈಲವಾ

ನೋಡಿರಿ ಶ್ರೀಶೈಲವಾ
ಮಾಡಿರಿ ಮಲ್ಲಿಕಾರ್ಜುನ ದರ್ಶನವಾ
ನೋಡಿರಿ ಶ್ರೀಶೈಲವಾ ॥ ಪ ॥

ಅಡಕೇಶ್ವರ ಶಿಖರೇಶ್ವರಕ್ಹೋಗುವರು
ಕಡಕದಿಂದಭಿಷೇಕ ಮಾಡುವರು ಬಾಳಮಂದಿ
ನೋಡಿರಿ ಶ್ರೀಶೈಲವಾ ॥ ೧ ॥

ಪಾತಾಳ ಗಂಗೆಗೆ ಹೋಗುವರು
ಪ್ರೀತಿಯಿಂದಲಿ ಅಭಿಷೇಕ ಮಾಡುವರು ಬಾಳಮಂದಿ
ನೋಡಿರಿ ಶ್ರೀಶೈಲವಾ ॥ ೨ ॥

ಮಲ್ಲಯ್ಯಾ ಇರುವ ಸ್ಥಳಯಾವುದು
ಅಲ್ಲಿ ಮಲ್ಲಾಂಬೆ ದರ್ಶನವಾಗುವುದು ॥ ೩ ॥

ಗೋವುಗಳ ಕಾಯಲು ಕಳಿಸುವರು
ಅಲ್ಲಿ ಶಗಣಿಯ ಗುಡಿಸಲು ಹೇಳುವರು ॥ ೪ ॥

– ಶ್ರೀಮತಿ ಸುಮಿತ್ರಾದೇವಿ ಅಂಗಡಿ

***

ಮಲ್ಲಿನಾಥನೆ ಬಾರೊ

ಮಲ್ಲಿನಾಥನೇ ಬಾರೋ ಎಲ್ಲಡಗಿರವಿಯೋ
ಕಲ್ಲು ಮಣ್ಣೊಳು ನೀ ಎಲ್ಲಿ ಅಡಗಿರವಿಯೋ
ಮಲ್ಲಯ್ಯ ಬಾರೋ ॥ ಪ ॥

ಗಂಗಿಯ ಸ್ಥಳದಲ್ಲಿ ಲಿಂಗಧಾರೆಯನಾಗಿ
ಬಂಗಾರ ಗುಡಿ ಮ್ಯಾಲ ಎಲ್ಲಡಗಿರುವೆಯೋ ॥ ೧ ॥

ಭೀಮನ ಕೊಳದಲಿ ನೇಮದಿ ಇರವಿಯೋ
ಭಾಮಿನಿ ಮುನಿಗಳು ನೇಮಲಿ ಬರುವದೇವಾ ॥ ೨ ॥

ಕದಳಿಯ ಬನದಲ್ಲಿ ಕಂಡೇನು ನಿಮ್ಮನು
ಮಂಡಲದೊಳು ನಿಂತು ಪೂಜೆಮಾಡುವ ದೇವಾ ॥ ೩ ॥

–ಶ್ರೀಮತಿ ಸರ್ವಮಂಗಳಾ ಜೋಗೂರ
ಹಾಗೂ ಪಾರ್ವತಿ ಜೆಮಶೆಟ್ಟಿ

***

ನೀನೆ ಶ್ರೀಶೈಲವಾಸಿಯೊ

ನೀನೇ ಶ್ರೀಶೈಲವಾಸಿಯೊ
ನೀ ಮೋಕ್ಷಪತಿಯೊ
ನೀನೆ ಭಕ್ತಾಭಿಮಾನಿಯೊ
ನೀ ಜ್ಞಾನನಿಧಿಯೊ
ನೀನೆ ಶ್ರೀಶೈಲವಾಸಿಯೊ ॥ ಪ ॥

ಕಾಲಾರಿ ಕಾಮಹಾರಿಯೊ
ನೀ ಶೂಲಧಾರಿಯೊ
ಪಾಲಕ್ಷಯ ಪಾಪತಾರಿಯೊ
ಸ್ಮಶಾನ ಚಾರಿಯೊ
ನೀನೆ ಶ್ರೀಶೈಲವಾಸಿಯೊ ॥ ೧ ॥

ಅರಿಯೆ ನಾ ನಿನ್ನ ಮಹಿಮೆಯ
ಹೇ ದೇವ ಅಮಾಯಾ
ಪರಿಶೈರುತ ತಾಪ ಶಂಕೆಯ
ನೀ ನೀಡು ಮುಕ್ತಿಯಾ
ನೀನೆ ಶ್ರೀಶೈಲ ವಾಸಿಯೊ ॥ ೨ ॥

ನೀನೆ ಗೌರಿಮನೋಹರ
ನೀ ಎನ್ನ ಆಧಾರಾ
ನೀನೆ ಕಾಲಾಗ್ನಿ ವಿಷಧರಾ
ನೀ ಭಾಗ್ಯಮಂದಿರಾ
ನೀನೆ ಶ್ರೀಶೈಲವಾಸಿಯೊ ॥ ೩ ॥

ಬಾರಯ್ಯ ಮಲ್ಲಿನಾಥನೆ
ಬಾ ಎನ್ನ ಪಿತನೆ
ಬಾ ಬಾ ಕಾರುಣ್ಯ ಸಿಂಧುವೆ
ಬಾ ದೀನಬಂಧುವೆ
ನೀನೆ ಶ್ರೀಶೈಲವಾಸಿಯೊ ॥ ೪ ॥

ದೊರಿ ನನ್ನ ಮಲ್ಲಿಕಾರ್ಜುನ
ಶ್ರೀ ಗಿರಿಯ ಭೂಷಣ
ಸುರಗಂಗಾ ಭಸ್ಮಧಾರಣ
ಭೂಲೋಕ ಪಾವನಾ
ನೀನೆ ಶ್ರೀಶೈಲ ವಾಸಿಯೊ ॥ ೫ ॥

– ಶ್ರೀಮತಿ ಸುಮಿತ್ರಾದೇವಿ ಅಂಗಡಿ

***

ಶ್ರೀಗಿರಿ ಸುಕ್ಷೇತ್ರ

ಶ್ರೀಗಿರಿ ಸುಕ್ಷೇತ್ರಕ್ಕಿಂದು ಹೋಗಿ
ಯಾತ್ರೆಯ ಮಾಡಿ ಬಂದ್ಯಾ
ಶ್ರೀ ಗಿರಿಯ ಶರೀರದೊಳುಂಟು
ಆ ಓಂ ಶ್ರೀಗುರುಸಿದ್ಧ
ಯೋಗಿ ಜನರಿಗೆ ಮರಮ ಬೇರುಂಟು ॥ ೧ ॥

ಆರು ಬೆಟ್ಟವು ದಾಟಿ ನಡದ್ಯಾ
ಮೂರು ಕೊಳ್ಳದ ಮೂಲಕ್ಕಿಳಿದ್ಯಾ
ಏರಿ ನೋಡಿದ್ಯಾ ಕೈಲಾಸ ದ್ವಾರಾ
ಆ ಓಂ ಶ್ರೀಗುರುಸಿದ್ಧ
ಸಾರಿ ಬಡಗಲ ಗುಡಿಯ ಕಂಡೇನು ॥ ೨ ॥

ಏಳಸುತ್ತಿನ ಕ್ವಾಟೆ ಇದರೊಳು
ನೀಲಗುಪ್ತರ ಗಗಳ ನಡುವೆ

ತಾಳಮದ್ದಲಿ ಭೇರಿಗಂಟಿಗಳು
ಆ ಓಂ ಶ್ರೀಗುರುಸಿದ್ಧ
ಯಾಳ್ಯಾಯಾಳ್ಯಾಕೆ ತಾನೆ ನುಡತಿಹವು ॥ ೩ ॥

ಬರುವ ಕೋಣಗಳೆಂಟು ಬಡದ್ಯಾ
ಇರುವ ಹುಲಿಗೋಳಾರು ತಡದ್ಯಾ
ಮೆರಿವ ಸರ್ಪ ಹೆಡಿಯ ಮೆಟ್ಟಿದೆನೊ
ಆ ಓಂ ಶ್ರೀಗುರುಸಿದ್ಧ
ಸರ್ಪ ಕಪಯನ್ನಿಡದು ಕಟ್ಟಿದೆನೊ ॥ ೪ ॥

ಒಂಬತ್ತ ಬಾಗಲಿದರೋಳ್
ಇಂಬಾದಾ ಬೀದಿ ನಾಲ್ಕು
ತುಂಬಿಸೋಸುವ ಕೊಳಗಳೇಳುಂಟು
ಓಂ ಶ್ರೀಗುರುಸಿದ್ಧ
ಸಂಭವೆರಡು ಶಿಖರ ಒಂದುಂಟು ॥ ೫ ॥

ಪಾತಾಳ ಗಂಗೇಳು ಮಿನದು
ಹೋತ ಶಿಖರೇಶ್ವರನಿಗೇರಿ
ಜೋತಿರ್‌ಲಿಂಗಕ ದೃಷ್ಟಿ ಇಟ್ಟಿದೆನೊ
ಆ ಓಂ ಶ್ರೀಗುರುಸಿದ್ಧ
ಜೋತಿರ್‌ಲಿಂಗವು ಕರದೊಳು ಕಾಣಿಸಿತೊ ॥ ೬ ॥

ಸಪ್ತಸಂಗಮ ನದಿಯ ದಾಟಿ
ಗುಪ್ತ ಕದಳಿ ಬನದೊಳು ಸುಳಿದು
ಗುಪ್ತ ಗುಹೆಯೊಳು ಒಬ್ಬಳ್ಹೊಕ್ಕಿದೆನೊ
ಆ ಓಂ ಶ್ರೀಗುರುಸಿದ್ಧ
ಅಷ್ಟಾವರ್ಣದು ಲಿಂಗ ಕಂಡೇನು ॥ ೭ ॥

ಇಂದ್ರಗುಪ್ತದೊಳಿದ್ದ ಸೂರ್ಯ
ಚಂದ್ರಗುಪ್ತ ಪುರದೊಳು ಮುಳಗಿ
ಚಂದ ಚಂದದಿ ಬೆಳಕು ತೊರ್ಪಿದಿಯಾ
ಆ ಓಂ ಶ್ರೀಗುರುಸಿದ್ಧ
ಇಂದು ನೋಡಲು ಬೈಲಿಗೆ ಬೈಲ ॥ ೮ ॥

ಇಂಥ ಶ್ರೀಶೈಲದ ಘನವು
ಭ್ರಾಂತಿ ನಳದು ತಿರಗಿ ಬಂದಿ

ಅಂತರಂಗದ ಗುಡಿಯ ಹೊಕ್ಕಿದೆನೊ
ಆ ಓಂ ಶ್ರೀ ಗುರುಸಿದ್ಧ
ಶಾಂತಮಲ್ಲಯ್ಯ ನೀನೆ ಆಗಿದ್ದೋ ॥ ೯ ॥

– ಶ್ರೀ ಪ್ಯಾಟೆಪ್ಪ ನಾಯಕ
– ಶ್ರೀಮತಿ ಸಂಗಮ್ಮ ಎಲಮಡಗಿ

***

ಧೂಪಬೀಸುವ ಹಾಡು

ಧೂಪ ಬೀಸುವೆನು ಲಿಂಗಯ್ಯಗ ದೀಪ ಬೆಳಗುವೆನು
ಧೂಪವ ಬೀಸುವೆ ದೀಪವ ಬೆಳಗುವೆ
ಪಾಪಸಂಹರ ಕಪಾಲಧರನಿಗೆ ಶ್ರೀಪರಂಜ್ಯೋತಿಗೆ
ಧೂಪ ಬೀಸುವೆನು ॥ ೧ ॥

ಕಾಡಿನೊಳಗೆ ಅಲೆವ ದೀಪದ ಕಲಿ ಮೂಢ ಭಕ್ತನಿಗೊಲಿದು
ಬ್ಯಾಡನ ಭಕ್ತಿಗೆ ಒಲಿದು ಅಕ್ಷಯನಿತ್ತು
ರೂಢಿಯೊಳಗೆ ನಲಿದಾಡುವ ಲಿಂಗಯ್ಯಗ
ಧೂಪ ಬೀಸುವೆನು ॥ ೨ ॥

ಬಲ್ಲಾಳನಿಗೊಲಿದು ಹಾವಿನಾಳ ಕಲ್ಲಪ್ಪನಿಗೊಲಿದು
ಬಲ್ಲಾಳ ಸಿರಿಯಾಳ ಮೊದಲಾದರಿಗೆಲ್ಲ
ಇಲ್ಲಿ ಎನ್ನಯ ಕರಸ್ಥಲದ ಲಿಂಗಯ್ಯಗ
ಧೂಪ ಬೀಸುವೆನು ॥ ೩ ॥

ಗುಣಮೂರನು ಅಳಿದವಗೆ
ಜಗದೊಳು ಶರಣನೆನಿಸಿಕೊಂಬವಗೆ
ಧರಣೀಪಾಲರ ಶಿವನ ಮೊಲೆಯುಂಡ ದೇವಗೆ
ಹರನೀಪಾಲರ ಶಿವನ ಮೊಲೆಯುಂಡ ದೇವಗೆ
ಹರಣದೊಡೆಯ ಶ್ರೀಗುರು ಚರವರದೀಶಗೆ
ಧೂಪ ಬೀಸುವೆನು ॥ ೪ ॥

– ಶ್ರೀಮತಿ ಸುಮಿತ್ರಾದೇವಿ ಅಂಗಡಿ

***

ಆರತಿ ಹಾಡು

ಕರ್ಪೂರಾರತಿ ಬೆಳಗಿರೆ ಕಾರುಣ್ಯ ಮೃಗಕರ ದೇವಗೆ ॥ ಪ ॥

ನೀಲಕಂಠ ನಿಗಮಗೋಚರ ಬಾಲಚಂದ್ರಾಭರಣೆಗೆ
ಬಾಲಿಗೊಲಿದನು ಹಾಲು ಸವಿದನು ಲೋಲ ಶ್ರೀಗುರು ರಾಯಗೆ ॥ ೧ ॥

ವಾರಿಜೋದ್ಭವ ಶಿರವ ಹರಿದನು ಮಾರಹರ ಮಹಾದೇವಗೆ
ಘೋರ ದುರಿತವ ದೂರಮಾಡುವ ಶೂರ ಷಣ್ಮುಖದೇವಗೆ ॥ ೨ ॥

ಶರಣ ಜನಕೆ ವರನಿತ್ತಿನು ಪರಮಪಾರ್ವತಿ ಪ್ರಿಯಗೆ
ಧರೆಯೊಳಧಿಕವಾದ ಸೊನ್ನಲಪೂರ ಸಿದ್ಧರಾಮಗೆ ॥ ೩ ॥

– ಶ್ರೀಮತಿ ಸುಮಿತ್ರಾದೇವಿ ಅಂಗಡಿ

***

ಅನುಬಂಧ-೧

ವಕ್ತಾರರ ಸೂಚಿ

೧. ಅಂಬಾಜಿ
ವಿಳಾಸ : ಬ್ರಹ್ಮಪುರ, ಕಲಬುರ್ಗಿ
ಸಂಗ್ರಹ : ೧೯೭೫

೨. ಅಣ್ಣಾರಾವ ಮುಡಬಿ
ವ. ೬೨, ಜಾ. ಕುರುಬ, ಶಿ. ೭ನೇ, ಉ. ಹಾಡುಗಾರರು
ವಿಳಾಸ : ಮುಡಬಿ, ತಾ. ಬಸವಕಲ್ಯಾಣ, ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೧೬-೪-೨೦೧೧

೩. ಅಣ್ಣೆಪ್ಪಾ ಪಿರತಪ್ಪಾ ಬೇಲೂರೆ
ವ. ೭೨, ಜಾ. ಲಿಂಗಾಯತ, ಶಿ. ೬ನೇ, ಉ. ಕೃಷಿ
ವಿಳಾಸ : ದಾಡಗಿ, ತಾ. ಭಾಲ್ಕಿ, ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೩-೪-೨೦೧೧

೪. ಅನ್ನಪೂರ್ಣ ಪಂಚಪ್ಪ ದೇವಣಿ
ವ. ೬೪, ಜಾ. ಲಿಂಗಾಯತ, ಶಿ. ೩ನೇ, ಉ. ಗೃಹಣಿ
ವಿಳಾಸ : ಮಾಶಾಳ, ತಾ. ಅಫಜಲಪೂರ, ಜಿ. ಗುಲಬರ್ಗಾ
ಸಂಗ್ರಹ : ಡಾ। ಜಯಶ್ರೀ ದಂಡೆ, ೨೦೧೦

೫. ಅನ್ನಪೂರ್ಣ ಬಸಯ್ಯ ಮಠಪತಿ
ಜಾ. ಲಿಂಗಾಯತ, ಉ. ಮನೆಗೆಲಸ
ವಿಳಾಸ : ಜಾಲವಾಡ, ತಾ. ಸಿಂದಗಿ, ಜಿ. ವಿಜಾಪುರ
ಸಂಗ್ರಹ : ಸಾಹೇಬಗೌಡ ಸಿಂದಗಿ, ೨೦೧೧

೬ ಇಂದ್ರಾಬಾಯಿ ಬಾಬುಗೌಡ ಬಿರಾದಾರ
ವ. ೪೨, ಜಾ. ಲಿಂಗಾಯತ, ಶಿ. ಇಲ್ಲ, ಉ. ಮನೆಗೆಲಸ
ವಿಳಾಸ : ದೇವರ ಹಿಪ್ಪರಗಿ, ೧೫-೪-೨೦೧೧

೭ ಇತಾಬಾಯಿ ಭೀಮಣ್ಣ ಹುಚ್ಚೇನೂರ
ವ. ೪೫, ಜಾ. ಮಾದಿಗ, ಶಿ. ಅನಕ್ಷರಸ್ಥ, ಉ. ಕೂಲಿ
ವಿಳಾಸ : ಧುಮ್ಮನಸೂರ, ತಾ. ಹುಮನಾಬಾದ, ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೧೦-೨-೨೦೧೧

೮. ಇವಣಗಿ ಕೆ. ಎಸ್.
ವಿಳಾಸ : ಸುರಗಿಹಳ್ಳಿ, ತಾ. ಸಿಂದಗಿ, ಜಿ. ವಿಜಾಪೂರ
ಸಂಗ್ರಹ : ಸಾಹೇಬಗೌಡ ಸಿಂದಗಿ, ೨೫-೫-೨೦೧೧

೯. ಈರಮ್ಮ ಅಕ್ಕಸಾಲಿಗ
ಜಾ. ಅಕ್ಕಸಾಲಿಗ, ಉ. ಮನೆಗೆಲಸ
ವಿಳಾಸ : ಗೋರ್ಟಾ (ಬಿ), ತಾ. ಬಸವಕಲ್ಯಾಣ, ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೬-೪-೨೦೧೧

೧೦. ಈರಮ್ಮ ಧೂಳೆ
ವ. ೪೦, ಜಾ. ಲಿಂಗಾಯತ, ಶಿ. ೫ನೇ, ಉ. ಕೂಲಿ
ವಿಳಾಸ : ದಾಡಗಿ, ತಾ. ಭಾಲ್ಕಿ, ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೫-೪-೨೦೧೧

೧೧. ಈರಯ್ಯ ಸ್ವಾಮಿ ಹಿರೇಮಠ
ವ. ೪೫, ಜಾ. ಸ್ವಾಮಿ (ಲಿಂಗಾಯತ), ಶಿ. ೧೦ನೇ, ಉ. ಪುರವಂತಿಕೆ
ವಿಳಾಸ : ಗೂಗಲ್, ತಾ. ದೇವದುರ್ಗ, ಜಿ. ರಾಯಚೂರ,
ಸಂಗ್ರಹ : ಡಾ। ವೀರಯ್ಯ ಮಠಪತಿ, ೯-೯-೨೦೧೧

೧೨. ಉತ್ತಮಬಾಯಿ ಮಠಪತಿ
ವ. ೪೦, ಜಾ. ಲಿಂಗಾಯತ, ಶಿ. ೩ನೇ, ಉ. ಮನೆಗೆಲಸ
ವಿಳಾಸ : ಮೋಳಕೇರಾ, ತಾ. ಹುಮನಾಬಾದ, ಜಿ. ಬೀದರ
ಸಂಗ್ರಹ : ವೀರಯ್ಯ ಮಠಪತಿ, ೨೦೧೧

೧೩. ಕರುಣಾ ವೈಜನಾಥ ವಿಶ್ವಕರ್ಮ
ವ. ೪೧, ಜಾ. ವಿಶ್ವಕರ್ಮ, ಶಿ. ೩ನೇ, ಉ. ಒಕ್ಕಲುತನ
ವಿಳಾಸ : ಘಾಟಬೋರಾಳ, ತಾ. ಹುಮನಾಬಾದ, ಜಿ. ಬೀದರ
ಸಂಗ್ರಹ : ಡಾ. ವೀರಯ್ಯ ಮಠಪತಿ, ೨೫-೧-೨೦೦೧

೧೪. ಕಲ್ಲಪ್ಪ ಪುಂಜಿ
ವ. ೨೫, ಜಾ. ಉಪ್ಪಾರ, ಶಿ. ಇಲ್ಲ, ಉ. ಒಕ್ಕಲುತನ
ವಿಳಾಸ : ಮುಗಳಿಹಾಳ, ತಾ. ಸವದತ್ತಿ, ಜಿ. ಬೆಳಗಾಂವ
ಸಂಗ್ರಹ : ಶಿವರಾಮನಗೌಡ ಗೋವಿಂದಗೌಡ ಪಾಟೀಲ, ೧೯೭೬

೧೫. ಕಲ್ಲಪ್ಪ ಸಿ. ಬಾಗೇವಾಡಿ
ಸಂಗ್ರಹ : ಸಾಗೇಬಗೌಡ, ೨೦೦೧

೧೬. ಕಲಾವತಿ
ವ. ೧೫, ಜಾ. ಲಿಂಗಾಯತ, ಶಿ. ಪಿ.ಯು.ಸಿ, ಉ. ಮನೆಗೆಲಸ
ವಿಳಾಸ : ಶಹಾಬಾಜಾರ, ಗುಲಬರ್ಗಾ
ಸಂಗ್ರಹ : ಡಾ. ಬಿ. ಎಸ್. ಪೋಂಲಿಸ ಪಾಟೀಲ, ೧೯೭೬

೧೭. ಕಲಾವತಿ ಚನ್ನಯ್ಯ ವಸ್ತ್ರದ
ವಿಳಾಸ : ಇಬ್ರಾಹಿಂಪೂರ, ತಾ। ಜಿ। ವಿಜಾಪೂರ
ಸಂಗ್ರಹ : ಸಾಹೇಬಗೌಡ, ಸಿಂದಗಿ, ೧೦-೪-೨೦೦೧

೧೮. ಕಾಶಿನಾಥ ನರಸಿಂಗ, ಮೇತ್ರಿ
ವ. ___, ಜಾ. ಕುರುಬ, ಶಿ. ೨ನೇ, ಉ. ಕೂಲಿ
ವಿಳಾಸ : ಗೋರ್ಟಾ (ಬಿ), ತಾ. ಬಸವಕಲ್ಯಾಣ, ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೭-೪-೧೧

೧೯. ಕಾಶಿಬಾಯಿ ಗೌಡತಿ ನಿಜಪ್ಪ ದೇಸಾಯಿ
ವ. ೪೦, ಶಿ. ಇಲ್ಲ,
ವಿಳಾಸ : ದೇವರ ಹಿಪ್ಪರಗಿ, ತಾ. ಸಿಂದಗಿ, ಜಿ. ಬಿಜಾಪುರ
ಸಂಗ್ರಹ : ಸಾಹೇಬಗೌಡ, ೧೫-೪-೨೦೦೧

೨೦. ಕೃಷ್ಣಪ್ಪ ಧರ್ಗ
ವ. ೬೫, ಜಾ. ಮಾದಿಗ, ಶಿ. ಅನಕ್ಷರಸ್ಥ, ಉ. ಹಾಡುವುದು
ವಿಳಾಸ : ಧುಮ್ಮನಸೂರ, ತಾ. ಹುಮನಾಬಾದ, ಜಿ. ಬೀದರ
ಸಂಗ್ರಹ : ಆನಂದ ಸಿದ್ಧಾಮಣಿ, ೧೦-೨-೨೦೧೧
(ಕರ್ನಾಟಕ ಜಾನಪದ ಅಕಾಡೆಮಿ ಪ್ರಶಸ್ತಿ ವಿಜೇತ)

೨೧. ಗಂಗಮ್ಮ ಎಲಗುಂಡಿ
ವ. ೭೦, ಜಾ. ಲಿಂಗಾಯತ, ಶಿ. ಅನಕ್ಷರಸ್ಥ, ಉ. ಕೂಲಿ
ವಿಳಾಸ : ಎಲಗುಂಡಿ, ತಾ. ಚಿಂಚೋಳಿ, ಜಿ. ಗುಲಬರ್ಗಾ
ಸಂಗ್ರಹ : ಆನಂದ ಸಿದ್ಧಾಮಣಿ, ೧೬-೪-೨೦೧೧

೨೨. ಗಂಗಮ್ಮ ಚಂದ್ರಪ್ಪಾ ಚೋಳಾ
ವ. ೭೫, ಜಾ. ಲಿಂಗಾಯತ, ಶಿ. ಅನಕ್ಷರಸ್ಥ, ಉ.ಕೂಲಿ
ವಿಳಾಸ : ದಾಡಗಿ, ತಾ. ಭಾಲ್ಕಿ, ಜಿ.ಬೀದರ
ಸಂಗ್ರಹ : ಆನಂದ ಸಿದ್ಧಾಮಣಿ, ೪-೪-೨೦೧೧

೨೩. ಗಂಗಮ್ಮಾ ಬಾಬುರಾವ ಬೋರಂಪಳ್ಳಿ
ವ. ೪೦, ಜಾ. ಕಬ್ಬಲಿಗ, ಶಿ. ಅನಕ್ಷರಸ್ಥ, ಉ. ಕೂಲಿ
ವಿಳಾಸ : ಬೋರಂಪಳ್ಳಿ, ತಾ. ಹುಮನಾಬಾದ, ಜಿ. ಬೀದರ
ಸಂಗ್ರಹ : ಆನಂದ ಸಿದ್ಧಾಮಣಿ, ೧೭-೪-೨೦೧೧

೨೪. ಗಂಗಮ್ಮ ಮೇತ್ರಿ
ವ. ೪೫, ಜಾ. ಹರಿಜನ, ಶಿ. ಇಲ್ಲ, ಉ. ಕೂಲಿ
ವಿಳಾಸ : ಮೊಸರಕಲ್, ತಾ. ದೇವದುರ್ಗ, ಜಿ. ರಾಯಚೂರ
ಸಂಗ್ರಹ : ಡಾ॥ ವೀರಯ್ಯ ಮಠಪತಿ, ೨೮-೪-೨೦೧೧

೨೫. ಗಂಗಾಬಾಯಿ ಕಾಶಪ್ಪ ಕುದರಿ
ವಿಳಾಸ : ದೇವರ ಹಿಪ್ಪರಗಿ, ತಾ. ಸಿಂದಗಿ, ಜಿ. ವಿಜಾಪೂರ
ಸಂಗ್ರಹ : ಸಾಹೇಬಗೌಡ ಸಿಂದಗಿ, ೯-೪-೨೦೦೧

೨೬. ಗಿರಿಮಲ್ಲ ಹದಿಮೂರ
ವಿಳಾಸ : ಬಾಗೇವಾಡಿ, ಜಿ. ವಿಜಾಪೂರ
ಸಂಗ್ರಹ : ಸಾಹೇಬಗೌಡ, ೨೦೧೧

೨೭. ಗುಂಡಮ್ಮಾ ಪಂಚಾಳ
ವ. ೪೦, ಜಾ. ಬಡಿಗೇರ, ಶಿ. ಅನಕ್ಷರಸ್ಥ, ಉ. ಮನೆಗೆಲಸ
ವಿಳಾಸ : ಬೇವಿನ ಚಿಂಚೋಳಿ, ತಾ. ಹುಮನಾಬಾದ, ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೬-೬-೨೦೧೧

೨೮. ಗುರುಮ್ಮಾ ಆಚನೂರ
ವಿಳಾಸ : ಇಂಗಳೇಶ್ವರ, ತಾ. ಬಸವನ ಬಾಗೇವಾಡಿ, ಜಿ. ಬಿಜಾಪೂರ
ಸಂಗ್ರಹ : ಶ್ರೀಮತಿ ಪಿ.ಎಸ್. ಚೌಕೀಮಠ, ೨೦೦೮

೨೯. ಗೌಡಮ್ಮ ಕಂಟೆಪ್ಪ ಪತಂಗೆ
ವ.___, ಜಾ. ಲಿಂಗಾಯತ, ಶಿ. ಅನಕ್ಷರಸ್ಥ, ಉ. ಒಕ್ಕಲುತನ
ವಿಳಾಸ : ಗೋರ್ಟಾ (ಬಿ), ತಾ. ಬಸವಕಲ್ಯಾಣ, ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೭-೪-೨೦೧೧

೩೦. ಗೌರವ್ವ ಕಾಡಾದಿ (ಲಿಂ.)
ವ. ೮೯, ಜಾ. ಲಿಂಗಾಯತ, ಶಿ. ಇಲ್ಲ, ಉ. ಗೃಹಿಣಿ
ವಿಳಾಸ : ಗೋದುತಾಯಿ ನಗರ, ಕಲಬುರ್ಗಿ,

೩೧. ಗೌರಮ್ಮ ಬಿರಾದಾರ
ವ. ೫೫, ಜಾ. ಲಿಂಗಾಯತ, ಶಿ. ೪ನೇ, ಉ. ಒಕ್ಕಲುತನ
ವಿಳಾಸ : ಬೋರಂಪಳ್ಳಿ, ತಾ. ಹುಮನಾಬಾದ, ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೧೭-೪-೨೦೧೧

೩೨. ಘಾಳಪ್ಪಾ ಸಿದ್ದಪ್ಪ
ವ. ೪೨, ಜಾ. ಕುರುಬ, ಶಿ. ೯ನೇ, ಉ. ಕೂಲಿ
ವಿಳಾಸ : ಗೋರ್ಟಾ (ಬಿ) ತಾ. ಬಸವಕಲ್ಯಾಣ, ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೧೦-೪-೨೦೧೧

೩೩. ಚಂದ್ರಕಲಾ ಭೈರಿ
ವ. ೪೦, ಜಾ. ಲಿಂಗಾಯತ, ಶಿ. ೫ನೇ, ಉ. ಗೃಹಿಣಿ
ವಿಳಾಸ : ತೊಗಲೂರು, ತಾ. ಬಸವಕಲ್ಯಾಣ, ಜಿ. ಬೀದರ
ಸಂಗ್ರಹ : ಡಾ. ವೀರಯ್ಯ ಜಿ. ಮಠಪತಿ, ೨೪-೧-೨೦೧೧

೩೪. ಚಂದ್ರಮ್ಮಾ ನೇಳಗೆ
ವ. ೬೦, ಜಾ. ವೀರಶೈವ ಲಿಂಗಾಯತ, ಶಿ. ಅನಕ್ಷರಸ್ಥ, ಉ. ಕೂಲಿ
ವಿಳಾಸ : ದಾಡಗಿ, ತಾ. ಭಾಲ್ಕಿ, ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೪-೪-೨೦೧೧

೩೫. ಚಂದ್ರಾಮ ಭೀ. ಪೂಜಾರಿ
ವಿಳಾಸ : ಹಾವಿನಹಾಳ, ತಾ. ಸುರಪುರ, ಜಿ. ಕಲಬುರ್ಗಿ
ಸಂಗ್ರಹ : ಸಾಹೇಬಗೌಡ, ೨೬.೫.೨೦೧೧

೩೬. ಚೆನ್ನಮ್ಮ ಖಪಾಟೆ
ವ. ೧೪, ಜಾ. ಲಿಂಗಾಯತ, ಶಿ. ೯ನೇ, ಉ. ವಿದ್ಯಾರ್ಥಿನಿ
ವಿಳಾಸ : ಮಹಾಗಾಂವ, ತಾ. ಗುಲಬರ್ಗಾ, ಜಿ. ಗುಲಬರ್ಗಾ
ಸಂಗ್ರಹ : ಚನ್ನಪ್ಪ ಖಪಾಟೆ, ೧೮-೧೧-೧೯೭೫

೩೭. ಜಕ್ಕಣ್ಣ ಮೀಸೆ
ವಿಳಾಸ : ಇಂಗಳೇಶ್ವರ, ತಾ. ಬ. ಬಾಗೇವಾಡಿ, ಜಿ. ವಿಜಾಪೂರ.
ಸಂಗ್ರಹ : ಸಾಹೇಬಗೌಡ ಸಿಂದಗಿ, ೨೫.೫.೨೦೧೧

೩೮. ಜಗದೇವಿ ತೋಳೆ
ವ. ೩೮, ಜಾ. ಲಿಂಗಾಯತ, ಶಿ. ಇಲ್ಲ, ಉ. ಒಕ್ಕಲುತನ
ವಿಳಾಸ : ಹಳ್ಳಿಖೇಡ (ಕೆ), ತಾ. ಹುಮ್ನಾಬಾದ, ಜಿ. ಬೀದರ
ಸಂಗ್ರಹ : ವೀರಯ್ಯ ಮಠಪತಿ, ೨೦೧೧

೩೯. ಜಗದೇವಿ ರಾಮಶೆಟ್ಟಿ ಜಡಗೆ
ವ. ೪೫, ಜಾ. ಲಿಂಗಾಯತ, ಶಿ. ೭ನೇ, ಉ. ಒಕ್ಕಲುತನ
ವಿಳಾಸ : ಮುಚಳಂಬ, ತಾ. ಬಸವಕಲ್ಯಾಣ, ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೬-೪-೨೦೧೧

೪೦. ಜಯಶ್ರೀ ಪತಂಗೆ
ಜಾ. ಲಿಂಗಾಯತ, ಉ. ಮನೆಗೆಲಸ
ವಿಳಾಸ : ಗೋರ್ಟಾ (ಬಿ), ತಾ. ಬಸವಕಲ್ಯಾಣ, ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೬-೪-೨೦೧೧

೪೧. ಜ್ಯೋತಿ ಕಾಡಾದಿ
ವ. ೩೭, ಜಾ, ಲಿಂಗಾಯತ, ಶಿ. ಎಲ್.ಎಲ್. ಎಮ್, ಉ.ಉಪನ್ಯಾಸಕಿ
ವಿಳಾಸ : ಗೋದುತಾಯಿ ನಗರ, ಕಲಬುಗಿ,
ಸಂಗ್ರಹ : ಡಾ॥ ಜಯಶ್ರೀ ದಂಡೆ, ೨೦೧೦

೪೨. ತಂಗೆಮ್ಮ ಶರಣಪ್ಪ ವಾಡಿ
ವ. ೪೨, ಜಾ. ಮಾದಿಗ, ಶಿ. ಅನಕ್ಷರಸ್ಥ, ಉ. ಕೂಲಿ
ವಿಳಾಸ : ಧುಮ್ಮನಸೂರ, ತಾ. ಹುಮನಾಬಾದ, ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೧೨-೨-೨೦೧೧

೪೩. ತುಳಸಮ್ಮ ಬಸವರಾಜ ಹೂಗಾರ
ವಿಳಾಸ : ಹಿಪ್ಪರಗಿ, ತಾ. ಸಿಂದಗಿ, ಜಿ. ವಿಜಾಪೂರ
ಸಂಗ್ರಹ : ಸಾಹೇಬಗೌಡ ಸಿಂದಗಿ, ೯-೪-೨೦೧೧

೪೪. ತೇಜಮ್ಮ ಗುಂಡಪ್ಪ ಕೋಟಗಾ
ವ. ೪೫, ಜಾ. ಲಿಂಗಾಯತ, ಶಿ. ೫ನೇ, ಉ. ಒಕ್ಕಲುತನ
ವಿಳಾಸ : ಚಿಟಗುಪ್ಪ, ತಾ. ಹುಮನಾಬಾದ, ಜಿ. ಬೀದರ
ಸಂಗ್ರಹ : ಡಾ. ವೀರಯ್ಯ ಮಠಪತಿ, ೧೪-೧-೨೦೧೧

೪೫. ದೇವಕಮ್ಮ
ವ. ೩೫, ಜಾ. ಲಿಂಗಾಯತ, ಶಿ. ಇಲ್ಲ, ಉ. ಮನೆಗೆಲಸ
ವಿಳಾಸ : ಬ್ರಹ್ಮಪೂರ ಕಲಬುರ್ಗಿ
ಸಂಗ್ರಹ : ಲಕ್ಷ್ಮೀಬಾಯಿ ಬಿರಾದಾರ, ೧೯೭೭

೪೬. ದ್ರೌಪತಿ ಗಟಾಟೆ
ವ. ೪೦, ಜಾ. ಲಿಂಗಾಯತ, ಶಿ. ೩ನೇ, ಉ. ಗೃಹಣಿ
ವಿಳಾಸ : ಬ್ರಹ್ಮಪೂರ ಕಲಬುರ್ಗಿ
ಸಂಗ್ರಹ : ಡಾ॥ ಜಯಶ್ರೀ ದಂಡೆ, ೨೦೧೦

೪೭. ನಂದಿಸೂಗಯ್ಯ
ವ. ೯೦, ಜಾ. ಲಿಂಗಾಯತ, ಶಿ. ೭ನೇ, ಉ. ಅರ್ಚಕ
ವಿಳಾಸ : ದೇವಸೂಗೂರು, ತಾ. ರಾಯಚೂರ, ಜಿ. ರಾಯಚೂರು
ಸಂಗ್ರಹ : ಡಾ. ವೀರಯ್ಯ ಜಿ. ಮಠಪತಿ, ೨೨-೪-೨೦೧೧

೪೮. ನಾಗಮ್ಮ ಬಾಬುರಾವ
ವ. ೪೦, ಜಾ. ಲಿಂಗಾಯತ, ಶಿ. ಅನಕ್ಷರಸ್ಥ, ಉ. ಕೂಲಿ
ವಿಳಾಸ : ಬೋರಂಪಳ್ಳಿ, ತಾ. ಹುಮನಾಬಾದ, ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೧೭-೪-೨೦೧೧

೪೯. ನಾಗಮ್ಮ ಮಠಪತಿ
ವ. ೫೦. ಜಾ. ಸ್ವಾಮಿ, ಶಿ. ಅನಕ್ಷರಸ್ಥ, ಉ. ಕೂಲಿ
ವಿಳಾಸ : ಬೇವಿನ ಚಿಂಚೋಳಿ, ತಾ. ಹುಮನಾಬಾದ, ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೬-೬-೨೦೧೧

೫೦. ನಾಗಮ್ಮ ಹದರಿ
ವ. ೫೫. ಜಾ. ಲಿಂಗಾಯತ, ಶಿ. ಇಲ್ಲ, ಉ. ಮನೆಗೆಲಸ
ವಿಳಾಸ : ಕಡಣಿ, ತಾ. ಜಿ. ಕಲಬುರ್ಗಿ
ಸಂಗ್ರಹ : ಸಾಹುದ್ರಿ ಜಿ. ಎಮ್, ೫-೧೧-೧೯೭೫

೫೧. ನಿಂಗಪ್ಪ ಕಟಿಕಾರ
ವ. ೭೦, ಜಾ. ಕುರುಬ, ಶಿ. ಇಲ್ಲ, ಉ. ಒಕ್ಕಲುತನ
ವಿಳಾಸ : ಮೊಸರಕಲ್, ತಾ. ದೇವದುರ್ಗ, ಜಿ. ರಾಯಚೂರ,
ಸಂಗ್ರಹ : ಡಾ. ವೀರಯ್ಯ ಮಠಪತಿ, ೨೮-೪-೨೦೧೧

೫೨. ನಿಂಗಣ್ಣ ಮಹಾಂತಪ್ಪ ಕುಂಬಾರ
ವಿಳಾಸ : ಮಲ್ಲಾ (ಬಿ), ತಾ. ಜೇವರ್ಗಿ, ಜಿ. ಕಲಬುರ್ಗಿ
ಸಂಗ್ರಹ : ೨೮-೫-೨೦೧೧

೫೩. ನಿರ್ಮಲಾ ಗುಂಡಪ್ಪಾ ಸೇಳಿಗೆರ್
ವ. ೪೬, ಜಾ. ಲಿಂಗಾಯತ, ಶಿ. ೭ನೇ, ಉ. ಮನೆಗೆಲಸ
ವಿಳಾಸ : ಧನಾಶ್ರೀ, ತಾ. ಜಹಿರಾಬಾದ, ಜಿ. ಮೇಡಕ.
ಸಂಗ್ರಹ : ಮಹೇಶ್ವರಿ ಪಾಟೀಲ

೫೪. ನೀಲಮ್ಮ ಎಣೆಗೂರ
ವ. ೪೮, ಜಾ. ಲಿಂಗಾಯತ, ಶಿ. ೩ನೇ, ಉ. ಗೃಹಿಣಿ
ವಿಳಾಸ : ಮಹಾಗಾಂವ, ತಾ. ಗುಲಬರ್ಗಾ, ಜಿ. ಗುಲಬರ್ಗಾ
ಸಂಗ್ರಹ : ಡಾ॥ ಜಯಶ್ರೀ ದಂಡೆ, ೨೦೧೧

೫೫. ನೀಲಮ್ಮ ನರಸಕ್ಕಿ ನೆಲೋಗಿ
ವ. ೫೫, ಜಾ. ಲಿಂಗಾಯತ, ಶಿ. ೯ನೇ, ಉ. ಗೃಹಿಣಿ – ಒಕ್ಕಲುತನ
ವಿಳಾಸ : ಘಟ್ಟಿಕಾರ ಅವರ ಮನೆ, ಬೇಂದ್ರೆ ನಗರ ಜೇವರ್ಗಿ ಕಾಲನಿ,
ಕಲಬುರ್ಗಿ,
ಸಂಗ್ರಹ : ಡಾ॥ ಜಯಶ್ರೀ ದಂಡೆ, ೨೦೧೦

೫೬. ನೀಲಮ್ಮ ಲಾಧಾ
ವ. ೩೯, ಜಾ. ಲಿಂಗಾಯತ, ಶಿ. ೧೦ನೇ, ಉ. ಒಕ್ಕಲುತನ
ವಿಳಾಸ : ಲಾಧಾ, ತಾ. ಭಾಲ್ಕಿ, ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೭-೪-೨೦೧೧

೫೭. ನೀಲಾಂಬಿಕ ಶೇರಿಕಾರ
ವ. ೪೪, ಜಾ. ಲಿಂಗಾಯತ, ಶಿ. ಎಂ.ಎ, ಪಿ.ಎಚ್.ಡಿ, ಉ.ಅಧ್ಯಾಪಕಿ
ವಿಳಾಸ : ಗೋದುತಾಯಿ ನಗರ, ಕಲಬುರ್ಗಿ
ಸಂಗ್ರಹ : ಡಾ॥ ಜಯಶ್ರೀ ದಂಡೆ, ೨೦೧೦

೫೮. ಪತ್ರವ್ವ ಮೋರಿಗೇರಿ
ವಿಳಾಸ : ಗಜಾಪೂರ, ತಾ. ಜಿ. ಬೆಳಗಾಂವ,
ಸಂಗ್ರಹ : ೧೯೭೫

೫೯. ಪರಮ್ಮ ಸಿದ್ಧಪ್ಪ ಕುಣಕಿ (ಇಟ್ಟಗಿ)
ವ. ೪೦, ಜಾ. ಹರಿಜನ, ಶಿ. ಇಲ್ಲ, ಉ. ಒಕ್ಕಲುತನ
ವಿಳಾಸ : ಗೂಗಲ್, ತಾ. ದೇವದುರ್ಗ, ಜಿ. ರಾಯಚೂರ,
ಸಂಗ್ರಹ : ಡಾ. ವೀರಯ್ಯ ಮಠಪತಿ, ೯-೯-೨೦೧೧

೬೦. ಪಾರಮ್ಮ ಕಾಶಿನಾಥ ಪಾರೀಟ
ವ. ೫೫, ಜಾ. ಅಗಸರು, ಶಿ. ಇಲ್ಲ, ಉ. ಬಟ್ಟೆತೊಳೆಯುವುದು
ವಿಳಾಸ : ಮರಕಲ್, ತಾ. ಹುಮನಾಬಾದ, ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೯-೨-೨೦೧೧

೬೧. ಪಾರ್ವತಿ ಮಹಾದೇವಪ್ಪ ಜೆಮಶೆಟ್ಟಿ
ವ. ೫೭, ಜಾ. ಲಿಂಗಾಯತ, ಶಿ. ೭ನೇ, ಉ. ಗೃಹಿಣಿ
ವಿಳಾಸ : ವೆಂಕಟೇಶ ನಗರ, ಕಲಬುರ್ಗಿ
ಸಂಗ್ರಹ : ಡಾ॥ ಜಯಶ್ರೀ ದಂಡೆ, ೨೦೧೦

೬೨. ಪಾರ್ವತಿ ಸಿದ್ದಪ್ಪ ಗುರ್ಜಲ್
ವ. ೫೦, ಜಾ. ಹರಿಜನ, ಶಿ. ಇಲ್ಲ, ಉ. ಒಕ್ಕಲತನ
ವಿಳಾಸ : ದೇವಸೂಗೂರ, ತಾ. ರಾಯಚೂರ, ಜಿ. ರಾಯಚೂರ
ಸಂಗ್ರಹ : ಡಾ. ವೀರಯ್ಯ ಮಠಪತಿ, ೩-೬-೨೦೧೧

೬೩. ಪಿಂಜಾರ ಪಿ.ಎಚ್.
ವ. ೪೦, ಜಾ. ಮುಸ್ಲೀಮ. ಶಿ. ಇಲ್ಲ, ಉ. ಒಕ್ಕಲತನ
ವಿಳಾಸ : ಹುಬ್ಬಳ್ಳಿ, ತಾ. ಹುಬ್ಬಳ್ಳಿ, ಜಿ. ಧಾರವಾಡ
ಸಂಗ್ರಹ : ವಿ. ಆರ್. ಹಡಪದ, ೧೯೭೬

೬೪. ಪ್ರಭು ಮೈಲಾರ
ವ. ೫೦, ಜಾ. ಲಿಂಗಾಯತ, ಶಿ. ಇಲ್ಲ, ಉ. ಒಕ್ಕಲತನ
ವಿಳಾಸ : ಮೋಳಕೇರಾ, ತಾ. ಹುಮನಾಬಾದ, ಜಿ. ಬೀದರ
ಸಂಗ್ರಹ : ಡಾ. ವೀರಯ್ಯ ಮಠಪತಿ, ೨೦೧೧

೬೫. ಪ್ರೇಮಲಾ ಬಸವರಾಜ ಕಣಜೆ
ವ. ೪೫, ಜಾ. ಲಿಂಗಾಯತ, ಶಿ. ೧೦ನೇ, ಉ. ಮನೆಗೆಲಸ
ವಿಳಾಸ : ಗೋರ್ಟಾ (ಬಿ), ತಾ. ಬಸವಕಲ್ಯಾಣ, ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೬-೪-೨೦೧೧

೬೬. ಪ್ರೇಮಲಾ ಕುಲಕರ್ಣಿ
ವ. ___, ಜಾ. ಬ್ರಹ್ಮಣ, ಶಿ. ___, ಉ. ಮನೆಗೆಲಸ,
ವಿಳಾಸ : ಲಾಧಾ, ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೬-೪-೨೦೧೧

೬೭. ಪ್ಯಾಟಪ್ಪ ನಾಯಕ
ವ. ೪೫. ಜಾ. ಬೇಡರು(ನಾಯಕ), ಶಿ. ಇಲ್ಲ, ಉ. ಒಕ್ಕಲುತನ
ವಿಳಾಸ : ಮೊಸರಕಲ್, ತಾ. ದೇವದುರ್ಗ, ಜಿ. ರಾಯಚೂರ
ಸಂಗ್ರಹ : ಡಾ. ವೀರಯ್ಯ ಮಠಪತಿ, ೧-೫೨೦೧೧, ೧೦-೯-೧೧

೬೮. ಬಂದಿಗಿಸಾಬ ದೊಡ್ಡಮನಿ
ವ. ೫೫, ಜಾ. ಮುಸ್ಲೀಮ, ಶಿ. ಇಲ್ಲ, ಉ. ಒಕ್ಕಲುತನ
ವಿಳಾಸ : ಬೀಬೀ ಇಂಗಳಗಿ, ತಾ. ಇಂಡಿ, ಜಿ. ಬಿಜಾಪೂರ
ಸಂಗ್ರಹ : ಶಂಕರಗೌಡ ಬಿರಾದಾರ, ೧೯೭೬

೬೯. ಬಸಮ್ಮ ಎಲಗುಂಡಿ
ವ. ೫೦, ಜಾ. ಲಿಂಗಾಯತ, ಶಿ. ೫ನೇ. ಉ. ಮನೆಗೆಲಸ
ವಿಳಾಸ : ಎಲಗುಂಡಿ, ತಾ. ಚಿಂಚೋಳಿ, ಜಿ. ಗುಲಬರ್ಗಾ
ಸಂಗ್ರಹ : ಆನಂದ ಸಿದ್ದಾಮಣಿ, ೧೬-೪-೨೦೧೧

೭೦. ಬಸಮ್ಮ ಚನ್ನಯ್ಯಸ್ವಾಮಿ ಹಿರೇಮಠ
ವ. ೬೦, ಜಾ. ಲಿಂಗಾಯತ, ಶಿ. ಇಲ್ಲ, ಉ. ಕೂಲಿ
ವಿಳಾಸ : ಮೊಸಕಲ್, ತಾ. ದೇವದುರ್ಗ, ಜಿ. ರಾಯಚೂರ
ಸಂಗ್ರಹ : ಡಾ. ವೀರಯ್ಯ ಜಿ. ಮಠಪತಿ, ೧೮-೪-೨೦೧೧

೭೧. ಬಾಬು ಅಗಸೂರ ವರವಟ್ಟಿ
ವ. ೫೫, ಜಾ. ಅಗಸೂರ, ಶಿ. ೪ನೇ, ಉ. ಬಟ್ಟೆತೊಳೆಯುವುದು
ವಿಳಾಸ : ಚಿನಕೇರಾ. ತಾ. ಹುಮನಾಬಾದ. ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೮-೩-೨೦೧೧

೭೨. ಬೀರಲಿಂಗ ಪೂಜಾರಿ ಹಿರೇಮೇಟಿ
ವ. ೨೫, ಜಾ. ಕುರುಬ, ಶಿ. ಇಲ್ಲ, ಉ. ಒಕ್ಕಲುತನ
ವಿಳಾಸ : ಮೊಸರಕಲ್. ತಾ. ದೇವದುರ್ಗ, ಜಿ. ರಾಯಚೂರ
ಸಂಗ್ರಹ : ಡಾ. ವೀರಯ್ಯ ಮಠಪತಿ, ೧-೫-೨೦೧೧

೭೩. ಭಾಗಮ್ಮ ಝುರೆಪ್ಪಾ ರಾಜನೂರೆ
ವ. ೨೯, ಜಾ. ಲಿಂಗಾಯತ, ಶಿ. ಅನಕ್ಷರಸ್ಥ, ಉ. ಒಕ್ಕಲುತನ
ವಿಳಾಸ : ಗೋರ್ಟಾ (ಬಿ). ತಾ. ಬಸವಕಲ್ಯಾಣ, ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೬-೪-೨೦೧೧

೭೪. ಭಾಗೀರತಿ ಕಾಡಾದಿ
ವ. ೭೦, ಜಾ. ಲಿಂಗಾಯತ, ಶಿ. ೪ನೇ, ಉ. ಗೃಹಿಣಿ
ವಿಳಾಸ : ಹುಲಸೂರ, ತಾ. ಬಸವಕಲ್ಯಾಣ, ಜಿ. ಬೀದರ
ಸಂಗ್ರಹ : ಡಾ. ವೀರಯ್ಯ ಮಠಪತಿ, ೨೪-೧-೨೦೧೧

೭೫. ಭಾಗೀರತಿ ಸ್ವಾಮಿ
ವ. ೬೦, ಜಾ. ಲಿಂಗಾಯತ, ಶಿ. ಇಲ್ಲ, ಉ. ಮನೆಗೆಲಸ
ವಿಳಾಸ : ಮೋಳಕೇರಾ, ತಾ. ಹುಮನಾಬಾದ, ಜಿ. ಬೀದರ
ಸಂಗ್ರಹ : ಡಾ. ವೀರಯ್ಯ ಮಠಪತಿ, ೨೦೧೧

೭೬. ಭಾಗೀರತಿ ವೈಜನಾಥ ಮಠಪತಿ
ವ. ೫೦, ಜಾ. ಲಿಂಗಾಯತ, ಶಿ. ೩ನೇ, ಉ. ಒಕ್ಕಲುತನ
ವಿಳಾಸ : ತೊಗಲೂರ, ತಾ. ಬಸವಕಲ್ಯಾಣ, ಜಿ. ಬೀದರ
ಸಂಗ್ರಹ : ಡಾ॥ ವೀರಯ್ಯ ಜಿ. ಮಠಪತಿ, ೨೪-೧-೨೦೧೧

೭೭. ಭೀಮಣ್ಣ ರಾಮಣ್ಣ ಮಾದಾರ
ಸಂಗ್ರಹ : ಸಾಹೇಬಗೌಡ ಸಿಂದಗಿ, ೧೪-೭-೨೦೧೧

೭೮. ಭೀಮಣ್ಣ ಸಿದ್ದಪ್ಪ ಶಿಖಣ್ಣವರ
ವಿಳಾಸ : ಇಂಗಳೇಶ್ವರ, ತಾ. ಬ.ಬಾಗೇವಾಡಿ, ಜಿ. ಬಿಜಾಪೂರ
ಸಂಗ್ರಹ : ಸಾಹೇಬಗೌಡ, ೬-೬-೨೦೧೧

೭೯. ಭೀಮಬಾಯಿ ಕುಲಕರ್ಣಿ ಸೊಂತ
ವಿಳಾಸ : ಸೊಂತ, ತಾ. ಜಿ. ಕಲಬುರ್ಗಿ, ೩೧-೧೦-೧೯೭೫

೮೦. ಭೀಮಮ್ಮ ಸಿದ್ಧಲಿಂಗಪ್ಪ ಅಂಬಿಗರು
ವ. ೪೦, ಜಾ. ಅಂಬಿಗರು, ಶಿ. ಇಲ್ಲ, ಉ. ಗೃಹಣಿ
ವಿಳಾಸ : ಗೂಗಲ್, ತಾ. ದೇವದುರ್ಗ, ಜಿ. ರಾಯಚೂರ
ಸಂಗ್ರಹ : ಡಾ॥ ವೀರಯ್ಯ ಮಠಪತಿ, ೯-೯-೨೦೧೧

೮೧. ಭೌರಮ್ಮ ಅಮ್ಮಣ್ಣ ಪೂಜಾರಿ
ವಿಳಾಸ : ವಡಗೇರಿ ತಾ. ಜೇವರ್ಗಿ, ಜಿ. ಕಲಬುರ್ಗಿ
ಸಂಗ್ರಹ : ಸಾಹೇಬಗೌಡ ಸಿಂದಗಿ, ೨೦-೫-೨೦೧೧

೮೨. ಭೌರಮ್ಮ ಮಲ್ಲಯ್ಯ ಸಾತಿಹಾಳಮಠ
ಜಾ. ಲಿಂಗಾಯತ, ಉ. ಮನೆಗೆಲಸ
ವಿಳಾಸ : ದೇವರ ಹಿಪ್ಪರಗಿ, ತಾ. ಸಿಂದಗಿ, ಜಿ. ವಿಜಾಪೂರ
ಸಂಗ್ರಹ : ಸಾಹೇಬಗೌಡ, ೯-೪-೨೦೧೧

೮೩. ಮಲ್ಲಪ್ಪ ಬಸಮಾಪ್ಪ ಹುಲಿಮನಿ
ವಿಳಾಸ : ಬಸಾಪೂರ, ತಾ. ಜಿ. ಬೆಳಗಾಂವ, ೧೯೭೫

೮೪. ಮಲ್ಲಮ್ಮ ಬೆನಕಿಪಳ್ಳಿ
ವ. ೪೫, ಜಾ. ಲಿಂಗಾಯತ, ಶಿ. ೪ನೇ, ಉ. ಗೃಹಿಣಿ
ವಿಳಾಸ : ರಾಂಪೂರ, ತಾ. ಹುಮನಾಬಾದ. ಜಿ. ಬೀದರ
ಸಂಗ್ರಹ : ಡಾ|| ವೀರಯ್ಯ ಜಿ. ಮಠಪತಿ, ೧೪-೧-೨೦೧೧

೮೫. ಮಲ್ಲಯ್ಯ ಚಿಕ್ಕಮಠ
ವ. ೩೫, ಜಾ. ಲಿಂಗಾಯತ, ಶಿ. ೧೦ನೇ, ಉ. ಪೂಜಾರಿಕೆ
ವಿಳಾಸ : ಹಳ್ಳಿಖೇಡ (ಕೆ), ತಾ. ಹುಮನಾಬಾದ, ಜಿ. ಬೀದರ
ಸಂಗ್ರಹ : ಡಾ|| ವೀರಯ್ಯ ಮಠಪತಿ, ೨೦೧೧

೮೬. ಮಡಿವಾಳಪ್ಪ ಪೂಜಾರಿ ಬಡಿಗೇರ
ವಿಳಾಸ : ವಡಗೇರಿ, ತಾ. ಜೇವರ್ಗಿ, ಜಿ. ಕಲಬುರ್ಗಿ
ಸಂಗ್ರಹ : ಸಾಹೇಬಗೌಡ, ೩-೫-೨೦೧೧

೮೭. ಮಲಕಮ್ಮ ಶಿ. ಬೊಮ್ಮನಳ್ಳಿ
ಸಂಗ್ರಹ : ಸಾಹೇಬಗೌಡ, ೨೦೧೧

೮೮. ಮಲ್ಲಯ್ಯ ಅತ್ತಾಲಟ್ಟಿ
ವಿಳಾಸ : ಇಂಗಳೇಶ್ವರ, ತಾ. ಬ.ಬಾಗೇವಾಡಿ, ಜಿ. ವಿಜಾಪೂರ
ಸಂಗ್ರಹ : ಪಿ.ಎಸ್. ಚೌಕಿಮಠ, ೨೦೦೮

೮೯. ಮಲ್ಲಿಕಾರ್ಜುನ ಹಡಪದ
ಜಾ. ಲಿಂಗಾಯತ, ಶಿ. ಬಿ.ಎ,
ವಿಳಾಸ : ಗೋರ್ಟಾ (ಬಿ), ತಾ. ಬಸವಕಲ್ಯಾಣ, ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೬-೪-೨೦೧೧

೯೦. ಮಹ್ಮದಸಾಬ ಸಾವಳಗಿ (ಕವಿ)
ವಿಳಾಸ : ಸಾವಳಗಿ. ತಾ. ಜಿ. ಕಲಬುರ್ಗಿ

೯೧. ಮಹಾದೇವಪ್ಪ ಉಪ್ಪಾರ
ವ. ೪೮, ಜಿ. ಉಪ್ಪಾರ, ಶಿ. ೪ನೇ, ಉ. ಉಪ್ಪಾರಕಿ
ವಿಳಾಸ : ತೇರದಾಳ, ತಾ. ಜಮಖಂಡಿ, ಜಿ. ಬಿಜಾಪೂರ
ಸಂಗ್ರಹ : ರಮೇಶ ಅವರಾದಿ, ೧೯೭೭

೯೨. ಮಹಾದೇವಪ್ಪ ಬಿರಾದಾರ
ವ. ೪೫, ಜಾ. ಲಿಂಗಾಯತ, ಶಿ. ೬ನೇ, ಉ. ಕೂಲಿ
ವಿಳಾಸ : ಬೋರಂಪಳ್ಳಿ,
ಸಂಗ್ರಹ : ಆನಂದ ಸಿದ್ದಾಮಣಿ, ೧೭-೪-೨೦೧೧

೯೩. ಮಹಾದೇವಿ ಕವಡಿಮಠ
ವ. ೩೦, ಜಾ. ಲಿಂಗಾಯತ, ಶಿ. ೫ನೇ, ಉ. ಒಕ್ಕಲುತನ
ವಿಳಾಸ : ಮೋಳಕೇರಾ, ತಾ. ಹುಮನಾಬಾದ, ಜಿ. ಬೀದರ
ಸಂಗ್ರಹ : ಡಾ॥ ವೀರಯ್ಯ ಮಠಪತಿ, ೨೦೧೧

೯೪. ಮಹಾದೇವಿ ಕುಂಬಾರ
ವ. ೬೫, ಜಾ. ಲಿಂಗಯತ, ಶಿ. ಇಲ್ಲ, ಉ. ಗೃಹಿಣಿ
ವಿಳಾಸ : ವೆಂಕಟೇಶನಗರ, ಕಲಬುರ್ಗಿ
ಸಂಗ್ರಹ : ಡಾ॥ ಜಯಶ್ರೀ ದಂಡೆ, ೨೦೧೦

೯೫. ಮಹಾದೇವಿ ಬೋರುಟಿ
ವ. ೪೮, ಜಾ. ಲಿಂಗಾಯತ, ಶಿ. ೧೦ನೇ, ಉ. ಗೃಹಿಣಿ
ವಿಳಾಸ : ಕೈಲಾಸ ನಗರ, ಕಲಬುರ್ಗಿ
ಸಂಗ್ರಹ : ಡಾ॥ ಜಯಶ್ರೀ ದಂಡೆ, ೨೦೧೦

೯೬. ಮಹಾದೇವಿ ರಾಜೇಂದ್ರ ಪಾಟೀಲ
ವ. ೪೬, ಜಾ. ಲಿಂಗಾಯತ, ಶಿ. ೭ನೆ, ಉ. ಮನೆಗೆಲಸ
ವಿಳಾಸ : ಧನಾಶ್ರೀ, ತಾ. ಜಹಿರಾಬಾದ, ಜಿ. ಮೇಡಕ
ಸಂಗ್ರಹ : ಮಹೇಶ್ವರಿ ಪಾಟೀಲ

೯೭. ಮಹಾದೇವಿ ಹಿರೇಮಠ
ವ. ೪೦, ಜಾ. ಲಿಂಗಾಯತ, ಶಿ. ೫ನೇ, ಉ. ಮನೆಗೆಲಸ
ವಿಳಾಸ : ಹಳ್ಳಿಖೇಡ (ಕೆ), ತಾ. ಹುಮ್ನಾಬಾದ, ಜಿ. ಬೀದರ
ಸಂಗ್ರಹ : ವೀರಯ್ಯ ಮಠಪತಿ, ೨೦೧೧

೯೮. ಮಹಾನಂದಾ ವೀರಪ್ಪ ಸಂಬಾಜಿ
ವ. ೩೫, ಜಾ. ಕುರುಬ, ಶಿ. ೬ನೇ, ಉ. ಕೂಲಿ(ಸ್ವಯಂಕೃಷಿ)
ವಿಳಾಸ : ಚಿನಕೇರಾ, ತಾ. ಹುಮ್ನಾಬಾದ, ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೮-೩-೨೦೧೧

೯೯. ಮಹಾನಂದಿ ಪೂಜಾರಿ
ವ. ೪೦, ಜಾ. ಹೂಗಾರ, ಶಿ. ೧೦ನೇ, ಉ. ಅರ್ಚಕ
ವಿಳಾಸ : ಗೂಗಲ್, ತಾ. ದೇವದುರ್ಗ, ಜಿ. ರಾಯಚೂರ
ಸಂಗ್ರಹ : ಡಾ॥ ವೀರಯ್ಯ ಜಿ. ಮಠಪತಿ, ೯-೬-೨೦೧೧

೧೦೦. ಮಹಾರುದ್ರಪ್ಪ ಭೀಮಣ್ಣ ಮರಕಲ್
ವ. ೫೩, ಜಾ. ಅಗಸೂರ, ಶಿ. ೬ನೇ, ಉ. ಒಕ್ಕಲುತನ
ವಿಳಾಸ : ಮರಕಲ್, ತಾ. ಹುಮ್ನಾಬಾದ, ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೮-೪-೨೦೧೧

೧೦೧. ಮೀರಾಸಾಹೇಬ (ಕವಿ, ಪಂಚಾಕ್ಷರಿ)
ವಿಳಾಸ : ಮಹಾಗಾಂವ, ತಾ. ಜಿ. ಕಲಬುರ್ಗಿ
ಸಂಗ್ರಹ : ೧೯೭೫

೧೦೨. ಮೀರಾಸಾಹೇಬ ಮುಲ್ಲಾ
ವ. ೫೫, ಜಾ. ಮುಸ್ಲೀಮ್, ಶಿ.-, ಉ. ಒಕ್ಕಲುತನಕ
ವಿಳಾಸ : ಪರಮಾನಂದವಾಡಿ, ತಾ. ರಾಯಬಾಗ, ಜಿ. ಬೆಳಗಾಂವ
ಸಂಗ್ರಹ : ಮೀರಸಾಹೇಬ ಮುಲ್ಲಾ, ೧೯೭೬

೧೦೩. ಯಮುನಕ್ಕ ಶಿ. ಕಡಗೋಲ
ಸಂಗ್ರಹ : ಸಾಹೇಬಗೌಡ ಸಿಂದಗಿ, ೨೦೧೧

೧೦೪. ರಾಜೇಶ್ವರಿ
ವ. ೨೮, ಜಾ. ಲಿಂಗಾಯತ, ಶಿ. ಅನಕ್ಷರಸ್ಥ, ಉ. ಒಕ್ಕಲುತನ
ವಿಳಾಸ : ಗೋರ್ಟಾ (ಬಿ), ತಾ. ಬಸವಕಲ್ಯಾಣ, ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೮-೪-೨೦೧೧

೧೦೫. ರಾಮಶೆಟ್ಟಿ ಖಾನಾಪುರೆ
ವ. ೫೭, ಜಾ. ಲಿಂಗಾಯತ, ಶಿ. ೧೦ನೇ, ಉ. ಒಕ್ಕಲುತನ
ವಿಳಾಸ : ರಾಂಪೂರ, ತಾ. ಹುಮ್ನಾಬಾದ, ಜಿ. ಬೀದರ
ಸಂಗ್ರಹ : ಡಾ. ವೀರಯ್ಯ ಮಠಪತಿ, ೧೪-೧-೨೦೧೧

೧೦೬. ರಾಯಪ್ಪ ಬಸಪ್ಪ ದೊರಿ
ವಿಳಾಸ : ಮುಲ್ಲಾ (ಬಿ), ತಾ. ಜೇವರ್ಗಿ, ಜಿ. ಕಲಬುರ್ಗಿ
ಸಂಗ್ರಹ : ಸಾಹೇಬಗೌಡ ಸಿಂದಗಿ, ೨೮-೫-೨೦೧೧

೧೦೭. ರುಕ್ಮಿಣಿಬಾಯಿ ಘೊಡವಾಡಿ
ವ. ೫೨, ಜಾ. ಕುರುಬ, ಶಿ. ಅನಕ್ಷರಸ್ಥ, ಉ. ಕೂಲಿ
ವಿಳಾಸ : ಚೀನಕೇರಾ, ತಾ. ಹುಮ್ನಾಬಾದ, ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೯-೨-೨೦೧೧

೧೦೮. ರುಬೇನಪ್ಪ ಕಟ್ಟಿಮನಿ
ವ. ೫೦, ಜಾ. ಹರಿಜನ, ಜಿ. ಇಲ್ಲ, ಉ. ಒಕ್ಕಲುತನ
ವಿಳಾಸ : ಮೊಸರಕಲ್, ತಾ. ದೇವದುರ್ಗ, ಜಿ. ರಾಯಚೂರು
ಸಂಗ್ರಹ : ಡಾ. ವೀರಯ್ಯ ಮಠಪತಿ, ೧-೫-೨೦೧೧

೧೦೯. ರೇಖಾ ರಾಮಶೆಟ್ಟಿ ಕಾಡಾದಿ
ವ. ೩೫, ಜಾ. ಲಿಂಗಾಯತ, ಶಿ. ೧೦ನೇ, ಉ. ಗೃಹಿಣಿ
ವಿಳಾಸ : ಹುಲಸೂರು, ತಾ. ಬಸವಕಲ್ಯಾಣ, ಜಿ. ಬೀದರ,
ಸಂಗ್ರಹ : ಡಾ॥ ವೀರಯ್ಯ ಜಿ. ಮಠಪತಿ, ೨೪-೧-೨೦೧೧

೧೧೦. ಲಕ್ಷ್ಮಣ ಭೀಮರಾಯ
ವ. ೭೦, ಜಾ. ಲಿಂಗಾಯತ, ಶಿ. ಅನಕ್ಷರಸ್ಥ, ಉ. ಒಕ್ಕಲುತನ
ವಿಳಾಸ : ಬೇವಿನ ಚಿಂಚೋಳಿ, ತಾ. ಹುಮ್ನಾಬಾದ, ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೬-೬-೨೦೧೧

೧೧೧. ಲಕ್ಷ್ಮೀ ವೈಜಪ್ಪ, ಸಿಂದೋಲಕರ
ವ. ೪೦, ಜಾ. ಲಿಂಗಾಯತ, ಶಿ. ಇಲ್ಲ, ಉ. ಮನೆಗೆಲಸ
ವಿಳಾಸ : ಮುರಕಲ್, ತಾ. ಹುಮ್ನಾಬಾದ, ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೮,೯-೨-೨೦೧೧

೧೧೨. ಲಕ್ಷ್ಮೀಬಾಯಿ ಕವಡೆ
ವ. ೬೦, ಜಾ. ಲಿಂಗಾಯತ, ಶಿ. ಇಲ್ಲ, ಉ. ಮನೆಗೆಲಸ
ವಿಳಾಸ : ಮೋಳಕೇರಾ, ತಾ. ಹುಮ್ನಾಬಾದ, ಜಿ. ಬೀದರ
ಸಂಗ್ರಹ : ಡಾ. ವೀರಯ್ಯ ಮಠಪತಿ, ೨೦೧೧

೧೧೩. ಲಕ್ಷ್ಮೀಬಾಯಿ ಶಂಕರಪ್ಪಾ ಲಾಧಾ
ವ. __, ಜಾ. ಲಿಂಗಾಯತ, ಶಿ. ಅನಕ್ಷರಸ್ಥ, ಉದ್ಯೋಗ, ಒಕ್ಕಲುತನ
ವಿಳಾಸ : ಲಾಧಾ, ತಾ. ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೭-೪-೨೦೧೧

೧೧೪. ಲಲಿತಾ ಬಾಬುರಾವ ಬಿರಾದಾರ
ವ. ___, ಜಾ. ಲಿಂಗಾಯತ, ಶಿ. ಅನಕ್ಷರಸ್ಥ, ಉ. ಒಕ್ಕಲುತನ
ವಿಳಾಸ : ಲಾಧಾ, ತಾ. ಭಾಲ್ಕಿ, ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೪-೪-೨೦೧೧

೧೧೫. ಲಲಿತಾಬಾಯಿ ಕಾಶೆಪ್ಪಾ ಹೂಗಾರ
ವ. ೪೮, ಜಾ. ಹೂಗಾರ, ಶಿ. ೭ನೇ, ಉ. ಮನೆಗೆಲಸ
ವಿಳಾಸ : ವರವಟ್ಟಿ (ಕೆ), ತಾ. ಹುಮ್ನಾಬಾದ, ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೯-೩-೨೦೧೧

೧೧೬. ಲಲಿತಾಬಾಯಿ ಮಾಗಾಂವೆ ಲಾಧಾ
ವ. ___, ಜಾ. ___, ಶಿ. ೫ನೇ, ಉ. ಒಕ್ಕಲುತನ
ವಿಳಾಸ : ಲಾಧಾ, ತಾ. ಭಾಲ್ಕಿ, ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೬-೪-೨೦೧೧

೧೧೭. ಲಿಂಗಮ್ಮ ಗಾಂಜಿಗುಡಿ
ವ. ೬೫, ಜಾ. ಹರಿಜನ, ಶಿ. ಇಲ್ಲ, ಉ. ಒಕ್ಕಲುತನ
ವಿಳಾಸ : ಗಬ್ಬೂರು, ತಾ. ದೇವದುರ್ಗ, ಜಿ. ರಾಯಚೂರು
ಸಂಗ್ರಹ : ಡಾ. ವೀರಯ್ಯ ಮಠಪತಿ, ೧೦-೬-೨೦೧೧

೧೧೮. ವಿಜಯಕುಮಾರ ಪರಶಣೆ
ವ. ೬೦, ಜಾ. ಲಿಂಗಾಯತ, ಶಿ. ___, ಉ. ಕಲಾ ಶಿಕ್ಷಕರು
ವಿಳಾಸ : ದಾಡಗಿ, ತಾ. ಭಾಲ್ಕಿ, ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೫-೪-೨೦೧೧

೧೧೯. ವಿಮಲಾಬಾಯಿ ಕಾಶಪ್ಪ ಹೂಗಾರ
ವಿಳಾಸ : ವರವಟ್ಟಿ, ತಾ. ಹುಮ್ನಾಬಾದ, ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ

೧೨೦. ವಿದ್ಯಾವತಿ ಮಲ್ಲಿಕಾರ್ಜುನ
ವ. ___, ಜಾ. ಲಿಂಗಾಯತ, ಶಿ. ೫ನೇ, ಉ. ಒಕ್ಕಲುತನ
ವಿಳಾಸ : ಮುಚಳಂಬ, ತಾ. ಬಸವಕಲ್ಯಾಣ, ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೬-೪-೨೦೧೧

೧೨೧. ವಿದ್ಯಾವತಿ ಲಾಧಾ
ವ. ೩೭, ಜಾ. ಲಿಂಗಾಯತ, ಶಿ. ಅನಕ್ಷರಸ್ಥ, ಉ. ಒಕ್ಕಲುತನ
ವಿಳಾಸ : ಲಾಧಾ, ತಾ. ಭಾಲ್ಕಿ, ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೭-೪-೨೦೧೧

೧೨೨. ವಿಮಲಾಬಾಯಿ ಸಿದ್ದೇಶ್ವರ
ವ. ೪೫, ಜಾ. ಲಿಂಗಾಯತ, ಶಿ. ಇಲ್ಲ, ಉ. ಗೃಹಿಣಿ
ವಿಳಾಸ : ಹಳ್ಳಿಖೇಡ (ಕೆ), ತಾ. ಹುಮ್ನಾಬಾದ, ಜಿ. ಬೀದರ
ಸಂಗ್ರಹ : ಡಾ. ವೀರಯ್ಯ ಮಠಪತಿ

೧೨೩. ವೀರಯ್ಯ ಮಠಪತಿ
ವ. ೩೫, ಜಾ. ಲಿಂಗಾಯತ, ಶಿ. ___, ಉ. ಒಕ್ಕಲುತನ
ವಿಳಾಸ : ಮುಧೋಳ, ತಾ. ಯಲಬುರ್ಗಾ, ಜಿ. ರಾಯಚೂರ
ಸಂಗ್ರಹ : ಶರಣಪ್ಪ ಕ. ಸಜ್ಜನ, ೧೯೭೬

೧೨೪. ವೈಜನಾಥ ಎಸ್. ಹಲಬರ್ಗಿ
ವ. ೩೮, ಜಾ. ಲಿಂಗಾಯತ, ಶಿ. ೫ನೇ, ಉ. ಒಕ್ಕಲುತನ
ವಿಳಾಸ : ಸಿರ್ಸಿ (ಎ), ತಾ. ಜಿ. ಬೀದರ
ಸಂಗ್ರಹ : ಡಾ. ವೀರಯ್ಯ ಮಠಪತಿ, ೨೨-೧-೨೦೧೧

೧೨೫. ಶಕುಂತಲಾ ಕಂಟೆಪ್ಪ
ವ. ___, ಜಾ. ಲಿಂಗಾಯತ, ಶಿ. ಅನಕ್ಷರಸ್ಥ, ಉ. ಒಕ್ಕಲುತನ
ವಿಳಾಸ : ಗೋರ್ಟಾ (ಬಿ), ತಾ. ಬಸವಕಲ್ಯಾಣ, ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೭-೪-೨೦೧೧

೧೨೬. ಶರಣಪ್ಪ ಗುರುಲಿಂಗಪ್ಪ ಮೂಲಗೆ(ಕವಿ)
ವಿಳಾಸ : ಕರಹರಿ, ತಾ. ಆನಂದ, ಜಿ. ಗುಲಬರ್ಗಾ.

೧೨೭. ಶರಣಪ್ಪ ಭೀಮಪ್ಪ ಕಡಗೋಲ
ವಿಳಾಸ : ಇಂಗಳೇಶ್ವರ, ತಾ. ಬ.ಬಾಗೇವಾಡಿ, ಜಿ. ವಿಜಾಪೂರ
ಸಂಗ್ರಹ : ೧೫-೫-೨೦೧೧

೧೨೮. ಶಶಿಕಲಾ ಮಾಲೀಪಾಟೀಲ
ವ. ೨೦, ಜಾ. ಲಿಂಗಾಯತ, ಶಿ. ಇಲ್ಲ, ಉ. ಮನೆಗೆಲಸ
ವಿಳಾಸ : ರಾಜನಾಳ, ತಾ. ಜಿ. ಕಲಬುರ್ಗಿ
ಸಂಗ್ರಹ : ಮಾಲಿಪಾಟೀಲ ಸಿ. ಎಸ್., ೧೯೭೫

೧೨೯. ಶಶಿಕಲಾ ಶರಣಪ್ಪ ಗಿರಿ
ವ. ೬೪, ಜಾ. ಲಿಂಗಾಯತ, ಶಿ. ೧೦ನೇ, ಉ. ಗೃಹಿಣಿ
ವಿಳಾಸ : ವೆಂಕಟೇಶನಗರ, ಕಲಬುರ್ಗಿ
ಸಂಗ್ರಹ : ಡಾ॥ ಜಯಶ್ರೀ ದಂಡೆ, ೨೦೧೦

೧೨೯. ಶಶಿಕಲಾ ಎಸ್. ವಸ್ತ್ರದ
ವಿಳಾಸ : ಕಲಬುರ್ಗಿ
ಸಂಗ್ರಹ : ಅಶೋಕ ಬಿರಾದಾರ, ೧೯೭೫

೧೩೧. ಶಾಂತಾಬಾಯಿ ರಾಚಪಗೋಳ
ವ. ೨೫, ಜಾ. ಲಿಂಗಾಯತ, ಶಿ. ೫ನೇ, ಉ. ಮನೆಗೆಲಸ
ವಿಳಾಸ : ಶಹಬಾಜಾರ, ಕಲಬುರ್ಗಿ
ಸಂಗ್ರಹ : ಬಿ. ಎಸ್. ಪೋಲಿಸ ಪಾಟೀಲ, ೧೯೭೭

೧೩೨. ಶಾಂತಾಬಾಯಿ ಹೊಳಕುಂದಿ
ವ. ೩೪, ಜಾ. ಲಿಂಗಾಯತ, ಶಿ. ಇಲ್ಲ, ಉ. ಗೃಹಿಣಿ
ವಿಳಾಸ : ಮೋಳಕೇರಾ, ತಾ. ಹುಮ್ನಾಬಾದ, ಜಿ. ಬೀದರ
ಸಂಗ್ರಹ : ಡಾ. ವೀರಯ್ಯ ಮಠಪತಿ

೧೩೩. ಶಾಂತಮ್ಮಾ ಗಿರಿಮಲ್ಲಪ್ಪ ಪೂಜಾರಿ (ಕುಂಬಾರ)
ವಿಳಾಸ : ವಡಗೇರಿ, ತಾ. ಜೇವರ್ಗಿ, ಜಿ. ಗುಲಬರ್ಗಾ
ಸಂಗ್ರಹ : ಸಾಹೇಬಗೌಡ ಸಿಂದಗಿ, ೧೯.೫-೨೦೧೧

೧೩೪. ಶಾಂತಮ್ಮ ಹಿರೇಮಠ
ವ. ೫೮, ಜಾ. ಸ್ವಾಮಿ, ಶಿ. ೫ನೇ, ಉ. ಕೂಲಿ
ವಿಳಾಸ : ದಾಡಗಿ, ತಾ. ಭಾಲ್ಕಿ, ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೪-೪-೨೦೧೧

೧೩೫. ಶಾಂತಾಬಾಯಿ ಕಾಮಶೆಟ್ಟಿ
ವ. ೭೦, ಜಾ. ಲಿಂಗಾಯತ, ಶಿ. ಅನಕ್ಷರಸ್ಥ, ಉ. ಒಕ್ಕಲುತನ
ವಿಳಾಸ : ಮುಚಳಂಬ, ತಾ. ಬಸವಕಲ್ಯಾಣ, ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೬-೪-೨೦೧೧

೧೩೬. ಶಾಂತಾಬಾಯಿ ಲಾಧಾ
ವಿಳಾಸ : ಲಾಧಾ, ತಾ. ಭಾಲ್ಕಿ, ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೪-೪-೨೦೧೧

೧೩೭. ಶಾಮಲಾಬಾಯಿ ಕಲ್ಲಪ್ಪ ಅಗಸರ
ವಿಳಾಸ : ಜಾಲವಾಡಿ, ತಾ. ಸಿಂದಗಿ, ಜಿ. ವಿಜಾಪೂರ
ಸಂಗ್ರಹ : ಸಾಹೇಬಗೌಡ ಸಿಂದಗಿ, ೨೦೧೧

೧೩೮. ಶಾರಾದಾಬಾಯಿ ಶಿವಲಾಲಸಿಂಗ
ವ. ೫೬, ಜಾ. ರಜಪೂರ, ಶಿ. ಅನಕ್ಷರಸ್ಥ, ಉ. ಕೂಲಿ
ವಿಳಾಸ : ವರವಟ್ಟಿ, ತಾ. ಹುಮನಾಬಾದ, ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೯-೨-೨೦೧೧

೧೩೯. ಶಿವರಾಜ ಕಂದಗೂಳೆ
ವ. ೫೫, ಜಾ. ಕಬ್ಬಲಿಗ, ಶಿ. ಅನಕ್ಷರಸ್ಥ, ಉ. ಕೂಲಿ
ವಿಳಾಸ : ದಾಡಗಿ, ತಾ. ಭಾಲ್ಕಿ, ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೩-೪-೨೦೧೧

೧೪೦. ಶಿವರುದ್ರಪ್ಪ ಶರಣಪ್ಪ ಬಿರಾದಾರ(ಕವಿ)
ವ. ೪೫, ಜಾ. ಲಿಂಗಾಯತ, ಶಿ. ೮ನೇ, ಉ. ಒಕ್ಕಲುತನ
ವಿಳಾಸ : ಕಮಲಾನಗರ, ತಾ. ಆಳಂದ, ಜಿ. ಕಲಬುರ್ಗಿ
ಸಂಗ್ರಹ : ಶಿವರುದ್ರಪ್ಪ ಶರಣಪ್ಪ ಬಿರಾದಾರ, ೧೯೭೬

೧೪೧. ಶಿವಶರಣಪ್ಪ ಚಂದ್ರಮಪ್ಪ ನೆಲ್ಲೂರ
ವ. ೩೫, ಜಾ. ಲಿಂಗಾಯತ, ಶಿ. ೫ನೇ, ಉ. ___,
ವಿಳಾಸ : ನೆಲ್ಲೂರ, ತಾ. ಆಳಂದ, ಜಿ. ಗುಲಬರ್ಗಾ
ಸಂಗ್ರಹ : ಸಿದ್ದಲಿಂಗ ಗಂಗಾಧರ ಮಾಸ್ತರ, ೧೯೭೭

೧೪೨. ಶೀಲಾ ವಿ. ಕೋಣೀನ
ವ. ೪೦, ಜಾ. ಲಿಂಗಾಯತ, ಶಿ. ಬಿ.ಎ, ಉ. ಗೃಹಿಣಿ
ವಿಳಾಸ : ವೆಂಕಟೇಶ ನಗರ, ಕಲಬುರ್ಗಿ
ಸಂಗ್ರಹ : ಡಾ॥ ಜಯಶ್ರೀ ದಂಡೆ, ೨೦೧೦

೧೪೩. ಸಂಗಮ್ಮ ರಾಚಯ್ಯ
ವ. ೭೦, ಜಾ. ಲಿಂಗಾಯತ, ಶಿ. ಅನಕ್ಷರಸ್ಥ, ಉ. ಮನೆಗೆಲಸ
ವಿಳಾಸ : ಎಲಗುಂಡಿ, ತಾ. ಚಿಂಚೋಳಿ, ಜಿ. ಗುಲಬರ್ಗಾ
ಸಂಗ್ರಹ : ಆನಂದ ಸಿದ್ದಾಮಣಿ, ೧೬-೪-೨೦೧೧

೧೪೪. ಸಂಗಮ್ಮ ಶರಣಪ್ಪ ಲಾಧಾ
ವ. ___, ಜಾ. ಲಿಂಗಾಯತ, ಶಿ. ___, ಉ. ಒಕ್ಕಲುತನ
ವಿಳಾಸ : ಲಾಧಾ, ತಾ. ಭಾಲ್ಕಿ, ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೪-೪-೨೦೧೧

೧೪೫. ಸಂಗಮ್ಮ ಸೌದಗಿ
ವ. ೬೫, ಜಾ. ಲಿಂಗಾಯತ, ಶಿ. ಇಲ್ಲ, ಉ. ಗೃಹಿಣಿ
ವಿಳಾಸ : ಮೋಳಕೇರಾ, ತಾ. ಹುಮ್ನಾಬಾದ, ಜಿ. ಬೀದರ
ಸಂಗ್ರಹ : ಡಾ. ವೀರಯ್ಯ ಮಠಪತಿ

೧೪೬. ಸಣ್ಣಮಲ್ಲಮ್ಮ ಲಂಕಣಿ
ವ. ೬೫, ಜಾ. ಹರಿಜನ, ಶಿ. ಇಲ್ಲ, ಉ. ಒಕ್ಕಲುತನ
ವಿಳಾಸ : ಮೊಸರಕಲ್ಲ, ತಾ. ದೇವದುರ್ಗ, ಜಿ. ರಾಯಚೂರ
ಸಂಗ್ರಹ : ಡಾ. ವೀರಯ್ಯ ಮಠಪತಿ, ೧೦-೯-೨೦೧೧

೧೪೭. ಸತ್ಯಪ್ಪ ಧರೆಪ್ಪ ಮನಗೋಳಿ
ವಿಳಾಸ : ಜಾಲವಾದಿ, ತಾ. ಸಿಂದಗಿ, ಜಿ. ಬಿಜಾಪೂರ
ಸಂಗ್ರಹ : ಸಾಹೇಬಗೌಡ, ೪-೫-೨೦೧೧

೧೪೮. ಸರಸಮ್ಮಾ ಇಂಡೆ
ವ. ೮೦, ಜಾ. ಲಿಂಗಾಯತ, ಶಿ. ಅನಕ್ಷರಸ್ಥ, ಉ. ಕೂಲಿ
ವಿಳಾಸ : ಎಲಗುಂಡಿ, ತಾ. ಚಿಂಚೋಳಿ, ಜಿ. ಗುಲಬರ್ಗಾ.
ಸಂಗ್ರಹ : ೧೬-೪-೨೦೧೧

೧೪೯. ಸರಸ್ವತಿ ಅಕ್ಕಸಾಲಿಗ
ವ. — ಜಾ. ಅಕ್ಕಸಾಲಿಗ, ಶಿ. —, ಉ. ಮನೆಗೆಲಸ,
ವಿಳಾಸ : ಗೋರ್ಟಾ(ಬಿ), ತಾ. ಬಸವಕಲ್ಯಾಣ, ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೬-೪-೨೦೧೧

೧೫೦. ಸರಸ್ವತಿ ಗದಗೆಪ್ಪಾ ಧಬಾಲೆ
ವ. ೪೦, ಜಾ. ಲಿಂಗಾಯತ, ಶಿ. ಇಲ್ಲ, ಉ. ಗೃಹಿಣಿ
ವಿಳಾಸ : ಹುಲಸೂರು, ತಾ. ಬಸವಕಲ್ಯಾಣ, ಜಿ. ಬೀದರ
ಸಂಗ್ರಹ : ಡಾ|| ವೀರಯ್ಯ. ಜಿ. ಮಠಪತಿ, ೨೪-೧-೨೦೦೧

೧೫೧. ಸರಸ್ವತಿ ಬಾಬು ಅಗಸುರ
ವ. ೫೩, ಜಾ. ಅಗಸೂರ, ಶಿ. ಅನಕ್ಷರಸ್ಥ, ಉ. ಕುಲಕಸುಬು
ವಿಳಾಸ : ಚೀನಕೇರಾ, ತಾ. ಹುಮನಾಬಾದ, ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೨೫-೨-೨೦೧೧

೧೫೨. ಸರೋಜನಿಬಾಯಿ ಪಾಟೀಲ
ವಿಳಾಸ : ಸೊಂತ, ತಾ. ಜಿ. ಕಲಬುರ್ಗಿ
ಸಂಗ್ರಹ : ವೀರಂತಪ್ಪ ನಿಂಗನಾಯ್ಕ, ೩೧-೧೦-೧೯೭೫

೧೫೩. ಸರೂಬಾಯಿ ಧರ್ಮರಾಜಾ ಶಾಬಾದಿ
ವ. ೪೨, ಜಾ. ಲಿಂಗಾಯತ, ಶಿ. ಇಲ್ಲ, ಉ. ಮನೆಗೆಲಸ
ವಿಳಾಸ : ಕುಸನೂರು, ತಾ. ಜಿ. ಕಲಬುರ್ಗಿ
ಸಂಗ್ರಹ : ವೀರಣ್ಣ ದಂಡೆ, ೨೪-೧-೨೦೦೧

೧೫೪. ಸರ್ವಮಂಗಳಾ ಸಿದ್ರಾಮಪ್ಪ ಜೋಗೂರ
ವ. ೬೦, ಜಾ. ಲಿಂಗಾಯತ, ಶಿ. ೧೦ನೇ, ಉ. ಗೃಹಿಣಿ
ವಿಳಾಸ : ಘಾಟಗೆ ಲೇಔಟ ಎಂ.ಎಸ್.ಕೆ. ಮೀಲ್‌ಚಾಳ, ಕಲಬುರ್ಗಿ
ಸಂಗ್ರಹ : ಡಾ|| ಜಯಶ್ರೀ ದಂಡೆ, ೨೦೧೦

೧೫೫. ಸಾತಯ್ಯ ಸ್ವಾಮಿ
ವ. ೬೦, ಜಾ. ಲಿಂಗಾಯತ, ಶಿ. ೫ನೇ, ಉ. ಒಕ್ಕಲುತನ
ವಿಳಾಸ : ಬಾಳಿಗೇರಿ, ತಾ. ಅಥಣಿ, ಜಿ. ಬೆಳಗಾಂವ
ಸಂಗ್ರಹ : ಸಾತಯ್ಯ ಸ್ವಾಮಿ, ೧೯೭೬

೧೫೬. ಸಿದ್ದಮ್ಮ ಖಪಾಟೆ
ವ. ೪೫, ಜಾ. ಲಿಂಗಾಯತ, ಶಿ. ಇಲ್ಲ, ಉ. ಮನೆಗೆಲಸ
ವಿಳಾಸ : ಮಹಾಗಾಂವ, ತಾ. ಜಿ. ಕಲಬುರ್ಗಿ
ಸಂಗ್ರಹ : ಎಸ್. ಎಂ. ಬಿರಾದಾರ, ೨-೮-೧೯೭೬

೧೫೭. ಸಿದ್ದಮ್ಮ ಗುಂಡಪ್ಪ ಶೀಪೂರ
ವಿಳಾಸ : ವಡಗೇರಿ ತಾ. ಜೇವರ್ಗಿ, ಜಿ. ಕಲಬುರ್ಗಿ
ಸಂಗ್ರಹ : ಸಾಹೇಬಗೌಡ ಸಿಂದಗಿ, ೨೯-೫-೨೦೧೧

೧೫೮. ಸಿದ್ರಾಮಪ್ಪ ಮಾಲಿಪಾಟೀಲ
ವ. ೫೫, ಜಾ. ಲಿಂಗಯತ, ಶಿ. ೧೨ನೇ, ಉ. ಒಕ್ಕಲುತನ
ವಿಳಾಸ : ದೇವಸೂಗೂರು, ತಾ. ಜಿ. ರಾಯಚೂರು
ಸಂಗ್ರಹ : ಡಾ॥ ವೀರಯ್ಯ ಜಿ. ಮಠಪತಿ, ೨೨-೪-೨೦೧೧

೧೫೯. ಸುಜಾತ ಬೋಳಗಂಡಿ
ವ. ೪೦, ಜಾ. ಹರಿಜನ, ಶಿ. ಇಲ್ಲ, ಉ. ಒಕ್ಕಲುತನ
ವಿಳಾಸ : ಗಬ್ಬೂರ, ತಾ. ದೇವದುರ್ಗ, ಜಿ. ರಾಯಚೂರ,
ಸಂಗ್ರಹ : ಡಾ. ವೀರಯ್ಯ ಜಿ. ಮಠಪತಿ, ೧-೬-೨೦೧೧

೧೬೦. ಸುಭದ್ರಾ ಗಟಾಟೆ
ವ. ೫೫, ಜಾ. ಲಿಂಗಾಯತ, ಶಿ. ಇಲ್ಲ, ಉ. ಗೃಹಿಣಿ
ವಿಳಾಸ : ಬ್ರಹ್ಮಪುರ, ಕಲಬುರ್ಗಿ
ಸಂಗ್ರಹ : ಡಾ॥ ಜಯಶ್ರೀ ದಂಡೆ, ೨೦೧೦

೧೬೧. ಸುಮಂಗಲಾ ಮಲ್ಲಿಕಾರ್ಜುನ ದೇವೂರ
ವಿಳಾಸ : ಜಾಲವಾದಿ, ತಾ. ಸಿಂದಗಿ, ಜಿ. ವಿಜಾಪೂರ
ಸಂಗ್ರಹ : ಸಾಹೇಬಗೌಡ ಸಿಂದಗಿ, ೨೦೧೧

೧೬೨. ಸುಮಿತ್ರಾದೇವಿ ಅಂಗಡಿ
ವ. ೭೫, ಜಾತಿ. ಲಿಂಗಾಯತ, ಶಿ. ೧೦ನೇ, ಉ. ಶಿಕ್ಷಕಿ
ವಿಳಾಸ : ಇಲಕಲ್ಲ, ತಾ. ಹುನಗುಂದ, ಜಿ. ಬಾಗಲಕೋಟ
ಸಂಗ್ರಹ : ಡಾ॥ ಜಯಶ್ರೀ ದಂಡೆ, ೨೦೧೧

೧೬೩. ಸುಶೀಲಾಬಾಯಿ ರಾಜಶೇಖರ ಇಲ್ಲಾಳಕರ್
ವ. ೬೨, ಜಾ. ಜಂಗಮ, ಶಿ. ೬ನೇ, ಉ. ಕಸೂತಿ
ವಿಳಾಸ : ಎಲಗುಂಡಿ, ತಾ. ಚಿಂಚೋಳಿ, ಜಿ. ಗುಲಬರ್ಗಾ
ಸಂಗ್ರಹ : ೧೬-೪-೨೦೧೧

೧೬೪. ಸುವರ್ಣಾಬಾಯಿ ಖೇಳಗಿ
ವ. ೬೦, ಜಾ. ಲಿಂಗಾಯತ, ಶಿ. ಇಲ್ಲ, ಉ. ಒಕ್ಕಲುತನ
ವಿಳಾಸ : ಮೋಳಕೇರಾ, ತಾ. ಹುಮನಾಬಾದ, ಜಿ. ಬೀದರ
ಸಂಗ್ರಹ : ಡಾ. ವೀರಯ್ಯ ಮಠಪತಿ, ೨೦೧೧

೧೬೫. ಸೂಗಪ್ಪ ಸೌಕಾರ
ವ. ೨೦, ಜಾ. ಲಿಂಗಾಯತ, ಶಿ. ೧೦ನೇ, ಉ. ಒಕ್ಕಲುತನ
ವಿಳಾಸ : ಮೊಸರಕಲ್, ತಾ. ದೇವದುರ್ಗ, ಜಿ. ರಾಯಚೂರ
ಸಂಗ್ರಹ : ಡಾ. ವೀರಯ್ಯ ಮಠಪತಿ, ೨೮-೪-೨೦೧೧

೧೬೬. ಸೂಗಮ್ಮ ವೈಜನಾಥ ಮೇತ್ರಿ
ವ. ೪೦, ಜಾ. ಕುರುಬುರು, ಶಿ. ೫ನೇ, ಉ. ಮನೆಗೆಲಸ
ವಿಳಾಸ : ಮರಕಲ್ಲ, ತಾ.ಹುಮ್ನಾಬಾದ, ಜಿ. ಬೀದರ
ಸಂಗ್ರಹ : ಆನಂದ ಸಿದ್ದಾಮಣಿ, ೧೪-೫-೨೦೧೧

೧೬೭. ಹುಲಗಮ್ಮ ಪ್ರಭುರಾಯ ಹರಿಜನ
ವ. ೪೦, ಜಾ. ಹರಿಜನ, ಶಿ. ಇಲ್ಲ, ಉ. ಗೃಹಿಣಿ
ವಿಳಾಸ : ಗೂಗಲ್, ತ. ದೇವದುರ್ಗ, ಜಿ. ರಾಯಚೂರ
ಸಂಗ್ರಹ : ಡಾ. ವೀರಯ್ಯ ಮಠಪತಿ, ೯-೯-೨೦೧೧

ಅನುಬಂಧ–೨

ಆಧಾರ ಗ್ರಂಥಗಳು

೧. ಅವ್ವ ಕಾಡಾದಿ ಹಾಡಿದ ಹಾಡು
ಸಂ: ಡಾ॥ ನೀಲಾಂಬಿಕಾ ಪೋಲಿಸ ಪಾಟೀಲ
– ಶ್ರೀಮತಿ ಸರಸ್ವತಿ ಮಲ್ಲಿಕಾರ್ಜುನ ಕಾಡಾದಿ
ಗೋದುತಾಯಿ ನಗರ, ಗುರುಲಬರ್ಗಾ. ೨೦೦೭.

೨. ಐದು ಜನಪದ ಕಥನ ಗೀತೆಗಳು
ಸಂ: ಕ್ಯಾತನಹಳ್ಳಿ ರಾಮಣ್ಣ
– ಜಾನಪದ ಬಳಗ, ಮಾನಸಗಂಗೋತ್ರಿ
ಮೈಸೂರು–೫೭೦೦೦೬. ೧೯೭೦.

೩. ಕನ್ನಡ ಗೀಗೀ ಪದಗಳು (ಹುಲಕುಂದ ಶಿವಲಿಂಗಸ್ವಾಮಿ ರಚಿತ)
ಸಂ: ಧುಂಡಿರಾಜ ಲಿಮಮೆ
–ಸೀತಾರಾಮ ಪ್ರಕಾಶನ, ರಾಮದುರ್ಗ. ೧೯೮೫.

೪. ಕನ್ನಡ ಜಾನಪದ ಗೀತಗಳು
– ಡಾ॥ ಬಿ.ಎಸ್.ಗದ್ದಗಿಮಠ
– ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ೧೯೬೯.

೫. ಕನ್ನಡ ವೃತ್ತಿಗಾಯಕ ಕಾವ್ಯಗಳು
ಸಂ: ಡಾ॥ ಜೀ.ಶಂ.ಪರಮಶಿವಯ್ಯ
– ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. ೧೯೮೨.

೬. ಕೊಳ್ಳೂರ ಹುಸನಾ ಸಾಹೇಬ
ಡಾ॥ ಜಿ.ಬಿ.ವಿಸಾಜಿ
– ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು. ೧೯೯೮.

೭. **ಕೋಲುಪದಗಳು (ಜೀವನ ಜೋಕಾಲಿ, ಭಾಗ-೮)**
ಸಂ: ಡಾ|| ಎಂ.ಎಸ್.ಸುಂಕಾಪುರ
– ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ೧೯೭೬.

೮. **ಕ್ವಾನಳ್ಳಿ ಹೊನ್ನಪ್ಪ ಮಹಾರಾಜ**
ಸಂ: ಡಾ|| ಟಿ.ಎಂ. ಭಾಸ್ಕರ್
– ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು. ೧೯೯೮.

೯. **ಗಿರಿ ಕೋಗಿಲೆ (ಶ್ರೀಮತಿ ಶಶಿಕಲಾ ಶರಣಪ್ಪ ಗಿರಿ ಹಾಡಿದ ಜನಪದ ಹಾಡುಗಳ ಸಂಗ್ರಹ)**
ಸಂ: ಡಾ|| ನೀಲಾಂಬಿಕಾ ಎ.ಪೋಲಿಸ ಪಾಟೀಲ
– ಡಾ|| ಶರಣಪ್ಪ ಬಿ.ಗಿರಿ, ಟೆಂಪಲ್ ಪಾರ್ಕ್,
ವೆಂಕಟೇಶ ನಗರ, ಗುಲಬರ್ಗಾ. ೨೦೦೮.

೧೦. **ಗೆಜ್ಜೆ ನುಡದಾವ ಗಿಲಿಗಿಲಿ**
ಸಂ: ಎ. ಕೆ. ರಾಮೇಶ್ವರ, ಎಚ್. ಕೆ. ಶೇಖರ
– ಜೇವರಗಿ ತಾಲೂಕ ಮಟ್ಟದ ಜಾನಪದ ಕಲಾಮೇಳ
ಸ್ವಾಗತ ಸಮಿತಿ, ಜೇವರ್ಗಿ, ಜಿ. ಗುಲಬರ್ಗಾ. ೧೯೮೯.

೧೧. **ಜನಪದ ಹಾಲುಮತ ಮಹಾಕಾವ್ಯ**
ಸಂ: ಡಾ|| ವೀರಣ್ಣ ದಂಡೆ
– ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು. ೨೦೦೦

೧೨. **ಜನಪದ ಪರಿಮಳ**
ಸಂ: ಡಾ|| ಬಿ.ಎಸ್. ಕುಲಕರ್ಣಿ
– ಕನ್ನಡ ಸಂಶೋಧನಾ ಸಂಸ್ಥೆ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ೧೯೮೦.

೧೩. **ಜಾನಪದ ರಸಗಂಗೆ**
ಸಂ: ಸ. ಚ. ಮಹಾದೇವ ನಾಯಕ್
– ಕಾವ್ಯಾಲಯ ಪ್ರಕಾಶಕರು, ಮೈಸೂರು. ೧೯೬೨.

೧೪. **ದಲಿತ ಕವಿ ಜಂಬಗಿ ಶರಣರ ಹಾಡುಗಳು**
ಸಂ: ಡಾ|| ಮಲ್ಲಿಕಾರ್ಜುನ ಶಿ. ಲಠ್ಠೆ
– ರವೀಂದ್ರ ಪ್ರಕಾಶನ, ವಿಶ್ವೇಶ್ವರಯ್ಯ ನಗರ, ಗುಲಬರ್ಗಾ. ೨೦೦೮.

೧೫. ದ್ಯಾಗಾಯಿ ಗುಂಡಪ್ಪ
ಸಂ: ಅಪ್ಪಾಸಾಬ ಬಿರಾದಾರ
– ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು. ೧೯೯೮.

೧೬. ದುಂದುಮೆ ಪದ (ಜೀವನ ಜೋಕಾಲಿ, ಭಾಗ – ೫)
ಸಂ: ಡಾ॥ ಎಂ.ಎಸ್.ಸುಂಕಾಪುರ
– ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ೧೯೭೫.

೧೭. ದೇವರ ಬಂದಾವ ಬನ್ನೀರೆ
ಸಂ. ಡಾ। ಶಿವಾನಂದ ಗುಬ್ಬಣ್ಣನವರ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೯

೧೮. ದೇಸಿ ದೃಷ್ಟಿ
ಡಾ॥ ವೀರಣ್ಣ ದಂಡೆ
– ಕವಿಮಾರ್ಗ ಪ್ರಕಾಶನ, ಗುಲಬರ್ಗಾ. ೨೦೦೧.

೧೯. ನಡುನೀರ ತಂಪು
ಸಂ: ಪ್ರೊ॥ ಕಾಳೇಗೌಡ ನಾಗವಾರ, ಕ್ಯಾತನಹಳ್ಳಿ ರಾಮಣ್ಣ
– ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು. ೨೦೧೦.

೨೦. ನಮ್ಮ ಕನ್ನಡ ಪ್ರೇಮದ ಜ್ಯೋತಿ
ಸಂ: ರೇಣುಕಾ ಕೋಡಗುಂಟಿ
– ಬಂಡಾರ ಪ್ರಕಾಶನ, ಮಸ್ಕಿ, ಜಿ. ರಾಯಚೂರ. ೨೦೦೮.

೨೧. ಪದವವೆ ನಮ್ಮ ಎದೆಯಲ್ಲಿ
ಸಂ: ಎಚ್.ಎಲ್. ನಾಗೇಗೌಡ
– ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು. ೧೯೭೬.

೨೨. ಫ್ಲೀಟರು ಸಂಗ್ರಹಿಸಿದ ಲಾವಣಿಗಳು
ಸಂ: ಕ್ಯಾತನಹಳ್ಳಿ ರಾಮಣ್ಣ
– ಕನ್ನಡ ಅಧ್ಯಯನ ಸಂಸ್ಥೆ
ಮೈಸೂರು ವಿಶ್ವವಿದ್ಯಾಲಯ, ಮೈಸೂರು. ೧೯೯೧.

೨೩. ಬಂಡೆಪ್ಪಕವಿಯ ಭಜನೆಯ ಹಾಡುಗಳು
ಸಂ: ಡಾ॥ ಎಂ.ಎಸ್. ಲಠ್ಠೆ
– ಶ್ರೀ ವೀರಭದ್ರೇಶ್ವರ ಪ್ರಕಾಶನ, ಸಿಂಗಾಪುರ. ೧೯೭೮.

೨೪. ಬಣ್ಣವಾಡು
ಸಂ: ದೇವಂಗಿ ಟಿ. ಚಂದ್ರಶೇಖರ
– ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. ೧೯೮೧.

೨೫. ಬಸವಣ್ಣ ನಿನ್ನ ಹೆಸರು ದೆಸೆದೆಸೆಗೆ ಶಿವಮಂತ್ರ
ಸಂ: ಡಾ॥ ಶಿವಾನಂದ ಗುಬ್ಬಣ್ಣನವರ
– ಬಸವ ಸಮಿತಿ, ಬೆಂಗಳೂರು. ೧೯೮೮.

೨೬. ಬೀದರ ಜಿಲ್ಲೆಯ ಬುಲಾಯಿ ಹಾಡುಗಳು
ಸಂ: ಹೆಬ್ಬಾಳೆ ಜಗನ್ನಾಥ
– ಶ್ರೀಮತಿ ನೀಲಗಂಗಾ ಹೆಬ್ಬಾಳೆ ನಾವದಗೇರಿ, ಬೀದರ. ೧೯೯೬.

೨೭. ಬುಲಾಯಿ ಹಾಡುಗಳು
ಸಂ: ಡಾ॥ ಡಿ. ಬಿ. ನಾಯಕ
– ಬಂಜಾರ ಪ್ರಕಾಶನ, ಗುಲಬರ್ಗಾ. ೨೦೦೧.

೨೮. ಮಂಟೇಸ್ವಾಮಿ
ಸಂ: ಡಾ। ಹಿ. ಚಿ. ಬೋರಲಿಂಗಯ್ಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ. ೧೯೯೭

೨೯. ಮಲ್ಲಿಗೆ ದಂಡೆ
ಸಂ: ದಿ. ಕಾಪಸೆ ರೇವಪ್ಪನವರು
– ರಾಮಚಂದ್ರ ವಿನೀತ, ರೈಟರ್ ಓಣಿ, ಧಾರವಾಡ.
೧೯೪೮ (ಎರಟನೇ ಮುದ್ರಣ).

೩೦. ಮಹಾಗಾಂವ ಮೀರಾಸಾಬ
ಸಂ: ಟಿ. ಎಂ. ಭಾಸ್ಕರ್
– ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು. ೧೯೯೮.

೩೧. ಮಾತಾಡು ಲಿಂಗವೇ
ಸಂ: ಚಂದ್ರಶೇಖರ ಕಂಬಾರ
– ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು. ೧೯೭೩.

೩೨. ಮುತ್ತು ಮುತ್ತಿನ ತ್ವಾಟ
ಸಂ: ಚಂದ್ರಶೇಖರ ಕಂಬಾರ, ಜಯಪ್ರಕಾಶ ಬರಗೂರು.
– ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. ೧೯೮೧.

೩೩. ರಾಮಪುರ ಬಕ್ಕಪ್ಪಯ್ಯನ ಸ್ವರವಚನ–ತ್ರಿವಿಧಿ
ಸಂ: ಡಾ॥ ವ್ಹಿ. ಜಿ. ಪೂಜಾರ
– ವೀರಶೈವ ಅಧ್ಯಯನ ಸಂಸ್ಥೆ,
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಗದಗ. ೧೯೯೬.

೩೪. ರುದ್ರಾಕ್ಷಿ
ಶಂಕರಗೌಡ ಬಿರಾದಾರ, ಗುಂಡಕನಾಳ
–ಶ್ರೀ ಜಗದ್ಗುರು ಅನ್ನದಾನೀಶ್ವರ ಸಂಸ್ಥಾನ ಮಠ, ಮುಂಡರಗಿ, ೧೯೯೨

೩೫. ಲದ್ದೆಯ ಸೋಮಣ್ಣ
ಡಾ। ಎಚ್. ಚಂದ್ರಶೇಖರ
– ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಮೈಸೂರು, ೨೦೦೧

೩೬. ಶರಣ ಗೊಲ್ಲಾಳ
ಡಾ। ಶಕುಂತಲಾ ದುರಗಿ
–ಅಖಿಲ ಭಾರತ ಶರಣಸಾಹಿತ್ಯ ಪರಿಷತ್ತು, ಮೈಸೂರು, ೨೦೦೯

೩೭. ಶರಣ ಸ್ಮೃತಿ
ಸಂ: ಎಂ. ಎಸ್. ವಾಲಿ
– ಭುವನೇಶ್ವರ ಪ್ರಕಾಶನ, ವಿಜಾಪುರ. ೧೯೮೮.

೩೮. ಸಂಪಿಗೆ ಅರಳೀವೆ
ಸಂ. ಸ.ಚ.ಮಹದೇವನಾಯಕ್
–ಕಾವ್ಯಾಲಯ, ಪ್ರಕಾಶಕರು, ಮೈಸೂರು, ೧೯೬೨

ಕರ್ನಾಟಕ ಸರ್ಕಾರವು ಸುವರ್ಣ ಮಹೋತ್ಸವದ ಸಂದರ್ಭದಲ್ಲಿ ಕನ್ನಡ ಭಾಷೆ, ಸಂಸ್ಕೃತಿ ಮತ್ತು ಸಾಹಿತ್ಯಕ್ಕೆ ಸಂಬಂಧಿಸಿದಂತೆ ಉನ್ನತ ಸಂಶೋಧನೆ ನಡೆಸಲೆಂಬ ಧ್ಯೇಯವನ್ನಿರಿಸಿಕೊಂಡು ನಮ್ಮ ವಿಶ್ವವಿದ್ಯಾಲಯಕ್ಕೆ ವಿಶೇಷ ಅನುದಾನವನ್ನು ನೀಡಿದೆ. ಕನ್ನಡ ಭಾಷಾಭಿವೃದ್ಧಿ ಯೋಜನೆಯಡಿ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯವು ನೀಡಿದ ಅನುದಾನ ಪಡೆದು ನಮ್ಮ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕರು ಬಸವಾದಿ ಶರಣರ ಸ್ಮಾರಕಗಳು, ತತ್ವಪದಕಾರರ ಸ್ಮಾರಕಗಳು, ಕೀರ್ತನಕಾರರ ಸ್ಮಾರಕಗಳು, ಹೈದ್ರಾಬಾದ ಕರ್ನಟಕ ಸಾಂಸ್ಕೃತಿಕ ವಿಷಯಕೋಶ, ಹೈದ್ರಾಬಾದ ಕರ್ನಾಟಕದ ಸಾಹಿತ್ಯ ಚರಿತ್ರೆ, ಆಧುನಿಕ ನಾಟಕಗಳು, ಹಸ್ತಪ್ರತಿಗಳ ಸಂರಕ್ಷಣೆ ಹಾಗೂ ಪ್ರಕಟನೆ, ಶರಣಸಾಹಿತ್ಯ ವಿಮರ್ಶಾ ಸಂಪುಟಗಳ ಪ್ರಕಟನೆ ಈ ಮುಂತಾದ ಮಹತ್ವದ ಸಂಶೋಧನಾ ಯೋಜನೆಗಳನ್ನು ಕೈಗೆತ್ತಿಕೊಂಡು ಅಧ್ಯಯನ ನಡೆಸುತ್ತಿರುವರು.

"ಶರಣ ಸ್ಮಾರಕಗಳ ಕ್ಷೇತ್ರಕಾರ್ಯ ಯೋಜನೆ" (ಬಸವಾದಿ ಶರಣರ, ಶರಣ ಸ್ಥಳಗಳ ಬಗೆಗಿನ ಮೌಖಿಕ ಸಾಹಿತ್ಯ / ಮಾಹಿತಿಗಳ ಸಂಗ್ರಹ ಮತ್ತು ದಾಖಲೀಕರಣ) ಎಂಬ ಸಂಶೋಧನ ಯೋಜನೆಯನ್ನು ಕೈಕೊಂಡವರು ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕರುಗಳಾದ ಡಾ। ವೀರಣ್ಣ ದಂಡೆ ಹಾಗೂ ಡಾ। ಜಯಶ್ರೀ ದಂಡೆ ಅವರು. ಈ ಯೋಜನೆಯಡಿ ವ್ಯಾಪಕವಾದ ಕ್ಷೇತ್ರಕಾರ್ಯದ ಮೂಲಕ ೧೨ನೇ ಶತಮಾನದ ಶರಣರಿಗೆ ಸಂಬಂಧಿಸಿದ ಹಾಡುಗಳನ್ನು ಸಂಗ್ರಹಿಸಿದ್ದಾರೆ. ಜೊತೆಗೆ ಕನ್ನಡದಲ್ಲಿ ಇಂದಿನವರೆಗೆ ಬಿಡಿಬಿಡಿಯಾಗಿ ಅಲ್ಲಲ್ಲಿ ಪ್ರಕಟವಾದ ಶರಣರಿಗೆ ಸಂಬಂಧಿಸಿದ ಜನಪದ ಹಾಡುಗಳನ್ನೂ ಈ ಸಂಪುಟದಲ್ಲಿ ಸೇರಿಸಿದ್ದಾರೆ. ಇದರಿಂದ ಶರಣರ ಬಗೆಗೆ ಲಿಖಿತ ಮತ್ತು ಮೌಖಿಕ ಸಾಹಿತ್ಯ ಪರಂಪರೆಗಳೆರಡನ್ನೂ ಎದುರಿಗೆ ಇಟ್ಟುಕೊಂಡು ಅಧ್ಯಯನ ಮಾಡಲು ಅನುಕೂಲವಾಗುತ್ತದೆ.

ಇಂತಹ ಮಹತ್ವದ ಯೋಜನೆಯನ್ನು ಕೈಕೊಂಡು ಈ ಸಂಪುಟವನ್ನು ಹೊರತರುತ್ತಿರುವ ಸಂಶೋಧಕರೂ ಸಂಪಾದಕರೂ ಆದ ಡಾ। ಜಯಶ್ರೀ ದಂಡೆ ಹಾಗೂ ಡಾ। ವೀರಣ್ಣ ದಂಡೆ ಅವರನ್ನು ನಾನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.

ಪ್ರೊ. ಈ.ಟಿ. ಪುಟ್ಟಯ್ಯ
ಕುಲಪತಿಗಳು

ಕನ್ನಡ ಅಧ್ಯಯನ ಸಂಸ್ಥೆ
ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ-೫೮೫೧೦೬